ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

# ಶ್ರೀ ಬ್ರಹ್ಮವೈವರ್ತ ಮಹಾಪುರಾಣಂ

(ಕನ್ನಡ ಅನುವಾದಸಹಿತ)

**ಸಂಚಿಕೆ ೪**

ಅನುವಾದಕ :

ಸಾಹಿತ್ಯ ಮತ್ತು ಕನ್ನಡ ವಿದ್ವಾನ್

**ಬೆಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ,**

ಸಂಸ್ಕೃತ ಪಂಡಿತ,

ಟ್ರೈನಿಂಗ್ ಕಾಲೇಜು, ಮೈಸೂರು.

ಮೈಸೂರು :

ಶ್ರೀ ಶಾರದಾ ಎಲೆಕ್ಟ್ರಿಕ್ ಪ್ರೆಸ್

೧೯೪೯

# ಪೀಠಿಕೆ

ಪ್ರಕೃತಿಖಂಡದ ಮೂರನೆಯ ಭಾಗವನ್ನೊಳಗೊಂಡಿರುವ ಈ ಸಂಪುಟದಲ್ಲಿ ರಾಧಾ ಮತ್ತು ದುರ್ಗಾದೇವಿಯರ ಉಪಾಖ್ಯಾನವು ಅತ್ಯಂತ ಹೃದಯಂಗಮವಾಗಿದೆ. ಸುಯಜ್ಞನೆಂಬ ಮಹಾರಾಜನು ಯಜ್ಞಮಾಡಿ ಅಸಂಖ್ಯಬ್ರಾಹ್ಮಣರನ್ನು ತೃಪ್ತಿ ಪಡಿಸಿದಾಗ್ಯೂ ಅತಿಥಿಯಾಗಿ ಬಂದಿದ್ದ ಬ್ರಾಹ್ಮಣನೊಬ್ಬನನ್ನು ಸತ್ಕರಿಸದೆ ಉದಾಸೀನ ಮಾಡಿಮದರ ಫಲವಾಗಿ ತೇಜಸ್ವಿಯಾದ ಆ ಬ್ರಾಹ್ಮಣನ ಶಾಪಕ್ಕೆ ಗುರಿಯಾಗುವನು. ಅನಂತರ ಯಾಗಕ್ಕೆ ಆಹ್ವಾನಿತರಾಗಿ ಬಂದಿದ್ದ ಮಹರ್ಷಿಗಳ ಮೂಲಕ ಪಾಪ ಕರ್ಮಗಳ ಸ್ವರೂಪವನ್ನೂ, ಫಲವನ್ನೂ ತಿಳಿದು ಅತಿಥಿಯನ್ನು ಅನಾದರಣಮಾಡಿದ ತನ್ನ ದುಷ್ಕರ್ಮಕ್ಕೆ ಪರಿತಾಪಪಡುವನು. ಅನಂತರ ಸುತಪಸೆಂಬ ಮಹರ್ಷಿಯ ಸಮೀಪಕ್ಕೆ ಹೋಗಿ ಆತನ ಅನುಗ್ರಹದಿಂದ ರಾಧಾಮಂತ್ರೋಪದೇಶವನ್ನು ಪಡೆದು, ಅದನ್ನು ಅನನ್ಯಭಕ್ತಿಯಿಂದ ಜಪಿಸಿ ಪಾಪನಿರ್ಮುಕ್ತನಾಗಿ ಇಷ್ಟಸಿದ್ಧಿಯನ್ನು ಹೊಂದಿ ಗೋಲೋಕಕ್ಕೆ ಹೋಗಿ ಸೇರುವನು.

ಅಂತೆಯೇ ಚಂದ್ರವಂಶದಲ್ಲಿ ಹುಟ್ಟಿದ ಸುರಥನೆಂಬ ರಾಜನು ರಾಜ್ಯಭ್ರಷ್ಟ ನಾಗಿ ಸುಮೇಧಸಮಹರ್ಷಿಯ ಅನುಗ್ರಹದಿಂದ ದುರ್ಗಾಮಂತ್ರೋಪದೇಶವನ್ನು ಹೊಂದಿ, ಸಕಾಮನಾಗಿ ದುರ್ಗಾದೇವಿಯನ್ನಾರಾಧಿಸಿ 'ಸಾವರ್ಣಿ'ಮನುಪದವಿ ಯನ್ನು ಪಡೆಯುವನು.

ಸಮಾಧಿಯೆಂಬ ವೈಶ್ಯನೊಬ್ಬನು ಧನಲೋಭಿಗಳಾದ ಪತ್ನೀಪುತ್ರರಿಂದ ಹೊರದೂಡಲ್ಪಟ್ಟು ವೈರಾಗ್ಯವನ್ನು ತಾಳಿ ಸುಮೇಧಸಮಹರ್ಷಿಯ ಅನುಗ್ರಹದಿಂದ ದುರ್ಗಾಮಂತ್ರೋಪದೇಶವನ್ನು ಹೊಂದಿ, ನಿಷ್ಕಾಮನಾಗಿ ಅನನ್ಯ ಭಕ್ತಿಯಿಂದ ಅದನ್ನು ಭಜಿಸಿ ಪರಮಾತ್ಮನ ದಾಸ್ಯವನ್ನು ಹೊಂದುವನು.

ಇಂತು ಕರ್ಮಭೂಮಿಯಾದ ಭರತಖಂಡದಲ್ಲಿ ಹುಟ್ಟಿದ ಮಾನವನು ಕಾಮ್ಯ ಕರ್ಮಗಳನ್ನು ಮಾಡಿ ತನ್ನ ಇಷ್ಟಾರ್ಥಸಿದ್ಧಿಯನ್ನು ಪಡೆಯುವುದಲ್ಲದೆ, ನಿಷ್ಕಾಮ ಕರ್ಮವನ್ನು ಮಾಡಿ ಮೋಕ್ಷವನ್ನೂ ಗಳಿಸಬಲ್ಲನು ಭೋಗಭೂಮಿಗಳಾದ ಸ್ವರ್ಗ ನರಕಾದಿ ಲೋಕಗಳಲ್ಲಿ ಕರ್ಮಮಾಡಲವಕಾಶವಿಲ್ಲದುದರಿಂದ ಮುಕ್ತಿಹೊಂದ ಲಾಗುವುದಿಲ್ಲ. ಆದುದರಿಂದಲೇ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ' ಎಂಬ ಉಪನಿಷದ್ವಾಕ್ಯವು ಮರ್ತ್ಯಲೋಕದ ಮಹಿಮೆಯಪಾರವೆಂದು ಸಾರಿ ಹೇಳುತ್ತಿದೆ. ಮರ್ತ್ಯಲೋಕವೇ ಸ್ವರ್ಗಾಪವರ್ಗಗಳಿಗೆ ಮಾರ್ಗವಾಗಿದೆ. ಅಂದಮೇಲೆ ಭೂಲೋಕ

ದಲ್ಲಿ ಧರ್ಮಕರ್ಮಗಳಿಗೆ ಸಾಧನವಾದ ಮಾನುಷಶರೀರವನ್ನು ಹೊಂದಿ, ಆ ಸಾಧನವನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ವಿಷಯಸುಖಕ್ಕೆ ಬಲಿಕೊಡುವ ಮಾನವನ ಅಧಃಪತನವು ಸ್ವತಃ ಸಿದ್ಧವಾಗಿಯೇ ಇದೆ. ಕಾಮಕ್ರೋಧಾದ್ಯರಿಷಡ್ವರ್ಗಗಳ ಹಿಡಿತಕ್ಕೆ ಸಿಕ್ಕಿದ ಮಾನವಾಧಮನು ತನ್ನ ದುಷ್ಕರ್ಮದ ಫಲವನ್ನು ಪಭೋಗಿಸಲು ಅನೇಕ ಜನ್ಮಗಳಲ್ಲಿ ತಿರ್ಯಗ್ಜಂತುವಾಗಿ ಹುಟ್ಟಿ, ಫಲಭೋಗದಿಂದ ದುಷ್ಕರ್ಮವು ಸಮೆದನಂತರ ಮತ್ತೆ ಮಾನವನಾಗಿ ಹುಟ್ಟುವನು. ಆದಕಾರಣ ಪುರುಷಾರ್ಥ ಚತುಷ್ಟಯದಲ್ಲಿ ಮುಖ್ಯವಾದ ಧರ್ಮ ಮತ್ತು ಮೋಕ್ಷಕ್ಕೆ ಕ್ರಮವಾಗಿ ಸಾಧಕವಾದ ಸಕಾಮ ಮತ್ತು ನಿಷ್ಕಾಮಕರ್ಮವೇ ಮನುಷ್ಯಜೀವನದ ಮುಖ್ಯಗುರಿ ಎಂಬುದನ್ನು ಪ್ರಕೃತಿಖಂಡದಿಂದ ನಾವು ತಿಳಿಯಬಹುದಾಗಿದೆ. ಇಂಥ ಪುರಾಣಗ್ರಂಥಗಳನ್ನು ಅನೇಕಸಾರಿ ಓದಿ, ಕೇಳುವುದರಿಂದ ಮಾನವನು ತನ್ನ ಪಾಶವೀವೃತ್ತಿಯನ್ನು ಬಿಟ್ಟು, ಉದಾರಚರಿತನಾಗಲು ಅವಕಾಶವಾಗುತ್ತದೆ.

ಈ ರೀತಿಯಾದ ಮಹಾಪುರಾಣಗಳನ್ನು ಕರ್ಣಾಟಕ ಭಾಷೆಯಲ್ಲಿ ಅನುವಾದ ಮಾಡಿಸಿ ಜನಸ್ತೋಮಕ್ಕೆ ಮಹದುಪಕಾರವನ್ನು ಮಾಡುತ್ತಿರುವ ಪರಮೋದಾರಿಗಳೂ, ವಿದ್ವದಭಿಮಾನಿಗಳೂ, ಕರ್ಣಾಟಕ ಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.,** ಮಹಾಪ್ರಭುಗಳವರು ಬಂಧುಮಿತ್ರಕಳತ್ರಾದಿಗಳೊಡನೆ ಚಿರಕಾಲ ಸುಖವಾಗಿದ್ದು, ಧರ್ಮದಿಂದ ರಾಜ್ಯವನ್ನು ಪರಿಪಾಲಿಸಲೆಂದು ಪ್ರಕೃತಿಮಾತೆಯನ್ನು ಪ್ರಾರ್ಥಿಸುವ.

ವಿರೋಧಿ ಸಂ॥ ಪ ಕಾರ್ತೀಕ
ಶುಕ್ಲ ಪಂಚಮಿ ಬುಧವಾರ.

ಅನುವಾದಕ,
**ಬಿ. ಎಸ್. ಕೃಷ್ಣಪ್ಪ.**

# ವಿಷಯಾನುಕ್ರಮಣಿಕೆ

**ನಲವತ್ತೇಳನೆಯ ಅಧ್ಯಾಯ—**

ಸುರಭೀದೇವಿಯ ಕಥೆ. 1–9

**ನಲವತ್ತೆಂಟನೆಯ ಅಧ್ಯಾಯ—** 10–23

ರಾಧಾದೇವಿಯ ಉಪಾಖ್ಯಾನ.

**ನಲವತ್ತೊಂಭತ್ತನೆಯ ಅಧ್ಯಾಯ—**

ರಾಧಾಸುದಾಮರಿಗೆ ಪರಸ್ಪರ ಶಾಪಬರುವಿಕೆ 24–41

**ಐವತ್ತನೆಯ ಅಧ್ಯಾಯ—**

ಸುಯಜ್ಞಮಹಾರಾಜನ ಕಥೆ. ಸುಯಜ್ಞನು ಯಾಗಮಾಡುತ್ತಿದ್ದಾಗ ಅತಿಥಿಯಾಗಿ ಬಂದ ಬ್ರಾಹ್ಮಣನನ್ನು ಅನಾದರಣಮಾಡಿದುದಕ್ಕಾಗಿ ಅವನಿಂದ ಶಾಪಹೊಂದುವಿಕೆ. 42–52

**ಐವತ್ತೊಂದನೆಯ ಅಧ್ಯಾಯ—**

ಯಜ್ಞಕ್ಕಾಗಿ ಬಂದಿದ್ದ ಋಷಿಗಳು ಸುಯಜ್ಞನಿಗೆ ಪಾಪಕರ್ಮಗಳ ಸ್ವರೂಪವನ್ನೂ, ಅವುಗಳ ದುಷ್ಫಲವನ್ನೂ ವಿವರಿಸುವಿಕೆ. 53–71

**ಐವತ್ತೆರಡನೆಯ ಅಧ್ಯಾಯ—**

ಕೃತಘ್ನರ ಸ್ವರೂಪ ನಿರೂಪಣೆ ಅವರುಗಳ ಪಾಪಕರ್ಮ ಮತ್ತು ಫಲಗಳ ವಿವರಣೆ. 72–83

**ಐವತ್ತಮೂರನೆಯ ಅಧ್ಯಾಯ—**

ಸುಯಜ್ಞ ಮತ್ತು ಸುತಪಮಹರ್ಷಿಯ ಸಂವಾದ. ಸುತಪನು ಸುಯಜ್ಞನಿಗೆ ವಿಷ್ಣುಸ್ವರೂಪವನ್ನು ನಿರೂಪಿಸುವಿಕೆ 84–96

**ಐವತ್ತನಾಲ್ಕನೆಯ ಅಧ್ಯಾಯ—**

ಗೋಲೋಕ ವರ್ಣನೆ, ನಿಖಿಲವಿಶ್ವ ವರ್ಣನೆ, ಕಾಲಮಾನ ನಿರೂಪಣೆ, ಚತುರ್ದಶಮನುಗಳ ಮತ್ತು ಸಪ್ತಚಿರಂಜೀವಿಗಳ ನಾಮಕಥನ, ಪ್ರಳಯವರ್ಣನೆ, ಆಗ ಪ್ರಪಂಚದ ಸ್ಥಿತಿ, ವಿಪ್ರ

ಪಾದೋದಕಮಾಹಾತ್ಮ್ಯ ವರ್ಣನೆ, ಸುತಪಮಹರ್ಷಿಯು ಸುಯಜ್ಞನಿಗೆ ರಾಧಾಮಂತ್ರವನ್ನು ಉಪದೇಶಿಸಿದುದು, ಸುಯಜ್ಞನು ಗೋಲೋಕಕ್ಕೆ ಹೋಗಿ ಸೇರಿದುದು, ಗೋಲೋಕ ದರ್ಶನಕ್ಕೆ ಅರ್ಹರಾದವರ ಸ್ವರೂಪ, ಗೋಲೋಕದಲ್ಲಿ ವಿಷ್ಣುವಿನ ಸ್ವರೂಪ ನಿರೂಪಣೆ. 97-137

ಐವತ್ತೈದನೆಯ ಅಧ್ಯಾಯ—

ರಾಧಾದೇವಿಯ ಪೂಜಾಪದ್ಧತಿ ನಿರೂಪಣೆ. 138-162

ಐವತ್ತಾರನೆಯ ಅಧ್ಯಾಯ—

ರಾಧಾದೇವಿಯ ಕವಚನಿರೂಪಣೆ. 163-179

ಐವತ್ತೇಳನೆಯ ಅಧ್ಯಾಯ—

ದುರ್ಗಾದೇವಿಯ ಉಪಾಖ್ಯಾನ. 180-190

ಐವತ್ತೆಂಟನೆಯ ಅಧ್ಯಾಯ—

ಸುರಥರಾಜನ ವಂಶವರ್ಣನೆ, ಗುರುಪತ್ನಿಯಾದ ತಾರಾದೇವಿಯಲ್ಲಿ ಚಂದ್ರನಿಂದ ಬುಧನ ಉತ್ಪತ್ತಿ ವರ್ಣನೆ, ಚಂದ್ರನಿಗೆ ಕಳಂಕವು ಪ್ರಾಪ್ತವಾಗುವಿಕೆ, ಚಂದ್ರನಿಗೆ ಶುಕ್ರಾಚಾರ್ಯನ ಶಾಪ, ಪರಸ್ತ್ರೀ ಗಮನದಿಂದ ಪ್ರಾಪ್ತವಾಗುವ ದೋಷಗಳು, ಸ್ತ್ರೀಪುರುಷರ ಕರ್ಮವಿಶೇಷಗಳಿಂದ ಪ್ರಾಪ್ತವಾಗುವ ನರಕ ವಿಶೇಷಗಳು. 191-215

ಐವತ್ತೊಂಭತ್ತನೆಯ ಅಧ್ಯಾಯ—

ತಾರಾದೇವಿಯನ್ನು ಹುಡುಕಲು ಬೃಹಸ್ಪತಿಯು ತನ್ನ ಶಿಷ್ಯರನ್ನು ಕಳುಹಿಸುವಿಕೆ, ಬೃಹಸ್ಪತಿಯ ದುಃಖ, ಇಂದ್ರ ಮತ್ತು ಬೃಹಸ್ಪತಿಯ ಸಂವಾದ. 216-237

ಅರವತ್ತನೆಯ ಅಧ್ಯಾಯ—

ಬೃಹಸ್ಪತಿಯು ಶಂಕರನ ಮಂದಿರವಾದ ಕೈಲಾಸಕ್ಕೆ ಹೋಗುವಿಕೆ, ಶಿವನಲ್ಲಿ ಬೃಹಸ್ಪತಿಯ ವಿಜ್ಞಾಪನೆ, ಅದಕ್ಕೆ ಶಿವನ ಸಮಾಧಾನ, ದೇವತೆಗಳೆಲ್ಲರೂ ನರ್ಮದಾತೀರಕ್ಕೆ ಹೋಗುವಿಕೆ. 238-236

ಅರವತ್ತೊಂದನೆಯ ಅಧ್ಯಾಯ—

ಬ್ರಹ್ಮನು ತಾರೆಯನ್ನು ಕೊಡಿಸಲು ಮಧ್ಯಸ್ಥಿಕೆಗಾಗಿ ಶುಕ್ರಾ

ಚಾರ್ಯನ ಮಂದಿರಕ್ಕೆ ಹೋಗುವಿಕೆ, ಬೃಹಸ್ಪತಿಗೆ ತಾರೆಯ ಪ್ರಾಪ್ತಿ, ತಾರೆಯಲ್ಲಿ ಚಂದ್ರನಿಂದ ಹುಟ್ಟಿದ ಬುಧನಿಂದ ಚಿತ್ರಾ ಎಂಬುವಳಲ್ಲಿ ಚೈತ್ರನ ಉತ್ಪತ್ತಿ, ಸುರಥಮಹಾರಾಜನು ಚೈತ್ರನ ಮುಮ್ಮಗನಾಗಿ ಜನಿಸುವಿಕೆ 264–290

**ಅರವತ್ತೆರಡನೆಯ ಅಧ್ಯಾಯ—**

ನಂದಿರಾಜನಿಗೆ ರಾಜ್ಯವನ್ನು ಸೋತ ಸುರಥಮಹಾರಾಜನು ಸುಮೇಧಸಮಹರ್ಷಿಯ ಆಶ್ರಮಕ್ಕೆ ಹೋದುದು, ಅಲ್ಲಿ ಪತ್ನೀಪುತ್ರರಿಂದ ಹೊರದೂಡಲ್ಪಟ್ಟು ಬಂದಿದ್ದ ಸಮಾಧಿಯೆಂಬ ವೈಶ್ಯನೊಡಗೂಡಿ ಸುಮೇಧಸನ ಸಮೀಪಕ್ಕೆ ಹೋದುದು, ಅವರಿಬ್ಬರೂ ಆ ಮಹರ್ಷಿಯೊಡನೆ ಮಾಡಿದ ಸಂಭಾಷಣೆ. ಆ ಮಹರ್ಷಿಯು ಅವರಿಬ್ಬರಿಗೂ ಉಚಿತವಾದ ಮಂತ್ರವನ್ನು ಉಪದೇಶಿಸಿದುದು. 291–301

**ಅರವತ್ತಮೂರನೆಯ ಅಧ್ಯಾಯ—**

ಸಮಾಧಿ ಎಂಬ ವೈಶ್ಯನು ಪ್ರಕೃತಿದೇವಿಯನ್ನು ಸ್ತುತಿಸಿದುದು. ಅನಂತರ ಅನನ್ಯಭಕ್ತಿಯಿಂದ ತಪಸ್ಸುಮಾಡಿ ಶ್ರೀಕೃಷ್ಣ ಪರಮಾತ್ಮನ ದಾಸ್ಯವನ್ನು ಪಡೆದುದು. 302–312

**ಅರವತ್ತನಾಲ್ಕನೆಯ ಅಧ್ಯಾಯ—**

ಸುರಥಮಹಾರಾಜನು ಮಾಡಿದ ದೇವೀಪೂಜೆಯ ಕ್ರಮ. 313–337

**ಅರವತ್ತೈದನೆಯ ಅಧ್ಯಾಯ—**

ಸುರಥಮಹಾರಾಜನಿಗೆ ದಿವ್ಯಜ್ಞಾನವು ಪ್ರಾಪ್ತವಾದುದು. 338–349

**ಅರವತ್ತಾರನೆಯ ಅಧ್ಯಾಯ—**

ದುರ್ಗಾದೇವಿಯ ಸ್ತೋತ್ರ ನಿರೂಪಣೆ 350–358

**ಅರವತ್ತೇಳನೆಯ ಅಧ್ಯಾಯ—**

ದುರ್ಗಾಕವಚ ನಿರೂಪಣೆ. 359–366

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಸಪ್ತಚತ್ವಾರಿಂಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಕಾ ವಾ ಸಾ ಸುರಭೀ ದೇವೀ ಗೋಲೋಕಾದಾಗತಾ ಚ ಯಾ ।
ತಜ್ಜನ್ಮಚರಿತಂ ಬ್ರಹ್ಮನ್-ಚ್ಛ್ರೋತುಮಿಚ್ಛಾಮಿ ತತ್ತ್ವತಃ || ೧ ||

|| ನಾರಾಯಣ ಉವಾಚ ||

ಗವಾಮಧಿಷ್ಠಾತೃದೇವೀ ಗವಾಮಾದ್ಯಾ ಗವಾಂ ಪ್ರಸೂಃ ।
ಗವಾಂ ಪ್ರಧಾನಾ ಸುರಭೀ ಗೋಲೋಕೇ ಚ ಸಮುದ್ಭವಾ || ೨ ||

---

### ನಲವತ್ತೇಳನೆಯ ಅಧ್ಯಾಯವು

೧. ನಾರದ :—ಎಲೈ, ನಾರಾಯಣ ಮಹರ್ಷಿಯೇ, ಗೋಲೋಕದಿಂದ ಬಂದು ಮನಸಾದೇವಿಗೆ ಜ್ಞಾನೋಪದೇಶವನ್ನು ಮಾಡಿಹೋದ ಸುರಭಿದೇವಿ ಯೆಂಬುವಳಾರು ? ಆಕೆಯ ಉತ್ಪತ್ತಿ ಮತ್ತು ಚರಿತ್ರೆಯನ್ನು ಸರಿಯಾಗಿ ತಿಳಿಯ ಬೇಕೆಂದು ನನಗೆ ಕುತೂಹಲವಿದೆ.

೨. ನಾರಾಯಣ :—ಗೋವುಗಳಿಗೆಲ್ಲ ಅಧಿದೇವತೆಯೂ, ಗೋಮಾತೆಯೂ, ಗೋವುಗಳಿಗೆ ಪ್ರಮುಖಳೂ ಎನಿಸಿ ಗೋಲೋಕದಲ್ಲಿ ಉತ್ಪತ್ತಿಪಡೆದವಳೇ ಸುರ ಭಿಯು.

ಸರ್ಗಾದಿಸೃಷ್ಟೇಃ ಕಥನಂ ಕಥಯಾಮಿ ನಿಶಾಮಯ ।
ಬಭೂವ ಯೇನ ತಜ್ಜನ್ಮ ಪುರಾ ವೃಂದಾವನೇ ವನೇ ॥ ೩ ॥

ಏಕದಾ ರಾಧಿಕಾನಾಥೋ ರಾಧಯಾ ಸಹ ಕೌತುಕಾತ್ ।
ಗೋಪಾಂಗನಾಪರಿವೃತಃ ಪುಣ್ಯಂ ವೃಂದಾವನಂ ಯಯೌ ॥ ೪ ॥

ಸಹಸಾ ತತ್ರ ರಹಸಿ ವಿಜಹಾರ ಚ ಕೌತುಕಾತ್ ।
ಬಭೂವ ಕ್ಷೀರಪಾನೇಚ್ಛಾ ತದಾ ಸ್ವೇಚ್ಛಾಪರಸ್ಯ ಚ ॥ ೫ ॥

ಸಸೃಜೇ ಸುರಭೀಂ ದೇವೀಂ ಲೀಲಯಾ ವಾಮಪಾರ್ಶ್ವತಃ ।
ವತ್ಸಯುಕ್ತಾಂ ದುಗ್ಧವತೀಂ ವತ್ಸಾನಾಂ ಚ ಮನೋರಮಾಂ ॥ ೬ ॥

ದೃಷ್ಟ್ವಾ ಸವತ್ಸಾಂ ಸುರಭೀಂ ರತ್ನಭಾಂಡೇ ದುದೋಹ ಸಃ ।
ಕ್ಷೀರಂ ಸುಧಾತಿರಿಕ್ತಂ ಚ ಜನ್ಮಮೃತ್ಯುಹರಂ ಪರಂ ॥ ೭ ॥

---

೩. ನಾನು ಈಗ ಹೇಳುವುದು ಆದಿಸೃಷ್ಟಿಗೆ ಸಂಬಂಧಿಸಿದುದು. ಆದಿಯಲ್ಲಿ ಸುರಭಿದೇವಿಯು ಶ್ರೀಕೃಷ್ಣಪರಮಾತ್ಮನಿಂದ ಬೃಂದಾವನದಲ್ಲಿ ಅವತರಿಸಿದಳು.

೪. ಒಮ್ಮೆ ರಾಧಾಪತಿಯಾದ ಶ್ರೀಕೃಷ್ಣನು ತನ್ನ ಪ್ರಿಯೆಯಾದ ರಾಧೆಯೊಡಗೂಡಿ, ಅನೇಕ ಗೋಪಸ್ತ್ರೀಯರಿಂದ ಪರಿವೃತನಾಗಿ ಪುಣ್ಯಕರವಾದ ಬೃಂದಾವನಕ್ಕೆ ತೆರಳಿದನು.

೫. ಅಲ್ಲಿ ಏಕಾಂತದಲ್ಲಿ ಕುತೂಹಲದಿಂದ ಕ್ರೀಡಿಸಿದ ಸ್ವೇಚ್ಛಾಮಯನಾದ ಪರಮಾತ್ಮನಿಗೆ ಹಾಲನ್ನು ಕುಡಿಯಬೇಕೆಂಬ ಇಚ್ಛೆಯುಂಟಾಯಿತು.

೬. ಆಗ ಲೀಲಾಮಯನಾದ ಪರಮಾತ್ಮನು ತನ್ನ ಎಡಭಾಗದಿಂದ ಕಾಮಧೇನುವನ್ನು ಸೃಜಿಸಿದನು. ಆ ಕಾಮಧೇನುವು ಉತ್ತಮವಾದ ಕರುವಿನಿಂದ ಕೂಡಿ ಯಥೇಚ್ಛವಾಗಿ ಹಾಲುಕೊಡುವುದಾಗಿದ್ದಿತು.

೭. ಕರುವಿನೊಡನಿರುವ ಕಾಮಧೇನುವನ್ನು ಕಂಡು ಪರಮಾತ್ಮನು ರತ್ನಭಾಂಡದೊಳಗೆ ಅಮೃತಕ್ಕಿಂತಲೂ ಮೇಲಾಗಿ, ಜರಾಮರಣಗಳನ್ನು ಪರಿಹರಿಸುವಂಥ ಹಾಲನ್ನು ಕರೆದನು.

**ತದುಷ್ಣಂ ಚ ಪಯಃ ಸ್ವಾದು ಪಪೌ ಗೋಪೀಪತಿಃ ಸ್ವಯಂ ।**
**ಸರೋ ಬಭೂವ ಪಯಸಾ ಭಾಂಡವಿಸ್ರಂಸನೇನ ಚ ॥ ೮ ॥**

**ದೀರ್ಘೇ ಚ ವಿಸ್ತೃತೇ ಚೈವ ಪರಿತಃ ಶತಯೋಜನಂ ।**
**ಗೋಲೋಕೇಷು ಪ್ರಸಿದ್ಧಂ ತದ್ರಮ್ಯಂ ಕ್ಷೀರಸರೋವರಂ ॥ ೯ ॥**

**ಗೋಪಿಕಾನಾಂ ಚ ರಾಧಾಯಾಃ ಕ್ರೀಡಾವಾಪೀ ಬಭೂವ ಸಾ ।**
**ರತ್ನೇನ ರಚಿತಾ ತೂರ್ಣಂ ಭೂತಾ ವಾಪೀಶ್ವರೇಚ್ಛಯಾ ॥ ೧೦ ॥**

**ಬಭೂವ ಕಾಮಧೇನೂನಾಂ ಸಹಸಾ ಲಕ್ಷಕೋಟಿಯಃ ।**
**ತಾವತ್ಯೋ ಹಿ ಸವತ್ಸಾಶ್ಚ ಸುರಭೀಲೋಮಕೂಪತಃ ॥ ೧೧ ॥**

**ತಾಸಾಂ ಪುತ್ರಾಶ್ಚ ಪೌತ್ರಾಶ್ಚ ಸಂಬಭೂವುರಸಂಖ್ಯಕಾಃ ।**
**ಕಥಿತಾ ಚ ಗವಾಂ ಸೃಷ್ಟಿಸ್ತಯಾ ಸಂಪೂರಿತಂ ಜಗತ್ ॥ ೧೨ ॥**

---

೮. ಅನಂತರ ಗೋಪೀಪತಿಯಾದ ಪರಮಾತ್ಮನು ಬಿಸಿಯಾಗಿರುವ ಆ ಸೊರೆ ಹಾಲನ್ನು ಕುಡಿದನು. ಅನಂತರ ಆ ಹಾಲಿನ ಪಾತ್ರೆಯು ಒಡೆದು ಅಲ್ಲಿಯೇ ಹಾಲಿನ ಸಮುದ್ರವಾಯಿತು.

೯. ಗೋಲೋಕದಲ್ಲಿ ಪ್ರಸಿದ್ಧವಾಗಿ, ರಮ್ಯವಾದ ಆ ಕ್ಷೀರಸಮುದ್ರವು ನೂರುಯೋಜನ ಉದ್ದವಾಗಿಯೂ, ನೂರುಯೋಜನ ಅಗಲವಾಗಿಯೂ ಇದೆ.

೧೦. ಕೂಡಲೇ ಸ್ವೇಚ್ಛಾಮಯನಾದ ಪರಮಾತ್ಮನು ರತ್ನದಿಂದ ಸರೋವರದ ಸೋಪಾನಾದಿಗಳನ್ನು ನಿರ್ಮಿಸಿದನು. ಆ ಸರೋವರವು ರಾಧಾದೇವಿಗೂ ಗೋಪಿಕಾಸ್ತ್ರೀಯರಿಗೂ ಜಲಕ್ರೀಡೆಯಾಡುವ ಸ್ಥಳವಾಯಿತು.

೧೧. ಅನಂತರ ಪರಮಾತ್ಮನ ರೋಮಕೂಪಗಳಿಂದ ಲಕ್ಷಕೋಟಿ ಹಸುಗಳು ಮತ್ತು ಅಷ್ಟೇ ಸಂಖ್ಯೆಯುಳ್ಳ ಕರುಗಳೂ ಉತ್ಪತ್ತಿ ಪಡೆದವು.

೧೨. ಆ ಹಸುಗಳಿಗೆಲ್ಲ ಕ್ರಮವಾಗಿ ಅಸಂಖ್ಯ ಪುತ್ರ ಪೌತ್ರಾದಿಗಳಾದವು. ಈ ರೀತಿಯಾಗಿ ಗೋವುಗಳ ಸೃಷ್ಟಿಯಾಯಿತು: ಆ ಗೋವುಗಳಿಂದ ಜಗತ್ತೆಲ್ಲವೂ ತುಂಬಿಹೋಯಿತು.

ಪೂಜಾಂ ಚಕಾರ ಭಗವಾನ್ಸುರಭ್ಯಾಶ್ಚ ಪುರಾ ಮುನೇ ।
ತತೋ ಬಭೂವ ತತ್ಪೂಜಾ ತ್ರಿಷು ಲೋಕೇಷು ದುರ್ಲಭಾ ॥ ೧೩ ॥

ದೀಪಾನ್ವಿತಾ ಪರದಿನೇ ಶ್ರೀಕೃಷ್ಣಸ್ಯಾಜ್ಞಯಾ ಭವೇ ।
ಬಭೂವ ಸುರಭೀಪೂಜಾ ಧರ್ಮವಕ್ತ್ರಾದಿತಿ ಶ್ರುತಂ ॥ ೧೪ ॥

ಧ್ಯಾನಂ ಸ್ತೋತ್ರಂ ಮೂಲಮಂತ್ರಂ ಯದ್ಯತ್ಪೂಜಾವಿಧಿಕ್ರಮಂ ।
ವೇದೋಕ್ತಂ ಚ ಮಹಾಭಾಗ ನಿಬೋಧ ಕಥಯಾಮಿ ತೇ ॥ ೧೫ ॥

ಓಂ ಸುರಭ್ಯೈ ನಮ ಇತಿ ಮಂತ್ರೋಯಂ ಚ ಷಡಕ್ಷರಃ ।
ಸಿದ್ಧೋ ಲಕ್ಷಜಪೇನೈವ ಭಕ್ತಾನಾಂ ಕಲ್ಪಪಾದಪಃ ॥ ೧೬ ॥

---

೧೩. ಎಲೈ ನಾರದ ಮುನಿಯೇ, ಮೊದಲು ಗೋಲೋಕದಲ್ಲಿ ಪರಮಾತ್ಮನು ಕಾಮಧೇನುವಿನ ಪೂಜೆಮಾಡಿದನು. ಅನಂತರ ಮೂರು ಲೋಕಗಳಲ್ಲೂ ಗೋವುಗಳು ಪೂಜ್ಯವಾದವು.

೧೪. ದೀಪಾವಳಿ ಹಬ್ಬದ ಹಿಂದಿನ ದಿನ ಸುರಭಿಯನ್ನು ಪೂಜಿಸುವಂತೆ ಶ್ರೀಕೃಷ್ಣಪರಮಾತ್ಮನು ಆಜ್ಞೆಯಿತ್ತಿರುವನೆಂದು ಧರ್ಮಪುರುಷನ ಮುಖದಿಂದ ನಾನು ಕೇಳಿದೆನು.

೧೫. ಎಲೈ ನಾರದ ಮಹಾಮುನಿಯೇ, ವೇದೋಕ್ತವಾದ ಸುರಭಿಯ ಧ್ಯಾನಸ್ತೋತ್ರಾದಿಗಳನ್ನೂ, ಮೂಲಮಂತ್ರವನ್ನೂ ಪೂಜಾವಿಧಾನವನ್ನೂ ವಿವರಿಸುವೆನು, ಕೇಳು.

೧೬. 'ಓಂ ಸುರಭ್ಯೈ ನಮಃ' ಎಂಬ, ಭಕ್ತರಿಗೆ ಕಲ್ಪವೃಕ್ಷದಂತಿರುವ ಆರಕ್ಷರದ ಮಂತ್ರವನ್ನು ಲಕ್ಷಬಾರಿ ಜಪಿಸುವುದರಿಂದ ಸಿದ್ಧಿಯನ್ನು ಪಡೆಯಬಹುದು.

**ಸ್ಥಿತಂ ಧ್ಯಾನಂ ಯಜುರ್ವೇದೇ ಪೂಜನಂ ಸರ್ವಸಮ್ಮತಂ ।**
**ಋದ್ಧಿದಾಂ ವೃದ್ಧಿದಾಂ ಚೈವ ಮುಕ್ತಿದಾಂ ಸರ್ವಕಾಮದಾಂ ॥ ೧೭ ॥**

**ಲಕ್ಷ್ಮೀಸ್ವರೂಪಾಂ ಪರಮಾಂ ರಾಧಾಸಹಚರೀಂ ಪರಾಂ ।**
**ಗವಾಮಧಿಷ್ಠಾತೃದೇವೀಂ ಗವಾಮಾದ್ಯಾಂ ಗವಾಂ ಪ್ರಸೂಂ ॥ ೧೮ ॥**

**ಪವಿತ್ರರೂಪಾಂ ಪೂಜ್ಯಾಂ ಚ ಭಕ್ತಾನಾಂ ಸರ್ವಕಾಮದಾಂ ।**
**ಯಯಾ ಪೂತಂ ಸರ್ವವಿಶ್ವಂ ತಾಂ ದೇವೀಂ ಸುರಭೀಂ ಭಜೇ ॥ ೧೯ ॥**

**ಘಟೇ ವಾ ಧೇನುಶಿರಸಿ ಬದ್ಧಸ್ತಂಭೇ ಗವಾಂ ಚ ವಾ ।**
**ಶಾಲಗ್ರಾಮೇ ಜಲೇಽಗ್ನೌ ವಾ ಸುರಭೀಂ ಪೂಜಯೇದ್ದ್ವಿಜಃ ॥ ೨೦ ॥**

**ದೀಪಾನ್ವಿತಾ ಪರದಿನೇ ಪೂರ್ವಾಹ್ಣೇ ಭಕ್ತಿಸಂಯುತಃ ।**
**ಯಃ ಪೂಜಯೇಚ್ಚ ಸುರಭೀಂ ಸ ಚ ಪೂಜ್ಯೋ ಭವೇದ್ಭುವಿ ॥ ೨೧ ॥**

---

೧೭-೧೮. ಸುರಭಿಯ ಧ್ಯಾನಪೂಜಾದಿ ಕ್ರಮವು ಯಜುರ್ವೇದೋಕ್ತವಾಗಿ ಸರ್ವಸಂಮತವಾಗಿದೆ. ಸಂಪತ್ಸಮೃದ್ಧಿಯನ್ನೂ, ಸಕಲ ಮನೋಭೀಷ್ಟಗಳನ್ನೂ, ಮತ್ತು ಮುಕ್ತಿಯನ್ನೂ ಕೊಡುವ, ಲಕ್ಷ್ಮೀಸ್ವರೂಪಿಣಿಯೂ, ರಾಧಾ ಸಹಚರಿಯೂ ಗೋವುಗಳಿಗೆ ಅಧಿಷ್ಠಾತೃದೇವಿಯೂ, ಗೋಮಾತೆಯೂ ಆದ ಸುರಭಿಯನ್ನು ಭಜಿಸುವೆನು.

೧೯. ಯಾರಿಂದ ನಿಖಿಲಜಗತ್ತು ಪವಿತ್ರವೆನಿಸುವುದೋ ಅಂಥ ಪರಮಪವಿತ್ರಳೂ, ಸರ್ವಪೂಜ್ಯಳೂ, ಭಕ್ತರ ಇಷ್ಟಾರ್ಥಪ್ರದಳೂ ಆದ ಸುರಭಿದೇವಿಯನ್ನು ಸ್ತುತಿಸುವೆನು.

೨೦. ಬ್ರಾಹ್ಮಣನು ಕಲಶದಲ್ಲಾಗಲೀ ಸಾಕ್ಷಾತ್ ಹಸುವಿನ ಮುಖದಲ್ಲಿಯಾಗಲೀ, ಅಥವಾ ಹಸುವನ್ನು ಕಟ್ಟುವ ಕಂಭದಲ್ಲಾಗಲೀ, ಸಾಲಿಗ್ರಾಮಶಿಲೆಯಲ್ಲಾಗಲೀ, ನೀರಿನಲ್ಲಾಗಲೀ, ಅಗ್ನಿಯಲ್ಲಾಗಲೀ ಸುರಭಿಯನ್ನು ಆವಾಹನೆಮಾಡಿ ಪೂಜಿಸಬೇಕು.

೨೧. ದೀಪಾವಳಿಯ ಹಿಂದಿನ ದಿನ ಸುರಭಿಯನ್ನು ಆವಾಹನೆ ಮಾಡಿ, ಭಕ್ತಿಪೂರ್ವಕವಾಗಿ ಪೂಜಿಸುವ ಮನುಜನು ಲೋಕದಲ್ಲಿ ಪೂಜ್ಯನಾಗುವನು.

ಏಕದಾ ತ್ರಿಷು ಲೋಕೇಷು ವಾರಾಹೇ ವಿಷ್ಣುಮಾಯಯಾ ।
ಕ್ಷೀರಂ ಜಹಾರ ಸಹಸಾ ಚಿಂತಿತಾಶ್ಚ ಸುರಾದಯಃ ॥ ೨೨ ॥

ತೇ ಗತ್ವಾ ಬ್ರಹ್ಮಣೋ ಲೋಕಂ ಬ್ರಹ್ಮಾಣಂ ತುಷ್ಟುವುಸ್ತದಾ ।
ತದಾಜ್ಞಯಾ ಚ ಸುರಭೀಂ ತುಷ್ಟುವೇ ಪಾಕಶಾಸನಃ ॥ ೨೩ ॥

॥ ಮಹೇಂದ್ರ ಉವಾಚ ॥

ನಮೋ ದೇವ್ಯೈ ಮಹಾದೇವ್ಯೈ ಸುರಭ್ಯೈ ಚ ನಮೋ ನಮಃ ।
ಗವಾಂ ಬೀಜಸ್ವರೂಪಾಯೈ ನಮಸ್ತೇ ಜಗದಂಬಿಕೇ ॥ ೨೪ ॥

ನಮೋ ರಾಧಾಪ್ರಿಯಾಯೈ ಚ ಪದ್ಮಾಂಶಾಯೈ ನಮೋ ನಮಃ ।
ನಮಃ ಕೃಷ್ಣಪ್ರಿಯಾಯೈ ಚ ಗವಾಂ ಮಾತ್ರೇ ನಮೋ ನಮಃ ।
ಕಲ್ಪವೃಕ್ಷಸ್ವರೂಪಾಯೈ ಪ್ರದಾತ್ರ್ಯೈ ಸರ್ವಸಂಪದಾಂ ॥ ೨೫ ॥

---

೨೨. ವಾರಾಹಕಲ್ಪದಲ್ಲಿ ಒಮ್ಮೆ ವಿಷ್ಣುವು ಮಾಯಾಮಹಿಮೆಯಿಂದ ಮೂರುಲೋಕದಲ್ಲಿಯೂ ಹಾಲು ದೊರೆಯದಂತೆ ಮಾಡಿದನು. ಆಗ ದೇವತೆಗಳೆಲ್ಲರೂ ಚಿಂತಾಕ್ರಾಂತರಾದರು.

೨೩. ಆಗ ಅವರು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮನನ್ನು ಸ್ತುತಿಸಿ ಮೆಚ್ಚಿಸಿದರು. ಬ್ರಹ್ಮನ ಅಪ್ಪಣೆಯಂತೆ ದೇವೇಂದ್ರನು ಕಾಮಧೇನುವನ್ನು ಸ್ತೋತ್ರಮಾಡಿದನು.

೨೪. ಮಹೇಂದ್ರ:—ಗೋವುಗಳಿಗೆಲ್ಲ ಆದಿಕಾರಣಳೂ, ಗೋಮಾತೆಯೂ, ಜಗದಂಬೆಯೂ ಆದ ಸುರಭಿ ಮಹಾದೇವಿಯನ್ನು ಭಕ್ತಿಪೂರ್ವಕವಾಗಿ ವಂದಿಸುವೆನು.

೨೫. ರಾಧಾದೇವಿಯ ಪ್ರಿಯಳೂ, ಪದ್ಮಾಂಶಸಂಭೂತಳೂ, ಶ್ರೀಕೃಷ್ಣಪರಮಾತ್ಮನ ಪ್ರೇಮಕ್ಕೆ ಪಾತ್ರಳೂ ಆದ ಗೋಮಾತೆಗೆ ನಮಿಸುವೆನು. ಕಲ್ಪವೃಕ್ಷದಂತೆ ಸಕಲ ಸಂಪತ್ತನ್ನೂ ಕೊಡಬಲ್ಲ ಕಾಮಧೇನುವಿಗೆ ನಮಸ್ಕರಿಸುವೆನು.

ಶ್ರೀದಾಯೈ ಧನದಾಯೈ ಚ ಶುದ್ಧಿದಾಯೈ ನಮೋ ನಮಃ ।
ಶುಭದಾಯೈ ಪ್ರಸನ್ನಾಯೈ ಗೋಪ್ರದಾಯೈ ನಮೋ ನಮಃ ॥ ೨೬ ॥

ಯಶೋದಾಯೈ ಸೌಖ್ಯದಾಯೈ ಧರ್ಮಜ್ಞಾಯೈ ನಮೋ ನಮಃ ।
ಸ್ತೋತ್ರಶ್ರವಣಮಾತ್ರೇಣ ತುಷ್ಟಾ ಹೃಷ್ಟಾ ಜಗತ್ಪ್ರಸೂಃ ॥ ೨೭ ॥

ಆವಿರ್ಬಭೂವ ತತ್ರೈವ ಬ್ರಹ್ಮಲೋಕೇ ಸನಾತನೀ ।
ಮಹೇಂದ್ರಾಯ ವರಂ ದತ್ವಾ ವಾಂಛಿತಂ ಸರ್ವದುರ್ಲಭಂ ॥ ೨೮ ॥

ಜಗಾಮ ಸಾ ಚ ಗೋಲೋಕಂ ಯಯುರ್ದೇವಾದಯೋ ಗೃಹಂ ।
ಬಭೂವ ವಿಶ್ವಂ ಸಹಸಾ ದುಗ್ಧಪೂರ್ಣಂ ಚ ನಾರದ ॥ ೨೯ ॥

ದುಗ್ಧಾದ್ಘೃತಂ ತತೋ ಯಜ್ಞಸ್ತತಃ ಪ್ರೀತಿಃ ಸುರಸ್ಯ ಚ ।
ಇದಂ ಸ್ತೋತ್ರಂ ಮಹಾಪುಣ್ಯಂ ಭಕ್ತಿಯುಕ್ತಶ್ಚ ಯಃ ಪಠೇತ್ ॥ ೩೦ ॥

---

೨೬. ಧನಕನಕಾದಿ ಸಂಪತ್ತನ್ನೂ, ದಿವ್ಯಜ್ಞಾನವನ್ನೂ, ಸದ್ಬುದ್ಧಿಯನ್ನೂ, ಮಂಗಳಪರಂಪರೆಗಳನ್ನೂ, ಗೋಧನವನ್ನೂ ಇತ್ತು ಪ್ರಸನ್ನಳಾಗುವ ಸುರಭಿದೇವಿಯನ್ನು ನಮಿಸುವೆನು.

೨೭. ಕೀರ್ತಿಸುಖಗಳನ್ನು ಕೊಡುವ ಧರ್ಮಜ್ಞಳಾದ ಸುರಭಿದೇವಿಯನ್ನು ಭಕ್ತಿಪೂರ್ವಕವಾಗಿ ವಂದಿಸುವೆನು. ಈ ರೀತಿಯಾದ ಸ್ತೋತ್ರವನ್ನು ಕೇಳಿದಮಾತ್ರದಿಂದಲೇ ಜಗನ್ಮಾತೆಯಾದ ಸುರಭಿಯು ಸಂತುಷ್ಟಳೂ ಪ್ರಸನ್ನಳೂ ಆದಳು.

೨೮. ಕೂಡಲೇ ಅನಾದಿಯಾದ ಆ ಸುರಭಿದೇವಿಯು ಬ್ರಹ್ಮಲೋಕದಲ್ಲಿ ದೇವೇಂದ್ರನಿಗೆ ಪ್ರತ್ಯಕ್ಷಳಾಗಿ, ಸಕಲರಿಗೂ ದುರ್ಲಭವಾದ ವರವನ್ನು ಅವನಿಗಿತ್ತಳು.

೨೯. ಸುರಭಿಯು ಈರೀತಿಯಾಗಿ ವರವಿತ್ತು ಭೂಲೋಕಕ್ಕೆ ತೆರಳಲು, ಇತ್ತ ದೇವತೆಗಳೂ ತಮ್ಮ ತಮ್ಮ ಮಂದಿರಕ್ಕೆ ಹಿಂತಿರುಗಿದರು—ಎಲೈ ನಾರದನೇ, ಆ ಕ್ಷಣವೇ ಪ್ರಪಂಚವೆಲ್ಲ ಕ್ಷೀರದಿಂದ ಪರಿಪೂರ್ಣವಾಯಿತು.

೩೦. ಅನಂತರ, ಕ್ರಮವಾಗಿ ತುಪ್ಪವಾಯಿತು. ಭೂಲೋಕದಲ್ಲಿ ಭೂಸುರರರೆಲ್ಲರೂ ಯಜ್ಞಯಾಗಾದಿಗಳನ್ನು ಆಚರಿಸಿ ದೇವತೆಗಳನ್ನು ತೃಪ್ತಿಪಡಿಸಿದರು.

ಸಗೋಮಾನ್ಧನವಾಂಶ್ಚೈವ ಕೀರ್ತಿಮಾನ್ಪುಣ್ಯವಾನ್ಭವೇತ್ ।
ಸುಸ್ನಾತಃ ಸರ್ವತೀರ್ಥೇಷು ಸರ್ವಯಜ್ಞೇಷು ದೀಕ್ಷಿತಃ ॥ ೩೦ ॥

ಇಹಲೋಕೇ ಸುಖಂ ಭುಕ್ತ್ವಾ ಯಾತ್ಯಂತೇ ಕೃಷ್ಣಮಂದಿರಂ ।
ಸುಚಿರಂ ನಿವಸೇತ್ತತ್ರ ಕುರುತೇ ಕೃಷ್ಣಸೇವನಂ ॥ ೩೧ ॥

ನ ಪುನರ್ಭವನಂ ತಸ್ಯ ಬ್ರಹ್ಮಪುತ್ರ ಭವೇ ಭವೇತ್ ॥ ೩೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಸುರಭ್ಯುಪಾಖ್ಯಾನೇ
ತದುತ್ಪತ್ತಿ ತತ್ಪೂಜಾದಿಕಥನಂ ನಾಮ
ಸಪ್ತಚತ್ವಾರಿಂಶತ್ತಮೋಽಧ್ಯಾಯಃ

---

೩೦. ಮಹಾಪುಣ್ಯಕರವಾದ ಈ ಸ್ತೋತ್ರವನ್ನು ಭಕ್ತಿಪೂರ್ವಕವಾಗಿ ಪಠಿಸುವವನು ಅನೇಕ ಗೋವುಗಳನ್ನು ಪಡೆಯುವುದಲ್ಲದೆ, ಹಣವಂತನೂ, ಪುಣ್ಯವಂತನೂ ಮತ್ತು ಕೀರ್ತಿಯುತನೂ ಆಗುವನು. ಸರ್ವಪುಣ್ಯತೀರ್ಥಗಳಲ್ಲಿಯೂ ಸ್ನಾನ ಮಾಡಿದ ಫಲವನ್ನೂ ಸಕಲ ಯಜ್ಞಗಳಲ್ಲೂ ದೀಕ್ಷೆಗೊಂಡ ಫಲವನ್ನೂ ಹೊಂದುವನು.

೩೧. ಈ ಲೋಕದಲ್ಲಿರುವವರೆಗೂ ಸುಖವನ್ನನುಭವಿಸಿ ದೇಹಾವಸಾನವಾದ ಮೇಲೆ ಶ್ರೀಕೃಷ್ಣನ ನಿವಾಸಸ್ಥಾನವಾದ ಗೋಲೋಕಕ್ಕೆ ಹೋಗಿ, ಬಹುಕಾಲ ಅಲ್ಲಿ ವಾಸಿಸುತ್ತ ಶ್ರೀಕೃಷ್ಣನ ಸೇವೆಗೈಯುತ್ತಿರುವನು.

೩೨. ಈರೀತಿಯಾಗಿ ಸುರಭಿಸೇವೆಮಾಡಿದವನಿಗೆ ಜನನಮರಣಾತ್ಮಕವಾದ ಸಂಸಾರದ ಗೊಂದಲವಿರುವುದಿಲ್ಲ. ಅವನು ನಿತ್ಯಮುಕ್ತನಾಗುವನು.

ಇಲ್ಲಿಗೆ ಸುರಭಿಯ ಉತ್ಪತ್ತಿ ಮುಂತಾದ ಕಥೆಯನ್ನು ತಿಳಿಸುವ
ನಲವತ್ತೇಳನೆಯ ಅಧ್ಯಾಯವು ಸಮಾಪ್ತವಾಯಿತು.

## ನಲವತ್ತೇಳನೆಯ ಅಧ್ಯಾಯದ ಸಾರಾಂಶ

ಗೋಲೋಕದಲ್ಲಿ ವಿಹಾರಮಾಡುತ್ತಿದ್ದ ಶ್ರೀಕೃಷ್ಣ ಪರಮಾತ್ಮನಿಗೆ ಕ್ಷೀರಪಾನ ಮಾಡಬೇಕೆಂಬ ಇಚ್ಛೆಯುಂಟಾದಾಗ ಸುರಭಿದೇವಿಯು ಅವತರಿಸಿ ಯಥೇಚ್ಛವಾಗಿ ಹಾಲುಕರೆದು ಪರಮಾತ್ಮನನ್ನು ತೃಪ್ತಿಗೊಳಿಸಿದ್ದಲ್ಲದೆ ಕ್ಷೀರಸಮುದ್ರದ ಉತ್ಪತ್ತಿಗೂ ಕಾರಣಳಾದಳು. ಗೋವುಗಳಿಗೆಲ್ಲ ಅಧಿದೇವತೆಯಾದ ಈ ಸುರಭಿದೇವಿಯನ್ನು ಪರಮಾತ್ಮನು ಮೊದಲು ಪೂಜಿಸಿ, ಎಲ್ಲರ ಜೀವನಕ್ಕೂ ಆಧಾರಭೂತಳಾದ ಗೋಮಾತೆಯನ್ನು ಎಲ್ಲರೂ ಪೂಜಿಸಬೇಕೆಂದು ನಿಯಮಿಸಿದನು. ಸುರಭಿದೇವಿಯನ್ನು ವೇದೋಕ್ತಕ್ರಮದಲ್ಲಿ ಪೂಜಿಸಿ, ನುತಿಸುವವರು ಇಹಲೋಕದಲ್ಲಿ ಸಕಲಸಮೃದ್ಧಿಯನ್ನೂ ಪಡೆಯುವುದಲ್ಲದೆ, ಜನನಮರಣರೂಪವಾದ ಸಂಸಾರದಿಂದ ಮುಕ್ತರಾಗುವರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಅಷ್ಟಚತ್ವಾರಿಂಶತ್ತಮೋಽಧ್ಯಾಯಃ ||

**|| ನಾರದ ಉವಾಚ ||**

**ನಾರಾಯಣ ಮಹಾಭಾಗ ನಾರಾಯಣಪರಾಯಣ |**
**ನಾರಾಯಣಾಂಶ ಭಗವನ್ ಬ್ರೂಹಿ ನಾರಾಯಣೀಂ ಕಥಾಂ || ೧ ||**

**ಶ್ರುತಂ ಸುರಭ್ಯುಪಾಖ್ಯಾನಮತೀವ ಸುಮನೋಹರಂ |**
**ಗೋಪ್ಯಂ ಸರ್ವಪುರಾಣೇಷು ಪುರಾವಿದ್ಭಿಃ ಪ್ರಶಂಸಿತಂ || ೨ ||**

---

### ನಲವತ್ತೆಂಟನೆಯ ಅಧ್ಯಾಯವು

೧. ನಾರದ: —ಶ್ರೀಮನ್ನಾರಾಯಣನಲ್ಲಿ ಪರಮಭಕ್ತಿಯುಳ್ಳವನೂ. ಆವನ ಅಂಶದಿಂದ ಜನಿಸಿದವನೂ ಆದ ಎಲೈ ನಾರಾಯಣ ಮಹರ್ಷಿಯೇ, ಈಗ ನಾರಾಯಣಾಂಶಸಂಭೂತಳಾದ ರಾಧಾದೇವಿಯ ಕಥೆಯನ್ನು ಹೇಳುವವನಾಗು.

೨. ಪೂರ್ವೀಕರಾದ ಮಹರ್ಷಿಗಳಿಂದ ಮೆಚ್ಚುಗೆ ಪಡೆದು, ಎಲ್ಲ ಪುರಾಣ ಗಳಲ್ಲೂ ದುರ್ಲಭವೂ, ಗೋಪ್ಯವೂ ಆಗಿರುವ ಸುರಭಿದೇವಿಯ ಕಥೆಯನ್ನು ಕೇಳಿ ಯಾಯಿತು.

ಅಧುನಾ ಶ್ರೋತುಮಿಚ್ಛಾಮಿ ರಾಧಿಕಾಖ್ಯಾನಮುತ್ತಮಂ ।
ತದುತ್ಪತ್ತಿಂ ಚ ತದ್ಧ್ಯಾನಂ ಸ್ತೋತ್ರಂ ಕವಚಮುತ್ತಮಂ ॥ ೩ ॥

॥ ಶ್ರೀ ನಾರಾಯಣ ಉವಾಚ ॥

ಪುರಾ ಕೈಲಾಸಶಿಖರೇ ಭಗವಂತಂ ಸನಾತನಂ ।
ಸಿದ್ಧೇಶಂ ಸಿದ್ಧಿದಂ ಸರ್ವಸ್ವರೂಪಂ ಶಂಕರಂ ಪರಂ ॥ ೪ ॥

ಪ್ರಫುಲ್ಲವದನಂ ಪ್ರೀತಂ ಸಸ್ಮಿತಂ ಮುನಿಭಿಃ ಸ್ತುತಂ ।
ಕುಮಾರಾಯ ಪ್ರರೋಚಂತಂ ಕೃಷ್ಣಸ್ಯ ಪರಮಾತ್ಮನಃ ॥ ೫ ॥

ರಾಸೋತ್ಸವರಸಾಖ್ಯಾನಂ ರಾಸಮಂಡಲವರ್ಣನಂ ।
ತದಾಖ್ಯಾನಾವಸಾನೇ ಚ ಪ್ರಸ್ತಾವಾವಸರೇ ಸತೀ ॥ ೬ ॥

ಪಪ್ರಚ್ಛ ಪಾರ್ವತೀ ಸ್ಮೇತಾ ಸಸ್ಮಿತಾ ಪ್ರಾಣವಲ್ಲಭಂ ।
ಸ್ತವನಂ ಕುರ್ವತೀ ಭೀತಾ ಪ್ರಾಣೇಶೇನ ಪ್ರಸಾದಿತಾ ॥ ೭ ॥

---

೩. ಈಗ ಅತ್ಯುತ್ತಮವೆನಿಸಿದ, ರಾಧಾದೇವಿಯ ಉತ್ಪತ್ತಿ, ಧ್ಯಾನ, ಸ್ತೋತ್ರ ಮತ್ತು ಕವಚಾದಿ ಕ್ರಮಗಳನ್ನು ತಿಳಿಸುವ ಆಖ್ಯಾನವನ್ನು ಕೇಳಬೇಕೆಂದು ನನಗೆ ಕುತೂಹಲವಿದೆ.

೪-೬. ಶ್ರೀ ನಾರಾಯಣ :—ಹಿಂದೊಮ್ಮೆ ಕೈಲಾಸ ಪರ್ವತದ ಶಿಖರದಲ್ಲಿ ಷಡ್ಗುಣೈಶ್ವರ್ಯಪರಿಪೂರ್ಣನೂ, ಅನಾದಿಯೂ, ಸರ್ವಸಿದ್ಧೇಶ್ವರನೂ, ಸಕಲ ಸಿದ್ಧಿದಾಯಕನೂ ಆದ ಶಂಕರನು, ಹಸನ್ಮುಖಿಯಾಗಿ ಮುನಿಗಳಿಂದ ಸ್ತುತಿಸಲ್ಪಡುತ್ತ ತನ್ನ ಮಗನಾದ ಗಣಪತಿಗೆ ಶ್ರೀಕೃಷ್ಣಪರಮಾತ್ಮನ ರಾಸೋತ್ಸವಸಮಾರಂಭದ ಕಥೆಯನ್ನು ಹೇಳುತ್ತ ರಾಸಮಂಡಲವನ್ನು ವರ್ಣಿಸುತ್ತಿದ್ದನು.

೭. ಆ ಕಥೆಯು ಮುಗಿದನಂತರ ಪ್ರಸ್ತಾವಾನುಗುಣವಾಗಿ ಪಾರ್ವತೀದೇವಿಯು, ಮುಗುಳುನಗೆ ಬೀರುತ್ತ ಬಹಳ ಭಯ ಸಂಕೋಚಗಳಿಂದ ತನ್ನ ಪ್ರಾಣಕಾಂತನನ್ನು ಕುರಿತಿಂತೆಂದಳು.

ಪ್ರೋವಾಚ ತಂ ಮಹಾದೇವಂ ಮಹಾದೇವೀ ಸುರೇಶ್ವರೀ ।
ಅಪೂರ್ವಂ ರಾಧಿಕಾಖ್ಯಾನಂ ಪುರಾಣೇಷು ಸುದುರ್ಲಭಂ ॥ ೮ ॥

॥ ಶ್ರೀ ಪಾರ್ವತ್ಯುವಾಚ ॥

ಆಗಮಂ ನಿಖಿಲಂ ನಾಥ ಶ್ರುತಂ ಸರ್ವಮನುತ್ತಮಂ ।
ಪಾಂಚರಾತ್ರಾದಿಕಂ ನೀತಿಶಾಸ್ತ್ರಂ ಯೋಗಂ ಚ ಯೋಗಿನಾಂ ॥ ೯ ॥

ಸಿದ್ಧಾನಾಂ ಸಿದ್ಧಿಶಾಸ್ತ್ರಂ ಚ ನಾನಾತಂತ್ರಂ ಮನೋಹರಂ ।
ಭಕ್ತಾನಾಂ ಭಕ್ತಿಶಾಸ್ತ್ರಂ ಚ ಕೃಷ್ಣಸ್ಯ ಪರಮಾತ್ಮನಃ ॥ ೧೦ ॥

ದೇವೀನಾಮಪಿ ಸರ್ವಾಸಾಂ ಚರಿತಂ ತ್ವನ್ಮುಖಾಂಬುಜಾತ್ ।
ಅಧುನಾ ಶ್ರೋತುಮಿಚ್ಛಾಮಿ ರಾಧಿಕಾಖ್ಯಾನಮುತ್ತಮಂ ॥ ೧೧ ॥

ಶ್ರುತೌ ಶ್ರುತಂ ಪ್ರಶಸ್ತಂ ಚ ರಾಧಾಯೋಶ್ಚ ಸಮಾಸತಃ ।
ತ್ವನ್ಮುಖಾತ್ಕಾಣ್ವಶಾಖಾಯಾಂ ವ್ಯಾಸೇನೋಕ್ತಂ ವದಾಧುನಾ ॥ ೧೨ ॥

---

೮. :ದೇವಾಧಿದೇವನಾದ ಮಹೇಶ್ವರನನ್ನು ನುತಿಸುತ್ತ ಪಾರ್ವತಿಯು ಪುರಾಣಗಳಲ್ಲೂ ಸುಲಭವಲ್ಲದ ರಾಧಿಕಾದೇವಿಯ ಕಥೆಯನ್ನು ಹೇಳಬೇಕೆಂದು ಕೇಳಿದಳು.

೯. ಶ್ರೀಪಾರ್ವತಿ :—ಎಲೈ ಪ್ರಾಣಕಾಂತನೇ, ನಿನ್ನ ದಿವ್ಯಮುಖದಿಂದ ಪಾಂಚರಾತ್ರಾದಿ ನಿಖಿಲಾಗಮಗಳನ್ನೂ ಸಕಲ ನೀತಿಶಾಸ್ತ್ರಗಳನ್ನೂ ಕೇಳಿದೆನು.

೧೦. ಯೋಗಿಗಳಿಗುಪಯುಕ್ತವಾದ ಯೋಗಶಾಸ್ತ್ರವನ್ನೂ, ಸಿದ್ಧರಿಗನುಗುಣವಾದ ಸಿದ್ಧಿಶಾಸ್ತ್ರವನ್ನೂ, ಭಕ್ತರಿಗೆ ಬೇಕಾದ ಭಕ್ತಿಶಾಸ್ತ್ರವನ್ನೂ, ಇನ್ನೂ ಆತ್ಮಜ್ಞಾನೋಪಯುಕ್ತವಾದ ಎಲ್ಲ ಶಾಸ್ತ್ರಗಳನ್ನೂ ನಿನ್ನಿಂದ ನಾನು ತಿಳಿದೆನು.

೧೧. ನಿನ್ನ ಮುಖದಾವರೆಯಿಂದ ಸಕಲ ದೇವಿಯರ ಚರಿತ್ರೆಯನ್ನೂ ಕೇಳಿ ತಿಳಿದೆನು. ಈಗ ಅತ್ಯುತ್ತಮವಾದ ರಾಧಾದೇವಿಯ ಉಪಾಖ್ಯಾನವನ್ನು ಕೇಳಬೇಕೆಂದಾಸೆಯಿದೆ.

೧೨. ಬಹಳ ಶ್ರೇಷ್ಠವಾದ ರಾಧೋಪಾಖ್ಯಾನವನ್ನು ಶ್ರುತಿಯಲ್ಲಿ ಸಂಗ್ರಹವಾಗಿ ತಿಳಿದೆನು. ಈಗ ವ್ಯಾಸಮಹರ್ಷಿಯು ಹೇಳಿರುವ ಕಾಣ್ವಶಾಖೆಗನುಗುಣವಾದ ರಾಧೋಪಾಖ್ಯಾನವನ್ನು ವಿಸ್ತಾರವಾಗಿ ನಿನ್ನ ಬಾಯಿನಿಂದ ಕೇಳಬೇಕು.

ಆಗಮಾಖ್ಯಾನಕಾಲೇ ಚ ಭವತಾ ಸ್ವೀಕೃತಂ ಪುರಾ ।
ನಹೀಶ್ವರವ್ಯಾಹೃತಿಶ್ಚ ಮಿಥ್ಯಾ ಭವಿತುಮರ್ಹತಿ ॥ ೧೩ ॥

ತದುತ್ಪತ್ತಿಂ ಚ ತದ್ಧ್ಯಾನಂ ನಾಮ್ನೋ ಮಾಹಾತ್ಮ್ಯಮುತ್ತಮಂ ।
ಪೂಜಾವಿಧಾನಂ ಚರಿತಂ ಸ್ತೋತ್ರಂ ಕವಚಮುತ್ತಮಂ ॥ ೧೪ ॥

ಆರಾಧನವಿಧಾನಂ ಚ ಪೂಜಾಪದ್ಧತಿಮೀಪ್ಸಿತಾಂ ।
ಸಾಮ್ಪ್ರತಂ ಬ್ರೂಹಿ ಭಗವನ್ಮಾಂ ಭಕ್ತಾಂ ಭಕ್ತವತ್ಸಲ ॥ ೧೫ ॥

ಕಥಂ ನ ಕಥಿತಂ ಪೂರ್ವಮಾಗಮಾಖ್ಯಾನಕಾಲತಃ ।
ಪಾರ್ವತೀವಚನಂ ಶ್ರುತ್ವಾ ನಮ್ರವಕ್ತ್ರೋ ಬಭೂವ ಸಃ ॥ ೧೬ ॥

ಪಂಚವಕ್ತ್ರಶ್ಚ ಭಗವಾ(ನ್)ಞ್ಛುಷ್ಕಕಂಠೋಷ್ಠತಾಲುಕಃ ।
ಸ್ವಸತ್ಯಭಂಗಭೀತಶ್ಚ ಮೌನೀಭೂಯ ವಿಚಿಂತಯನ್ ॥ ೧೭ ॥

---

೧೩. ಆಗಮಶಾಸ್ತ್ರಗಳನ್ನು ಹೇಳುವಾಗ ರಾಧಾದೇವಿಯ ಉಪಾಖ್ಯಾನವನ್ನು ಹೇಳುವುದಾಗಿ ನೀನೇ ಮಾತುಕೊಟ್ಟಿದ್ದೆ. ಪ್ರಾಜ್ಞರು ಆಡಿದ ಮಾತು ಎಂದೆಂದಿಗೂ ಸುಳ್ಳಾಗಲಾರದಲ್ಲವೇ ?

೧೪-೧೫. ಎಲೈ ಭಕ್ತವತ್ಸಲನೇ, ಈಗ ರಾಧೆಯ ಉತ್ಪತ್ತಿಯನ್ನೂ ಧ್ಯಾನಕ್ರಮವನ್ನೂ, 'ರಾಧಾ' ಎಂಬ ಹೆಸರಿನ ಮಹಿಮೆಯನ್ನೂ ಪೂಜಾಕ್ರಮವನ್ನೂ, ಸ್ತೋತ್ರಕವಚಾದಿಗಳನ್ನೂ, ಆ ದೇವಿಗಿಷ್ಟವಾದ ಪೂಜೆಯನ್ನೂ ಭಕ್ತಳಾದ ನನಗೆ ದಯವಿಟ್ಟು ಹೇಳು.

೧೬. ಆಗಮ ಶಾಸ್ತ್ರವನ್ನು ಹೇಳಿದಾಗಲೇ ಈ ಉಪಾಖ್ಯಾನವನ್ನೇಕೆ ಹೇಳಲಿಲ್ಲ ? ಎಂದು ಹೇಳಿದ ಪಾರ್ವತಿಯ ಮಾತುಗಳನ್ನು ಕೇಳಿ ಶಂಕರನು ತಲೆತಗ್ಗಿಸಬೇಕಾಯಿತು.

೧೭. ಷಡ್ಗುಣೈಶ್ವರ್ಯ ಪರಿಪೂರ್ಣನೂ, ಪಂಚಮುಖನೂ ಆದ ಶಿವನು, ತಾನಾಡಿದ ನುಡಿಯು ಅಸತ್ಯವಾಗುವುದೆಂಬ ಭಯದಿಂದ ಒಣಗಿಹೋದ ಕಂಠತಾಲುಗಳುಳ್ಳವನಾಗಿ ಮೌನದಿಂದ ಯೋಚಿಸುತ್ತ ಕುಳಿತನು.

ಸಸ್ಮಾರ ಕೃಷ್ಣಂ ಧ್ಯಾನೇನಾಭೀಷ್ಟದೇವಂ ಕೃಪಾನಿಧಿಂ ।
ತದನುಜ್ಞಾಂ ಚ ಸಂಪ್ರಾಪ್ಯ ಸ್ವಾರ್ಧಾಂಗಾಂ ತಾಮುವಾಚ ಸಃ ॥ ೧೮ ॥

ನಿಷಿದ್ಧೋಽಹಂ ಭಗವತಾ ಕೃಷ್ಣೇನ ಪರಮಾತ್ಮನಾ ।
ಆಗಮಾರಂಭಸಮಯೇ ರಾಧಾಖ್ಯಾನಪ್ರಸಂಗತಃ ॥ ೧೯ ॥

ಮದರ್ಧಾಂಗಸ್ವರೂಪಾ ತ್ವಂ ನ ಮದ್ಭಿನ್ನಾ ಸ್ವರೂಪತಃ ।
ಅತೋಽನುಜ್ಞಾಂ ದದೌ ಕೃಷ್ಣೋ ಮಹ್ಯಂ ವಕ್ತುಂ ಮಹೇಶ್ವರಿ ॥ ೨೦ ॥

ಮದಿಷ್ಟದೇವಕಾಂತಾಯಾ ರಾಧಾಯಾಶ್ಚರಿತಂ ಸತಿ ।
ಅತೀವ ಗೋಪನೀಯಂ ಚ ಸುಖದಂ ಕೃಷ್ಣಭಕ್ತಿದಂ ॥ ೨೧ ॥

---

೧೮. ದಯಾಮಯನೂ ತನ್ನ ಇಷ್ಟ ದೇವತೆಯೂ ಆದ ಶ್ರೀಕೃಷ್ಣನನ್ನು ಮನಸ್ಸಿನಲ್ಲಿಯೇ ಧ್ಯಾನಮಾಡಿ, ಆತನ ಅಪ್ಪಣೆ ಪಡೆದು ತನ್ನ ಅರ್ಧಾಂಗಿಯಾದ ಪಾರ್ವತಿಗಿಂತೆಂದನು.

೧೯. ಆಗಮಶಾಸ್ತ್ರಗಳನ್ನು ಹೇಳಿದಾಗ ರಾಧಾದೇವಿಯ ಉಪಾಖ್ಯಾನವನ್ನು ಹೇಳಕೂಡದೆಂದು ಭಗವಂತನಾದ ಶ್ರೀಕೃಷ್ಣನು ನಿಷೇಧಮಾಡಿದ್ದನು. ಆದ್ದರಿಂದಲೇ ಹೇಳಲಿಲ್ಲ.

೨೦. ನೀನು ನನ್ನ ಅರ್ಧಾಂಗಿಯೆಂದೂ, ನಾವಿಬ್ಬರೂ ವಸ್ತುತಃ ಬೇರೆಯಲ್ಲವೆಂದೂ ನಾನು ವಿಜ್ಞಾಪಿಸಿಕೊಂಡ ಮೇಲೆ, ಮಹೇಶ್ವರಿಯಾದ ನಿನಗೆ ಆ ಉಪಾಖ್ಯಾನವನ್ನು ಹೇಳಬಹುದೆಂದು ನನಗೆ ಅನುಜ್ಞೆಯಿತ್ತನು.

೨೧. ಎಲೌ ಪತಿವ್ರತೆಯೇ, ನನ್ನ ಅಭೀಷ್ಟದೇವತೆಯಾದ ಶ್ರೀಕೃಷ್ಣಪರಮಾತ್ಮನ ಕಾಂತೆಯಾದ ರಾಧಾದೇವಿಯ ಚರಿತ್ರೆಯು ಅತ್ಯಂತ ಗೋಪ್ಯವೂ ಶ್ರೀಕೃಷ್ಣಭಕ್ತಿಯನ್ನು ಕೊಡತಕ್ಕದ್ದೂ ಆಗಿದೆ.

ಜಾನಾಮಿ ತದಹಂ ದುರ್ಗೇ ಸರ್ವಂ ಪೂರ್ವಾಪರಂ ವರಂ ।
ಯಜ್ಜಾನಾಮಿ ರಹಸ್ಯಂ ಚ ನ ತದ್ಬ್ರಹ್ಮಾ ಫಣೀಶ್ವರಃ ॥ ೨೨ ॥

ನ ತತ್ಸನತ್ಕುಮಾರಶ್ಚ ನ ಚ ಧರ್ಮಃ ಸನಾತನಃ ।
ನ ದೇವೇಂದ್ರೋ ಮುನೀಂದ್ರಾಶ್ಚ ಸಿದ್ಧೇಂದ್ರಾಃ ಸಿದ್ಧಪುಂಗವಾಃ ॥ ೨೩ ॥

ಮತ್ತೋ ಬಲವತೀ ತ್ವಂ ಚ ಪ್ರಾಣಾಂಸ್ತ್ಯಕ್ತುಂ ಸಮುದ್ಯತಾ ।
ಅತಸ್ತ್ವಾಂ ಗೋಪನೀಯಂ ಚ ಕಥಯಾಮಿ ಸುರೇಶ್ವರಿ ॥ ೨೪ ॥

ಶೃಣು ದುರ್ಗೇ ಪ್ರವಕ್ಷ್ಯಾಮಿ ರಹಸ್ಯಂ ಪರಮಾದ್ಭುತಂ ।
ಚರಿತಂ ರಾಧಿಕಾಯಾಶ್ಚ ದುರ್ಲಭಂ ಚ ಸುಪುಣ್ಯದಂ ॥ ೨೫ ॥

ಪುರಾ ವೃಂದಾವನೇ ರಮ್ಯೇ ಗೋಲೋಕೇ ರಾಸಮಂಡಲೇ ।
ಶತಶೃಂಗೈಕದೇಶೇ ಚ ಮಾಲತೀ ಮಲ್ಲಿಕಾವನೇ ॥ ೨೬ ॥

---

೨೨. ಎಲೌ ದುರ್ಗಿಯೇ, ರಾಧಾಚರಿತ್ರೆಯ ಪೂರ್ವಾಪರವನ್ನೆಲ್ಲ ನಾನು ಚೆನ್ನಾಗಿ ಬಲ್ಲೆನು. ನಾನು ತಿಳಿದಿರುವ ಆ ರಹಸ್ಯಗಳನ್ನೆಲ್ಲ ಬ್ರಹ್ಮದೇವನೂ, ಆದಿ ಶೇಷನೂ ತಿಳಿದಿಲ್ಲ.

೨೩. ಸನತ್ಕುಮಾರನಾಗಲೀ, ಸನಾತನನಾದ ಧರ್ಮಪುರುಷನಾಗಲೀ, ಸಿದ್ಧಮುನಿಶ್ರೇಷ್ಠರುಗಳಾಗಲೀ, ಈ ರಹಸ್ಯವನ್ನರಿತಿಲ್ಲ.

೨೪. ಆದರೆ ನೀನು ನನಗಿಂತಲೂ ಬಲಿಷ್ಠಳಾಗಿ ನಿನ್ನ ಪ್ರಾಣಸದೃಶನಾದ ನನ್ನನ್ನು ಬಿಟ್ಟುಹೊರಡಲು ಸಿದ್ಧಳಾಗಿರುವೆ. ಆದ್ದರಿಂದ ಸುರಶ್ರೇಷ್ಠಳಾದ ನಿನಗೆ ಗೋಪ್ಯವಾದ ಉಪಖ್ಯಾನವನ್ನು ಹೇಳುವೆನು.

೨೫. ಎಲೌ ದುರ್ಗಾದೇವಿಯೇ, ಅತ್ಯಂತ ಗೋಪ್ಯವೂ ಆಶ್ಚರ್ಯಕರವೂ, ಎಲ್ಲರಿಗೂ ದುರ್ಲಭವೂ ಪುಣ್ಯಕರವೂ ಆದ ರಾಧೋಪಾಖ್ಯಾನವನ್ನು ನಿನಗಾಗಿ ಹೇಳುವೆನು ಸಾವಧಾನದಿಂದ ಕೇಳು.

೨೬–೨೭. ಹಿಂದೊಮ್ಮೆ ಗೋಲೋಕದ ವೃಂದಾವನವೆಂಬ ಮನೋಹರವಾದ ರಾಸಮಂಡಲದಲ್ಲಿ, ಶತಶೃಂಗಪರ್ವತದ ಒಂದು ಭಾಗವಾದ ಜಾಜಿ ಮತ್ತು ಮಲ್ಲಿಗೆ

ರತ್ನಸಿಂಹಾಸನೇ ರಮ್ಯೇ ತಸ್ಥೌ ತತ್ರ ಜಗತ್ಪತಿಃ ।
ಸ್ವೇಚ್ಛಾಮಯಶ್ಚ ಭಗವಾನ್ ಬಭೂವ ರಮಣೋತ್ಸುಕಃ ॥ ೨೭ ॥

ರಿರಂಸೋಸ್ತಸ್ಯ ಜಗತಾಂ ಪತ್ಯುಸ್ತನ್ಮಲ್ಲಿಕಾವನೇ ।
ಇಚ್ಛಯಾ ಚ ಭವೇತ್ಸರ್ವಂ ತಸ್ಯ ಸ್ವೇಚ್ಛಾಮಯಸ್ಯ ಚ ॥ ೨೮ ॥

ಏತಸ್ಮಿನ್ನಂತರೇ ದುರ್ಗೇ ದ್ವಿಧಾ ರೂಪೋ ಬಭೂವ ಸಃ ।
ದಕ್ಷಿಣಾಂಗಂ ಚ ಶ್ರೀಕೃಷ್ಣೋ ವಾಮಾರ್ಧಾಂಗಂ ಚ ರಾಧಿಕಾ ॥ ೨೯ ॥

ಬಭೂವ ರಮಣೀ ರಮ್ಯಾ ರಾಸೇಶಾ ರಮಣೋತ್ಸುಕಾ ।
ಅಮೂಲ್ಯರತ್ನಾಭರಣಾ ರತ್ನಸಿಂಹಾಸನಸ್ಥಿತಾ ॥ ೩೦ ॥

---

ಬಳ್ಳಿಗಳಿರುವ ವನದಲ್ಲಿ, ರಮ್ಯವಾದ ರತ್ನಸಿಂಹಾಸನದಲ್ಲಿ ಜಗದೊಡೆಯನಾದ ಶ್ರೀಕೃಷ್ಣಪರಮಾತ್ಮನು ಮಂಡಿಸಿದ್ದನು. ಸ್ವೇಚ್ಛಾಮಯನಾದ ಆ ಪರಮಾತ್ಮನು ಆಗ ರತಿಸುಖದಲ್ಲಿ ಉತ್ಸಾಹಿಯಾದನು.

೨೮. ಆ ಮಲ್ಲಿಗೆಯ ವನದಲ್ಲಿ ರತಿಸುಖವನ್ನಪೇಕ್ಷಿಸಿದ ಸ್ವೇಚ್ಛಾಮಯನಾದ ಆ ಜಗತ್ಪತಿಯ ಇಚ್ಛೆಯಂತೆ ಎಲ್ಲವೂ ನಡೆಯುವುದರಲ್ಲಿ ಆಶ್ಚರ್ಯವೇನು?

೨೯. ಕೂಡಲೇ ಶತಶೃಂಗವೆಂಬ ಆ ಪರ್ವತದ ದುರ್ಗದಲ್ಲಿ ಆ ಪರಮಾತ್ಮನು ಎರಡು ರೂಪ ತಾಳಿದನು. ಬಲಭಾಗದಿಂದ ಶ್ರೀಕೃಷ್ಣನಾಗಿಯೂ, ಎಡಭಾಗದಿಂದ ರಾಧಾದೇವಿಯಾಗಿಯೂ ಕಾಣಿಸಿಕೊಂಡನು.

೩೦. ಅಮೂಲ್ಯರತ್ನಾಭರಣಗಳನ್ನು ತೊಟ್ಟು ಮನೋಹರಳಾಗಿರುವ ಆ ರಾಸೇಶ್ವರಿಯು, ಪರಮಾತ್ಮನೊಡನೆ ರಮಿಸಲುತ್ಸುಕಳಾಗಿ ರತ್ನಸಿಂಹಾಸನದಲ್ಲಿ ಮಂಡಿಸಿದ್ದಳು.

ವಹ್ನಿಶುದ್ಧಾಂಶುಕಾಧಾನಾ ಕೋಟಿಪೂರ್ಣಶಶಿಪ್ರಭಾ ।
ತಪ್ತಕಾಂಚನವರ್ಣಾಭಾ ರಾಜಿತಾ ಚ ಸ್ವತೇಜಸಾ　॥ ೩೧ ॥

ಸಸ್ಮಿತಾ ಸುದತೀ ಶುದ್ಧಾ ಶರತ್ಪದ್ಮನಿಭಾನನಾ ।
ಬಿಭ್ರತೀ ಕಬರೀಂ ರಮ್ಯಾಂ ಮಾಲತೀಮಾಲ್ಯಮಂಡಿತಾಂ　॥ ೩೨ ॥

ರತ್ನಮಾಲಾಂ ಚ ದಧತೀ ಗ್ರೀಷ್ಮಸೂರ್ಯಸಮಪ್ರಭಾಂ ।
ಮುಕ್ತಾಹಾರೇಣ ಶುಭ್ರೇಣ ಗಂಗಾಧಾರಾನಿಭೇನ ಚ　॥ ೩೩ ॥

ಸಂಯುಕ್ತಂ ವರ್ತುಲೋತ್ತುಂಗಸುಮೇರುಗಿರಿಸನ್ನಿಭಂ ।
ಕಠಿನಂ ಸುಂದರಂ ದೃಶ್ಯಂ ಕಸ್ತೂರೀಪತ್ರಚಿಹ್ನಿತಂ　॥ ೩೪ ॥

ಮಾಂಗಲ್ಯಂ ಮಂಗಲಾರ್ಹಂ ಚ ಸ್ತನಯುಗ್ಮಂ ಚ ಬಿಭ್ರತೀ ।
ನಿತಂಬಶ್ರೋಣಿಭಾರಾರ್ತಾ ನವಯೌವನಸುಂದರೀ　॥ ೩೫ ॥

---

೩೧. ಕೋಟಿಸೂರ್ಯರಿಗೆ ಸಮಾನವಾದ ತೇಜಸ್ಸುಳ್ಳ ಆ ದೇವಿಯು ಅಗ್ನಿಯಂತೆ ಪರಿಶುದ್ಧವಾದ ಬಟ್ಟೆಯನ್ನುಟ್ಟು, ಪುಟಕ್ಕೆ ಹಾಕಿದ ಚಿನ್ನದಂತಿರುವ ತನ್ನ ಕಾಂತಿಯಿಂದ ಬೆಳಗುತ್ತಿದ್ದಳು.

೩೨. ಮುತ್ತಿನಸಾಲಿನಂತಿರುವ ಹಲ್ಲುಗಳಿಂದಲೂ, ಶರಚ್ಚಂದ್ರನಂತಿರುವ ಸ್ಮಿತಮುಖದಿಂದಲೂ ಮನೋಹರಳಾದ ಆ ದೇವಿಯು ರಮ್ಯವಾಗಿ ಮುಡಿಯನ್ನು ಕಟ್ಟಿ ಸುಕುಮಾರವಾದ ಜಾಜಿ ಹೂವಿನಮಾಲೆಯನ್ನು ಮುಡಿದಿದ್ದಳು.

೩೩. ಗ್ರೀಷ್ಮರ್ತುವಿನ ಸೂರ್ಯನಂತೆ ತೇಜೋಮಯವಾದ ರತ್ನಹಾರವನ್ನೂ ಗಂಗಾನದಿಯ ಜಲಧಾರೆಯಂತೆ ಶುಭ್ರವಾದ ಮುತ್ತಿನಹಾರವನ್ನೂ ಕಂಠದಲ್ಲಿ ಧರಿಸಿದ್ದಳು.

೩೪.—೩೫. ಪರಸ್ಪರಸ್ಪರ್ಶವಾಗುವಷ್ಟು ದಪ್ಪನಾಗಿ, ಕಠಿನವೂ ವರ್ತುಲಾಕಾರವೂ ಆದ ಆಕೆಯ ಎರಡು ಸ್ತನಗಳು, ಕಸ್ತೂರಿಬೊಟ್ಟುಗಳಿಂದಲಂಕೃತವಾಗಿ ಪರಮಾತ್ಮನಿಗೆ ಕಾಮೋದ್ದೀಪಕವಾಗಿದ್ದುವು. ಆ ನವಯುವತಿಯು, ನಿತಂಬಬಿಂಬವು ಅತಿಪೀನವಾಗಿದ್ದುದರಿಂದ ಮಂದಗಮನೆಯಾಗಿದ್ದಳು.

ಕಾಮಾತುರಾಂ ಸಸ್ಮಿತಾಂ ತಾಂ ದದರ್ಶ ರಸಿಕೇಶ್ವರಃ ।
ದೃಷ್ಟ್ವಾ ಕಾಂತಾಂ ಜಗತ್ಕಾಂತೋ ಬಭೂವ ರಮಣೋತ್ಸುಕಃ ॥ ೩೬ ॥

ದೃಷ್ಟ್ವಾ ಚೈಸಂ ಸುಕಾಂತಂ ಚ ಸಾ ದಧಾರ ಹರೇಃ ಪುರಃ ।
ತೇನ ರಾಧಾ ಸಮಾಖ್ಯಾತಾ ಪುರಾವಿದ್ಭಿರ್ಮಹೇಶ್ವರಿ ॥ ೩೭ ॥

ರಾಧಾ ಭಜತಿ ತಂ ಕೃಷ್ಣಂ ಸ ಚ ತಾಂ ಚ ಪರಸ್ಪರಂ ।
ಉಭಯೋಃ ಸರ್ವಸಾಮ್ಯಂ ಚ ಸದಾ ಸಂತೋ ವದಂತಿ ಚ ॥ ೩೮ ॥

ಭರಣಂ ಧಾರಣಂ ರಾಸೇ ಸ್ಮರತ್ಯಾಲಿಂಗನಂ ಜಪನ್ ।
ತೇನ ಜಲ್ಪತಿ ಸಂಕೇತಂ ತತ್ರ ರಾಧಾಂ ಸ ಈಶ್ವರಃ ॥ ೩೯ ॥

ರಾಶಬ್ದೋಚ್ಚಾರಣಾದ್ಭಕ್ತೋ ರಾತಿ ಮುಕ್ತಿಂ ಸುದುರ್ಲಭಾಂ ।
ಧಾಶಬ್ದೋಚ್ಚಾರಣಾದ್ದುರ್ಗೇ ಧಾವತ್ಯೇವ ಹರೇಃ ಪದಂ ॥ ೪೦ ॥

---

೩೬. ಈ ರೀತಿಯಾಗಿ ಕಾಮೋದ್ದೀಪಕವಾದ ರೂಪವುಳ್ಳ ಸ್ಮಿತಮುಖಿಯಾದ ಆ ಕಾಂತೆಯನ್ನು ರಸಿಕರಾಜನೂ, ಜಗದೊಡೆಯನೂ ಆದ ಪರಮಾತ್ಮನು ನೋಡಿ ಕಾಮುಪರವಶನಾದನು.

೩೭. ಮನೋಹರನಾದ ಪರಮಾತ್ಮನನ್ನು ನೋಡಿ ಆ ದೇವಿಯು ಅವನನ್ನು ತನ್ನ ವಕ್ಷಃಸ್ಥಳದಲ್ಲಿ ಧರಿಸಿದಳು. ಎಲೌ ಮಹೇಶ್ವರಿಯೇ, ರಾಸೇಶ್ವರನನ್ನು ಧರಿಸಿ ದುದರಿಂದಲೇ ಪುರಾತನರು ಆಕೆಯನ್ನು 'ರಾಧಾ' ಎಂದು ಕರೆದರು.

೩೮. ರಾಧೆಯು ಕೃಷ್ಣನನ್ನೂ, ಕೃಷ್ಣನು ರಾಧೆಯನ್ನೂ, ಪರಸ್ಪರವಾಗಿ ಪ್ರೀತಿಸಿದುದರಿಂದ ಅವರಿಬ್ಬರೂ ಸರ್ವ ವಿಷಯದಲ್ಲೂ ಸಮಾನರೆಂದು ಸತ್ಪುರುಷರು ಹೇಳುವರು.

೩೯. ರಾಸಮಂಡಲದಲ್ಲಿ ಉತ್ಪತ್ತಿ ಪಡೆದು, ಓಡಿಹೋಗಿ, ಶ್ರೀಕೃಷ್ಣಪರ ಮಾತ್ಮನ ಪಾದಗಳ ಮೇಲೆ ಬಿದ್ದು ಆಲಿಂಗನವನ್ನು ಬಯಸಿದುದರಿಂದ, ಸರ್ವೇಶ್ವರ ನಾದ ಪರಮಾತ್ಮನು ಆಕೆಗೆ 'ರಾಧಾ' ಎಂದು ಸಂಕೇತಮಾಡಿದನು.

೪೦. 'ರಾ' ಎಂಬ ಶಬ್ದೋಚ್ಚಾರಣಮಾತ್ರದಿಂದ ಭಕ್ತನು ಸರ್ವ ಸುಲಭ ವಲ್ಲದ ಮುಕ್ತಿಯನ್ನು ಹೊಂದುವನು. 'ಧಾ' ಎಂಬ ಶಬ್ದೋಚ್ಚಾರಣಮಾತ್ರ

ಕೃಷ್ಣವಾಮಾಂಶಸಂಭೂತಾ ರಾಧಾ ರಾಸೇಶ್ವರೀ ಪುರಾ ।
ತಸ್ಯಾಶ್ಚಾಂಶಾಂಶಕಲಯಾ ಬಭೂವುರ್ದೇವಯೋಷಿತಃ ॥ ೪೧ ॥

ರಾ ಇತ್ಯಾದಾನವಚನೋ ಧಾ ಚ ನಿರ್ವಾಣವಾಚಕಃ ।
ತತೋಽವಾಪ್ನೋತಿ ಮುಕ್ತಿಂ ಚ ತೇನ ರಾಧಾ ಪ್ರಕೀರ್ತಿತಾ ॥ ೪೨ ॥

ಬಭೂವ ಗೋಪೀಸಂಘಶ್ಚ ರಾಧಾಯಾ ಲೋಮಕೂಪತಃ ।
ಶ್ರೀಕೃಷ್ಣಲೋಮಕೂಪೇಭ್ಯೋ ಬಭೂವುಃ ಸರ್ವಬಲ್ಲವಾಃ ॥ ೪೩ ॥

ರಾಧಾವಾಮಾಂಶಭಾಗೇನ ಮಹಾಲಕ್ಷ್ಮೀರ್ಬಭೂವ ಸಾ ।
ತಸ್ಯಾಧಿಷ್ಠಾತೃದೇವೀ ಸಾ ಗೃಹಲಕ್ಷ್ಮೀರ್ಬಭೂವ ಸಾ ॥ ೪೪ ॥

---

ದಿಂದ ಸಂಸಾರವೆಂಬ ದುರ್ಗವನ್ನು ಭೇದಿಸಿಕೊಂಡು ಶ್ರೀಹರಿಯ ಪಾದವನ್ನು ಸೇರುವನು.

೪೧. ರಾಸೇಶ್ವರಿಯಾದ ರಾಧೆಯು ಪೂರ್ವದಲ್ಲಿ ಶ್ರೀಕೃಷ್ಣನ ವಾಮಭಾಗದಿಂದ ಅವತರಿಸಿದಳು. ಆಕೆಯ ಅಂಶದಿಂದಲೂ, ಕಲೆಯಿಂದಲೂ ದೇವತಾ ಸ್ತ್ರೀಯರೆಲ್ಲರೂ ಉತ್ಪತ್ತಿ ಪಡೆದರು.

೪೨. 'ರಾ' ಎಂದರೆ ಸ್ವೀಕರಿಸುವುದು. 'ಧಾ' ಎಂದರೆ ಮುಕ್ತಿ. ಅಂದರೆ ರಾಧಾದೇವಿಯು ಭಕ್ತರನ್ನು ಸ್ವೀಕರಿಸಿ, ಅನುಗ್ರಹದಿಂದ ಮುಕ್ತಿಯನ್ನು ಕೊಡುವಳಾದುದರಿಂದ, ಆಕೆಗೆ 'ರಾಧೆ' ಎಂದು ಹೆಸರಾಯಿತು.

೪೩. ಅನಂತರ ಆ ರಾಧಾದೇವಿಯ ಲೋಮಕೂಪಗಳಿಂದ ಅನೇಕ ಗೋಪಿಯರೂ, ಶ್ರೀಕೃಷ್ಣಪರಮಾತ್ಮನ ಲೋಮಕೂಪಗಳಿಂದ ಅಗಣಿತ ಗೋಪರೂ ಜನ್ಮವೆತ್ತಿದರು.

೪೪. ರಾಧಾದೇವಿಯ ವಾಮಭಾಗದಿಂದ ಮಹಾಲಕ್ಷ್ಮಿಯೂ, ಆಕೆಗೆ ಅಧಿಷ್ಠಾತೃದೇವಿಯಾದ ಗೃಹಲಕ್ಷ್ಮಿಯೂ, ಅಂಶದಿಂದ ಅವತರಿಸಿದರು.

ಚತುರ್ಭುಜಸ್ಯ ಸಾ ಪತ್ನೀ ದೇವೀ ವೈಕುಂಠವಾಸಿನೀ ।
ತದಂಶಾ ರಾಜಲಕ್ಷ್ಮೀಶ್ಚ ರಾಜಸಂಪತ್ಪ್ರದಾಯಿನೀ ॥ ೪೫ ॥

ತದಂಶಾ ಮರ್ತ್ಯಲಕ್ಷ್ಮೀಶ್ಚ ಗೃಹಿಣಾಂ ಚ ಗೃಹೇ ಗೃಹೇ ।
ದೀಪಾಧಿಷ್ಠಾತೃದೇವೀ ಚ ಸಾ ಚೈವ ಗೃಹದೇವತಾ ॥ ೪೬ ॥

ಸ್ವಯಂ ರಾಧಾ ಕೃಷ್ಣಪತ್ನೀ ಕೃಷ್ಣವಕ್ಷಃಸ್ಥಲಸ್ಥಿತಾ ।
ಪ್ರಾಣಾಧಿಷ್ಠಾತೃದೇವೀ ಚ ತಸ್ಯೈವ ಪರಮಾತ್ಮನಃ ॥ ೪೭ ॥

ಆಬ್ರಹ್ಮಸ್ತಂಬಪರ್ಯಂತಂ ಸರ್ವಂ ಮಿಥ್ಯೈವ ಪಾರ್ವತಿ ।
ಭಜ ಸತ್ಯಂ ಪರಂ ಬ್ರಹ್ಮ ರಾಧೇಶಂ ತ್ರಿಗುಣಾತ್ಪರಂ ॥ ೪೮ ॥

ಪರಂ ಪ್ರಧಾನಂ ಪರಮಂ ಪರಮಾತ್ಮಾನಮೀಶ್ವರಂ ।
ಸರ್ವಾದ್ಯಂ ಸರ್ವಪೂಜ್ಯಂ ಚ ನಿರೀಹಂ ಪ್ರಕೃತೇಃ ಪರಂ ॥ ೪೯ ॥

---

೪೫. ಆ ಮಹಾಲಕ್ಷ್ಮಿಯು ಚತುರ್ಭುಜನಾದ ಶ್ರೀಮನ್ನಾರಾಯಣನ ಪತ್ನಿಯಾಗಿ ವೈಕುಂಠವಾಸಿನಿಯಾದಳು. ರಾಜರಿಗೆ ಸಂಪತ್ತನ್ನೀಯುವ ರಾಜ್ಯ ಲಕ್ಷ್ಮಿಯು ಆ ಮಹಾಲಕ್ಷ್ಮಿಯ ಅಂಶದಿಂದ ಜನಿಸಿದಳು.

೪೬. ಆಕೆಯ ಅಂಶದಿಂದಲೇ ಭೂಲೋಕದಲ್ಲಿ ಪ್ರತಿ ಗೃಹದಲ್ಲೂ ಬೆಳಕಿಗೆ ಅಧಿಷ್ಠಾತೃದೇವತೆಯಾಗಿ, ಗೃಹಲಕ್ಷ್ಮಿ ಅಥವಾ ಗೃಹದೇವತೆಯು ಜನಿಸಿದಳು.

೪೭. ರಾಧಾದೇವಿಯಾದರೋ, ಕೃಷ್ಣಪರಮಾತ್ಮನ ವಕ್ಷಃಸ್ಥಲದಲ್ಲಿ ಯಾವಾಗಲೂ ನೆಲಸಿ, ಅವನ ಪ್ರಾಣಗಳಿಗೆ ಅಧಿಷ್ಠಾತೃದೇವತೆಯಾಗಿ ಅವನ ಪತ್ನಿಯನಿಸಿದಳು.

೪೮. ಎಲೌ ಪಾರ್ವತಿಯೇ, ಚತುರ್ಮುಖನಿಂದಾದಿಯಾಗಿ, ಒಂದು ಹುಲ್ಲು ಗರಿಯ ವರೆಗಿರುವ ಸಕಲ ವಸ್ತುಗಳೂ ಮಿಥ್ಯಾಭೂತವಾದದ್ದು. ಆದುದರಿಂದ ಸತ್ಯ ಸ್ವರೂಪನೂ, ಪರಾತ್ಪರನೂ, ತ್ರಿಗುಣಾತೀತನೂ ಆದ ಆ ಪರಮಾತ್ಮನನ್ನು ಭಜಿಸು.

೪೯. ಆ ಪರಮಾತ್ಮನು ಸರ್ವಕ್ಕೂ ಆದಿಯೂ, ಸರ್ವೇಶ್ವರನೂ, ಸರ್ವ ಪೂಜ್ಯನೂ, ಇಚ್ಛಾರಹಿತನೂ, ಪ್ರಕೃತಿಗಿಂತ ಶ್ರೇಷ್ಠನೂ ಆಗ ಪ್ರಧಾನಪುರುಷ ನೆನಿಸಿರುವನು.

ಸ್ವೇಚ್ಛಾಮಯಂ ನಿತ್ಯರೂಪಂ ಭಕ್ತಾನುಗ್ರಹವಿಗ್ರಹಂ ।
ತದ್ಭಿನ್ನಾನಾಂ ಚ ದೇವಾನಾಂ ಪ್ರಾಕೃತಂ ರೂಪಮೇವ ಚ ॥ ೩೦ ॥

ತಸ್ಯ ಪ್ರಾಣಾಧಿಕಾ ರಾಧಾ ಬಹುಸೌಭಾಗ್ಯಸಂಯುತಾ ।
ಮಹಾವಿಷ್ಣೋಃ ಪ್ರಸೂಃ ಸಾ ಚ ಮೂಲಪ್ರಕೃತಿರೀಶ್ವರೀ ॥ ೩೧ ॥

ಮಾನಿನೀಂ ರಾಧಿಕಾಂ ಸಂತಃ ಸೇವಂತೇ ನಿತ್ಯಶಃ ಸದಾ ।
ಸುಲಭಂ ಯತ್ಪದಾಂಭೋಜಂ ಬ್ರಹ್ಮಾದೀನಾಂ ಸುದುರ್ಲಭಂ ॥ ೩೨ ॥

ಸ್ವಪ್ನೇ ರಾಧಾಪದಾಂಭೋಜಂ ನ ಹಿ ಪಶ್ಯಂತಿ ಬಲ್ಲವಾಃ ।
ಸ್ವಯಂ ದೇವೀ ಹರೇಃ ಕ್ರೋಡೇ ಛಾಯಾರೂಪೇಣ ಕಾಮಿನಿ ॥ ೩೩ ॥

ಸ ಚ ದ್ವಾದಶಗೋಪಾನಾಂ ರಾಯಣಪ್ರವರಃ ಪ್ರಿಯೇ ।
ಶ್ರೀಕೃಷ್ಣಾಂಶಶ್ಚ ಭಗವಾನ್ವಿಷ್ಣುತುಲ್ಯಪರಾಕ್ರಮಃ ॥ ೩೪ ॥

---

೩೦. ಸ್ವೇಚ್ಛಾರೂಪಿಯಾದ ಆ ಪರಮಾತ್ಮನು ಭಕ್ತಾನುಗ್ರಹಕ್ಕಾಗಿ ಸಶರೀರವಾದ ನಿತ್ಯರೂಪಿಯಾಗುವನು. ಅವನನ್ನುಳಿದ ಎಲ್ಲ ದೇವತೆಗಳ ರೂಪೂ ಪ್ರಾಕೃತವೂ, ನಶ್ವರವೂ ಆದುದು.

೩೧. ಅತ್ಯಂತ ಸೌಭಾಗ್ಯವತಿಯಾದ ಆ ರಾಧೆಯು ಆ ಪರಮಾತ್ಮನ ಪ್ರಾಣಕ್ಕಿಂತಲೂ ಅಧಿಕಳಾಗಿರುವಳು. ಮಹಾವಿಷ್ಣುವಿಗೂ ಮಾತೆಯಾದ ಆಕೆಯನ್ನೇ ಮೂಲಪ್ರಕೃತಿಯಾದ ಈಶ್ವರಿ ಎನ್ನುವರು.

೩೨. ಸತ್ಪುರುಷರು ಮಾನವತಿಯಾದ ಆ ರಾಧೆಯನ್ನು ಸರ್ವದಾ ಸೇವಿಸುವರು. ಬ್ರಹ್ಮಾದಿಗಳಿಗೂ ದುರ್ಲಭವಾದ ಆಕೆಯ ಪಾದದರ್ಶನವು ಸತ್ಪುರುಷರಿಗೆ ಸುಲಭವಾಗಿರುವುದು.

೩೩. ಶ್ರೀಹರಿಯ ವಕ್ಷಃಸ್ಥಲದಲ್ಲಿ ಕಾಂತಿಸ್ವರೂಪಿಣಿಯಾಗಿರುವ ಆ ರಾಧೆಯ ಪಾದಕಮಲಗಳನ್ನು ಗೋಪರು ಸ್ವಪ್ನದಲ್ಲಿಯೂ ಕಾಣರು.

೩೪. ಹನ್ನೆರಡು ಗೋಪರಲ್ಲಿ ಶ್ರೇಷ್ಠನಾದ ರಾಯಣನೆಂಬ ಗೋಪನು ಶ್ರೀಕೃಷ್ಣಾಂಶದಿಂದ ಅವತರಿಸಿ, ಪರಾಕ್ರಮದಲ್ಲಿ ವಿಷ್ಣುವಿಗೆ ಸದೃಶನೆನಿಸಿರುವನು.

**ಸುದಾಮಶಾಪಾತ್ಸಾ ದೇವೀ ಗೋಲೋಕಾದಾಗತಾ ಮಹೀಂ ।**
**ವೃಷಭಾನುಗೃಹೇ ಜಾತಾ ತನ್ಮಾತಾ ಚ ಕಲಾವತೀ ॥ ೫೫ ॥**

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದಾಂತರ್ಗತ ಹರಗೌರೀಸಂವಾದೇ ರಾಧೋಪಾಖ್ಯಾನೇ ರಾಧೋತ್ಪತ್ತಿ ತತ್ಪೂಜಾದಿಕಥನಂ ನಾಮಾಷ್ಟಚತ್ವಾರಿಂಶತ್ತಮೋಽಧ್ಯಾಯಃ**

---

೫೫. ಆ ರಾಧಾದೇವಿಯು ಸುದಾಮನ ಶಾಪಗ್ರಸ್ತಳಾಗಿ, ಗೋಲೋಕದಿಂದ ಭೂಲೋಕಕ್ಕೆ ಬಂದಳು. ಇಲ್ಲಿ ವೃಷಭಾನುವೆಂಬ ರಾಜಪತ್ನಿಯಾದ ಕಲಾವತಿಯಲ್ಲಿ ಅವತರಿಸಿದಳು.

ಇಲ್ಲಿಗೆ ರಾಧಾದೇವಿಯ ಉಪಾಖ್ಯಾನದಲ್ಲಿ ರಾಧಾದೇವಿಯ ಉತ್ಪತ್ತಿ ಮತ್ತು ಪೂಜಾ ವಿಧಾನವನ್ನು ತಿಳಿಸುವ ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

## ನಲವತ್ತೆಂಟನೆಯ ಅಧ್ಯಾಯದ ಸಾರಾಂಶ

ಕೈಲಾಸಪರ್ವತದಲ್ಲಿ ಶಂಕರನು ಗಣಪತಿಗೆ ಶ್ರೀಕೃಷ್ಣಪರಮಾತ್ಮನ ರಾಸೋತ್ಸವದ ಕಥೆಯನ್ನು ಹೇಳುತ್ತಿದ್ದಾಗ ಗಿರಿಜೆಯು ರಾಧಾದೇವಿಯ ಉತ್ಪತ್ತಿ ಮತ್ತು ಪೂಜಾವಿಧಾನವನ್ನು ಹೇಳಬೇಕೆಂದು ಕೇಳಲು ಶಂಕರನು ಈ ರೀತಿ ವಿವರಿಸಿದನು.

ಸೃಷ್ಟಿಯ ಆದಿಯಲ್ಲಿ ಗೋಲೋಕದ ರಾಸಮಂಡಲದಲ್ಲಿದ್ದ ಶ್ರೀಕೃಷ್ಣಪರಮಾತ್ಮನು ಸುತ್ತಲಿನ ಉಪವನದ ರಮ್ಯತೆಯಿಂದ ಕಾಮೋದ್ದೀಪಿತನಾಗಿ, ರತಿಸುಖಾಪೇಕ್ಷೆಯಿಂದ ತಾನೇ ಎರಡು ಭಾಗವಾಗಿ ದಕ್ಷಿಣಾರ್ಧದಿಂದ ಶ್ರೀಕೃಷ್ಣನೆಂದೂ, ವಾಮಾರ್ಧದಿಂದ ರಾಧೆಯೆಂದೂ ಪ್ರಖ್ಯಾತಿಗೊಂಡನು. ರಾಸಮಂಡಲದಲ್ಲಿ ವ್ಯಕ್ತಳಾಗಿ ಓಡಿಬಂದು ಶ್ರೀಕೃಷ್ಣನ ಪಾದಗಳಿಗೆ ವಂದಿಸಿದ ಆ ದೇವಿಗೆ 'ರಾಧಾ' ಎಂಬ ಹೆಸರು ಅನ್ವರ್ಥವಾಯಿತು. ಶ್ರೀಕೃಷ್ಣನ ಅವಯವಗಳಿಂದ ಅಸಂಖ್ಯಗೋಪರೂ, ರಾಧೆಯ ಅವಯವಗಳಿಂದ ಅಗಣಿತ ಗೋಪಿಯರೂ ವ್ಯಕ್ತರಾದರು. ಇವರೆಲ್ಲರಿಂದ ರಾಸಮಂಡಲವು ಪರಿಪೂರ್ಣವಾಯಿತು. ಮಹಾಲಕ್ಷ್ಮಿಯೂ ಆ ರಾಧಾದೇವಿಯ ಅವಯವಗಳಿಂದಲೇ ವ್ಯಕ್ತಳಾಗಿ ಶ್ರೀಮನ್ನಾರಾಯಣನನ್ನು ವರಿಸಿದಳು. 'ರಾಧಾ' ಎಂಬ ದಿವ್ಯ ನಾಮವನ್ನು ಅನನ್ಯಭಕ್ತಿಯಿಂದ ಭಜಿಸುವವರು ಸಂಸಾರದಿಂದ ಮುಕ್ತರಾಗುವುದರಲ್ಲಿ ಸಂಶಯವಿಲ್ಲ. ಈ ರಾಧಾದೇವಿಯು ಸುದಾಮನೆಂಬ ಗೋಪನ ಶಾಪಕ್ಕೊಳಗಾಗಿ, ಭಾರತದಲ್ಲಿ ವೃಷಭಾನುವೆಂಬ ರಾಜನ ಮಗಳಾಗಿ ಜನಿಸಿ, ಅನಂತರ ಶಾಪವಿಮುಕ್ತಳಾದಳು.

॥ ಓಂ ।

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

॥ ಏಕೋನ ಪಂಚಾಶತ್ತಮೋಽಧ್ಯಾಯಃ ॥

॥ ಪಾರ್ವತ್ಯುವಾಚ ॥

ಕಥಂ ಸುದಾಮಶಾಪಂ ಚ ಸಾ ಚ ದೇವೀ ಲಲಾಭ ಹ ।
ಕಥಂ ಶಶಾಪ ಭೃತ್ಯೋ ಹಿ ಸ್ವಾಭೀಷ್ಟಾಂ ದೇವಕಾಮಿನೀಂ ॥ ೧ ॥

॥ ಶ್ರೀ ಭಗವಾನುವಾಚ ॥

ಶೃಣು ದೇವಿ ಪ್ರವಕ್ಷ್ಯಾಮಿ ರಹಸ್ಯಂ ಪರಮಾದ್ಭುತಂ ।
ಗೋಪ್ಯಂ ಸರ್ವಪುರಾಣೇಷು ಶುಭದಂ ಭಕ್ತಿಮುಕ್ತಿದಂ ॥ ೨ ॥

---

### ನಲವತ್ತೊಂಭತ್ತನೆಯ ಅಧ್ಯಾಯವು

೧. ಪಾರ್ವತಿ:—ಮಹಾಮಹಿಮಾಯುತಳಾದ ರಾಧಾದೇವಿಯು ಸುದಾಮನ ಶಾಪಕ್ಕೊಳಗಾದುದು ಹೇಗೆ ? ಸೇವಕನಾದ ಸುದಾಮನು ತನ್ನ ಇಷ್ಟದೇವತೆಯಾದ ಶ್ರೀಕೃಷ್ಣನ ಪತ್ನಿಯನ್ನು ಶಪಿಸಿದುದು ಏಕೆ ? ಇದನ್ನು ವಿಸ್ತರಿಸಿ ಹೇಳು.

೨. ಶ್ರೀ ಭಗವಾನ್ :—ಎಲೌ ಪಾರ್ವತಿಯೇ, ಯಾವ ಪುರಾಣಗಳಲ್ಲೂ ಸಿಗದೆ ಅತ್ಯಂತ ಗೋಪ್ಯವಾಗಿರುವ, ಮತ್ತು ಭಕ್ತಿ ಮುಕ್ತಿಗಳನ್ನು ಕೊಡುವ ರಹಸ್ಯವಾದ ಈ ಕಥೆಯನ್ನು ನಿನಗಾಗಿ ಹೇಳುವೆನು.

ಏಕದಾ ರಾಧಿಕೇಶಶ್ಚ ಗೋಲೋಕೇ ರಾಸಮಂಡಲೇ ।
ಶತಶೃಂಗಾಖ್ಯಗಿರ್ಯೈಕದೇಶೇ ವೃಂದಾವನೇ ವನೇ ॥ ೩ ॥

ಗೃಹೀತ್ವಾ ವಿರಜಾಂ ಗೋಪೀಂ ಸುಭಾಗ್ಯಾಂ ರಾಧಿಕಾಸಮಾಂ ।
ಕ್ರೀಡಾಂ ಚಕಾರ ಭಗವಾನ್ರತ್ನಭೂಷಣಭೂಷಿತಃ ॥ ೪ ॥

ರತ್ನಪ್ರದೀಪಸಂಯುಕ್ತೇ ರತ್ನನಿರ್ಮಾಣಮಂಡಲೇ ।
ಅಮೂಲ್ಯರತ್ನಖಚಿತಮಂಚಕೇ ಪುಷ್ಪತಲ್ಪಕೇ ॥ ೫ ॥

ಕಸ್ತೂರೀಕುಂಕುಮಾರಕ್ತೇ ಸುಚಂದನಸುಧೂಪಿತೇ ।
ಸುಗಂಧಿಮಾಲತೀಮಾಲಾಸಮೂಹಪರಿಮಂಡಿತೇ ॥ ೬ ॥

ಸುರತಾದ್ವಿರತಿರ್ನಾಸ್ತಿ ದಂಪತೀರತಿಪಂಡಿತೌ ।
ತೌ ದ್ವೌ ಪರಸ್ಪರಾಸಕ್ತೌ ಸುಖಸಂಭೋಗತಂತ್ರಿತೌ ॥ ೭ ॥

---

೩-೪. ಒಮ್ಮೆ ರಾಧಾರಮಣನಾದ ಶ್ರೀಕೃಷ್ಣನು ರತ್ನಾಭರಣಗಳಿಂದಲಂಕೃತನಾಗಿ, ಗೋಲೋಕದ ರಾಸಮಂಡಲದಲ್ಲಿರುವ ಶತಶೃಂಗವೆಂಬ ಪರ್ವತದ ಒಂದು ಭಾಗವಾದ ಬೃಂದಾವನದಲ್ಲಿ ರಾಧೆಗೆ ಸರಿಸಮಾನಳಾದ ವಿರಜೆ ಎಂಬ ಸೌಭಾಗ್ಯವತಿಯೊಡನೆ ಕ್ರೀಡಿಸುತ್ತಿದ್ದನು.

೫. ಆಗ ಪರಮಾತ್ಮನು ರತ್ನದೀಪಗಳಿಂದ ಪ್ರಜ್ವಲಿತವಾಗಿ, ಕೇವಲ ಅಮೂಲ್ಯ ರತ್ನಗಳಿಂದ ಖಚಿತವಾದ ಮಂಚದ ಮೇಲೆ ಪುಷ್ಪಶಯನದಲ್ಲಿ ಪವಡಿಸಿದ್ದನು.

೬. ಆ ಶಯನವು ಕಸ್ತೂರೀ ಕುಂಕುಮ ಕೇಸರಿಗಳಿಂದಲೂ, ಘಮಘಮಿಸುವ ಜಾಜೀ ಮಾಲೆಗಳಿಂದಲೂ, ದಿವ್ಯಚಂದನ ಮತ್ತು ಧೂಪಗಳಿಂದಲೂ ಸುವಾಸಿತವಾಗಿತ್ತು.

೭. ಅನ್ಯೋನ್ಯ ಪ್ರೇಮದಿಂದ ಸುಖಸಂಭೋಗದಲ್ಲಿ ನಿರತರಾದ ಆ ರಸಿಕ ದಂಪತಿಗಳಿಗೆ ಎಷ್ಟು ಕಾಲವಾದರೂ ರತಿಸುಖದಲ್ಲಿ ತೃಪ್ತಿಯುಂಟಾಗಲಿಲ್ಲ.

ಮನ್ವಂತರಾಣಾಂ ಲಕ್ಷಶ್ಚ ಕಾಲಃ ಪರಿಮಿತೋ ಗತಃ ।
ಗೋಲೋಕಸ್ಯ ಸ್ವಲ್ಪಕಾಲೇ ಜನ್ಮಾದಿರಹಿತಸ್ಯ ಚ ॥ ೮ ॥

ದೂತ್ಯಶ್ಚತಸ್ರೋ ಜ್ಞಾತ್ವಾಥ ಜಗದುಸ್ತಾಂ ತು ರಾಧಿಕಾಂ ।
ಶ್ರುತ್ವಾ ಪರಮರುಷ್ಟಾ ಸಾ ತತ್ಯಾಜ ಹರಿಮೀಶ್ವರೀ ॥ ೯ ॥

ಪ್ರಬೋಧಿತಾ ಚ ಸಖಿಭಿಃ ಕೋಪರಕ್ತಾಸ್ಯಲೋಚನಾ ।
ವಿಹಾಯ ರತ್ನಾಲಂಕಾರಂ ವಹ್ನಿಶುದ್ಧಾಂಶುಕೇ ಶುಭೇ ॥ ೧೦ ॥

ಕ್ರೀಡಾಪದ್ಮಂ ಚ ಸದ್ರತ್ನಾಮೂಲ್ಯದರ್ಪಣಮುಜ್ಜ್ವಲಂ ।
ನಿರ್ಮಾರ್ಜಯಾಮಾಸ ಸತೀ ಸಿಂದೂರಂ ಚಿತ್ರಪತ್ರಕಂ ॥ ೧೧ ॥

---

೮. ಜನ್ಮಜರಾಮರಣರಹಿತನಾದ, ಗೋಲೋಕನಿವಾಸಿಯಾದ ಆ ಪರಮಾತ್ಮನಿಗೆ ಅದು ಅಲ್ಪಕಾಲವಾದರೂ ಭೂಲೋಕದವರಿಗೆ ಲಕ್ಷಮನ್ವಂತರಗಳಾದುವು.

೯. ವಿರಜೆಯೊಡನೆ ಶ್ರೀಕೃಷ್ಣನು ರತಿಕ್ರೀಡೆಯಾಡುತ್ತಿರುವುದನ್ನು ರಾಧೆಯ ನಾಲ್ಕುಜನ ಸಖಿಯರು ತಿಳಿದು ತಮ್ಮ ನಾಯಕಿಗೆ ತಿಳಿಸಲು, ಕುಪಿತಳಾದ ಆ ರಾಧೇಶ್ವರಿಯು ತನ್ನ ಪತಿಯನ್ನು ತ್ಯಜಿಸಲು ಮನಸ್ಸು ಮಾಡಿದಳು.

೧೦. ಅನಂತರ ಹಾಗೆ ಮಾಡುವುದುಚಿತವಲ್ಲವೆಂದು ಸಖಿಯರಿಂದ ಬೋಧಿತಳಾದ ಆ ದೇವಿಯು ಕುಪಿತಳಾಗಿ, ರತ್ನಾಲಂಕಾರಗಳನ್ನೂ, ದಿವ್ಯವಸ್ತ್ರಗಳನ್ನೂ ತೆಗೆದು ಬಿಸಾಡಿದಳು.

೧೧. ತನ್ನ ಕೈಯ್ಯಲ್ಲಿದ್ದ ವಿಲಾಸಾರ್ಥವಾದ ತಾವರೆಯನ್ನೂ ಪ್ರಕಾಶಮಾನವಾದ ರತ್ನಗನ್ನಡಿಯನ್ನೂ ತ್ಯಜಿಸಿ, ಹಣೆಯಲ್ಲಿದ್ದ ಸಿಂದೂರದ ಬೊಟ್ಟುಗಳನ್ನು ಉಜ್ಜಿ ತೊಳೆದಳು.

ಪ್ರಕ್ಷಾಲ್ಯ ತೋಯೊಂಜಲಿಭಿರ್ಮುಖರಾಗಮಲಕ್ತಕಂ ।
ವಿಸ್ರಸ್ತಕಬರೀಭಾರಾ ಮುಕ್ತಕೇಶೀ ಪ್ರಕಂಪಿತಾ ॥ ೧೨ ॥

ಶುಕ್ಲವಸ್ತ್ರಪರೀಧಾನಾ ರೂಕ್ಷಾನೇಷಾದಿವರ್ಜಿತಾ ।
ಯಯೌ ಯಾನಾಂತಿಕಂ ತೂರ್ಣಂ ಪ್ರಿಯಾಲೀಭಿರ್ನಿವರ್ತಿತಾ ॥ ೧೩ ॥

ಆಜುಹಾವ ಸಖೀಸಂಘಂ ರೋಷವಿಸ್ಫುರಿತಾಧರಾ ।
ಶಶ್ವತ್ಕಂಪಾನ್ವಿತಾಂಗೀ ಸಾ ಗೋಪೀಭಿಃ ಪರಿವಾರಿತಾ ॥ ೧೪ ॥

ತಾಭಿರ್ಭಕ್ತ್ಯಾ ಯುತಾಭಿಶ್ಚ ಕಾತರಾಭಿಶ್ಚ ಸಂಸ್ತುತಾ ।
ಆರುರೋಹ ರಥಂ ದಿವ್ಯಮಮೂಲ್ಯಂ ರತ್ನನಿರ್ಮಿತಂ ।
ದಶಯೋಜನವಿಸ್ತೀರ್ಣಂ ದೈರ್ಘ್ಯೇ ತಚ್ಛತಯೋಜನಂ ॥ ೧೫ ॥

ಸಹಸ್ರಚಕ್ರಯುಕ್ತಂ ಚ ನಾನಾಚಿತ್ರಸಮನ್ವಿತಂ ।
ನಾನಾವಿಚಿತ್ರವಸನೈಃ ಸೂಕ್ಷ್ಮೈಃ ಕ್ಷೌಮೈರ್ವಿರಾಜಿತಂ ॥ ೧೬ ॥

---

೧೨. ಕೆನ್ನೆ ಮತ್ತು ಕೆಳ ತುಟಿಗಳಿಗೆ ರಂಜಿಸಿಕೊಂಡಿದ್ದ ಅರಗಿನ ರಸವನ್ನು ತೊಳೆದುಕೊಂಡು, ಜಡೆಯನ್ನು ಬಿಚ್ಚಿ, ತಲೆಗೂದಲನ್ನು ಕೆದರಿಕೊಂಡಳು.

೧೩. ಬಿಳಿಯ ಬಟ್ಟೆಯನ್ನುಟ್ಟು, ಅಲಂಕಾರಗಳನ್ನೆಲ್ಲಾ ತೊರೆದು, ಕೋಪದಿಂದ ತನ್ನ ಸಖಿಯರು ಬೇಡವೆಂದು ಹೇಳಿದರೂ ಕೇಳದೆ, ತನ್ನ ರಥದ ಸಮೀಪಕ್ಕೆ ಹೋದಳು.

೧೪. ಕೋಪದಿಂದ ಕೆಳತುಟಿಯನ್ನು ನಡುಗಿಸುತ್ತ ಸಖಿಯರ ಗುಂಪನ್ನು ಕರೆದಳು. ಕೂಡಲೇ ಎಲ್ಲಾ ಗೋಪಿಯರೂ ಓಡಿಬಂದು ಆಕೆಯನ್ನು ಸುತ್ತಿ ನಿಂತರು.

೧೫. ರಾಧೆಯ ಕೋಪವನ್ನು ಕಂಡು ಭೀತರಾದ ಆ ಗೋಪಿಯರು ರಾಧೆಯನ್ನು ಭಕ್ತಿಯಿಂದ ಸ್ತುತಿಸಿ, ನಿವಾರಣೆಮಾಡಲು ಯತ್ನಿಸಿದರೂ ರಾಧೆಯು ರತ್ನನಿರ್ಮಿತವಾದ ದಿವ್ಯರಥವನ್ನು ಹತ್ತಿಯೇಬಿಟ್ಟಳು. ಆ ರಥವು ಹತ್ತುಯೋಜನ ಅಗಲವಾಗಿಯೂ, ಅದರ ನೂರರಷ್ಟು ದೀರ್ಘವಾಗಿಯೂ ಇದ್ದಿತು.

೧೬. ಸಾವಿರ ಚಕ್ರಗಳಿಂದ ಕೂಡಿ, ಚಿತ್ರವಿಚಿತ್ರವಾದ ಆ ರಥವು ವಿವಿಧವಾದ ಬಣ್ಣಬಣ್ಣದ ಸೂಕ್ಷ್ಮವಸ್ತ್ರಗಳಿಂದಲಂಕೃತವಾಗಿತ್ತು.

ಅಮೂಲ್ಯರತ್ನನಿರ್ಮಾಣದರ್ಪಣೈಃ ಪರಿಶೋಭಿತಂ ।
ಮಣೀಂದ್ರಜಾಲಮಾಲಾಢ್ಯೈಃ ಪುಷ್ಪಮಾಲಾಸಹಸ್ರಕೈಃ ॥ ೧೭ ॥

ಸಪ್ತರತ್ನಕಲಶೈರ್ಯುಕ್ತಂ ರಮ್ಯೈರ್ಮಂದಿರಕೋಟಿಭಿಃ ।
ತ್ರಿಲಕ್ಷಕೋಟಿಭಿಃ ಸಾರ್ಧಂ ಗೋಪೀಭಿಶ್ಚ ಪ್ರಿಯಾಲಿಭಿಃ ॥ ೧೮ ॥

ಯಯೌ ರಥೇನ ತೇನೈವ ಸುಮನೋಮಾಲಿನಾ ಪ್ರಿಯೇ ।
ಶ್ರುತ್ವಾ ಕೋಲಾಹಲಂ ಗೋಪಃ ಸುದಾಮಾ ಕೃಷ್ಣಪಾರ್ಷದಃ ॥ ೧೯ ॥

ಕೃಷ್ಣಂ ಕೃತ್ವಾ ಸಾವಧಾನಂ ಗೋಪೈಃ ಸಾರ್ಧಂ ಪಲಾಯಿತಃ ।
ಭಯೇನ ಕೃಷ್ಣಃ ಸಂತ್ರಸ್ತೋ ವಿಹಾಯ ವಿರಜಾಂ ಸತೀಂ ॥ ೨೦ ॥

ಸ್ವಚ್ಛೇ ಮಮಗ್ನಃ ಕೃಷ್ಣೋಽಪಿ ತಿರೋಧಾನಂ ಚಕಾರ ಸಃ ।
ಸಾ ಸತೀ ಸಮಯಂ ಜ್ಞಾತ್ವಾ ವಿಚಾರ್ಯ ಸ್ವಹೃದಿ ಕ್ರುಧಾ ॥ ೨೧ ॥

---

೧೭–೧೮. ಅಮೂಲ್ಯವಾದ ರತ್ನಗನ್ನಡಿಗಳಿಂದಲೂ, ಬಗೆಬಗೆಯಂತೆ ಪೋಣಿಸಿರುವ ಸಹಸ್ರಾರು ಶ್ರೇಷ್ಠ ರತ್ನಮಾಲೆಗಳಿಂದಲೂ ಅಲಂಕೃತವಾದ ಆ ರಥವು ಅನೇಕ ರತ್ನಕಲಶಗಳಿಂದಲೂ, ಕೋಟ್ಯಂತರ ಸುಂದರ ಮಂದಿರಗಳಿಂದಲೂ ಕೂಡಿ, ಮೂರುಲಕ್ಷಕೋಟಿ ಗೋಪಸ್ತ್ರೀಯರಿಂದ ತುಂಬಿದ್ದಿತು.

೧೯. ಹೂಮಾಲೆಗಳಿಂದಲಂಕೃತವಾದ ಆ ರಥದಲ್ಲಿ ರಾಧೆಯು ಎಲ್ಲ ಗೋಪಿಯರೊಡನೆ ಕೋಲಾಹಲಮಾಡುತ್ತ ಬರುತ್ತಿರುವುದನ್ನು ಕಂಡು ಶ್ರೀಕೃಷ್ಣನ ಪಾರ್ಷದನಾದ ಸುದಾಮನು ಗಾಬರಿಯಾದನು.

೨೦. ಕೂಡಲೇ ಹೋಗಿ ಶ್ರೀಕೃಷ್ಣನಿಗೆ ಈ ಸಮಾಚಾರವನ್ನು ತಿಳಿಸಿ, ಎಲ್ಲ ಗೋಪರೊಡನೆ ಕಣ್ಮರೆಯಾಗಿ ಹೋದನು. ಕೃಷ್ಣನೂ ಕೂಡ ಭಯದಿಂದ ನಡುಗುತ್ತಾ ವಿರಜೆಯನ್ನು ಬಿಟ್ಟೋಡಿದನು.

೨೧–೨೨. ತನ್ನ ಪ್ರೇಮಪಾತ್ರನಾದ ಶ್ರೀಕೃಷ್ಣನು ಅಂತರ್ಧಾನವಾದುದನ್ನು ಕಂಡು, ಪತಿವ್ರತೆಯಾದ ಆ ವಿರಜೆಯು ಸಂಕೇತವನ್ನು ತಿಳಿದು, ತನ್ನ ಮನಸ್ಸಿನ

ರಾಧಾಪ್ರಕೋಪಭೀತಾ ಚ ಪ್ರಾಣಾಂಸ್ತತ್ಯಾಜ ತತ್‌ಕ್ಷಣಂ ।
ವಿರಜಾಲಿಗಣಾಸ್ತತ್ರ ಭಯವಿಹ್ವಲಕಾತರಾಃ ॥ ೨೨ ॥

ಪ್ರಯಯುಃ ಶರಣಂ ಸಾಧ್ವೀಂ ವಿರಜಾಂ ತತ್‌ಕ್ಷಣಂ ಭಿಯಾ ।
ಗೋಲೋಕೇ ಸಾ ಸರಿದ್ರೂಪಾ ಜಾತಾ ವೈ ಶೈಲಕನ್ಯಕೇ ॥ ೨೩ ॥

ಕೋಟಿಯೋಜನವಿಸ್ತೀರ್ಣಾ ದೀರ್ಘೇ ಶತಗುಣಂ ತಥಾ ।
ಗೋಲೋಕಂ ವೇಷ್ಟಯಾಮಾಸ ಪರಿಖೇವ ಮನೋಹರಾ ॥ ೨೪ ॥

ಬಭೂವುಃ ಕ್ಷುದ್ರನದ್ಯಶ್ಚ ತದಾನ್ಯಾ ಗೋಪ್ಯ ಏವ ಚ ।
ಸರ್ವಾ ನದ್ಯಸ್ತದಂಶಾಶ್ಚ ಪ್ರತಿವಿಶ್ವೇಷು ಸುಂದರಿ ॥ ೨೫ ॥

ಇಮೇ ಸಪ್ತಸಮುದ್ರಾಶ್ಚ ವಿರಜಾನಂದನಾ ಭುವಿ ।
ಅಥಾಗತ್ಯ ಮಹಾಭಾಗಾ ರಾಧಾ ರಾಸೇಶ್ವರೀ ಪರಾ ॥ ೨೬ ॥

---

ಲ್ಲಿಯೇ ದುಃಖಿಸುತ್ತ, ಕುಪಿತಳಾದ ರಾಧೆಯು ತನಗೆ ಶಾಪಕೊಡುವಳೆಂಬ ಭಯದಿಂದ ತನ್ನ ಪ್ರಾಣವನ್ನೇ ತ್ಯಾಗಮಾಡಿದಳು. ಆ ವಿರಜೆಯ ಸಖಿಸಮೂಹವೆಲ್ಲವೂ ಆಗ ಭಯಭ್ರಾಂತವಾಯಿತು.

೨೩–೨೪. ಆ ಕ್ಷಣದಲ್ಲಿಯೇ ಅನಾಥೆಯರಾದ ಆ ಸಖಿಯರೆಲ್ಲರೂ ಸಾಧ್ವೀಶಿರೋಮಣಿಯಾದ ಆ ವಿರಜೆಯನ್ನೇ ಮರೆಹೊಕ್ಕರು. ಆ ವಿರಜೆಯಾದರೋ ಗೋಲೋಕದಲ್ಲಿ ನದೀರೂಪಳಾಗಿ ಪರಿಣಮಿಸಿದಳು. ಎಲೌ ಗಿರಿಜೆಯೇ, ಆ ನದಿಯು ಕೋಟಿಯೋಜನ ವಿಸ್ತೀರ್ಣವುಳ್ಳದ್ದಾಗಿ ಅದಕ್ಕೆ ನೂರಗಷ್ಟು ದೀರ್ಘವಾಗಿ, ಗೋಲೋಕದ ಸುತ್ತಲೂ ಮನೋಹರವಾದ ಕಂದಕದಂತೆ ಆವರಿಸಿಕೊಂಡಿತು.

೨೫. ಆಗ ವಿರಜೆಯ ಸಖಿಯರಾದ ಸಮಸ್ತ ಗೋಪಿಯರೂ ಬೇರೆ ಬೇರೆ ಸಣ್ಣ ಸಣ್ಣ ನದೀರೂಪವನ್ನು ತಾಳಿದರು. ಪ್ರಪಂಚದಲ್ಲಿರುವ ಸಕಲ ನದಿಗಳೂ ಅವರ ಅಂಶದಿಂದಲೇ ಕ್ರಮವಾಗಿ ಉತ್ಪತ್ತಿಯಾದವು.

೨೬–೨೭. ಲೋಕದಲ್ಲಿ ಪ್ರಸಿದ್ಧವಾಗಿರುವ ಏಳು ಸಮುದ್ರಗಳೂ ವಿರಜೆಯ ಮಕ್ಕಳು. ಇತ್ತ ಮಹಾ ಭಾಗ್ಯವತಿಯಾದ ರಾಧಾದೇವಿಯು ಅಲ್ಲಿಗೆ ಬಂದು ಕೃಷ್ಣ

ನ ದೃಷ್ಟ್ವಾ ವಿರಜಾಂ ಕೃಷ್ಣಂ ಸ್ವಗೃಹಂ ಚ ಪುನರ್ಯಯೌ ।
ಜಗಾಮ ಕೃಷ್ಣಸ್ತಾಂ ರಾಧಾಂ ಗೋಪಾಲೈರಷ್ಟಭಿಃ ಸಹ ॥ ೨೭ ॥

ಗೋಪೀಭಿರ್ದ್ವಾರಿಯುಕ್ತಾಭಿರ್ವಾರಿತೋಽಪಿ ಪುನಃ ಪುನಃ ।
ದೃಷ್ಟ್ವಾ ಕೃಷ್ಣಂ ಚ ಸಾ ದೇವೀ ಭರ್ತ್ಸಯಾಮಾಸ ತಂ ತದಾ ॥ ೨೮ ॥

ಸುದಾಮಾ ಭರ್ತ್ಸಯಾಮಾಸ ತಾಂ ತಥಾ ಕೃಷ್ಣಸನ್ನಿಧೌ ।
ಕ್ರುದ್ಧಾ ಶಶಾಪ ಸಾ ದೇವೀ ಸುದಾಮಾನಂ ಸುರೇಶ್ವರೀ ॥ ೨೯ ॥

ಗಚ್ಛ ತ್ವಮಾಸುರೀಂ ಯೋನಿಂ ಗಚ್ಛ ದೂರಮಿತೋ ದ್ರುತಂ ।
ಶಶಾಪ ತಾಂ ಸುದಾಮಾ ಚ ತ್ವಮಿತೋ ಗಚ್ಛ ಭಾರತಂ ॥ ೩೦ ॥

ಭವ ಗೋಪೀ ಗೋಪಕನ್ಯಾ ಮುಖ್ಯಾಭಿಃ ಸ್ವಾಭಿರೇವ ಚ ।
ತತ್ರ ತೇ ಕೃಷ್ಣವಿಚ್ಛೇದೋ ಭವಿಷ್ಯತಿ ಶತಂ ಸಮಾಃ ॥ ೩೧ ॥

---

ನನ್ನೂ ವಿರಜೆಯನ್ನೂ ಕಾಣದೆ ತನ್ನ ಮಂದಿರಕ್ಕೆ ಹಿಂತಿರುಗಿದಳು. ಆಗ ಶ್ರೀಕೃಷ್ಣನು ತಾನಾಗಿಯೇ ಎಂಟುಜನ ಗೋಪರೊಡನೆ ರಾಧೆಯ ಮಂದಿರಕ್ಕೆ ಬಂದನು.

೨೮. ರಾಧಾಮಂದಿರದ ಬಾಗಿಲಿನಲ್ಲಿ ದ್ವಾರಪಾಲಕಿಯರಾದ ಗೋಪಿಯರು ತಡೆದರೂ ಕೂಡ ಒಳನುಗ್ಗಿ ಬಂದ ಶ್ರೀಕೃಷ್ಣನನ್ನು ನೋಡಿ ರಾಧೆಯು ಬಹಳವಾಗಿ ದೂಷಿಸಿ ಬೆದರಿಸಿದಳು.

೨೯. ಶ್ರೀಕೃಷ್ಣನ ದೂಷಣೆಯನ್ನು ಕೇಳಲಾರದೆ ಸುದಾಮನು ರಾಧಾದೇವಿಯನ್ನು ಕೃಷ್ಣನ ಎದುರಿನಲ್ಲಿಯೇ ದೂಷಿಸಿ ಬೆದರಿಸಿದನು. ಆಗ ಕುಪಿತಳಾದ ಆ ದೇವಿಯು ಸುದಾಮನಿಗೆ ಶಾಪವಿತ್ತಳು.

೩೦. 'ನೀನು ಇಲ್ಲಿಂದ ಜಾಗ್ರತೆ ಬಹುದೂರ ಹೋಗಿ ರಾಕ್ಷಸಯೋನಿಯಲ್ಲಿ ಜನ್ಮವೆತ್ತು' ಎಂದು ತನಗೆ ಶಪಿಸಿದ ರಾಧಾದೇವಿಗೆ ಸುದಾಮನೂ ಕೂಡ ಭರತ ಖಂಡದಲ್ಲಿ ಜನ್ಮವೆತ್ತುವಂತೆ ಪ್ರತಿಶಾಪವಿತ್ತನು.

೩೧. 'ನಿನಗೆ ಆಪ್ತರಾದ ಗೋಪಕನ್ಯೆಯರೊಡನೆ ಭೂಲೋಕದಲ್ಲಿ ಗೋಪಿಯಾಗಿ ಹುಟ್ಟುವ ನಿನಗೆ ನೂರುವರ್ಷಗಳ ವರೆಗೆ ಶ್ರೀಕೃಷ್ಣನ ವಿರಹವುಂಟಾಗುವುದು.

ತತ್ರ ಭಾರಾವತರಣಂ ಭಗವಾಂಶ್ಚ ಕರಿಷ್ಯತಿ ।
ಇತಿ ಶಪ್ತ್ವಾ ಸುದಾಮಾಸೌ ಪ್ರಣಮ್ಯ ಜನನೀಂ ಹರಿಂ ।
ಸಾಶ್ರುನೇತ್ರೋ ನೋಹಯುಕ್ತಸ್ತತೋ ಗಂತುಂ ಸಮುದ್ಯತಃ ॥ ೩೨ ॥

ರಾಧಾ ಜಗಾಮ ತತ್ಪಶ್ಚಾತ್ಸಾಶ್ರುನೇತ್ರಾತಿವಿಹ್ವಲಾ ।
ವತ್ಸ ಕ್ವ ಯಾಸೀತ್ಯುಚ್ಚಾರ್ಯ ಪುತ್ರವಿಚ್ಛೇದಕಾತರಾ ॥ ೩೩ ॥

ಕೃಷ್ಣಸ್ತಾಂ ಬೋಧಯಾಮಾಸ ವಿದ್ಯಯಾ ಚ ಕೃಪಾನಿಧಿಃ ।
ಶೀಘ್ರಂ ಪ್ರಾಪ್ಸ್ಯಸಿ ಚ ಸುತಂ ಮಾ ರುದಸ್ತ್ವಂ ವರಾನನೇ ॥ ೩೪ ॥

ಸ ಚಾಸುರಃ ಶಂಖಚೂಡೋ ಬಭೂವ ತುಲಸೀಪತಿಃ ।
ಮಚ್ಛೂಲಭಿನ್ನಕಾಯೇನ ಗೋಲೋಕಂ ವೈ ಜಗಾಮ ಸಃ ॥ ೩೫ ॥

---

೩೨. ಅನಂತರ ಭಗವಂತನೂ ಭೂಭಾರಾವತರಣಕ್ಕಾಗಿ ಭಾರತದಲ್ಲಿ ಅವತರಿಸುವನು, ಈ ರೀತಿಯಾಗಿ ಶಪಿಸಿ ಸುದಾಮನು ಜಗನ್ಮಾತೆಯಾದ ರಾಧೆಯನ್ನೂ, ಜಗತ್ಪಿತನಾದ ಪರಮಾತ್ಮನನ್ನೂ ವಂದಿಸಿ ಅಶ್ರುಪೂರಿತನೇತ್ರನಾಗಿ ಹೊರಕ್ಕೆ ಹೋಗಲು ಸಿದ್ಧನಾದನು.

೩೩. ಆಗ ಪುತ್ರವಿರಹದಿಂದ ಕಾತರಳಾದ ರಾಧೆಯು ಕಣ್ಣೀರು ಸುರಿಸುತ್ತ, 'ಎಲೈ ವತ್ಸನೇ, ನೀನೆಲ್ಲಿಗೆ ಹೋಗುವೆ?' ಎಂದು ಹೇಳುತ್ತ ಅವನ ಹಿಂದೆಯೇ ಹೊರಟಳು.

೩೪. ಆಗ ದಯಾಮಯನಾದ ಶ್ರೀಕೃಷ್ಣನು, ಎಲೌ ಸುಂದರಿಯೇ, ಪುನಃ ಜಾಗ್ರತೆಯಾಗಿಯೇ ನಿನ್ನ ಮಗನು ನಿನ್ನಲ್ಲಿಗೆ ಬರುವನು ವ್ಯಥೆಪಡಬೇಡ ಎಂದು ದಿವ್ಯಜ್ಞಾನವನ್ನು ಬೋಧಿಸಿದನು.

೩೫. ಆ ಸುದಾಮನೂ ಕೂಡ ಶಂಖಚೂಡನೆಂಬ ರಾಕ್ಷಸನಾಗಿ ತುಲಸೀದೇವಿಯ ಪತಿಯಾಗಿದ್ದು ಶಿವನ ಶೂಲಾಯುಧದಿಂದ ನಷ್ಟವಾದ ಶರೀರವುಳ್ಳವನಾಗಿ ಗೋಲೋಕಕ್ಕೆ ತೆರಳಿದನು.

ರಾಧಾ ಜಗಾಮ ವಾರಾಹೇ ಗೋಕುಲಂ ಭಾರತಂ ಸತೀ ।
ವೃಷಭಾನೋಶ್ಚ ವೈಶ್ಯಸ್ಯ ಸಾ ಚ ಕನ್ಯಾ ಬಭೂವ ಹ ॥ ೩೬ ॥

ಅಯೋನಿಸಂಭವಾ ದೇವೀ ವಾಯುಗರ್ಭಾ ಕಲಾವತೀ ।
ಸುಷುವೇ ಮಾಯಯಾ ವಾಯುಂ ಸಾ ತತ್ರಾವಿರ್ಬಭೂವ ಹ ॥ ೩೭ ॥

ಅತೀತೇ ದ್ವಾದಶಾಬ್ದೇ ತು ದೃಷ್ಟ್ವಾ ತಾಂ ನವಯೌವನಾಂ ।
ಸಾರ್ಧಂ ರಾಯಾಣ ವೈಶ್ಯೇನ ತತ್ಸಂಬಂಧಂ ಚಕಾರ ಸಃ ॥ ೩೮ ॥

ಛಾಯಾಂ ಸಂಸ್ಥಾಪ್ಯ ತದ್ಗೇಹೇ ಸಾಂತರ್ಧಾನಮವಾಪ ಹ।
ಬಭೂವ ತಸ್ಯ ವೈಶ್ಯಸ್ಯ ವಿವಾಹಶ್ಛಾಯಯಾ ಸಹ ॥ ೩೯ ॥

ಗತೇ ಚತುರ್ದಶಾಬ್ದೇ ತು ಕಂಸಭೀತೇಶ್ಛಲೇನ ಚ ।
ಜಗಾಮ ಗೋಕುಲಂ ಕೃಷ್ಣಃ ಶಿಶುರೂಪೀ ಜಗತ್ಪತಿಃ ॥ ೪೦ ॥

---

೩೬. ಇತ್ತ ರಾಧಾದೇವಿಯು ವಾರಾಹಕಲ್ಪದಲ್ಲಿ ಭರತಖಂಡದ ಗೋಕುಲದಲ್ಲಿ ವೃಷಭಾನುವೆಂಬ ವೈಶ್ಯನಿಗೆ ಮಗಳಾಗಿ ಜನಿಸಿದಳು.

೩೭. ಅಯೋನಿಜೆಯಾದ ಕಲಾವತಿಯೆಂಬ ಸತಿಯು ವೃಷಭಾನುವಿನಿಂದ ವಾಯುಗರ್ಭವನ್ನು ಹೊಂದಿದಳು. ರಾಧಾದೇವಿಯು ಮಾಯಾರೂಪದಿಂದ ಆಕೆಯು ಪ್ರಸುವಿಸಿದ ವಾಯುವಿನಲ್ಲಿ ಆವಿರ್ಭವಿಸಿದಳು.

೩೮. ಆಕೆಗೆ ಹನ್ನೆರಡುವರ್ಷ ಕಳೆದಮೇಲೆ ನವಯೌವನಸಂಪನ್ನಳಾದ ಆಕೆಯನ್ನು ವೃಷಭಾನುವು ರಾಯಾಣನೆಂಬ ವೈಶ್ಯನಿಗೆ ಕೊಟ್ಟು ವಿವಾಹ ಮಾಡಿದನು.

೩೯. ಆಗ ರಾಧೆಯು ಆ ರಾಯಾಣನ ಮನೆಯಲ್ಲಿ ತನ್ನ ದೇಹದ ಕಾಂತಿಯನ್ನು ಮಾತ್ರ ಇರಿಸಿ ತಾನು ಅಂತರ್ಧಾನಹೊಂದಿದಳು. ಆ ರಾಯಾಣನು ಆ ಛಾಯಾರಾಧೆಯೊಡನೆಯೇ ವಿಹಾರಮಾಡಿಕೊಂಡಿದ್ದನು.

೪೦. ಹದಿನಾಲ್ಕುವರ್ಷಗಳು ಕಳೆದನಂತರ ಜಗತ್ಪೀಡಕನಾದ ಕಂಸನ ಭಯವನ್ನು ಪರಿಹರಿಸುವ ಉದ್ದೇಶದಿಂದ ಜಗತ್ಪತಿಯಾದ ಶ್ರೀಕೃಷ್ಣನು ಶಿಶುರೂಪನಾಗಿ ಛಲದಿಂದ ಗೋಕುಲಕ್ಕೆ ತೆರಳಿದನು.

ಕೃಷ್ಣಮಾತಾ ಯಶೋದಾ ಯಾ ರಾಯಾಣಸ್ತತ್ಸಹೋದರಃ ।
ಗೋಲೋಕೇ ಗೋಪಕೃಷ್ಣಾಂಶಃ ಸಂಬಂಧಾತ್ಕೃಷ್ಣಮಾತುಲಃ　॥ ೪೧ ॥

ಕೃಷ್ಣೇನ ಸಹ ರಾಧಾಯಾಃ ಪುಣ್ಯೇ ವೃಂದಾವನೇ ವನೇ ।
ವಿವಾಹಂ ಕಾರಯಾಮಾಸ ವಿಧಿನಾ ಜಗತಾಂ ವಿಧಿಃ　॥ ೪೨ ॥

ಸ್ವಪ್ನೇ ರಾಧಾಪದಾಂಭೋಜಂ ನ ಹಿ ಪಶ್ಯಂತಿ ಬಲ್ಲವಾಃ ।
ಸ್ವಯಂ ರಾಧಾ ಹರೇಃ ಕ್ರೋಡೇ ಛಾಯಾ ರಾಯಾಣಮಂದಿರೇ　॥ ೪೩ ॥

ಷಷ್ಟಿವರ್ಷಸಹಸ್ರಾಣಿ ತೇಪಸ್ತೇಪೇ ಪುರಾ ವಿಧಿಃ ।
ರಾಧಿಕಾಚರಣಾಂಭೋಜದರ್ಶನಾರ್ಥೀ ಚ ಪುಷ್ಕರೇ　॥ ೪೪ ॥

---

೪೧. ಆಗ ರಾಯಾಣನು ಶ್ರೀಕೃಷ್ಣನ ತಾಯಿಯಾದ ಯಶೋದೆಯ ಸಹೋದರನಾಗಿ ಜನಿಸಿದ್ದನು. ಗೋಲೋಕದಲ್ಲಿ ಗೋಪನಾಗಿದ್ದ ಅವನು ಶ್ರೀಕೃಷ್ಣಾಂಶಸಂಭೂತನಾಗಿದ್ದುದರಿಂದ ಶ್ರೀಕೃಷ್ಣನ ಸೋದರಮಾವನೆನಿಸಿಕೊಂಡನು.

೪೨. ಅನಂತರ ಆ ರಾಯಾಣನು ಜಗತ್ಪತಿಯೂ, ಅವತಾರಪುರುಷನೂ ಆದ ಶ್ರೀಕೃಷ್ಣನೊಡನೆ ರಾಧೆಯ ವಿವಾಹವನ್ನು ಪುಣ್ಯಕರವಾದ ಬೃಂದಾವನದಲ್ಲಿ ನೆರವೇರಿಸಿದನು.

೪೩. ಈ ರೀತಿ ಮಹಿಮಾವತಿಯಾದ ರಾಧಾದೇವಿಯನ್ನು ಗೋಪರು ಸ್ವಪ್ನದಲ್ಲಿಯೂಕೂಡ ನೋಡಲಾರರು. ರಾಧೆಯು ಸದಾ ಶ್ರೀಕೃಷ್ಣನ ವಕ್ಷಃಸ್ಥಲದಲ್ಲಿಯೇ ನೆಲೆಸಿದಳು. ರಾಯಾಣನೊಡನೆ ಛಾಯಾರೂಪಳಾದ ರಾಧೆಯು ಮಾತ್ರ ಇದ್ದಳು.

೪೪. ಪೂರ್ವದಲ್ಲಿ ಚತುರ್ಮುಖಬ್ರಹ್ಮನು ರಾಧಾದೇವಿಯ ಚರಣಕಮಲಗಳ ದರ್ಶನವನ್ನಪೇಕ್ಷಿಸಿ ಪುಷ್ಕರಕ್ಷೇತ್ರದಲ್ಲಿ ಅರವತ್ತುಸಾವಿರ ವರ್ಷಗಳು ತಪಸ್ಸು ಮಾಡಿದನು.

ಭಾರಾವತರಣೇ ಭೂಮೇರ್ಭಾರತೇ ನಂದಗೋಕುಲೇ ।
ದದರ್ಶ ತತ್ಪದಾಂಭೋಜಂ ತಪಸಸ್ತತ್ಫಲೇನ ಚ ॥ ೪೫ ॥

ಕಿಂಚಿತ್ಕಾಲಂ ಸ ವೈ ಕೃಷ್ಣಃ ಪುಣ್ಯೇ ವೃಂದಾವನೇ ವನೇ ।
ರೇಮೇ ಗೋಲೋಕನಾಥಶ್ಚ ರಾಧಯಾ ಸಹ ಭಾರತೇ ॥ ೪೬ ॥

ತತಃ ಸುದಾಮಶಾಪೇನ ವಿಚ್ಛೇದಶ್ಚ ಬಭೂವ ಹ ।
ತತ್ರ ಭಾರಾವತರಣಂ ಭೂಮೇಃ ಕೃಷ್ಣಶ್ಚಕಾರ ಸಃ ॥ ೪೭ ॥

ಶತಾಬ್ದೇ ಸಮತೀತೇ ತು ತೀರ್ಥಯಾತ್ರಾಪ್ರಸಂಗತಃ ।
ದದರ್ಶ ಕೃಷ್ಣಂ ಸಾ ರಾಧಾ ಸ ಚ ತಾಂ ಚ ಪರಸ್ಪರಂ ॥ ೪೮ ॥

ತತೋ ಜಗಾಮ ಗೋಲೋಕಂ ರಾಧಯಾ ಸಹ ತತ್ವವಿತ್ ।
ಕಲಾವತೀ ಯಶೋದಾ ಚ ಪರ್ಯಗಾದ್ರಾಧಯಾ ಸಹ ॥ ೪೯ ॥

---

೪೫. ಆ ತಪಸ್ಸಿನ ಫಲವಾಗಿ, ಭೂಮಿಯ ಭಾರಾವತರಣಕ್ಕಾಗಿ ನಂದ ಗೋಕುಲದಲ್ಲಿ ಅವತರಿಸಿದ್ದ ಶ್ರೀಕೃಷ್ಣನ ಪತ್ನಿಯಾದ ರಾಧೆಯ ಚರಣಕಮಲಗಳ ದರ್ಶನವನ್ನು ಪಡೆದನು.

೪೬. ಗೋಲೋಕನಾಥನಾದ ಶ್ರೀಕೃಷ್ಣನು ರಾಧಾದೇವಿಯೊಡನೆ ಭಾರತದಲ್ಲಿ ಪುಣ್ಯಕರವಾದ ಬೃಂದಾವನವೆಂಬ ವನದಲ್ಲಿ ಸ್ವಲ್ಪಕಾಲ ರಮಿಸಿಕೊಂಡಿದ್ದನು.

೪೭. ಅನಂತರ ಸುದಾಮನ ಶಾಪದಿಂದ ಅವರಿಬ್ಬರಿಗೂ ವಿರಹವುಂಟಾಯಿತು. ಆಗ ಶ್ರೀಕೃಷ್ಣನು ಭೂಮಿಯ ಭಾರವನ್ನಿಳುಹಿದನು.

೪೮. ಹೀಗೆ ನೂರುವರ್ಷ ಕಳೆದನಂತರ, ತೀರ್ಥಯಾತ್ರೆಯ ಪ್ರಸಂಗದಿಂದ ರಾಧಾದೇವಿಯು ಶ್ರೀಕೃಷ್ಣನನ್ನೂ ಶ್ರೀಕೃಷ್ಣನು ರಾಧೆಯನ್ನೂ ಪರಸ್ಪರವಾಗಿ ನೋಡಿದರು.

೪೯. ಅನಂತರ ತತ್ವಜ್ಞಾನಿಯಾದ ಶ್ರೀಕೃಷ್ಣನು, ರಾಧೆಯೊಡನೆ ಗೋಲೋಕಕ್ಕೆ ತೆರಳಿದನು. ರಾಧಾಮಾತೆಯಾದ ಕಲಾವತಿಯೂ, ಶ್ರೀಕೃಷ್ಣನ ಮಾತೆಯಾದ ಯಶೋದೆಯೂ ಕೂಡ ರಾಧೆಯೊಡನೆಯೇ ತೆರಳಿದರು.

ವೃಷಭಾನುಶ್ಚ ನಂದಶ್ಚ ಯಯೌ ಗೋಲೋಕಮುತ್ತಮಂ ।
ಸರ್ವೇ ಗೋಪಾಶ್ಚ ಗೋಪ್ಯಶ್ಚ ಯೆಯುಸ್ತಾ ಯಾಃ ಸಮಾಗತಾಃ ॥ ೩೦ ॥

ಛಾಯಾಗೋಪಾಶ್ಚ ಗೋಪ್ಯಶ್ಚ ಪ್ರಾಪುರ್ಮುಕ್ತಿಂ ಚ ಸನ್ನಿಧೌ ।
ರೇಮಿರೇ ತಾಶ್ಚ ತತ್ರೈವ ಸಾರ್ಧಂ ಕೃಷ್ಣೇನ ಪಾರ್ವತಿ ॥ ೩೧ ॥

ಷಟ್‌ತ್ರಿಂಶಲ್ಲಕ್ಷಕೋಟ್ಯಶ್ಚ ಗೋಪ್ಯೋ ಗೋಪಾಶ್ಚ ತತ್ಸಮಾಃ ।
ಗೋಲೋಕಂ ಪ್ರಯಯುರ್ಮುಕ್ತಾಃ ಸಾರ್ಧಂ ಕೃಷ್ಣೇನ ರಾಧಯಾ ॥

ದ್ರೋಣಃ ಪ್ರಜಾಪತಿರ್ನಂದೋ ಯಶೋದಾ ತತ್ಪ್ರಿಯಾ ಧರಾ ।
ಸಂಪ್ರಾಪ ಪೂರ್ವತಪಸಾ ಪರಮಾತ್ಮಾನಮೀಶ್ವರಂ ॥ ೩೩ ॥

ವಸುದೇವಃ ಕಶ್ಯಪಶ್ಚ ದೇವಕೀ ಚಾದಿತಿಃ ಸತೀ ।
ದೇವಮಾತಾ ದೇವಪಿತಾ ಪ್ರತಿಕಲ್ಪೇ ಸ್ವಭಾವತಃ ॥ ೩೪ ॥

---

೩೦. ವೃಷಭಾನುವೂ, ನಂದನೂ ಕೂಡ ಉತ್ತಮವಾದ ಗೋಲೋಕವನ್ನು ಸೇರಿದರು. ಶ್ರೀಕೃಷ್ಣನೊಡನೆ ಬಂದಿದ್ದ ಗೋಪಗೋಪಿಯರೆಲ್ಲರೂ ಗೋಲೋಕಕ್ಕೆ ಹಿಂತಿರುಗಿದರು.

೩೧. ಛಾಯಾರೂಪವನ್ನು ಪಡೆದಿದ್ದ ಗೋಪಗೋಪಿಯರೆಲ್ಲರೂ ಶ್ರೀಕೃಷ್ಣನ ಸಾನ್ನಿಧ್ಯರೂಪವಾದ ಮುಕ್ತಿಯನ್ನು ಪಡೆದರು. ಎಲೌ ಪಾರ್ವತಿಯೇ ಆ ಗೋಪಿಯರೆಲ್ಲರೂ ಶ್ರೀಕೃಷ್ಣನೊಡನೆ ಅಲ್ಲಿಯೇ ಕ್ರೀಡಿಸಿಕೊಂಡಿದ್ದರು.

೩೨. ಮೂವತ್ತಾರುಲಕ್ಷ ಕೋಟಿ ಗೋಪಗೋಪಿಯರೂ ಮುಕ್ತಿಹೊಂದಿ ಶ್ರೀಕೃಷ್ಣ ಮತ್ತು ರಾಧೆಯರೊಡನೆ ಗೋಲೋಕವನ್ನು ಸೇರಿದರು.

೩೩. ಅಷ್ಟವಸುಗಳಲ್ಲಿ ಒಬ್ಬನಾದ ದ್ರೋಣನೂ ಅವನ ಪತ್ನಿಯಾದ ಧರೆಯೂ, ನಂದ ಮತ್ತು ಯಶೋದೆಯರಾಗಿ ಹುಟ್ಟಿ, ಪೂರ್ವಜನ್ಮದ ತಪಸ್ಸಿನ ಫಲದಿಂದ ಶ್ರೀಕೃಷ್ಣಪರಮಾತ್ಮನಿಗೆ ತಂದೆತಾಯಿಗಳೆನಿಸಿದ್ದರು.

೩೪ ಕಶ್ಯಪನು ವಸುದೇವನಾಗಿಯೂ ದೇವಕಿಯು ಅದಿತಿಯಾಗಿಯೂ ಪ್ರತಿ ಯುಗದಲ್ಲೂ ಸ್ವಭಾವತಃ ದೇವತೆಗಳ ತಂದೆತಾಯಿಗಳಾಗಿ ಹುಟುವರು.

ಪಿತ್ರ್ಣಾಂ ಮಾನಸೀಕನ್ಯಾ ರಾಧಾಮಾತಾ ಕಲಾವತೀ ।
ವಸುದಾಮಾಪಿ ಗೋಲೋಕಾದ್ವೃಷಭಾನುಃ ಸಮಾಯಯೌ ॥ ೫೫ ॥

ಇತ್ಯೇವಂ ಕಥಿತಂ ದುರ್ಗೇ ರಾಧಿಕಾಖ್ಯಾನಮುತ್ತಮಂ ।
ಸಂಪತ್ಕರಂ ಪಾಪಹರಂ ಪುತ್ರಪೌತ್ರವಿವರ್ಧನಂ ॥ ೫೬ ॥

ಶ್ರೀಕೃಷ್ಣಶ್ಚ ದ್ವಿಧಾರೂಪೋ ದ್ವಿಭುಜಶ್ಚ ಚತುರ್ಭುಜಃ ।
ಚತುರ್ಭುಜಶ್ಚ ವೈಕುಂಠೇ ಗೋಲೋಕೇ ದ್ವಿಭುಜಃ ಸ್ವಯಂ ॥ ೫೭ ॥

ಚತುರ್ಭುಜಸ್ಯ ಪತ್ನೀ ಚ ಮಹಾಲಕ್ಷ್ಮೀಃ ಸರಸ್ವತೀ ।
ಗಂಗಾ ಚ ತುಲಸೀ ಚೈವ ದೇವ್ಯೋ ನಾರಾಯಣ ಪ್ರಿಯಾಃ ॥ ೫೮ ॥

ಶ್ರೀಕೃಷ್ಣಪತ್ನೀ ಸಾ ರಾಧಾ ತದರ್ಧಾಂಗಸಮುದ್ಭವಾ ।
ತೇಜಸಾ ವಯಸಾ ಸಾಧ್ವೀ ರೂಪೇಣ ಚ ಗುಣೇನ ಚ ॥ ೫೯ ॥

---

೫೫. ಪಿತೃದೇವತೆಗಳ ಮಾನಸಕನ್ಯೆಯು ರಾಧೆಯ ಮಾತೆಯಾದ ಕಲಾವತಿಯಾಗಿಯೂ, ಗೋಲೋಕದಲ್ಲಿದ್ದ ವಸುದಾಮನೆಂಬುವನೇ ವೃಷಭಾನುವಾಗಿಯೂ ಜನಿಸಿದ್ದರು.

೫೬. ಎಲೌ ದುರ್ಗಾದೇವಿಯೇ, ಪಾಪಗಳನ್ನು ಪರಿಹರಿಸಿ ಪುತ್ರಪೌತ್ರಾದಿ ಸಂಪತ್ತುಗಳನ್ನೀಯುವ ಅತ್ಯುತ್ತಮವಾದ ರಾಧಿಕಾಖ್ಯಾನವನ್ನು ನಿನಗೆ ವಿವರಿಸಿದೆನು.

೫೭. ಶ್ರೀಕೃಷ್ಣನು ದ್ವಿಭುಜ ಮತ್ತು ಚತುರ್ಭುಜಗಳಿಂದ ದ್ವಿರೂಪನಾಗಿ ಶೋಭಿಸುವನು. ಚತುರ್ಭುಜನಾಗಿ ನಾರಾಯಣನೆಂಬ ಹೆಸರಿನಿಂದ ವೈಕುಂಠದಲ್ಲಿಯೂ, ದ್ವಿಭುಜನಾಗಿ ಶ್ರೀಕೃಷ್ಣನೆಂಬ ಹೆಸರಿನಿಂದ ಗೋಲೋಕದಲ್ಲಿಯೂ ನೆಲಸಿರುವನು.

೫೮. ಮಹಾಲಕ್ಷ್ಮಿ, ಸರಸ್ವತಿ, ಗಂಗೆ ಮತ್ತು ತುಳಸೀದೇವಿಯರು ಚತುರ್ಭುಜನಾದ ಶ್ರೀಮನ್ನಾರಾಯಣನ ಪತ್ನಿಯರು.

೫೯. ಶ್ರೀಕೃಷ್ಣನಿಗಾದರೋ, ಅವನ ಅರ್ಧಾಂಗದಿಂದ ಅವತರಿಸಿ ತೇಜಸ್ಸು ವಯಸ್ಸುಗಳಿಂದಲೂ, ಗುಣರೂಪಗಳಿಂದಲೂ, ಅವನಿಗೆ ಸಮನೆನಿಸಿರುವ ಸಾಧ್ವೀಮಣಿಯಾದ ರಾಧಾದೇವಿಯು ಪತ್ನಿಯಾಗಿರುವಳು.

ಆದೌ ರಾಧಾಂ ಸಮುಚ್ಚಾರ್ಯ ಪಶ್ಚಾತ್ಕೃಷ್ಣಂ ವದೇದ್ಬುಧಃ ।
ವ್ಯತಿಕ್ರಮೇ ಬ್ರಹ್ಮಹತ್ಯಾಂ ಲಭತೇ ನಾತ್ರ ಸಂಶಯಃ　　॥ ೬೦ ॥

ಕಾರ್ತಿಕೀ ಪೂರ್ಣಿಮಾಯಾಂ ಚ ಗೋಲೋಕೇ ರಾಸಮಂಡಲೇ ।
ಚಕಾರ ಪೂಜಾಂ ರಾಧಾಯಾಸ್ತತ್ಸಂಬಂಧಿ ಮಹೋತ್ಸವಂ　　॥ ೬೧ ॥

ಸದ್ರತ್ನಘುಟಿಕಾಯಾಶ್ಚ ಕೃತ್ವಾ ತತ್ಕವಚಂ ಹರಿಃ ।
ದಧಾರ ಕಂಠೇ ಬಾಹೌ ಚ ದಕ್ಷಿಣೇ ಸಹ ಗೋಪಕೈಃ　　॥ ೬೨ ॥

ಕೃತ್ವಾ ಧ್ಯಾನಂ ಚ ಭಕ್ತ್ಯಾ ಚ ಸ್ತೋತ್ರಮೇತಚ್ಚಕಾರ ಸಃ ।
ರಾಧಾಚರ್ವಿತತಾಂಬೂಲಂ ಚಖಾದ ಮಧುಸೂದನಃ　　॥ ೬೩ ॥

ರಾಧಾ ಪೂಜ್ಯಾ ಚ ಕೃಷ್ಣಸ್ಯ ತತ್ಪೂಜ್ಯೋ ಭಗವಾನ್ಪ್ರಭುಃ ।
ಪರಸ್ಪರಾಭೀಷ್ಟದೇವೇ ಭೇದಕೃನ್ನರಕಂ ವ್ರಜೇತ್　　॥ ೬೪ ॥

---

೬೦. ಪಂಡಿತನಾದವನು ಮೊದಲು ರಾಧಾ ನಾಮೋಚ್ಚಾರಣೆಮಾಡಿ ಅನಂತರ ಕೃಷ್ಣನ ಹೆಸರನ್ನು ಹೇಳಬೇಕು. (ರಾಧಾಕೃಷ್ಣ) ಹಾಗಿಲ್ಲದೆ ವ್ಯತ್ಯಸ್ತವಾಗಿ ಹೇಳಿದರೆ ಬ್ರಹ್ಮಹತ್ಯಾದೋಷ ಬರುವುದರಲ್ಲಿ ಸಂಶಯವಿಲ್ಲ.

೬೧. ಶ್ರೀಕೃಷ್ಣನು, ಕಾರ್ತೀಕಮಾಸದ ಪೂರ್ಣಿಮಾದಿವಸ ಗೋಲೋಕದ ರಾಸಮಂಡಲದಲ್ಲಿ ರಾಧಾದೇವಿಯ ಪೂಜೆಯನ್ನು ಮಾಡಿ ಆ ಸಂಬಂಧವಾದ ಮಹೋತ್ಸವವನ್ನು ನೆರವೇರಿಸಿದನು.

೬೨. ಒಳ್ಳೆಯ ರತ್ನದ ಮಣಿಗಳಿಂದ (ಹರಳು) ರಾಧಾಕವಚವನ್ನು ಮಾಡಿ, ತನ್ನ ಕಂಠದಲ್ಲಿಯೂ, ಬಲತೋಳಿನಲ್ಲಿಯೂ ಧರಿಸಿದನು. ಅಂತೆಯೇ ಗೋಪರೆಲ್ಲರೂ ಧರಿಸಿದರು.

೬೩. ಅನಂತರ ಭಕ್ತಿಯಿಂದ ಧ್ಯಾನಮಾಡಿ ಸ್ತೋತ್ರವನ್ನು ಪಠಿಸಿ ಮಧುಸೂದನನು ರಾಧೆಯು ಅಗಿದ ತಾಂಬೂಲವನ್ನು ಸೇವಿಸಿದನು.

೬೪. ಆದುದರಿಂದ ಶ್ರೀಕೃಷ್ಣನು ರಾಧೆಗೂ, ರಾಧೆಯು ಶ್ರೀಕೃಷ್ಣನಿಗೂ ಅನ್ಯೋನ್ಯ ಪೂಜ್ಯರಾಗಿರುವರು. ಅಭೀಷ್ಟ ದೇವತೆಗಳಾದ ಇವರಿಬ್ಬರಲ್ಲಿ ಭೇದವೆಣಿಸುವವನು ನರಕಕ್ಕೆ ಹೋಗುವನು.

ದ್ವಿತೀಯೇ ಪೂಜಿತಾ ಸಾ ಚ ಧರ್ಮೇಣ ಬ್ರಹ್ಮಣಾ ಮಯಾ ।
ಅನಂತೇ ವಾಸುಕಿಭ್ಯಾಂ ಚ ರವಿಣಾ ಶಶಿನಾ ಪುರಾ ॥ ೬೫ ॥

ಮಹೇಂದ್ರೇಣ ಚ ರುದ್ರೈಶ್ಚ ಮನುನಾ ಮಾನವೇನ ಚ ।
ಸುರೇಂದ್ರೈಶ್ಚ ಮುನೀಂದ್ರೈಶ್ಚ ಸರ್ವವಿಶ್ವೈಶ್ಚ ಪೂಜಿತಾ ॥ ೬೬ ॥

ತೃತೀಯೇ ಪೂಜಿತಾ ಸಾ ಚ ಸಪ್ತದ್ವೀಪೇಶ್ವರೇಣ ಚ ।
ಭಾರತೇ ಚ ಸುಯಜ್ಞೇನ ಪುತ್ರೈರ್ಮಿತ್ರೈರ್ಮುದಾನ್ವಿತೈಃ ॥ ೬೭ ॥

ಬ್ರಾಹ್ಮಣೇನಾಭಿಶಪ್ತೇನ ದೈವದೋಷೇಣ ಭೂಭೃತಾ ।
ವ್ಯಾಧಿಗ್ರಸ್ತೇನ ಹಸ್ತೇನ ದುಃಖಿನಾ ಚ ವಿದೂಯತಾ ॥ ೬೮ ॥

ಸಂಪ್ರಾಪ ರಾಜ್ಯಂ ಭ್ರಷ್ಟಶ್ರೀಃ ಸ ಚ ರಾಧಾವರೇಣ ಚ ।
ಸ್ತೋತ್ರೇಣ ಬ್ರಹ್ಮದತ್ತೇನ ಸ್ತುತ್ವಾ ಚ ಪರಮೇಶ್ವರೀಂ ॥ ೬೯ ॥

---

೬೫-೬೬. ಅನಂತರ ಕ್ರಮವಾಗಿ ಆ ರಾಧಾದೇವಿಯನ್ನು ಧರ್ಮಪುರುಷನೂ, ಬ್ರಹ್ಮದೇವನೂ, ನಾನೂ, ಅನಂತವಾಸುಕಿಯರೂ, ಸೂರ್ಯಚಂದ್ರರೂ ಮಹೇಂದ್ರನೂ, ಏಕಾದಶರುದ್ರರೂ, ಮನುಮಾನವರೂ, ಸುರಮುನಿಶ್ರೇಷ್ಠರೂ ವಿಶ್ವದಲ್ಲಿರುವವರೆಲ್ಲರೂ ಪೂಜಿಸಿದರು.

೬೭. ಮೂರನೆಯಸಾರಿ ಭರತಖಂಡವಲ್ಲಿ ಪುತ್ರಮಿತ್ರರೊಡಗೂಡಿ ಸಂತುಷ್ಟನಾದ ಸಪ್ತದ್ವೀಪಾಧಿಪತಿಯಾದ, ಸುಯಜ್ಞನಿಂದ ಪೂಜಿತಳಾದಳು.

೬೮. ಆ ಸುಯಜ್ಞನೆಂಬ ರಾಜನು ತನ್ನ ದುರದೃಷ್ಟದ ಫಲವಾಗಿ ಬ್ರಾಹ್ಮಣ ಶಾಪವನ್ನು ಹೊಂದಿ, ಹಸ್ತರೋಗಿಯೂ ದುಃಖಿಯೂ ಆಗಿದ್ದನು.

೬೯. ಅಂಥವನು ಬ್ರಹ್ಮನು ಉಪದೇಶಿಸಿದ ಸ್ತೋತ್ರದಿಂದ ಪರಮೇಶ್ವರಿಯಾದ ರಾಧೆಯನ್ನು ಸ್ತುತಿಸಿ (ರಾಧೆಯ ವರದಿಂದ) ತಪ್ಪಿಹೋಗಿದ್ದ ರಾಜ್ಯವನ್ನು ಪುನಃ ಪಡೆದನು.

**ಅಭೇದ್ಯಂ ಕವಚಂ ತಸ್ಯಾಃ ಕಂಠೇ ಬಾಹೌ ದಧಾರ ಸಃ ।**
**ಧ್ಯಾತ್ವಾ ಚಕಾರ ಪೂಜಾಂ ಚ ಪುಷ್ಕರೇ ಶತವತ್ಸರಾನ್ ॥ ೭೦ ॥**

**ಅಂತೇ ಜಗಾಮ ಗೋಲೋಕಂ ರತ್ನಯಾನೇನ ಭೂಮಿಪಃ ।**
**ಇತಿ ತೇ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೭೧ ॥**

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ**
**ನಾರದ ನಾರಾಯಣ ಸಂವಾದಾಂತರ್ಗತೆ ಹರಗೌರೀಸಂವಾದೇ**
**ರಾಧೋಪಾಖ್ಯಾನೇ ರಾಧಾಯಾ ಸುದಾಮಶಾಪಾದಿ**
**ಕಥನಂ ನಾಮ ಏಕೋನಪಂಚಾಶತ್**
**ತಮೋಽಧ್ಯಾಯಃ**

---

೭೦. ಅಭೇದ್ಯವಾದ ರಾಧಾಕವಚವನ್ನು ತನ್ನ ಕಂಠದಲ್ಲಿಯೂ ಬಾಹುವಿನಲ್ಲಿಯೂ ಅವನು ಧರಿಸಿದನು. ಪುಷ್ಕರಕ್ಷೇತ್ರದಲ್ಲಿ ಆಕೆಯನ್ನು ಧ್ಯಾನಿಸಿ, ನೂರು ವರ್ಷಗಳಕಾಲ ಪೂಜೆಮಾಡಿದನು.

೭೧. ಕೊನೆಗೆ ದೇಹಾವಸಾನದಲ್ಲಿ ಆ ರಾಜನು ರತ್ನನಿರ್ಮಿತವಾದ ರಥದಲ್ಲಿ ಕುಳಿತು ಗೋಲೋಕಕ್ಕೆ ತೆರಳಿದನು. ಈರೀತಿ ರಾಧಾ ಮಹಿಮೆಯನ್ನು ತಿಳುಹಿದೆನು. ಇನ್ನೇನನ್ನು ಕೇಳಬೇಕೆಂದು ನಿನ್ನ ಬಯಕೆಯಿದೆ ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಈಶ್ವರನು ಪಾರ್ವತಿಗೆ ಹೇಳಿದ ರಾಧೆಯ ಉಪಾಖ್ಯಾನದಲ್ಲಿ ರಾಧಾಸುದಾಮರಿಗೆ ಪರಸ್ಪರ ಶಾಪ ಪ್ರಾಪ್ತಿಯೆಂಬ ನಲವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

## ನಲವತ್ತೊಂಭತ್ತನೆಯ ಅಧ್ಯಾಯದ ಸಾರಾಂಶ.

ರಾಧಾದೇವಿಯು ಸುದಾಮನ ಶಾಪಕ್ಕೊಳಗಾಗಲು ಕಾರಣವನ್ನು ಕೇಳಿದ ಪಾರ್ವತಿಯನ್ನು ಕುರಿತು ಮಹಾದೇವನು ಇಂತೆಂದನು. ' ಒನ್ಮೆ ರಾಧಾಕಾಂತನಾದ ಶ್ರೀಕೃಷ್ಣನು ಗೋಲೋಕದ ರಾಸಮಂಡಲದಲ್ಲಿ ವಿರಜೆಯೆಂಬ ಗೋಪಸ್ತ್ರೀಯೊಡನೆ ರಾಸಕ್ರೀಡೆಯಾಡುತ್ತಿದ್ದನು. ಗೆಳತಿಯರಿಂದ ಈ ವೃತ್ತಾಂತವನ್ನು ಕೇಳಿದ ರಾಧೆಯು ಕುಪಿತಳಾಗಿ ರತ್ನಾಭರಣಗಳನ್ನು ಕಿತ್ತು ಬಿಸುಟು, ಮುಡಿಯನ್ನು ಕೆದರಿಕೊಂಡು, ಶ್ರೀಕೃಷ್ಣನ ಸಮೀಪಕ್ಕೆ ಬರಲು, ಶ್ರೀಕೃಷ್ಣನ ಪಾರ್ಶದರಲ್ಲೊಬ್ಬನಾದ ಸುದಾಮನೆಂಬ ಗೋಪನು ಶ್ರೀಕೃಷ್ಣನಿಗೆ ರಾಧೆಯು ಬಂದ ವಿಷಯವನ್ನು ತಿಳುಹಿದನು. ಕೂಡಲೇ ಶ್ರೀಕೃಷ್ಣನು ಅಂತರ್ಧಾನನಾಗಲು ಭೀತಳಾದ ವಿರಜೆಯೂ ನದೀ ರೂಪವನ್ನು ತಾಳಿದಳು. ಇತ್ತ ರಾಧೆಯು ರಾಸಮಂಡಲದಲ್ಲಿ ಶ್ರೀಕೃಷ್ಣನನ್ನೂ ವಿರಜೆಯನ್ನೂ ಕಾಣದೆ ತನ್ನ ಮಂದಿರಕ್ಕೆ ಹಿಂತಿರುಗಿದಳು. ಅನಂತರ ಶ್ರೀಕೃಷ್ಣನೇ ಸುದಾಮನೊಡನೆ ರಾಧೆಯ ಮಂದಿರಕ್ಕೆ ಬರಲು ರಾಧೆಯು ಅವನನ್ನು ಬಹಳವಾಗಿ ನಿಂದಿಸಿದಳು. ಪರಮಾತ್ಮನ ನಿಂದೆಯನ್ನು ಕೇಳಿ ಸಹಿಸಲಾರದೆ ಸುದಾಮನು ರಾಧೆಯನ್ನು ಬೆದರಿಸಲು ಕುಪಿತಳಾದ ರಾಧೆಯು ರಾಕ್ಷಸಯೋನಿಯಲ್ಲಿ ಜನ್ಮವೆತ್ತುವಂತೆ ಸುದಾಮನಿಗೆ ಶಾಪವಿತ್ತಳು. ಸುದಾಮನೂ ಕೂಡ ಭಾರತದಲ್ಲಿ ಗೋಪಸ್ತ್ರೀಯಾಗಿ ಜನಿಸಿ ಶ್ರೀಕೃಷ್ಣನ ವಿರಹದಿಂದ ನರಳುವಂತೆ ರಾಧೆಗೆ ಪ್ರತಿಶಾಪವಿತ್ತನು. ಅದರಂತೆ ಸುದಾಮನು ಶಂಖಚೂಡನೆಂಬ ರಾಕ್ಷಸನಾಗಿ ಹುಟ್ಟಿ ತುಳಸೀದೇವಿಯನ್ನು ವರಿಸಿ ಭಾರತದಲ್ಲಿ ಬಹುಕಾಲವಿದ್ದು, ಶಿವನ ಶೂಲಾಯುಧದಿಂದ ಹತನಾಗಿ ಪುನಃ ಗೋಲೋಕವನ್ನು ಸೇರಿದನು. ಇತ್ತ ರಾಧೆಯು ವಾರಾಹಕಲ್ಪದಲ್ಲಿ ವೃಷಭಾನುವೆಂಬ ವೈಶ್ಯನ ಪತ್ನಿಯಾದ ಕಲಾವತಿಯಲ್ಲಿ ಅವತರಿಸಿ, ರಾಯಾಣನೆಂಬ ವೈಶ್ಯನನ್ನು ವರಿಸಿ ಅವನೊಡನೆ ತನ್ನ ಛಾಯೆಯನ್ನು ಮಾತ್ರ ಇರಿಸಿ, ಕಂಸವಧೆಗಾಗಿ ಅವತರಿಸಿದ್ದ ಶ್ರೀಕೃಷ್ಣನೊಡನೆ ವಿಹರಿಸಿಕೊಂಡಿದ್ದಳು. ಆಗಲೂ ಸುದಾಮನ ಶಾಪದಂತೆ ಶ್ರೀಕೃಷ್ಣನ ವಿರಹದಿಂದ ಬಹಳ ದಿವಸ ನರಳಬೇಕಾಯಿತು. ಅನಂತರ ಅವರಿಬ್ಬರಿಗೂ ಪರಸ್ಪರ ಸಮಾಗಮ

ವಾಗಿ, ಶಾಪನಿರ್ಮುಕ್ತರಾಗಿ ಗೋಲೋಕವನ್ನು ಸೇರಿದರು. ಶ್ರೀಕೃಷ್ಣನ ಮಾತಾ ಪಿತೃಗಳೆನಿಸಿಕೊಂಡಿದ್ದ ದೇವಕಿ ವಸುದೇವರೂ. ಯಶೋದಾ ನಂದಗೋಪರೂ ರಾಧೆಯ ತಂದೆತಾಯಿಗಳಾದ ವೃಷಭಾನು ಕಲಾವತಿಯರೂ, ಪತಿಯಾದ ರಾಯಾಣನೂ, ಗೋಲೋಕವನ್ನು ಸೇರಿದರು. ಇಂತು ರಜೋಗುಣಪ್ರಾಬಲ್ಯದಿಂದ ಶಾಪಕ್ಕೊಳಗಾಗಿದ್ದ ರಾಧೆಯು ಸತ್ವಗುಣಪ್ರಧಾನನಾದ ಪರಮಾತ್ಮನ ಸಂಸರ್ಗದಿಂದ ಸಾತ್ವಿಕಳೆನಿಸಿದಳು. ರಾಧಾಕೃಷ್ಣರ ದಿವ್ಯನಾಮಸ್ಮರಣೆಯಿಂದ ಎಲ್ಲರೂ ಪಾಪ ರಹಿತರಾಗುವರು.

ಅನಂತರ ಶ್ರೀಕೃಷ್ಣನು ಕಾರ್ತೀಕ ಪೂರ್ಣಿಮೆಯ ದಿವಸ ರಾಧೆಯನ್ನು ಮೊದಲು ಪೂಜಿಸಿ, ಇತರ ದೇವತೆಗಳೂ ಆಕೆಯನ್ನು ಪೂಜಿಸಬೇಕೆಂದು ನಿಯಮಿಸಿದನು. ಭರತಖಂಡದಲ್ಲಿ ಹಸ್ತರೋಗದಿಂದ ನರಳುತ್ತಿದ್ದ ಸುಯಜ್ಞನೆಂಬ ರಾಜನು ಭಕ್ತಿಪೂರ್ವಕವಾಗಿ ರಾಧೆಯನ್ನು ಪೂಜಿಸಿ, ಆಕೆಯ ಅನುಗ್ರಹದಿಂದ ರೋಗ ವಿಮುಕ್ತನಾಗಿ ಚಿರಕಾಲ ರಾಜ್ಯವಾಳಿಕೊಂಡಿದ್ದು ದೇಹಾವಸಾನದಲ್ಲಿ ಗೋಲೋಕಕ್ಕೆ ತೆರಳಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಪಂಚಾಶತ್ ತಮೋಽಧ್ಯಾಯಃ ||

|| ಪಾರ್ವತ್ಯುವಾಚ ||

ಕೋ ವಾ ಸುಯಜ್ಞೋ ನೃಪತಿಃ ಕುತ್ರ ವಂಶೇ ಬಭೂವ ಸಃ |
ಕಥಂ ವಿಪ್ರಾಭಿಶಪ್ತಶ್ಚ ಕಥಂ ಸಂಪ್ರಾಪ ರಾಧಿಕಾಂ || ೧ ||

ಸರ್ವಾತ್ಮನಶ್ಚ ಕೃಷ್ಣಸ್ಯ ಪತ್ನೀಂ ಶ್ರೀಕೃಷ್ಣಪೂಜಿತಾಂ |
ಕಥಂ ವಿಣ್ಮೂತ್ರಧಾರೀ ಚ ಸಿಷೇವೇ ಪರಮೇಶ್ವರೀಂ || ೨ ||

---

### ಐವತ್ತನೆಯ ಅಧ್ಯಾಯವು

೧. ಪಾರ್ವತಿ :—ಎಲೈ ಮಹಾದೇವನೇ, ಸುಯಜ್ಞನೆಂಬ ರಾಜನು ಯಾರು? ಯಾರ ವಂಶದಲ್ಲಿ ಆತನು ಜನಿಸಿದನು? ಅವನಿಗೆ ಬ್ರಾಹ್ಮಣ ಶಾಪವೂ, ರಾಧಾ ದರ್ಶನವೂ ಲಭಿಸಿದುದೆಂತು?

೨. ಸರ್ವೇಶ್ವರನಾದ ಶ್ರೀಕೃಷ್ಣಪರಮಾತ್ಮನ ಪತ್ನಿಯೂ, ಆತನಿಂದ ಪೂಜಿತಳೂ ಆದ ಪರಮೇಶ್ವರಿಯನ್ನು ಕೇವಲ ಮಲಮೂತ್ರಗಳಿಗೆ ಆವಾಸಭೂತನಾದ ಆ ಅಲ್ಪ ಮನುಜನು ಸೇವಿಸಿದುದೆಂತು?

ಷಷ್ಟಿವರ್ಷಸಹಸ್ರಾಣಿ ತಪಸ್ತೇಪೇ ಪುರಾವಿಧಿಃ ।
ಯತ್ಪಾದಾಂಭೋಜರೇಣೂನಾಂ ಲಬ್ಧಯೇ ಪುಷ್ಕರೇ ವಿಭುಃ ॥ ೩ ॥

ಕಥಂ ದದರ್ಶ ತಾಂ ದೇವೀಂ ಮಹಾಲಕ್ಷ್ಮೀಂ ಪುರಾ ಸತೀಂ ।
ದುರ್ದರ್ಶಾಮಪಿ ಯುಷ್ಮಾಕಂ ದೃಶ್ಯಾ ಸಾಭೂತ್ಕಥಂ ನೃಣಾಂ ॥ ೪ ॥

ಕಥಂ ತ್ರಿಜಗತಾಂ ಧಾತಾ ತಸ್ಮೈ ತತ್ಕವಚಂ ದದೌ ।
ಧ್ಯಾನಂ ಪೂಜಾವಿಧಿಂ ಸ್ತೋತ್ರಂ ತಸ್ಯಾ ವ್ಯಾಖ್ಯಾತುಮರ್ಹಸಿ ॥ ೫ ॥

॥ ಶ್ರೀ ಮಹಾದೇವ ಉವಾಚ ॥

ಸ್ವಾಯಂಭುವೋ ಮನುರ್ದೇವಿ ಮನೂನಾಮಾದಿರೇವ ಚ ।
ಬ್ರಹ್ಮಾತ್ಮಜಸ್ತಪಸ್ವೀ ಚ ಶತರೂಪಾಪತಿಃ ಪ್ರಭುಃ ॥ ೬ ॥

---

೩. ಪೂರ್ವದಲ್ಲಿ ಸರ್ವಶಕ್ತನಾದ ಚತುರ್ಮುಖಬ್ರಹ್ಮನು ರಾಧಾದೇವಿಯ ಪಾದಕಮಲದ ರೇಣುದರ್ಶನಕ್ಕಾಗಿ ಪುಷ್ಕರಕ್ಷೇತ್ರದಲ್ಲಿ ಅರವತ್ತು ಸಾವಿರ ವರ್ಷಗಳು ಅನನ್ಯಭಕ್ತಿಯಿಂದ ತಪಸ್ಸುಮಾಡಿದನು.

೪. ಹೀಗಿರುವಾಗ ಮಹಾಲಕ್ಷ್ಮಿಗೂ ಕಾರಣಳೆನಿಸಿದ ಆ ರಾಧಾದೇವಿಯನ್ನು ಸುಯಜ್ಞನು ನೋಡಿದುದು ಹೇಗೆ ? ಆಕೆಯ ದರ್ಶನವನ್ನು ನಿಮ್ಮಂಥವರೇ ಹೊಂದಲು ಕಷ್ಟವಿರುವಾಗ ಮನುಷ್ಯಸಾಮಾನ್ಯನಾದ ಅವನು ಪಡೆದುದೆಂತು ?

೫. ಮೂಲೋಕದೊಡೆಯನು ಆ ಸುಯಜ್ಞನಿಗೆ ಆ ರಾಧಾದೇವಿಯ ಕವಚ, ಸ್ತೋತ್ರಮಂತ್ರಾದಿಗಳನ್ನೂ, ಧ್ಯಾನ ಮತ್ತು ಪೂಜಾವಿಧಿಯನ್ನೂ ಉಪದೇಶಿಸಿದುದೆಂತು ?

೬. ಮಹಾದೇವ:—ಎಲೌ ದೇವಿಯೇ, ಚತುರ್ದಶಮನುಗಳಿಗೆ ಆದಿಪುರುಷನೂ, ಬ್ರಹ್ಮಪುತ್ರನೂ, ತಪಸ್ವಿಶ್ರೇಷ್ಠನೂ ಆದ ಸ್ವಾಯಂಭುವಮನುವೆಂಬುವನು ಶತರೂಪೆಯೆಂಬುವಳನ್ನು ಮದುವೆಯಾಗಿದ್ದನು.

ಉತ್ತಾನಪಾದಸ್ತತ್ಪುತ್ರಸ್ತತ್ಪುತ್ರೋ ಧ್ರುವ ಏವ ಚ ।
ಧ್ರುವಸ್ಯ ಕೀರ್ತಿರ್ವಿಖ್ಯಾತಸ್ತ್ರೈಲೋಕ್ಯೇ ಶೈಲಕನ್ಯಕೇ ॥ ೭ ॥

ಉತ್ಕಲಸ್ತಸ್ಯ ಪುತ್ರಶ್ಚ ನಾರಾಯಣಪರಾಯಣಃ ।
ಸಹಸ್ರಂ ರಾಜಸೂಯಾನಾಂ ಪುಷ್ಕರೇ ಸ ಚಕಾರ ಹ ॥ ೮ ॥

ಸರ್ವಾಣಿ ರತ್ನಪಾತ್ರಾಣಿ ಬ್ರಾಹ್ಮಣೇಭ್ಯೋ ದದೌ ಮುದಾ ।
ಅಮೂಲ್ಯರತ್ನರಾಶೀನಾಂ ಸಹಸ್ರಂ ತೇಜಸಾವೃತಂ ॥ ೯ ॥

ಬ್ರಾಹ್ಮಣೇಭ್ಯೋ ದದೌ ರಾಜಾ ಯಜ್ಞಾಂತೇ ಸ ಮಹೋತ್ಸವೇ ।
ದೃಷ್ಟ್ವಾ ತೇಭ್ಯೋಭಸಂ ಯಜ್ಞಂ ವಿಧಾತಾ ಜಗತಾಂ ಪ್ರಿಯೇ ॥ ೧೦ ॥

ಸುಯಜ್ಞಂ ನಾಮ ನೃಪತಿಂ ಚಕಾರ ಸುರಸಂಸದಿ ।
ಸ ಚ ರಾಜಾ ಸುಯಜ್ಞಶ್ಚ ಮನುವಂಶಸಮುದ್ಭವಃ ॥ ೧೧ ॥

---

೭. ಅವನಿಗೆ ಉತ್ತಾನಪಾದನೆಂಬುವನೂ, ಉತ್ತಾನಪಾದನಿಗೆ ಧ್ರುವನೆಂಬುವನೂ, ಮಕ್ಕಳಾಗಿ ಜನಿಸಿದರು. ಪಾರ್ವತಿಯೇ, ಆ ಧ್ರುವನ ಕೀರ್ತಿಯು ತ್ರಿಲೋಕದಲ್ಲೂ ವಿಖ್ಯಾತವಾಗಿದೆ.

೮. ಆ ಧ್ರುವನ ಮಗನಾದ ಉತ್ಕಲನೆಂಬುವನು ನಾರಾಯಣಭಕ್ತನಾಗಿ ಪುಷ್ಕರಕ್ಷೇತ್ರದಲ್ಲಿ ಒಂದುಸಾವಿರ ರಾಜಸೂಯಯಾಗವನ್ನಾಚರಿಸಿದನು.

೯. ಆಗ ಅಸಂಖ್ಯ ರತ್ನಕಲಶಗಳನ್ನೂ, ಅಮೂಲ್ಯವೂ, ತೇಜೋಮಯವೂ ಆದ ಸಹಸ್ರಾರು ರತ್ನರಾಶಿಗಳನ್ನೂ ಬ್ರಾಹ್ಮಣರಿಗೆ ಸಂತೋಷದಿಂದ ದಾನ ಮಾಡಿದನು.

೧೦. ಯಜ್ಞದ ಕೊನೆಯಲ್ಲಿ ಈ ರೀತಿಯಾಗಿ ಬ್ರಾಹ್ಮಣರಿಗೆ ದಾನಮಾಡಿದುದನ್ನು ಜಗದೊಡೆಯನಾದ ಬ್ರಹ್ಮನು ನೋಡಿದನು.

೧೧. ಆಗ ದೇವತೆಗಳ ಸಭೆಯಲ್ಲಿ ಅವನಿಗೆ ಸುಯಜ್ಞನೆಂದು ನಾಮಕರಣ ಮಾಡಿದನು. ಆ ಸುಯಜ್ಞನೆಂಬ ರಾಜನು ಮನುವಂಶೋತ್ಪನ್ನನು.

**ಅನ್ನದಾತಾ ರತ್ನದಾತಾ ದಾತಾ ವೈ ಸರ್ವಸಂಪದಾಂ ।**
**ದಶಲಕ್ಷಂ ಗವಾಂ ಚೈವ ರತ್ನಶೃಂಗಪರಿಚ್ಛದಂ ॥ ೧೨ ॥**

**ನಿತ್ಯಂ ದದೌ ಸ ವಿಪ್ರೇಭ್ಯೋ ಮುದಾಯುಕ್ತಃ ಸ ದಕ್ಷಿಣಂ ।**
**ಗವಾಂ ದ್ವಾದಶಲಕ್ಷಾಣಾಂ ದದೌ ನಿತ್ಯಂ ಮುದಾನ್ವಿತಃ ॥ ೧೩ ॥**

**ಸುಪಕ್ವಾನಿ ಚ ಮಾಂಸಾನಿ ಬ್ರಾಹ್ಮಣೇಭ್ಯಶ್ಚ ಪಾರ್ವತಿ ।**
**ಷಟ್ಕೋಟೀರ್ಬ್ರಾಹ್ಮಣಾನಾಂ ಚ ಭೋಜಯಾಮಾಸ ನಿತ್ಯಶಃ ॥ ೧೪ ॥**

**ಚೋಷ್ಯೈಶ್ಚರ್ವ್ಯೈರ್ಲೇಹ್ಯಪೇಯೈರತಿತೃಪ್ತಂ ದಿನೇ ದಿನೇ ।**
**ವಿಪ್ರಲಕ್ಷಂ ಸೂಪಕಾರಂ ಭೋಜಯಾಮಾಸ ತತ್ಪರಂ ॥ ೧೫ ॥**

---

೧೨. ಅವನು ಬೇಡಿದವರಿಗೆ ಅನ್ನವನ್ನೂ, ಶ್ರೇಷ್ಠ ರತ್ನಗಳನ್ನೂ, ಸಕಲ ಸಂಪತ್ತುಗಳನ್ನೂ, ಕೊಂಬುಗಳಿಗೆ ರತ್ನಾಭರಣಗಳನ್ನು ತೊಡಿಸಿರುವ ಹತ್ತುಲಕ್ಷ ಗೋವುಗಳನ್ನೂ ಯೋಗ್ಯತಾನುಸಾರವಾಗಿ ದಾನಮಾಡುತ್ತಿದ್ದನು.

೧೩. ಪ್ರತಿನಿತ್ಯವೂ ಹನ್ನೆರಡುಲಕ್ಷ ಗೋವುಗಳನ್ನು ದಕ್ಷಿಣಾ ದ್ರವ್ಯದೊಡನೆ ಸಂತೋಷದಿಂದ ಬ್ರಾಹ್ಮಣರಿಗೆ ದಾನಮಾಡುತ್ತಿದ್ದನು.

೧೪. ಎಲೌ ಪಾರ್ವತಿಯೇ, ಬ್ರಾಹ್ಮಣರಿಗೆ ಪಕ್ವವಾದ ಮಾಂಸವನ್ನಿತ್ತು, ಆರುಕೋಟಿ ಬ್ರಾಹ್ಮಣರಿಗೆ ಪ್ರತಿನಿತ್ಯವೂ ಊಟ ಉಪಚಾರಗಳನ್ನು ಮಾಡಿಸುತ್ತಿದ್ದನು.

೧೫. ಚೋಷ್ಯ (ಸುರಿದುಕೊಂಡು ಸೇವಿಸುವ ವಸ್ತು) ಚರ್ವ್ಯ (ಅಗಿದು ತಿನ್ನುವ ವಸ್ತು) ಲೇಹ್ಯ (ನೆಕ್ಕಿತಿನ್ನುವ ವಸ್ತು) ಪೇಯ (ಕುಡಿಯುವ ವಸ್ತು) ಮುಂತಾದ ಅನ್ನಪಾನಗಳಿಂದ ಪ್ರತಿದಿನವೂ ಲಕ್ಷಾಂತರ ಬ್ರಾಹ್ಮಣರನ್ನೂ ಅನಂತರ ಅಡಿಗೆಯುವರನ್ನೂ ತೃಪ್ತಿಪಡಿಸುತ್ತಿದ್ದನು.

ಪೂರ್ಣಮನ್ನಂ ಚ ಸೂಪಾಕ್ತಂ ಸಗವ್ಯಂ ಮಾಂಸವರ್ಜಿತಂ ।
ವಿಪ್ರಾ ಭೋಜನಕಾಲೇ ಚ ಮನುವಂಶಸಮುದ್ಭವಂ ॥ ೧೬ ॥

ನ ತುಷ್ಟುವುಃ ಸುಯಜ್ಞಂ ಚ ತುಷ್ಟುವುಸ್ತತ್ಪಿತೄಂಶ್ಚ ತೇ ।
ದಿನೇ ಸುಯಜ್ಞಯಜ್ಞಾಂತೇ ಷಟ್‌ತ್ರಿಂಶಲ್ಲಕ್ಷಕೋಟಯಃ ॥ ೧೭ ॥

ಚಕ್ರುಃ ಸುಭೋಜನಂ ವಿಪ್ರಾಶ್ಚಾತಿತೃಪ್ತಾಶ್ಚ ಸುಂದರಿ ।
ಗೃಹೀತಾನಿ ಚ ರತ್ನಾನಿ ಸ್ವಗೃಹಂ ವೋಢುಮಕ್ಷಮಾಃ ॥ ೧೮ ॥

ವೃಷಲೇಭ್ಯೋ ದದುಃ ಕಿಂಚಿತ್ಕಿಂಚಿತ್ಪಥಿ ಚ ತತ್ಯಜುಃ ।
ವಿಪ್ರಾಣಾಂ ಭೋಜನಾಂತೇ ಚ ವಿಪ್ರಾನ್ಯೇಭ್ಯೋ ದದೌ ನೃಪಃ ॥ ೧೯ ॥

ತಥಾಪ್ಯವರ್ಧಿತಂ ತತ್ರ ಚಾನ್ನರಾಶಿಸಹಸ್ರಕಂ ।
ಕೃತ್ವಾ ಯಜ್ಞಂ ಮಹಾಬಾಹುಃ ಸಮುವಾಸ ಸ್ವಸಂಸದಿ ॥ ೨೦ ॥

---

೧೬-೧೮. ಬ್ರಾಹ್ಮಣರು (ಮಾಂಸವನ್ನು ಬಿಟ್ಟು) ತೊವ್ವೆ, ತುಪ್ಪ, ಮೊಸರು ಮುಂತಾದವುಗಳಿಂದ ಕೂಡಿದ ಮಿಷ್ಟಾನ್ನವನ್ನು ಉಂಡುದಲ್ಲದೆ ಭೋಜನಕಾಲದಲ್ಲಿ ಆ ಸುಯಜ್ಞನನ್ನು ಸ್ತುತಿಸದೆ ಅವನ ಪಿತೃದೇವತೆಗಳನ್ನು ಸ್ತುತಿಸಿದರು. ಆ ಸುಯಜ್ಞನ ಯಾಗವು ಮುಗಿದ ದಿವಸ ಮೂವತ್ತಾರುಕೋಟಿ ಬ್ರಾಹ್ಮಣರು ಅತ್ಯುತ್ತಮವಾದ ಮಿಷ್ಟಾನ್ನವನ್ನು ಭುಜಿಸಿ ಚೆನ್ನಾಗಿ ತೃಪ್ತರಾದರು. ಅಲ್ಲದೆ ತಮ್ಮ ಮನೆಗೆ ಒಯ್ಯಲಾರದಷ್ಟು ರತ್ನಗಳನ್ನು ದಾನವಾಗಿ ಸ್ವೀಕರಿಸಿದರು.

೧೯. ದಾನಪಡೆದ ಆ ವಸ್ತುಗಳಲ್ಲಿ ಕೆಲವನ್ನು ಶೂದ್ರರಿಗೆ ಕೊಟ್ಟು ಇನ್ನೂ ಉಳಿದುದರಲ್ಲಿ ಸ್ವಲ್ಪವನ್ನು ದಾರಿಯಲ್ಲಿಯೇ ಬಿಟ್ಟುಹೋದರು. ಮತ್ತೆ ಕೆಲವು ಬ್ರಾಹ್ಮಣರಿಗೆ ಭೋಜನವಾದನಂತರ ಆ ರಾಜನು ಇದೇ ರೀತಿ ದಾನಮಾಡಿದನು.

೨೦. ಇಷ್ಟಾದರೂ ಅಲ್ಲಿ ಸಹಸ್ರಾರು ಅನ್ನರಾಶಿಗಳು ವೃದ್ಧಿಹೊಂದುತ್ತಿದ್ದವು. ಈ ರೀತಿಯಾಗಿ ಮಹಾಬಲಶಾಲಿಯಾದ ಆ ರಾಜನು ಯಜ್ಞಮಾಡಿ ತನ್ನ ಸಭೆಯಲ್ಲಿ ಮಂಡಿಸಿದನು.

ರತ್ನೇಂದ್ರಸಾರ ಸಂಕ್ಲಿಪ್ತಚ್ಛತ್ರಕೋಟಿ ಸಮನ್ವಿತೇ |
ರತ್ನಸಿಂಹಾಸನೇ ರಮ್ಯೇ ಪಟ್ಟವಸ್ತ್ರೈಃ ಸುಸಂಸ್ಕೃತೇ || ೨೧ ||

ಚಂದನಾದಿ ಸುಸಂಸ್ಪೃಷ್ಟೇ ರಮ್ಯೇ ಚಂದನಪಲ್ಲವೈಃ |
ಶಾಖಾಯುಕ್ತೈಃ ಪೂರ್ಣಕುಂಭೈರಮ್ಭಾವೃಕ್ಷೈಶ್ಚ ಶೋಭಿತೇ || ೨೨ ||

ಚಂದನಾಗುರುಕಸ್ತೂರೀಘನಸಿಂದೂರಸಂಸ್ಕೃತೇ |
ವಸುವಾಸವ ಚಂದ್ರೇಂದ್ರರುದ್ರಾದಿತ್ಯಸಮನ್ವಿತೇ || ೨೩ ||

ಮುನಿನಾರದಮನ್ವಾದಿ ಬ್ರಹ್ಮವಿಷ್ಣು ಶಿವಾನ್ವಿತೇ |
ಏತಸ್ಮಿನ್ನಂತರೇ ತತ್ರ ವಿಪ್ರ ಏಕಃ ಸಮಾಯಯೌ || ೨೪ ||

ರೂಕ್ಷೋ ಮಲಿನವಾಸಾಶ್ಚ ಶುಷ್ಕಕಂಠೌಷ್ಠತಾಲುಕಃ |
ರತ್ನಸಿಂಹಾಸನಸ್ಥಂ ಚ ಮಾಲ್ಯಚಂದನಚರ್ಚಿತಂ || ೨೫ ||

---

೨೧. ಆ ಸಭಾಮಂಟಪವು ಶ್ರೇಷ್ಠರತ್ನದಿಂದ ಖಚಿತವಾದ ಕೋಟ್ಯಂತರ ಛತ್ರಗಳಿಂದ, ಪರಿವೃತವಾಗಿತ್ತು. ಪಟ್ಟವಸ್ತ್ರದಿಂದ ಪರಿವೇಷ್ಟಿತವಾದ ರತ್ನಸಿಂಹಾಸನದಲ್ಲಿ ಆ ರಾಜನು ಮಂಡಿಸಿದ್ದನು.

೨೨. ಚಂದನಗಂಧ, ಚಿಗುರು ಮತ್ತು ಹೂವಿನ ಕೊಂಬೆಗಳಿಂದ ಅಲಂಕೃತವಾದ ಪೂರ್ಣಕುಂಭಗಳಿಂದಲೂ, ಬಾಳೆಯ ಕಂಭಗಳಿಂದಲೂ, ಆ ಮಂಟಪವು ಶೋಭಾಯಮಾನವಾಗಿತ್ತು.

೨೩–೨೪. ಚಂದನ, ಅಗುರು, ಕಸ್ತೂರಿ, ಘನಸಾರ, ಚಂದ್ರ ಮುಂತಾದ ದ್ರವ್ಯಗಳಿಂದ ಸುಸಂಸ್ಕೃತವಾಗಿ ಅಷ್ಟವಸುಗಳು, ದೇವೇಂದ್ರರು, ಚಂದ್ರಸೂರ್ಯರು ಮತ್ತು ಆದಿತ್ಯರುಗಳಿಂದಲೂ ನಾರದ, ಮನು ಮುಂತಾದ ಮುನಿಗಳಿಂದಲೂ, ಬ್ರಹ್ಮ, ವಿಷ್ಣು, ಶಿವಾದಿಗಳಿಂದಲೂ ಕೂಡಿದ ಆ ಸಭೆಗೆ ಆ ಸಮಯದಲ್ಲಿ ಬ್ರಾಹ್ಮಣನೊಬ್ಬನು ಬಂದನು.

೨೫. ಆ ಬ್ರಾಹ್ಮಣನು ಕೊಳಕು ಬಟ್ಟೆಯನ್ನುಟ್ಟು ಬಹಳ ಒರಟಾಗಿದ್ದನು. ಅವನು ಒಣಗಿಹೋದ ತನ್ನ ಕಂಠದಿಂದ, ಚಂದನ ಚರ್ಚಿತನೂ ಪುಷ್ಪಮಾಲಾಲಂಕೃತನೂ, ಆಗ ರತ್ನಸಿಂಹಾಸನದಲ್ಲಿ ಕುಳಿತಿರುವ ರಾಜನಿಗೆ ಆಶೀರ್ವಾದ ಮಾಡಿದನು.

ರಾಜಾನಮಾಶಿಷಂ ಚಕ್ರೇ ಸಸ್ಮಿತಃ ಸಂಪುಟಾಂಜಲಿಃ ।
ಪ್ರಣನಾಮ ನೃಪಸ್ತಂ ಚ ನೋತ್ತಸ್ಥೌ ಕಿಂಚಿದೇವ ಹಿ ॥ ೨೬ ॥

ಸಭಾಸದಶ್ಚ ನೋತ್ತಸ್ಥುರ್ಜಹಸುಃ ಸ್ವಲ್ಪಮೇವ ಚ ।
ಮುನಿಭ್ಯೋಽಪಿ ಚ ದೇವೇಭ್ಯೋ ನಮಸ್ಕೃತ್ಯ ದ್ವಿಜೋತ್ತಮಃ ॥ ೨೭ ॥

ಶಶಾಪ ನೃಪತಿಂ ಕ್ರೋಧಾತ್ತತ್ರ ತಿಷ್ಠನ್ನಿರಂಕುಶಃ ।
ಗಚ್ಛದೂರಮತೋ ರಾಜ್ಯಾದ್ಭ್ರಷ್ಟಶ್ರೀರ್ಭವ ಪಾಮರ ॥ ೨೮ ॥

ಭವಾಚಿರಂ ಗಲತ್ಕುಷ್ಠೀ ಬುದ್ಧಿಹೀನೋಽಪ್ಯುಪದ್ರುತಃ ।
ಇತ್ಯುಕ್ತ್ವಾ ಕಂಪಿತಃ ಕ್ರೋಧಾತ್ಸಭಾಸ್ಥಾಂಚ್ಛಪ್ತುಮುದ್ಯತಃ ॥ ೨೯ ॥

ಯೇ ಯತ್ರ ಜಹಸುಃ ಸರ್ವೇ ಸಮುತ್ತಸ್ಥುಃ ಸಭಾಸದಃ ।
ಸರ್ವೇ ಚಕ್ರುಃ ಪ್ರಣಾಮಂ ತೇ ಕ್ರೋಧಂ ತತ್ಯಾಜ ವಾಡವಃ ॥ ೩೦ ॥

---

೨೬ ತನ್ನನ್ನು ಆಶೀರ್ವದಿಸಿದ ಬ್ರಾಹ್ಮಣನಿಗೆ ಅಂಜಲಿಬದ್ಧನಾಗಿ ಮಂದಹಾಸದಿಂದ ರಾಜನೂ ಕೂಡ ಕುಳಿತಲ್ಲಿಯೇ ನಮಸ್ಕಾರಮಾಡಿದನು. ಆದರೆ ಪ್ರತ್ಯುತ್ಥಾನಮಾಡಲಿಲ್ಲ.

೨೭-೨೮. ಆಗ ಸಭಿಕರೂ ಕೂಡ ಪ್ರತ್ಯುತ್ಥಾನಮಾಡದೆ ನಗುತ್ತ ಕುಳಿತಿದ್ದರು. ಆ ಬ್ರಾಹ್ಮಣನಾದರೋ ಅಲ್ಲಿದ್ದ ಮುನಿಗಳಿಗೂ, ದೇವತೆಗಳಿಗೂ ವಂದಿಸಿ ನಿರಂಕುಶನಾದ ಆತನು ಕೋಪದಿಂದ 'ಎಲೈ ಪಾಮರನಾದ ರಾಜನೇ, ನೀನು ರಾಜ್ಯಸಂಪತ್ತನ್ನು ಕಳೆದುಕೊಂಡು ದೂರಹೋಗು' ಎಂದು ಶಾಪವಿತ್ತನು.

೨೯. 'ಕೆಲವು ಕಾಲ ಕುಷ್ಠರೋಗದಿಂದ ನರಳಿ ಬುದ್ಧಿಹೀನನಾಗು' ಎಂದು ರಾಜನನ್ನು ಶಪಿಸಿ, ಕೋಪದಿಂದ ಕಂಪಿತನಾಗಿ ಆ ಸಭಿಕರನ್ನು ಶಪಿಸಲುದ್ಯುಕ್ತನಾದನು.

೩೦. ಆಗ ಆ ಸಭೆಯಲ್ಲಿ ನಗುತ್ತ ಕುಳಿತಿದ್ದ ಸಭಿಕರೆಲ್ಲರೂ ಪ್ರತ್ಯುತ್ಥಾನಮಾಡಿ ಎಲ್ಲರೂ ವಿನಯದಿಂದ ನಮಸ್ಕರಿಸಲು ಆ ಬ್ರಾಹ್ಮಣನು ಶಾಂತನಾದನು.

ಪ್ರಣಮ್ಯಾಗತ್ಯ ರಾಜಾ ತಂ ರುರೋದ ಭಯಕಾತರಃ ।
ನಿಸ್ಸಸಾರ ಸಭಾಮಧ್ಯಾದ್ದ್ರುದಯೇನ ವಿದೂಯತಾ ॥ ೩೧ ॥

ಬ್ರಾಹ್ಮಣೋ ಗೂಢರೂಪೀ ಚ ಪ್ರಜ್ವಲನ್ಬ್ರಹ್ಮತೇಜಸಾ ।
ತತ್ಪಶ್ಚಾನ್ಮುನಯಃ ಸರ್ವೇ ಪ್ರಯಯುರ್ಭಯಕಾತರಾಃ ॥ ೩೨ ॥

ಹೇ ವಿಪ್ರ ತಿಷ್ಠ ತಿಷ್ಠೇತಿ ಸಮುಚ್ಚಾರ್ಯ ಪುನಃ ಪುನಃ ।
ಪುಲಹಶ್ಚ ಪುಲಸ್ತ್ಯಶ್ಚ ಪ್ರಚೇತಾ ಭೃಗುರಂಗಿರಾಃ ॥ ೩೩ ॥

ಮರೀಚಿಃ ಕಶ್ಯಪಶ್ಚೈವ ವಸಿಷ್ಠಃ ಕ್ರತುರೇವ ಚ ।
ಶುಕ್ರೋ ಬೃಹಸ್ಪತಿಶ್ಚೈವ ದುರ್ವಾಸಾ ಲೋಮಶಸ್ತಥಾ ॥ ೩೪ ॥

ಗೌತಮಶ್ಚ ಕಣಾದಶ್ಚ ಕಣ್ವಃ ಕಾತ್ಯಾಯನಃ ಕಠಃ ।
ಪಾಣಿನಿರ್ಜಾಜಲಿಶ್ಚೈವ ಋಷ್ಯಶೃಂಗೋ ವಿಭಾಂಡಕಃ ॥ ೩೫ ॥

---

೩೧. ಅನಂತರ ರಾಜನು ಬಂದು ವಿನಯದಿಂದ ನಮಸ್ಕರಿಸಿ, ಶಾಪಭೀತನಾಗಿ ಗೋಳಾಡಲಾರಂಭಿಸಿದನು. ಅಲ್ಲದೆ ಮನಸ್ಸಿನಲ್ಲಿಯೇ ವ್ಯಥೆಪಡುತ್ತಾ ಸಭೆಯ ಮಧ್ಯದಿಂದ ಹೊರಕ್ಕೆ ಹೋದನು.

೩೨. ಬ್ರಹ್ಮತೇಜಸ್ಸಿನಿಂದ ಮೆರೆಯುವ ಛದ್ಮವೇಷಧಾರಿಯಾದ ಆ ಬ್ರಾಹ್ಮಣನು ಸಭೆಯಿಂದ ಹೊರಗೆ ಹೋಗಲು, ಅವನ ಹಿಂದೆ ಭಯಗ್ರಸ್ತರಾದ ಎಲ್ಲ ಮುನಿಗಳೂ ಹೊರಟರು.

೩೩–೩೫. ಎಲ್ಲ ಋಷಿಗಳೂ ಎಲೈ ಬ್ರಾಹ್ಮಣನೇ, 'ನಿಲ್ಲು ನಿಲ್ಲು' ಎಂದು ಕೂಗುತ್ತಲೇ ಅವನನ್ನು ಹಿಂಬಾಲಿಸಿದರು. ಆ ಗುಂಪಿನಲ್ಲಿ ಈ ಕೆಳ ಕಂಡ 'ಪುಲಹ, ಪುಲಸ್ತ್ಯ, ಪ್ರಚೇತ, ಭೃಗು, ಅಂಗಿರ, ಮರೀಚಿ, ಕಶ್ಯಪ, ವಸಿಷ್ಠ, ಕ್ರತು, ಶುಕ್ರ, ಬೃಹಸ್ಪತಿ, ದುರ್ವಾಸ, ಲೋಮಶ, ಗೌತಮ, ಕಣಾದ, ಕಣ್ವ, ಕಾತ್ಯಾಯನ, ಕಠ, ಪಾಣಿನಿ, ಜಾಜಲಿ, ಋಷ್ಯಶೃಂಗ, ವಿಭಾಂಡಕ' ಮುಂತಾದ ಮಹರ್ಷಿಗಳಿದ್ದರು.

ತೈತ್ತಿರಿಶ್ಚಾಪ್ಯಾಪಿಶಲಿರ್ಮಾರ್ಕಂಡೇಯೋ ಮಹಾತಪಾಃ ।
ಸನಕಶ್ಚ ಸನಂದಶ್ಚ ವೋಢುಃ ಪೈಲಃ ಸನಾತನಃ ॥ ೩೬ ॥

ಸನತ್ಕುಮಾರೋ ಭಗವಾನ್ನರನಾರಾಯಣಾವೃಷೀ ।
ಪರಾಶರೋ ಜರತ್ಕಾರುಃ ಸಂವರ್ತಃ ಕರಭಸ್ತಥಾ ॥ ೩೭ ॥

ಭರದ್ವಾಜಶ್ಚ ವಾಲ್ಮೀಕಿರೌರ್ವಶ್ಚ ಚ್ಯವನಸ್ತಥಾ ।
ಅಗಸ್ತ್ಯೋಽತ್ರಿರುತಥ್ಯಶ್ಚ ಸಂಕರ್ತಾಸ್ತೀಕ ಆಸುರಿಃ ॥ ೩೮ ॥

ಶಿಲಾಲಿರ್ಲಾಂಗಲಿಶ್ಚೈವ ಶಾಕಲ್ಯಃ ಶಾಕಟಾಯನಃ ।
ಗರ್ಗೋ ವತ್ಸಃ ಪಂಚಶಿಖೋ ಜಮದಗ್ನಿಶ್ಚ ದೇವಲಃ ॥ ೩೯ ॥

ಜೈಗೀಷವ್ಯೋ ವಾಮದೇವೋ ವಾಲಖಿಲ್ಯಾದಯಸ್ತಥಾ ।
ಶಕ್ತಿರ್ದಕ್ಷಃ ಕರ್ದಮಶ್ಚ ಪ್ರಸ್ಕನ್ನಃ ಕಪಿಲಸ್ತಥಾ ॥ ೪೦ ॥

ವಿಶ್ವಾಮಿತ್ರಶ್ಚ ಕೌತ್ಸಶ್ಚಾಪ್ಯೃಚೀಕೋಽಪ್ಯಘಮರ್ಷಣಃ ।
ಏತೇ ಚಾನ್ಯೇ ಚ ಮುನಯಃ ಪಿತರೋಽಗ್ನಿರ್ಹವಿಃ ಪ್ರಿಯಾ ॥ ೪೧ ॥

---

೩೬-೩೮. ಅಲ್ಲದೆ ತೈತ್ತಿರಿ, ಆಪಿಶಲಿ, (ಮಹಾತಪಸ್ವಿಯಾದ) ಮಾರ್ಕಂಡೇಯ, ಸನಕ, ಸನಂದ, ವೋಢು, ಪೈಲ, ಸನಾತನ, ಸನತ್ಕುಮಾರ, (ಭಗವಂತರಾದ) ನರನಾರಾಯಣರು, ಪರಾಶರ, ಜರತ್ಕಾರು, ಸಂವರ್ತ, ಕರಭ, ಭರದ್ವಾಜ, ವಾಲ್ಮೀಕಿ, ಔರ್ವ, ಚ್ಯವನ, ಅಗಸ್ತ್ಯ, ಅತ್ರಿ, ಉತಥ್ಯ, ಸಂಕರ್ತ, ಆಸ್ತೀಕ, ಆಸುರಿ ಮುಂತಾದ ಮಹರ್ಷಿಗಳೂ ಇದ್ದರು.

೩೯-೪೧. ಶಿಲಾಲಿ, ಲಾಂಗಲಿ, ಶಾಕಲ್ಯ, ಶಾಕಟಾಯನ, ಗರ್ಗ, ವತ್ಸ, ಪಂಚಶಿಖ, ಜಮದಗ್ನಿ, ದೇವಲ, ಜೈಗೀಷವ್ಯ, ವಾಮದೇವ ಮುಂತಾದವರೂ, ವಾಲಖಿಲ್ಯರೂ, ಶಕ್ತಿ, ದಕ್ಷ, ಕರ್ದಮ, ಪ್ರಸ್ಕನ್ನ, ಕಪಿಲ, ವಿಶ್ವಾಮಿತ್ರ, ಕೌತ್ಸ, ಋಚೀಕ, ಅಘಮರ್ಷಣ ಮುಂತಾದವರೂ, ಇನ್ನೂ ಇತರರೂ, ಪಿತೃದೇವತೆಗಳೂ, ಅಗ್ನಿದೇವನೂ, (ಹವಿಸ್ಸೇಪ್ರಿಯರಾದ) ಇತರ ದೇವತೆಗಳೂ ಅಲ್ಲಿದ್ದರು.

ದಿಕ್ಪಾಲಾ ದೇವತಾಃ ಸರ್ವಾ ವಿಪ್ರಂ ಪಶ್ಚಾತ್ಸಮಾಯಯುಃ ।
ಬ್ರಾಹ್ಮಣಂ ಬೋಧಯಾಮಾಸುರ್ವಾಸಯಾಮಾಸುರೀಶ್ವರಿ ॥ ೪೨ ॥

ಸಮೂಚುಸ್ತಂ ಕ್ರಮೇಣೈವ ನೀತಿಂ ನೀತಿವಿಶಾರದಾಃ ॥ ೪೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದಾಂತರ್ಗತ ಹರಗೌರೀಸಂವಾದೇ
ರಾಧೋಪಾಖ್ಯಾನೇ ಸುಯಜ್ಞೋಪಾಖ್ಯಾನಂ ನಾಮ
ಪಂಚಾಶತ್ತಮೋಽಧ್ಯಾಯಃ

---

೪೨ ದಿಕ್ಪಾಲರೂ, ಎಲ್ಲ ದೇವತೆಗಳೂ, ಆ ಬ್ರಾಹ್ಮಣನನ್ನು ಹಿಂಬಾಲಿಸಿ ಹೊರಟರು. ಎಲೌ ಪಾರ್ವತಿಯೇ, ಆ ಬ್ರಾಹ್ಮಣನನ್ನು ಅವರೆಲ್ಲರೂ ಸಮಾಧಾನ ಗೊಳಿಸಿ ಅಲ್ಲಿಯೇ ನಿಲ್ಲಿಸಿದರು.

೪೩. ನೀತಿಜ್ಞರಾದ ಆ ಮುನಿಗಳೆಲ್ಲರೂ ಆ ಬ್ರಾಹ್ಮಣನನ್ನು ಕುರಿತು ತಾವು ತಿಳಿದ ನೀತಿಯನ್ನು ಹೇಳಿದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ರಾಧೆಯ
ಉಪಾಖ್ಯಾನಾಂತರ್ಗತವಾದ ಸುಯಜ್ಞೋಪಾಖ್ಯಾನವೆಂಬ
ಐವತ್ತನೆಯ ಅಧ್ಯಾಯವು ಮುಗಿದುದು.

## ಐವತ್ತನೆಯ ಅಧ್ಯಾಯದ ಸಾರಾಂಶವು

ಸ್ವಾಯಂಭುವಮನುವಿನ ವಂಶದಲ್ಲಿ ಉತ್ಪನ್ನನಾಗಿ ಜಗದ್ವಿಖ್ಯಾತನಾದ ಧ್ರುವನಿಗೆ ಉತ್ಕಲನೆಂಬ ಪುತ್ರನೊಬ್ಬನಿದ್ದನು. ಅವನು ಪುಷ್ಕರಕ್ಷೇತ್ರದಲ್ಲಿ ಸಾವಿರ ರಾಜಸೂಯಯಾಗ ಮಾಡಿ, ಯಥೇಚ್ಛವಾಗಿ ಬ್ರಾಹ್ಮಣರಿಗೆ ದಕ್ಷಿಣೆ ಕೊಟ್ಟುದರಿಂದ ಬ್ರಹ್ಮನು ಅವನಿಗೆ ಸುಯಜ್ಞನೆಂದು ಹೆಸರಿಟ್ಟು ದೇವತೆಗಳ ಸಭೆಯಲ್ಲಿ ಗಣ್ಯನನ್ನಾಗಿ ಮಾಡಿದನು. ನಿತ್ಯವೂ ಬ್ರಾಹ್ಮಣರಿಗೆ ತೃಪ್ತಿಯಾಗಿ ಊಟವಮಾಡಿಸಿ, ಯಥೇಚ್ಛವಾಗಿ ದಕ್ಷಿಣೆ ಕೊಡುತ್ತಿದ್ದ ಆ ಸುಯಜ್ಞನ ಸಭೆಗೆ ಒಮ್ಮೆ ಬ್ರಾಹ್ಮಣನೊಬ್ಬನು ಮಲಿನ ವಸ್ತ್ರಧಾರಿಯಾಗಿ ಬರಲು, ಸಭಿಕರೊಬ್ಬರೂ ಪ್ರತ್ಯುತ್ಥಾನಮಾಡದೆ, ಅವನ ವೇಷಭೂಷಣಗಳನ್ನು ನೋಡಿ ಅಪಹಾಸ್ಯಮಾಡಿದರು. ಆಗ ಆ ಬ್ರಾಹ್ಮಣನು ತನ್ನ ತೇಜೋಮಹಿಮೆಯಿಂದ ಆ ಸುಯಜ್ಞನು ಸಂಪದ್ಭ್ರಷ್ಟನಾಗುವಂತೆ ಶಾಪವಿತ್ತನು. ಕೂಡಲೇ ಸಭೆಯಲ್ಲಿದ್ದ ದೇವತೆಗಳೂ ಮಹರ್ಷಿಗಳೂ ಅವನ ಕ್ಷಮೆಯನ್ನು ಬೇಡಿದರು. ಆದರೂ ಕುಪಿತನಾಗಿ ಹೊರಟುಹೋದ ಆ ಬ್ರಾಹ್ಮಣನನ್ನು ಸಭಿಕರೆಲ್ಲರೂ ಹಿಂಬಾಲಿಸಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### ॥ ಏಕಪಂಚಾಶತ್ತಮೋಽಧ್ಯಾಯಃ ॥

॥ ಶ್ರೀ ಪಾರ್ವತ್ಯುವಾಚ ॥

ಕಿಮೂಚುರ್ಬ್ರಾಹ್ಮಣಂ ಬ್ರಹ್ಮನ್ಬ್ರಾಹ್ಮಣಾ ಬ್ರಹ್ಮಣಃ ಸುತಾಃ ।
ನೀತಿಜ್ಞಾ ನೀತಿ ವಚನಂ ತನ್ಮಾಂ ವ್ಯಾಖ್ಯಾತುಮರ್ಹಸಿ ॥ ೧ ॥

॥ ಶ್ರೀ ಮಹಾದೇವ ಉವಾಚ ॥

ಸಂತೋಷ್ಯ ತಂ ಬ್ರಾಹ್ಮಣಂ ಚ ಸ್ತವೇನ ವಿನಯೇನ ಚ ।
ಕ್ರಮೇಣ ವಕ್ತುಮಾರೇಭೇ ಮುನಿಸಂಘೋ ವರಾನನೇ ॥ ೨ ॥

---

### ಐವತ್ತೊಂದನೆಯ ಅಧ್ಯಾಯವು

೧. ಶ್ರೀ ಪಾರ್ವತಿ :—ಎಲೈ ಪತಿದೇವನೇ, ಬ್ರಹ್ಮಪುತ್ರರೂ, ಬ್ರಹ್ಮಪರಾಯಣರೂ ಆದ ಆ ಋಷಿಗಳು, ಆ ಬ್ರಾಹ್ಮಣನಿಗೆ ಹೇಳಿದ ಸ್ವಾಂತವಚನಗಳಾವುವೆಂಬುದನ್ನು ದಯವಿಟ್ಟು ನನಗೆ ವಿಸ್ತರಿಸಿ ಹೇಳು.

೨. ಮಹಾದೇವ :— ಎಲೌ ಪಾರ್ವತಿಯೇ, ಆ ಮುನಿಗಳೆಲ್ಲರೂ ಆ ಬ್ರಾಹ್ಮಣನನ್ನು ವಿನಯಭರಿತರಾಗಿ ಸ್ತುತಿಸಿ, ಸಂತುಷ್ಟನಾದ ಅವನನ್ನು ಕುರಿತು ಈ ರೀತಿ ಹೇಳಲಾರಂಭಿಸಿದರು.

॥ ಸನತ್ಕುಮಾರ ಉವಾಚ ॥

ತ್ವತ್ಪಶ್ಚಾದಾಗತಾ ಲಕ್ಷ್ಮೀಃ ಕೀರ್ತಿಃ ಸತ್ವಂ ಯಶಸ್ತಥಾ ।
ಸುಶೀಲಂ ಚ ಮಹೈಶ್ವರ್ಯಂ ಪಿತರೋಽಗ್ನಿಃ ಸುರಾಸ್ತಥಾ ॥ ೩ ॥

ಆಗತಾ ನೃಪಗೇಹೇಭ್ಯಃ ಕೃತ್ವಾ ಭ್ರಷ್ಟಶ್ರಿಯಂ ನೃಪಂ ।
ಭವ ತುಷ್ಟೋ ದ್ವಿಜಶ್ರೇಷ್ಠ ಚಾಶುತೋಷಶ್ಚ ಮಾಡವಃ ॥ ೪ ॥

ಬ್ರಾಹ್ಮಣಾನಾಂ ತು ಹೃದಯಂ ಕೋಮಲಂ ನವನೀತವತ್ ।
ಶುದ್ಧಂ ಸುನಿರ್ಮಲಂ ಚೈವ ಮಾರ್ಜಿತಂ ತಪಸಾ ಮುನೇ ॥ ೫ ॥

ಕ್ಷಮಸ್ವಾಗಚ್ಛ ವಿಪ್ರೇಂದ್ರ ಶುದ್ಧಂ ಕುರು ನೃಪಾಲಯಂ ।
ಆಶಿಷಂ ಕುರು ತಸ್ಮೈ ತ್ವಂ ಪವಿತ್ರಪದರೇಣುನಾ ॥ ೬ ॥

---

೩. ಸನತ್ಕುಮಾರ :—ಎಲೈ ಬ್ರಾಹ್ಮಣೋತ್ತಮನೇ, ರಾಜನಮೇಲೆ ಕುಪಿತನಾದ ನಿನ್ನ ಹಿಂದೆಯೇ ರಾಜ್ಯಲಕ್ಷ್ಮಿಯೂ, ರಾಜನ ಕೀರ್ತಿಯೂ, ಸತ್ವಸುಶೀಲಗಳೂ, ಮಹದೈಶ್ವರ್ಯವೂ, ಪಿತೃದೇವತೆಗಳೂ, ಅಗ್ನಿ ಮುಂತಾದ ದೇವತೆಗಳೂ ಬಂದುಬಿಟ್ಟರು.

೪. ರಾಜನನ್ನು ಭ್ರಷ್ಟಸಂಪತ್ತುಳ್ಳವನನ್ನಾಗಿ ಮಾಡಿ ಅವನ ಮನೆಯಿಂದ ಎಲ್ಲರೂ ಹೊರಬಂದರು. ಬಹಳ ಜಾಗ್ರತೆ ಪ್ರಸನ್ನನಾಗುವ ದಯಾಮಯನಾದ ಎಲೈ ಬ್ರಾಹ್ಮಣನೇ, ನೀನು ಆ ರಾಜನ ವಿಷಯದಲ್ಲಿ ಪ್ರಸನ್ನನಾಗು.

೫. ಬ್ರಾಹ್ಮಣರ ಮನಸ್ಸು ಬೆಣ್ಣೆಯಂತೆ ಮೃದುವಾಗಿರಬೇಕಲ್ಲವೇ? ಅವರ ಅಂತಃಕರಣವು ತಪಸ್ಸಿನಿಂದ ಶುದ್ಧವೂ, ನಿರ್ಮಲವೂ ಆಗಿರುತ್ತದೆ.

೬. ಆದ್ದರಿಂದ ಎಲೈ ಬ್ರಾಹ್ಮಣೋತ್ತಮನೇ, ನೀನು ಕ್ಷಮಿಸಿ ಪುನಃ ಬಂದು ರಾಜಗೃಹವನ್ನು ಪರಿಶುದ್ಧಗೊಳಿಸು. ನಿನ್ನ ಪವಿತ್ರವಾದ ಪಾದಧೂಳಿಯಿಂದ ಆ ರಾಜನಿಗೆ ಅಮೋಘವಾದ ಆಶೀರ್ವಾದ ಮಾಡು.

|| ಭೃಗುರುವಾಚ ||

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ |
ಪಿತರಸ್ತಸ್ಯ ದೇವಾಶ್ಚ ವಹ್ನಿಶ್ಚೈವ ತಥೈವ ಚ || ೭ ||

ನಿರಾಶಾಃ ಪ್ರತಿಗಚ್ಛಂತಿ ಚಾತಿಥೇರಪ್ರತಿಗ್ರಹಾತ್ |
ಕ್ಷಮಸ್ವಾಗಚ್ಛ ವಿಪ್ರೇಂದ್ರ ಶುದ್ಧಂ ಕುರು ನೃಪಾಲಯಂ || ೮ ||

ಸ್ತ್ರೀಘ್ನೈರ್ಗೋಘ್ನೈಃ ಕೃತಘ್ನೈಶ್ಚ ಬ್ರಹ್ಮಘ್ನೈರ್ಗುರುತಲ್ಪಗೈಃ |
ತುಲ್ಯದೋಷೋ ಭವೇತ್ಯೇತ್ತೈರ್ಯಸ್ಯಾತಿಥಿರನರ್ಚಿತಃ || ೯ ||

|| ಪುಲಸ್ತ್ಯ ಉವಾಚ ||

ಪಶ್ಯಂತಿ ಯೇ ವಕ್ರದೃಷ್ಟ್ಯಾ ಚಾತಿಥಿಂ ಗೃಹಮಾಗತಂ |
ದತ್ವಾ ಸ್ವಪಾಪಂ ತಸ್ಮೈ ತತ್ಪುಣ್ಯಮಾದಾಯ ಗಚ್ಛತಿ || ೧೦ ||

---

೭–೮. ಭೃಗು :—ಯಾರಮನೆಗೆ ಬಂದ ಅತಿಥಿಯು ನಿರಾಶನಾಗಿ ಹಿಂತಿರುಗುವನೋ, ಅವರ ಮನೆಯಿಂದ ಪಿತೃದೇವತೆಗಳೂ, ಅಗ್ನಿ ಮುಂತಾದ ದೇವತೆಗಳೂ ಅತಿಥಿಯನ್ನು ಅನಾದರಣೆ ಮಾಡಿದುದಕ್ಕಾಗಿ ತಾವೂ ಹೊರಟುಹೋಗುವರು. ಆದ್ದರಿಂದ ಎಲೈ ಬ್ರಾಹ್ಮಣೋತ್ತಮನೇ, ಕ್ಷಮಾಶೀಲನಾದ ನೀನು ಆ ರಾಜನ ಮಂದಿರಕ್ಕೆ ಹಿಂತಿರುಗಿ ಅದನ್ನು ಪವಿತ್ರಗೊಳಿಸು.

೯. ಅತಿಥಿ ಪೂಜೆಯನ್ನು ಮಾಡದವನು, ಸ್ತ್ರೀಹತ್ಯ, ಗೋಹತ್ಯ, ಬ್ರಹ್ಮಹತ್ಯ ಮತ್ತು ಗುರುತಲ್ಪಗಮನಮಾಡಿದ ಮಹಾಪಾಪಿಗಳ ಪಂಕ್ತಿಯಲ್ಲಿ ಸೇರಿ ಕೃತಘ್ನನೆನಿಸುವನು.

೧೦. ಪುಲಸ್ತ್ಯ:— ಮನೆಗೆ ಬಂದಂಥ ಅತಿಥಿಯನ್ನು ಅಸಡ್ಡೆಯಿಂದ ಕಂಡರೆ, ಆ ಅತಿಥಿಯು ತನ್ನ ಪಾಪವನ್ನೆಲ್ಲ ಆ ಗೃಹಸ್ಥನಿಗೆ ಕೊಟ್ಟು, ಅವನು ಗಳಿಸಿದ ಪುಣ್ಯವನ್ನು ತೆಗೆದುಕೊಂಡು ಹೋಗುವನು.

ಕ್ಷಮಸ್ವ ನೃಪದೋಷಂ ಚ ಗಚ್ಛ ವತ್ಸ ಯಥಾಸುಖಂ ।
ರಾಜಾ ಸ್ವಕರ್ಮದೋಷೇಣ ನೋತ್ತಸ್ಥೌ ತತ್ಕ್ಷಮಾಂ ಕುರು ॥ ೧೧ ॥

॥ ಪುಲಹ ಉವಾಚ ॥

ರಾಜಶ್ರಿಯಾ ವಿದ್ಯಯಾ ವಾ ಬ್ರಾಹ್ಮಣಂ ಯೋಽವಮನ್ಯತೇ ।
ವಿಪ್ರಸ್ತ್ರಿಸಂಧ್ಯಾಹೀನೋ ಯಃ ಶ್ರೀಹೀನಃ ಕ್ಷತ್ರಿಯೋ ಭವೇತ್ ॥ ೧೨ ॥

ಏಕಾದಶೀವಿಹೀನಶ್ಚ ವಿಷ್ಣುನೈವೇದ್ಯವಂಚಿತಃ ।
ಕ್ಷಮಸ್ವ ಗಚ್ಛ ವಿಪ್ರೇಂದ್ರ ಶುದ್ಧಂ ಕುರು ನೃಪಾಲಯಂ ॥ ೧೩ ॥

॥ ಕ್ರತುರುವಾಚ ॥

ಬ್ರಾಹ್ಮಣಃ ಕ್ಷತ್ರಿಯೋ ವಾಪಿ ವೈಶ್ಯೋ ವಾ ಶೂದ್ರ ಏವ ಚ ।
ದೀಕ್ಷಾಹೀನೋ ಭವೇತ್ಸೋಽಪಿ ಬ್ರಾಹ್ಮಣಂ ಯೋಽವಮನ್ಯತೇ ॥ ೧೪ ॥

ಧನಹೀನಃ ಪುತ್ರಹೀನೋ ಭಾರ್ಯಾಹೀನೋ ಭವೇದ್ಧ್ರುವಂ ।
ಕ್ಷಮಸ್ವಾಗಚ್ಛ ಭಗವಂಚ್ಛುದ್ಧಂ ಕುರು ನೃಪಾಲಯಂ ॥ ೧೫ ॥

---

೧೧. ಆದ್ದರಿಂದ ಎಲೈ ಬ್ರಾಹ್ಮಣವಟುವೇ, ರಾಜನ ದೋಷಗಳನ್ನು ಕ್ಷಮಿಸು. ತನ್ನ ಪಾಪಕರ್ಮಗಳ ಫಲವಾಗಿ ರಾಜನು ನಿನ್ನಲ್ಲಿ ಅನಾದರಣೆಮಾಡಿದ್ದನ್ನು ಕ್ಷಮಿಸು.

೧೨–೧೩. ಪುಲಹ :—ರಾಜ್ಯಸಂಪತ್ತಿನ ಮದದಿಂದಾಗಲೀ, ಅಜ್ಞಾನದಿಂದಾಗಲೀ, ಅತಿಥಿಯಾದ ಬ್ರಾಹ್ಮಣನನ್ನು ಅವಮಾನಗೊಳಿಸುವವನೂ, ತ್ರಿಸಂಧ್ಯೆಯನ್ನಾಚರಿಸದ ಬ್ರಾಹ್ಮಣನೂ, ಏಕಾದಶೀವ್ರತವನ್ನಾಚರಿಸದವನೂ, ವಿಷ್ಣುವಿಗೆ ನಿವೇದಿಸದೆ ಭುಜಿಸುವವನೂ, ಕ್ಷತ್ರಿಯನಾಗಿ ಜನಿಸಿ ಸಂಪದ್ರಹಿತನಾಗುವನು. ಆದ್ದರಿಂದ ಎಲೈ ಬ್ರಾಹ್ಮಣೋತ್ತಮನೇ, ನೀನು ದಯವಿಟ್ಟು ಕ್ಷಮಿಸಿ, ರಾಜಾಲಯಕ್ಕೆ ಹಿಂತಿರುಗಿ ಬಂದು ಪವಿತ್ರಗೊಳಿಸು.

೧೪–೧೫. ಕ್ರತು :—ಅತಿಥಿಯಾಗಿ ಬಂದ ಬ್ರಾಹ್ಮಣನನ್ನು ಅವಮಾನಗೊಳಿಸುವವನು ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯ ಅಥವಾ ಶೂದ್ರನಾಗಲೀ, ಯಜ್ಞದೀಕ್ಷಾರಹಿತನೂ, ಧನರಹಿತನೂ, ಪುತ್ರಭಾರ್ಯಾವಿಹೀನನೂ ಆಗುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಎಲೈ ಪೂಜ್ಯನೇ, ನೀನು ಕ್ಷಮಿಸಿ ಬಂದು ರಾಜನ ಮಂದಿರವನ್ನು ಪವಿತ್ರಗೊಳಿಸು.

|| ಅಂಗಿರಾ ಉವಾಚ ||

ಜ್ಞಾನವಾನ್ಬ್ರಾಹ್ಮಣೋ ಭೂತ್ವಾ ಬ್ರಾಹ್ಮಣಂ ಯೋಽವಮನ್ಯತೇ |
ವೃಷವಾಹೋ ಭವೇತ್ಸೋಽಪಿ ಭಾರತೇ ಸಪ್ತಜನ್ಮಸು || ೧೬ ||

|| ಮರೀಚಿರುವಾಚ ||

ಪುಣ್ಯಕ್ಷೇತ್ರೇ ಭಾರತೇ ಚ ದೇವಂ ಚ ಬ್ರಾಹ್ಮಣಂ ಗುರುಂ |
ವಿಷ್ಣುಭಕ್ತಿವಿಹೀನಶ್ಚ ಸ ಭವೇದ್ಯೋಽವಮನ್ಯತೇ || ೧೭ ||

|| ಕಶ್ಯಪ ಉವಾಚ ||

ವೈಷ್ಣವಂ ಬ್ರಾಹ್ಮಣಂ ದೃಷ್ಟ್ವಾ ಯೋ ಸತ್ಯಮುವಮನ್ಯತೇ |
ವಿಷ್ಣುಮಂತ್ರವಿಹೀನಶ್ಚ ತತ್ಪೂಜಾವಿರತೋ ಭವೇತ್ || ೧೮ ||

|| ಪ್ರಚೇತಾ ಉವಾಚ ||

ಅತಿಥಿಂ ಬ್ರಾಹ್ಮಣಂ ದೃಷ್ಟ್ವಾ ನಾಭ್ಯುತ್ಥಾನಂ ಕರೋತಿ ಯಃ |
ಪಿತೃಭಕ್ತಿವಿಹೀನಸ್ಸ್ಯಾತ್ಸಭವೇದ್ಭಾರತೇ ಭುವಿ || ೧೯ ||

---

೧೬. ಅಂಗಿರಸ:— ಭರತಖಂಡದಲ್ಲಿ ಜ್ಞಾನಿಯಾದ ಬ್ರಾಹ್ಮಣನಾಗಿ ಹುಟ್ಟಿ, ಅತಿಥಿಯಾಗಿ ಮನೆಗೆ ಬಂದ ಬ್ರಾಹ್ಮಣನನ್ನು ಅವಮಾನಗೊಳಿಸುವವನು ಏಳುಜನ್ಮಗಳು ಕಳೆಯುವವರೆಗೆ (ವೃಷವಾಹ) ಎತ್ತುಗಳಿಂದ ಉತ್ತು ಜೀವಿಸುವವನಾಗುವನು.

೧೭. ಮರೀಚಿ :—ಪುಣ್ಯಕ್ಷೇತ್ರವಾದ ಭಾರತದಲ್ಲಿ ಹುಟ್ಟಿ, ದೇವಬ್ರಾಹ್ಮಣರನ್ನೂ, ಗುರುಗಳನ್ನೂ ಅವಮಾನಗೊಳಿಸುವವನು ವಿಷ್ಣುಭಕ್ತಿಯಿಲ್ಲದವನಾಗುವನು.

೧೮. ಕಶ್ಯಪ :—ವಿಷ್ಣುಭಕ್ತನಾದ ಬ್ರಾಹ್ಮಣನನ್ನು ನೋಡಿದರೂ ಆದರಿಸದವನು ವಿಷ್ಣುಮಂತ್ರದ ಸಿದ್ಧಿ ಇಲ್ಲದವನಾಗಿ, ವಿಷ್ಣುಪೂಜಾಬಾಹಿರನಾಗುವನು.

೧೯–೨೦. ಪ್ರಚೇತಸ್ಸು:—ಬ್ರಾಹ್ಮಣನಾದ ಅತಿಥಿಯನ್ನು ಕಂಡು ಅವನಿಗೆ ಪ್ರತ್ಯುತ್ಥಾನಮಾಡದೆ ಇರುವವನು. ಭರತಖಂಡದಲ್ಲಿ ಹುಟ್ಟಿ, ಪಿತೃಭಕ್ತಿಯಿಲ್ಲದವನಾಗಿರುವುದಲ್ಲದೆ, ಆ ಮೂಢನು ಏಳುಜನ್ಮಗಳು ಕುಂಜರ (ಆನೆ) ಯೋನಿಯಲ್ಲಿ

ಸಪ್ರಾಪ್ನೋತಿ ಕೌಂಜರೀಂ ಯೋನಿಂ ಸಮೂಢಃ ಸಪ್ತ ಜನ್ಮಸು ।
ಶೀಘ್ರಂ ಗಚ್ಛ ದ್ವಿಜಶ್ರೇಷ್ಠ ರಾಜ್ಞೇ ದೇಹ್ಯಾಶಿಷಶ್ಶುಭಾಃ ॥ ೨೦ ॥

॥ ದುರ್ವಾಸಾ ಉವಾಚ ॥

ಗುರುಂ ವಾ ಬ್ರಾಹ್ಮಣಂ ವಾಪಿ ದೇವತಾಪ್ರತಿಮಾಮಪಿ ।
ದೃಷ್ಟ್ವಾ ಶೀಘ್ರಂ ನ ಪ್ರಣಮೇತ್ಸ ಭವೇತ್ಸೂಕರೋ ಭುವಿ ॥ ೨೧ ॥

ಮಿಥ್ಯಾಸಾಕ್ಷೀ ಚ ಭವತಿ ತಥಾ ವಿಶ್ವಾಸಘಾತಕಃ ।
ಕ್ಷಮಸ್ವ ಸರ್ವಮಸ್ಮಾಕಮಾತಿಥ್ಯಗ್ರಹಣಂ ಕುರು ॥ ೨೨ ॥

॥ ರಾಜೋವಾಚ ॥

ಛಲೇನ ಕಥಿತೋ ಧರ್ಮೋ ಯುಷ್ಮಾಭಿರ್ಮುನಿಪುಂಗವೈಃ ।
ಸರ್ವಂ ಕೃತ್ವಾ ಚ ವಿಸ್ಪಷ್ಟಂ ಮಾಂ ಮೂಢಂ ಬೋಧಯಂತ್ವಹೋ ॥ ೨೩ ॥

ಸ್ತ್ರೀಘ್ನಗೋಘ್ನಕೃತಘ್ನಾನಾಂ ಗುರುಸ್ತ್ರೀಗಾಮಿನಾಂ ತಥಾ ।
ಬ್ರಹ್ಮಘ್ನಾನಾಂ ಚ ಕೋ ದೋಷೋ ಬ್ರೂತ ಮಾಂ ಯೋಗಿನಾಂ ವರಾಃ ॥

---

ಹುಟ್ಟುವನು. ಆದ್ದರಿಂದ ಎಲೈ ಬ್ರಾಹ್ಮಣಶ್ರೇಷ್ಠನೇ, ನೀನು ದಯವಿಟ್ಟು ಹಿಂತಿರುಗಿ ಬಂದು ರಾಜನಿಗೆ ಶುಭಾಶೀರ್ವಾದಗಳನ್ನು ಮಾಡು.

೨೧-೨೨. ದುರ್ವಾಸ:—ದೇವತಾಪ್ರತಿಮೆಯನ್ನಾಗಲೀ, ಗುರುಗಳನ್ನಾಗಲೀ, ಬ್ರಾಹ್ಮಣರನ್ನಾಗಲೀ ನೋಡಿದರೂ ಆದರದಿಂದ ನಮಸ್ಕರಿಸದವನು ಹಂದಿಯ ಜನ್ಮವನ್ನು ಹೊಂದುವನು. ಒಂದುವೇಳೆ ಮನುಷ್ಯನಾಗಿ ಹುಟ್ಟಿದರೂ ಸುಳ್ಳು ಸಾಕ್ಷಿಗಾರನೂ, ನಂಬಿಸಿ ದ್ರೋಹಮಾಡುವವನೂ ಆಗುವನು. ಆದ್ದರಿಂದ ಎಲೈ ಪೂಜ್ಯಬ್ರಾಹ್ಮಣನೇ, ನಮ್ಮ ತಪ್ಪನ್ನು ಮನ್ನಿಸಿ ಬಂದು ಆತಿಥ್ಯವನ್ನು ಸ್ವೀಕರಿಸು.

೨೩-೨೪. ರಾಜ:—ಎಲೈ ಮುನಿವರ್ಯರೇ, ನೀವೆಲ್ಲರೂ ಧರ್ಮಸ್ವರೂಪವನ್ನು ಅತ್ಯಂತ ಗೂಢವಾಗಿ ಹೇಳಿದಿರಿ. ಎಲ್ಲವನ್ನೂ ಸ್ಪಷ್ಟವಾಗಿ ಮೂಢನಾದ ನನಗೆ ವಿಸ್ತರಿಸಿ ಹೇಳಿ. ಸ್ತ್ರೀಹತ್ಯೆ, ಗೋಹತ್ಯೆ, ಗುರುತಲ್ಪಗಮನ, ಬ್ರಹ್ಮಹತ್ಯೆ ಮುಂತಾದ ಮಹಾಪಾಪ ಮಾಡಿದವರಿಗೂ, ಉಪಕಾರಸ್ಮರಣೆ ಇಲ್ಲದವರಿಗೂ ಉಂಟಾಗುವ ಪಾಪವನ್ನು ಯೋಗಿಶ್ರೇಷ್ಠರಾದ ನೀವು ನನಗೆ ತಿಳಿಸಿ.

|| ವಸಿಷ್ಠ ಉವಾಚ ||

ಕಾಮತೋ ಗೋವಧೇ ರಾಜನ್ವರ್ಷಂ ತೀರ್ಥಂ ಭ್ರಮೇನ್ನರಃ |
ಯವಯಾವಕಭೋಜೀ ಚ ಕರೇಣ ಚ ಜಲಂ ಪಿಬೇತ್ || ೨೫ ||

ತದಾ ಧೇನುಶತಂ ದಿವ್ಯಂ ಬ್ರಾಹ್ಮಣೇಭ್ಯಃ ಸದಕ್ಷಿಣಂ |
ದತ್ವಾ ಮುಂಚತಿ ಪಾಪಾಚ್ಚ ಭೋಜಯಿತ್ವಾಶತಂ ದ್ವಿಜಾನ್ || ೨೬ ||

ಪ್ರಾಯಶ್ಚಿತ್ತೇ ತು ವೈ ಚೀರ್ಣೇ ಸರ್ವಪಾಪಾನ್ನಮುಚ್ಯತೇ |
ಪಾಪಾವಶೇಷಾದ್ಭವತಿ ದುಃಖೀ ಚಾಂಡಾಲ ಏವ ಚ || ೨೭ ||

ಆತಿದೇಶಿಕಹತ್ಯಾಯಾಂ ತದರ್ಧಂ ಫಲಮಶ್ನುತೇ |
ಪ್ರಾಯಶ್ಚಿತ್ತಾನುಕಲ್ಪೇನ ಸರ್ವಪಾಪಾನ್ನಮುಚ್ಯತೇ || ೨೮ ||

---

೨೫. ವಸಿಷ್ಠ:—ಎಲೈ ರಾಜನೇ, ಯಾವನಾದರೊಬ್ಬನು ತನ್ನ ಇಚ್ಛಾ ಪೂರ್ವಕವಾಗಿ ಗೋಹತ್ಯೆ ಮಾಡಿದರೆ ಆ ದೋಷಪರಿಹಾರಕ್ಕಾಗಿ, ಒಂದುವರ್ಷಕಾಲ ತೀರ್ಥಯಾತ್ರೆಯನ್ನು ಕೈಗೊಂಡು, ಅಪಕ್ವವಾದ ಗೋಧುವೆ ಅನ್ನವನ್ನೂ, ಒಂದು ಬೊಗಸೆ ನೀರನ್ನೂ ಪ್ರತಿನಿತ್ಯವೂ ಸೇವಿಸಿಕೊಂಡಿರಬೇಕು.

೨೬. ಆ ಕಾಲದಲ್ಲಿ ಸುಂದರವಾದ ನೂರಾರು ಗೋವುಗಳನ್ನು ದಕ್ಷಿಣಾ ಸಹಿತವಾಗಿ ದಾನಮಾಡಿ, ನೂರಾರು ಬ್ರಾಹ್ಮಣರಿಗೆ ಭೋಜನ ಮಾಡಿಸುವುದರಿಂದ ಅವನು ಪಾಪನಿರ್ಮುಕ್ತನಾಗುವನು.

೨೭. ಕೇವಲ ಪ್ರಾಯಶ್ಚಿತ್ತವನ್ನಾಚರಿಸುವುದರಿಂದ ಸಕಲ ಪಾಪಗಳಿಂದಲೂ ಮುಕ್ತನಾಗಲಾರನು. ಪಾಪಶೇಷದಿಂದ ದುಃಖಕರವಾದ ಚಂಡಾಲಯೋನಿಯಲ್ಲಿ ಜನಿಸುವನು.

೨೮. ಆತಿದೇಶಿಕವಾದ ಗೋಹತ್ಯೆ ಮಾಡುವುದರಿಂದ ಅದರಲ್ಲಿ ಅರ್ಧ ಪಾಪವು ಸಂಘಟಿಸುವುದು. ಆಗಲೂ ಪ್ರಾಯಶ್ಚಿತ್ತಮಾಡಿಕೊಂಡಮಾತ್ರದಿಂದ ಎಲ್ಲ ಪಾಪವೂ ಪರಿಹಾರವಾಗುವುದಿಲ್ಲ. *

---

*ಆತಿದೇಶಿಕ ಗೋಹತ್ಯೆ ಮತ್ತು ಬ್ರಹ್ಮಹತ್ಯೆಗಳು ಹಿಂದಿನ ಸಂಪುಟದಲ್ಲಿ ಉಕ್ತವಾಗಿವೆ.

॥ ಶುಕ್ರ ಉವಾಚ ॥

ಗೋಹತ್ಯಾದ್ವಿಗುಣಂ ಪಾಪಂ ಸ್ತ್ರೀಹತ್ಯಾಯಾಂ ಭವೇದ್ಧ್ರುವಂ ।
ಷಷ್ಟಿವರ್ಷಸಹಸ್ರಾಣಿ ಕಾಲಸೂತ್ರೇ ವಸೇದ್ಧ್ರುವಂ ॥ ೨೯ ॥

ತತೋ ಭವೇನ್ಮಹಾಪಾಪೀ ಸೂಕರಃ ಸಪ್ತಜನ್ಮಸು ।
ತತೋ ಭವತಿ ಸರ್ಪಶ್ಚ ಸಪ್ತಜನ್ಮನ್ಯತಃ ಶುಚಿಃ ॥ ೩೦ ॥

॥ ಬೃಹಸ್ಪತಿರುವಾಚ ॥

ಸ್ತ್ರೀಹತ್ಯಾದ್ವಿಗುಣಂ ಪಾಪಂ ಬ್ರಹ್ಮಹತ್ಯಾಕೃತೋ ಭವೇತ್ ।
ಲಕ್ಷವರ್ಷಂ ಮಹಾಘೋರೇ ಕುಂಭೀಪಾಕೇ ವಸೇದ್ಧ್ರುವಂ ॥ ೩೧ ॥

ತತೋ ಭವೇನ್ಮಹಾಪಾಪೀ ವಿಷ್ಠಾಕೀಟಃ ಶತಾಬ್ದಕಂ ।
ತತೋ ಭವತಿ ಸರ್ಪಶ್ಚ ಸಪ್ತಜನ್ಮನ್ಯತಃ ಶುಚಿಃ ॥ ೩೨ ॥

---

೨೯. ಶುಕ್ರ:—ಸ್ತ್ರೀಹತ್ಯ ಮಾಡುವುದರಿಂದ ಗೋಹತ್ಯ ಮಾಡುವುದರ ಎರಡರಷ್ಟು ಪಾಪವು ಸಂಭವಿಸುವುದು. ಸ್ತ್ರೀಹತ್ಯ ಮಾಡಿದವನು ಅರವತ್ತು ಸಾವಿರ ವರ್ಷಗಳು ಕಾಲಸೂತ್ರವೆಂಬ ನರಕದಲ್ಲಿ ತೊಳಲುವನು.

೩೦. ಅನಂತರ ಮಹಾಪಾಪಿಯಾದ ಅವನು ಏಳುಜನ್ಮಗಳಲ್ಲಿ ಹಂದಿಯೂ, ಮತ್ತೇಳು ಜನ್ಮಗಳಲ್ಲಿ ದುಷ್ಟಸರ್ಪವೂ ಆಗಿ ಜನಿಸಿದ ಬಳಿಕ ಶುದ್ಧನಾಗುವನು.

೩೧. ಬೃಹಸ್ಪತಿ :—ಬ್ರಹ್ಮಹತ್ಯೆ ಮಾಡಿದವನಿಗೆ ಸ್ತ್ರೀಹತ್ಯ ಮಾಡಿದವನಿಗಿಂತ ಎರಡರಷ್ಟು ಪಾಪ ಸಂಭವಿಸುವುದು. ಬ್ರಹ್ಮಹತ್ಯ ಮಾಡಿದವನು ಒಂದುಲಕ್ಷ ವರ್ಷಗಳಕಾಲ ಬಹಳ ಭಯಂಕರವಾದ ಕುಂಭೀಪಾಕವೆಂಬ ನರಕದಲ್ಲಿ ನರಳುವನು.

೩೨. ಅನಂತರ ಮಹಾಪಾಪಿಯಾದ ಅವನು ನೂರುವರ್ಷಗಳ ಕಾಲ ಮಲದ ಕ್ರಿಮಿಯಾಗಿರುವನು. ಅನಂತರ ಏಳು ಜನ್ಮಗಳಲ್ಲಿ ಸರ್ಪವಾಗಿ ಹುಟ್ಟಿದ ಮೇಲೆ ಶುಚಿಯಾಗುವನು.

॥ ಗೌತಮ ಉವಾಚ ॥

ದೋಷಃ ಕೃತಘ್ನೇ ರಾಜೇಂದ್ರ ಬ್ರಹ್ಮಹತ್ಯಾ ಚತುರ್ಗುಣಃ ।
ನಿಷ್ಕೃತಿರ್ನಾಸ್ತಿ ವೇದೋಕ್ತಾ ಕೃತಘ್ನಾನಾಂ ಚ ನಿಶ್ಚಿತಂ ॥ ೩೩ ॥

॥ ರಾಜೋವಾಚ ॥

ಲಕ್ಷಣಂ ಚ ಕೃತಘ್ನಾನಾಂ ವದ ವೇದವಿದಾಂ ವರ ।
ಕೃತಘ್ನಾಃ ಕತಿಧಾ ಪ್ರೋಕ್ತಾಃ ಕೇಷು ಕೋ ದೋಷ ಏವ ಚ ॥ ೩೪ ॥

॥ ಋಷ್ಯಶೃಂಗ ಉವಾಚ ॥

ಕೃತಘ್ನಾಃ ಷೋಡಶವಿಧಾಃ ಸಾಮವೇದೇ ನಿರೂಪಿತಾಃ ।
ಸರ್ವಾಃ ಪ್ರತ್ಯೇಕದೋಷೇಣ ಪ್ರತ್ಯೇಕಫಲಮಶ್ನುತೇ ॥ ೩೫ ॥

ಕೃತೇ ಸತ್ಯೇ ಚ ಪುಣ್ಯೇ ಚ ಸ್ವಧರ್ಮೇ ತಪಸಿ ಸ್ಥಿತೇ ।
ಪ್ರತಿಜ್ಞಾಯಾಂ ಚ ದಾನೇ ಚ ಸ್ವಗೋಷ್ಠೀ ಪರಿಪಾಲನೇ ॥ ೩೬ ॥

---

೩೩. ಗೌತಮ :—ಎಲೈ ರಾಜಶ್ರೇಷ್ಠನೇ, ಮಾಡಿದ ಉಪಕಾರವನ್ನು ಸ್ಮರಿಸದ ಕೃತಘ್ನನಿಗೆ ಬ್ರಹ್ಮಹತ್ಯಾಪಾಪಕ್ಕಿಂತ ನಾಲ್ಕರಷ್ಟು ಪಾಪ ಬರುವುದು. ಕೃತಘ್ನರಿಗೆ ವೇದೋಕ್ತವಾದ ಪ್ರಾಯಶ್ಚಿತ್ತವಾವುದೂ ನಿಶ್ಚಿತವಾಗಿಲ್ಲ.

೩೪. ರಾಜ:— ವೇದವೇದಾಂಗಪಾರಂಗತನಾದ ಎಲೈ ಮಹರ್ಷಿಯೇ, ಕೃತಘ್ನರ ಲಕ್ಷಣವೇನು? ಅವರಲ್ಲಿ ಎಷ್ಟುವಿಧ? ಯಾರುಯಾರಲ್ಲಿ ಯಾವಯಾವ ದೋಷವಿರುವುದು.

೩೫. ಋಷ್ಯಶೃಂಗ :—ಕೃತಘ್ನರಲ್ಲಿ ಹದಿನಾರುವಿಧವೆಂದು ಸಾಮವೇದದಲ್ಲಿ ನಿರೂಪಿತವಾಗಿದೆ. ಎಲ್ಲರೂ ಬೇರೆಬೇರೆಯಾದ ಅವರವರ ದೋಷಗಳಿಂದ ಬೇರೆ ಬೇರೆ ಫಲವನ್ನು ಅನುಭವಿಸುತ್ತಾರೆ.

೩೬–೩೮. ಆಡಿದ ಮಾತನ್ನು ಪರಿಪಾಲಿಸುವುದರಲ್ಲಿಯೂ, ಪುಣ್ಯಕಾರ್ಯದಲ್ಲಿಯೂ, ಸ್ವಧರ್ಮರೂಪವಾದ ತಪಸ್ಸನ್ನು ಆಚರಿಸುವುದರಲ್ಲಿಯೂ, ಪ್ರತಿಜ್ಞೆಯಲ್ಲಿಯೂ, ದಾನದಲ್ಲಿಯೂ, ತನ್ನ ಗೋಷ್ಠಿಯಲ್ಲಿನ ನುಡಿಯನ್ನು ರಕ್ಷಿಸುವುದರ

ಗುರುಕೃತ್ಯೇ ದೇವಕೃತ್ಯೇ ಕಾಮ್ಯಕೃತ್ಯೇ ದ್ವಿಜಾರ್ಚನೇ ।
ನಿತ್ಯಕೃತ್ಯೇ ಚ ವಿಶ್ವಾಸೇ ಪರಧರ್ಮಪ್ರದಾನಯೋಃ ॥ ೩೭ ॥

ಏತಾನ್ಯೋ ಹಂತಿ ಪಾಪಿಷ್ಠಃ ಸಕೃತಘ್ನ ಇತಿ ಸ್ಮೃತಃ ।
ಏತೇಷಾಂ ಸಂತಿ ಲೋಕಾಶ್ಚ ತೆಜ್ಜನ್ಮ ಭಿನ್ನಯೋನಿಷು ॥ ೩೮ ॥

ಯಾನ್ಯಾಂಶ್ಚ ನರಕಾಂಸ್ತೇ ಚ ಯಾಂತಿ ರಾಜೇಂದ್ರ ಪಾಪಿನಃ ।
ತೇ ತೇ ಚ ನರಕಾಃ ಸಂತಿ ಯಮಲೋಕೇ ಸುನಿಶ್ಚಿತಂ ॥ ೩೯ ॥

॥ ಸುಯಜ್ಞ ಉವಾಚ ॥

ಕೇ ಕಿಂ ಕೃತ್ವಾ ಕೃತಘ್ನಾಶ್ಚ ಕಾನ್ಕಾನ್ಗಚ್ಛಂತಿ ರೌರವಾನ್ ।
ಪ್ರತ್ಯೇಕಂ ಶ್ರೋತುಮಿಚ್ಛಾಮಿ ವಕ್ತುಮರ್ಹಸಿ ಮೇ ಪ್ರಭೋ ॥ ೪೦ ॥

---

ಲ್ಲಿಯೂ, ದೇವ ಮತ್ತು ಗುರು ಕಾರ್ಯಗಳಲ್ಲಿಯೂ, ತನ್ನ ಇಷ್ಟಕಾರ್ಯದಲ್ಲಿಯೂ, ಬ್ರಾಹ್ಮಣರನ್ನು ಪೂಜಿಸುವುದರಲ್ಲಿಯೂ, ನಿತ್ಯಕರ್ಮದಲ್ಲಿಯೂ, ಮತ್ತೊಬ್ಬರ ಧರ್ಮ ಮತ್ತು ದಾನದಲ್ಲಿರಬೇಕಾದ ವಿಶ್ವಾಸದಲ್ಲಿಯೂ, ತಪ್ಪುವಂಥ ಪಾಪಿಷ್ಠನು ಕೃತಘ್ನನೆನಿಸುವನು. ಇಂಥ ಪಾಪಿಗಳಿಗೆ ಜನ್ಮವೆತ್ತಲು ಬೇರೆಬೇರೆ ಲೋಕಗಳಿರುವುವು. ಇವರೂ ಬೇರೆಬೇರೆ ಯೋನಿಯಲ್ಲಿ ಜನಿಸುವರು.

೩೯. ಎಲೈ ರಾಜಶ್ರೇಷ್ಠನೇ, ಈ ಪಾಪಿಗಳೆಲ್ಲ ಯಾವ ಯಾವ ನರಕಗಳಿಗೆ ಹೋಗುವರೋ ಆ ನರಕಗಳೆಲ್ಲವೂ ಯಮಲೋಕದಲ್ಲಿ ನಿಶ್ಚಯವಾಗಿಯೂ ಇವೆ.

೪೦. ಸುಯಜ್ಞ :—ಎಲೈ ಗುರುವರ್ಯನೇ, ಯಾರು ಯಾರು ಯಾವ ಯಾವ ಪಾಪಕರ್ಮವನ್ನು ಮಾಡಿ ಕೃತಘ್ನರೆನಿಸುವರು. ಇವರುಗಳು ಯಾವ ಯಾವ ನರಕಕ್ಕೆ ಹೋಗುವರು. ಇದನ್ನು ಬೇರೆಬೇರೆಯಾಗಿ ತಿಳಿಯಲು ನನಗೆ ಬಯಕೆಯಿರುವುದರಿಂದ ನನಗೆ ವಿಸ್ತರಿಸಿ ಹೇಳು.

|| ಕಾತ್ಯಾಯನ ಉವಾಚ ||

ಕೃತ್ವಾ ಶಪಥರೂಪಂ ಚ ಸತ್ಯಂ ಹಂತಿ ನ ಪಾಲಯೇತ್ ।
ಸ ಕೃತಘ್ನಃ ಕಾಲಸೂತ್ರೇಽವಸೇದೇವ ಚತುರ್ಯುಗಂ || ೪೧ ||

ಸಪ್ತಜನ್ಮಸು ಕಾಕಶ್ಚ ಸಪ್ತಜನ್ಮಸು ಪೇಚಕಃ ।
ತತಃ ಶೂದ್ರೋ ಮಹಾವ್ಯಾಧಿಃ ಸಪ್ತಜನ್ಮಸ್ವತಃ ಶುಚಿಃ || ೪೨ ||

|| ಶ್ರೀ ಸನಂದನ ಉವಾಚ ||

ಪುಣ್ಯಂ ಕೃತ್ವಾ ವದತ್ಯೇವ ಕೀರ್ತಿವರ್ಧನಹೇತುನಾ ।
ಸ ಕೃತಘ್ನಸ್ತಪ್ತಸೂರ್ಮ್ಯಾಂ ವಸತ್ಯೇವ ಯುಗತ್ರಯಂ || ೪೩ ||

ಪಂಚಜನ್ಮಸು ಮಂಡೂಕಸ್ತ್ರಿಷು ಜನ್ಮಸು ಕರ್ಕಟಃ ।
ತದಾ ಮೂಕೋ ಮಹಾವ್ಯಾಧಿರ್ದರಿದ್ರಶ್ಚ ತತಃ ಶುಚಿಃ || ೪೪ ||

---

೪೧. ಕಾತ್ಯಾಯನ:—ಪ್ರತಿಜ್ಞಾರೂಪವಾದ ಸತ್ಯವನ್ನು ಮಾಡಿ ವಚನವನ್ನು ಕಾಪಾಡಿಕೊಳ್ಳದೆ ಕಳೆದುಕೊಳ್ಳುವವನು ಕೃತಘ್ನನೆನಿಸಿ, ನಾಲ್ಕುಯುಗಗಳ ಕಾಲ ಕಾಲಸೂತ್ರವೆಂಬ ನರಕದಲ್ಲಿ ವಾಸಿಸುವನು.

೪೨. ಮುಂದೆ ಏಳು ಜನ್ಮಗಳಲ್ಲಿ ಕಾಗೆಯಾಗಿಯೂ, ಮತ್ತೇಳು ಜನ್ಮಗಳಲ್ಲಿ ಗೂಬೆಯಾಗಿಯೂ ಅನಂತರ ಏಳು ಜನ್ಮಗಳೆಲ್ಲಿ ಮಹಾ ರೋಗಿಯಾದ ಶೂದ್ರನಾಗಿಯೂ ಜನಿಸಿ ಮತ್ತೆ ಶುಚಿಯಾಗುವನು.

೪೩. ಸನಂದನ:—ಪುಣ್ಯಕರ್ಮವನ್ನು ಮಾಡಿ, ತನ್ನ ಕೀರ್ತಿಯನ್ನು ಹೆಚ್ಚಿಸಿಕೊಳ್ಳುತ್ತೇನೆಂಬ ಆಸೆಯಿಂದ ತಾನೇ ಆತ್ಮಪ್ರಶಂಸೆಮಾಡಿಕೊಳ್ಳುವ ಕೃತಘ್ನನು ತಪ್ತಸೂರ್ಮಿ ಎಂಬ ನರಕದಲ್ಲಿ ಮೂರು ಯುಗಗಳಕಾಲ ವಾಸಿಸುವನು.

೪೪. ಮುಂದೆ ಐದು ಜನ್ಮಗಳು ಕಪ್ಪೆಯಾಗಿಯೂ, ಮೂರು ಜನ್ಮಗಳು ಏಡಿಯಾಗಿಯೂ, ಅನಂತರ ರೋಗಿಯೂ ದರಿದ್ರನೂ, ಆದ ಮೂಗನಾಗಿಯೂ ಹುಟ್ಟಿ ಶುಚಿಹೊಂದುವನು.

॥ ಸನಾತನ ಉವಾಚ ॥

ಸ್ವಧರ್ಮಂ ಹಂತಿ ಯೋ ವಿಪ್ರಃ ಸಂಧ್ಯಾತ್ರಯವಿವರ್ಜಿತಃ ।
ಅತರ್ಪಯಂಶ್ಚ ಯತ್ನಾಶ್ನಾತಿ ವಿಷ್ಣುನೈವೇದ್ಯವರ್ಜಿತಃ ॥ ೪೫ ॥

ವಿಷ್ಣುಪೂಜಾವಿಹೀನಶ್ಚ ವಿಷ್ಣುಮಂತ್ರವಿಹೀನಕಃ ।
ಏಕಾದಶೀವಿಹೀನಶ್ಚ ಶ್ರೀಕೃಷ್ಣಜನ್ಮದಿನೇ ತಥಾ ॥ ೪೬ ॥

ಶಿವರಾತ್ರೌ ಚ ಯೋ ಭುಂಕ್ತೇ ಶ್ರೀರಾಮನವಮೀದಿನೇ ।
ಪಿತೃಕೃತ್ಯಾದಿಹೀನೋ ಯಃ ಸ ಕೃತಘ್ನ ಇತಿ ಸ್ಮೃತಃ ॥ ೪೭ ॥

ಕುಂಭೀಪಾಕೇ ವಸತ್ಯೇವಂ ಯಾವದಿಂದ್ರಾಶ್ಚತುರ್ದಶ ।
ತತಶ್ಚಾಂಡಾಲತಾಂ ಯಾತಿ ಸಪ್ತಜನ್ಮಸು ನಿಶ್ಚಿತಂ ॥ ೪೮ ॥

ಶತಜನ್ಮನಿ ಗೃಧ್ರಶ್ಚ ಶತಜನ್ಮನಿ ಸೂಕರಃ ।
ತತೋ ಭವೇದ್ಬ್ರಾಹ್ಮಣಶ್ಚ ಶೂದ್ರಾಣಾಂ ಸೂಪಕಾರಕಃ ॥ ೪೯ ॥

---

೪೫. ಸನಾತನ:—ಯಾವ ಬ್ರಾಹ್ಮಣನು ಸ್ವಧರ್ಮವನ್ನು ತ್ಯಜಿಸಿ, ತ್ರಿಸಂಧ್ಯೆಯನ್ನೂ ಆಚರಿಸದಿರುವನೋ, ಕೇವಲ ಸ್ನಾನಮಾಡಿ ಪಿತೃದೇವತೆಗಳ ತರ್ಪಣವನ್ನೂ ವಿಷ್ಣು ನೈವೇದ್ಯವನ್ನೂ ಸಮರ್ಪಿಸದೆ ಭುಜಿಸುವನೋ ಅವನು ಕೃತಘ್ನನೆನಿಸುವನು.

೪೬. ವಿಷ್ಣುವಿನ ಪೂಜೆಯನ್ನು ಮಾಡದವನೂ, ವಿಷ್ಣುಮಂತ್ರೋಪದೇಶವನ್ನು ಹೊಂದದವನೂ, ಏಕಾದಶೀ ವ್ರತವನ್ನಾಚರಿಸದವನೂ, ಶ್ರೀಕೃಷ್ಣಜನ್ಮಾಷ್ಟಮೀ, ಮಹಾಶಿವರಾತ್ರಿ, ಶ್ರೀರಾಮನವಮೀ ಮುಂತಾದ ದಿವಸಗಳಲ್ಲಿ ಊಟ ಮಾಡುವವನೂ, ಪಿತೃದೇವತೆಗಳ ತರ್ಪಣಾದಿಕಾರ್ಯವನ್ನು ಆಚರಿಸದವನೂ ಕೃತಘ್ನನೆನಿಸುವನು.

೪೮. ಆ ಕೃತಘ್ನನು ಹದಿನಾಲ್ಕು ಇಂದ್ರರ ಜೀವಿತಕಾಲದವರೆಗೆ ಕುಂಭೀಪಾಕ ನರಕದಲ್ಲಿ ನರಳಿ ಅನಂತರ ಏಳು ಜನ್ಮಗಳಲ್ಲಿ ಚಂಡಾಲನಾಗಿ ಹುಟ್ಟುವನು.

೪೯. ನೂರು ಜನ್ಮಗಳಲ್ಲಿ ಹದ್ದುವೂ ಮತ್ತೆನೂರು ಜನ್ಮಗಳಲ್ಲಿ ಹಂದಿಯೂ ಆಗಿ ಜನಿಸಿ ಪುನಃ ಬ್ರಾಹ್ಮಣನಾಗಿ ಶೂದ್ರರಿಗೆ ಅಡಿಗೆ ಮಾಡುವವನಾಗುವನು.

ತತೋ ಭವೇಜ್ಜನ್ಮ ಸಪ್ತ ಬ್ರಾಹ್ಮಣೋ ವೃಷವಾಹಕಃ ।
ಶೂದ್ರಾಣಾಂ ಶವದಾಹೀ ಚ ಭವೇತ್ಸಪ್ತಸು ಜನ್ಮಸು ॥ ೫೦ ॥

ದ್ವಿಜೋ ಭೂತ್ವಾ ಸಪ್ತಜನೌ ಭಾರತೇ ವೃಷಲೀಪತಿಃ ।
ಭುಕ್ತ್ವಾ ಸ್ವಭೋಗಲೇಶಂ ಚ ಭ್ರಮಿತ್ವಾ ಯಾತಿ ರೌರವಂ ॥ ೫೧ ॥

ಪುನಃ ಪುನಃ ಪಾಪಯೋನಿಂ ನರಕಂ ಚ ಪುನಃ ಪುನಃ ।
ತತೋ ಭವೇದ್ಗರ್ದಭಶ್ಚ ಮಾರ್ಜಾರಃ ಪಂಚಜನ್ಮಸು ॥ ೫೨ ॥

ಪಂಚಜನ್ಮಸು ಮಂಡೂಕೋ ಭವೇಚ್ಛುದ್ಧಸ್ತತಃ ಕ್ರಮಾತ್ ॥ ೫೩ ॥

॥ ಸುಯಜ್ಞ ಉವಾಚ ॥

ಶೂದ್ರಾಣಾಂ ಸೂಪಕರಣೇ ಶೂದ್ರಾಣಾಂ ಶವದಾಹನೇ ।
ಶೂದ್ರಾನ್ನಭೋಜನೇ ವಾಽಪಿ ಶೂದ್ರಸ್ತ್ರೀಗಮನೇಽಪಿ ಚ ॥ ೫೪ ॥

---

೫೦. ಅನಂತರ ಏಳು ಜನ್ಮಗಳಲ್ಲಿ ಬ್ರಾಹ್ಮಣನಾಗಿ ಎತ್ತುಗಳಿಂದ ಹೊಲವನ್ನುಳುತ್ತಲೂ ಪುನಃ ಏಳು ಜನ್ಮಗಳು ಶೂದ್ರರ ಹೆಣಗಳನ್ನು ಸುಡುತ್ತಲೂ ಜೀವಿಸಿಕೊಂಡಿರುವನು.

೫೧. ಮತ್ತೆ ಭರತಖಂಡದಲ್ಲಿ ಏಳು ಜನ್ಮಗಳು ಬ್ರಾಹ್ಮಣನಾಗಿ ಹುಟ್ಟಿದರೂ ಶೂದ್ರಸ್ತ್ರೀಯ ಪತಿಯಾಗುವನು. ಅಲ್ಪಸ್ವಲ್ಪ ಐಹಿಕಸುಖಗಳನ್ನನುಭವಿಸಿ ಅಲೆಯುತ್ತಾ ಕೊನೆಗೆ ರೌರವನರಕಕ್ಕೆ ಹೋಗುವನು.

೫೨-೫೩. ಹೀಗೆ ಪಾಪಿಯೋನಿಯಲ್ಲಿ ಜನನ ಮತ್ತು ನರಕ ಗಮನಗಳನ್ನು ಮತ್ತೆಮತ್ತೆ ಅನುಭವಿಸಿ ಅನಂತರ ಐದು ಜನ್ಮಗಳಲ್ಲಿ ಕತ್ತೆ ಮತ್ತು ಬೆಕ್ಕಾಗಿ ಹುಟ್ಟುವನು. ಮುಂದೆ ಐದು ಜನ್ಮಗಳಲ್ಲಿ ಕಪ್ಪೆಯಾಗಿ ಹುಟ್ಟಿ ಕ್ರಮವಾಗಿ ಶುದ್ಧನಾಗುವನು.

೫೪-೫೫. ಸುಯಜ್ಞ:—ಎಲೈ ಮುನಿಯೇ, ಶೂದ್ರರ ಪಾಕಕಾರ್ಯದಿಂದಲೂ, ಶವವನ್ನು ದಹಿಸುವುದರಿಂದಲೂ, ಅವರ ಅನ್ನವನ್ನುಣ್ಣುವುದ

ಬ್ರಾಹ್ಮಣಾನಾಂ ಚ ಕೋ ದೋಷೋ ವೃಷಾಣಾಂ ವಾಹನೇ ತಥಾ ।
ಏತಾನ್ಸರ್ವಾನ್ಸಮಾಲೋಚ್ಯ ಬ್ರೂಹಿ ಮಾಂ ನಿಶ್ಚಯಂ ಮುನೇ ॥ ೫೫ ॥

॥ ಪರಾಶರ ಉವಾಚ ॥

ಶೂದ್ರಾಣಾಂ ಸೂಪಕಾರಶ್ಚ ಯೋ ವಿಪ್ರೋ ಜ್ಞಾನದುರ್ಬಲಃ ।
ಅಸಿಪತ್ರೇ ವಸತ್ಯೇವ ಯುಗಾನಾಮೇಕಸಪ್ತತಿಃ ॥ ೫೬ ॥

ತತೋ ಭವೇದ್ಗರ್ದಭಶ್ಚ ಮೂಷಿಕಃ ಸಪ್ತಜನ್ಮಸು ।
ತೈಲಕೀಟಸ್ಸಪ್ತಜನ್ಮಸ್ವತಃ ಶುದ್ಧೋ ಭವೇನ್ನರಃ ॥ ೫೭ ॥

॥ ಜರತ್ಕಾರುರುವಾಚ ॥

ಭೃತ್ಯದ್ವಾರಾ ಸ್ವಯಂ ವಾಪಿ ಯೋ ವಿಪ್ರೋ ವೃಷವಾಹಕಃ ।
ಸ ಕೃತಘ್ನ ಇತಿ ಖ್ಯಾತಃ ಪ್ರಸಿದ್ಧೋ ಭಾರತೇ ನೃಪ ॥ ೫೮ ॥

---

ರಿಂದಲೂ, ಶೂದ್ರಸ್ತ್ರೀಸಂಗಮದಿಂದಲೂ, ಎತ್ತುಗಳಿಂದ ಉತ್ತು ಜೀವಿಸುವುದರಿಂದಲೂ, ಬ್ರಾಹ್ಮಣರಿಗೆ ಸಂಭವಿಸುವ ದೋಷವೇನೆಂಬುದನ್ನು ವಿಮರ್ಶಿಸಿ ನನಗೆ ನಿಶ್ಚಯವಾಗಿ ತಿಳಿಸು.

೫೬. ಪರಾಶರ :—ಯಾವ ಬ್ರಾಹ್ಮಣನು ತಿಳಿವಳಿಕೆ ಸಾಲದೆ ಶೂದ್ರರ ಸೂಪಕಾರ್ಯದಲ್ಲಿ ತೊಡಗುವನೋ ಅವನು ಇಪ್ಪತ್ತೊಂದು ಯುಗಗಳ ಕಾಲ ಅಸಿಪತ್ರವೆಂಬ ನರಕದಲ್ಲಿ ತೊಳಲುವನು.

೫೭. ಅನಂತರ ಏಳು ಜನ್ಮಗಳಲ್ಲಿ, ಕತ್ತೆ ಮತ್ತು ಇಲಿಯಾಗಿಯೂ ಮತ್ತೇಳು ಜನ್ಮಗಳಲ್ಲಿ ತೈಲಕೀಟ (ಎಣ್ಣೆಯ ಹುಳು)ವಾಗಿಯೂ ಜನಿಸಿ, ಅನಂತರ ಶುಚಿಯಾಗುವನು.

೫೮. ಜರತ್ಕಾರು :—ಎಲೈ ರಾಜನೇ, ಭರತಖಂಡದಲ್ಲಿ ತಾನೇ ಆಗಲೀ, ತನ್ನ ಸೇವಕನ ಕೈಯ್ಯಿಂದಾಗಲೀ, ಎತ್ತುಗಳನ್ನು ಹೂಡಿ ನೇಗಿಲು, ಗಾಡಿ ಮುಂತಾದವುಗಳನ್ನು ಎಳೆಸುವ ಬ್ರಾಹ್ಮಣನು ಕೃತಘ್ನನೆನಿಸಿಕೊಳ್ಳುವನು.

ಬ್ರಹ್ಮಹತ್ಯಾಸಮಂ ಪಾಪಂ ತನ್ನಿತ್ಯಂ ವೃಷತಾಡನೇ ।
ವೃಷಪೃಷ್ಠೇ ಭಾರದಾನಾತ್ಪಾಪಂ ತದ್ದ್ವಿಗುಣಂ ಭವೇತ್ ॥ ೫೯ ॥

ಸೂರ್ಯೋತಪೇ ವಾಹಯೇದ್ಯಃ ಕ್ಷುಧಿತಂ ತೃಷಿತಂ ವೃಷಂ ।
ಬ್ರಹ್ಮಹತ್ಯಾಶತಂ ಪಾಪಂ ಲಭತೇ ನಾತ್ರ ಸಂಶಯಃ ॥ ೬೦ ॥

ಅನ್ನಂ ವಿಷ್ಠಾ ಜಲಂ ಮೂತ್ರಂ ವಿಪ್ರಾಣಾಂ ವೃಷವಾಹಿನಾಂ ।
ನಾಧಿಕಾರೋ ಭವೇತ್ತೇಷಾಂ ಪಿತೃದೇವಾರ್ಚನೇ ನೃಪ ॥ ೬೧ ॥

ಲಾಲಾಕುಂಡೇ ವಸತ್ಯೇವ ಯಾವಚ್ಚಂದ್ರದಿವಾಕರೌ ।
ವಿಷ್ಠಾಭಕ್ಷ್ಯಂ ಮೂತ್ರಜಲಂ ತತ್ರ ತಸ್ಯ ಭವೇದ್ಧ್ರುವಂ ॥ ೬೨ ॥

ತ್ರಿಸಂಧ್ಯಂ ತಾಡಯೇತ್ತಂ ಚ ಶೂಲೇನ ಯಮಕಿಂಕರಃ ।
ಉಲ್ಕಾಂ ದದಾತಿ ಮುಖತಃ ಸೂಚ್ಯಾ ಕೃಂತತಿ ಸಂತತಂ ॥ ೬೩ ॥

---

೫೯. ಎತ್ತುಗಳನ್ನು ಹೊಡೆವ ಮಾತ್ರದಿಂದಲೇ ಬ್ರಹ್ಮಹತ್ಯೆಗೆ ಸಮನಾದ ಪಾಪವೂ, ಅವುಗಳ ಮೇಲೆ ಭಾರ ಹೇರುವುದರಿಂದ ಅದಕ್ಕೆರಡರಷ್ಟು ಪಾಪವೂ ಸಂಘಟಿಸುವುದು.

೬೦. ಹಸಿದು ಬಾಯಾರಿ ಬಳಲಿರುವ ಎತ್ತನ್ನು, ಬಿಸಲಿನಲ್ಲಿ ನೇಗಿಲು ಮತ್ತು ಗಾಡಿಗೆ ಕಟ್ಟಿ ಎಳೆಸುವ ಬ್ರಾಹ್ಮಣನು ನೂರು ಬ್ರಹ್ಮಹತ್ಯೆಗಳ ದೋಷವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

೬೧. ವೃಷವಾಹಕರಾದ ಬ್ರಾಹ್ಮಣರ ಮನೆಯ ಅನ್ನವು ಮಲಕ್ಕೂ, ನೀರು ಮೂತ್ರಕ್ಕೂ ಸದೃಶವೆನಿಸುವುದು. ಎಲೈ ರಾಜನೇ, ಅಂಥ ಬ್ರಾಹ್ಮಣರಿಗೆ ಪಿತೃ ದೇವತೆಗಳ ಅರ್ಚನೆಯಲ್ಲಿ ಅಧಿಕಾರವಿರುವುದಿಲ್ಲ.

೬೨. ಅಲ್ಲದೆ ಅವನು ಚಂದ್ರಸೂರ್ಯರಿರುವವರೆಗೆ ಲಾಲಾಕುಂಡವೆಂಬ ನರಕದಲ್ಲಿ ನರಳುವನು. ಅಲ್ಲಿ ಅವನಿಗೆ ಮಲಮೂತ್ರಗಳೇ ಅನ್ನಪಾನಾದಿಗಳಾಗುವುವು.

೬೩. ಯಮದೂತರು ಅವನನ್ನು ಮೂರು ಹೊತ್ತೂ ಶೂಲಾಯುಧದಿಂದ ತಿವಿಯುವರು. ಮುಖಕ್ಕೆ ಕೊಳ್ಳಿಯಿಂದ ಸೀಯುವರು ಮತ್ತು ಸೂಜಿಯಿಂದ ಯಾವಾಗಲೂ ಚುಚ್ಚುತ್ತಿರುವರು.

ಷಷ್ಠಿವರ್ಷಸಹಸ್ರಾಣಿ ವಿಷ್ಠಾಯಾಂ ಚ ಕೃಮಿರ್ಭವೇತ್ ।
ತತಃ ಕಾಕೋ ಪಂಚಜನ್ಮಸ್ವಥೈವಂ ಬಕ ಏವ ಚ ॥ ೬೪ ॥

ಪಂಚಜನ್ಮಸು ಗೃಧ್ರಶ್ಚ ಶೃಗಾಲಃ ಸಪ್ತಜನ್ಮಸು ।
ತತೋ ದರಿದ್ರಶ್ಶೂದ್ರಶ್ಚ ಮಹಾವ್ಯಾಧಿಸ್ತತಃ ಶುಚಿಃ ॥ ೬೫ ॥

॥ ಭಾರದ್ವಾಜ ಉವಾಚ ॥

ಶೂದ್ರಾಣಾಂ ಶವದಾಹೀ ಯಃ ಸ ಕೃತಘ್ನ ಇತಿ ಸ್ಮೃತಃ ।
ವಯಃ ಪ್ರಮಾಣಾಂ ರಾಜೇಂದ್ರ ಬ್ರಹ್ಮಹತ್ಯಾಂ ಲಭೇದ್ಧ್ರುವಂ ॥ ೬೬ ॥

ತತ್ತುಲ್ಯಯೋನಿಭ್ರಮಣಾತ್ತತ್ತುಲ್ಯನರಕಾಚ್ಛುಚಿಃ ॥ ೬೭ ॥

ಯೋ ದೋಷೋ ಬ್ರಾಹ್ಮಣಾನಾಂ ಚ ಶೂದ್ರಾಣಾಂ ಶವದಾಹನೇ ।
ತಾವದೇವ ಭವೇದ್ದೋಷಃ ಶೂದ್ರಶ್ರಾದ್ಧಾನ್ನಭೋಜನೇ ॥ ೬೮ ॥

---

೬೪. ಅನಂತರ ಅವನು ಅರವತ್ತುಸಾವಿರ ವರ್ಷಗಳು ಮಲಕ್ರಿಮಿಯಾಗಿಯೂ, ಐದು ಜನ್ಮಗಳಲ್ಲಿ ಕಾಗೆಯಾಗಿಯೂ ಮತ್ತು ಬಕಪಕ್ಷಿಯಾಗಿಯೂ ಜನಿಸುವನು.

೬೫. ಐದು ಜನ್ಮಗಳಲ್ಲಿ ಹದ್ದುವೂ, ಏಳು ಜನ್ಮಗಳಲ್ಲಿ ನರಿಯೂ, ಅನಂತರ ಮಹಾರೋಗಿಯೂ ದರಿದ್ರನೂ ಆದ ಶೂದ್ರನೂ ಆಗಿ ಜನಿಸಿ ಪುನಃ ಶುದ್ಧಿ ಹೊಂದುವನು.

೬೬–೬೭. ಭಾರದ್ವಾಜ :—ಶೂದ್ರರ ಶವವನ್ನು ದಾಹಮಾಡುವ ಬ್ರಾಹ್ಮಣನು ಕೃತಘ್ನನೆನಿಸುವನು. ಅವನು ತನ್ನ ಆಯುಸ್ಸಿನ ಪರಿಮಿತಿಯಷ್ಟು ಸಂಖ್ಯೆ ಬ್ರಹ್ಮಹತ್ಯಾಪಾಪವನ್ನು ಹೊಂದುವನು. ಅಷ್ಟೇ ಸಂಖ್ಯಾಪರಿಮಿತಿಯುಳ್ಳ ಯೋನಿಗಳಲ್ಲಿ ಜನಿಸಿ, ಅಷ್ಟೇ ನರಕಗಳಲ್ಲಿ ನರಳಿ ಮುಂದೆ ಶುಚಿಯಾಗುವನು.

೬೮. ಬ್ರಾಹ್ಮಣರಿಗೆ ಶೂದ್ರರ ಶವವನ್ನು ಸುಡುವುದರಿಂದ ಎಷ್ಟು ದೋಷ ಸಂಘಟಿಸುವುದೋ, ಶೂದ್ರರ ಶ್ರಾದ್ಧಾನ್ನವನ್ನು ಊಟಮಾಡುವುದರಿಂದಲೂ ಅಷ್ಟೇ ದೋಷವು ಸಂಭವಿಸುವುದು.

|| ವಿಭಾಂಡಕ ಉವಾಚ ||

ಪಿತೃಶ್ರಾದ್ಧೇ ಚ ಶೂದ್ರಾಣಾಂ ಭುಂಕ್ತೇ ಯೋ ಬ್ರಾಹ್ಮಣೋಽಧಮಃ ।
ಸುರಾಪೀತೀ ಬ್ರಹ್ಮಘಾತೀ ಪಿತೃದೇವಾರ್ಚನೋದ್ಭಹಿಃ || ೬೯ ||

|| ಮಾರ್ಕಂಡೇಯ ಉವಾಚ ||

ಯೋ ದೋಷೋ ಬ್ರಾಹ್ಮಣಾನಾಂ ಚ ಶೂದ್ರಸ್ತ್ರೀಗಮನೇ ನೃಪ ।
ಅಹಂ ವಕ್ಷ್ಯಾಮಿ ವೇದೋಕ್ತಂ ಸಾವಧಾನಂ ನಿಶಾಮಯ || ೭೦ ||

ಕೃತಘ್ನಾನಾಂ ಪ್ರಧಾನಶ್ಚ ಯೋ ವಿಪ್ರೋ ವೃಷಲೀಪತಿಃ ।
ಕೃಮಿದಂಷ್ಟ್ರೇ ವಸೇತ್ಸೋಽಪಿ ಯಾವದಿಂದ್ರಾಶ್ಚತುರ್ದಶ || ೭೧ ||

ಕೃಮಿಭಕ್ಷ್ಯೋ ಭವೇದ್ವಿಪ್ರೋ ವಿಹ್ವಲೋ ಯಮಕಿಂಕರೈಃ ।
ಪ್ರತಿಮಾಂ ತಾಂ ತಪ್ತಲೌಹೀಮಾಶ್ಲೇಷಯತಿ ನಿತ್ಯಶಃ || ೭೨ ||

---

೬೯. ವಿಭಾಂಡಕ :—ಶೂದ್ರರ ಪಿತೃಶ್ರಾದ್ಧಾನ್ನವನ್ನು ಭುಜಿಸುವ ಬ್ರಾಹ್ಮಣನು, ಬ್ರಹ್ಮಹತ್ಯಾ ಮತ್ತು ಸುರಾಪಾನ ಮಾಡಿದವರ ಪಂಕ್ತಿಯಲ್ಲಿ ಗಣಿಸಲ್ಪಡುವನು.

೭೦. ಮಾರ್ಕಂಡೇಯ :—ಎಲೈ ರಾಜನೇ, ಶೂದ್ರಸ್ತ್ರೀ ಸಂಗಮದಿಂದ ಬ್ರಾಹ್ಮಣರಿಗೆ ಯಾವ ದೋಷ ಬರುವುದೆಂದು ವೇದೋಕ್ತವಾಗಿದೆಯೋ ಅದನ್ನು ನಾನು ವಿವರಿಸುವೆನು ಸಾವಧಾನದಿಂದ ಕೇಳು.

೭೧. ಶೂದ್ರಸ್ತ್ರೀಪತಿಯಾದ ಬ್ರಾಹ್ಮಣನು ಕೃತಘ್ನರಿಗೆಲ್ಲ ಅಗ್ರೇಸರನೆನಿಸಿ, ಚತುರ್ದಶೇಂದ್ರರ ಜೀವಿತಕಾಲದವರೆಗೆ ಕೃಮಿದಂಷ್ಟ್ರವೆಂಬ ನರಕದಲ್ಲಿ ತೊಳಲುವನು.

೭೨. ಕೃಮಿಕೀಟಗಳಿಂದ ಭಕ್ಷಿತನಾದ ಆ ಬ್ರಾಹ್ಮಣನು ಯಮದೂತರಿಂದ ಶಿಕ್ಷೆಹೊಂದುತ್ತ ನಿತ್ಯವೂ ಚೆನ್ನಾಗಿ ಕಾದು ಕುದಿಯುತ್ತಿರುವ ಲೋಹದ ಪ್ರತಿಮೆಯನ್ನು ಆಲಂಗಿಸಿಕೊಳ್ಳುತ್ತಿರುವನು.

ತತಶ್ಚ ಪುಂಶ್ಚಲೀಯೋನೌ ಕೃಮಿರ್ಭವತಿ ನಿಶ್ಚಿತಂ ।
ಏವಂ ವರ್ಷಸಹಸ್ರಂ ಚ ತತಃ ಶೂದ್ರಸ್ತತಃ ಶುಚಿಃ ॥ ೭೩ ॥

॥ ಸುಯಜ್ಞ ಉವಾಚ ॥

ಅನ್ಯೇಷಾಂ ಚ ಕೃತಘ್ನಾನಾಂ ವದ ಕರ್ಮಫಲಂ ಮುನೇ ।
ಶ್ಲಾಘ್ಯೋ ಮೇ ಬ್ರಾಹ್ಮಶಾಪಶ್ಚ ಕಸ್ಯ ಸಂಪದ್ವಿನಾಽಽಪದಂ ॥ ೭೪ ॥

ಧನ್ಯೋಽಹಂ ಕೃತಕೃತ್ಯೋಽಹಂ ಸಫಲಂ ಜೀವನಂ ಮಮ ।
ಆಗತಾಸ್ತು ಯತೋ ಮುಕ್ತಾ ಮದ್ಗೇಹೇ ಮುನಯಃ ಸುರಾಃ ॥ ೭೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ನೃಪಮುನಿಸಂವಾದೇ
ರಾಧೋಪಾಖ್ಯಾನೇ ಕರ್ಮವಿಪಾಕೋ ನಾಮ
ಏಕಪಂಚಾಶತ್ತಮೋಽಧ್ಯಾಯಃ

---

೭೩. ಅನಂತರ ವೇಶ್ಯಾಸ್ತ್ರೀಯ ಯೋನಿಯಲ್ಲಿ ಕೃಮಿಯಾಗಿ ಜನಿಸಿದ್ದು ಸಾವಿರವರ್ಷಗಳು ತೊಳಲಿ ಮತ್ತೆ ಶೂದ್ರನಾಗಿ ಜನಿಸಿ ಅನಂತರ ಶುಚಿಹೊಂದುವನು.

೭೪. ಸುಯಜ್ಞ :—ಎಲೈ ಮಹರ್ಷಿಯೇ, ಇತರ ಕೃತಘ್ನರಿಗೆ ದೊರಕುವ ದುಷ್ಫಲಗಳನ್ನೂ ಕೂಡ ವಿವರಿಸಿ ಹೇಳು. ನನಗೆ ಬ್ರಹ್ಮಶಾಪವೊದಗಿದುದರಿಂದ ಈ ವಿಷಯಗಳನ್ನೆಲ್ಲ ತಿಳಿಯಲು ಒಂದು ಸುಯೋಗ ದೊರೆತಂತಾಯಿತು. ಲೋಕದಲ್ಲಿ ಯಾರಿಗೆ ತಾನೆ ಕಷ್ಟವಿಲ್ಲದೆ ಸುಖವು ದೊರೆಯುವುದು?

೭೫. ಸಕಲ ಪಾಪನಿರ್ಮುಕ್ತರಾದ ಮುನಿಗಳೂ, ದೇವತೆಗಳೂ ಕೂಡ ಇಂದು ನನ್ನ ಮನೆಗೆ ಬಂದುದರಿಂದ ನಾನೇ ಧನ್ಯನು ಮತ್ತು ಕೃತಕೃತ್ಯನು. ನನ್ನ ಜೀವಿತವು ಇಂದಿಗೆ ಸಫಲವಾಯಿತು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಸುಯಜ್ಞ
ಮತ್ತು ಮುನಿಗಳ ಸಂವಾದದಲ್ಲಿ ಕರ್ಮವಿಪಾಕವನ್ನು ತಿಳಿಸುವ
ಐವತ್ತೊಂದನೆಯ ಅಧ್ಯಾಯವು ಮುಗಿದುದು.

## ಐವತ್ತೊಂದನೆಯ ಅಧ್ಯಾಯದ ಸಾರಾಂಶವು

ಅತಿಥಿಯಾಗಿ ಬಂದಿದ್ದ ಬ್ರಾಹ್ಮಣನನ್ನು ಸುಯಜ್ಞನು ಗೌರವಿಸದೆ ಅಸಡ್ಡೆ ಮಾಡಿದುದನ್ನು ನೋಡಿ ಸನತ್ಕುಮಾರಾದಿ ಮಹರ್ಷಿಗಳು ಅತಿಥಿಸತ್ಕಾರಮಾಡದವನ ಪಾಪಗಳನ್ನು ವಿವರಿಸಿ, ಆ ಬ್ರಾಹ್ಮಣನ ಕ್ಷಮೆ ಬೇಡಿ ಆತಿಥ್ಯವನ್ನು ಕೈಗೊಳ್ಳಬೇಕೆಂದು ವಿನಯದಿಂದ ಕೇಳಿಕೊಂಡರು. ಆಗ ಸುಯಜ್ಞನು ಆ ಮಹರ್ಷಿಗಳನ್ನು ಕುರಿತು ಧರ್ಮಸೂಕ್ಷ್ಮವನ್ನು ವಿಸ್ತರಿಸಿ ಹೇಳಬೇಕೆಂದು ಕೇಳಲು ವಸಿಷ್ಠಾದಿ ಮಹರ್ಷಿಗಳು ಸ್ತ್ರೀಹತ್ಯಾದಿ ಮಹಾಪಾಪಗಳ ಸ್ವರೂಪವನ್ನೂ ಅವುಗಳಿಂದ ವಿಮುಕ್ತರಾಗುವ ಬಗೆಯನ್ನೂ ವಿವರಿಸಿ 'ಕೃತಘ್ನ'ರ ಸ್ವರೂಪವನ್ನು ವಿಸ್ತಾರವಾಗಿ ಹೇಳಿ ಅವರ ಪರಿಣಾಮವನ್ನೂ ಸ್ಪಷ್ಟಪಡಿಸಿದರು. ಬ್ರಾಹ್ಮಣಶಾಪಕ್ಕೊಳಗಾಗಿದ್ದ ಸುಯಜ್ಞನು ಅವೆಲ್ಲವನ್ನೂ ಸಾವಧಾನದಿಂದ ಕೇಳಿ ಇತರ 'ಕೃತಘ್ನ'ರ ದುಃಸ್ಥಿತಿಯನ್ನೂ ಕೇಳಲು ಬಯಸಿದನು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### ॥ ದ್ವಿಪಂಚಾಶತ್ತಮೋಽಧ್ಯಾಯಃ ॥

॥ ಶ್ರೀ ಪಾರ್ವತ್ಯುವಾಚ ॥

ಅನ್ಯೇಷಾಂ ಚ ಕೃತಘ್ನಾನಾಂ ಯದ್ಯತ್ಕರ್ಮಫಲಂ ಪ್ರಭೋ ।
ತೇಷಾಂ ಕಿಮೂಚುರ್ಮುನಯೋ ವೇದವೇದಾಂಗಪಾರಗಾಃ ॥ ೧ ॥

॥ ಶ್ರೀ ಮಹೇಶ್ವರ ಉವಾಚ ॥

ಪ್ರಶ್ನಂ ಕುರ್ವತಿ ರಾಜೇಂದ್ರೇ ಸರ್ವೇಷು ಮುನಿಷು ಪ್ರಿಯೇ ।
ತತ್ರ ಪ್ರವಕ್ತುಮಾರೇಭೇ ಋಷಿರ್ನಾರಾಯಣೋ ಮಹಾನ್ ॥ ೨ ॥

---

### ಐವತ್ತೆರಡನೆಯ ಅಧ್ಯಾಯವು

೧. ಶ್ರೀ ಪಾರ್ವತಿ :—ಎಲೈ ಪ್ರಭುವೇ, ಇತರ ಕೃತಘ್ನರಿಗೂ ಕೂಡ ಅವರವರ ದುಷ್ಕರ್ಮಕ್ಕೆ ಅನುಗುಣವಾಗಿ ಯಾವಯಾವ ದುಷ್ಫಲವು ಲಭಿಸುವುದು. ವೇದವೇದಾಂಗ ಪಾರಂಗತನಾದ ಮುನಿಗಳು ಅದನ್ನು ಹೇಗೆ ವಿವರಿಸಿ ಹೇಳಿರುವರು.

೨. ಶ್ರೀ ಮಹೇಶ್ವರ:—ಎಲೌ ಪ್ರಿಯಳೇ, ಆ ಸುಯಜ್ಞನೆಂಬ ರಾಜನು ಈ ರೀತಿಯಾಗಿ ಎಲ್ಲ ಮಹರ್ಷಿಗಳನ್ನೂ ಪ್ರಶ್ನಿಸುತ್ತಿರುವಾಗ ನಾರಾಯಣಮಹರ್ಷಿಯು ಅವನಿಗೆ ಉತ್ತರ ಕೊಡಲಾರಂಭಿಸಿದನು.

|| ಶ್ರೀ ನಾರಾಯಣ ಉವಾಚ ||

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇತ್ತು ಯಃ |
ಸ ಕೃತಘ್ನ ಇತಿ ಜ್ಞೇಯಃ ಫಲಂ ಚ ಶ್ರುಣು ಭೂಮಿಪ || ೩ ||

ಯಾವಂತೋ ರೇಣವಃ ಸಿಕ್ತಾ ವಿಪ್ರಾಣಾಂ ನೇತ್ರಬಿಂದುಭಿಃ |
ತಾವದ್ವರ್ಷಸಹಸ್ರಂ ಚ ಶೂಲಪ್ರೋತೇ ಸ ತಿಷ್ಠತಿ || ೪ ||

ತಪ್ತಾಂಗಾರಂ ಚ ತದ್ಭಕ್ಷ್ಯಂ ಪಾನಂ ವೈ ತಪ್ತಮೂತ್ರಕಂ |
ತಪ್ತಾಂಗಾರೇ ಚ ಶಯನಂ ತಾಡಿತೋ ಯಮಕಿಂಕರೈಃ || ೫ ||

ತದಂತೇ ಚ ಮಹಾಪಾಪೀ ವಿಷ್ಠಾಯಾಂ ಜಾಯತೇ ಕೃಮಿಃ |
ಷಷ್ಠಿವರ್ಷಸಹಸ್ರಾಣಿ ದೇವಮಾನೇನ ಭಾರತೇ || ೬ ||

---

೩. ಶ್ರೀ ನಾರಾಯಣ :—ಎಲೈ ರಾಜೇಂದ್ರನೇ, ಬ್ರಾಹ್ಮಣನ ಜೀವನಕ್ಕಾಗಿ ತಾನು ದಾನಮಾಡಿರುವ ಅಥವಾ ಇತರರು ದಾನಮಾಡಿರುವ ಸ್ವತ್ತನ್ನು ಅಪಹರಿಸುವವನು ಕೃತಘ್ನನೆನಿಸಿಕೊಳ್ಳುವನು. ಅವರ ದುಷ್ಫಲವನ್ನು ವಿವರಿಸುವೆನು ಕೇಳು.

೪. ಸ್ವತ್ತನ್ನು ಕಳೆದುಕೊಂಡ ಆ ಬ್ರಾಹ್ಮಣರ ಕಂಬನಿಯಿಂದ ಎಷ್ಟು ಧೂಳೀಕಣಗಳು ನೆನೆದಿರುವುವೋ ಅಷ್ಟು ಸಹಸ್ರವರ್ಷಗಳಕಾಲ ಶೂಲಪ್ರೋತವೆಂಬ ನರಕದಲ್ಲಿ ಆ ಕೃತಘ್ನನು ನರಳುವನು.

೫. ಅಲ್ಲಿ ಅವನು ಕೆಂಪಗೆ ಕಾದಿರುವ ಕೆಂಡವನ್ನೇ ತಿನ್ನುತ್ತ, ಕುದಿಯುತ್ತಿರುವ ಮೂತ್ರವನ್ನೇ ಪಾನಮಾಡುತ್ತ, ಕೆಂಡದ ಮೇಲೆಯೇ ಮಲಗಿಕೊಂಡು ಯಮದೂತರಿಂದ ಶಿಕ್ಷೆಹೊಂದುತ್ತಿರುವನು.

೬. ಅನಂತರ ಮಹಾಪಾಪಿಯಾದ ಅವನು ದೇವತೆಗಳ ಲೆಕ್ಕದಂತೆ ಅರವತ್ತು ಸಾವಿರ ವರ್ಷಗಳು ಭಾರತದಲ್ಲಿ ಮಲಕ್ರಿಮಿಯಾಗಿ ಜನಿಸಿ ನರಳುವನು.

ತತೋ ಭವೇದ್ಭೂಮಿಹೀನಃ ಪ್ರಜಾಹೀನಶ್ಚ ಮಾನವಃ ।
ದರಿದ್ರಃ ಕೃಪಣೋ ರೋಗೀ ಶೂದ್ರೋ ನಿಂದ್ಯಸ್ತತಃ ಶುಚಿಃ ॥ ೭ ॥

॥ ನಾರದ ಉವಾಚ ॥

ಹಂತಿ ಯಃ ಪರಕೀರ್ತಿಂ ಚ ಸ್ವಕೀರ್ತಿಂ ವಾ ನರಾಧಮಃ ।
ಸ ಕೃತಘ್ನ ಇತಿ ಖ್ಯಾತಸ್ತತ್ಫಲಂ ಚ ನಿಶಾಮಯ ॥ ೮ ॥

ಅಂಧಕೂಪೇ ವಸೇತ್ಸೋಽಪಿ ಯಾವದಿಂದ್ರಾಶ್ಚತುರ್ದಶ ।
ಕೀಟೈರ್ನಕುಲಗೃಧ್ರೈಶ್ಚ ಭಕ್ಷಿತಃ ಸತತಂ ನೃಪ ॥ ೯ ॥

ತಪ್ತಕ್ಷಾರೋದಕಂ ಪಾಪೀ ನಿತ್ಯಂ ಪಿಬತಿ ವೈ ತತಃ ।
ಸಪ್ತಜನ್ಮಸ್ವತಃ ಸರ್ಪಃ ಕಾಕಃ ಪಂಚಸ್ವತಃ ಶುಚಿಃ ॥ ೧೦ ॥

---

೭. ಅನಂತರ ಭೂಮಿಯೂ, ಮಕ್ಕಳೂ ಇಲ್ಲದ ದರಿದ್ರನೂ, ರೋಗಿಯೂ ಆದ ಶೂದ್ರನಾಗಿ ಬಹಳ ಕಾರ್ಪಣ್ಯದಿಂದ ನಿಂದ್ಯಜೀವನವನ್ನು ಮಾಡಿಕೊಂಡಿದ್ದು ಪುನಃ ಶುಚಿಯಾಗುವನು.

೮. ನಾರದ :—ಯಾವ ನೀಚಮನುಜನು ಇತರರಿಗೆ ಬರುವ ಕೀರ್ತಿಯನ್ನೂ ತಪ್ಪಿಸಿ, ತನಗೂ ಕೀರ್ತಿಯುಂಟಾಗದಂತೆ ಮಾಡಿಕೊಳ್ಳುವನೋ ಅವನೂ ಕೃತಘ್ನ ನೆನಿಸುವನು. ಅವನಿಗುಂಟಾಗುವ ದುಷ್ಫಲವನ್ನು ವಿವರಿಸುವೆನು.

೯. ಎಲೈ ರಾಜನೇ, ಆ ಕೃತಘ್ನನು ಹದಿನಾಲ್ಕು ಇಂದ್ರರ ಜೀವಿತಕಾಲದ ವರೆಗೆ ಅಂಧಕೂಪವೆಂಬ ನರಕದಲ್ಲಿ ನರಳುತ್ತಿದ್ದು, ಕ್ರಿಮಿಕೀಟಗಳಿಂದಲೂ ಮುಂಗಸಿ, ಹದ್ದು ಮುಂತಾದ ನೀಚಪ್ರಾಣಿಗಳಿಂದಲೂ ಯಾವಾಗಲೂ ತಿನ್ನಲ್ಪಡುತ್ತಿರುವನು.

೧೦. ಆ ಪಾಪಿಯು ಚೆನ್ನಾಗಿ ಕುದಿಯುತ್ತಿರುವ ಉಪ್ಪುನೀರನ್ನು ನಿತ್ಯವೂ ಕುಡಿದುಕೊಂಡು ಕಾಲ ಕಳೆಯುತ್ತಾ ಏಳು ಜನ್ಮಗಳಲ್ಲಿ ಹಾವಾಗಿಯೂ, ಐದು ಜನ್ಮಗಳಲ್ಲಿ ಕಾಗೆಯಾಗಿಯೂ ಜನಿಸಿ ಮತ್ತೆ ಶುಚಿಯಾಗುವನು.

|| ದೇವಲ ಉವಾಚ ||

ಬ್ರಹ್ಮಸ್ವಂ ವಾ ಗುರುಸ್ವಂ ವಾ ದೇವಸ್ವಂ ವಾಪಿ ಯೋ ಹರೇತ್ ।
ಸ ಕೃತಘ್ನ ಇತಿ ಜ್ಞೇಯೋ ಮಹಾಪಾಪೀ ಚ ಭಾರತೇ || ೧೧ ||

ಅವಟೋದೇ ವಸೇತ್ಸೋಽಪಿ ಯಾವದಿಂದ್ರಾಶ್ಚತುರ್ದಶ ।
ತತೋ ಭವೇತ್ಸುರಾಪೀ ಸ ತತಃ ಶೂದ್ರಸ್ತತಃ ಶುಚಿಃ || ೧೨ ||

|| ಜೈಗೀಷವ್ಯ ಉವಾಚ ||

ಪಿತೃಮಾತೃಗುರೂಂಶ್ಚಾಪಿ ಭಕ್ತಿಹೀನೋ ನ ಪಾಲಯೇತ್ ।
ವಾಚಾಪಿ ತಾಡಯೇತ್ತಾಂಶ್ಚ ಸ ಕೃತಘ್ನ ಇತಿ ಸ್ಮೃತಃ ।
ವಾಚಾ ಚ ತಾಡಯೇನ್ನಿತ್ಯಂ ಸ್ವಾಮಿನಂ ಕುಲಟಾ ಚ ಯಾ || ೧೩ ||

ಸಾ ಕೃತಘ್ನೀತಿ ವಿಖ್ಯಾತಾ ಭಾರತೇ ಪಾಪಿನೀ ವರಾ ।
ವಹ್ನಿಕುಂಡಂ ಮಹಾಘೋರಂ ತೌ ಪ್ರಯಾತಸ್ಸುನಿಶ್ಚಿತಂ || ೧೪ ||

---

೧೧. ದೇವಲ:—ಭರತಖಂಡದಲ್ಲಿ ಬ್ರಹ್ಮಸ್ವತ್ತನ್ನಾಗಲೀ, ದೇವಸ್ವತ್ತನ್ನಾಗಲೀ ಅಪಹರಿಸುವವನೂ ಮಹಾಪಾಪಿಯಾದ ಕೃತಘ್ನನೆನಿಸುವನು.

೧೨. ಆ ಕೃತಘ್ನನೂ ಕೂಡ ಹದಿನಾಲ್ಕು ಇಂದ್ರರ ಜೀವಿತಾವಧಿ ಅವಟೋದವೆಂಬ ನರಕದಲ್ಲಿ ನರಳಿ, ಮುಂದೆ ಮದ್ಯಪಾಯಿಯೂ, ಶೂದ್ರನೂ ಆಗಿ ಜನಿಸಿ ಅನಂತರ ಶುದ್ಧಿಹೊಂದುವನು.

೧೩. ಜೈಗೀಷವ್ಯ:—ಯಾರು ತನ್ನ ತಾಯಿ, ತಂದೆ ಮತ್ತು ಗುರುಗಳನ್ನು ಭಕ್ತಿಪೂರ್ವಕವಾಗಿ ಪಾಲಿಸುವುದಿಲ್ಲವೋ, ಮತ್ತು ಅವರನ್ನು ಕಠಿನ ವಾಕ್ಯಗಳಿಂದ ಬಯ್ಯುತ್ತಿರುವರೋ ಅಂಥವರು ಕೃತಘ್ನರೆನಿಸುವರು.

೧೪. ಅಂತೆಯೇ ಯಾವ ದುಷ್ಟ ಸ್ತ್ರೀಯು ತನ್ನ ಪತಿಯನ್ನು ಕ್ರೂರ ವಾಕ್ಯಗಳಿಂದ ದೂಷಿಸುತ್ತಿರುವಳೋ ಆ ಪಾಪಿನಿಯೂ ಕೂಡ ಕೃತಘ್ನೀ ಎಂದು ಭಾರತದಲ್ಲಿ ಹೆಸರುವಾಸಿಯಾಗುವಳು.

ತತ್ರ ವಹ್ನೌವಸತ್ಯೇವ ಯಾವಚ್ಚಂದ್ರದಿವಾಕರೌ ।
ತತೋ ಭವೇಜ್ಜಲೌಕಾಶ್ಚ ಸಪ್ತಜನ್ಮಸ್ವತಃ ಶುಚಿಃ ॥ ೧೫ ॥

॥ ವಾಲ್ಮೀಕಿರುವಾಚ ॥

ಯಥಾ ತರುಷು ವೃಕ್ಷತ್ವಂ ಸರ್ವತ್ರ ನ ಜಹಾತಿ ಚ ।
ತಥಾ ಕೃತಘ್ನತಾ ರಾಜನ್ಸರ್ವಪಾಪೇಷು ವರ್ತತೇ ॥ ೧೬ ॥

ಮಿಥ್ಯಾಸಾಕ್ಷ್ಯಂ ಯೋ ದದಾತಿ ಕಾಮಾತ್ಕ್ರೋಧಾತ್ತಥಾ ಭಯಾತ್ ।
ಸಭಾಯಾಂ ಪಾಕ್ಷಿಕಂ ವಕ್ತಿ ಸ ಕೃತಘ್ನ ಇತಿ ಸ್ಮೃತಃ ॥ ೧೭ ॥

ಪುಣ್ಯಮಾತ್ರಂ ಚಾಪಿ ರಾಜನ್ಯೋ ಹಂತಿ ಸ ಕೃತಘ್ನಕಃ ।
ಸರ್ವತ್ರಾಪಿ ಚ ಸರ್ವೇಷಾಂ ಪುಣ್ಯಹಾನೌ ಕೃತಘ್ನತಾ ॥ ೧೮ ॥

---

೧೫. ಅವರಿಬ್ಬರೂ ನಿಶ್ಚಯವಾಗಿಯೂ ಮಹಾ ಭಯಂಕರವಾದ ವಹ್ನಿ ಕುಂಡವೆಂಬ ನರಕಕ್ಕೆ ಹೋಗಿ ಸೇರುವರು. ಅಲ್ಲಿ ಸೂರ್ಯಚಂದ್ರರಿರುವವರೆಗೂ ಅಗ್ನಿಯಲ್ಲಿ ವಾಸಮಾಡಿಕೊಂಡಿದ್ದು ಅನಂತರ ಏಳುಜನ್ಮಗಳಲ್ಲಿ ಜಿಗಣೆಯಾಗಿ ಹುಟ್ಟಿ ಪುನಃ ಶುದ್ಧಿ ಹೊಂದುವರು.

೧೬. ವಾಲ್ಮೀಕಿ:—ಎಲೈ ರಾಜನೇ, ಎಲ್ಲ ಮರಗಳಲ್ಲಿಯೂ ಮರದ ಸ್ವರೂಪವನ್ನು ತಿಳಿಸುವ ಸಾಮಾನ್ಯವಾದ ಮರದ ಜಾತಿ ಇರುವಂತೆ ಎಲ್ಲ ಪಾಪಿಗಳ ಲ್ಲಿಯೂ ಕೂಡ ಕೃತಘ್ನತೆ ಎಂಬ ಸಾಮಾನ್ಯವಾದ ಒಂದು ಗುಣವಿರುವುದು.

೧೭. ಯಾರು ಕಾಮ, ಕ್ರೋಧ, ಭಯಗಳಿಗೆ ಸಿಲುಕಿ ಸುಳ್ಳುಸಾಕ್ಷಿಯನ್ನು ನುಡಿಯುವರೋ, ಅಲ್ಲದೆ ಸಭೆಯಲ್ಲಿ ಪಕ್ಷಪಾತವನ್ನು ತೋರುವರೋ ಅವರೂ ಕೂಡ ಕೃತಘ್ನರೆನಿಸುವರು.

೧೮. ಇತರರು ಆಚರಿಸುವ ಪುಣ್ಯಕಾರ್ಯಗಳಿಗೆ ಅಡ್ಡಿ ಬರುವವನೂ ಕೃತಘ್ನ ನೆನಿಸುವನು. ಎಲ್ಲಿ ಯಾರ ಪುಣ್ಯಕರ್ಮಗಳನ್ನು ನಾಶಗೊಳಿಸಿದರೂ ಕೃತಘ್ನತಾ ದೋಷವು ಬಂದೇ ಬರುವುದು.

ಮಿಥ್ಯಾಸಾಕ್ಷ್ಯಂ ಪಾಕ್ಷಿಕಂ ವಾ ಭಾರತೇ ವಕ್ತಿ ಯೋ ನೃಪ ।
ಯಾವದಿಂದ್ರಸಹಸ್ರಂ ಚ ಸರ್ಪಕುಂಡೇ ವಸೇದ್ಧ್ರುವಂ ॥ ೧೯ ॥

ಸಂತತಂ ವೇಷ್ಟಿತಃ ಸರ್ಪೈರ್ಭೀತೋ ವೈ ಭಕ್ಷಿತಸ್ತಥಾ ।
ಭುಂಕ್ತೇ ಚ ಸರ್ಪವಿಣ್ಮೂತ್ರಂ ಯಮದೂತೇನ ತಾಡಿತಃ ॥ ೨೦ ॥

ಕೃಕಲಾಸೋ ಭವೇತ್ತತ್ರ ಭಾರತೇ ಸಪ್ತಜನ್ಮಸು ।
ಸಪ್ತಜನ್ಮಸು ಮಂಡೂಕಃ ಪಿತೃಭಿಃ ಸಪ್ತಭಿಃ ಸಹ ॥ ೨೧ ॥

ತತೋ ಭವೇದ್ವೈ ವೃಕ್ಷಶ್ಚ ಮಹಾರಣ್ಯೇ ತು ಶಾಲ್ಮಲಿಃ ।
ತತೋ ಭವೇನ್ನರೋ ಮೂಕಸ್ತತಃ ಶೂದ್ರಸ್ತತಃ ಶುಚಿಃ ॥ ೨೨ ॥

---

೧೯. ಭರತಖಂಡದಲ್ಲಿ ಸುಳ್ಳು ಸಾಕ್ಷಿಯನ್ನಾಗಲೀ, ಪಕ್ಷಪಾತವನ್ನಾಗಲೀ ಆಚರಿಸುವ ಕೃತಘ್ನನು ಸಾವಿರ ಇಂದ್ರರ ಜೀವಿತಕಾಲದವರೆಗೆ ಸರ್ಪಕುಂಡದಲ್ಲಿ ನಿಶ್ಚಿತವಾಗಿ ನೆಲೆಸಿರುವನು.

೨೦. ಅಲ್ಲಿ ಹಾವುಗಳು ಇವನನ್ನು ಸುತ್ತಿಕೊಂಡು ಕಚ್ಚಿತಿನ್ನುವುವು. ಇವನೂ ಕೂಡ ಯಮದೂತರಿಂದ ಶಿಕ್ಷೆಹೊಂದುತ್ತ ಎಲ್ಲರ ಮಲಮೂತ್ರವನ್ನೂ ಭಕ್ಷಿಸುತ್ತಿರುವನು.

೨೧. ಅನಂತರ ಭಾರತದಲ್ಲಿ ಏಳು ಜನ್ಮಗಳು ಹೆಂಟಿಗೊದ್ದನಾಗಿಯೂ, ಮತ್ತೇಳು ಜನ್ಮಗಳು ಕಪ್ಪೆಯಾಗಿಯೂ ಜನಿಸುವುದಲ್ಲದೆ, ತನ್ನ ಸಪ್ತಪಿತೃಗಳ ಪತನಕ್ಕೂ ಕಾರಣನಾಗುವನು.

೨೨. ಅನಂತರ ಗೊಂಡಾರಣ್ಯದಲ್ಲಿ ಮುಳ್ಳುಬೂರಗದ ಮರವಾಗಿಯೂ, ಮತ್ತೆ ಮೂಕಮನುಜನಾಗಿಯೂ, ಅನಂತರ ಶೂದ್ರನಾಗಿಯೂ ಜನಿಸಿ ಶುಚಿ ಹೊಂದುವನು.

॥ ಆಸ್ತೀಕ ಉವಾಚ ॥

ಗುರ್ವಂಗನಾನಾಂ ಗಮನೇ ಮಾತೃಗಾಮೀ ಭವೇನ್ನರಃ ।
ನರಾಣಾಂ ಮಾತೃಗಮನೇ ಪ್ರಾಯಶ್ಚಿತ್ತಂ ನ ವಿದ್ಯತೇ ॥ ೨೩ ॥

ಭಾರತೇ ಚ ನೃಪಶ್ರೇಷ್ಠ ಯೋ ದೋಷೋ ಮಾತೃಗಾಮಿನಾಂ ।
ಬ್ರಾಹ್ಮಣೀಗಮನೇ ಚೈವ ಶೂದ್ರಾಣಾಂ ತಾವದೇವ ಹಿ ॥ ೨೪ ॥

ಬ್ರಾಹ್ಮಣ್ಯಾಸ್ತಾವದೇವ ಸ್ಯಾದ್ದೋಷಃ ಶೂದ್ರೇಣ ಮೈಥುನೇ ।
ಕನ್ಯಾನಾಂ ಪುತ್ರಪತ್ನೀನಾಂ ಶ್ವಶ್ರ್ವಾಣಾಂ ಗಮನೇ ತಥಾ ॥ ೨೫ ॥

ಸಗರ್ಭಭ್ರಾತೃಪತ್ನೀನಾಂ ಭಗಿನೀನಾಂ ತಥೈವ ಚ ।
ದೋಷಂ ವಕ್ಷ್ಯಾಮಿ ರಾಜೇಂದ್ರ ಯದಾಹ ಕಮಲೋದ್ಭವಃ ॥ ೨೬ ॥

ಯಃ ಕರೋತಿ ಮಹಾಪಾಪೀ ಚೈತಾಭಿಃ ಸಹ ಮೈಥುನಂ ।
ಜೀವನ್ಮೃತೋ ಭವೇತ್ಸೋಽಪಿ ಚಂಡಾಲೋಽಸ್ಪೃಶ್ಯ ಏವ ಚ ॥ ೨೭ ॥

---

೨೩. ಆಸ್ತೀಕ:—ಮನುಜನು ಗುರುಪತ್ನೀ ಸಂಗಮ ಮಾಡಿದರೆ, ಹೆತ್ತ ತಾಯಿಯ ಸಂಗಮ ಮಾಡಿದಂತಾಗುವುದು. ಈರೀತಿ ತಾಯಿಯೊಡನೆ ಸಂಗಮಿಸುವ ಮನುಜನಿಗೆ ಪ್ರಾಯಶ್ಚಿತ್ತವೇ ವಿಹಿತವಾಗಿಲ್ಲ. (ಅಂದರೆ ಪ್ರಾಯಶ್ಚಿತ್ತದಿಂದ ಆತನು ಶುಚಿಯಾಗಲಾರನು).

೨೪. ಎಲೈ ರಾಜೇಂದ್ರನೇ, ಭರತಖಂಡದಲ್ಲಿ ಹೆತ್ತ ತಾಯಿಯೊಡನೆ ಸಂಗಮಿಸಿದವರಿಗೆ ಎಷ್ಟು ದೋಷ ಸಂಭವಿಸುವುದೋ ಅಷ್ಟೇ ದೋಷವು ಬ್ರಾಹ್ಮಣಸ್ತ್ರೀಯೊಡನೆ ಸಂಗಮಿಸಿದ ಶೂದ್ರನಿಗೆ ಸಂಭವಿಸುವುದು.

೨೫-೨೬. ಶೂದ್ರನೊಡನೆ ಕಲೆತು ರತಿಸುಖವನ್ನನುಭವಿಸಿದ ಬ್ರಾಹ್ಮಣಸ್ತ್ರೀಗೂ ಅಷ್ಟೇ ದೋಷವಿರುವುದು. ಮಗಳು, ಸೊಸೆ ಮತ್ತು ಹೆಣ್ಣು ಕೊಟ್ಟ ಅತ್ತೆ, ಸಹೋದರನ ಪತ್ನಿ, ಸಹೋದರಿ ಇವರೊಡನೆ ಸಂಗಮಿಸುವುದರಿಂದ ಯಾವ ದೋಷ ಉಂಟಾಗುವುದೆಂದು ಬ್ರಹ್ಮನು ಹೇಳಿರುವನೋ ಅದನ್ನು ವಿವರಿಸುವೆನು ಕೇಳು.

೨೭. ಮೇಲೆ ಹೇಳಿದ ಸ್ತ್ರೀಯರೊಡನೆ ಸಂಗಮಿಸುವ ಮಹಾಪಾಪಿಯು ಬದುಕಿದ್ದರೂ ಸತ್ತಂತಾಗಿ ಯಾರ ಸ್ಪರ್ಶಕ್ಕೂ ಯೋಗ್ಯನಲ್ಲದ ಚಂಡಾಲನಾಗುವನು.

ನಾಧಿಕಾರೋ ಭವೇತ್ತಸ್ಯ ಸೂರ್ಯಮಂಡಲದರ್ಶನೇ ।
ಶಾಲಗ್ರಾಮಂ ತಜ್ಜಲಂ ಚ ತುಲಸ್ಯಾಶ್ಚ ದಲಂ ಜಲಂ ॥ ೨೮ ॥

ಸರ್ವತೀರ್ಥಜಲಂ ಚೈವ ವಿಪ್ರಪಾದೋದಕಂ ತಥಾ ।
ಸ್ಪ್ರಷ್ಟುಂ ಚ ನೈವ ಶಕ್ನೋತಿ ವಿಟ್ತುಲ್ಯಃ ಪಾತಕೀ ನರಃ ॥ ೨೯ ॥

ದೇವಂ ಗುರುಂ ಬ್ರಾಹ್ಮಣಂ ಚ ನಮಸ್ಕರ್ತುಂ ನ ಚಾರ್ಹತಿ ।
ವಿಷ್ಠಾಧಿಕಂ ತದನ್ನಂ ಚ ಜಲಂ ಮೂತ್ರಾಧಿಕಂ ತಥಾ ॥ ೩೦ ॥

ದೇವತಾಃ ಪಿತರೋ ವಿಪ್ರಾ ನೈವ ಗೃಹ್ಣಂತಿ ಭಾರತೇ ।
ಭವೇತ್ತದಂಗವಾತೇನ ತೀರ್ಥಮಂಗಾರವಾಹನಂ ॥ ೩೧ ॥

ಸಪ್ತರಾತ್ರಂ ಹ್ಯುಪವಸೇದ್ದ್ವಿವಸ್ಪರ್ಶಾತ್ತಥಾ ದ್ವಿಜಃ ।
ಭಾರಾಕ್ರಾಂತಾ ಚ ಪೃಥಿವೀ ತದ್ಭಾರಂ ವೋಢುಮಕ್ಷಮಾ ॥ ೩೨ ॥

---

೨೮–೨೯. ಆ ಪಾಪಿಗೆ ಸೂರ್ಯಮಂಡಲವನ್ನು ದರ್ಶನಮಾಡುವ ಅಧಿಕಾರವಿರುವುದಿಲ್ಲ. ಸಾಲಿಗ್ರಾಮವನ್ನೂ ಅದರ ತೀರ್ಥವನ್ನೂ, ತುಳಸಿ ಮತ್ತು ಅದರ ತೀರ್ಥವನ್ನೂ, ಪುಣ್ಯನದಿಗಳ ನೀರನ್ನೂ, ಬ್ರಾಹ್ಮಣರ ಪಾದೋದಕವನ್ನೂ, ಮುಟ್ಟಲು ಮಲಸದೃಸನೂ ಪಾಪಿಯೂ ಆದ ಆ ಚಂಡಾಲನಿಗೆ ಅರ್ಹತೆಯಿಲ್ಲ.

೩೦. ಅವನು ದೇವತಾ, ಗುರು ಬ್ರಾಹ್ಮಣಾದಿಗಳಿಗೆ ನಮಸ್ಕರಿಸಲೂ ಯೋಗ್ಯನಲ್ಲ· ಅವನು ಕೊಡುವ ಅನ್ನವು ಮಲಕ್ಕಿಂತಲೂ, ನೀರು ಮೂತ್ರಕ್ಕಿಂತಲೂ ಕೀಳೆನಿಸುವುದು.

೩೧. ಆದ್ದರಿಂದ ಭರತಖಂಡದಲ್ಲಿ ದೇವಬ್ರಾಹ್ಮಣರೂ, ಪಿತೃದೇವತೆಗಳೂ ಆ ಚಂಡಾಲನು ಅರ್ಪಿಸಿದ ಅನ್ನೋದಕಗಳನ್ನು ಸ್ವೀಕರಿಸುವುದಿಲ್ಲ. ಅವನ ಅಂಗ ಸಂಬಂಧವಾದ ಗಾಳಿಯ ಸ್ಪರ್ಶದಿಂದ ಪುಣ್ಯತೀರ್ಥವೂ 'ಅಂಗಾರವಾಹನ' ವೆನಿಸುವುದು.

೩೨. ಆ ಚಂಡಾಲನನ್ನು ಬ್ರಾಹ್ಮಣನು ದುರದೃಷ್ಟವಶಾತ್ ಮುಟ್ಟಿದರೆ ಏಳು ದಿವಸಗಳು ಉಪವಾಸ ವ್ರತವನ್ನಾಚರಿಸಬೇಕು. ಭೂದೇವಿಯೂ ಕೂಡ ಆ ಪಾಪಿಯ ಭಾರವನ್ನು ಹೊರಲಾಗದೆ ಬಗ್ಗಿ ಹೋಗುವಳು.

ತತ್ಪಾಪಾತ್ಪತಿತೋ ದೇಶಃ ಕನ್ಯಾವಿಕ್ರಯಿಣೋ ಯಥಾ।
ತತ್ಸ್ಪರ್ಶಾಚ್ಚ ತದಾಲಾಪಾಚ್ಛಯನಾಶ್ರಯಭೋಜನಾತ್ ॥ ೩೩ ॥

ನೃಣಾಂ ಚ ತತ್ಸಮಂ ಪಾಪಂ ಭವತ್ಯೇವ ನ ಸಂಶಯಃ।
ಕುಂಭೀಪಾಕೇ ವಸೇತ್ಸೋಽಪಿ ಯಾವದ್ವೈ ಬ್ರಹ್ಮಣಃ ಶತಂ ॥ ೩೪ ॥

ದಿವಾನಿಶಂ ಭ್ರಮೇತ್ತತ್ರ ಚಕ್ರಾವರ್ತಂ ನಿರಂತರಂ।
ದಗ್ಧೋಽನಾಗ್ನಿಶಿಖಾಭಿಶ್ಚ ಯಮದೂತೈಶ್ಚ ತಾಡಿತಃ ॥ ೩೫ ॥

ಏವಂ ನಿತ್ಯಂ ಮಹಾಪಾಪೀ ಭುಂಕ್ತೇ ನಿರಯಯಾತನಾಂ।
ವಿಷ್ಠಾಹಾರಶ್ಚ ಸರ್ವತ್ರ ಕುಂಭೀಪಾಕೇಥ ಪಾತಿತಃ ॥ ೩೬ ॥

ಗತೇ ಪ್ರಾಕೃತಿಕೇ ಘೋರೇ ಮಹತಿ ಪ್ರಲಯೇ ತಥಾ।
ಪುನಃ ಸೃಷ್ಟೇಃ ಸಮಾರಂಭೇ ತದ್ವಿಧೋ ವಾ ಭವೇತ್ಪುನಃ ॥ ೩೭ ॥

---

೩೩–೩೪. ಕನ್ಯಾವಿಕ್ರಯ ಮಾಡುವವನಿರುವ ದೇಶವೇ ಪತಿತವೆನಿಸುವಂತೆ ಈ ಚಂಡಾಲನ ಪಾಪದಿಂದಲೂ ದೇಶವೇ ಪತಿತವೆನಿಸುವುದು. ಆ ಚಂಡಾಲನ ಸ್ಪರ್ಶದಿಂದಲೂ, ಮಾತನಾಡಿಸುವುದರಿಂದಲೂ, ಅವನೊಡನೆ ಕೂಡುವುದು, ಮಲಗುವುದು ಮತ್ತು ಊಟಮಾಡುವುದರಿಂದಲೂ, ಅವನನ್ನಾಶ್ರಯಿಸುವುದರಿಂದಲೂ, ಅವನ ಪಾಪಕ್ಕೆ ಸರಿಸಮಾನವಾದ ಪಾಪವು ಮನುಜರಿಗೆ ಬರುವುದು. ನೂರು ಚತುರ್ಮುಖಬ್ರಹ್ಮರ ಜೀವಿತಕಾಲಾವಧಿ ಅವನೊಡಗೂಡಿದವನೂ ಕುಂಭೀಪಾಕವೆಂಬ ನರಕದಲ್ಲಿ ನೆಲೆಸುವನು.

೩೫. ಚಕ್ರವು ಸುತ್ತುವಂತೆ ಹಗಲೂ ರಾತ್ರಿ ಎಡಬಿಡದೆ ಕುಂಭೀಪಾಕದಲ್ಲಿ ಸುತ್ತುತ್ತಿರುವ ಅವನನ್ನು ಅಲ್ಲಿ ಅಗ್ನಿಜ್ವಾಲೆಗಳು ಸುಡುತ್ತಲೂ, ಯಮಕಿಂಕರರು ಹೊಡೆಯುತ್ತಲೂ ಇರುವರು.

೩೬. ಮಹಾಪಾಪಿಯಾದ ಅವನು ಈ ರೀತಿಯಾಗಿ ನಿತ್ಯವೂ ನರಕಯಾತನೆಯನ್ನನುಭವಿಸುತ್ತಿರುವನು. ಕುಂಭೀಪಾಕಕ್ಕೆ ಬಿದ್ದ ಯಾವನಿಗಾದರೂ ಮಲವೇ ಆಹಾರವಾಗುವುದು.

೩೭. ಹೀಗೆ ಪ್ರಕೃತಿಸಂಬಂಧವಾದ ಪ್ರಳಯವೂ, ಮಹಾಪ್ರಳಯವೂ ಕಳೆಯುವವರೆಗೆ ಅಲ್ಲಿದ್ದು ಮತ್ತೆ ಸೃಷ್ಟಿಯಾರಂಭದಲ್ಲಿಯೂ, ಪುನಃ ಅದೇರೀತಿಯಾಗಿ ನರಳುತ್ತಿರುವನು.

ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಚ ಕ್ರಿಮಿರ್ಭವೇತ್ ।
ತತೋ ಭವತಿ ಚಂಡಾಲೋ ಭಾರ್ಯಾಹೀನೋ ನಪುಂಸಕಃ ॥ ೩೮ ॥

ಸಪ್ತಜನ್ಮಸು ಶೂದ್ರಶ್ಚ ಗಲತ್ಕುಷ್ಠೀ ನಪುಂಸಕಃ ।
ತತೋ ಭವೇದ್ಬ್ರಾಹ್ಮಣಶ್ಚಾಪ್ಯಂಧಃ ಕುಷ್ಠೀ ನಪುಂಸಕಃ ॥ ೩೯ ॥

ಲಬ್ಧ್ವೈವಂ ಸಪ್ತಜನ್ಮಾನಿ ಮಹಾಪಾಪೀ ಭವೇಚ್ಛುಚಿಃ ॥ ೪೦ ॥

॥ ಮುನಯ ಊಚುಃ ॥

ಇತ್ಯೇವಂ ಕಥಿತಂ ಸರ್ವಮಸ್ಮಾಭಿರ್ವೋ ಯಥಾಗಮಂ ।
ಏಭಿಸ್ತುಲ್ಯೋ ಭವೇದ್ದೋಷೋಽಪ್ಯತಿಥೀನಾಂ ಪರಾಭವೇ ॥ ೪೧ ॥

ಪ್ರಣಾಮಂ ಕುರು ವಿಪ್ರೇಂದ್ರಂ ಗೃಹಂ ಪ್ರಾಪಯ ನಿಶ್ಚಿತಂ ।
ಸಂಪೂಜ್ಯ ಬ್ರಾಹ್ಮಣಂ ಯತ್ನಾದ್ಗೃಹೀತ್ವಾ ಬ್ರಾಹ್ಮಣಾಶಿಷಂ ॥ ೪೨ ॥

---

೩೮. ಮುಂದೆ ಅರವತ್ತುಸಾವಿರ ವರ್ಷಗಳು ಮಲದಲ್ಲಿ ಕ್ರಿಮಿಯಾಗಿದ್ದು, ಅನಂತರ ಚಂಡಾಲನಾಗಿ, ನಪುಂಸಕನೂ, ಹೆಂಡತಿಯಿಲ್ಲದವನೂ ಆಗುವನು.

೩೯. ಮುಂದೆ ಏಳು ಜನ್ಮಗಳಲ್ಲಿ ಕುಷ್ಠರೋಗಿಯೂ ನಪುಂಸಕನೂ ಆದ ಶೂದ್ರನಾಗುವನು. ಅನಂತರ ಬ್ರಾಹ್ಮಣನಾಗಿ ಹುಟ್ಟಿದರೂ ಕುಷ್ಠರೋಗ ಮತ್ತು ನಪುಂಸಕತ್ವದ ಜತೆಗೆ ಕುರುಡನೂ ಆಗುವನು.

೪೦. ಆ ಮಹಾಪಾಪಿಯು ಈ ರೀತಿಯಾದ ಏಳು ಜನ್ಮಗಳನ್ನು ಕಳೆದ ಮೇಲೆ ಶುಚಿಯಾಗುವನು.

೪೧. ಮುನಿಗಳು:—ಈ ರೀತಿಯಾಗಿ ವೇದೋಕ್ತವಾದ ಎಲ್ಲ ಪಾಪಗಳ ಪರಿಹಾರಕ್ರಮವನ್ನೂ ನಾವು ನಿನಗೆ ವಿವರಿಸಿದೆವು. ಅತಿಥಿಗಳಿಗೆ ತಿರಸ್ಕಾರಮಾಡುವುದರಿಂದಲೂ ಮೇಲ್ಕಂಡ ದೋಷಕ್ಕೆ ಸಮಾನವಾದ ದೋಷವೇ ಉಂಟಾಗುವುದು.

೪೨–೪೩. ಆದ್ದರಿಂದ ಎಲೈ ರಾಜೇಂದ್ರನೇ, ಅತಿಥಿಯಾದ ಆ ಬ್ರಾಹ್ಮಣನಿಗೆ ಸಾಷ್ಟಾಂಗವೆರಗಿ ಮನೆಗೆ ಕರೆದುಕೊಂಡು ಬಾ. ಪ್ರಯತ್ನಪುರಸ್ಸರವಾಗಿ

ವನಂ ಗಚ್ಛ ಮಹಾರಾಜ ತಪಸ್ಯಾಂ ಕುರು ಸತ್ವರಂ ।
ಬ್ರಹ್ಮಶಾಪೈರ್ವಿನಿರ್ಮುಕ್ತಃ ಪುನರೇವಾಗಮಿಷ್ಯಸಿ ॥ ೪೩ ॥

ಇತ್ಯುಕ್ತ್ವಾ ಮುನಯಃ ಸರ್ವೇ ಯಯುಸ್ತೂರ್ಣಂ ಸ್ವಮಂದಿರಂ ।
ಸುರಾಶ್ಚಾಪಿ ಚ ರಾಜಾನೋ ಬಂಧುವರ್ಗಾಶ್ಚ ಪಾರ್ವತಿ ॥ ೪೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ರಾಧೋಪಾಖ್ಯಾನೇ
ಸುಯಜ್ಞೋಪಾಖ್ಯಾನೇ ಕರ್ಮವಿಪಾಕೋ
ನಾಮ ದ್ವಿಪಂಚಾಶತ್ತಮೋಽಧ್ಯಾಯಃ

---

ಆ ಬ್ರಾಹ್ಮಣನನ್ನು ಪೂಜಿಸಿ ಅವನ ಆಶೀರ್ವಾದ ಪಡೆದು ಅನಂತರ ವಾನಪ್ರಸ್ಥನಾಗಿ ಭಕ್ತಿಯಿಂದ ತಪಸ್ಸುಮಾಡು. ಆಗ ಬ್ರಹ್ಮಶಾಪದಿಂದ ಮುಕ್ತನಾಗಿ ಶುದ್ಧಿ ಹೊಂದಿ ಹಿಂತಿರುಗಬಹುದು.

೪೪. ಎಲೌ ಪಾರ್ವತಿಯೇ, ಹೀಗೆ ಹೇಳಿ ಅಲ್ಲಿದ್ದ ಎಲ್ಲ ಮುನಿಗಳೂ, ದೇವತೆಗಳೂ, ರಾಜರೂ, ಬಂಧುಬಳಗದವರೂ ಕೂಡ ತಮ್ಮ ತಮ್ಮ ಮಂದಿರಕ್ಕೆ ಹಿಂತಿರುಗಿದರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಕರ್ಮ
ವಿಪಾಕವೆಂಬ ಐವತ್ತೆರಡನೆಯ ಅಧ್ಯಾಯವು
ಮುಗಿದುದು.

## ಐವತ್ತೆರಡನೆಯ ಅಧ್ಯಾಯದ ಸಾರಾಂಶವು

ಅನಂತರ ನಾರಾಯಣನೇ ಮುಂತಾದ ಮಹರ್ಷಿಗಳು ದೇವಬ್ರಾಹ್ಮಣರ ಸ್ವತ್ತನ್ನು ಅಪಹರಿಸುವುದೇ ಮುಂತಾದ ಮಹಾಪಾಪಗಳಿಂದ ಸಂಘಟಿಸುವ ನರಕಾದಿಗಳನ್ನು ವರ್ಣಿಸಿ ಅತಿಥಿಸತ್ಕಾರಮಾಡದವನಿಗೂ ಅದೇರೀತಿಯಾದ ನರಕವು ಪ್ರಾಪ್ತಿಯಾಗುವುದೆಂದು ಹೇಳಿ, ಅತಿಥಿಯಾದ ಬ್ರಾಹ್ಮಣನ ಕ್ಷಮಾಭಿಕ್ಷೆಯನ್ನು ಬೇಡಿ, ಅವನ ಅನುಗ್ರಹಕ್ಕೆ ಪಾತ್ರನಾಗಿ ಅನಂತರ ವಾನಪ್ರಸ್ಥಾಶ್ರಮವನ್ನು ಕೈಗೊಂಡು ತಪಸ್ಸನ್ನಾಚರಿಸಬೇಕೆಂದು ಸುಯಜ್ಞನಿಗೆ ಉಪದೇಶಿಸಿ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

—॥ ಓಂ ॥—

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### ॥ ತ್ರಿಪಂಚಾಶತ್ತಮೋಽಧ್ಯಾಯಃ ॥

॥ ಶ್ರೀ ಪಾರ್ವತ್ಯುವಾಚ ॥

**ಗತೇಷು ಮುನಿಸಂಘೇಷು ಶ್ರುತ್ವಾ ಕರ್ಮಫಲಂ ನೃಣಾಂ ।**
**ಕಿಂ ಚಕಾರ ನೃಪಶ್ರೇಷ್ಠೋ ಬ್ರಹ್ಮಶಾಪೇನ ವಿಹ್ವಲಃ ॥ ೧ ॥**

**ಅತಿಥಿರ್ಬ್ರಾಹ್ಮಣೋ ವಾಪಿ ಕಿಂ ಚಕಾರ ತದಾ ಪ್ರಭೋ ।**
**ಜಗಾಮ ನೃಪಗೇಹಂ ವಾ ನ ವಾ ತದ್ವಕ್ತುಮರ್ಹಸಿ ॥ ೨ ॥**

---

### ಐವತ್ತಮೂರನೆಯ ಅಧ್ಯಾಯವು

೧. ಶ್ರೀ ಪಾರ್ವತಿ:—ಎಲೈ ಪ್ರಾಣಕಾಂತನೇ, ಈ ರೀತಿಯಾಗಿ ಉಪದೇಶ ಮಾಡಿ ಮುನಿಗಳೆಲ್ಲರೂ ಹಿಂತಿರುಗಿ ಹೋದ ಮೇಲೆ, ಮನುಜರ ಕರ್ಮಫಲವನ್ನು ಕೇಳಿದ ಬ್ರಹ್ಮಶಾಪಕ್ಕೊಳಗಾದ ಆ ರಾಜನು ಮಾಡಿದುದೇನು ?

೨. ಆಗ ಬ್ರಾಹ್ಮಣನಾದ ಆ ಅತಿಥಿಯೂ ಕೂಡ ಏನು ಮಾಡಿದನು. ರಾಜನ ಮಂದಿರಕ್ಕೆ ತೆರಳಿದನೇ ? ಅಥವಾ ಇಲ್ಲವೆ ? ಅದನ್ನು ದಯವಿಟ್ಟು ಹೇಳು.

॥ ಮಹೇಶ್ವರ ಉವಾಚ ॥

ಗತೇಷು ಮುನಿಸಂಘೇಷು ನಿಂದಾಗ್ರಸ್ತೋ ನರಾಧಿಪಃ ।
ಪ್ರೇರಿತಶ್ಚ ವಸಿಷ್ಠೇನ ಧರ್ಮಿಷ್ಠೇನ ಪುರೋಧಸಾ ॥ ೩ ॥

ಪಪಾತ ದಂಡವದ್ಭೂಮೌ ಪಾದಯೋರ್ಬ್ರಾಹ್ಮಣಸ್ಯ ಚ ।
ತ್ಯಕ್ತ್ವಾ ಮನ್ಯುಂ ದ್ವಿಜಶ್ರೇಷ್ಠೋ ದದೌ ತಸ್ಮೈ ಶುಭಾಶಿಷಂ ॥ ೪ ॥

ಸಸ್ಮಿತಂ ಬ್ರಾಹ್ಮಣಂ ದೃಷ್ಟ್ವಾ ತ್ಯಕ್ತಮನ್ಯುಂ ಕೃಪಾಮಯಂ ।
ಉವಾಚ ನೃಪತಿಶ್ರೇಷ್ಠಃ ಸಾಶ್ರುನೇತ್ರಃ ಕೃತಾಂಜಲಿಃ ॥ ೫ ॥

॥ ರಾಜೋವಾಚ ॥

ಕುತ್ರ ವಂಶೇ ಭವಾನ್ ಜಾತಃ ಕಿಂ ನಾಮ ಭವತಃ ಪ್ರಭೋ ।
ಕಿಂ ನಾಮ ವಾಪಿ ತದ್ಬ್ರೂಹಿ ಕ್ವ ವಾಸಃ ಕಥಮಾಗತಃ ॥ ೬ ॥

---

೩–೪. ಮಹೇಶ್ವರ:—ಮುನಿಗಳೆಲ್ಲ ಹೊರಟುಹೋದ ಮೇಲೆ ಶಾಪಗ್ರಸ್ತನಾದ ಆ ರಾಜನು, ಧರ್ಮಿಷ್ಠನೂ, ಪುರೋಹಿತನೂ ಆದ ವಸಿಷ್ಠನ ಪ್ರೇರಣೆಯಂತೆ ಆ ಅತಿಥಿಯನ್ನು ಅನುಸರಿಸಿಹೋಗಿ ಅವನ ಪಾದಗಳಮೇಲೆ ವಿನಯದಿಂದ ದಂಡಪ್ರಣಾಮ ಮಾಡಿದನು. ಆಗ ಆ ಬ್ರಾಹ್ಮಣನು ಕೋಪವನ್ನು ಬಿಟ್ಟು ಆ ರಾಜನಿಗೆ ಮಂಗಳಾಶೀರ್ವಾದ ಮಾಡಿದನು.

೫ ಕೋಪವನ್ನು ಬಿಟ್ಟು, ಸ್ಮಿತಮುಖದಿಂದ ದಯೆಬೀರುತ್ತಿರುವ ಆ ಬ್ರಾಹ್ಮಣನನ್ನು ನೋಡಿ ರಾಜನು, ಕೈಮುಗಿದುಕೊಂಡು ಗದ್ಗದಕಂಠದಿಂದ ಇಂತು ನುಡಿದನು.

೬. ಎಲೈ ಅತಿಥಿದೇವನೇ, ನೀನು ಯಾವ ಪವಿತ್ರವಂಶದಲ್ಲಿ ಜನಿಸಿದವನು? ನಿನ್ನ ದಿವ್ಯನಾಮವಾವುದು? ನಿನ್ನ ವಾಸಸ್ಥಾನವಾವುದು? ಎಲ್ಲಿಂದ ಇಲ್ಲಿಗೆ ಬಂದಿರುವೆ?

ವಿಪ್ರರೂಪೀ ಸ್ವಯಂ ವಿಷ್ಣುರ್ಗೂಢಃ ಕಪಟಮಾನುಷಃ ।
ಸಾಕ್ಷಾತ್ಸ ಮೂರ್ತಿಮಾನಗ್ನಿಃ ಪ್ರಜ್ವಲನ್ಬ್ರಹ್ಮತೇಜಸಾ ॥ ೭ ॥

ಕೋ ವಾ ಗುರುಸ್ತೇ ಭಗವನ್ನಿಷ್ಟದೇವಶ್ಚ ಭಾರತೇ ।
ತವ ವೇಷಃ ಕಥಮಯಂ ಜ್ಞಾನಪೂರ್ಣಸ್ಯ ಸಾಂಪ್ರತಂ ॥ ೮ ॥

ಗೃಹಾಣ ರಾಜ್ಯಂ ನಿಖಿಲಮೈಶ್ವರ್ಯಂ ಕೋಶಮೇವ ಚ ।
ಸ್ವಭೃತ್ಯಂ ಕುರು ಮೇ ಪುತ್ರಂ ಮಾಂ ಚ ದಾಸೀಂ ಸ್ತ್ರಿಯಂ ಮುನೇ ॥ ೯ ॥

ಸಪ್ತಸಾಗರಸಂಯುಕ್ತಾಂ ಸಪ್ತದ್ವೀಪಾಂ ವಸುಂಧರಾಂ ।
ಅಷ್ಟಾದಶೋಪದ್ವೀಪಾಢ್ಯಾಂ ಸಶೈಲವನಶೋಭಿತಾಂ ॥ ೧೦ ॥

ಮಯಾ ಭೃತ್ಯೇನ ಶಾಧಿತ್ವಂ ರಾಜೇಂದ್ರೋ ಭವ ಭಾರತೇ ।
ರತ್ನೇಂದ್ರಸಾರಖಚಿತೇ ತಿಷ್ಠ ಸಿಂಹಾಸನೇ ವರೇ ॥ ೧೧ ॥

---

೭. ಸಾಕ್ಷಾತ್ ವಿಷ್ಣುವೇ ಬ್ರಾಹ್ಮಣರೂಪದಲ್ಲಿ ಪ್ರಚ್ಛನ್ನನಾಗಿ ಸೇರಿಕೊಂಡು ಹೊರಗೆ ಮಾತ್ರ ಕಪಟವಾದ ಮಾನುಷಾಕಾರವನ್ನು ತೋರುವನು. ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿರುವ ಬ್ರಾಹ್ಮಣನನ್ನು ಮೂರ್ತಿವೆತ್ತಿರುವ ಸಾಕ್ಷಾತ್ ಅಗ್ನಿದೇವನೆನ್ನಬಹುದು.

೮. ಎಲೈ ಭಗವಂತನೇ, ಭರತಖಂಡದಲ್ಲಿ ನಿನ್ನ ಗುರು ಮತ್ತು ಇಷ್ಟದೇವತೆಯಾರು ? ಜ್ಞಾನಪರಿಪೂರ್ಣನಾದ ನೀನು ಈ ವೇಷಧಾರಣೆಗೆ ಕಾರಣವೇನು ?

೯. ಎಲೈ ಮುನಿಯೇ, ನನ್ನ ನಿಖಿಲ ರಾಜ್ಯಕೋಶವನ್ನೂ, ಐಶ್ವರ್ಯವನ್ನೂ ಸ್ವೀಕರಿಸಿ ನನ್ನನ್ನೂ, ನನ್ನ ಪುತ್ರನನ್ನೂ ನಿನ್ನ ಸೇವಕನನ್ನಾಗಿಯೂ, ನನ್ನ ಪತ್ನಿಯನ್ನು ನಿನ್ನ ದಾಸಿಯನ್ನಾಗಿಯೂ ಮಾಡಿಕೊ.

೧೦–೧೧. ಸಪ್ತಸಮುದ್ರಗಳಿಂದ ಪರಿವೃತವಾಗಿ, ಸಪ್ತದ್ವೀಪಗಳಿಂದಲೂ ಹದಿನೆಂಟು ಉಪದ್ವೀಪಗಳಿಂದಲೂ ಬೆಟ್ಟಗುಡ್ಡಗಳಿಂದಲೂ ಕಾಡುಮೇಡುಗಳಿಂದಲೂ ಕೂಡಿರುವ ಈ ಭೂಮಂಡಲವನ್ನು ನೀನು ಸ್ವೀಕರಿಸಿ ಭಾರತದ ರಾಜನಾಗಿ ರತ್ನಸಿಂಹಾಸನದಲ್ಲಿ ಕುಳಿತು, ನನ್ನ ಸೇವೆಯನ್ನು ಕೈಗೊಳ್ಳುತ್ತ ರಾಜ್ಯಭಾರಮಾಡು.

ನೃಪಸ್ಯ ವಚನಂ ಶ್ರುತ್ವಾ ಜಹಾಸ ಮುನಿಪುಂಗವಃ ।
ಉವಾಚ ಪರಮಂ ತತ್ವಮಜ್ಞಾತಂ ಸರ್ವದುರ್ಲಭಂ ॥ ೧೨ ॥

॥ ಅತಿಥಿರುವಾಚ ॥

ಮರೀಚಿರ್ಬ್ರಹ್ಮಣಃ ಪುತ್ರಸ್ತತ್ಪುತ್ರಃ ಕಶ್ಯಪಃ ಸ್ವಯಂ ।
ಕಶ್ಯಪಸ್ಯ ಸುತಾಃ ಸರ್ವೇ ಪ್ರಾಪ್ತಾ ದೇವತ್ವಮೀಪ್ಸಿತಂ ॥ ೧೩ ॥

ತೇಷು ತ್ವಷ್ಟಾ ಮಹಾಜ್ಞಾನೀ ಚಕಾರ ಪರಮಂ ತಪಃ ।
ದಿವ್ಯಂ ವರ್ಷಸಹಸ್ರಂ ಚ ಪುಷ್ಕರೇ ದುಷ್ಕರಂ ತಪಃ ॥ ೧೪ ॥

ಸಿಷೇವೇ ಬ್ರಾಹ್ಮಣಾರ್ಥಂ ಚ ದೇವದೇವಂ ಹರಿಂ ಪರಂ ।
ನಾರಾಯಣಾದ್ವರಂ ಪ್ರಾಪ ವಿಪ್ರಂ ತೇಜಸ್ವಿನಂ ಸುತಂ ॥ ೧೫ ॥

---

೧೨. ಇಂತು ನುಡಿದ ರಾಜನ ಮಾತುಗಳನ್ನು ಕೇಳಿ ಆ ಮುನಿಶ್ರೇಷ್ಠನು ನಗುತ್ತ ಯಾರೂ ಅರಿಯದ ಮತ್ತು ಎಲ್ಲರಿಗೂ ದುರ್ಲಭವಾದ, ಪರಮತತ್ವವನ್ನು ಆ ರಾಜನಿಗೆ ಉಪದೇಶಿಸಿದನು.

೧೩. ಅತಿಥಿ:—ಮರೀಚಿಮಹರ್ಷಿಯು ಬ್ರಹ್ಮಪುತ್ರನು. ಅವನ ಪುತ್ರನು ಕಶ್ಯಪನು. ಕಶ್ಯಪನ ಮಕ್ಕಳೆಲ್ಲರೂ ತಮಗಿಷ್ಟವಾದ ದೇವತಾಪದವಿಯನ್ನು ಪಡೆದರು.

೧೪. ಅವರಲ್ಲಿ ಮಹಾಜ್ಞಾನಿಯಾದ ತ್ವಷ್ಟೃವೆಂಬುವನು ಪುಷ್ಕರಕ್ಷೇತ್ರದಲ್ಲಿ ದಿವ್ಯ ಸಹಸ್ರವರ್ಷಗಳ ಕಾಲ ಅತಿದಾರುಣವಾದ ತಪಸ್ಸನ್ನಾಚರಿಸಿದನು.

೧೫. ಬ್ರಾಹ್ಮಣರ ಹಿತಕ್ಕಾಗಿ ಬ್ರಹ್ಮತೇಜಸ್ವಿಯಾದ ಪುತ್ರನನ್ನು ಪಡೆಯಲು ದೇವದೇವನಾದ ಶ್ರೀಮನ್ನಾರಾಯಣನನ್ನು ಸೇವಿಸಿ, ಅವನ ವರದಿಂದ ತೇಜಸ್ವಿಯಾದ ಪುತ್ರನನ್ನು ಪಡೆದನು.

ತತೋ ಬಭೂವ ತೇಜಸ್ವೀ ವಿಶ್ವರೂಪಸ್ತಪೋಧನಃ ।
ಪುರೋಧಸಂ ಚಕಾರೇಂದ್ರೋ ವಾಕ್ಪತೌ ತಂ ಕ್ರುಧಾ ಗತೇ ॥ ೧೬ ॥

ಮಾತಾಮಹೇಭ್ಯೋ ದೈತ್ಯೇಭ್ಯೋ ದತ್ತವಂತಂ ಘೃತಾಹುತಿಂ ।
ಚಿಚ್ಛೇದ ತಂ ಶುನಾಸೀರೋ ಬ್ರಾಹ್ಮಣಂ ಮಾತುರಾಜ್ಞಯಾ ॥ ೧೭ ॥

ವಿಶ್ವರೂಪಸ್ಯ ತನಯೋ ವಿರೂಪೋ ಮತ್ಪಿತಾಮಹಃ ।
ಅಹಂ ಚ ಸುತಪಾ ನಾಮ ವಿರಾಗೀ ಕಾಶ್ಯಪೋ ದ್ವಿಜಃ ॥ ೧೮ ॥

ಮಹಾದೇವೋ ಮಮಗುರುರ್ವಿದ್ಯಾಜ್ಞಾನಮನುಪ್ರದಃ ।
ಅಭೀಷ್ಟದೇವಃ ಸರ್ವಾತ್ಮಾ ಶ್ರೀಕೃಷ್ಣಃ ಪ್ರಕೃತೇಃ ಪರಃ ॥ ೧೯ ॥

---

೧೬. ಅತ್ಯಂತ ತೇಜಸ್ವಿಯೂ ತಪೋಧನನೂ ಆದ ವಿಶ್ವರೂಪನೆಂಬ ಆ ಬ್ರಾಹ್ಮಣನನ್ನು ದೇವೇಂದ್ರನು ಬೃಹಸ್ಪತಿಯು ಕುಪಿತನಾಗಿಹೋದಾಗ ಪುರೋಹಿತನನ್ನಾಗಿ ಮಾಡಿಕೊಂಡನು.

೧೭. ತನ್ನ ತಾಯಿಯತಂದೆ ಮುಂತಾದ ರಾಕ್ಷಸರಿಗೆಲ್ಲ ಯಜ್ಞಯಾಗದಲ್ಲಿ ಘೃತಾಹುತಿಯನ್ನು ಆ ವಿಶ್ವರೂಪನು ಗುಟ್ಟಾಗಿ ಅರ್ಪಿಸಲು ಆಗ ಇಂದ್ರನು ತನ್ನ ತಾಯಿಯ ಆಜ್ಞೆಯಂತೆ ಅವನ ತಲೆಯನ್ನು ಕತ್ತರಿಸಿದನು. (ವಿಶ್ವರೂಪನು ಪ್ರಹ್ಲಾದನ ಮಗಳಾದ ವಿರೋಚನೆಯ ಮಗನು.)

೧೮. ಎಲೈ ರಾಜನೇ, ಆ ವಿಶ್ವರೂಪನ ಮಗನಾದ ವಿರೂಪನೆಂಬುವನೇ ನನ್ನ ತಂದೆಯು, ನಾನೂ ಕೂಡ ಅದೇ ಕಶ್ಯಪವಂಶದಲ್ಲಿ ಜನಿಸಿ ವೈರಾಗ್ಯವನ್ನು ತಾಳಿರುವ ಸುತಪನೆಂಬ ಬ್ರಾಹ್ಮಣನಾಗಿದ್ದೇನೆ.

೧೯. ಸದ್ವಿದ್ಯೆಯನ್ನೂ, ದಿವ್ಯಜ್ಞಾನವನ್ನೂ, ದಿವ್ಯಮಂತ್ರವನ್ನೂ ನನಗೆ ಉಪದೇಶಿಸಿದ ಮಹಾದೇವನು ನನ್ನ ಗುರುವು. ಸರ್ವಾಂತರ್ಯಾಮಿಯೂ, ಪ್ರಕೃತಿಗಿಂತ ಮೇಲಾದವನೂ ಆದ ಶ್ರೀಕೃಷ್ಣಪರಮಾತ್ಮನೇ ನನ್ನ ಇಷ್ಟದೇವತೆಯು.

**ತಚ್ಚಿಂತಯಾಮಿ ಪಾದಾಬ್ಜಂ ನ ಮೇ ವಾಂಛಾಸ್ತಿ ಸಂಪದಿ ।**
**ಸಾಲೋಕ್ಯಸಾರ್ಷ್ಟಿಸಾರೂಪ್ಯಸಾಮೀಪ್ಯಂ ರಾಧಿಕಾಪತೇಃ　　॥ ೨೦ ॥**

**ತೇನ ದತ್ತಂ ನ ಗೃಹ್ಣಾಮಿ ವಿನಾ ತತ್ಸೇವನಂ ಶುಭಂ ।**
**ಬ್ರಹ್ಮತ್ವಮಮರತ್ವಂ ವಾ ಮನ್ಯೇಽಹಂ ಜಲಬಿಂಬವತ್　　॥ ೨೧ ॥**

**ಭಕ್ತಿವ್ಯವಹಿತಂ ಮಿಥ್ಯಾಭ್ರಮಮೇವ ತು ನಶ್ವರಂ ।**
**ಇಂದ್ರತ್ವಂ ವಾ ಮನುತ್ವಂ ವಾ ಸೌರತ್ವಂ ವಾ ನರಾಧಿಪ ।　　॥ ೨೨ ॥**

**ನ ಮನ್ಯೇ ಜಲರೇಖೇತಿ ನೃಪತ್ವಂ ಕೇನ ಗಣ್ಯತೇ ।**
**ಶ್ರುತ್ವಾ ಸುಯಜ್ಞಯಜ್ಞೇ ತೇ ಮುನೀನಾಂ ಗಮನಂ ನೃಪ　　॥ ೨೩ ॥**

**ಲಾಲಸಾಂ ವಿಷ್ಣುಭಕ್ತಿಂ ತೇ ಸಂಪ್ರಾಪಯಿತುಮಾಗತಃ ।**
**ಕೇವಲಾನುಗ್ರಹೀತಸ್ತ್ವಂ ನ ಹಿ ಶಪ್ತೋ ಮಯಾಽಧುನಾ　　॥ ೨೪ ॥**

---

೨೦. ಆದ್ದರಿಂದ ನಾನು ಆ ಪರಮಾತ್ಮನ ಪಾದಕಮಲಗಳನ್ನು ಸ್ಮರಿಸುತ್ತ ಆ ರಾಧಾಪತಿಯ ಸೇವೆಯನ್ನುಳಿದು ಸಾಲೋಕ್ಯ, ಸಾರ್ಷ್ಟಿ, ಸಾರೂಪ್ಯ ಮತ್ತು ಸಾಮೀಪ್ಯ ರೂಪವಾದ ಮುಕ್ತಿಯನ್ನೂ ಬಯಸುವುದಿಲ್ಲ. ಹೀಗಿರುವಾಗ ನನಗೆ ಲೌಕಿಕ ಸಂಪತ್ತಿನಲ್ಲಿ ಅಭಿಲಾಷೆಯುಂಟೇ ?

೨೧. ಆದ ಕಾರಣ ನೀನು ಕೊಡುವ ರಾಜ್ಯಸಂಪತ್ತನ್ನು ನಾನು ಸ್ವೀಕರಿಸುವುದಿಲ್ಲ. ಪರಮಾತ್ಮನ ಸೇವೆಯೊಂದನ್ನು ಬಿಟ್ಟು ಉಳಿದ ಬ್ರಹ್ಮಪದವಿಯನ್ನಾಗಲೀ, ದೇವತಾಪದವಿಯನ್ನಾಗಲೀ ನೀರಮೇಲಿನ ಗುಳ್ಳೆಯಂತೆ ಚಂಚಲವೆಂದು ನಾನು ತಿಳಿದಿರುವೆನು.

೨೨–೨೪. ಎಲೈ ರಾಜೇಂದ್ರನೇ, ಪರಮಾತ್ಮನಲ್ಲಿ ಭಕ್ತಿಯೊಂದನ್ನು ಬಿಟ್ಟು ಉಳಿದುದೆಲ್ಲವೂ ಮಿಥ್ಯಾರೂಪವಾದದ್ದು. ಭ್ರಾಂತಿಮಯವಾದ ಅವೆಲ್ಲವೂ ನಶ್ವರವಾದುದು. ಇಂದ್ರ, ಮನು, ಸೂರ್ಯ ಮುಂತಾದ ದೇವತಾಪದವಿಯನ್ನೆಲ್ಲ ನೀರಿನ ಗೆರೆಯಂತೆ ಚಂಚಲವೆಂದು ತಿಳಿದಿರುವ ನಾನು, ರಾಜಪದವಿಯನ್ನು ಎಣಿಸುವೆನೇ ? ಎಲೈ ಸುಯಜ್ಞನೇ, ನಿನ್ನ ಯಜ್ಞಕ್ಕೆ ಅನೇಕ ಮುನಿಗಳು ಬಂದುದನ್ನು ಕೇಳಿ ನಿನಗೆ ವಿಷ್ಣುಭಕ್ತಿಯಲ್ಲಿ ಆಸಕ್ತಿಯನ್ನುಂಟುಮಾಡಲು ನಾನು ಬಂದೆನು. ಆದುದರಿಂದ ನೀನು ನನ್ನ ಅನುಗ್ರಹವನ್ನು ಪಡೆದಿರುವೆಯೇ ಹೊರತು ನಾನು ನಿನ್ನನ್ನೀಗ ಶಪಿಸಿಲ್ಲ.

ಸಮುದ್ಧೃತಶ್ಚ ಪತಿತೋ ಘೋರೇ ನಿಮ್ನೇ ಭವಾರ್ಣವೇ ।
ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ॥ ೨೫ ॥

ತೇ ಪುನಂತ್ಯುರುಕಾಲೇನ ಕೃಷ್ಣಭಕ್ತಾಶ್ಚ ದರ್ಶನಾತ್ ।
ರಾಜನ್ನಿರ್ಗಮ್ಯತಾಂ ಗೇಹಾದ್ದೇಹಿ ರಾಜ್ಯಂ ಸುತಾಯ ಚ ॥ ೨೬ ॥

ಪುತ್ರೇ ನ್ಯಸ್ಯ ಪ್ರಿಯಾಂ ಸಾಧ್ವೀಂ ಗಚ್ಛ ವತ್ಸ ವನಂ ದ್ರುತಂ ।
ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ಮಿಥ್ಯೈವ ಭೂಮಿಪ ॥ ೨೭ ॥

ಶ್ರೀಕೃಷ್ಣಂ ಭಜ ರಾಧೇಶಂ ಪರಮಾತ್ಮಾನಮೀಶ್ವರಂ ।
ಧ್ಯಾನಸಾಧ್ಯಂ ದುರಾರಾಧ್ಯಂ ಬ್ರಹ್ಮವಿಷ್ಣುಶಿವಾದಿಭಿಃ ॥ ೨೮ ॥

---

೨೫. ಭಯಂಕರವೂ ಅತಿ ಗಂಭೀರವೂ ಆದ ಸಂಸಾರವೆಂಬ ಸಮುದ್ರದಲ್ಲಿ ಮುಳುಗಿದ್ದ ನಿನ್ನನ್ನು ಮೇಲಕ್ಕೆತ್ತಿರುವೆನು. ಜಲಮಯವಾದ ಪುಣ್ಯತೀರ್ಥಗಳೂ, ಮಣ್ಣು ಮತ್ತು ಶಿಲೆಯಿಂದ ನಿರ್ಮಿತವಾದ ದೇವತಾಪ್ರತಿಮೆಗಳೂ ಕೂಡ, ಬಹಳ ಕಾಲವ ಮೇಲೆ ಮನುಜನನ್ನು ಪವಿತ್ರಗೊಳಿಸುತ್ತವೆ. ಕೃಷ್ಣಭಕ್ತರಾದರೋ ದರ್ಶನ ಮಾತ್ರದಿಂದಲೇ ಪವಿತ್ರಗೊಳಿಸುವರು.

೨೬. ಆದ್ದರಿಂದ ಎಲೈ ರಾಜನೇ, ನಿನ್ನ ಮಗನಿಗೆ ರಾಜ್ಯವನ್ನು ಕೊಟ್ಟು ನೀನು ಮನೆಯಿಂದ ಹೊರಕ್ಕೆಹೊರಟು ವಾನಪ್ರಸ್ಥನಾಗು.

೨೭. ಎಲೈ ರಾಜನೇ, ಬ್ರಹ್ಮನು ಮೊದಲುಗೊಂಡು ಒಂದು ಹುಲ್ಲುಗರಿಯ ವರೆಗೆ ಸಕಲವೂ ಮಿಥ್ಯಾಭೂತವಾದುದರಿಂದ, ನಿನ್ನ ಮಗನ ರಕ್ಷಣೆಯಲ್ಲಿ ನಿನ್ನ ಪ್ರಿಯಪತ್ನಿಯನ್ನೂ ಬಿಟ್ಟು ಜಾಗ್ರತೆಯಾಗಿ ನೀನು ವಾನಪ್ರಸ್ಥನಾಗು.

೨೮. ಅಲ್ಲಿ, ಬ್ರಹ್ಮ ವಿಷ್ಣು ಶಿವಾದಿಗಳಿಂದ ಆರಾಧಿಸಲಸಾಧ್ಯನೂ, ಧ್ಯಾನೈಕಗಮ್ಯನೂ, ರಾಧಾಪತಿಯೂ, ಸರ್ವೇಶ್ವರನೂ ಆದ ಶ್ರೀಕೃಷ್ಣಪರಮಾತ್ಮನ್ನು ಭಕ್ತಿಯಿಂದ ಭಜಿಸು.

ಆವಿರ್ಭೂತ್ಯೈಸ್ತಿರೋಭೂತ್ಯೈಃ ಪ್ರಾಕೃತ್ಯೈಃ ಪ್ರಕೃತೇಃ ಪರಂ ।
ಬ್ರಹ್ಮಾ ಸ್ರಷ್ಟಾ ಹರಿಃ ಪಾತಾ ಹರಃ ಸಂಹಾರಕಾರಕಃ　　॥ ೨೯ ॥

ದಿಕ್ಪಾಲಾಶ್ಚ ದಿಗೀಶಾಶ್ಚ ಭ್ರಮಂತ್ಯೇವಾಸ್ಯ ಮಾಯಯಾ ।
ಯದಾಜ್ಞಯಾ ವಾತಿ ವಾಯುಃ ಸೂರ್ಯೋ ದಿನಪತಿಃ ಸದಾ　　॥ ೩೦ ॥

ನಿಶಾಪತಿಃ ಶಶೀ ಶಶ್ವತ್ಸಸ್ಯಸುಸ್ನಿಗ್ಧತಾಕರಃ ।
ಕಾಲೇನ ಮೃತ್ಯುಃ ಸರ್ವೇಷಾಂ ಸರ್ವವಿಶ್ವೇಷು ವೈ ಭವೇತ್　　॥ ೩೧ ॥

ಕಾಲೇ ವರ್ಷತಿ ಶಕ್ರಶ್ಚ ದಹತ್ಯಗ್ನಿಶ್ಚ ಕಾಲತಃ ।
ಭೀತವದ್ವಿಶ್ವಶಾಸ್ತಾ ಚ ಪ್ರಜಾಸಂಯಮನೋ ಯಮಃ　　॥ ೩೨ ॥

---

೨೯. ಆವಿರ್ಭಾವತಿರೋಭಾವರೂಪವಾದ ಪ್ರಕೃತಿಯ ನಿಯಮಕ್ಕೊಳಗಾದ ಸೃಷ್ಟಿಕರ್ತನಾದ ಬ್ರಹ್ಮನೂ, ರಕ್ಷಕನಾದ ಹರಿಯೂ, ಸಂಹಾರಕನಾದಹರನೂ ಪ್ರಕೃತಿಗಿಂತ ಪರನಾದ ಆ ಪರಮಾತ್ಮನ ಅಧೀನರು.

೩೦. ಪರಮಾತ್ಮನ ಮಾಯೆಯಿಂದ ಅಷ್ಟದಿಕ್ಪಾಲಕರೆಲ್ಲರೂ ಭ್ರಮಿಸುತ್ತಿರುವರು. ಅವನ ಅಪ್ಪಣೆಯಿಂದಲೇ ವಾಯುವು ಚಲಿಸುವುದು, ಸೂರ್ಯನು ತಪಿಸುವನು.

೩೧. ರಾತ್ರಿಗೊಡೆಯನಾದ ಚಂದ್ರನು ಸಸ್ಯಗಳಿಗೆ ಜೀವದಾನಮಾಡುವುದೂ ಅವನ ಅಪ್ಪಣೆಯಂತೆಯೇ. ಪರಮಾತ್ಮನಿಗೆ ಅಧೀನನಾದ ಕಾಲಪುರುಷನಿಂದಲೇ ನಿಖಿಲವಿಶ್ವದಲ್ಲಿಯೂ ಎಲ್ಲರಿಗೂ ಮೃತ್ಯುವು ಸಂಭವಿಸುವುದು.

೩೨. ಕಾಲಾನುಗುಣವಾಗಿ ಇಂದ್ರನು ಮಳೆಗರೆಯುವುದೂ, ಅಗ್ನಿಯು ಸುಡುವುದೂ, ವಿಶ್ವಶಿಕ್ಷಕನಾದ ಯಮನು ಪ್ರಜೆಗಳನ್ನು ಶಿಕ್ಷಿಸುವುದೂ ಆ ಪರಮಾತ್ಮನ ಭಯದಿಂದಲೇ, 'ಭೀಷಾಸ್ಮಾದ್ವಾತಃ ಪವತೇ' ಇತ್ಯಾದಿ ಶ್ರುತಿಯೇ ಇದಕ್ಕೆ ಪ್ರಮಾಣವಾಗಿದೆ.

**ಕಾಲಃ ಸಂಹರತೇ ಕಾಲೇ ಕಾಲೇ ಸೃಜತಿ ಪಾತಿ ಚ ।**
**ಸ್ವದೇಶೇ ವೈ ಸಮುದ್ರಶ್ಚ ಸ್ವದೇಶೇ ವೈ ವಸುಂಧರಾ ॥ ೩೩ ॥**

**ಸ್ವದೇಶೇ ಪರ್ವತಾಶ್ಚೈವ ಸ್ವಾಃ ಪಾತಾಲಾಃ ಸ್ವದೇಶತಃ ।**
**ಸ್ವರ್ಲೋಕಾಃ ಸಪ್ತ ರಾಜೇಂದ್ರ ಸಪ್ತದ್ವೀಪಾ ವಸುಂಧರಾ ॥ ೩೪ ॥**

**ಶೈಲಸಾಗರಸಂಯುಕ್ತಾಃ ಪಾತಾಲಾಃ ಸಪ್ತ ಚೈವ ಹಿ ।**
**ಬ್ರಹ್ಮಾಂಡಮೇಭಿರ್ಲೋಕೈಶ್ಚ ಡಿಂಬಾಕಾರಂ ಜಲಪ್ಲುತಂ ॥ ೩೫ ॥**

**ಸಂತ್ಯೇವ ಪ್ರತಿವಿಧ್ಯಂಡೇ ಬ್ರಹ್ಮವಿಷ್ಣುಶಿವಾದಯಃ ।**
**ಸುರಾ ನರಾಶ್ಚ ನಾಗಾಶ್ಚ ಗಂಧರ್ವಾ ರಾಕ್ಷಸಾದಯಃ ॥ ೩೬ ॥**

**ಆಪಾತಾಲಾದ್ಬ್ರಹ್ಮಲೋಕಪರ್ಯಂತಂ ಡಿಂಬರೂಪಕಂ ।**
**ಇದಮೇವ ತು ವಿಧ್ಯಂಡಮುತ್ತಮಂ ಕೃತ್ರಿಮಂ ನೃಪ ॥ ೩೭ ॥**

---

೩೩. ಕಾಲಪುರುಷನು ಕಾಲಾನುಗುಣವಾಗಿ ಸೃಷ್ಟಿ ಸ್ಥಿತಿ ಲಯಗಳನ್ನು ಪರಮಾತ್ಮನ ಅಪ್ಪಣೆಯಂತೆ ನೆರವೇರಿಸುವನು. ಆ ಪರಮಾತ್ಮನ ನಿರ್ದೇಶದಿಂದ ಸಮುದ್ರಗಳೂ, ಭೂಮಿಯೂ ತಮ್ಮ ತಮ್ಮ ಸ್ಥಾನದಲ್ಲಿಯೇ ಇರುವುವು.

೩೪. ಸಪ್ತಪರ್ವತಗಳೂ, ಸಪ್ತಪಾತಾಳಲೋಕಗಳೂ, ಸಪ್ತಸ್ವರ್ಗಲೋಕಗಳೂ, ಸಪ್ತದ್ವೀಪಪರಿವೃತವಾದ ವಸುಂಧರೆಯೂ ಆ ಪರಮಾತ್ಮನ ಇಷ್ಟದಂತೆ ತಮ್ಮ ತಮ್ಮ ಸ್ಥಾನದಲ್ಲಿ ಚಲಿಸದಿರುವುವು.

೩೫. ಪರ್ವತ ಮತ್ತು ಸಮುದ್ರಗಳಿಂದ ಕೂಡಿದ ಸಪ್ತಪಾತಾಳಲೋಕಗಳಿರುವುವು. ಈ ಎಲ್ಲ ಲೋಕಗಳಿಂದ ಪೂರ್ಣವಾದ ಬ್ರಹ್ಮಾಂಡವು ಒಂದು ಗೋಳಾಕಾರದಿಂದ ನೀರಿನಲ್ಲಿ ತೇಲುತ್ತಿರುವುದು.

೩೬. ಈ ರೀತಿಯಾದ ಪ್ರತಿ ಬ್ರಹ್ಮಾಂಡದಲ್ಲೂ ಬ್ರಹ್ಮ ವಿಷ್ಣು ಶಿವಾದಿಗಳೂ, ಸುರ, ನರ, ರಾಕ್ಷಸರೂ, ನಾಗ, ಗಂಧರ್ವ ಮುಂತಾದವರೂ ಇರುವರು.

೩೭. ಹೀಗೆ ಪಾತಾಳದಿಂದ ಬ್ರಹ್ಮಲೋಕದವರೆಗೂ ಡಿಂಭರೂಪವಾಗಿರುವ ಈ ಬ್ರಹ್ಮಾಂಡವು ಉತ್ತಮವಾದರೂ ಕೃತ್ರಿಮವಾದುದು.

ನಾಭಿಪದ್ಮೇ ವಿರಾಡ್ವಿಷ್ಣೋಃ ಕ್ಷುದ್ರಸ್ಯ ಜಲಶಾಯಿನಃ ।
ಸ್ಥಿತಂ ಯಥಾ ಪದ್ಮಬೀಜಂ ಕರ್ಣಿಕಾಯಾಂ ಚ ಪಂಕಜೇ ॥ ೩೮ ॥

ಏವಂ ಸೋಽಪಿ ಶಯಾನಸ್ಸ್ಯಾಜ್ಜಲತಲ್ಪೇ ಸುವಿಪ್ಲುತೇ ।
ಧ್ಯಾಯತ್ಯೇವ ಮಹಾಯೋಗೀ ಪ್ರಾಕೃತಃ ಪ್ರಕೃತೇಃ ಪರಂ ॥ ೩೯ ॥

ಕಾಲಭೀತಶ್ಚ ಕಾಲೇಶಂ ಕೃಷ್ಣಮಾತ್ಮಾನಮೀಶ್ವರಂ ।
ಮಹಾವಿಷ್ಣೋರ್ಲೋಮಕೂಪಸಾಧಾರಃ ಸೋಽಸ್ತಿ ವಿಸ್ತೃತೇ ।
ಕೂಪೇಷು ಲೋಮ್ನಾಂ ಪ್ರತ್ಯೇಕಮೇವಂ ವಿಶ್ವಾನಿ ಸಂತಿ ವೈ ॥ ೪೦ ॥

ಮಹಾವಿಷ್ಣೋರ್ಗಾತ್ರಲೋಮ್ನಾಂ ಬ್ರಹ್ಮಾಂಡಾನಾಂ ಚ ಭೂಮಿಪ ।
ಸಂಖ್ಯಾಂ ಕರ್ತುಂ ನ ಶಕ್ನೋತಿ ಕೃಷ್ಣೋಽಪ್ಯನ್ಯಸ್ಯ ಕಾ ಕಥಾ ॥ ೪೧ ॥

---

೩೮. ಜಲಶಾಯಿಯಾದ ಮಹಾವಿಷ್ಣುವಿನ ನಾಭಿಕಮಲದಲ್ಲಿ ತಾವರೆಯ ಕರ್ಣಿಕಾರದಲ್ಲಿ ಪದ್ಮಬೀಜವು ಅಡಗಿರುವಂತೆ ಬ್ರಹ್ಮಾಂಡವು ಅಡಗಿರುವುದು.

೩೯. ಮಹಾಯೋಗಿಯಾದ ಮಹಾವಿರಾಟನೂ ಕೂಡ ಅತಿ ಚಂಚಲವಾದ ತೆರೆಗಳಿಂದ ಕೂಡಿದ ಆ ಜನಶಯನದಲ್ಲಿ ಪವಡಿಸಿ, ಪ್ರಕೃತಿಗಿಂತ ಶ್ರೇಷ್ಠನಾದ ಪರಮಾತ್ಮನನ್ನು ಧ್ಯಾನಮಾಡುತ್ತಿರುವನು.

೪೦. ಕಾಲಕ್ಕೆ ಭೀತನಾಗಿ, ಕಾಲನಿಗೂ ಒಡೆಯನಾದ ಶ್ರೀಕೃಷ್ಣಪರಮಾತ್ಮನನ್ನು ಧ್ಯಾನಿಸುತ್ತಿರುವ ಆ ಮಹಾವಿಷ್ಣುವಿನ ಲೋಮಕೂಪವು ಅತಿ ವಿಸ್ತಾರವು. ಎಲ್ಲಕ್ಕೂ ಆಧಾರವೂ ಆಗಿದೆ. ಅವನ ಪ್ರತಿ ಲೋಮಕೂಪಗಳಲ್ಲಿಯೂ ಪ್ರತ್ಯೇಕವಾಗಿ ಎಲ್ಲ ವಿಶ್ವಗಳೂ ಅಡಗಿವೆ.

೪೧. ಎಲೈ ರಾಜನೇ, ಮಹಾವಿಷ್ಣುವಿನ ಶರೀರದ ರೋಮಗಳನ್ನೂ, ಅದರಲ್ಲಡಗಿರುವ ಬ್ರಹ್ಮಾಂಡವನ್ನೂ, ಶ್ರೀಕೃಷ್ಣಪರಮಾತ್ಮನೇ ಎಣಿಸಲಸದಳವಾಗಿರುವಾಗ ಇನ್ನುಳಿದವರ ಪಾಡೇನು ?

**ಮಹಾವಿಷ್ಣುಃ ಪ್ರಾಕೃತಿಕಃ ಸೋಽಪಿ ಡಿಂಬೋದ್ಭವಃ ಸದಾ ।**
**ಭವೇತ್ಕೃಷ್ಣೇಚ್ಛಯಾ ಡಿಂಬಃ ಪ್ರಕೃತೇರ್ಗರ್ಭಸಂಭವಃ ॥ ೪೨ ॥**

**ಸರ್ವಾಧಾರೋ ಮಹಾನ್ವಿಷ್ಣುಃ ಕಾಲಭೀತಃ ಸಶಂಕಿತಃ ।**
**ಕಾಲೇಶಂ ಧ್ಯಾಯತಿ ಸ್ವೈರಂ ಕೃಷ್ಣಮಾತ್ಮಾನಮೀಶ್ವರಂ ॥ ೪೩ ॥**

**ಏವಂ ಚ ಸರ್ವವಿಶ್ವಸ್ಥಾ ಬ್ರಹ್ಮವಿಷ್ಣುಶಿವಾದಯಃ ।**
**ಮಹಾನ್ವಿರಾಟ್ ಕ್ಷುದ್ರವಿರಾಟ್ ಸರ್ವೇ ಪ್ರಾಕೃತಿಕಾಃ ಸದಾ ॥ ೪೪ ॥**

**ಸಾ ಸರ್ವಬೀಜರೂಪಾ ಚ ಮೂಲಪ್ರಕೃತಿರೀಶ್ವರೀ ।**
**ಕಾಲೇ ಲೀನಾ ಚ ಕಾಲೇಶೇ ಕೃಷ್ಣೇ ತಂ ಧ್ಯಾಯತಿಸ್ಮ ಸಾ ॥ ೪೫ ॥**

**ಏವಂ ಸರ್ವೇ ಕಾಲಭೀತಾಃ ಪ್ರಕೃತಿಃ ಪ್ರಾಕೃತಾಸ್ತಥಾ ।**
**ಆವಿರ್ಭೂತಾಸ್ತಿರೋಭೂತಾಃ ಕಾಲೇನ ಪರಮಾತ್ಮನಿ ॥ ೪೬ ॥**

---

೪೨. ಈರೀತಿಯಾದ ಮಹಾವಿಷ್ಣುವೂ ಕೂಡ ಡಿಂಭದಿಂದ ಹೊರಬಂದು, ಪ್ರಾಕೃತಸೃಷ್ಟಿಗೊಳಗಾಗಿರುವನು. ಶ್ರೀಕೃಷ್ಣಪರಮಾತ್ಮನಿಗೆ ಇಚ್ಛೆಯುಂಟಾದಾಗ ಡಿಂಭವು ಪ್ರಕೃತಿಯ ಗರ್ಭದಿಂದ ಜನಿಸುವುದು.

೪೩. ಸರ್ವಕ್ಕೂ ಆಧಾರಭೂತನಾದ ಆ ಮಹಾವಿಷ್ಣುವು ಕಾಲಕ್ಕೆ ಅಧೀನನಾಗಿ, ಕಾಲೇಶನಾದ ಶ್ರೀಕೃಷ್ಣಪರಮಾತ್ಮನನ್ನು ಸ್ವೇಚ್ಛೆಯಿಂದ ಧ್ಯಾನಿಸುತ್ತಿರುವನು.

೪೪. ಹೀಗೆ ಎಲ್ಲ ವಿಶ್ವದಲ್ಲಿಯೂ ಇರುವ ಬ್ರಹ್ಮ ವಿಷ್ಣು ಶಿವಾದಿಗಳೂ, ಮಹಾವಿರಾಟ್ ಮತ್ತು ಕ್ಷುದ್ರವಿರಾಟರೂ ಪ್ರಕೃತಿಯ ನಿಯಮಕ್ಕೆ ಅಧೀನರಾಗಿರುವರು.

೪೫. ಸಕಲಕ್ಕೂ ಬೀಜಸ್ವರೂಪಿಣಿಯಾದ ಆ ಮೂಲಪ್ರಕೃತಿಯು ಕಾಲೇಶನಾದ ಶ್ರೀಕೃಷ್ಣಪರಮಾತ್ಮನಲ್ಲಿ ಕಾಲಾನುಗುಣವಾಗಿ ಐಕ್ಯತೆಯನ್ನು ಹೊಂದಿ ಧ್ಯಾನಿಸುತ್ತಿರುವಳು.

೪೬. ಹೀಗೆ ಪ್ರಕೃತಿಯೂ, ಪ್ರಕೃತಿಸಂಭೂತರೂ ಕಾಲಾಧೀನರಾಗಿ, ಪರಮಾತ್ಮನಿಂದ ಆವಿರ್ಭಾವವನ್ನೂ, ಅವನಲ್ಲಿಯೇ ತಿರೋಭಾವವನ್ನೂ ಕಾಲಾನುಗುಣವಾಗಿ ಹೊಂದುವರು.

**ಇತ್ಯೇವಂ ಕಥಿತಂ ಸರ್ವಂ ಮಹಾಜ್ಞಾನಂ ಸುದುರ್ಲಭಂ ।**
**ಶಿವೇನ ಗುರುಣಾ ದತ್ತಂ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೪೭ ॥**

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದಾಂತರ್ಗತ ಹರಗೌರೀಸಂವಾದೇ ರಾಧೋಪಾಖ್ಯಾನೇ ಸುಯಜ್ಞೋಪಾಖ್ಯಾನೇ ಸುಯಜ್ಞಂಪ್ರತಿ ಅತಿಥ್ಯುಪದೇಶೋ ನಾಮ ತ್ರಿಪಂಚಾಶತ್ತಮೋಽಧ್ಯಾಯಃ**

---

೪೭. ಈ ರೀತಿಯಾಗಿ ಸರ್ವರಿಗೂ ಸುಲಭವಲ್ಲದ ನನ್ನ ಗುರುವಾದ ಶಿವನು ನನಗೆ ಉಪದೇಶಿಸಿದ ಮಹಾಜ್ಞಾನವನ್ನು ನಿನಗೆ ವಿವರಿಸಿರುವೆನು. ಇನ್ನೇನನ್ನು ಕೇಳಬೇಕೆಂದು ನಿನಗೆ ಇಚ್ಛೆಯಿರುವುದು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ 'ಸುಯಜ್ಞನಿಗೆ ಅತಿಥಿಯ ಉಪದೇಶ' ವೆಂಬ ಐವತ್ತಮೂರನೆಯ ಅಧ್ಯಾಯವು ಮುಗಿದುದು.

## ಐವತ್ತಮೂರನೆಯ ಅಧ್ಯಾಯದ ಸಾರಾಂಶವು

ವಸಿಷ್ಠನ ಉಪದೇಶದಂತೆ ಸುಯಜ್ಞನು ಅತಿಥಿಯಾದ ಬ್ರಾಹ್ಮಣನಿಗೆ ಸಾಷ್ಟಾಂಗವೆರಗಿ ತನ್ನ ಅಪರಾಧವನ್ನು ಮನ್ನಿಸಬೇಕೆಂದು ಬೇಡಿಕೊಂಡನಂತರ ಆ ಬ್ರಾಹ್ಮಣನು ಪ್ರಸನ್ನನಾದನು. ಅನಂತರ ಸುಯಜ್ಞನು ತನ್ನ ರಾಜ್ಯಕೋಶಗಳನ್ನು ಅವನಿಗೆ ಸಮರ್ಪಿಸಲು ಬಯಸಿದಾಗ ಆ ಬ್ರಾಹ್ಮಣೋತ್ತಮನು ಬ್ರಹ್ಮಾದಿ ಸ್ತಂಬಪರ್ಯಂತವಾದ ನಿಖಿಲ ಜಗತ್ತೂ ಅಶಾಶ್ವತವಾದ ಕಾರಣ, ಶ್ರೀಕೃಷ್ಣಪರಮಾತ್ಮನನ್ನು ಅನನ್ಯಭಕ್ತಿಯಿಂದ ಭಜಿಸುವುದೇ ಮುಕ್ತಿಗೆ ಸಾಧನವೆಂದು ಆ ರಾಜನಿಗೆ ವಿಸ್ತಾರವಾಗಿ ಉಪದೇಶಿಸಿದನು.

॥ ಓಂ ॥

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### ॥ ಚತುಃಪಂಚಾಶತ್ತಮೋಽಧ್ಯಾಯಃ ॥

॥ ರಾಜೋವಾಚ ॥

ಕುತ್ರಾಧಾರೋ ಮಹಾವಿಷ್ಣೋಃ ಸರ್ವಾಧಾರಸ್ಯ ತಸ್ಯ ಚ ।
ಕಾಲಭೀತಸ್ಯ ಕತಿ ಚ ಕಾಲಮಾಯಾ ಮುನೀಶ್ವರ ॥ ೧ ॥

ಕ್ಷುದ್ರಸ್ಯ ಕತಿಚಿತ್ಕಾಲಂ ಬ್ರಹ್ಮಣಃ ಪ್ರಕೃತೇಸ್ತಥಾ ।
ಮನೋರಿಂದ್ರಸ್ಯ ಚಂದ್ರಸ್ಯ ಸೂರ್ಯಸ್ಯಾಯುಸ್ತಥೈವ ಚ ॥ ೨ ॥

---

### ಐವತ್ತನಾಲ್ಕನೆಯ ಅಧ್ಯಾಯವು

೧. ರಾಜ :—ಎಲೈ ಮುನಿಶ್ರೇಷ್ಠನೇ, ಸಕಲ ಜಗತ್ತಿಗೂ ಆಧಾರಭೂತನಾದ ಮಹಾವಿಷ್ಣುವಿಗೆ ಆಧಾರವಾವುದು? ಕಾಲಭೀತನಾದ ಆ ಮಹಾವಿಷ್ಣುವಿನ ಕಾಲ ಪರಿಮಾಣವೆಷ್ಟು?

೨. ಕ್ಷುದ್ರವಿರಾಟ್ಪುರುಷನಿಗೂ, ಬ್ರಹ್ಮ ಮತ್ತು ಪ್ರಕೃತಿಯರಿಗೂ ಜೀವಿತ ಕಾಲಾವಧಿಯಾವುದು? ಮನು ಮತ್ತು ಇಂದ್ರರಿಗೂ, ಚಂದ್ರಸೂರ್ಯರಿಗೂ ಆಯುಃ ಪರಿಮಿತಿಯೆಷ್ಟು?

ಅನ್ಯೇಷಾಂ ವೈ ಜನಾನಾಂ ಚ ಪ್ರಾಕೃತಾನಾಂ ಪರಂ ವಯಃ ।
ವೇದೋಕ್ತಂ ಸುವಿಚಾರ್ಯ್ಯಂ ಚ ವದ ವೇದವಿದಾಂ ವರ ॥ ೩ ॥

ವಿಶ್ವಾನಾಮೂರ್ಧ್ವಭಾಗೇ ಚ ಕಸ್ಸ್ಯಾದ್ವಾ ಲೋಕ ಏವ ಸಃ ।
ಕಥಯಸ್ವ ಮಹಾಭಾಗ ಸಂದೇಹಚ್ಛೇದನಂ ಕುರು ॥ ೪ ॥

॥ ಮುನಿರುವಾಚ ॥

ಗೋಲೋಕೋ ನೃಪ ವಿಶ್ವಾನಾಂ ವಿಸ್ತೃತಶ್ಚ ನಭಸ್ಸಮಃ ।
ತಥಾ ನಿತ್ಯಂ ಡಿಂಬರೂಪಶ್ಶ್ರೀಕೃಷ್ಣೇಚ್ಛಾಸಮುದ್ಭವಃ ॥ ೫ ॥

ಜಲೇನ ಪರಿಪೂರ್ಣಶ್ಚ ಕೃಷ್ಣಸ್ಯ ಮುಖಬಿಂದುನಾ ।:
ಸೃಷ್ಟ್ಯುನ್ಮುಖಸ್ಯಾದಿಸರ್ಗೇ ಪರಿಶ್ರಾಂತಸ್ಯ ಖೇಲತಃ ॥ ೬ ॥

ಪ್ರಕೃತ್ಯಾ ಸಹ ಯುಕ್ತಸ್ಯ ಕಲಯಾ ನಿಜಯಾ ನೃಪ ।
ತತ್ರಾಧಾರೋ ಮಹಾವಿಷ್ಣೋರ್ವಿಶ್ವಾಧಾರಸ್ಯ ವಿಸ್ತೃತಃ ॥ ೭ ॥

---

೩. ಇತರ ಪ್ರಾಕೃತಜನರ ವಯಸ್ಸಿನ ಅವಧಿ ಯಾವುದು? ವೇದಜ್ಞರಲ್ಲಿ ಶ್ರೇಷ್ಠನಾದ ನೀನು ಇವೆಲ್ಲವನ್ನೂ ಚೆನ್ನಾಗಿ ಪರ್ಯಾಲೋಚಿಸಿ ವೇದೋಕ್ತವಾದುದನ್ನು ತಿಳಿಸು.

೪. ನಿಖಿಲವಿಶ್ವಕ್ಕೂ ಬಹಿರ್ಭೂತವಾಗಿ ಮೇಲೆ ಇರುವ ಲೋಕವಾವುದು? ಎಲೈ ಮಹಾಮಹಿಮನೇ, ಇವೆಲ್ಲವನ್ನೂ ಹೇಳಿ ನನ್ನ ಸಂದೇಹವನ್ನು ಪರಿಹರಿಸು.

೫. ಮುನಿ:—ಎಲೈ ರಾಜೇಂದ್ರನೇ, ನಿಖಿಲವಿಶ್ವಕ್ಕೂ ಮೇಲುಭಾಗದಲ್ಲಿ ಆಕಾಶದಂತೆ ಅತಿ ವಿಸ್ತಾರವಾದ ಗೋಲೋಕವೆಂಬುದಿರುವುದು. ಅತಿ ಸೂಕ್ಷ್ಮವೂ ನಿತ್ಯವೂ ಆದ ಆ ಲೋಕವು ಶ್ರೀಕೃಷ್ಣಪರಮಾತ್ಮನ ಇಚ್ಛಾಮಾತ್ರದಿಂದ ವಿಸ್ತೃತವಾಗುವುದು.

೬-೭. ಸೃಷ್ಟಿಯ ಆದಿಯಲ್ಲಿ ತನ್ನ ಕಲಾರೂಪಿಣಿಯಾದ ಪ್ರಕೃತಿಯೊಡನೆ ಸೇರಿ ಸ್ವೇಚ್ಛಾಕ್ರೀಡೆಯಾಡಿ ಬಳಲಿ ಸೃಷ್ಟಿಗೆ ಮನಸ್ಸುಮಾಡಿದ ಪರಮಾತ್ಮನ ಮುಖದ ಸ್ವೇದ ಬಿಂದುಗಳಿಂದ ಜಗತ್ತೆಲ್ಲವೂ ಜಲಮಯವಾಯಿತು. ವಿಶ್ವಕ್ಕೆಲ್ಲ ಆಧಾರಭೂತನಾದ ಮಹಾವಿಷ್ಣುವಿಗೆ ಆ ಜಲವೇ ಆಧಾರವಾಯಿತು.

**ಪ್ರಕೃತೇರ್ಗರ್ಭಸಂಭೂತಡಿಂಬೋದ್ಭೂತಸ್ಯ ಭೂಮಿಪ ।**
**ಸುವಿಸ್ತೃತೇ ಜಲಾಧಾರೇ ಶಯಾನಶ್ಚ ಮಹಾವಿರಾಟ್ ॥ ೮ ॥**

**ರಾಧೇಶ್ವರಸ್ಯ ಕೃಷ್ಣಸ್ಯ ಷೋಡಶಾಂಶಃ ಪ್ರಕೀರ್ತಿತಃ ।**
**ದೂರ್ವಾದಲಶ್ಯಾಮರೂಪಃ ಸಸ್ಮಿತಶ್ಚ ಚತುರ್ಭುಜಃ ॥ ೯ ॥**

**ವನಮಾಲಾಧರಃ ಶ್ರೀಮಾಂಚ್ಛೋಭಿತಃ ಪೀತವಾಸಸಾ ।**
**ಊರ್ಧ್ವಂ ನಭಸಿ ಸಂವಿಷ್ಟೋ ನಿತ್ಯೋ ವೈಕುಂಠ ಏವ ಚ ॥ ೧೦ ॥**

**ಆತ್ಮಾಕಾಶಸಮೋ ನಿತ್ಯೋ ವಿಸ್ತೃತಶ್ಚಂದ್ರಬಿಂಬವತ್ ।**
**ಈಶ್ವರೇಚ್ಛಾಸಮುದ್ಭೂತೋ ನಿರ್ಲಕ್ಷ್ಯಶ್ಚ ನಿರಾಶ್ರಯಃ ॥ ೧೧ ॥**

**ಆಕಾಶವತ್ಸುವಿಸ್ತಾರೋ ರತ್ನೌಘೈಶ್ಚ ವಿನಿರ್ಮಿತಃ ।**
**ತತ್ರ ನಾರಾಯಣಃ ಶ್ರೀಮಾನ್ವನಮಾಲೀ ಚತುರ್ಭುಜಃ ॥ ೧೨ ॥**

---

೮-೯. ಎಲೈ ರಾಜನೇ, ಪ್ರಕೃತಿಯ ಗರ್ಭದಿಂದ ಹೊರಬಂದ ಬ್ರಹ್ಮಾಂಡದ ವಿಸ್ತಾರವಾದ ಜಲಾಧಾರದಲ್ಲಿ ಪವಡಿಸಿರುವ ಮಹಾವಿರಾಟ್ಪುರುಷನು ರಾಧಾಪತಿಯಾದ ಶ್ರೀಕೃಷ್ಣಪರಮಾತ್ಮನ ಹದಿನಾರನೆಯ ಒಂದಂಶದವನು. ಅವನು ಗರಿಕೆ ಹುಲ್ಲಿನ ಚಿಗುರಿನಂತೆ ಶ್ಯಾಮವರ್ಣನೂ ಸ್ಮಿತವದನನೂ ಚತುರ್ಮುಖನೂ ಆಗಿರುವನು.

೧೦. ಪೀತಾಂಬರದಿಂದ ಶೋಭಿತನಾಗಿ ವನಮಾಲೆಯನ್ನು ಧರಿಸಿರುವ ಆ ಮಹಾವಿಷ್ಣುವು ಅಂತರಿಕ್ಷದಲ್ಲಿ ಅವನಿಗಾಗಿ ನಿರ್ಮಿತವಾದ ವೈಕುಂಠದಲ್ಲಿ ನೆಲೆಸಿರುವನು.

೧೧. ಆತ್ಮ ಮತ್ತು ಆಕಾಶದಂತೆ ನಿತ್ಯವೂ, ಚಂದ್ರಬಿಂಬದಂತೆ ಅತಿ ವಿಸ್ತೃತವೂ ಆದ ಆ ವೈಕುಂಠಲೋಕವು ನಿರಾಶ್ರಯವಾಗಿ ಈಶ್ವರೇಚ್ಛಾಮಾತ್ರದಿಂದಿದೆ.

೧೨. ಆಕಾಶದಂತೆ ವಿಸ್ತಾರವಾದ ಆ ವೈಕುಂಠವು ಶ್ರೇಷ್ಠರತ್ನಗಳ ಸಮೂಹದಿಂದ ಪ್ರಕಾಶಿಸುತ್ತಿದೆ. ಅಲ್ಲಿ ವನಮಾಲಾಧರನೂ, ಚತುರ್ಭುಜನೂ ಆದ ಶ್ರೀಮನ್ನಾರಾಯಣನಿರುವನು.

**ಲಕ್ಷ್ಮೀ ಸರಸ್ವತೀ ಗಂಗಾ ತುಲಸೀಪತಿರೀಶ್ವರಃ ।**
**ಸುನಂದನಂದಕುಮುದಪಾರ್ಷದಾದಿಭಿರಾವೃತಃ ॥ ೧೩ ॥**

**ಸರ್ವೇಶಃ ಸರ್ವಸಿದ್ಧೇಶೋ ಭಕ್ತಾನುಗ್ರಹವಿಗ್ರಹಃ ।**
**ಶ್ರೀಕೃಷ್ಣಶ್ಚ ದ್ವಿಧಾಭೂತೋ ದ್ವಿಭುಜಶ್ಚ ಚತುರ್ಭುಜಃ ॥ ೧೪ ॥**

**ಚತುರ್ಭುಜಶ್ಚ ವೈಕುಂಠೇ ಗೋಲೋಕೇ ದ್ವಿಭುಜಃ ಸ್ವಯಂ ।**
**ಊರ್ಧ್ವಂ ವೈಕುಂಠಲೋಕಾಚ್ಚ ಪಂಚಾಶತ್ಕೋಟಿಯೋಜನಾತ್ ॥ ೧೫ ॥**

**ಗೋಲೋಕೋ ವರ್ತುಲಾಕಾರೋ ವರಿಷ್ಠಃ ಸರ್ವಲೋಕತಃ ।**
**ಅಮೂಲ್ಯರತ್ನಖಚಿತೈರ್ಮಂದಿರೈಶ್ಚ ವಿಭೂಷಿತಃ ॥ ೧೬ ॥**

**ರತ್ನೇಂದ್ರಸಾರಖಚಿತೈಃ ಸ್ತಂಭಸೋಪಾನಚಿತ್ರಿತೈಃ ।**
**ಮಣೀಂದ್ರದರ್ಪಣಾಸಕ್ತೈಃ ಕವಾಟೈಃ ಕಲಶೋಜ್ವಲೈಃ ॥ ೧೭ ॥**

---

೧೩. ಲಕ್ಷ್ಮಿ, ಸರಸ್ವತಿ, ಗಂಗೆ ಮತ್ತು ತುಳಸಿ ದೇವಿಯರಿಗೆ ಒಡೆಯನಾದ ಆ ನಾರಾಯಣನು ಸುನಂದ, ನಂದ, ಕುಮುದ ಮುಂತಾದ ಪಾರ್ಷದರಿಂದ ಪರಿವೃತನಾಗಿದ್ದಾನೆ.

೧೪. ಸರ್ವೇಶ್ವರನೂ, ಸರ್ವಸಿದ್ಧನೂ ಆದ ಶ್ರೀಕೃಷ್ಣಪರಮಾತ್ಮನು ಭಕ್ತಾನುಗ್ರಹಕ್ಕಾಗಿ ದ್ವಿಭುಜ ಮತ್ತು ಚತುರ್ಭುಜಗಳಿಂದ ಶೋಭಿಸುವ ಎರಡು ಶರೀರವನ್ನು ಧರಿಸಿರುವನು.

೧೫–೧೬. ಚತುರ್ಭುಜನು ವೈಕುಂಠದಲ್ಲೂ, ದ್ವಿಭುಜನು ಗೋಲೋಕದಲ್ಲೂ ನೆಲೆಸಿರುವನು. ವೈಕುಂಠಲೋಕಕ್ಕಿಂತಲೂ ಐವತ್ತುಕೋಟಿ ಯೋಜನ ಮೇಲುಭಾಗದಲ್ಲಿರುವ, ಸರ್ವೋತ್ತಮವಾದ ಗೋಲೋಕವು ಮಂಡಲಾಕಾರವಾಗಿ, ಅಮೂಲ್ಯ ರತ್ನಗಳಿಂದ ಶೋಭಿತವಾದ ದಿವ್ಯಮಂದಿರಗಳಿಂದ ಅಲಂಕೃತವಾಗಿದೆ.

೧೭. ಆ ಮಂದಿರಗಳೆಲ್ಲವೂ. ಶ್ರೇಷ್ಠರತ್ನಗಳಿಂದ ನಿರ್ಮಿತವಾದ ಕಂಭ ಮತ್ತು ಸೋಪಾನಗಳಿಂದ ಅಲಂಕೃತವಾಗಿವೆ. ರತ್ನಕನ್ನಡಿಗಳಿಂದ ಖಚಿತವಾದ ಬಾಗಿಲುಗಳ ಪಾರ್ಶ್ವದಲ್ಲಿ ರತ್ನಕಲಶಗಳು ಬೆಳಗುತ್ತಿವೆ.

ನಾನಾಚಿತ್ರವಿಚಿತ್ರೈಶ್ಚ ಶಿಬಿರೈಶ್ಚ ವಿರಾಜಿತಃ ।
ಕೋಟಿಯೋಜನವಿಸ್ತೀರ್ಣೋ ದೈರ್ಘ್ಯೇ ಶತಗುಣಸ್ತಥಾ ।
ವಿರಜಾಸರಿದಾಕೀರ್ಣೈಃ ಶತಶೃಂಗೈಸ್ಸುವೇಷ್ಟಿತಃ ॥ ೧೮ ॥

ಸರಿದರ್ಧಪ್ರಮಾಣೇನ ದೈರ್ಘ್ಯೇಣ ಚ ತತೇನ ಚ ।
ಶೈಲಾರ್ಧಪರಿಮಾಣೇನ ಯುಕ್ತೋ ವೃಂದಾವನೇನ ಚ ॥ ೧೯ ॥

ತದರ್ಧಮಾನವಿಲಸದ್ರಾಸಮಂಡಲಮಂಡಿತಃ ।
ಸರಿಚ್ಛೈಲವನಾದೀನಾಂ ಮಧ್ಯೇ ಗೋಲೋಕ ಏವ ಚ ॥ ೨೦ ॥

ಯಥಾ ಪಂಕಜಮಧ್ಯೇ ಚ ಕರ್ಣಿಕಾ ಸುಮನೋಹರಾ ।
ತತ್ರ ಗೋಗೋಪಗೋಪೀಭಿರ್ಗೋಪೀಶೋ ರಾಸಮಂಡಲೇ ॥ ೨೧ ॥

ರಾಸೇಶ್ವರ್ಯಾ ರಾಧಿಕಯಾ ಸಂಯುಕ್ತಃ ಸಂತತಂ ನೃಪ ।
ದ್ವಿಭುಜೋ ಮುರಲೀಹಸ್ತಃ ಶಿಶುರ್ಗೋಪಾಲರೂಪಧೃಕ್ ॥ ೨೨ ॥

---

೧೮. ಅನೇಕ ಚಿತ್ರವಿಚಿತ್ರವಾದ ಶಿಬಿರಗಳಿಂದ ಶೋಭಿತವಾಗಿ ಕೋಟಿ ಯೋಜನ ವಿಸ್ತೀರ್ಣವಾಗಿಯೂ, ಅದರ ನೂರರಷ್ಟು ದೀರ್ಘವಾಗಿಯೂ ಇರುವ ಆ ಲೋಕವು ಶತಶೃಂಗಪರ್ವತಗಳಿಂದಲೂ ವಿರಜಾನದಿಯಿಂದಲೂ ಪರಿವೃತವಾಗಿದೆ.

೧೯. ಆ ವಿರಜಾನದಿಯ ಅರ್ಧಪ್ರಮಾಣ ದೀರ್ಘವಾಗಿಯೂ ಶತಶೃಂಗ ಪರ್ವತದ ಅರ್ಧಪ್ರಮಾಣ ವಿಸ್ತಾರವಾಗಿಯೂ ಇರುವ ಬೃಂದಾವನವೆಂಬ ವನವು ಅಲ್ಲಿದೆ.

೨೦–೨೧. ಆ ಬೃಂದಾವನದಲ್ಲಿ ಅದರ ಅರ್ಧಪರಿಮಾಣವುಳ್ಳ ರಾಸಮಂಡಲವು ವಿರಾಜಿಸುತ್ತಿದೆ ಈ ರೀತಿಯಾಗಿ ಬೆಟ್ಟ, ಹೊಳೆ ಮತ್ತು ವನದ ಮಧ್ಯದಲ್ಲಿರುವ ಆ ಗೋಲೋಕವು ತಾವರೆಯ ಹೂವಿನ ಮಧ್ಯದಲ್ಲಿರುವ ಕರ್ಣಿಕಾರದಂತೆ ಮನೋಹರವಾಗಿದೆ ಆ ರಾಸಮಂಡಲದಲ್ಲಿ ಗೋಪೀಪತಿಯಾದ ಶ್ರೀಕೃಷ್ಣ ಪರಮಾತ್ಮನು ಗೋಗೋಪಗೋಪಿಯರಿಂದ ಪರಿವೃತನಾಗಿದ್ದಾನೆ.

೨೨. ದ್ವಿಭುಜನೂ, ವೇಣುಹಸ್ತನೂ ಆದ ಆ ಪರಮಾತ್ಮನು ಸರ್ವದಾ ರಾಸೇಶ್ವರಿಯಾದ ರಾಧೆಯೊಡನೆ ವಿಲಾಸಪರನಾಗಿದ್ದರೂ, ಗೋಪಶಿಶುರೂಪವನ್ನು ತಾಳಿರುವನು.

ವಹ್ನಿಶುದ್ಧಾಂಶುಕಾಧಾನೋ ರತ್ನಭೂಷಣಭೂಷಿತಃ ।
ಚಂದನೋಕ್ಷಿತಸರ್ವಾಂಗೋ ರತ್ನಮಾಲಾವಿರಾಜಿತಃ ॥ ೨೩ ॥

ರತ್ನಸಿಂಹಾಸನಸ್ಥಶ್ಚ ರತ್ನಚ್ಛತ್ರೇಣ ಶೋಭಿತಃ ।
ತಥಾ ಸ ಪ್ರಿಯಗೋಪಾಲೈಃ ಸೇವಿತಃ ಶ್ವೇತಚಾಮರೈಃ ॥ ೨೪ ॥

ಭೂಷಿತಾಭಿಶ್ಚ ಗೋಪೀಭಿರ್ಮಾಲಾಚಂದನಚರ್ಚಿತಃ ।
ಸಸ್ಮಿತಃ ಸಕಟಾಕ್ಷಾಭಿಃ ಸುವೇಷಾಭಿಶ್ಚ ವೀಕ್ಷಿತಃ ॥ ೨೫ ॥

ಕಥಿತೋ ಲೋಕವಿಸ್ತಾರೋ ಯಥಾಶಕ್ತಿ ಯಥಾಗಮಂ ।
ಯಥಾ ಶ್ರುತಂ ಶಂಭುವಕ್ತ್ರಾತ್ಕಾಲಮಾನಂ ನಿಶಾಮಯ ॥ ೨೬ ॥

---

೨೩. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು ರತ್ನಾಲಂಕಾರಗಳಿಂದ ಭೂಷಿತನಾದ ಆ ಶ್ರೀಕೃಷ್ಣಪರಮಾತ್ಮನು ಸರ್ವಾಯವಗಳಿಗೂ ದಿವ್ಯಚಂದನವನ್ನು ಲೇಪಿಸಿಕೊಂಡು ರತ್ನಮಾಲೆಯಿಂದ ಶೋಭಿಸುತ್ತಿದ್ದಾನೆ.

೨೪. ರತ್ನಚ್ಛತ್ರದಿಂದ ಶೋಭಿತವಾದ ರತ್ನಸಿಂಹಾಸನದಲ್ಲಿ ಕುಳಿತು ತನಗೆ ಪ್ರಿಯರಾದ ಗೋಪಾಲರ ಚಾಮರಸೇವೆಯನ್ನು ಕೈಗೊಳ್ಳುತ್ತಿದ್ದಾನೆ.

೨೫. ದಿವ್ಯಗಂಧವನ್ನು ಲೇಪಿಸಿಕೊಂಡು, ಪುಷ್ಪಮಾಲೆಯನ್ನು ಧರಿಸಿ, ಸುವೇಷಭೂಷಿತೆಯರಾದ ಅಸಂಖ್ಯಗೋಪಿಯರ ಕಟಾಕ್ಷವೀಕ್ಷಣೆಗೆ ಪಾತ್ರನಾಗಿ ನಗುಮುಖದಿಂದ ನಲಿಯುತ್ತಿದ್ದಾನೆ.

೨೬. ಇಂತು ಲೋಕವಿಸ್ತಾರವನ್ನು ವೇದೋಕ್ತವಾಗಿ ನಾನು ಅರಿತಷ್ಟು ಹೇಳಿರುವೆನು. ಈಗ ಈಶ್ವರನ ಮುಖದಿಂದ ನಾನು ಕೇಳಿದ ಕಾಲಪರಿಮಾಣವನ್ನು ಅರುಹುವೆನು, ಸಾವಧಾನದಿಂದ ಕೇಳು.

ಪಾತ್ರಂ ಷಟ್ಪಲಸಂಭೂತಂ ಗಂಭೀರಂ ಚತುರಂಗುಲಂ　　|| ೨೭ ||

ಸ್ವರ್ಣಮಾಷಕೃತಚ್ಛಿದ್ರಂ ದಂಡೈಶ್ಚ ಚತುರಂಗುಲೈಃ |
ಯಾವಜ್ಜಲಪ್ಲುತಂ ಪಾತ್ರಂ ತತ್ಕಾಲಂ ದಂಡಮೇವ ಚ　　|| ೨೮ ||

ದಂಡದ್ವಯಂ ಮುಹೂರ್ತಂ ಚ ಯಾಮಸ್ತಸ್ಯ ಚತುಷ್ಟಯಂ |
ವಾಸರಶ್ಚಾಷ್ಟಭಿರ್ಯಾಮೈಃ ಪಕ್ಷಸ್ತೈರ್ದಶಪಂಚಭಿಃ　　|| ೨೯ ||

ಮಾಸೋ ದ್ವಾಭ್ಯಾಂ ಚ ಪಕ್ಷಾಭ್ಯಾಂ ವರ್ಷಂ ದ್ವಾದಶಮಾಸಕೈಃ |
ಮಾಸೇನ ವೈ ನರಾಣಾಂ ಚ ಪಿತೄಣಾಂ ತದಹರ್ನಿಶಂ　　|| ೩೦ ||

ಕೃಷ್ಣಪಕ್ಷೇ ದಿನಂ ಪ್ರೋಕ್ತಂ ಶುಕ್ಲೇ ರಾತ್ರಿಃ ಪ್ರಕೀರ್ತಿತಾ |
ವತ್ಸರೇಣ ನರಾಣಾಂ ಚ ದೇವಾನಾಂ ಚ ದಿವಾನಿಶಂ　　|| ೩೧ ||

---

೨೭-೨೮. ನಾಲ್ಕಂಗುಲ ಉದ್ದವೂ, ಒಂದುಮಾಷ ತೂಕವೂ ಉಳ್ಳ ನಾಲ್ಕು ಸುವರ್ಣ ಸೂಜಿಗಳಿಂದ ರಂಧ್ರಮಾಡಲ್ಪಟ್ಟ, ಆರುಪಲಂ ತೂಕವುಳ್ಳ ಚತುರಸ್ರವಾದ ತಾಮ್ರಪಾತ್ರೆಯೊಂದಕ್ಕೆ ನೀರು ತುಂಬಿದರೆ ಎಷ್ಟು ಕಾಲದಲ್ಲಿ ಆ ನೀರು ಸ್ರವಿಸುವುದೋ ಆ ಕಾಲವನ್ನು 'ದಂಡ'ವೆನ್ನುವರು. (ಐದು ಗುಂಜಿ=ಒಂದು ಮಾಷ) (ವಿಷ್ಣುಭಾಗವತದ ಮೂರನೆಯ ಸ್ಕಂಧದಲ್ಲಿಯೂ 'ದ್ವಾದಶಾರ್ಧಪಲೋನ್ಮಾನಂ ಚತುರ್ಭಿಶ್ಚತುರಂಗುಲೈಃ | ಸ್ವರ್ಣಮಾಷೈಃ ಕೃತಚ್ಛಿದ್ರಂ ಯಾವತ್ಪ್ರಸ್ಥಜಲಪ್ಲುತಂ' ಎಂದು ಹೇಳಿದೆ).

೨೯. ಎರಡು ದಂಡಗಳಿಗೆ ಒಂದು ಮುಹೂರ್ತವೆಂದೂ, ನಾಲ್ಕು ಮುಹೂರ್ತಗಳಿಗೆ ಒಂದು ಯಾಮವೆಂದೂ, ಎಂಟು ಯಾಮಗಳಿಗೆ ಒಂದು ದಿವಸವೆಂದೂ, ಹದಿನೈದು ದಿವಸಗಳಿಗೆ ಒಂದು ಪಕ್ಷವೆಂದೂ ಹೇಳುವರು.

೩೦. ಎರಡು ಪಕ್ಷಗಳಿಗೆ ಒಂದು ತಿಂಗಳೆಂದೂ, ಹನ್ನೆರಡು ತಿಂಗಳುಗಳಿಗೆ ಒಂದು ವರ್ಷವೆಂದೂ ಹೇಳುವರು. ಮನುಷ್ಯರ ಒಂದು ತಿಂಗಳು ಪಿತೃಗಳಿಗೆ ಒಂದು ದಿವಸವೆನಿಸುವುದು.

೩೧. ಪಿತೃಗಳಿಗೆ ಕೃಷ್ಣಪಕ್ಷದಲ್ಲಿ ಹಗಲೂ, ಶುಕ್ಲಪಕ್ಷದಲ್ಲಿ ರಾತ್ರಿಯೂ ಆಗಿರುವುದು. ಮನುಷ್ಯರ ಒಂದು ಸಂವತ್ಸರವು ದೇವತೆಗಳಿಗೆ ಒಂದು ಹಗಲು ರಾತ್ರಿಯಾಗುವುದು.

ಅಯನಂ ಹ್ಯುತ್ತರಮಹೋರಾತ್ರಿರ್ವೈ ದಕ್ಷಿಣಾಯನಂ ।
ಯುಗಕರ್ಮಾನುರೂಪಂ ಚ ನರಾದೀನಾಂ ವಯೋ ನೃಪ ॥ ೩೨ ॥

ಪ್ರಕೃತೇಃ ಪ್ರಾಕೃತಾನಾಂ ಚ ಬ್ರಹ್ಮಾದೀನಾಂ ನಿಶಾಮಯ ।
ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಂ ॥ ೩೩ ॥

ದಿವ್ಯೈರ್ದ್ವಾದಶಸಾಹಸ್ರೈಃ ಸಾವಧಾನಂ ನಿಶಾಮಯ ।
ಚತ್ವಾರಿ ತ್ರೀಣಿ ಚ ದ್ವ್ಯೇಕಂ ಸಹಸ್ರಾಣಿ ಕೃತಾದಿಕಂ ॥ ೩೪ ॥

ತೇಷಾಂ ಚ ಸಂಧ್ಯಾ ಸಂಧ್ಯಾಂಶೌ ದ್ವೇ ಸಹಸ್ರೇ ಪ್ರಕೀರ್ತಿತೇ ।
ತ್ರಿಚತ್ವಾರಿಂಶಕ್ಕೈರ್ಲಕ್ಷೈಸ್ಸ ವಿಂಶತಿಸಹಸ್ರಕೈಃ ॥ ೩೫ ॥

---

೩೨. ದೇವತೆಗಳಿಗೆ ಉತ್ತರಾಯಣವು ಹಗಲಾಗಿಯೂ, ದಕ್ಷಿಣಾಯನವು ರಾತ್ರಿಯಾಗಿಯೂ ಎಣಿಸಲ್ಪಡುವುದು. ಎಲೈ ರಾಜನೇ, ಮನುಷ್ಯರ ಜೀವಿತಕಾಲವು ಆಯಾಯ ಯುಗ ಮತ್ತು ಅವರವರ ಕರ್ಮಾನುಗುಣವಾಗಿರುವುದು.

೩೩. ಪ್ರಕೃತಿ ಮತ್ತು ಪ್ರಕೃತಿ ಸೃಷ್ಟಿಗೊಳಗಾದ ಬ್ರಹ್ಮಾದಿಗಳ ವಯಸ್ಸೂ ಅಂತೆಯೇ. ಕೃತ, ತ್ರೇತಾ, ದ್ವಾಪರ ಮತ್ತು ಕಲಿಯೆಂಬುದು ಚತುರ್ಯುಗಗಳ ಹೆಸರು.

೩೪. ಎಲೈ ರಾಜನೇ, ನಾನು ಹೇಳುವುದನ್ನು ಸಾವಧಾನದಿಂದ ಅವಧರಿಸು. ಕೃತಾದಿಯುಗಗಳು ಕ್ರಮವಾಗಿ ದೇವತೆಗಳ ನಾಲ್ಕುಸಾವಿರ, ಮೂರುಸಾವಿರ, ಎರಡುಸಾವಿರ, ಮತ್ತು ಒಂದುಸಾವಿರ ವರ್ಷ ಪರಿಮಾಣವುಳ್ಳವು. ಈ ಯುಗಗಳ ಸಂಧಿ ಮತ್ತು ಸಂಧಿಯ ಅಂಶವು ಎರಡುಸಾವಿರ ವರ್ಷ ಪರಿಮಿತಿಯುಳ್ಳದ್ದು.

೩೫. ಮನುಷ್ಯಮಾನಕ್ರಮದಿಂದ ನಲವತ್ತಮೂರು ಲಕ್ಷ ಇಪ್ಪತ್ತುಸಾವಿರ ವರ್ಷಗಳಿಗೆ ನಾಲ್ಕು ಯುಗಗಳು ಪೂರ್ಣವಾಗುವುವು.

ಚತುರ್ಯುಗಂ ಪರಿಮಿತಂ ನರಮಾನಕ್ರಮೇಣ ಚ ।
ಲಕ್ಷೈಶ್ಚ ಸಪ್ತದಶಭಿಸ್ಸಾಷ್ಟಾವಿಂಶತ್ಸಹಸ್ರಕೈಃ ॥ ೩೬ ॥

ಕೃತಂ ಯುಗಂ ನೃಮಾನೇನ ಸಂಖ್ಯಾವಿದ್ಭಿಃ ಪ್ರಕೀರ್ತಿತಂ ।
ಸಹಸ್ರೈಷ್ಷಣ್ಣವತಿಭಿರ್ಲಕ್ಷೈರ್ದ್ವಾದಶಭಿಸ್ಸಹ ॥ ೩೭ ॥

ತ್ರೇತಾಯುಗಂ ಪರಿಮಿತಂ ಕಾಲವಿದ್ಭಿಃ ಪ್ರಕೀರ್ತಿತಂ ।
ಅಷ್ಟಲಕ್ಷೈಸ್ಸಹಮಿತಂ ಚತುಷ್ಷಷ್ಟಿಸಹಸ್ರಕಂ ॥ ೩೮ ॥

ಪರಿಮಾಣಂ ದ್ವಾಪರಸ್ಯ ಸಂಖ್ಯಾವಿದ್ಭಿರಿತೀರಿತಂ ।
ಸದ್ವಾತ್ರಿಂಶತ್ಸಹಸ್ರೈಶ್ಚ ಚತುರ್ಲಕ್ಷೈಶ್ಚ ವತ್ಸರೈಃ ।
ನೃಮಾನಾದ್ವೈ ಕಲಿಯುಗಂ ವಿದುಃ ಕಾಲವಿದೋ ಬುಧಾಃ ॥ ೩೯ ॥

ತತ್ರ ಸಪ್ತ ಚ ವಾರಾ ವೈ ತಿಥಯಃ ಷೋಡಶ ಸ್ಮೃತಾಃ ।
ದಿವಾರಾತ್ರ್ಯಶ್ಚ ಪಕ್ಷೌ ದ್ವೌ ಮಾಸೋ ವರ್ಷಂ ಚ ನಿಶ್ಚಿತಂ ॥ ೪೦ ॥

---

೩೬. ಮನುಷ್ಯಪ್ರಮಾಣದಂತೆ ಹದಿನೇಳು ಲಕ್ಷ ಇಪ್ಪತ್ತೆಂಟುಸಾವಿರ ವರ್ಷಗಳು ಕೃತಯುಗದ ಪರಿಮಿತಿಯೆಂದು ಜ್ಯೌತಿಷಿಕರು ಹೇಳಿರುವರು.

೩೭. ಹನ್ನೆರಡು ಲಕ್ಷದ ತೊಂಭತ್ತಾರುಸಾವಿರ ಮನುಷ್ಯಮಾನದ ವರ್ಷಗಳು ತ್ರೇತಾಯುಗದ ಪರಿಮಾಣವೆಂದು ಕಾಲಜ್ಞರು ಹೇಳಿರುವರು.

೩೮. ಮನುಷ್ಯಮಾನದ ಎಂಟುಲಕ್ಷ ಅರವತ್ತುನಾಲ್ಕುಸಾವಿರ ವರ್ಷಗಳಿಗೆ ದ್ವಾಪರಯುಗವೆಂದು ಗಣಿತಜ್ಞರು ಹೇಳಿರುವರು.

೩೯. ಕಲಿಯುಗವು ನಾಲ್ಕುಲಕ್ಷ ಮೂವತ್ತೆರಡುಸಾವಿರವರ್ಷ ಪರಿಮಿತಿಯುಳ್ಳದ್ದೆಂದು ಕಾಲಜ್ಞರಾದ ಪಂಡಿತರು ಹೇಳಿರುವರು.

೪೦. ಅಂತೆಯೇ ಏಳು ವಾರಗಳೆಂದೂ ಹದಿನಾರು ತಿಥಿಗಳೆಂದೂ ಪ್ರಸಿದ್ಧವಾಗಿವೆ. ದಿವಾರಾತ್ರಿಗಳೂ, ಶುಕ್ಲ ಮತ್ತು ಕೃಷ್ಣಪಕ್ಷಗಳೂ, ತಿಂಗಳು ಮತ್ತು ವರ್ಷಗಳೂ ನಿರ್ಮಿತವಾಗಿವೆ.

ತಥಾ ಭ್ರಮತಿ ತಚ್ಚಕ್ರಮೇವಮೇವ ಚತುರ್ಯುಗಂ ।
ತಥಾ ಯುಗಾನಿ ರಾಜೇಂದ್ರ ತಥಾ ಮನ್ವಂತರಾಣಿ ಚ ॥ ೪೧ ॥

ಮನ್ವಂತರಂ ತು ದಿವ್ಯಾನಾಂ ಯುಗಾನಾಮೇಕಸಪ್ತತಿಃ ।
ಏವಂ-ಕ್ರಮಾದ್ಭ್ರಮಂತ್ಯೇವ ಮನವಶ್ಚ ಚತುರ್ದಶ ॥ ೪೨ ॥

ಪಂಚವಿಂಶತಿಸಾಹಸ್ರಂ ಷಷ್ಟ್ಯಂತಶತಪಂಚಕಂ ।
ನರಮಾನಯುಗಂ ಚೈವ ಪರಂ ಮನ್ವಂತರಂ ಸ್ಮೃತಂ ॥ ೪೩ ॥

ಆಖ್ಯಾನಂ ಚ ಮನೂನಾಂ ಚ ಧರ್ಮಿಷ್ಠಾನಾಂ ನರಾಧಿಪ ।
ಯಚ್ಛ್ರುತಂ ಶಿವವಕ್ತ್ರೇಣ ತತ್ತ್ವಂ ಮತ್ತೋ ನಿಶಾಮಯ ॥ ೪೪ ॥

ಆದ್ಯೋ ಮನುರ್ಬ್ರಹ್ಮಪುತ್ರಃ ಶತರೂಪಾ ಪತಿವ್ರತಾ ।
ಧರ್ಮಿಷ್ಠಾನಾಂ ವರಿಷ್ಠಶ್ಚ ಗರಿಷ್ಠೋ ಮನುಷು ಪ್ರಭುಃ ॥ ೪೫ ॥

---

೪೧. ಹೀಗೆ ಚತುರ್ಯುಗ ಪರಿಮಿತವಾದ ಕಾಲಚಕ್ರವೂ, ಅಂತೆಯೇ ಚತುರ್ಯುಗಗಳೂ, ಮನ್ವಂತರಗಳೂ ಕೂಡ ಚಕ್ರಧಾರೆಯಂತೆ ಸಂತತವೂ ತಿರುಗುತ್ತಿರುವುವು.

೪೨. ದೇವತೆಗಳ ಎಪ್ಪತ್ತೊಂದು ಯುಗಗಳಿಗೆ ಒಂದು ಮನ್ವಂತರವೆನ್ನುವರು. ಒಂದೊಂದು ಮನ್ವಂತರಕ್ಕೆ ಒಬ್ಬೊಬ್ಬ ಮನುವಿನಂತೆ ಕ್ರಮವಾಗಿ ಹದಿನಾಲ್ಕು ಮನುಗಳು ರಾಜ್ಯವಾಳುವರು.

೪೩. ಮನುಷ್ಯಮಾನದಂತೆ ಒಂದು ಮನ್ವಂತರಕ್ಕೆ ಇಪ್ಪತ್ತೈದುಸಾವಿರದ ಐನೂರ ಅರವತ್ತು ಯುಗಗಳಾಗುವುವು.

೪೪. ಎಲೈ ರಾಜಶ್ರೇಷ್ಠನೇ, ನಾನು ಪರಮೇಶ್ವರನ ಮುಖದಿಂದ ಕೇಳಿದ ಧರ್ಮಿಷ್ಠರಾದ ಚತುರ್ದಶಮನುಗಳ ಆಖ್ಯಾನವನ್ನು ಹೇಳುವೆನು ಅವಧರಿಸು.

೪೫. ಬ್ರಹ್ಮನ ಮಗನೂ, ಧರ್ಮಿಷ್ಠರಿಗೆಲ್ಲ ಶ್ರೇಷ್ಠನೂ, ಗೌರವಸ್ಥನೂ, ಪತಿವ್ರತೆಯಾದ ಶತರೂಪೆಯ ಪತಿಯೂ ಮನುಗಳಿಗೆಲ್ಲ ಹಿರಿಯನೂ ಆದ ಸ್ವಾಯಂಭುವಮನುವೇ ಮೊದಲನೆಯವನು.

ಸ್ವಾಯಂಭುವಃ ಶಂಭುಶಿಷ್ಯೋ ವಿಷ್ಣುವ್ರತಪರಾಯಣಃ |
ಜೀವನ್ಮುಕ್ತೋ ಮಹಾಜ್ಞಾನೀ ಭವತಃ ಪ್ರಪಿತಾಮಹಃ || ೪೬ ||

ರಾಜಸೂಯಸಹಸ್ರಂ ಚ ಚಕ್ರೇ ವೈ ನರ್ಮದಾತಟೇ |
ತ್ರಿಲಕ್ಷಮಶ್ವಮೇಧಂ ಚ ತ್ರಿಲಕ್ಷಂ ನರಮೇಧಕಂ || ೪೭ ||

ಗೋಮೇಧಂ ಚ ಚತುರ್ಲಕ್ಷಂ ವಿಧಿವನ್ಮಹದದ್ಭುತಂ |
ಬ್ರಾಹ್ಮಣಾನಾಂ ತ್ರಿಕೋಟೀಶ್ಚ ಭೋಜಯಾಮಾಸ ನಿತ್ಯಶಃ || ೪೮ ||

ಪಂಚಲಕ್ಷಗವಾಂ ಮಾಂಸೈಃ ಸುಪಕ್ವೈರ್ಘೃತಸಂಸ್ಕೃತೈಃ |
ಚರ್ವ್ಯೈಶ್ಚೋಷ್ಯೈರ್ಲೇಹ್ಯಪೇಯೈರ್ಮಿಷ್ಟದ್ರವ್ಯೈಃ ಸುದುರ್ಲಭೈಃ || ೪೯ ||

---

೪೬. ನಿನ್ನ ಮುತ್ತಜ್ಜನಾದ ಆ ಸ್ವಾಯಂಭುವಮನುವು ಮಹೇಶ್ವರನ ಶಿಷ್ಯನೂ, ವಿಷ್ಣುವ್ರತಪರಾಯಣನೂ, ಮಹಾಜ್ಞಾನಿಯೂ ಆಗಿದ್ದು ಜೀವನ್ಮುಕ್ತನಾದನು.

೪೭. ಆ ಮನುವು ನರ್ಮದಾನದಿಯ ತೀರದಲ್ಲಿ ಸಹಸ್ರ ರಾಜಸೂಯ ಯಾಗವನ್ನೂ ಮೂರುಲಕ್ಷ ಅಶ್ವಮೇಧಯಾಗವನ್ನೂ, ಮೂರುಲಕ್ಷ ನರಮೇಧ ಯಾಗವನ್ನೂ ಆಚರಿಸಿದನು.

೪೮. ನಾಲ್ಕುಲಕ್ಷ ಗೋಮೇಧಯಾಗವನ್ನೂ ವಿಧಿವತ್ತಾಗಿಯೂ ಅತ್ಯದ್ಭುತವಾಗಿಯೂ ಆಚರಿಸಿ ಪ್ರತಿನಿತ್ಯವೂ ಮೂರುಕೋಟಿ ಬ್ರಾಹ್ಮಣರಿಗೆ ದಿವ್ಯಭೋಜನ ಮಾಡಿಸಿದನು.

೪೯. ಚೆನ್ನಾಗಿ ಪಕ್ವಮಾಡಿಸಿ ತುಪ್ಪದಿಂದ ಸಂಸ್ಕಾರಗೊಳಿಸಿರುವ ಐದುಲಕ್ಷ ಗೋವುಗಳ ಮಾಂಸದಿಂದಲೂ, ಅಗಿಯುವ, ಸುರಿದುಕೊಂಡು ತಿನ್ನುವ, ನೆಕ್ಕುವ ಮತ್ತು ಪಾನಮಾಡುವ ಎಲ್ಲರಿಗೂ ಸುಲಭವಾಗಿ ಸಿಗದ ಮಿಷ್ಟದ್ರವ್ಯಗಳಿಂದಲೂ ಬ್ರಾಹ್ಮಣರನ್ನು ತೃಪ್ತಿಗೊಳಿಸಿದನು. (ಗೋಮೇಧಯಾಗದಲ್ಲಿ ಬ್ರಾಹ್ಮಣರು ಗೋಮಾಂಸಭಕ್ಷಣಮಾಡಿ ಪ್ರಾಯಶ್ಚಿತ್ತದಿಂದ ಶುದ್ಧರಾಗಬಹುದು).

ಅಮೂಲ್ಯರತ್ನಲಕ್ಷಂ ಚ ದಶಕೋಟಿಸುವರ್ಣಕಂ ।
ಸ್ವರ್ಣಶೃಂಗಯುತಂ ದಿವ್ಯಂ ಗವಾಂ ಲಕ್ಷಂ ಸುಪೂಜಿತಂ ॥ ೫೦ ॥

ವಹ್ನಿಶುದ್ಧಾನಿ ವಸ್ತ್ರಾಣಿ ಮುನೀಂದ್ರಾಣಾಂ ಚ ಲಕ್ಷಕಂ ।
ಭೂಮಿಂ ಚ ಸರ್ವಸಸ್ಯಾಢ್ಯಾಂ ಗಜೇಂದ್ರಾಣಾಂ ಚ ಲಕ್ಷಕಂ ।
ತ್ರಿಲಕ್ಷಮಶ್ವರತ್ನಂ ಚ ಶಾತಕುಂಭವಿಭೂಷಿತಂ ॥ ೫೧ ॥

ಸಹಸ್ರರಥರತ್ನಂ ಚ ಶಿಬಿಕಾಲಕ್ಷಮೇವ ಚ ।
ತ್ರಿಕೋಟಿಸ್ವರ್ಣಪಾತ್ರಾಣಿ ಸಾನ್ನಂ ಸಜಲಮಿಾಪ್ಸಿತಂ ।
ತ್ರಿಕೋಟಿಸ್ವರ್ಣಭೂಷಾಶ್ಚ ಕರ್ಪೂರಾದಿಸುವಾಸಿತಂ ॥ ೫೨ ॥

ತಾಂಬೂಲಂ ಸುವಿಚಿತ್ರಂ ಚ ತ್ರಿಕೋಟಿಸ್ವರ್ಣತಲ್ಪಕಂ ।
ರತ್ನೇಂದ್ರಖಚಿತೈರ್ಮಂಚೈ ರಚಿತೈರ್ವಿಶ್ವಕರ್ಮಣಾ ॥ ೫೩ ॥

ವಹ್ನಿಶುದ್ಧಾಂಶುಕೈಶ್ಚಿತ್ರೈ ರಾಜಿತಂ ಮಾಲ್ಯಜಾಲಕೈಃ ।
ನಿತ್ಯಂ ದದೌ ಬ್ರಾಹ್ಮಣೇಭ್ಯೋ ವಿಷ್ಣುಪ್ರೀತ್ಯಾ ಶಿವಾಜ್ಞಯಾ ॥ ೫೪ ॥

---

೫೦-೫೪. ಅಮೂಲ್ಯವಾದ ಲಕ್ಷರತ್ನಗಳನ್ನೂ ಹತ್ತುಕೋಟಿ ಸುವರ್ಣ ನಾಣ್ಯವನ್ನೂ, ಚೆನ್ನಾಗಿ ಪೂಜೆಗೊಂಡಿರುವ ಚಿನ್ನದ ಕೊಂಬುಗಳುಳ್ಳ ಲಕ್ಷ ಗೋವುಗಳನ್ನೂ, ಅಗ್ನಿಯಂತೆ ಪರಿಶುದ್ಧವಾದ ಅನೇಕ ವಸ್ತ್ರಗಳನ್ನೂ, ಸಕಲ ಸಸ್ಯಭರಿತವಾದ ಭೂಮಿಯನ್ನೂ, ಶ್ರೇಷ್ಠವಾದ ಒಂದುಲಕ್ಷ ಆನೆಗಳನ್ನೂ, ಶ್ರೇಷ್ಠವಾದ ಮೂರು ಲಕ್ಷ ಕುದುರೆಗಳನ್ನೂ ಸುವರ್ಣಕಲಶಗಳಿಂದ ಶೋಭಿತವಾದ ಸಾವಿರ ಶ್ರೇಷ್ಠ ರಥಗಳನ್ನೂ ಲಕ್ಷ ಪಲ್ಲಕ್ಕಿಗಳನ್ನೂ, ಮಿಷ್ಟಾನ್ನ ಮತ್ತು ಶುದ್ಧೋದಕದಿಂದ ತುಂಬಿರುವ ಮೂರುಕೋಟಿ ಸುವರ್ಣ ಪಾತ್ರೆಗಳನ್ನೂ, ಮೂರುಕೋಟಿ ಸುವರ್ಣಾಭರಣಗಳನ್ನೂ, ಪಚ್ಚಕರ್ಪೂರಾದಿಗಳಿಂದ ಸುವಾಸಿತವಾದ ದಿವ್ಯತಾಂಬೂಲವನ್ನೂ, ವಿಶ್ವಕರ್ಮನಿಂದ ನಿರ್ಮಿತವಾಗಿ ಶ್ರೇಷ್ಠರತ್ನಗಳಿಂದ ಖಚಿತವಾಗಿ ಅಗ್ನಿಯಂತೆ ಪರಿಶುದ್ಧವಾದ ಬಟ್ಟೆಗಳಿಂದಲೂ ಚಿತ್ರವಿಚಿತ್ರವಾದ ಹೂಮಾಲೆ ಮತ್ತು ಮುಕ್ತಾಹಾರಗಳಿಂದಲೂ ಶೋಭಿತವಾಗಿ ಮಂಚಸಹಿತವಾದ ಮೂರುಕೋಟಿ ಸ್ವರ್ಣಮಯ ಶಯನಗಳನ್ನೂ ಪ್ರತಿನಿತ್ಯವೂ ವಿಷ್ಣುವಿನ ಪ್ರೀತಿಗಾಗಿ ಪರಶಿವನ ಅಪ್ಪಣೆಯಂತೆ ಬ್ರಾಹ್ಮಣರಿಗೆ ದಾನಮಾಡಿದನು.

ಸಂಪ್ರಾಪ್ಯ ಶಂಕರಾಜ್ಞಾನಂ ಕೃಷ್ಣಮಂತ್ರಂ ಸುದುರ್ಲಭಂ ।
ಸಂಪ್ರಾಪ್ಯ ಕೃಷ್ಣದಾಸ್ಯಂ ಚ ಗೋಲೋಕಂ ವೈ ಜಗಾಮ ಸಃ ॥ ೫೫ ॥

ದೃಷ್ಟ್ವಾ ಮುಕ್ತಂ ಸ್ವಪುತ್ರಂ ಚ ಪ್ರಹೃಷ್ಟೋಽಭೂತ್ಪ್ರಜಾಪತಿಃ ।
ತುಷ್ಟಾವ ಶಂಕರಂ ತುಷ್ಟಃ ಸಸೃಜೇಽನ್ಯಂ ಮನುಂ ವಿಧಿಃ ॥ ೫೬ ॥

ಯತಃ ಸ್ವಯಂಭುಪುತ್ರೋಽಯಮತಃ ಸ್ವಾಯಂಭುವೋ ಮನುಃ ।
ಸ್ವಾರೋಚಿಷೋ ಮನುಶ್ಚೈವ ದ್ವಿತೀಯೋ ವಹ್ನಿನಂದನಃ ॥ ೫೭ ॥

ರಾಜಾ ವದಾನ್ಯೋ ಧರ್ಮಿಷ್ಠಃ ಸ್ವಾಯಂಭುವಸಮೋ ಮಹಾನ್ ।
ಪ್ರಿಯವ್ರತಸುತಾವನ್ಯೌ ದ್ವೌ ಮನೂ ಧರ್ಮಿಣಾಂ ವರೌ ॥ ೫೮ ॥

ತೌ ತೃತೀಯಔ ಚತುರ್ಥೌ ಚ ವೈಷ್ಣವೌ ತಾಪಸೋತ್ತಮೌ ।
ತೌ ಚ ಶಂಕರಶಿಷ್ಯೌ ಚ ಕೃಷ್ಣಭಕ್ತಿಪರಾಯಣೌ ॥ ೫೯ ॥

---

೫೫. ಅನಂತರ ಶಂಕರನಿಂದ ದಿವ್ಯಜ್ಞಾನೋಪದೇಶವನ್ನೂ ಎಲ್ಲರಿಗೂ ದುರ್ಲಭವಾದ ವಿಷ್ಣುಮಂತ್ರೋಪದೇಶವನ್ನೂ ಪಡೆದು ಜಪಿಸಿ, ಶ್ರೀಕೃಷ್ಣ ಪರಮಾತ್ಮನ ದಾಸ್ಯಕ್ಕಾಗಿ ಗೋಲೋಕಕ್ಕೆ ಹೋಗಿ ಸೇರಿದನು.

೫೬. ಈ ರೀತಿಯಾಗಿ ತನ್ನ ಮಗನು ಮುಕ್ತನಾದುದನ್ನು ಕಂಡು ಬ್ರಹ್ಮನು ಶಂಕರನನ್ನು ಸ್ತುತಿಸಿ, ಅನಂತರ ಮತ್ತೊಬ್ಬ ಮನುವನ್ನು ಸೃಜಿಸಿದನು.

೫೭. ಮೊದಲನೆಯವನು ಸ್ವಯಂಭು (ಬ್ರಹ್ಮ)ವಿನ ಮಗನಾದುದರಿಂದ ಸ್ವಾಯಂಭುವಮನುವೆನಿಸಿಕೊಂಡನು. ಎರಡನೆಯವನು ಅಗ್ನಿಗರ್ಭದಲ್ಲಿ ಜನಿಸಿದುದರಿಂದ ಸ್ವಾರೋಚಿಷಮನುವೆನಿಸಿಕೊಂಡನು.

೫೮-೫೯. ಸ್ವಾರೋಚಿಷಮನುವೂ ಕೂಡ ಸ್ವಾಯಂಭುವಮನುವಿನಂತೆಯೇ ದಾನಿಯೂ, ಧರ್ಮಿಷ್ಠನೂ ಆಗಿದ್ದನು. ಮುಂದೆ ಧರ್ಮಶ್ರೇಷ್ಠರಾದ ಉತ್ತಮ ಮತ್ತು ತಾಮಸರೆಂಬ ಇಬ್ಬರು ಮನುಗಳು ಪ್ರಿಯವ್ರತಪುತ್ರರಾಗಿ ಜನಿಸಿ, ತಪಸ್ವಿಗಳೂ ಮತ್ತು ವೈಷ್ಣವೋತ್ತಮರೂ ಎನಿಸಿಕೊಂಡರು. ಶಂಕರನ ಶಿಷ್ಯರಾದ ಅವರಿಬ್ಬರೂ ಶ್ರೀಕೃಷ್ಣನಲ್ಲಿ ಪರಮಭಕ್ತರಾಗಿದ್ದರು.

ಧರ್ಮಿಷ್ಠಾನಾಂ ವರಿಷ್ಠಶ್ಚ ರೈವತಃ ಪಂಚಮೋ ಮನುಃ ।
ಷಷ್ಠಶ್ಚ ಚಾಕ್ಷುಷೋ ಜ್ಞೇಯೋ ವಿಷ್ಣುಭಕ್ತಿಪರಾಯಣಃ ॥ ೬೦ ॥

ಶ್ರಾದ್ಧದೇವಃ ಸೂರ್ಯಸುತೋ ವೈಷ್ಣವೋ ಸಪ್ತಮೋ ಮನುಃ ।
ಸಾವರ್ಣಿಃ ಸೂರ್ಯತನಯೋ ವೈಷ್ಣವೋ ಮನುರಷ್ಟಮಃ ॥ ೬೧ ॥

ನವಮೋ ದಕ್ಷಸಾವರ್ಣಿರ್ವಿಷ್ಣುವ್ರತಪರಾಯಣಃ ।
ದಶಮೋ ಬ್ರಹ್ಮಸಾವರ್ಣಿರ್ಬ್ರಹ್ಮಜ್ಞಾನವಿಶಾರದಃ ॥ ೬೨ ॥

ತತಶ್ಚ ಧರ್ಮಸಾವರ್ಣಿರ್ಮನುರೇಕಾದಶಸ್ಮೃತಃ ।
ಧರ್ಮಿಷ್ಠಶ್ಚ ವರಿಷ್ಠಶ್ಚ ವೈಷ್ಣವವ್ರತತತ್ಪರಃ ॥ ೬೩ ॥

ಜ್ಞಾನೀ ಚ ರುದ್ರಸಾವರ್ಣಿರ್ಮನುಶ್ಚ ದ್ವಾದಶಃ ಸ್ಮೃತಃ ।
ಧರ್ಮಾತ್ಮಾ ದೇವಸಾವರ್ಣಿರ್ಮನುರೇವಂ ತ್ರಯೋದಶಃ ॥ ೬೪ ॥

---

೬೦. ಧರ್ಮಿಷ್ಠರೊಳಗೆ ಶ್ರೇಷ್ಠನೆನಿಸಿದ ರೈವತನೆಂಬುವನೇ ಐದನೆಯ ಮನುವು. ವಿಷ್ಣುಭಕ್ತರೊಳಗೆ ಶ್ರೇಷ್ಠನಾದ ಚಾಕ್ಷುಷನೆಂಬುವನೇ ಆರನೆಯ ಮನುವು

೬೧. ಸೂರ್ಯಪುತ್ರನೂ, ಶ್ರಾದ್ಧಾಭಿಮಾನಿದೇವತೆಯೂ, ಪರಮವೈಷ್ಣವನೂ ಆದ ವೈವಸ್ವತನೆಂಬುವನು ಏಳನೆಯ ಮನುವು. ಸೂರ್ಯಪುತ್ರನೂ ಪರಮವೈಷ್ಣವನೂ ಆದ ಸಾವರ್ಣಿಯೆಂಬುವನು ಮನುಗಳಲ್ಲಿ ಎಂಟನೆಯವನು.

೬೨. ವಿಷ್ಣುವ್ರತಪರಾಯಣನಾದ ದಕ್ಷಸಾವರ್ಣಿಯೆಂಬುವನು ಒಂಭತ್ತನೆಯವನು. ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಬ್ರಹ್ಮಸಾವರ್ಣಿಯೆಂಬುವನು ಹತ್ತನೆಯವನು.

೬೩. ಅನಂತರ ಧರ್ಮಸಾವರ್ಣಿಯೆಂಬ ಮನುವು ಹನ್ನೊಂದನೆಯವನಾಗಿ ಜನಿಸಿ, ಧರ್ಮಿಷ್ಠನೂ, ಶ್ರೇಷ್ಠನೂ, ವಿಷ್ಣುವ್ರತಪರಾಯಣನೂ ಎನಿಸಿಕೊಂಡನು.

೬೪ ಪರಮಜ್ಞಾನಿಯಾದ ರುದ್ರಸಾವರ್ಣಿಯೆಂಬುವನು ಹನ್ನೆರಡನೆಯವನಾಗಿಯೂ, ಧರ್ಮಿಷ್ಠನಾದ ದೇವಸಾವರ್ಣಿಯೆಂಬುವನು ಹದಿಮೂರನೆಯವನಾಗಿಯೂ ಹೆಸರು ಪಡೆದರು.

**ಚತುರ್ದಶೋ ಮಹಾಜ್ಞಾನೀ ಚಂದ್ರಸಾವರ್ಣಿರೇವ ಚ ।**
**ಯಾವದಾಯುರ್ಮನೂನಾಂ ಸ್ಯಾದಿಂದ್ರಾಣಾಂ ತಾವದೇವ ಹಿ ॥ ೬೫ ॥**

**ಚತುರ್ದಶೇಂದ್ರಾವಚ್ಛಿನ್ನಂ ಬ್ರಹ್ಮಣೋ ದಿನಮುಚ್ಯತೇ ।**
**ತಾವತೀ ಬ್ರಹ್ಮಣೋ ರಾತ್ರಿಃ ಸಾ ಚ ಬ್ರಾಹ್ಮೀ ನಿಶಾ ನೃಪ ॥ ೬೬ ॥**

**ಕಾಲರಾತ್ರಿಶ್ಚ ಸಾ ಜ್ಞೇಯಾ ವೇದೇಷು ಪರಿಕೀರ್ತಿತಾ ।**
**ಬ್ರಹ್ಮಣೋ ವಾಸರೇ ರಾಜನ್ ಕ್ಷುದ್ರಕಲ್ಪಃ ಪ್ರಕೀರ್ತಿತಃ ॥ ೬೭ ॥**

**ಸಪ್ತಕಲ್ಪೇ ಚಿರಂಜೀವೀ ಮಾರ್ಕಂಡೇಯೋ ಮಹಾತಪಾಃ ।**
**ಬ್ರಹ್ಮಲೋಕಾದಧಃ ಸರ್ವೇ ಲೋಕಾ ದಗ್ಧಾಶ್ಚ ತತ್ರ ವೈ ॥ ೬೮ ॥**

**ಉತ್ಥಿತೇನೈವ ಸಹಸಾ ಸಂಕರ್ಷಣಮುಖಾಗ್ನಿನಾ ।**
**ಚಂದ್ರಾರ್ಕಬ್ರಹ್ಮಪುತ್ರಾಶ್ಚ ಬ್ರಹ್ಮಲೋಕಂ ಗತಾ ದ್ರುತಂ ॥ ೬೯ ॥**

---

೬೫. ಹದಿನಾಲ್ಕನೆಯವನೇ ಮಹಾಜ್ಞಾನಿಯಾದ ಚಂದ್ರಸಾವರ್ಣಿಯೆಂಬುವನು. ಚತುರ್ದಶಮನುಗಳ ಆಯುಃಪರಿಮಾಣವೂ, ಚತುರ್ದಶೇಂದ್ರರ ಆಯುಃಪರಿಮಾಣವೂ ಒಂದೇಸಮನಾಗಿರುವುದು.

೬೬. ಚತುರ್ದಶೇಂದ್ರರ ಜೀವಿತಕಾಲವೆಲ್ಲವೂ ಬ್ರಹ್ಮನ ಒಂದು ಹಗಲೆನಿಸುವುದು. ಬ್ರಹ್ಮನ ಒಂದು ರಾತ್ರಿಗೂ ಅಷ್ಟೇ ಕಾಲವಾಗುವುದು. ಆ ರಾತ್ರಿಯನ್ನು ಬ್ರಾಹ್ಮೀರಾತ್ರಿಯೆನ್ನುವರು.

೬೭. ವೇದದಲ್ಲಿ ಆ ರಾತ್ರಿಯನ್ನೇ ಕಾಳರಾತ್ರಿಯೆಂದು ಉಲ್ಲೇಖಿಸಿರುವರು. ಬ್ರಹ್ಮನ ಹಗಲನ್ನೇ ಕ್ಷುದ್ರಕಲ್ಪವೆನ್ನುವರು.

೬೮–೬೯. ಮಹಾತಪಸ್ವಿಯಾದ ಮಾರ್ಕಂಡೇಯನು ಈ ರೀತಿಯಾದ ಏಳು ಕ್ಷುದ್ರಕಲ್ಪಗಳ ಕಾಲ ಜೀವಿಸಿರುವುದರಿಂದ ಚಿರಂಜೀವಿ ಎನಿಸುವನು. ಇದ್ದಕ್ಕಿದ್ದಂತೆಯೇ ಮೇಲಕ್ಕೆ ಎದ್ದುಬಂದ ಸಂಕರ್ಷಣನ ಮುಖಾಗ್ನಿಯಿಂದ ಬ್ರಹ್ಮಲೋಕದ ಕೆಳಗಿರುವ ಸಕಲ ಲೋಕಗಳೂ ಕಲ್ಪಾಂತದಲ್ಲಿ ಭಸ್ಮವಾಗುವುವು. ಆಗ ಚಂದ್ರಸೂರ್ಯರೂ, ಬ್ರಹ್ಮಪುತ್ರರೂ ಜಾಗ್ರತೆ ಬ್ರಹ್ಮಲೋಕಕ್ಕೆ ತೆರಳುವರು.

ಬ್ರಹ್ಮರಾತ್ರಿವ್ಯತೀತೇ ತು ಪುನಶ್ಚ ಸಸೃಜೇ ವಿಧಿಃ ।
ತಸ್ಯಾಂ ಬ್ರಹ್ಮನಿಶಾಯಾಂ ಚ ಕ್ಷುದ್ರಃ ಪ್ರಲಯ ಉಚ್ಯತೇ ॥ ೭೦ ॥

ದೇವಾಶ್ಚ ಮನವಶ್ಚೈವ ತತ್ರ ದಗ್ಧಾ ನರಾದಯಃ ।
ಏವಂ ತ್ರಿಂಶದ್ದಿವಾರಾತ್ರೈರ್ಬ್ರಹ್ಮಣೋ ಮಾಸ ಏವ ಚ ॥ ೭೧ ॥

ವರ್ಷಂ ದ್ವಾದಶಮಾಸೈಶ್ಚ ಬ್ರಹ್ಮಸಂಬಂಧಿ ಚೈವ ಹಿ ।
ಏವಂ ಪಂಚದಶಾಬ್ದೇ ತು ಗತೇ ಚ ಬ್ರಹ್ಮಣೋ ನೃಪ ।
ದೈನಂದಿನಸ್ತು ಪ್ರಲಯೋ ವೇದೇಷು ಪರಿಕೀರ್ತಿತಃ ॥ ೭೨ ॥

ಮೋಹರಾತ್ರಿಶ್ಚ ಸಾ ಪ್ರೋಕ್ತಾ ವೇದವಿದ್ಭಿಃ ಪುರಾತನೈಃ ।
ತತ್ರ ಸರ್ವೇ ಪ್ರಣಷ್ಟಾಸ್ಸ್ಯುಶ್ಚಂದ್ರಾರ್ಕಾದಿ ದಿಗೀಶ್ವರಾಃ ॥ ೭೩ ॥

---

೭೦. ಅನಂತರ ಬ್ರಹ್ಮನ ರಾತ್ರಿಯು ಕಳೆದು ಹಗಲಾಗಲು ಪುನಃ ಬ್ರಹ್ಮನು ಮೊದಲಿನಂತೆ ಸೃಷ್ಟಿಮಾಡುವನು. ಆ ರೀತಿಯಾದ ಬ್ರಹ್ಮನ ರಾತ್ರಿಯನ್ನೇ ಕ್ಷುದ್ರಪ್ರಳಯವೆನ್ನುವರು.

೭೧. ಆ ಪ್ರಳಯದಲ್ಲಿ ದೇವತೆಗಳೂ, ಮನುಗಳೂ ಮತ್ತು ಮಾನವರೂ ಭಸ್ಮೀಭೂತರಾಗುವರು. ಈ ರೀತಿಯಾದ ಮೂವತ್ತು ಹಗಲು ರಾತ್ರಿಗಳಾದರೆ ಬ್ರಹ್ಮನಿಗೆ ಒಂದು ತಿಂಗಳೆನಿಸುವುದು.

೭೨. ಬ್ರಹ್ಮನ ಹನ್ನೆರಡುತಿಂಗಳುಗಳಾದರೆ ಒಂದುವರ್ಷವೆನಿಸುವುದು. ಈ ರೀತಿಯಾಗಿ ಬ್ರಹ್ಮನ ಹದಿನೈದುವರ್ಷಗಳಾದರೆ ದೈನಂದಿನಪ್ರಳಯವಾಗುವುದೆಂದು ವೇದೋಕ್ತವಾಗಿದೆ.

೭೩. ಆ ಪ್ರಳಯವನ್ನು ಮೋಹರಾತ್ರಿಯೆಂದು ವೇದಜ್ಞಾನಿಗಳಾದ ಪ್ರಾಚೀನರು ಹೇಳುವರು. ಆಗ ಚಂದ್ರಸೂರ್ಯರೂ, ದಿಕ್ಪಾಲಕರೂ ನಾಶ ಹೊಂದುವರು.

ಆದಿತ್ಯಾ ವಸವೋ ರುದ್ರಾ ಮನವೋ ಮಾನವಾದಯಃ ।
ಋಷಯೋ ಮುನಯಶ್ಚೈವ ಗಂಧರ್ವಾ ರಾಕ್ಷಸಾದಯಃ ॥ ೭೪ ॥

ಮಾರ್ಕಂಡೇಯೋ ಲೋಮಶಶ್ಚ ಪೇಚಕಶ್ಚಿರಜೀವಿನಃ ।
ಇಂದ್ರದ್ಯುಮ್ನಶ್ಚ ನೃಪತಿಶ್ಚಾಕೂಪಾರಶ್ಚ ಕಚ್ಛಪಃ ॥ ೭೫ ॥

ನಾಡೀಜಂಘೋ ಬಕಶ್ಚೈವ ಸರ್ವೇ ನಷ್ಟಾಶ್ಚ ತತ್ರ ವೈ ।
ಬ್ರಹ್ಮಲೋಕಾದಧಃ ಸರ್ವೇ ಲೋಕಾನಾಗಾಲಯಾಸ್ತಥಾ ॥ ೭೬ ॥

ಬ್ರಹ್ಮಲೋಕಂ ಯಯುಃ ಸರ್ವೇ ಬ್ರಹ್ಮಪುತ್ರಾದಯಸ್ತಥಾ ।
ಗತೇ ದೈನಂದಿನೇ ಬ್ರಹ್ಮಾ ಲೋಕಾಂಶ್ಚ ಸಸೃಜೇ ಪುನಃ ॥ ೭೭ ॥

ಏವಂ ಶತಾಬ್ದಪರ್ಯಂತಂ ಪರಮಾಯುಃ ಪ್ರಜಾಪತೇಃ ।
ಬ್ರಹ್ಮಣಶ್ಚ ನಿಪಾತೇ ಸ್ಯಾನ್ಮಹಾಕಲ್ಪೋ ಭವೇನ್ನೃಪ ॥ ೭೮ ॥

---

೭೪. ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶರುದ್ರರೂ, ಚತುರ್ದಶ ಮನುಗಳೂ, ಸಕಲ ಮಾನವರೂ, ಋಷಿಗಳೂ, ಮುನಿಗಳೂ, ಗಂಧರ್ವರೂ, ರಾಕ್ಷಸರೂ ನಾಶಹೊಂದುವರು.

೭೫–೭೬. ಚಿರಂಜೀವಿಯೆನಿಸಿದ ಮಾರ್ಕಂಡೇಯನೂ, ಲೋಮಶಮಹರ್ಷಿ ಪ್ರಾವಾರಕರ್ಣನೆಂಬ ಗೂಬೆ, ಇಂದ್ರದ್ಯುಮ್ನನೆಂಬ ರಾಜ, ಅಕೂಪಾರನೆಂಬ ಆಮೆ, ನಾಡೀಜಂಘವೆಂಬ ಬಕ ಇವರೆಲ್ಲರೂ ಆಗ ನಾಶಹೊಂದುವರು. ಬ್ರಹ್ಮಲೋಕದ ಕೆಳಗೆ ಪಾತಾಳದವರೆಗಿನ ಸಕಲ ಲೋಕಗಳೂ ನಾಶವಾಗುವುವು.

೭೭. ಆಗ ಬ್ರಹ್ಮಪುತ್ರಾದಿಗಳೆಲ್ಲರೂ ಬ್ರಹ್ಮಲೋಕಕ್ಕೆ ಹೋಗಿ ಸೇರುವರು. ಈ ರೀತಿಯಾಗಿ ದೈನಂದಿನ ಪ್ರಳಯವು ಕಳೆದ ಮೇಲೆ ಬ್ರಹ್ಮನು ಪುನಃ ಲೋಕಗಳೆಲ್ಲವನ್ನೂ ಸೃಜಿಸುವನು.

೭೮. ಈ ರೀತಿ ನೂರು ವರ್ಷಗಳವರೆಗೆ ಬ್ರಹ್ಮನ ಆಯುಃಪರಿಮಾಣವುಂಟು. ನೂರು ವರ್ಷಗಳಾದ ಮೇಲೆ ಬ್ರಹ್ಮನ ಪತನವಾದಾಗ ಮಹಾಪ್ರಳಯವಾಗುವುದು.

ಪ್ರಕೀರ್ತಿತಾ ಮಹಾರಾತ್ರಿಃ ಸೈವ ಚೇಹ ಪುರಾತನೈಃ ।
ಬ್ರಹ್ಮಣಶ್ಚ ನಿಪಾತೇ ಚ ಬ್ರಹ್ಮಾಂಡೌಘೋ ಜಲಪ್ಲುತೇ ॥ ೭೯ ॥

ವೇದಮಾತಾ ಚ ಸಾವಿತ್ರೀ ವೇದಾ ಧರ್ಮಾದಯಸ್ತಥಾ ।
ಸರ್ವೇ ಪ್ರಣಷ್ಟಾ ಮೃತ್ಯುಶ್ಚ ಪ್ರಕೃತಿಂ ಚ ಶಿವಂ ವಿನಾ ॥ ೮೦ ॥

ನಾರಾಯಣೇ ಪ್ರಲೀನಾಶ್ಚ ವಿಶ್ವಸ್ಥಾ ವೈಷ್ಣವಾಸ್ತಥಾ ।
ಕಾಲಾಗ್ನಿರುದ್ರಃ ಸಂಹರ್ತಾ ಸರ್ವರುದ್ರಗಣೈಃ ಸಹ ॥ ೮೧ ॥

ಮೃತ್ಯುಂಜಯೇ ಮಹಾದೇವೇ ಪ್ರಲೀನಃ ಸ ತಮೋಗುಣಃ ।
ಬ್ರಹ್ಮಣಶ್ಚ ನಿಪಾತೇನ ನಿಮೇಷಃ ಪ್ರಕೃತೇರ್ಭವೇತ್ ॥ ೮೨ ॥

ನಾರಾಯಣಸ್ಯ ಶಂಭೋಶ್ಚ ಮಹಾವಿಷ್ಣೋಶ್ಚ ನಿಶ್ಚಿತಂ ।
ನಿಮೇಷಾಂತೇ ಪುನಃ ಸೃಷ್ಟಿರ್ಭವೇತ್ಕೃಷ್ಣೇಚ್ಛಯಾ ನೃಪ ॥ ೮೩ ॥

---

೭೯. ಆ ಮಹಾಪ್ರಳಯವನ್ನೇ ಪುರಾತನರು ಮಹಾರಾತ್ರಿಯೆನ್ನುವರು. ಈ ರೀತಿಯಾಗಿ ಬ್ರಹ್ಮನ ಪತನವಾದಾಗ ಬ್ರಹ್ಮಾಂಡವೆಲ್ಲವೂ ನೀರಿನಲ್ಲಿ ಮುಳುಗುವುದು.

೮೦. ವೇದಮಾತೆಯಾದ ಸಾವಿತ್ರಿಯೂ, ಸಕಲ ವೇದಗಳೂ, ಧರ್ಮಾದಿಗಳೂ, ಅಷ್ಟೇಕೆ, ಪ್ರಕೃತಿ ಮತ್ತು ಶಿವನನ್ನುಳಿದ ಎಲ್ಲರೂ ಮಹಾಪ್ರಳಯದಲ್ಲಿ ನಾಶ ಹೊಂದುವರು.

೮೧. ನಿಖಿಲ ವಿಶ್ವದಲ್ಲಿರುವ ವೈಷ್ಣವರೆಲ್ಲರೂ ನಾರಾಯಣನಲ್ಲಿ ಐಕ್ಯವಾಗುವರು. ಜಗತ್ಸಂಹಾರಕನಾದ ಕಾಲಾಗ್ನಿರುದ್ರನು ಇತರ ಎಲ್ಲ ರುದ್ರರೊಡನೆಯೂ ತನ್ನ ತಮೋಗುಣದೊಡನೆಯೂ, ಮೃತ್ಯುಂಜಯನಾದ ಮಹಾದೇವನಲ್ಲಿ ಐಕ್ಯವಾಗುವನು.

೮೨–೮೩. ಈ ರೀತಿಯಾಗಿ ಬ್ರಹ್ಮನ ಪತನವಾದಾಗ ಪ್ರಕೃತಿ, ನಾರಾಯಣ, ಶಂಭು ಮತ್ತು ಮಹಾವಿಷ್ಣುಗಳ ನಿಮೇಷ (ರೆಪ್ಪೆಹೊಡೆಯುವಿಕೆ)ವುಂಟಾಗುವುದು. ನಿಮೇಷದನಂತರ ಶ್ರೀಕೃಷ್ಣಪರಮಾತ್ಮನ ಇಚ್ಛೆಯಿಂದ ಪುನಃ ಜಗತ್ಸೃಷ್ಟಿಯುಂಟಾಗುವುದು.

ಕೃಷ್ಣೋ ನಿಮೇಷರಹಿತೋ ನಿರ್ಗುಣಃ ಪ್ರಕೃತೇಃ ಪರಃ ।
ಸಗುಣಾನಾಂ ನಿಮೇಷಶ್ಚ ಕಾಲಸಂಖ್ಯಾವಯೋಮಿತಃ ॥ ೮೪ ॥

ನಿರ್ಗುಣಸ್ಯ ಚ ನಿತ್ಯಸ್ಯ ಚಾದ್ಯಂತರಹಿತಸ್ಯ ಚ ।
ನಿಮೇಷಾಣಾಂ ಸಹಸ್ರೇಣ ಪ್ರಕೃತೇರ್ದಂಡ ಉಚ್ಯತೇ ॥ ೮೫ ॥

ಷಷ್ಟಿದಂಡಾತ್ಮಿಕಾ ತಸ್ಯಾ ವಾಸರಶ್ಚ ಪ್ರಕೀರ್ತಿತಃ ।
ತ್ರಿಂಶದ್ರಾತ್ರಿಂದಿನೈರ್ಮಾಸೋ ವರ್ಷಂ ದ್ವಾದಶಮಾಸಕೈಃ ॥ ೮೬ ॥

ಏವಂ ಗತೇ ಶತಾಬ್ದೇ ಚ ಶ್ರೀಕೃಷ್ಣೇ ಪ್ರಕೃತೇರ್ಲಯಃ ।
ಪ್ರಕೃತ್ಯಾಂ ಚ ಪ್ರಲೀನಾಯಾಂ ಶ್ರೀಕೃಷ್ಣೇ ಪ್ರಾಕೃತೋ ಲಯಃ ॥ ೮೭ ॥

ಸರ್ವಾನ್ಸಂಹೃತ್ಯ ಸಾ ಚೈಕಾ ಮಹಾವಿಷ್ಣೋಃ ಪ್ರಸೂಶ್ಚ ಯಾ ।
ಕೃಷ್ಣವಕ್ಷಸಿ ಲೀನಾ ಚ ಮೂಲಪ್ರಕೃತಿರೀಶ್ವರೀ ॥ ೮೮ ॥

---

೮೪. ಪ್ರಕೃತಿಗಿಂತ ಶ್ರೇಷ್ಠನೂ, ನಿರ್ಗುಣನೂ ಆದ ಶ್ರೀಕೃಷ್ಣನಿಗೆ ನಿಮೇಷವೆಂಬುದಿಲ್ಲ. ಸಗುಣರಿಗೆ ಮಾತ್ರ ನಿಮೇಷವೂ ವಯಃಪರಿಮಿತಿಯೂ ಇರುವುದು.

೮೫. ನಿರ್ಗುಣನೂ, ನಿತ್ಯನೂ, ಆದ್ಯಂತರಹಿತನೂ ಆದ ಪರಮಾತ್ಮನಿಗೆ ಯಾವ ಪರಿಮಿತಿಯೂ ಇಲ್ಲ. ಪ್ರಕೃತಿಯ ಸಾವಿರ ನಿಮೇಷಗಳಾದರೆ ಒಂದು ದಂಡವೆನಿಸುವುದು.

೮೬ ಈ ರೀತಿಯಾದ ಅರವತ್ತು ದಂಡಗಳಾದರೆ ಆಕೆಗೆ ಒಂದು ದಿವಸವೆನಿಸುವುದು. ಈ ರೀತಿಯಾದ ಮೂವತ್ತು ದಿವಸಗಳಿಂದ ಒಂದು ತಿಂಗಳೂ, ಹನ್ನೆರಡು ತಿಂಗಳುಗಳಿಂದ ಒಂದು ವರ್ಷವೂ ಪ್ರಕೃತಿಗೆ ಉಂಟಾಗುವುದು.

೮೭. ಈ ರೀತಿಯಾಗಿ ನೂರು ವರ್ಷಗಳಾದನಂತರ ಪ್ರಕೃತಿಯು ಶ್ರೀಕೃಷ್ಣನಲ್ಲಿ ಲೀನವಾಗುವಳು. ಪ್ರಕೃತಿಯು ಶ್ರೀಕೃಷ್ಣನಲ್ಲಿ ಐಕ್ಯಳಾದ ಮೇಲೆ ಪ್ರಾಕೃತಪ್ರಳಯವಾಗುವುದು.

೮೮. ಮಹಾವಿಷ್ಣುವಿಗೂ ಮಾತೆಯಾದ ಆ ಮೂಲಪ್ರಕೃತಿಯು ಎಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡು ತಾನು ಶ್ರೀಕೃಷ್ಣನ ವಕ್ಷಃಸ್ಥಲದಲ್ಲಿ ಐಕ್ಯಳಾಗುವಳು.

ಶಾಕ್ತಾ ವದಂತಿ ತಾಂ ದುರ್ಗಾಂ ವಿಷ್ಣುಮಾಯಾಂ ಸನಾತನೀಂ ।
ಸರ್ವಶಕ್ತಿಸ್ವರೂಪಾಂ ಚ ಪರಾಂ ನಾರಾಯಣೀಂ ಸತೀಂ ॥ ೮೯ ॥

ಬುದ್ಧ್ಯಧಿಷ್ಠಾತೃದೇವೀಂ ಚ ಶ್ರೀಕೃಷ್ಣಸ್ಯೈವ ನಿರ್ಗುಣಾಂ ।
ಯನ್ಮಾಯಾಮೋಹಿತಾಶ್ಚೈವ ಬ್ರಹ್ಮವಿಷ್ಣುಶಿವಾದಯಃ ॥ ೯೦ ॥

ವೈಷ್ಣವಾಸ್ತಾಂ ಮಹಾಲಕ್ಷ್ಮೀಂ ಪರಾಂ ರಾಧಾಂ ವದಂತಿ ತೇ ।
ಅರ್ಧಾಂಗಾಂ ಚ ಮಹಾಲಕ್ಷ್ಮೀಂ ಪ್ರಿಯಾಂ ನಾರಾಯಣಸ್ಯ ಚ ॥ ೯೧ ॥

ಪ್ರಾಣಾಧಿಷ್ಠಾತೃದೇವೀಂ ಚ ಪ್ರೇಮ್ಣಾ ಪ್ರಾಣಾಧಿಕಾಂ ವರಾಂ ।
ಸ್ಥಿರಪ್ರೇಮಮಯೀಂ ಶಕ್ತಿಂ ನಿರ್ಗುಣಾಂ ನಿರ್ಗುಣಸ್ಯ ಚ ॥ ೯೨ ॥

---

೮೯. ಶಕ್ತ್ಯುಪಾಸಕರು ಆ ಪ್ರಕೃತಿಯನ್ನು ದುರ್ಗಾ, ವಿಷ್ಣುಮಾಯಾ, ಸನಾತನೀ, ಸರ್ವಶಕ್ತಿಸ್ವರೂಪಾ, ಪರಾ, ನಾರಾಯಣೀ ಎಂದು ಅನೇಕ ಹೆಸರಿನಿಂದ ಕರೆಯುವರು.

೯೦. ಶ್ರೀಕೃಷ್ಣನ ಬುದ್ಧ್ಯಧಿಷ್ಠಾತೃದೇವತೆಯೂ, ನಿರ್ಗುಣಳೂ ಆದ ಆ ಪ್ರಕೃತಿಯ ಮಾಯೆಯಿಂದ ಬ್ರಹ್ಮ, ವಿಷ್ಣು, ಶಿವಾದಿಗಳೆಲ್ಲರೂ ಮೋಹಿತರಾಗುವರು.

೯೧. ವಿಷ್ಣುಭಕ್ತರು ಆ ಪ್ರಕೃತಿಯನ್ನೇ ಮಹಾಲಕ್ಷ್ಮಿಯೆಂದೂ, ಶ್ರೇಷ್ಠಳೂ ಶ್ರೀಕೃಷ್ಣನ ಅರ್ಧಾಂಗಿಯೂ ಆದ ರಾಧಾ ಎಂದೂ ಹೇಳುವರು. ಮಹಾಲಕ್ಷ್ಮಿಯು ಶ್ರೀಮನ್ನಾರಾಯಣನ ಪ್ರಿಯಳೆನಿಸುವಳು.

೯೨. ನಿರ್ಗುಣನಾದ ಶ್ರೀಕೃಷ್ಣಪರಮಾತ್ಮನ ಪ್ರಾಣಗಳಿಗೆ ಅಧಿಷ್ಠಾತೃದೇವತೆಯೂ, ಪ್ರಾಣಗಳಿಗಿಂತಲೂ ಪ್ರೀತಿಪಾತ್ರಳೂ ಸ್ಥಿರಪ್ರೇಮಮಯಿಯೂ ಆದ ನಿರ್ಗುಣ ಪ್ರಕೃತಿಯನ್ನೇ ರಾಧೆಯೆನ್ನುವರು.

ನಾರಾಯಣಶ್ಚ ಶಂಭುಶ್ಚ ಸಂಹೃತ್ಯ ಸ್ವಗಣಾನ್ಪ್ರಭೂನ್ ।
ಶುದ್ಧಸತ್ವಸ್ವರೂಪೇ ಶ್ರೀಕೃಷ್ಣೇ ಲೀನಶ್ಚ ನಿರ್ಗುಣೇ ॥ ೯೩ ॥

ಗೋಪಾ ಗೋಪ್ಯಶ್ಚ ಗಾವಶ್ಚ ಸವತ್ಸಾಶ್ಚ ನರಾಧಿಪ ।
ಸರ್ವೇ ಲೀನಾಃ ಪ್ರಕೃತ್ಯಾಂ ಚ ಪ್ರಕೃತಿಃ ಪರಮೇಶ್ವರೇ ॥ ೯೪ ॥

ಮಹಾವಿಷ್ಣೌ ವಿಲೀನಾಶ್ಚ ತೇ ಸರ್ವೇ ಕ್ಷುದ್ರವಿಷ್ಣವಃ ।
ಮಹಾವಿಷ್ಣುಃ ಪ್ರಕೃತ್ಯಾಂ ಚ ಸಾ ಚೈವಂ ಪರಮಾತ್ಮನಿ ॥ ೯೫ ॥

ಪ್ರಕೃತಿರ್ಯೋಗನಿದ್ರಾ ಚ ಶ್ರೀಕೃಷ್ಣನಯನದ್ವಯೇ ।
ಅಧಿಷ್ಠಾನಂ ಚಕಾರೈವಂ ಮಾಯಯಾ ಚೇಶ್ವರೇಚ್ಛಯಾ ॥ ೯೬ ॥

ಪ್ರಕೃತೇರ್ವಾಸರೋ ಯಾವನ್ಮಿತಃ ಕಾಲಃ ಪ್ರಕೀರ್ತಿತಃ ।
ತಾವದ್ವೃಂದಾವನೇ ನಿದ್ರಾ ಕೃಷ್ಣಸ್ಯ ಪರಮಾತ್ಮನಃ ॥ ೯೭ ॥

---

೯೩. ನಾರಾಯಣ ಮತ್ತು ಪರಶಿವನು ತಮ್ಮ ತಮ್ಮ ಗಣದವರನ್ನೆಲ್ಲ ತಮ್ಮಲ್ಲಿಯೇ ಐಕ್ಯಮಾಡಿಕೊಂಡು, ಶುದ್ಧಸ್ವರೂಪನೂ ನಿರ್ಗುಣನೂ ಆದ ಶ್ರೀಕೃಷ್ಣ ಪರಮಾತ್ಮನಲ್ಲಿ ಅಡಗಿಕೊಳ್ಳುವರು.

೯೪. ಎಲೈ ರಾಜೇಂದ್ರನೇ, ಗೋಪಗೋಪಿಯರೂ ಕರುಗಳೊಡನೆ ಕೂಡಿದ ಗೋವುಗಳೂ ಪ್ರಕೃತಿಯಲ್ಲಿಯೂ ಪ್ರಕೃತಿಯು ಪರಮಾತ್ಮನಲ್ಲಿಯೂ, ಐಕ್ಯತೆ ಹೊಂದುವರು.

೯೫. ಕ್ಷುದ್ರವಿಷ್ಣುಗಳೆಲ್ಲರೂ ಮಹಾವಿಷ್ಣುವಿನಲ್ಲಿಯೂ, ಮಹಾವಿಷ್ಣುವು ಪ್ರಕೃತಿಯಲ್ಲಿಯೂ, ಪ್ರಕೃತಿಯು ಪರಮಾತ್ಮನಲ್ಲಿಯೂ ಕ್ರಮವಾಗಿ ಐಕ್ಯರಾಗುವರು.

೯೬. ಪ್ರಕೃತಿಯೂ ಕೂಡ, ಈಶ್ವರೇಚ್ಛಾರೂಪವಾದ ಮಾಯೆಯಿಂದ ಶ್ರೀಕೃಷ್ಣನ ಎರಡು ಕಣ್ಣುಗಳಲ್ಲಿ ಸೇರಿ ಯೋಗನಿದ್ರೆಗೆ ಅಧಿಷ್ಠಾನರೂಪಳಾಗಿರುವಳು.

೯೭. ಪ್ರಕೃತಿಯ ಒಂದು ದಿವಸವು ಎಷ್ಟು ಕಾಲ ಪರಿಮಾಣವುಳ್ಳದ್ದೆಂದು ಪ್ರಸಿದ್ಧವಾಗಿರುವುದೋ ಅಷ್ಟುಕಾಲ ಶ್ರೀಕೃಷ್ಣನು ಬೃಂದಾವನದಲ್ಲಿ ಯೋಗನಿದ್ರಾರೂಢನಾಗಿರುವನು.

ಅಮೂಲ್ಯರತ್ನತಲ್ಪೇ ಚ ವಹ್ನಿಶುದ್ಧಾಂಶುಕಾರ್ಚಿತೇ ।
ಗಂಧಚಂದನಮಾಲ್ಯೌಘವಾಯ್ವಾದಿಸುರಭೀಕೃತೇ ॥ ೯೮ ॥

ಪುನಃ ಪ್ರಜಾಗರೇ ತಸ್ಯ ಸರ್ವಸೃಷ್ಟಿರ್ಭವೇತ್ಪುನಃ ।
ಏವಂ ಸರ್ವೇ ಪ್ರಾಕೃತಾಶ್ಚ ಶ್ರೀಕೃಷ್ಣಂ ನಿರ್ಗುಣಂ ವಿನಾ ॥ ೯೯ ॥

ತದ್ವಂದನಂ ತತ್ಸ್ಮರಣಂ ತಸ್ಯ ಧ್ಯಾನಂ ತದರ್ಚನಂ ।
ಕೀರ್ತನಂ ತದ್ಗುಣಾನಾಂ ಚ ಮಹಾಪಾತಕನಾಶನಂ ॥ ೧೦೦ ॥

ಏತತ್ತೇ ಕಥಿತಂ ಸರ್ವಂ ಯದ್ಯನ್ಮೃತ್ಯುಂಜಯೋಚ್ಛ್ರುತಂ ।
ಯಥಾಗಮಂ ಮಹಾರಾಜ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೦೧ ॥

---

೯೮. ಆಗ ಅಗ್ನಿಯಂತೆ ಪರಿಶುದ್ಧವಾದ ವಸ್ತ್ರಗಳಿಂದ ಆವೃತವಾಗಿ ದಿವ್ಯ ಚಂದನಗಂಧದಿಂದಲೂ, ಪುಷ್ಪಮಾಲೆಗಳಿಂದಲೂ, ಸುವಾಸಿತವಾದ ಅಮೂಲ್ಯರತ್ನ ಶಯನದಲ್ಲಿ ಪವಡಿಸಿರುವನು.

೯೯. ಮತ್ತೆ ಶ್ರೀಕೃಷ್ಣಪರಮಾತ್ಮನು ಯೋಗನಿದ್ರೆಯಿಂದೆಚ್ಚೆತ್ತಾಗ ಸಕಲ ಸೃಷ್ಟಿಯೂ ಮೊದಲಿನಂತಾಗುವುದು. ಆದುದರಿಂದ ನಿರ್ಗುಣನಾದ ಶ್ರೀಕೃಷ್ಣನನ್ನು ಬಿಟ್ಟು ಎಲ್ಲವೂ ಪ್ರಕೃತಿ ಸೃಷ್ಟಿಗೊಳಗಾಗಿ ಪ್ರಾಕೃತವೆನಿಸುವುವು.

೧೦೦. ಆ ಕೃಷ್ಣಪರಮಾತ್ಮನ ವಂದನೆ, ಸ್ಮರಣೆ, ಧ್ಯಾನ, ಅರ್ಚನೆ ಮತ್ತು ಆತನ ದಿವ್ಯಗುಣಕೀರ್ತನೆಗಳಿಂದ ಮಹಾಪಾಪವೂ ಪರಿಹಾರವಾಗುವುದು.

೧೦೧. ಮೃತ್ಯುಂಜಯನ ಮುಖದಿಂದ ನಾನು ಕೇಳಿದ ಸಕಲ ಶಾಸ್ತ್ರ ತತ್ವವನ್ನು ನಿನಗೆ ಹೇಳಿದೆನು. ಎಲೈ ಮಹಾರಾಜನೇ, ಇನ್ನೇನನ್ನು ಕೇಳಬೇಕೆಂದು ನಿನ್ನ ಇಚ್ಛೆಯಿರುವುದು.

॥ ಸುಯಜ್ಞ ಉವಾಚ ॥

ಕಾಲಾಗ್ನಿರುದ್ರೋ ವಿಶ್ವಾನಾಂ ಸಂಹರ್ತಾ ಚ ತಮೋಗುಣಃ ।
ಬ್ರಹ್ಮಣೋಂತೇ ವಿಲೀನಶ್ಚ ಸತ್ವೇ ಮೃತ್ಯುಂಜಯೇ ಶಿವೇ ॥ ೧೦೨ ॥

ಶಿವೋ ಲೀನೋ ನಿರ್ಗುಣೇ ಚ ಶ್ರೀಕೃಷ್ಣೇ ಪ್ರಾಕೃತೇ ಲಯೇ ।
ಕಥಂ ತವ ಗುರೋರ್ನಾಮ ಮೃತ್ಯುಂಜಯ ಇತಿ ಶ್ರುತಂ ॥ ೧೦೩ ॥

ಕಥಂ ಪ್ರಸೂರ್ಮಹಾವಿಷ್ಣೋರ್ಮೂಲಪ್ರಕೃತಿರೀಶ್ವರೀ ।
ಅಸಂಖ್ಯಾನಿ ಚ ವಿಶ್ವಾನಿ ಸಂತಿ ವೈ ಯಸ್ಯ ಲೋಮಸು ॥ ೧೦೪ ॥

॥ ಸುತಪಾ ಉವಾಚ ॥

ಬ್ರಹ್ಮಣೋಂತೇ ಮೃತ್ಯುಕನ್ಯಾ ಪ್ರಣಷ್ಟಾ ಜಲಬಿಂಬವತ್ ।
ಸಂಹರ್ತ್ರೀ ಸರ್ವಲೋಕಾನಾಂ ಬ್ರಹ್ಮಾದೀನಾಂ ನರಾಧಿಪ ॥ ೧೦೫ ॥

---

೧೦೨. ಸುಯಜ್ಞ:—ಎಲೈ ಮುನೀಂದ್ರನೇ, ಚತುರ್ಮುಖಬ್ರಹ್ಮನ ಪತನವಾದಾಗ, ವಿಶ್ವಸಂಹಾರಕನೂ, ತಮೋಗುಣಪ್ರಧಾನನೂ ಆದ ಕಾಲಾಗ್ನಿರುದ್ರನು. ಮೃತ್ಯುಂಜಯನೂ, ಸತ್ವಗುಣಪ್ರಧಾನನೂ ಆದ ಶಿವನಲ್ಲಿ ಐಕ್ಯವಾಗುವನೆಂದು ಹೇಳಿದೆ.

೧೦೩. ಅಂತೆಯೇ ಪ್ರಾಕೃತ ಪ್ರಳಯದಲ್ಲಿ ಶಿವನೂ ಕೂಡ ನಿರ್ಗುಣನಾದ ಶ್ರೀಕೃಷ್ಣಪರಮಾತ್ಮನಲ್ಲಿ ಐಕ್ಯವಾಗುವನೆಂದು ತಿಳಿಸಿದೆ. ಅಂದಮೇಲೆ ಶಿವನು ನಾಶರಹಿತನೂ, ಮೃತ್ಯುಂಜಯನೂ ಆದುದು ಹೇಗೆ?

೧೦೪. ಅಲ್ಲದೆ ಯಾವ ಮಹಾವಿಷ್ಣುವಿನ ಲೋಮಕೂಪಗಳಲ್ಲಿ ಅಗಣಿತವಾದ ವಿಶ್ವವು ಅಡಗಿರುವುದೋ ಆ ಮಹಾವಿಷ್ಣುವು ಸರ್ವೇಶ್ವರಿಯಾದ ಮೂಲಪ್ರಕೃತಿಯಿಂದ ಆವಿರ್ಭವಿಸಿದುದು ಹೇಗೆ?

೧೦೫. ಸುತಪ:—ಎಲೈ ರಾಜೇಂದ್ರನೇ, ನಿನ್ನ ಪ್ರಶ್ನೆಗಳಿಗೆ ನಾನು ಹೇಳುವ ಉತ್ತರವನ್ನು ಅವಧರಿಸು. ಬ್ರಹ್ಮಾದಿಸ್ತಂಬಪರ್ಯಂತವಾದ ಸಕಲ ಲೋಕವನ್ನೂ ಸಂಹರಿಸಲು ಶಕ್ತಿಯುಳ್ಳ ಮೃತ್ಯುಕನ್ಯೆಯು ಬ್ರಹ್ಮನ ಪತನವಾದ ಕೂಡಲೇ ನೀರಿನ ಗುಳ್ಳೆಯಂತೆ ನಾಶಹೊಂದುವಳು.

**ಕತಿಧಾ ಮೃತ್ಯುಕನ್ಯಾನಾಂ ಬ್ರಹ್ಮಣಾಂ ಕೋಟಿಶೋ ಲಯೇ ।**
**ಕಾಲೇನ ಲೀನಃ ಶಂಭುಶ್ಚ ಸತ್ವರೂಪೇ ಚ ನಿರ್ಗುಣೇ ॥ ೧೦೬ ॥**

**ಮೃತ್ಯುಕನ್ಯಾ ಜಿತಾ ಶಶ್ವಚ್ಛಿವೇನ ಗುರುಣಾ ಮಮ ।**
**ನ ಮೃತ್ಯುನಾ ಜಿತಃ ಶಂಭುಃ ಕಲ್ಪೇ ಕಲ್ಪೇ ಶ್ರುತೌ ಶ್ರುತಂ ॥ ೧೦೭ ॥**

**ಶಂಭುರ್ನಾರಾಯಣಸ್ಯೈವ ಪ್ರಕೃತೇಶ್ಚ ನರಾಧಿಪ ।**
**ನಿತ್ಯಾನಾಂ ಲೀನತಾ ನಿತ್ಯೇ ತನ್ಮಾಯಾ ನ ತು ವಾಸ್ತವೀ ॥ ೧೦೮ ॥**

**ಸ್ವಯಂ ಪುಮಾನ್ನಿರ್ಗುಣಶ್ಚ ಕಾಲೇನ ಸಗುಣಃ ಸ್ವಯಂ ।**
**ಸ್ವಯಂ ನಾರಾಯಣಶ್ಶಂಭುರ್ಮಾಯಯಾ ಪ್ರಕೃತಿಃ ಸ್ವಯಂ ॥ ೧೦೯ ॥**

---

೧೦೬. ಈ ರೀತಿಯಾಗಿ ಕೋಟಿ ಬ್ರಹ್ಮರೂ, ಮೃತ್ಯುಕನ್ಯೆಯರೂ ಎಷ್ಟೋ ಸಾರಿ ಲಯವಾದ ಮೇಲೆ ಕಾಲಾಂತರದಲ್ಲಿ ಶಿವನು ಸತ್ವಸ್ವರೂಪನೂ, ನಿರ್ಗುಣನೂ ಆದ ಪರಮಾತ್ಮನಲ್ಲಿ ಲಯಹೊಂದುವನು.

೧೦೭. ಆದುದರಿಂದ ನನ್ನ ಗುರುವಾದ ಶಿವನು ಎಷ್ಟೋ ಸಾರಿ ಮೃತ್ಯು ಕನ್ಯೆಯನ್ನು ಜಯಿಸಿದಂತಾಗುವುದೇ ಹೊರತು ಯಾವ ಕಲ್ಪದಲ್ಲಿಯೂ ಮೃತ್ಯುವು ಶಿವನನ್ನು ಜಯಿಸಲಾಗುವುದಿಲ್ಲವೆಂದು ವೇದೋಕ್ತವಾಗಿದೆ.

೧೦೮. ಎಲೈ ರಾಜೇಂದ್ರನೇ, ನಿತ್ಯರಾದ ಶಿವ, ನಾರಾಯಣ ಮತ್ತು ಪ್ರಕೃತಿಯರು ನಿತ್ಯನಾದ ಪರಮಾತ್ಮನಲ್ಲಿ ಲಯವಾಗುವುದು ಮಾಯೆಯೇ ಹೊರತು ವಾಸ್ತವವಲ್ಲ.

೧೦೯. ನಿರ್ಗುಣನಾದ ಪರಮಪುರುಷನೂ ಕೂಡ ಸ್ವೇಚ್ಛಾಮಯನಾದುದರಿಂದ ಕಾಲಾನುಗುಣವಾಗಿ ಸಗುಣನಾಗುವನು. ಆದುದರಿಂದ ತಾನೇ ಕಾಲಾನುಗುಣವಾಗಿ ಶಿವ, ನಾರಾಯಣ ಮತ್ತು ಪ್ರಕೃತಿಯರ ರೂಪಧಾರಿಯಾಗುವನು.

ತದಂಶಸ್ತತ್ಸಮಃ ಶಶ್ವದ್ಯಥಾ ವಹ್ನೇಃ ಸ್ಫುಲಿಂಗವತ್ ।
ಯೇ ಯೇ ಚ ಬ್ರಹ್ಮಣಾ ಸೃಷ್ಟಾ ರುದ್ರಾದಿತ್ಯಾದಯಸ್ತಥಾ ॥ ೧೧೦ ॥

ಕಲ್ಪೇ ಕಲ್ಪೇ ಜಿತಾಸ್ತೇ ತೇ ನಶ್ವರಾ ಮೃತ್ಯುಕನ್ಯಯಾ ।
ನ ಶಿವೋ ಬ್ರಹ್ಮಣಾ ಸೃಷ್ಟಃ ಸತ್ಯೋ ನಿತ್ಯಃ ಸನಾತನಃ ॥ ೧೧೧ ॥

ಕತಿಧಾ ಬ್ರಹ್ಮಣಾಂ ಪಾತೋ ಯನ್ನಿಮೇಷೇಣ ಭೂಮಿಪ ।
ಅಥಾದಿಸರ್ಗೇ ಶ್ರೀಕೃಷ್ಣಃ ಪ್ರಕೃತ್ಯಾಂ ಚ ಜಗದ್ಗುರುಃ ॥ ೧೧೨ ॥

ಚಕಾರ ವೀರ್ಯಾಧಾನಂ ಚ ಪುಣ್ಯೇ ವೃಂದಾವನೇ ವನೇ ।
ತದ್ವಾಮಾಂಶಸಮುದ್ಭೂತಾ ರಾಸೇ ರಾಸೇಶ್ವರೀ ಪರಾ ॥ ೧೧೩ ॥

ಗರ್ಭಂ ದಧಾರ ಸಾ ರಾಧಾ ಯಾವದ್ವೈ ಬ್ರಹ್ಮಣೋ ವಯಃ ।
ತತಃ ಸುಷಾವ ಸಾ ಡಿಂಭಂ ಗೋಲೋಕೇ ರಾಸಮಂಡಲೇ ॥ ೧೧೪ ॥

---

೧೧೦. ಅಗ್ನಿಯೂ ಅದರ ಒಂದು ಕಿಡಿಯೂ ಹೇಗೆ ಒಂದೇ ಆಗಿರುವುದೋ ಹಾಗೆ ಪರಮಾತ್ಮನೂ, ಅವನ ಅಂಶಜರಾದ ಶಿವ, ನಾರಾಯಣ ಮತ್ತು ಪ್ರಕೃತಿಯರೂ ಅಭಿನ್ನರಾಗಿರುವರು.

೧೧೧. ಚತುರ್ಮುಖಬ್ರಹ್ಮನ ಸೃಷ್ಟಿಗೊಳಗಾಗಿ ನಶ್ವರವಾದುದೆಲ್ಲ ಮೃತ್ಯುಕನ್ಯೆಯಿಂದ ಜಿತವಾಗುವುದೇ ಹೊರತು, ಬ್ರಹ್ಮನಿಂದ ಸೃಷ್ಟನಾಗದೆ, ನಿತ್ಯನೂ ಸನಾತನನೂ ಆದ ಶಿವನು ಮೃತ್ಯುಕನ್ಯೆಗೆ ಸಿಲುಕನು.

೧೧೨–೧೧೩. ಯಾವ ಪರಮಾತ್ಮನ ನಿಮೇಷಕಾಲಮಾತ್ರದಲ್ಲಿ ಅಸಂಖ್ಯ ಬ್ರಹ್ಮರ ಪತನವಾಗುವುದೋ ಆ ಜಗದೊಡೆಯನಾದ ಶ್ರೀಕೃಷ್ಣಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಪುಣ್ಯಕರವಾದ ಬೃಂದಾವನದಲ್ಲಿ ಪ್ರಕೃತಿಯ ಗರ್ಭದೊಳಗೆ ವೀರ್ಯಾಧಾನಮಾಡಿದನು. ಅನಂತರ ರಾಸಮಂಡಲದಲ್ಲಿ ರಾಸೇಶ್ವರಿಯಾದ ರಾಧೆಯು ಪರಮಾತ್ಮನ ವಾಮಭಾಗದಿಂದ ಆವಿರ್ಭವಿಸಿದಳು.

೧೧೪. ಆ ರಾಧೆಯು ಬ್ರಹ್ಮನ ಜೀವಿತಕಾಲದವರೆಗೆ ಗರ್ಭಧಾರಣೆಮಾಡಿಕೊಂಡಿದ್ದು ಗೋಲೋಕದ ರಾಸಮಂಡಲದಲ್ಲಿ ಅಂಡರೂಪವಾದ ಒಂದು ಶಿಶುವನ್ನು ಪ್ರಸುವಿಸಿದಳು.

ಚುಕೋಪ ಡಿಂಭಂ ಸಾ ದೃಷ್ಟ್ವಾ ಹೃದಯೇನ ವಿದೂಯತಾ ।
ತದ್ಡಿಂಭಂ ಪ್ರೇರಯಾಮಾಸ ತದಧೋ ವಿಶ್ವಗೋಲಕೇ ॥ ೧೧೫ ॥

ತ್ಯಕ್ತ್ವಾಪತ್ಯಂ ಮಹಾದೇವೀ ರುರೋದ ಚ ಮುಹುರ್ಮುಹುಃ ।
ಕೃಷ್ಣಸ್ತಾಂ ಬೋಧಯಾಮಾಸ ಮಹಾಯೋಗೇನ ಯೋಗವಿತ್ ॥ ೧೧೬ ॥

ಬಭೂವ ತಸ್ಮಾಡ್ಡಿಂಭಾಚ್ಚ ಸರ್ವಾಧಾರೋ ಮಹಾವಿರಾಟ್ ॥ ೧೧೭ ॥

॥ ಸುಯಜ್ಞ ಉವಾಚ ॥

ಅದ್ಯ ಮೇ ಸಫಲಂ ಜನ್ಮ ಜೀವನಂ ಸಾರ್ಥಕಂ ಮಮ ।
ಶಾಪೋ ಮೇ ವರರೂಪಶ್ಚಾಪ್ಯಭವದ್ಭಕ್ತಿಕಾರಣಂ ॥ ೧೧೮ ॥

ಸುದುರ್ಲಭಾ ಹರೇರ್ಭಕ್ತಿಃ ಸರ್ವಮಂಗಲಮಂಗಲಾ ।
ನ ತಸ್ಯಾಶ್ಚ ಸಮಂ ವಿಪ್ರ ವೇದೋಕ್ತಂ ಭಕ್ತಿಪಂಚಕಂ ॥ ೧೧೯ ॥

---

೧೧೫. ಅಂಡವನ್ನು ನೋಡಿ ರಾಧೆಗೆ ವ್ಯಥೆಯೂ, ಕೋಪವೂ ಸಮಕಾಲದಲ್ಲಿಯೇ ಉಂಟಾಯಿತು. ಆಗ ಆ ಶಿಶುವನ್ನು ಅಲ್ಲಿಂದ ಕೆಳಗಿರುವ ವಿಶ್ವಗೋಳಕಕ್ಕೆ ನೂಕಿಬಿಟ್ಟಳು.

೧೧೬. ಹೀಗೆ ಆ ಶಿಶುವನ್ನು ತ್ಯಜಿಸಿದ ಆ ರಾಧಾದೇವಿಯು ಬಹಳವಾಗಿ ಗೋಳಾಡಲಾರಂಭಿಸಿದಳು. ಆಗ ಯೋಗಿಶ್ರೇಷ್ಠನಾದ ಕೃಷ್ಣಪರಮಾತ್ಮನು, ಯೋಗ ಮಹಿಮೆಯಿಂದ ಆಕೆಗೆ ಜ್ಞಾನೋಪದೇಶಮಾಡಿದನು.

೧೧೭. ಆನಂತರ ಆ ಅಂಡದಿಂದ ಸಕಲ ಜಗತ್ತಿಗೂ ಆಧಾರಭೂತನಾದ ಮಹಾವಿರಾಟ್ಪುರುಷನ ಉತ್ಪತ್ತಿಯಾಯಿತು.

೧೧೮. ಸುಯಜ್ಞ :—ಇಂದಿಗೆ ನನ್ನ ಜನ್ಮವು ಸಫಲವೂ, ಜೀವನವು ಸಾರ್ಥಕವೂ ಆಯಿತು. ನೀವು ನನಗೆ ಕೊಟ್ಟ ಶಾಪವೂ ಕೂಡ ಕೃಷ್ಣಭಕ್ತಿಗೆ ಕಾರಣವಾದುದರಿಂದ ವರದಾನಮಾಡಿದಂತಾಯಿತು.

೧೧೯. ಮಂಗಳಗಳಿಗೆಲ್ಲ ಮಂಗಳರೂಪವಾದ ಹರಿಭಕ್ತಿಯು ಎಲ್ಲರಿಗೂ ಸುಲಭವಾಗಿ ದೊರೆಯದು. ವೇದೋಕ್ತವಾದ ಭಕ್ತಿಪಂಚಕಗಳಿಗೆ ಸಮನಾದುದು ಬೇರಾವುದೂ ಇಲ್ಲ.

ಯಥಾ ಭಕ್ತಿರ್ಮಮ ಭವೇಚ್ಛ್ರೀಕೃಷ್ಣೇ ಪರಮಾತ್ಮನಿ ।
ಸುದುರ್ಲಭಾ ಚ ಸರ್ವೇಷಾಂ ತತ್ಕುರುಷ್ವ ಮಹಾಮುನೇ ॥ ೧೨೦ ॥

ನಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನನ್ತ್ಯುರುಕಾಲೇನ ಕೃಷ್ಣಭಕ್ತಾಶ್ಚ ದರ್ಶನಾತ್ ॥ ೧೨೧ ॥

ಸರ್ವೇಷಾಮಾಶ್ರಮಾಣಾಂ ಚ ದ್ವಿಜಾತೇರ್ಜಾನಿರುತ್ತಮಾ ।
ಸ್ವಧರ್ಮನಿರತಾಶ್ಚೈವ ತೇಷು ಶ್ರೇಷ್ಠಶ್ಚ ಭಾರತೇ ॥ ೧೨೨ ॥

ಕೃಷ್ಣಮಂತ್ರೋಪಾಸಕಶ್ಚ ಕೃಷ್ಣಭಕ್ತಿಪರಾಯಣಃ ।
ನಿತ್ಯಂ ನೈವೇದ್ಯಭೋಜೀ ಚ ತತಶ್ಶ್ರೇಷ್ಠೋ ಮಹಾಂಚ್ಛುಚಿಃ ॥ ೧೨೩ ॥

---

೧೨೦. ಆದುದರಿಂದ ಎಲೈ ಮಹರ್ಷಿಗಳೇ, ಸರ್ವಸುಲಭವಲ್ಲದ ಭಕ್ತಿಯು ಶ್ರೀಕೃಷ್ಣಪರಮಾತ್ಮನಲ್ಲಿ ನನಗೆ ಉದಯಿಸುವಂತೆ ಅನುಗ್ರಹಮಾಡಿರಿ.

೧೨೧. ಜಲಮಯವಾದ ಪುಣ್ಯತೀರ್ಥಗಳೂ, ಮಣ್ಣು ಮತ್ತು ಶಿಲಾವಿಕಾರವಾದ ದೇವತಾಪ್ರತಿಮೆಗಳೂ ಕೂಡ ಪಾಪಿಗಳನ್ನು ಪವಿತ್ರಗೊಳಿಸಲು ಬಹಳಕಾಲ ಬೇಕು. ಆದರೆ ಶ್ರೀಕೃಷ್ಣಭಕ್ತರ ದರ್ಶನಮಾತ್ರದಿಂದಲೇ ಪಾಪಿಗಳು ಪುನೀತರಾಗುವರು.

೧೨೨. ಚಾತುರ್ವರ್ಣ್ಯದವರಲ್ಲಿ ದ್ವಿಜಾತಿಯವರೇ ಬಹಳ ಉತ್ತಮರು. ಅದರಲ್ಲೂ ಭರತಖಂಡದಲ್ಲಿ ಸ್ವಧರ್ಮಾಚರಣೆಯಲ್ಲಿ ನಿರತರಾದ ಬ್ರಾಹ್ಮಣರು ಇನ್ನೂ ಶ್ರೇಷ್ಠರೆನಿಸುವರು.

೧೨೩. ನಿತ್ಯವೂ ಶ್ರೀಕೃಷ್ಣಮಂತ್ರೋಪಾಸನೆಮಾಡಿ, ಕೃಷ್ಣನಲ್ಲಿ ಭಕ್ತಿಪರವಶನಾಗಿ, ಶ್ರೀಕೃಷ್ಣನಿಗೆ ಅರ್ಪಿಸಿದುದನ್ನು ತಿನ್ನುವವನು ಶುಚಿಯೂ, ಸರ್ವಶ್ರೇಷ್ಠನೂ ಎನಿಸಿಕೊಳ್ಳುವನು.

ತ್ವಾಂ ವೈಷ್ಣವಂ ದ್ವಿಜಶ್ರೇಷ್ಠಂ ಮಹಾಜ್ಞಾನಾರ್ಣವಂ ಪರಂ ।
ಸಂಪ್ರಾಪ್ಯ ಶಿವಶಿಷ್ಯಂ ಚ ಕಂ ಯಾಮಿ ಶರಣಂ ಮುನೇ ॥ ೧೨೪ ॥

ಅಧುನಾಹಂ ಗಲತ್ಕುಷ್ಠೀ ತವ ಶಾಪಾನ್ಮಹಾಮುನೇ ।
ಕಥಂ ತಪಸ್ಯಾಮಶುಚಿರ್ನಾಧಿಕಾರೀ ಕರೋಮಿ ಚ ॥ ೧೨೫ ॥

॥ ಸುತಪಾ ಉವಾಚ ॥

ಹರಿಭಕ್ತಿಪ್ರದಾತ್ರೀ ಸಾ ವಿಷ್ಣುಮಾಯಾ ಸನಾತನೀ ।
ಸಾ ಚ ಯಾನನುಗೃಹ್ಣಾತಿ ತೇಭ್ಯೋ ಭಕ್ತಿಂ ದದಾತಿ ಚ ॥ ೧೨೬ ॥

ಯಾಂಶ್ಚ ಮಾಯಾ ಮೋಹಯತಿ ತೇಭ್ಯಸ್ತಾಂ ನ ದದಾತಿ ಚ ।
ಕರೋತಿ ವಂಚನಾಂ ತೇಷಾಂ ನಶ್ವರೇಣ ಧನೇನ ಚ ॥ ೧೨೭ ॥

---

೧೨೪. ಆದುದರಿಂದ ವಿಷ್ಣುಭಕ್ತನೂ, ಮಹಾಜ್ಞಾನಿಯೂ, ಬ್ರಾಹ್ಮಣೋತ್ತಮನೂ, ಶಿವನ ಶಿಷ್ಯನೂ ಆದ ನಿನ್ನನ್ನು ಬಿಟ್ಟು ನಾನು ಬೇರಾರನ್ನು ಶರಣು ಹೊಂದಲಿ?

೧೨೫. ಎಲೈ ಮಹರ್ಷಿಯೇ, ನಿನ್ನ ಶಾಪದಿಂದ ಈಗ ನಾನು ಕುಷ್ಠರೋಗಿಯಾಗಿರುವೆನು. ಅಶುಚಿಯೂ, ಅನಧಿಕಾರಿಯೂ ಆದ ನಾನು ತಪಸ್ಸನ್ನು ಹೇಗೆ ಆಚರಿಸಲಿ?

೧೨೬. ಸುತಪ:—ವಿಷ್ಣುಮಾಯಾರೂಪಿಣಿಯೂ, ಸನಾತನಿಯೂ ಆದ ಆ ರಾಧಾದೇವಿಯೇ ಎಲ್ಲರಿಗೂ ಹರಿಭಕ್ತಿಯನ್ನು ಅನುಗ್ರಹಿಸುವವಳು. ಆಕೆಯ ಅನುಗ್ರಹಕ್ಕೆ ಪಾತ್ರರಾದವರಿಗೆ ಹರಿಭಕ್ತಿಯು ಲಭಿಸುವುದು.

೧೨೭. ಆ ಮಾಯೆಯ ಮೋಹಕ್ಕೊಳಗಾದವರಿಗೆ ಹರಿಭಕ್ತಿಯನ್ನು ಕೊಡುವುದಿಲ್ಲ ಅಂಥವರಿಗೆ ಚಂಚಲವಾದ ಧನವನ್ನು ತೋರಿ ಮೋಸಗೊಳಿಸುವಳು.

ಕೃಷ್ಣಪ್ರೇಮಮಯೀಂ ಶಕ್ತಿಂ ಪ್ರಾಣಾಧಿಷ್ಠಾತೃದೇವತಾಂ ।
ಭಜ ರಾಧಾಂ ನಿರ್ಗುಣಾಂ ತಾಂ ಪ್ರದಾತ್ರೀಂ ಸರ್ವಸಂಪದಾಂ ॥ ೧೨೮ ॥

ಶೀಘ್ರಂ ಯಾಸ್ಯಸಿ ಗೋಲೋಕಂ ತದನುಗ್ರಹಸೇವಯಾ ।
ಸಾ ಸೇವಿತಾ ಶ್ರೀಕೃಷ್ಣೇನ ಸರ್ವಾರಾಧ್ಯೇನ ಪೂಜಿತಾ ॥ ೧೨೯ ॥

ಧ್ಯಾನಸಾಧ್ಯಂ ದುರಾರಾಧ್ಯಂ ಭಕ್ತಾಃ ಸಂಸೇವ್ಯ ನಿರ್ಗುಣಂ ।
ಸುಚಿರೇಣ ಚ ಗೋಲೋಕಂ ಪ್ರಯಾಂತಿ ಬಹುಜನ್ಮತಃ ॥ ೧೩೦ ॥

ಕೃಪಾಮಯೀಂ ಚ ಸಂಸೇವ್ಯ ಭಕ್ತಾ ಯಾಂತ್ಯಚಿರೇಣ ವೈ ।
ಸಾ ಪ್ರಸೂಶ್ಚ ಮಹಾವಿಷ್ಣೋಃ ಸರ್ವಸಂಪತ್ಸ್ವರೂಪಿಣೀ ॥ ೧೩೧ ॥

---

೧೨೮. ಆದುದರಿಂದ :ಶ್ರೀಕೃಷ್ಣನ ಪ್ರೇಮಸರ್ವಸ್ವಳೂ, ಪ್ರಾಣಗಳಿಗೆ ಅಧಿಷ್ಠಾತೃದೇವತೆಯೂ, ಶಕ್ತಿಸ್ವರೂಪಿಣಿಯೂ, ಸಕಲಸಂಪತ್ಪ್ರದಾತ್ರಿಯೂ, ನಿರ್ಗುಣಳೂ ಆದ-ಆ ರಾಧಾದೇವಿಯನ್ನು ಭಜಿಸು.

೧೨೯. ಆಕೆಯ ಸೇವೆ ಮತ್ತು ಅನುಗ್ರಹದಿಂದ ಜಾಗ್ರತೆ ಗೋಲೋಕಕ್ಕೆ ತೆರಳುವೆ. ಸರ್ವಪೂಜ್ಯನಾದ ಶ್ರೀಕೃಷ್ಣನೂ ಕೂಡ ಆಕೆಯನ್ನು ಪೂಜಿಸಿ ಸೇವಿಸಿರುವನು.

೧೩೦. ದುಃರಾರಾಧ್ಯನೂ, ಧ್ಯಾನಮಾತ್ರಗಮ್ಯನೂ, ನಿರ್ಗುಣನೂ ಆದ ಪರಮಾತ್ಮನನ್ನು ಭಕ್ತರು ಅನೇಕ ಜನ್ಮಗಳಲ್ಲಿ ಸೇವಿಸಿ ಬಹಳಕಾಲದಮೇಲೆ ಗೋಲೋಕಕ್ಕೆ ಹೋಗುವರು.

೧೩೧. ಮಹಾವಿಷ್ಣುವಿನ ಮಾತೆಯೂ, ಸಕಲಸಂಪತ್ಸ್ವರೂಪಿಣಿಯೂ, ಆದ ರಾಧೆಯನ್ನು ಸೇವಿಸುವ ಭಕ್ತರು ಬಹಳ ಜಾಗ್ರತೆ ಗೋಲೋಕಕ್ಕೆ ತೆರಳುವರು.

ಸಹಸ್ರವರ್ಷಪರ್ಯಂತಂ ವಿಪ್ರಪಾದೋದಕಂ ಪಿಬ ।
ಕಾಮದೇವಸ್ವರೂಪಶ್ಚ ರೋಗಹೀನೋ ಭವಿಷ್ಯಸಿ ॥ ೧೩೨ ॥

ವಿಪ್ರಪಾದೋದಕಕ್ಲಿನ್ನಾ ಯಾವತ್ತಿಷ್ಠತಿ ಮೇದಿನೀ ।
ತಾವತ್ಪುಷ್ಕರಪತ್ರೇಷು ಪಿಬಂತಿ ಪಿತರೋ ಜಲಂ ॥ ೧೩೩ ॥

ಪೃಥಿವ್ಯಾಂ ಯಾನಿ ತೀರ್ಥಾನಿ ತಾನಿ ತೀರ್ಥಾನಿ ಸಾಗರೇ ।
ಸಾಗರೇ ಯಾನಿ ತೀರ್ಥಾನಿ ವಿಪ್ರಪಾದೇಷು ತಾನಿ ಚ ॥ ೧೩೪ ॥

ವಿಪ್ರಪಾದೋದಕಂ ಚೈವ ಪಾಪವ್ಯಾಧಿವಿನಾಶನಂ ।
ಸರ್ವತೀರ್ಥೋದಕಸಮಂ ಭುಕ್ತಿಮುಕ್ತಿಪ್ರದಂ ಶುಭಂ ॥ ೧೩೫ ॥

ವಿಪ್ರೋ ಮಾನವರೂಪೀ ಚ ದೇವದೇವೋ ಜನಾರ್ದನಃ ।
ವಿಪ್ರೇಣದತ್ತಂ ದ್ರವ್ಯಂ ಚ ಭುಂಜತೇ ಸರ್ವದೇವತಾಃ ॥ ೧೩೬ ॥

---

೧೩೨. ಸಾವಿರವರ್ಷಕಾಲ ನೀನು ಬ್ರಾಹ್ಮಣರ ಪಾದೋದಕವನ್ನು ಪಾನ ಮಾಡು. ಅನಂತರ ರೋಗದಿಂದ ಬಿಡುಗಡೆಹೊಂದಿ ಮನ್ಮಥನಂತೆ ಸುಂದರ ನಾಗುವೆ.

೧೩೩. ಈ ಭೂಮಂಡಲವು ಎಂದಿನವರೆಗೆ ಬ್ರಾಹ್ಮಣನ ಪಾದೋದಕದಿಂದ ನೆನೆಯುತ್ತಿರುವುದೋ ಅದುವರೆಗೆ ಪಿತೃದೇವತೆಗಳು ತಾವರೆ ಎಲೆಯಲ್ಲಿ ಜಲಪಾನ ಮಾಡುವರು.

೧೩೪. ಭೂಮಂಡಲದಲ್ಲಿರುವ ಪುಣ್ಯತೀರ್ಥಗಳೆಲ್ಲವೂ ಸಮುದ್ರದಲ್ಲಿ ಸೇರಿರುತ್ತವೆ. ಸಾಗರದಲ್ಲಿರುವ ಪುಣ್ಯತೀರ್ಥಗಳೆಷ್ಟೂ ಬ್ರಾಹ್ಮಣರ ಪಾದಗಳಲ್ಲಿವೆ. ಅಂದರೆ ಬ್ರಾಹ್ಮಣರ ಪಾದವು ಅಷ್ಟು ಪವಿತ್ರವಾದುದು.

೧೩೫. ಬ್ರಾಹ್ಮಣರ ಪಾದೋದಕವು ರೋಗ ಮತ್ತು ಪಾಪಗಳನ್ನು ಪರಿಹರಿಸಿ, ಎಲ್ಲ ಪುಣ್ಯತೀರ್ಥಗಳಂತೆ ಭುಕ್ತಿ ಮತ್ತು ಮುಕ್ತಿಯನ್ನು ಕೊಡುವುದು.

೧೩೬. ಬ್ರಾಹ್ಮಣನು ಮನುಷ್ಯರೂಪದಲ್ಲಿರುವ ಸಾಕ್ಷಾತ್ ಜನಾರ್ದನನೆನ್ನ ಬಹುದು. ಬ್ರಾಹ್ಮಣನು ಅರ್ಪಿಸಿದ ದ್ರವ್ಯವನ್ನೇ ದೇವತೆಗಳೆಲ್ಲ ಸ್ವೀಕರಿಸುವರು.

ಇತ್ಯೇವಮುಕ್ತ್ವಾ ವಿಪ್ರಶ್ಚ ಗೃಹೀತ್ವಾ ತಸ್ಯ ಪೂಜನಂ ।
ಜಗಾಮ ಗೃಹಮಿತ್ಯುಕ್ತ್ವಾ ತ್ವಾ ಯಾಸ್ಯೇ ವತ್ಸರಾಂತರೇ　　॥ ೧೩೭ ॥

ಭಕ್ತ್ಯಾ ಚ ಬುಭುಜೇ ರಾಜಾ ವಿಪ್ರಪಾದೋದಕಂ ಶಿವೇ ।
ವಿಪ್ರಾಂಶ್ಚ ಪೂಜಯಾಮಾಸ ಭೋಜಯಾಮಾಸ ವತ್ಸರಂ　　॥ ೧೩೮ ॥

ಸಂವತ್ಸರೇ ವ್ಯತೀತೇ ತು ನಿರ್ಮುಕ್ತೋ ವ್ಯಾಧಿತೋ ನೃಪಃ ।
ಆಜಗಾಮ ಮುನಿಶ್ರೇಷ್ಠಃ ಸುತಪಾಃ ಕಶ್ಯಪಾಗ್ರಣೀಃ　　॥ ೧೩೯ ॥

ರಾಧಾಪೂಜಾವಿಧಾನಂ ಚ ಸ್ತೋತ್ರಂ ಚ ಕವಚಂ ಮನುಂ ।
ಧ್ಯಾನಂ ಚ ಸಾಮವೇದೋಕ್ತಂ ದದೌ ತಸ್ಮೈ ನೃಪಾಯ ಸಃ　　॥ ೧೪೦ ॥

ರಾಜನ್ನಿರ್ಗಮ್ಯತಾಂ ಶೀಘ್ರಮಿತ್ಯುಕ್ತ್ವಾ ತಪಸೇ ಮುನಿಃ ।
ಜಗಾಮ ಸ್ವಾಲಯಾದ್ದುರ್ಗಂ ನಿರ್ಜಗಾಮ ತ್ವರನ್ನೃಪಃ　　॥ ೧೪೧ ॥

---

೧೩೭. ಆ ಬ್ರಾಹ್ಮಣನು ಇಂತು ನುಡಿದು ಆ ರಾಜನ ಪೂಜೆಯನ್ನು ಸ್ವೀಕರಿಸಿ, ಒಂದು ವರ್ಷದನಂತರ ಬರುವುದಾಗಿ ಹೇಳಿ, ತನ್ನ ಮಂದಿರಕ್ಕೆ ಹಿಂತಿರುಗಿದನು.

೧೩೮. ಎಲೌ ಪಾರ್ವತಿಯೇ, ಇತ್ತ ಆ ರಾಜನು ಬ್ರಾಹ್ಮಣನ ಪಾದೋದಕವನ್ನು ಭಕ್ತಿಯಿಂದ ಸೇವಿಸಿ ಅನೇಕ ಬ್ರಾಹ್ಮಣರನ್ನು ಪೂಜಿಸಿ ಒಂದು ವರ್ಷ ಪರ್ಯಂತ ದಿವ್ಯಭೋಜನದಿಂದ ತೃಪ್ತಿಪಡಿಸಿದನು.

೧೩೯. ಹೀಗೆ ಒಂದು ವರ್ಷ ಕಳೆದನಂತರ ಆ ರಾಜನು ರೋಗನಿರ್ಮುಕ್ತನಾದನು. ಆ ಸಮಯಕ್ಕೆ ಕಶ್ಯಪವಂಶೋತ್ಪನ್ನನಾದ ಸುತಪಮಹರ್ಷಿಯೂ ಅಲ್ಲಿಗೆ ಬಂದನು.

೧೪೦. ಆ ರಾಜನಿಗೆ ರಾಧಾದೇವಿಯ ಪೂಜಾ ಮತ್ತು ಧ್ಯಾನಗಳ ಕ್ರಮವನ್ನೂ, ಕವಚ ಸ್ತೋತ್ರಮಂತ್ರಗಳನ್ನೂ ಉಪದೇಶಿಸಿದನು.

೧೪೧. ಅನಂತರ 'ಎಲೈ ರಾಜೇಂದ್ರನೇ, ನೀನು ನಿನ್ನ ಗೃಹವನ್ನು ಬಿಟ್ಟು ಕಾಡಿಗೆ ಹೋಗಿ ತಪಸ್ಸುಮಾಡು' ಎಂದು ಹೇಳಿ ಸುತಪಮಹರ್ಷಿಯು ಹೊರಟು ಹೋದನು. ಇತ್ತ ರಾಜನೂ ಕೂಡ ಜಾಗ್ರತೆಯಾಗಿ ತನ್ನ ಮನೆಯನ್ನು ಬಿಟ್ಟು ತಪಸ್ಸುಮಾಡಲು ಕಾಡಿಗೆ ಹೊರಟನು.

ರುರುದುರ್ಬಾಂಧವಾಃ ಸರ್ವೇ ತ್ರಿರಾತ್ರಂ ಶೋಕಮೂರ್ಛಿತಾಃ ।
ಭಾರ್ಯಾಶ್ಚ ತತ್ಯಜುಃ ಪ್ರಾಣಾನ್ಪುತ್ರೋ ರಾಜಾ ಬಭೂವ ಹ ॥ ೧೪೨ ॥

ಸುಯಜ್ಞಃ ಪುಷ್ಕರಂ ಗತ್ವಾ ಚಕ್ರೇ ವೈ ದುಷ್ಕರಂ ತಪಃ ।
ದಿವ್ಯಂ ವರ್ಷಶತಂ ರಾಜಾ ಜಜಾಪ ಪರಮಂ ಮನುಂ ॥ ೧೪೩ ॥

ತದಾ ದದರ್ಶ ಗಗನೇ ರಥಸ್ಥಾಂ ಪರಮೇಶ್ವರೀಂ ।
ಸ ತದ್ದರ್ಶನಮಾತ್ರೇಣ ನಿಷ್ಪಾಪಶ್ಚ ಬಭೂವ ಹ ॥ ೧೪೪ ॥

ತತ್ಯಾಜ ಮಾನುಷಂ ದೇಹಂ ದಿವ್ಯಾಂ ಮೂರ್ತಿಂ ದಧಾರ ಹ ।
ಸಾ ದೇವೀ ತೇನ ಯಾನೇನ ರತ್ನೇಂದ್ರೈರ್ನಿರ್ಮಿತೇನ ಚ ॥ ೧೪೫ ॥

ನೃಪಂ ನೀತ್ವಾ ಚ ಗೋಲೋಕಂ ತತ್ರ ಚೈಷಾ ಯಯೌ ತದಾ ।
ರಾಜಾ ದದರ್ಶ ಗೋಲೋಕಂ ನದ್ಯಾ ವಿರಜಯಾವೃತಂ ॥ ೧೪೬ ॥

---

೧೪೨. ಆಗ ಆ ರಾಜನ ಬಾಂಧವರೆಲ್ಲರೂ ದುಃಖಿತರಾಗಿ ಮೂರು ರಾತ್ರಿಯ ವರೆಗೆ ಮೂರ್ಛೆಗೊಂಡಿದ್ದರು. ರಾಜನ ಪತ್ನಿಯರೆಲ್ಲ ಪ್ರಾಣತ್ಯಾಗಮಾಡಿದರು. ಅವನ ಮಗನೇ ರಾಜ್ಯವನ್ನಾಳಲಾರಂಭಿಸಿದನು.

೧೪೩. ಇತ್ತ ಸುಯಜ್ಞನಾದರೋ ಪುಷ್ಕರಕ್ಷೇತ್ರಕ್ಕೆ ಹೋಗಿ ದಿವ್ಯನೂರು ವರ್ಷಗಳ ಕಾಲ ದಾರುಣವಾದ ತಪಸ್ಸುಮಾಡಿ ರಾಧಾದೇವಿಯ ದಿವ್ಯಮಂತ್ರವನ್ನು ಜಪಿಸುತ್ತಿದ್ದನು.

೧೪೪. ಆಗ ಆಕಾಶದಲ್ಲಿ ರಥದ ಮಧ್ಯದಲ್ಲಿ ಕುಳಿತಿರುವ ಪರಮೇಶ್ವರಿಯಾದ ರಾಧಾದೇವಿಯನ್ನು ನೋಡಿ, ತತ್‌ಕ್ಷಣವೇ ಪಾಪವಿಮುಕ್ತನಾದನು.

೧೪೫-೧೪೬. ಅನಂತರ ಆ ರಾಜನು ಮಾನುಷಶರೀರವನ್ನು ಬಿಟ್ಟು ದಿವ್ಯ ದೇಹಧಾರಿಯಾದನು. ಆಗ ರಾಧಾದೇವಿಯು ಶ್ರೇಷ್ಠರತ್ನಗಳಿಂದ ನಿರ್ಮಿತವಾದ ತನ್ನ ರಥದಲ್ಲಿಯೇ ಅವನನ್ನು ಕುಳ್ಳಿರಿಸಿಕೊಂಡು ಗೋಲೋಕಕ್ಕೆ ಹೋಗಿ ಸೇರಿದಳು. ಅಲ್ಲಿ ವಿರಜಾನದಿಯಿಂದ ಪರಿವೃತವಾದ ಗೋಲೋಕವನ್ನು ರಾಜನು ನೋಡಿದನು.

ವೇಷ್ಟಿತಂ ಪರ್ವತೇನೈವ ಶತಶೃಂಗೇನ ಚಾರುಣಾ ।
ಶ್ರೀವೃಂದಾವನಸಂಯುಕ್ತಂ ರಾಸಮಂಡಲಮಂಡಿತಂ ॥ ೧೪೭ ॥

ಗೋಗೋಪಗೋಪೀನಿಕರೈಃ ಶೋಭಿತಂ ಪರಿಸೇವಿತೈಃ ।
ರತ್ನೇಂದ್ರಸಾರಖಚಿತೈರ್ಮಂದಿರೈಃ ಸುಮನೋಹರೈಃ ॥ ೧೪೮ ॥

ನಾನಾಚಿತ್ರವಿಚಿತ್ರೈಶ್ಚ ರಾಜಿತಂ ಪರಿಶೋಭಿತಂ ।
ಸಪ್ತತ್ರಿಂಶದ್ಭಿರಾಕ್ರೀಡೈಃ ಕಲ್ಪವೃಕ್ಷಸಮನ್ವಿತೈಃ ॥ ೧೪೯ ॥

ಪಾರಿಜಾತದ್ರುಮಾಕೀರ್ಣೈರ್ವೇಷ್ಟಿತಂ ಕಾಮಧೇನುಭಿಃ ।
ಆಕಾಶವತ್ಸುವಿಸ್ತೀರ್ಣಂ ವರ್ತುಲಂ ಚಂದ್ರಬಿಂಬವತ್ ॥ ೧೫೦ ॥

ಅತ್ಯೂರ್ಧ್ವಮಪಿ ವೈಕುಂಠಾತ್ಪಂಚಾಶತ್ಕೋಟಿಯೋಜನಂ ।
ಶೂನ್ಯೇ ಸ್ಥಿತಂ ನಿರಾಧಾರಂ ಧ್ರುವಮೀಶ್ವರೇಚ್ಛಯಾ ॥ ೧೫೧ ॥

---

೧೪೭. ಶತಶೃಂಗ ಪರ್ವತದಿಂದ ಸುತ್ತುವರಿಯಲ್ಪಟ್ಟ ಆ ಗೋಲೋಕವು ಬೃಂದಾವನದಿಂದಲೂ, ರಾಸಮಂಡಲದಿಂದಲೂ ಕೂಡಿ ಸುಂದರವಾಗಿದ್ದಿತು.

೧೪೮. ಅಲ್ಲಿ ಸುತ್ತಲೂ ಗೋವುಗಳು ಮತ್ತು ಗೋಪಗೋಪಿಯರೂ ನೆರೆದು ಶ್ರೀಕೃಷ್ಣಪರಮಾತ್ಮನನ್ನು ಸೇವಿಸುತ್ತಿದ್ದರು. ಶ್ರೇಷ್ಠರತ್ನಗಳಿಂದ ನಿರ್ಮಿತವಾದ ಅನೇಕ ದಿವ್ಯಮಂದಿರಗಳು ಅಲ್ಲಿ ಶೋಭಿಸುತ್ತಿದ್ದವು.

೧೪೯. ಆ ಮಂದಿರಗಳು ಅನೇಕ ಚಿತ್ರವಿಚಿತ್ರಗಳಿಂದ ರಂಜಿತವಾಗಿ ಮನೋಹರವಾಗಿದ್ದವು. ಅಲ್ಲದೆ ಕಲ್ಪವೃಕ್ಷಗಳಿಂದ ಕೂಡಿರುವ ಮೂವತ್ತೇಳು ಕ್ರೀಡಾಪರ್ವತಗಳು ಅಲ್ಲಿ ಇದ್ದವು.

೧೫೦ ಪಾರಿಜಾತವೃಕ್ಷಗಳಿಂದಲೂ ಅನೇಕ ಕಾಮಧೇನುಗಳಿಂದಲೂ ಪರಿವೃತವಾದ ಆ ಲೋಕವು ಆಕಾಶದಂತೆ ವಿಸ್ತಾರವಾಗಿಯೂ ಚಂದ್ರಬಿಂಬದಂತೆ ವರ್ತುಳಾಕಾರವಾಗಿಯೂ ಇದ್ದಿತು.

೧೫೧. ವೈಕುಂಠಲೋಕಕ್ಕಿಂತ ಐವತ್ತುಕೋಟಿಯೋಜನ ಮೇಲಿರುವ ಆ ಗೋಲೋಕವು ಈಶ್ವರೇಚ್ಛೆಯಿಂದ ನಿರಾಧಾರವೂ ನಿತ್ಯವೂ ಆಗಿದೆ.

ಆತ್ಮಾಕಾಶಸಮಂ ನಿತ್ಯಮಸ್ಮಾಕಂ ಚ ಸುದುರ್ಲಭಂ ।
ಅಹಂ ನಾರಾಯಣೋಽನಂತೋ ಬ್ರಹ್ಮಾ ವಿಷ್ಣುರ್ಮಹಾವಿರಾಟ್ ॥ ೧೫೨ ॥

ಧರ್ಮಃಕ್ಷುದ್ರವಿರಾಟ್ಸಂಘೋ ಗಂಗಾ ಲಕ್ಷ್ಮೀಃ ಸರಸ್ವತೀ ।
ತ್ವಂ ವಿಷ್ಣುಮಾಯಾ ಸಾವಿತ್ರೀ ತುಲಸೀ ಚ ಗಣೇಶ್ವರಃ ॥ ೧೫೩ ॥

ಸನತ್ಕುಮಾರಃ ಸ್ಕಂದಶ್ಚ ನರನಾರಾಯಣಾವೃಷೀ ।
ಕಪಿಲೋ ದಕ್ಷಿಣಾಯಜ್ಞೋ ಬ್ರಹ್ಮಪುತ್ರಾಶ್ಚ ಯೋಗಿನಃ ॥ ೧೫೪ ॥

ಪವನೋ ವರುಣಶ್ಚಂದ್ರಃ ಸೂರ್ಯೋ ರುದ್ರೋ ಹುತಾಶನಃ ।
ಕೃಷ್ಣಮಂತ್ರೋಪಾಸಕಾಶ್ಚ ಭಾರತಸ್ಥಾಶ್ಚ ವೈಷ್ಣವಾಃ ॥ ೧೫೫ ॥

---

೧೫೨. ಆತ್ಮ ಮತ್ತು ಆಕಾಶದಂತೆ ನಿತ್ಯವಾದ ಆ ಲೋಕವನ್ನು ಸಾಮಾನ್ಯರು ಹೊಂದಲು ಸಾಧ್ಯವಿಲ್ಲ. ನಾನು (ಶಿವ) ನಾರಾಯಣ, ಆದಿಶೇಷ, ಬ್ರಹ್ಮ, ವಿಷ್ಣು ಮತ್ತು ಮಹಾವಿರಾಟ್ಪುರುಷ ಇವರುಗಳು ಆ ಲೋಕವನ್ನು ನೋಡಬಹುದು.

೧೫೩. ಅಂತೆಯೇ ಧರ್ಮ ಮತ್ತು ಕ್ಷುದ್ರವಿರಾಟರೂ, ಗಂಗೆ, ಲಕ್ಷ್ಮಿ ಮತ್ತು ಸರಸ್ವತಿಯರೂ, ನೀನು (ಪಾರ್ವತಿ) ವಿಷ್ಣುಮಾಯಾ, ಸಾವಿತ್ರಿ, ತುಳಸಿ ಮತ್ತು ಗಣೇಶ್ವರನೂ ಆ ಲೋಕವನ್ನು ಕಾಣಬಹುದು.

೧೫೪. ಸನತ್ಕುಮಾರ ಮತ್ತು ಷಣ್ಮುಖನೂ, ನರನಾರಾಯಣ ಋಷಿಗಳೂ, ಕಪಿಲ, ದಕ್ಷಿಣಾದೇವಿ ಮತ್ತು ಯಜ್ಞಪುರುಷ, ಯೋಗಿಶ್ರೇಷ್ಠರಾದ ಬ್ರಹ್ಮಪುತ್ರರು, ಇವರುಗಳೂ ಆ ಲೋಕವನ್ನು ನೋಡಬಲ್ಲರು.

೧೫೫. ವಾಯು, ವರುಣ, ಚಂದ್ರ, ಸೂರ್ಯ, ರುದ್ರ ಮತ್ತು ಅಗ್ನಿ ಈ ದೇವತೆಗಳೂ, ಭರತಖಂಡದಲ್ಲಿರುವ ವಿಷ್ಣುಮಂತ್ರೋಪಾಸಕರಾದ ಅನೇಕ ವೈಷ್ಣವರೂ ಆ ಲೋಕವನ್ನು ಕಾಣಬಲ್ಲರು.

ಏಭಿರ್ದೃಷ್ಟಶ್ಚ ಗೋಲೋಕೋ ನಾನ್ಯೈರ್ದೃಷ್ಟಃ ಕದಾಚನ ।
ನಿರಾಮಯೋ ಚ ತತ್ರೈವ ರತ್ನಸಿಂಹಾಸನೇ ಸ್ಥಿತಂ　　॥ ೧೫೬ ॥

ರತ್ನಮಾಲಾಕಿರೀಟೈಶ್ಚ ಭೂಷಿತಂ ರತ್ನಭೂಷಣೈಃ ।
ಸುನಿರ್ಮಲೈಃ ಪೀತವಸ್ತ್ರೈಃ ವಹ್ನಿಶುದ್ಧೈರ್ವಿರಾಜಿತಂ　　॥ ೧೫೭ ॥

ಚಂದನೋಕ್ಷಿತಸರ್ವಾಂಗಂ ಕಿಶೋರಂ ಗೋಪರೂಪಿಣಂ ।
ನವೀನನೀರದಶ್ಯಾಮಂ ಶ್ವೇತಪಂಕಜಲೋಚನಂ　　॥ ೧೫೮ ॥

ಶರತ್ಪಾರ್ವಣಚಂದ್ರಾಸ್ಯಮೀಷದ್ಧಾಸ್ಯಂ ಮನೋಹರಂ ।
ದ್ವಿಭುಜಂ ಮುರಲೀಹಸ್ತಂ ಭಕ್ತಾನುಗ್ರಹವಿಗ್ರಹಂ　　॥ ೧೫೯ ॥

ಸ್ವೇಚ್ಛಾಮಯಂ ಪರಂ ಬ್ರಹ್ಮ ನಿರ್ಗುಣಂ ಪ್ರಕೃತೇಃ ಪರಂ ।
ಧ್ಯಾನಸಾಧ್ಯಂ ದುರಾರಾಧ್ಯಮಸ್ಮಾಕಂ ಚ ಸುದುರ್ಲಭಂ　　॥ ೧೬೦ ॥

---

೧೫೬. ಮೇಲೆ ಹೇಳಿದವರನ್ನು ಬಿಟ್ಟು ಉಳಿದ ಯಾರೂ ಆ ಲೋಕವನ್ನು ಎಂದಿಗೂ ನೋಡಲಾರರು. ರೋಗರಹಿತವಾದ ಆ ಲೋಕದಲ್ಲಿ ಪರಮಾತ್ಮನು ರತ್ನಸಿಂಹಾಸನದಲ್ಲಿ ಮಂಡಿಸಿದ್ದಾನೆ.

೧೫೭. ರತ್ನವಿಕಾರವಾದ ಕಿರೀಟದಿಂದಲೂ, ರತ್ನಾಭರಣಗಳಿಂದಲೂ ಅಲಂಕೃತನಾಗಿ ಅಗ್ನಿಯಂತೆ ಪರಿಶುದ್ಧವಾದ ಬಟ್ಟೆಯನ್ನು ಧರಿಸಿ ಮನೋಹರನಾಗಿದ್ದಾನೆ.

೧೫೮. ಗೋಪಕಿಶೋರವೇಷಧಾರಿಯಾದ ಆ ಪರಮಾತ್ಮನು ಸರ್ವಾವಯವಗಳಿಗೂ ದಿವ್ಯಚಂದನವನ್ನು ಲೇಪಿಸಿಕೊಂಡು, ನವಮೇಘದಂತೆ ನೀಲವರ್ಣನೂ, ಬಿಳಿದಾವರೆಯಂತೆ ವಿಶಾಲನೇತ್ರನೂ ಆಗಿದ್ದಾನೆ.

೧೫೯ ಭಕ್ತಾನುಗ್ರಹಕ್ಕಾಗಿ ಶರೀರಧಾರಿಯಾದ ಆ ಪರಮಾತ್ಮನು ಶರತ್ಪೂರ್ಣಿಮಾ ಚಂದ್ರನಂತಿರುವ ಮುಖದಲ್ಲಿ ಎಳೆನಗೆಯನ್ನು ಬೀರುತ್ತ ತನ್ನ ಎರಡು ಕೈಗಳಿಂದ ಕೊಳಲನ್ನು ಹಿಡಿದು ನುಡಿಸುತ್ತಿದ್ದಾನೆ,

೧೬೦. ಸ್ವೇಚ್ಛಾಮಯನೂ, ಗುಣರಹಿತನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಆ ಪರಮಾತ್ಮನು ಧ್ಯಾನೈಕಗಮ್ಯನೂ, ಸಾಮಾನ್ಯರಿಗೆ ದುರ್ಲಭನೂ ಆಗಿದ್ದಾನೆ.

ಪ್ರಿಯೈರ್ದ್ವಾದಶಗೋಪಾಲೈಃ ಸೇವಿತಂ ಶ್ವೇತಚಾಮರೈಃ ।
ವೀಕ್ಷಿತಂ ಗೋಪಿಕಾವೃಂದೈಃ ಸಸ್ಮಿತೈಃ ಸುಮನೋಹರೈಃ ॥ ೧೬೧ ॥

ಪೀಡಿತೈಃ ಕಾಮಬಾಣೈಶ್ಚ ಶಶ್ವತ್ಸುಸ್ಥಿರಯೌವನೈಃ ।
ವಹ್ನಿಶುದ್ಧಾಂಶುಕಾಧಾನೈಃ ರತ್ನಭೂಷಣಭೂಷಿತೈಃ ॥ ೧೬೨ ॥

ರಾಸಮಂಡಲಮಧ್ಯಸ್ಥಂ ಶ್ರೀಕೃಷ್ಣಂ ಚ ಪರಾತ್ಪರಂ ।
ದದರ್ಶ ರಾಜಾ ತತ್ರೈವ ರಾಧಯಾ ದರ್ಶಿತಂ ತದಾ ॥ ೧೬೩ ॥

ಸ್ತುತಂ ಚತುರ್ಭಿರ್ವೇದೈಶ್ಚ ಮೂರ್ತಿಮದ್ಭಿರ್ಮನೋಹರೈಃ ।
ರಾಗಿಣೀನಾಂ ಚ ರಾಗಾಣಾಮತೀವ ಸುಮನೋಹರಂ ॥ ೧೬೪ ॥

ಶ್ರುತವಂತಂ ಚ ಸಂಗೀತಂ ಯಂತ್ರವಕ್ತ್ರೋತ್ಥಿತಂ ಶಿವೇ ।
ನಿತ್ಯಯಾ ಚ ಸನಾತನ್ಯಾ ಪ್ರಕೃತ್ಯಾ ಚ ಸಹ ತ್ವಯಾ ॥ ೧೬೫ ॥

---

೧೬೧. ಆ ಪರಮಾತ್ಮನ ಪ್ರೀತಿಗೆ ಪಾತ್ರರಾದ ಹನ್ನೆರಡು ಜನ ಗೋಪಾಲಕರು, ಬಿಳಿದಾದ ಚಾಮರವನ್ನು ಹಿಡಿದು ಸೇವೆ ಸಲ್ಲಿಸುತ್ತಿದ್ದಾರೆ. ಸುತ್ತಲೂ ನೆರೆದಿರುವ ಗೋಪಸ್ತ್ರೀಯರು ನಗುಮುಖದಿಂದ ಆ ಪರಮಾತ್ಮನ ಕಡೆಗೆ ಕಟಾಕ್ಷವನ್ನು ಬೀರುತ್ತಿದ್ದಾರೆ.

೧೬೨. ಸ್ಥಿರಯೌವನವುಳ್ಳವರೂ, ಕಾಮಬಾಣಪೀಡಿತರೂ ಆದ ಆ ಗೋಪಿಯರು, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು ರತ್ನಾಭರಣಗಳಿಂದಲಂಕೃತರಾಗಿದ್ದಾರೆ.

೧೬೩. ಈ ರೀತಿಯಾಗಿ ರಾಸಮಂಡಲವನ್ನಲಂಕರಿಸುತ್ತಿರುವ ಶ್ರೀಕೃಷ್ಣ ಪರಮಾತ್ಮನನ್ನು ಆ ಸುಯಜ್ಞಮಹಾರಾಜನು ರಾಧೆಯ ಪ್ರೇರಣೆಯಂತೆ ಮನದಣಿಯುವಂತೆ ನೋಡಿದನು.

೧೬೪–೧೬೫. ಮನೋಹರನಾದ ಆ ಪರಮಾತ್ಮನನ್ನು ಮೂರ್ತಿಮತ್ತಾದ ಚತುರ್ವೇದಗಳೂ ಸ್ತುತಿಸುತ್ತಿದ್ದವು. ವೀಣಾದಿಯಂತ್ರಮುಖದಿಂದ ಹೊರಬರುತ್ತಿರುವ ಸ್ತ್ರೀರಾಗಗಳಿಗೂ, ಪುರುಷರಾಗಗಳಿಗೂ ಅತ್ಯುತ್ತಮವಾದ ಮನೋಹರವಾದ ಸಂಗೀತವನ್ನು ಆ ಪರಮಾತ್ಮನು ಕೇಳುತ್ತಿದ್ದನು.

ಶಶ್ವತ್ಪೂಜಿತಪಾದಾಬ್ಜ ಮಖಂಡತುಲಸೀದಲೈಃ ।
ಕಸ್ತೂರೀಕುಂಕುಮಾಕ್ತೈಶ್ಚ ಗಂಧಚಂದನಚರ್ಚಿತೈಃ ॥ ೧೬೬ ॥

ದೂರ್ವಾಭಿರಕ್ಷತಾಭಿಶ್ಚ ಪಾರಿಜಾತಪ್ರಸೂನಕೈಃ ।
ನಿರ್ಮಲೈರ್ವಿರಜಾತೋಯೈರ್ದತ್ತಾರ್ಘ್ಯೈರತಿಶೋಭಿತಂ ॥ ೧೬೭ ॥

ಸುಪ್ರಸನ್ನಂ ಸ್ವತಂತ್ರಂ ಚ ಸರ್ವಕಾರಣಕಾರಣಂ ।
ಸರ್ವೇಷಾಂ ಚಾಂತರಾತ್ಮಾನಂ ಸರ್ವೇಶಂ ಸರ್ವಜೀವನಂ ॥ ೧೬೮ ॥

ಸರ್ವಾಧಾರಂ ಪರಂ ಪೂಜ್ಯಂ ಬ್ರಹ್ಮಜ್ಯೋತಿಃ ಸನಾತನಂ ।
ಸರ್ವಸಂಪತ್ಸ್ವರೂಪಂ ಚ ದಾತಾರಂ ಸರ್ವಸಂಪದಾಂ ॥ ೧೬೯ ॥

ಸರ್ವಮಂಗಲರೂಪಂ ಚ ಸರ್ವಮಂಗಲಕಾರಣಂ ।
ಸರ್ವಮಂಗಲದಂ ಸರ್ವಮಂಗಲಾನಾಂ ಚ ಮಂಗಲಂ ॥ ೧೭೦ ॥

---

೧೬೬. ನಿತ್ಯಳೂ, ಅನಾದಿಸ್ವರೂಪಿಣಿಯೂ ಆದ ಪ್ರಕೃತಿಯೂ ಮತ್ತು ನೀನೂ ಅನೇಕ ದಿವ್ಯತುಳಸೀದಳಗಳಿಂದಲೂ, ಕಸ್ತೂರಿ, ಕುಂಕುಮ ಮಿಶ್ರಿತವಾದ ದಿವ್ಯ ಚಂದನದಿಂದಲೂ ಆ ಪರಮಾತ್ಮನ ಪಾದಕಮಲಗಳನ್ನು ಅನವರತವೂ ಪೂಜಿಸುತ್ತಿರುವಿರಿ.

೧೬೭. ದೂರ್ವಾ (ಗರಿಕೆ) ಕ್ಷತೆಗಳಿಂದಲೂ, ಪಾರಿಜಾತಪುಷ್ಪಗಳಿಂದಲೂ, ಪವಿತ್ರವಾದ ವಿರಜಾನದಿಯ ನೀರಿನಿಂದಲೂ ಆ ಪರಮಾತ್ಮನಿಗೆ ಅರ್ಘ್ಯಪ್ರಧಾನ ಮಾಡುತ್ತಿರುವಿರಿ.

೧೬೮. ಸ್ವತಂತ್ರೇಚ್ಛನೂ, ಕಾರಣಗಳಿಗೆಲ್ಲ ಆದಿಕಾರಣನೂ, ಸರ್ವಾಂತರ್ಯಾಮಿಯೂ, ಸರ್ವಜೀವರೂಪನೂ ಆದ ಆ ಪರಮಾತ್ಮನು ಪ್ರಸನ್ನವದನನಾಗಿ ಕುಳಿತಿರುವನು.

೧೬೯–೧೭೦. ಸರ್ವಧಾರನೂ, ಸರ್ವಪೂಜ್ಯನೂ, ಜ್ಯೋತಿರ್ಮಯನೂ, ಅನಾದಿಯೂ, ಸರ್ವಸಂಪತ್ಸ್ವರೂಪನೂ, ಸಕಲ ಸಂಪತ್ಪ್ರದಾತೃವೂ ಆದ ಆ ಪರಮಾತ್ಮನು ಸರ್ವಮಂಗಳಸ್ವರೂಪನೂ, ಸರ್ವಮಂಗಳಕಾರಣನೂ, ಮಂಗಳಗಳಿಗೆಲ್ಲ ಪರಮಮಂಗಳರೂಪನೂ ಆಗಿದ್ದಾನೆ.

ತಂ ದೃಷ್ಟ್ವಾ ನೃಪತಿಸ್ತ್ರಸ್ತೋ ಹ್ಯವರುಹ್ಯ ರಥಾತ್ತ್ವರನ್ ।
ಸಾಶ್ರುನೇತ್ರಃ ಪುಲಕಿತೋ ಮೂರ್ಧ್ನಾ ಸ ಪ್ರಣನಾಮ ಚ ॥ ೧೭೧ ॥

ಪರಮಾತ್ಮಾ ದದೌ ತಸ್ಮೈ ಸ್ವದಾಸ್ಯಂ ಚ ಶುಭಾಶಿಷಂ ।
ಸ್ವಭಕ್ತಿಂ ನಿಶ್ಚಲಾಂ ಸತ್ಯಾಮಸ್ಮಾಕಂ ಚ ಸುದುರ್ಲಭಾಂ ॥ ೧೭೨ ॥

ರಾಧಾವರುಹ್ಯ ಸ್ವರಥಾತ್ಕೃಷ್ಣವಕ್ಷಸ್ಯುವಾಸ ಸಾ ।
ಗೋಪೀಭಿಃ ಸುಪ್ರಿಯೋಭಿಶ್ಚ ಸೇವಿತಾ ಶ್ವೇತಚಾಮರೈಃ ॥ ೧೭೩ ॥

ಸಂಭಾಷಿತಾ ಶ್ರೀಕೃಷ್ಣೇನ ಸಸ್ಮಿತೇನ ಚ ಪೂಜಿತಾ ।
ಸಮುತ್ಥಿತೇನ ಸಹಸಾ ಭಕ್ತ್ಯಾ ವೈ ಸಂಭ್ರಮೇಣ ಚ ॥ ೧೭೪ ॥

---

೧೭೧. ಈ ರೀತಿಯಾದ ಪರಮಾತ್ಮನನ್ನು ರಾಜನು ನೋಡಿದ ಕ್ಷಣವೇ ರಥದಿಂದ ಜಾಗ್ರತೆ ಇಳಿದು ಭಯಭಕ್ತಿಭರಿತನಾಗಿ, ರೋಮಾಂಚಿತಶರೀರನಾಗಿ ನೇತ್ರಗಳಲ್ಲಿ ಆನಂದಾಶ್ರುವನ್ನು ಸುರಿಸುತ್ತ ಸಾಷ್ಟಾಂಗ ಪ್ರಣಾಮಮಾಡಿದನು.

೧೭೨. ಆಗ ಪರಮಾತ್ಮನು ಅವನಿಗೆ ತನ್ನ ಸೇವೆಮಾಡುವಂತೆ ಅನುಗ್ರಹಿಸಿ, ಶುಭಾಶೀರ್ವಾದವನ್ನೂ, ನಮಗೆಲ್ಲರಿಗೂ ದುರ್ಲಭವಾದ ನಿಶ್ಚಲ ಭಕ್ತಿಯನ್ನೂ ಕರುಣಿಸಿದನು.

೧೭೩. ರಾಧಾದೇವಿಯೂ ಕೂಡ ತನ್ನ ರಥದಿಂದಿಳಿದು ಶ್ರೀಕೃಷ್ಣಪರಮಾತ್ಮನ ವಕ್ಷಃಸ್ಥಳದಲ್ಲಿ ಕುಳಿತು ತನಗೆ ಪ್ರಿಯರಾದ ಗೋಪಿಯರ ಬಿಳಿ ಚಾಮರದ ಸೇವೆಯನ್ನು ಕೈಗೊಂಡಳು.

೧೭೪. ರಾಧೆಯು ಬಂದುದನ್ನು ಕಂಡು ಶ್ರೀಕೃಷ್ಣನು ಸಂಭ್ರಮದಿಂದ ಇದಿರೆದ್ದು, ಸ್ಮಿತವದನನಾಗಿ, ಭಕ್ತಿಯಿಂದ ಆಕೆಯನ್ನು ಪೂಜಿಸಿ, ಕುಶಲಪ್ರಶ್ನೆ ಮಾಡಿದನು.

ಆದೌ ರಾಧಾಂ ಸಮುಚ್ಚಾರ್ಯ ಪಶ್ಚಾತ್ಕೃಷ್ಣಂ ಚ ಮಾಧವಂ।
ಪ್ರವದಂತಿ ಚ ವೇದೇಷು ವೇದವಿದ್ಭಿಃ ಪುರಾತನೈಃ ॥ ೧೭೫ ॥

ವಿಪರ್ಯಯಂ ಯೇ ವದಂತಿ ಯೇ ನಿಂದಂತಿ ಜಗತ್ಪ್ರಸೂಂ।
ಕೃಷ್ಣಪ್ರಾಣಾಧಿಕಾಂ ಪ್ರೇಮಮಯೀಂ ಶಕ್ತಿಂ ಚ ರಾಧಿಕಾಂ ॥ ೧೭೬ ॥

ತೇ ಪಚ್ಯಂತೇ ಕಾಲಸೂತ್ರೇ ಯಾವಚ್ಚಂದ್ರದಿವಾಕರೌ।
ಭವಂತಿ ಸ್ತ್ರೀಪುತ್ರಹೀನಾ ರೋಗಿಣಃ ಶತಜನ್ಮಸು ॥ ೧೭೭ ॥

ಇತ್ಯೇವಂ ಕಥಿತಂ ದುರ್ಗೇ ರಾಧಿಕಾಖ್ಯಾನಮುತ್ತಮಂ।
ಸಾ ತ್ವಂ ಸತೀ ಭಗವತೀ ವೈಷ್ಣವೀ ಚ ಸನಾತನೀ ॥ ೧೭೮ ॥

ನಾರಾಯಣೀ ವಿಷ್ಣುಮಾಯಾ ಮೂಲಪ್ರಕೃತಿರೀಶ್ವರೀ।
ಮಾಯಯಾ ಮಾಂ ಪೃಚ್ಛಸಿ ತ್ವಂ ಸರ್ವಜ್ಞಾ ಸರ್ವರೂಪಿಣೀ ॥ ೧೭೯ ॥

---

೧೭೫. ಆದುದರಿಂದಲೇ ವೇದತತ್ವವನ್ನು ಬಲ್ಲ ಪಂಡಿತರು ಮೊದಲು ರಾಧೆಯ ಹೆಸರನ್ನೂ ಅನಂತರ ಕೃಷ್ಣನ ಹೆಸರನ್ನೂ ಸೇರಿಸಿ 'ರಾಧಾಕೃಷ್ಣ' ಎಂದು ಕರೆಯುತ್ತಾರೆ.

೧೭೬–೧೭೭. ಇದಕ್ಕೆ ವ್ಯತ್ಯಸ್ತವಾಗಿ ಅಂದರೆ ಕೃಷ್ಣರಾಧಾ ಎಂದು ಉಚ್ಚರಿಸುವವರೂ, ಜಗನ್ಮಾತೆಯೂ, ಕೃಷ್ಣನ ಪ್ರಾಣಕ್ಕಿಂತ ಅಧಿಕಪ್ರಿಯಳೂ, ಶ್ರೀಕೃಷ್ಣ ಶಕ್ತಿಸ್ವರೂಪಿಣಿಯೂ ಆದ ರಾಧೆಯನ್ನು ನಿಂದಿಸುವವರೂ ಚಂದ್ರಸೂರ್ಯರಿರುವ ಪರ್ಯಂತ ಕಾಲಸೂತ್ರವೆಂಬ ನರಕದಲ್ಲಿ ನರಳುತ್ತಿರುವರು. ಅನಂತರ ನೂರು ಜನ್ಮಗಳಲ್ಲಿ ಪತ್ನೀಪುತ್ರರಿಲ್ಲದೆ ರೋಗಿಗಳಾಗಿ ನರಳುತ್ತಿರುವರು.

೧೭೮–೧೭೯. ಎಲೌ ದುರ್ಗಾದೇವಿಯೆ, ಈ ರೀತಿಯಾಗಿ ನಾನು ನಿನಗೆ ರಾಧಾಮಾಹಾತ್ಮ್ಯವನ್ನು ವಿಸ್ತರಿಸಿ ಹೇಳಿದೆನು. ಅನಾದಿಯೂ, ವೈಷ್ಣವಿಯೂ, ನಾರಾಯಣೀ, ವಿಷ್ಣುಮಾಯಾ, ಮೂಲಪ್ರಕೃತಿಯರಿಗೆ ಅಭಿನ್ನಳೂ ಆದ ನೀನು ಸರ್ವಜ್ಞಳೂ, ಸರ್ವರೂಪಿಣಿಯೂ ಆಗಿ ಏನೂ ಅರಿಯದವಳಂತೆ ನನ್ನನ್ನು ಪ್ರಶ್ನಿಸುತ್ತಿರುವೆಯಲ್ಲ?

**ಸ್ತ್ರೀಜಾತಿಷ್ವಧಿದೇವೀ ಚ ಪರಾ ಜಾತಿಸ್ಮರಾ ವರಾ ।**
**ಕಥಿತಂ ರಾಧಿಕಾಖ್ಯಾನಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೮೦ ॥**

**ಇತಿ ಶ್ರೀಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯಪ್ರಕರಣೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಹರಗೌರೀಸಂವಾದೇ ರಾಧಾಖ್ಯಾನೇ ಸುಯಜ್ಞಾಖ್ಯಾನೇ ಸುತಪಃಸುಯಜ್ಞಸಂವಾದೇ ಸುಯಶಸೋ ಗೋಲೋಕಪ್ರಾಪ್ತಿರ್ನಾಮ ಚತುಃಪಂಚಾಶತ್ತಮೋಽಧ್ಯಾಯಃ**

---

೧೮೦. ಸ್ತ್ರೀಜಾತಿಗೆಲ್ಲ ಅಧಿದೇವತೆಯೂ, ಜಾತಿಸ್ಮರಳೂ, ಸರ್ವಶ್ರೇಷ್ಠಳೂ ಆದ ನಿನಗೆ ರಾಧಾದೇವಿಯ ಉಪಾಖ್ಯಾನವನ್ನು ಹೇಳಿದುದಾಯಿತು. ಇನ್ನು ಯಾರ ವಿಷಯವನ್ನು ತಿಳಿಯಲು ನಿನಗೆ ಇಚ್ಛೆಯಿದೆ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಹರಗೌರೀಸಂವಾದದಲ್ಲಿ ಸುಯಜ್ಞನಿಗೆ ಗೋಲೋಕಪ್ರಾಪ್ತಿಯಾದುದನ್ನು ತಿಳಿಸುವ ಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

## ಐವತ್ತನಾಲ್ಕನೆಯ ಅಧ್ಯಾಯದ ಸಾರಾಂಶವು

ಸುತಪಮಹರ್ಷಿಯು ಸುಯಜ್ಞಮಹಾರಾಜನಿಗೆ ಬೋಧಿಸಿದ ಶ್ರೀಕೃಷ್ಣ ಪರಮಾತ್ಮನ ಅಪಾರಮಹಿಮೆಯು ಈ ಅಧ್ಯಾಯದಲ್ಲಿ ಉಕ್ತವಾಗಿದೆ. 'ಸ್ವೇಚ್ಛಾ ಮಾತ್ರ ಪ್ರಭುವಾದ ಶ್ರೀಕೃಷ್ಣಪರಮಾತ್ಮನು ಆಕಾಶದಂತೆ ನಿತ್ಯವೂ ನಿರಾಲಂಬವೂ ಆದ ಗೋಲೋಕದಲ್ಲಿ ವಿರಜಾನದಿಯಿಂದಲೂ, ಶತಶೃಂಗಪರ್ವತದಿಂದಲೂ ಪರಿವೃತ ವಾದ ಬೃಂದಾವನವನ್ನೂ ಅದರ ಮಧ್ಯೆ ರಾಸಮಂಡಲವನ್ನೂ ಮನೋಹರವಾಗಿ ನಿರ್ಮಿಸಿ ತನ್ನ ಅರ್ಧಾಂಗಿಯಾದ ರಾಧೆಯೊಡನೆಯೂ, ಅಸಂಖ್ಯಗೋಪಗೋಪಿಯ ರೊಡನೆಯೂ ವಿಹರಿಸಿಕೊಂಡಿರುವನು. ಸೃಷ್ಟ್ಯುನ್ಮುಖನಾದ ಪರಮಾತ್ಮನ ಸಂಸರ್ಗದಿಂದ ಗರ್ಭವತಿಯಾದ ರಾಧೆಯು ಒಂದು ಸುವರ್ಣಾಂಡವನ್ನು ಪ್ರಸುವಿಸಿ ಅದನ್ನು ವಿಶ್ವಗೋಳಕದಲ್ಲಿ ಎಸೆಯಲು, ಅದರಿಂದ ಮಹಾವಿಷ್ಣುವೂ ಬ್ರಹ್ಮಾದಿಸ್ತಂಬ ಪರ್ಯಂತವಾದ ನಿಖಿಲವಿಶ್ವವೂ ಕ್ರಮವಾಗಿ ವ್ಯಕ್ತವಾಯಿತು. ಈ ರೀತಿ ಆವಿರ್ಭಾವ ಕ್ಕೊಳಗಾದ ನಿಖಿಲವಿಶ್ವವೂ ಕಾಲಾನುಗುಣವಾಗಿ ಶ್ರೀಕೃಷ್ಣಪರಮಾತ್ಮನಲ್ಲಿ ತಿರೋ ಹಿತವಾಗುವುದು. ಆದಕಾರಣ ಸಂಸಾರಬಂಧನದಿಂದ ಮುಕ್ತನಾಗಲು ನಿತ್ಯನೂ, ನಿರ್ಗುಣನೂ, ನಿರಾಮಯನೂ ಆದ ಶ್ರೀಕೃಷ್ಣಪರಮಾತ್ಮನನ್ನು ಅನನ್ಯಭಕ್ತಿಯಿಂದ ಭಜಿಸುವುದೊಂದೇ ಮಾರ್ಗ. ಮನುಗಳಿಗೆಲ್ಲ ಆದಿಯಾದ ಸ್ವಾಯಂಭುವಮನುವೂ ಕೂಡ ನರ್ಮದಾತೀರದಲ್ಲಿ ಸಾವಿರ ರಾಜಸೂಯಯಾಗಮಾಡಿ ಸರ್ವಸ್ವವನ್ನೂ ಬ್ರಾಹ್ಮಣೋತ್ತಮರಿಗೆ ದಾನಮಾಡಿ, ಶ್ರೀಕೃಷ್ಣಪರಮಾತ್ಮನನ್ನು ಅನನ್ಯಭಕ್ತಿ ಯಿಂದ ಭಜಿಸಿ, ಗೋಲೋಕವನ್ನು ಸೇರಿದನು. ಮನೆಗೆ ಬಂದ ಅತಿಥಿಯನ್ನು ನಿರಾಕರಿಸಿದ ಪಾಪಪರಿಹಾರಕ್ಕಾಗಿ ನೀನು ವಿಪ್ರಪಾದೋದಕವನ್ನು ಭಕ್ತಿಯಿಂದ ಒಂದು ವರ್ಷ ಕುಡಿದು ಪರಿಶುದ್ಧನಾಗು. ಅನಂತರ ವಾನಪ್ರಸ್ಥನಾಗಿ ಭಕ್ತಿಯಿಂದ ರಾಧಾದೇವಿಯನ್ನು ಭಜಿಸಿ ಆ ದೇವಿಯ ಅನುಗ್ರಹದಿಂದ ಶ್ರೀಕೃಷ್ಣಪರಮಾತ್ಮನಲ್ಲಿ ಭಕ್ತಿಯನ್ನು ಹೊಂದಿ ಜೀವನ್ಮುಕ್ತನಾಗುವೆ' ಎಂದು ಸುಯಜ್ಞನಿಗೆ ಉಪದೇಶಿಸಿ ಸುತಪಮಹರ್ಷಿಯು ಹೊರಟುಹೋದನು.

ಈ ಅಧ್ಯಾಯದಲ್ಲಿ ಜಗತ್ಸೃಷ್ಟಿಕ್ರಮವೂ, ಪಿತೃ, ಮನು ಮತ್ತು ಮಾನವರ ಕಾಲಪರಿಮಾಣವೂ ಸವಿಸ್ತರವಾಗಿದೆ.

|| ಓಂ |

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

### || ಪಂಚಪಂಚಾಶತ್ತಮೋಽಧ್ಯಾಯಃ ||

|| ಶ್ರೀ ಪಾರ್ವತ್ಯುವಾಚ ||

ಶ್ರೀಕೃಷ್ಣಸ್ಯ ಸ್ಥಿತೇ ಮಂತ್ರೇ ಚಾನ್ಯೇಷಾಮೀಶ್ವರಸ್ಯ ವಃ |
ಕಥಂ ಜಗ್ರಾಹ ರಾಧಾಯಾ ಮಂತ್ರಂ ವೈ ವೈಷ್ಣವೋ ನೃಪಃ || ೧ ||

ಕಿಂ ವಿಧಾನಂ ಚ ಕಿಂ ಧ್ಯಾನಂ ಕಿಂ ಸ್ತೋತ್ರಂ ಕವಚಂ ಚ ಕಿಂ |
ಕಂ ಮಂತ್ರಂ ಚ ದದೌ ರಾಜ್ಞೇ ತಾಂ ಪೂಜಾಪದ್ಧತಿಂ ವದ || ೨ ||

---

### ಐವತ್ತೈದನೆಯ ಅಧ್ಯಾಯವು

೧. ಶ್ರೀಪಾರ್ವತಿ :—ಶ್ರೀಕೃಷ್ಣನ ಮಹಾಮಂತ್ರವೂ, ಇತರ ಮಹಾಮಂತ್ರಗಳೂ ಇರುವಾಗ ವಿಷ್ಣುಭಕ್ತನಾದ ಆ ರಾಜನು ರಾಧಾಮಂತ್ರವನ್ನು ಹೊಂದಲು ಕಾರಣವೇನು ?

೨. ಆ ಮಂತ್ರೋಪಾಸನೆಯ ಕ್ರಮವಾವುದು ? ಆ ರಾಧಾದೇವಿಯ ಧ್ಯಾನ, ಸ್ತೋತ್ರ ಮತ್ತು ಕವಚಾದಿಗಳ ಬಗೆ ಯಾವುದು ? ಆ ಸುತಪಮುನಿಯು ರಾಜನಿಗೆ ಉಪದೇಶಿಸಿದ ಮಂತ್ರವಾವುದು ? ಆ ರಾಧಾದೇವಿಯ ಪೂಜಾಪದ್ಧತಿಯನ್ನು ವಿವರಿಸು ?

॥ ಶ್ರೀ ಮಹೇಶ್ವರ ಉವಾಚ ॥

ಹೇ ವಿಪ್ರ ಕಂ ಭಜಾಮೀತಿ ಪ್ರಶ್ನಂ ಕುರ್ವತಿ ರಾಜನಿ ।
ಶೀಘ್ರಂ ಪ್ರಾಪ್ನೋಮಿ ಗೋಲೋಕಂ ಕಸ್ಯಾರಾಧನತೋ ಮುನೇ ॥ ೩ ॥

ಇತ್ಯುಕ್ತವಂತಂ ರಾಜೇಂದ್ರಮುವಾಚ ಬ್ರಾಹ್ಮಣೋತ್ತಮಃ ।
ತತ್ಸೇವಯಾ ಚ ತಲ್ಲೋಕಂ ಪ್ರಾಪ್ಸ್ಯಸೇ ಬಹುಜನ್ಮತಃ ॥ ೪ ॥

ತತ್ಪ್ರಾಣಾಧಿಷ್ಠಾತೃದೇವೀಂ ಭಜ ರಾಧಾಂ ಪರಾತ್ಪರಾಂ ।
ಕೃಪಾಮಯೀಪ್ರಸಾದೇನ ಶೀಘ್ರಂ ಪ್ರಾಪ್ನೋತಿ ತತ್ಪದಂ ॥ ೫ ॥

ಇತ್ಯುಕ್ತ್ವಾ ರಾಧಿಕಾಮಂತ್ರಂ ದದೌ ತಸ್ಮೈ ಷಡಕ್ಷರಂ ।
ಓಂ ರಾಧೇತಿ ಚತುರ್ಥ್ಯಂತಂ ವಹ್ನಿಜಾಯಾಂತಮೇವ ಚ ॥ ೬ ॥

ಪ್ರಾಣಾಯಾಮಂ ಭೂತಶುದ್ಧಿಂ ಮಂತ್ರನ್ಯಾಸಂ ತಥೈವ ಚ ।
ಕರಾಂಗನ್ಯಾಸಮೇವಂ ಚ ಧ್ಯಾನಂ ಸರ್ವಸುದುರ್ಲಭಂ ॥ ೭ ॥

---

೩-೫. ಶ್ರೀಮಹೇಶ್ವರ :—' ಎಲೈ ಮಹರ್ಷಿಯೇ, ನಾನು ಯಾವ ದೇವತೆಯನ್ನು ಭಜಿಸಲಿ, ಯಾರ ಆರಾಧನೆಯಿಂದ ಜಾಗ್ರತೆಯಾಗಿ ಗೋಲೋಕಕ್ಕೆ ಹೋಗಿ ಸೇರಬಹುದು ' ಎಂದು ರಾಜನು ಕೇಳಿದಾಗ, ' ಆ ಪರಮಾತ್ಮನ ಸೇವೆಯನ್ನೇ ಮಾಡಿ ಗೋಲೋಕವನ್ನು ಸೇರಬೇಕಾದರೆ ಅನೇಕ ಜನ್ಮಗಳನ್ನೆತ್ತಬೇಕಾಗುವುದು. ಅವನ ಪ್ರಾಣಗಳಿಗೆ ಅಧಿಷ್ಠಾತೃದೇವತೆಯಾದ ರಾಧಾದೇವಿಯನ್ನು ಭಜಿಸಿದರೆ ದಯಾಮಯಳಾದ ಅವಳ ಅನುಗ್ರಹದಿಂದ ಜಾಗ್ರತೆ ಗೋಲೋಕಕ್ಕೆ ಹೋಗಬಹುದು ' ಎಂದು ಆ ಬ್ರಾಹ್ಮಣೋತ್ತಮನು ನುಡಿದನು.

೬. ಹೀಗೆ ಹೇಳಿ ಆ ರಾಜನಿಗೆ ' ಓಂ ರಾಧಾಯೈ ಸ್ವಾಹಾ ' ಎಂಬ ಷಡಕ್ಷರದ ರಾಧಿಕಾಮಂತ್ರವನ್ನು ಉಪದೇಶಿಸಿದನು.

೭-೮. ಪ್ರಾಣಾಯಾಮ ಪಂಚಭೂತಸಿದ್ಧಿ, ಮಂತ್ರನ್ಯಾಸ, ಅಂಗನ್ಯಾಸ ಮತ್ತು ಕರನ್ಯಾಸಾದಿಗಳ ಕ್ರಮವನ್ನೂ, ಧ್ಯಾನ, ಸ್ತೋತ್ರ, ಕವಚಾದಿಗಳನ್ನೂ

ಸ್ತೋತ್ರಂ ಚ ಕವಚಂ ತಂ ಚ ಶಿಕ್ಷಯಾಮಾಸ ಭಕ್ತಿತಃ ।
ರಾಜಾ ತೇನ ಕ್ರಮೇಣೈವ ಜಜಾಪ ಪರಮಂ ಮನುಂ ॥ ೮ ॥

ಧ್ಯಾನಂ ಚ ಸಾಮವೇದೋಕ್ತಂ ಮಂಗಲಾನಾಂ ಚ ಮಂಗಲಂ ।
ಕೃಷ್ಣಸ್ತಾಂ ಪೂಜಯಾಮಾಸ ಪುರಾ ಧ್ಯಾನೇನ ಯೇನ ಚ ॥ ೯ ॥

ಶ್ವೇತಚಂಪಕವರ್ಣಾಭಾಂ ಕೋಟಿಚಂದ್ರಸಮಪ್ರಭಾಂ ।
ಶರತ್ಪಾರ್ವಣಚಂದ್ರಾಸ್ಯಾಂ ಶರತ್ಪಂಕಜಲೋಚನಾಂ ।
ಸುಶ್ರೋಣೀಂ ಸುನಿತಂಬಾಂ ಚ ಪಕ್ವಬಿಂಬಾಧರಾಂ ವರಾಂ ॥ ೧೦ ॥

ಮುಕ್ತಾಪಂಕ್ತಿಪ್ರತಿನಿಧಿದಂತಪಂಕ್ತಿ ಮನೋಹರಾಂ ।
ಈಷದ್ಧಾಸ್ಯಪ್ರಸನ್ನಾಸ್ಯಾಂ ಭಕ್ತಾನುಗ್ರಹಕಾರಿಕಾಂ ।
ವಹ್ನಿಶುದ್ಧಾಂಶುಕಾಧಾನಾಂ ರತ್ನಮಾಲಾವಿಭೂಷಿತಾಂ ॥ ೧೧ ॥

---

ಉಪದೇಶಿಸಲು ರಾಜನೂ ಕೂಡ ಅದೇ ಕ್ರಮದಿಂದಲೇ ಆ ಪರಮಮಂತ್ರವನ್ನು ಭಕ್ತಿಯಿಂದ ಜಪಿಸಿದನು.

೯. ಪೂರ್ವದಲ್ಲಿ ಶ್ರೀಕೃಷ್ಣನು ರಾಧಾದೇವಿಯನ್ನು ಯಾವ ಧ್ಯಾನಕ್ರಮದಿಂದ ಪೂಜಿಸಿದನೋ, ಮಂಗಳಗಳಿಗೆಲ್ಲ ಮಂಗಳಕರವಾದ ಆ ಧ್ಯಾನವು ಸಾಮವೇದದಲ್ಲಿ ಈ ರೀತಿಯಿದೆ.

೧೦. ಬಿಳಿಯ ಸಂಪಿಗೆ ಬಣ್ಣದಿಂದ ಕಾಂತಿಯುತಳೂ, ಕೋಟಿಚಂದ್ರರಂತೆ ಬೆಳಗುವವಳೂ, ಶರತ್ಪೂರ್ಣಿಮಾಚಂದ್ರನಂತಿರುವ ಮುಖವುಳ್ಳವಳೂ, ಶರದೃತುವಿನ ತಾವರೆಯಂತೆ ವಿಶಾಲವಾದ ಕಣ್ಣುಳ್ಳವಳೂ ಆದ ರಾಧಾದೇವಿಯನ್ನು ಭಜಿಸುವೆನು.

೧೧. ಮುತ್ತಿನ ಸಾಲಿಗೆ ಸರಿಸಮಾನವಾದ ಹಲ್ಲುಗಳ ಸಾಲಿನಿಂದ ಮನೋಹರಳೂ, ಮಂದಹಾಸದಿಂದ ಪ್ರಸನ್ನವಾದ ಮುಖವುಳ್ಳವಳೂ, ಭಕ್ತರಿಗೆ ಅನುಗ್ರಹಕಾರಕಳೂ, ಅಗ್ನಿಯಂತೆ ಪರಿಶುದ್ಧವಾದ ಬಟ್ಟೆಯನ್ನುಟ್ಟು ರತ್ನಮಾಲೆಯನ್ನು ಧರಿಸಿರುವವಳೂ ಆದ ರಾಧಾದೇವಿಯನ್ನು ಭಜಿಸುವೆನು.

ರತ್ನಕೇಯೂರವಲಯಾಂ ರತ್ನಮಂಜೀರರಂಜಿತಾಂ ।
ರತ್ನಕುಂಡಲಯುಗ್ಮೇನ ವಿಚಿತ್ರೇಣ ವಿರಾಜಿತಾಂ ।
ಸೂರ್ಯಪ್ರಭಾಪ್ರತಿಕೃತಿಗಂಡಸ್ಥಲವಿರಾಜಿತಾಂ ॥ ೧೨ ॥

ಅಮೂಲ್ಯರತ್ನಖಚಿತಗ್ರೈವೇಯಕವಿಭೂಷಿತಾಂ ।
ಸದ್ರತ್ನಸಾರಖಚಿತಕಿರೀಟಮುಕುಟೋಜ್ಜ್ವಲಾಂ ।
ರತ್ನಾಂಗುಲೀಯಸಂಯುಕ್ತಾಂ ರತ್ನಪಾಶಕಶೋಭಿತಾಂ ॥ ೧೩ ॥

ಬಿಭ್ರತೀಂ ಕಬರೀಭಾರಂ ಮಾಲತೀಮಾಲ್ಯಶೋಭಿತಾಂ ।
ರೂಪಾಧಿಷ್ಠಾತೃದೇವೀಂ ಚ ಮತ್ತವಾರಣಗಾಮಿನೀಂ ॥ ೧೪ ॥

ಗೋಪೀಭಿಃ ಸುಪ್ರಿಯಾಭಿಶ್ಚ ಸೇವಿತಾಂ ಸಿದ್ಧಚಾರಣೈಃ ।
ಕಸ್ತೂರೀಬಿಂದುಭಿಃ ಸಾರ್ಧಮಧಶ್ಚಂದನಬಿಂದುನಾ ॥ ೧೫ ॥

---

೧೨. ರತ್ನದ ವಂಕಿ ಬಳೆಗಳು ಮತ್ತು ಕಾಲ್ಗೊಲಸುಗಳನ್ನು ಧರಿಸಿ, ವಿಚಿತ್ರವಾದ ಎರಡು ರತ್ನಕುಂಡಲಗಳನ್ನು ಕಿವಿಯಲ್ಲಿಟ್ಟು, ಸೂರ್ಯನಂತೆ ಹೊಳೆಯುತ್ತಿರುವ ಎರಡು ಕಪೋಲಗಳಿಂದ ಶೋಭಿತಳಾದ ಆ ರಾಧಾದೇವಿಯನ್ನು ಭಜಿಸುವೆನು.

೧೩. ಅಮೂಲ್ಯ ರತ್ನಗಳಿಂದ ಖಚಿತವಾದ ಕಂಠಹಾರದಿಂದಲೂ, ಶ್ರೇಷ್ಠ ರತ್ನಗಳನ್ನು ಕೆಚ್ಚಿರುವ ಉಜ್ವಲವಾದ ಕಿರೀಟದಿಂದಲೂ, ರತ್ನದ ಉಂಗುರ ಮತ್ತು ಪಾಶಕಗಳಿಂದಲೂ ಅಲಂಕೃತಳಾದ ರಾಧಾದೇವಿಯನ್ನು ಭಜಿಸುವೆನು.

೧೪. ಕುರುಳಿನಲ್ಲಿ ಜಾಜೀಮಾಲೆಯನ್ನು ಮುಡಿದು, ಸೌಂದರ್ಯಕ್ಕೆ ಅಧಿಷ್ಠಾತೃದೇವತೆಯಂತಿರುವ ಮತ್ತು ಗಜಗಮನೆಯಾದ ರಾಧಾದೇವಿಯನ್ನು ಭಜಿಸುವೆನು.

೧೫-೧೬. ಪ್ರೀತಿಪಾತ್ರರಾದ ಗೋಪಿಯರ ಬಿಳೀಚಾಮರದ ಸೇವೆಯನ್ನು ಕೈಗೊಳ್ಳುತ್ತ, ಬೈತಲೆಗೆ ನೇರವಾಗಿ ಹಣೆಯಮೇಲೆ ಕಸ್ತೂರಿ, ಕುಂಕುಮ ಚಂದನ

ಸಿಂದೂರಬಿಂದುನಾ ಚಾರು ಸೀಮಂತಾಧಃಸ್ಥಲೋಜ್ವಲಾಂ ।
ನಿತ್ಯಂ ಸುಪೂಜಿತಾಂ ಭಕ್ತ್ಯಾ ಕೃಷ್ಣೇನ ಪರಮಾತ್ಮನಾ ॥ ೧೬ ॥

ಕೃಷ್ಣಸೌಭಾಗ್ಯಸಂಯುಕ್ತಾಂ ಕೃಷ್ಣಪ್ರಾಣಾಧಿಕಾಂ ವರಾಂ ।
ಕೃಷ್ಣಪ್ರಾಣಾಧಿದೇವೀಂ ಚ ನಿರ್ಗುಣಾಂ ಚ ಪರಾತ್ಪರಾಂ ॥ ೧೭ ॥

ಮಹಾವಿಷ್ಣುವಿಧಾತ್ರೀಂ ಚ ಪ್ರದಾತ್ರೀಂ ಸರ್ವಸಂಪದಾಂ ।
ಕೃಷ್ಣಭಕ್ತಿಪ್ರದಾಂ ಶಾಂತಾಂ ಮೂಲಪ್ರಕೃತಿಮೀಶ್ವರೀಂ ॥ ೧೮ ॥

ವೈಷ್ಣವೀಂ ವಿಷ್ಣುಮಾಯಾಂ ಚ ಕೃಷ್ಣಪ್ರೇಮಮಯೀಂ ಶುಭಾಂ ।
ರಾಸಮಂಡಲಮಧ್ಯಸ್ಥಾಂ ರತ್ನಸಿಂಹಾಸನಸ್ಥಿತಾಂ ।
ರಾಸೇ ರಾಸೇಶ್ವರಯುತಾಂ ರಾಧಾಂ ರಾಸೇಶ್ವರೀಂ ಭಜೇ ॥ ೧೯ ॥

---

ಮತ್ತು ಚಂದ್ರದ ಬೊಟ್ಟುಗಳನ್ನು ಚಿತ್ರಿಸಿಕೊಂಡು, ಶ್ರೀಕೃಷ್ಣಪರಮಾತ್ಮನಿಂದ ನಿತ್ಯವೂ ಭಕ್ತಿಯಿಂದ ಪೂಜಿಸಲ್ಪಡುತ್ತಿರುವ ರಾಧಾದೇವಿಯನ್ನು ಭಜಿಸುವೆನು.

೧೭–೧೮. ಶ್ರೀಕೃಷ್ಣನಿಂದ ಸೌಭಾಗ್ಯವನ್ನು ಪಡೆದವಳೂ, ಆತನ ಪ್ರಾಣಕ್ಕಿಂತ ಶ್ರೇಷ್ಠಳೂ, ಅವನ ಪ್ರಾಣಾಧಿಷ್ಠಾತೃದೇವತೆಯೂ, ನಿರ್ಗುಣಳೂ, ಪರಾತ್ಪರಳೂ, ಮಹಾವಿಷ್ಣುವಿನ ಜನನಿಯೂ, ಸಕಲಸಂಪತ್ಪ್ರದಾತ್ರಿಯೂ, ಶ್ರೀಕೃಷ್ಣಭಕ್ತಿಯನ್ನು ಕೊಡುವವಳೂ, ಶಾಂತಸ್ವರೂಪಳೂ, ಮೂಲಪ್ರಕೃತಿಯೂ ಆದ ಈಶ್ವರಿಯನ್ನು ಭಜಿಸುವೆನು.

೧೯. ವಿಷ್ಣುಭಕ್ತೆಯೂ, ವಿಷ್ಣುಮಾಯಾರೂಪಿಣಿಯೂ, ಶ್ರೀಕೃಷ್ಣಪ್ರೇಮಸ್ವರೂಪಳೂ, ರಾಸಮಂಡಲಮಧ್ಯದಲ್ಲಿ ರತ್ನಸಿಂಹಾಸನದಲ್ಲಿ ಕುಳಿತಿರುವವಳೂ, ರಾಸೇಶ್ವರನಾದ ಶ್ರೀಕೃಷ್ಣನೊಡನೆ ರಾಸಕ್ರೀಡಾಸಕ್ತಳೂ ಆದ ರಾಸೇಶ್ವರಿಯಾದ ರಾಧೆಯನ್ನು ಭಜಿಸುವೆನು.

ಧ್ಯಾತ್ವಾ ಪುಷ್ಪಂ ಮೂರ್ಧ್ನಿ ದತ್ವಾ ಪುನರ್ಧ್ಯಾಯೇಜ್ಜಗತ್ಪ್ರಭುಂ।
ದದ್ಯಾತ್ಪುಷ್ಪಂ ಪುನರ್ಧ್ಯಾತ್ವಾ ಚೋಪಚಾರಾಣಿ ಷೋಡಶ ॥ ೨೦ ॥

ಆಸನಂ ವಸನಂ ಪಾದ್ಯಮರ್ಘ್ಯಂ ಗಂಧಾನುಲೇಪನಂ।
ಧೂಪಂ ದೀಪಂ ಸುಪುಷ್ಪಂ ಚ ಸ್ನಾನೀಯಂ ರತ್ನಭೂಷಣಂ ॥ ೨೧ ॥

ನಾನಾಪ್ರಕಾರನೈವೇದ್ಯಂ ತಾಂಬೂಲಂ ವಾಸಿತಂ ಜಲಂ।
ಮಧುಪರ್ಕಂ ರತ್ನತಲ್ಪಮುಪಚಾರಾಣಿ ಷೋಡಶ ॥ ೨೨ ॥

ಪ್ರತ್ಯೇಕಂ ವೇದಮಂತ್ರೇಣ ದತ್ತಂ ಭಕ್ತ್ಯಾ ಚ ಭೂಭೃತಾ।
ಮಂತ್ರಾಂಶ್ಚ ಶ್ರೂಯತಾಂ ದುರ್ಗೇ ವೇದೋಕ್ತಾನ್ಸರ್ವಸಮ್ಮತಾನ್ ॥ ೨೩ ॥

ರತ್ನಸಾರವಿಕಾರಂ ಚ ನಿರ್ಮಿತಂ ವಿಶ್ವಕರ್ಮಣಾ।
ವರಂ ಸಿಂಹಾಸನಂ ರಮ್ಯಂ ರಾಧೇ ಪೂಜಾಸು ಗೃಹ್ಯತಾಂ ॥ ೨೪ ॥

---

೨೦. ಈ ರೀತಿಯಾಗಿ ಧ್ಯಾನಮಾಡಿ, ಆ ದೇವಿಯ ಶಿರಸ್ಸಿನ ಮೇಲೆ ಪುಷ್ಪವನ್ನರ್ಪಿಸಿ, ಮತ್ತೆ ಜಗದೊಡೆಯನಾದ ಶ್ರೀಕೃಷ್ಣನನ್ನು ಧ್ಯಾನಮಾಡಿ, ಪುಷ್ಪವನ್ನರ್ಪಿಸಿ, ಅನಂತರ ಧ್ಯಾನಮಾಡಿ, ಕ್ರಮವಾಗಿ ಷೋಡಶೋಪಚಾರಗಳನ್ನು ಸಮರ್ಪಿಸಬೇಕು.

೨೧-೨೨. ರಾಧಾದೇವಿಯ ಷೋಡಶೋಪಚಾರಪೂಜೆಯು ಈ ರೀತಿಯಾಗಿರುವುದು. ಆಸನ, ವಸ್ತ್ರ, ಉಪವೀತ, ಪಾದ್ಯ, ಅರ್ಘ್ಯ, ಗಂಧಲೇಪನ, ಧೂಪ, ದೀಪ, ಪುಷ್ಪ, ಸ್ನಾನ, ರತ್ನಾಲಂಕಾರ, ವಿಧವಿಧ ಭಕ್ಷ್ಯಭೋಜ್ಯನೈವೇದ್ಯಗಳು, ತಾಂಬೂಲ, ಸುಗಂಧೋದಕ, ಮಧುಪರ್ಕ ಮತ್ತು ರತ್ನಶಯನ ಇವುಗಳನ್ನು ಭಕ್ತಿಯಿಂದ ಸಮರ್ಪಿಸುವುದು.

೨೩. ಪ್ರತ್ಯೇಕವಾಗಿ ವೇದಮಂತ್ರೋಚ್ಚಾರಣೆಪೂರ್ವಕವಾಗಿ ಈ ಷೋಡಶೋಪಚಾರಗಳನ್ನು ರಾಜನು ರಾಧಾದೇವಿಗೆ ಭಕ್ತಿಯಿಂದ ಸಮರ್ಪಿಸಿದನು. ಎಲೌ ದುರ್ಗಾದೇವಿಯೇ, ವೇದೋಕ್ತವೂ, ಸಕಲಶಾಸ್ತ್ರಸಮ್ಮತವೂ ಆದ ಆ ಮಂತ್ರಗಳನ್ನು ಹೇಳುವೆನು ಕೇಳುವವಳಾಗು.

೨೪. ದೇವಶಿಲ್ಪಿಯಾದ ವಿಶ್ವಕರ್ಮನಿಂದ ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ, ರಮ್ಯವಾಗಿರುವ ಚಾರುಸಿಂಹಾಸನವನ್ನು ಎಲೌ ರಾಧಾದೇವಿಯೇ, ನೀನು ಸ್ವೀಕರಿಸು.

ಅಮೂಲ್ಯರತ್ನಖಚಿತಮಮೂಲ್ಯಂ ಸೂಕ್ಷ್ಮಮೇವ ಚ ।
ವಹ್ನಿಶುದ್ಧಂ ನಿರ್ಮಲಂ ಚ ವಸನಂ ದೇವಿ ಗೃಹ್ಯತಾಂ ॥ ೨೫ ॥

ಸದ್ರತ್ನಸಾರಪಾತ್ರಸ್ಥಂ ಸರ್ವತೀರ್ಥೋದಕಂ ಶುಭಂ ।
ಪಾದಪ್ರಕ್ಷಾಲನಾರ್ಥಂ ಚ ರಾಧೇ ಪಾದ್ಯಂ ಚ ಗೃಹ್ಯತಾಂ ॥ ೨೬ ॥

ದಕ್ಷಿಣಾವರ್ತ ಶಂಖಸ್ಥಂ ಸದೂರ್ವಾಪುಷ್ಪಚಂದನಂ ।
ಪೂತಂ ಯುಕ್ತಂ ತೀರ್ಥತೋಯೈ ರಾಧೇಽರ್ಘ್ಯಂ ಪ್ರತಿಗೃಹ್ಯತಾಂ ॥ ೨೭ ॥

ಪಾರ್ಥಿವದ್ರವ್ಯಸಂಭೂತಮತೀವ ಸುರಭೀಕೃತಂ ।
ಮಂಗಲಾರ್ಹಂ ಪವಿತ್ರಂ ಚ ರಾಧೇ ಗಂಧಂ ಗೃಹಾಣ ಮೇ ॥ ೨೮ ॥

ಶ್ರೀಖಂಡಚೂರ್ಣಂ ಸುಸ್ನಿಗ್ಧಂ ಕಸ್ತೂರೀಕುಂಕುಮಾನ್ವಿತಂ ।
ಸುಗಂಧಯುಕ್ತಂ ದೇವೇಶಿ ಗೃಹ್ಯತಾಮನುಲೇಪನಂ ॥ ೨೯ ॥

---

೨೫. ಎಲೌ ದೇವಿಯೇ, ಅಗ್ನಿಯಂತೆ ಪರಿಶುದ್ಧವೂ, ಅತಿಸೂಕ್ಷ್ಮವೂ, ಅಮೂಲ್ಯರತ್ನಖಚಿತವೂ ಆದ ದಿವ್ಯ ವಸ್ತ್ರವನ್ನು ಸ್ವೀಕರಿಸು.

೨೬. ರಾಧಾದೇವಿಯೇ, ಶ್ರೇಷ್ಠವಾದ ರತ್ನದ ಪಾತ್ರೆಯಲ್ಲಿರುವ ಸಕಲ ಪುಣ್ಯತೀರ್ಥಗಳ ಜಲವನ್ನು ಪಾದೋದಕವಾಗಿ ಸ್ವೀಕರಿಸು.

೨೭. ಎಲೌ ರಾಧಾದೇವಿಯೇ, ಬಲಮುರಿ ಶಂಖದಲ್ಲಿರುವ ಗರಿಕೆ, ಹೂವು ಮತ್ತು ದಿವ್ಯಚಂದನಮಿಶ್ರಿತವಾದ ತೀರ್ಥಜಲವನ್ನು ಅರ್ಘ್ಯಕ್ಕಾಗಿ ಸ್ವೀಕರಿಸು.

೨೮. ಪೃಥಿವೀದ್ರವ್ಯಗಳಿಂದ ಉತ್ಪನ್ನವಾಗಿ, ಅತ್ಯಂತ ಸುವಾಸಿತವೂ, ಮಂಗಳಕರವೂ ಮತ್ತು ಪವಿತ್ರವೂ ಆದ ದಿವ್ಯಗಂಧವನ್ನರ್ಪಿಸುವೆನು. ಎಲೌ ದೇವಿಯೇ, ಸ್ವೀಕರಿಸುವವಳಾಗು.

೨೯. ಸುಗಂಧದ್ರವ್ಯದ ಪುಡಿಗಳಿಂದಲೂ, ಕಸ್ತೂರೀ ಕುಂಕುಮಕೇಸರಿಗಳಿಂದಲೂ ಮಿಶ್ರಿತವಾಗಿ ಸುವಾಸನೆಯಾಗಿರುವ ಶರೀರಾನುಲೇಪನವನ್ನು ಎಲೌ ದೇವದೇವಿಯೇ ಸ್ವೀಕರಿಸು.

ವೃಕ್ಷನಿರ್ಯಾಸಸಂಯುಕ್ತಂ ಪಾರ್ಥಿವದ್ರವ್ಯಸಂಯುತಂ ।
ಅಗ್ನಿಖಂಡಶಿಖಾಜಾತಂ ಧೂಪಂ ದೇವಿ ಗೃಹಾಣ ಮೇ ॥ ೩೦ ॥

ಅಂಧಕಾರೇ ಭಯಹರಮಮೂಲ್ಯಮಣಿಶೋಭಿತಂ ।
ರತ್ನಪ್ರದೀಪಂ ಶೋಭಾಢ್ಯಂ ಗೃಹಾಣ ಪರಮೇಶ್ವರಿ ॥ ೩೧ ॥

ಪಾರಿಜಾತಪ್ರಸೂನಂ ಚ ಗಂಧಚಂದನಚರ್ಚಿತಂ ।
ಅತೀವ ಶೋಭನಂ ರಮ್ಯಂ ಗೃಹ್ಯತಾಂ ಪರಮೇಶ್ವರಿ ॥ ೩೨ ॥

ಸುಗಂಧಾಮಲಕೀಚೂರ್ಣಂ ಸುಸ್ನಿಗ್ಧಂ ಸುಮನೋಹರಂ ।
ವಿಷ್ಣುತೈಲಸಮಾಯುಕ್ತಂ ಸ್ನಾನೀಯಂ ದೇವಿ ಗೃಹ್ಯತಾಂ ॥ ೩೩ ॥

ಅಮೂಲ್ಯರತ್ನಖಚಿತಂ ಕೇಯೂರವಲಯಾದಿಕಂ ।
ಶಂಖಂ ಸುಶೋಭನಂ ರಾಧೇ ಗೃಹ್ಯತಾಂ ಭೂಷಣಂ ಮಮ ॥ ೩೪ ॥

---

೩೦. ಹಾಲುಮಡ್ಡಿಯ ರಸದಿಂದ ಉತ್ಪನ್ನವಾಗಿ ಪೃಥಿವಿಯ ಸುಗಂಧ ದ್ರವ್ಯಗಳಿಂದ ಕೂಡಿ ಅಗ್ನಿಶಿಖೆಯಿಂದ ಶೋಭಿಸುತ್ತಿರುವ ದಿವ್ಯಧೂಪವನ್ನು ಎಲೌ ದೇವಿಯೇ ಸ್ವೀಕರಿಸು.

೩೧. ಎಲೌ ಪರಮೇಶ್ವರಿಯೇ, ಗಾಢಾಂಧಕಾರನಾಶಕವೂ, ಅಮೂಲ್ಯಮಣಿಗಳಿಂದ ಕಾಂತಿಯುತವೂ ಆದ ರತ್ನದೀಪವನ್ನು ಸ್ವೀಕರಿಸು.

೩೨. ದಿವ್ಯಚಂದನಗಂಧದಿಂದ ಲಿಪ್ತವಾಗಿ, ಬಹಳ ಮನೋಹರವಾಗಿರುವ ಪಾರಿಜಾತಪುಷ್ಪವನ್ನು ಎಲೌ ಪರಮೇಶ್ವರಿಯೇ ಸ್ವೀಕರಿಸು.

೩೩. ವಿಷ್ಣುತೈಲದಿಂದ ಮಿಶ್ರಿತವಾಗಿ ಸ್ನಿಗ್ಧವಾಗಿಯೂ, ಮನೋಹರವಾಗಿಯೂ, ಸುವಾಸನೆಯಾಗಿಯೂ ಇರುವ ನೆಲ್ಲಿಕಾಯಿನ ಚೂರ್ಣವನ್ನು ಸ್ನಾನಾರ್ಥವಾಗಿ ಸ್ವೀಕರಿಸು.

೩೪. ಎಲೌ ರಾಧಾದೇವಿಯೇ, ಅಮೂಲ್ಯರತ್ನಗಳಿಂದ ಖಚಿತವಾಗಿ ಬಹಳ ಸುಂದರವಾಗಿರುವ ಶಂಖವ ಬಾಹುಪುರಿ, ಬಳೆ ಮುಂತಾದ ಭೂಷಣಗಳನ್ನು ಸ್ವೀಕರಿಸು.

ಕಾಲದೇಶೋದ್ಭವಂ ಪಕ್ವಫಲಂ ವೈ ಲಡ್ಡುಕಾದಿಕಂ ।
ಪರಮಾನ್ನಂ ಚ ಮಿಷ್ಟಾನ್ನಂ ನೈವೇದ್ಯಂ ದೇವಿ ಗೃಹ್ಯತಾಂ ॥ ೩೫ ॥

ತಾಂಬೂಲಂ ಚ ವರಂ ರಮ್ಯಂ ಕರ್ಪೂರಾದಿಸುವಾಸಿತಂ ।
ಸರ್ವಭೋಗಾದಿಕಂ ಸ್ವಾದು ತಾಂಬೂಲಂ ದೇವಿ ಗೃಹ್ಯತಾಂ ॥ ೩೬ ॥

ಅಶನಂ ರತ್ನಪಾತ್ರಸ್ಥಂ ಸುಸ್ವಾದು ಸುಮನೋಹರಂ ।
ಮಯಾ ನಿವೇದಿತಂ ಭಕ್ತ್ಯಾ ಗೃಹ್ಯತಾಂ ಪರಮೇಶ್ವರಿ ॥ ೩೭ ॥

ರತ್ನೇಂದ್ರಸಾರಖಚಿತಂ ವಹ್ನಿಶುದ್ಧಾಂಶುಕಾನ್ವಿತಂ ।
ಪುಷ್ಪಚಂದನಚರ್ಚಾಢ್ಯಂ ಪರ್ಯಂಕಂ ದೇವಿ ಗೃಹ್ಯತಾಂ ॥ ೩೮ ॥

ಏವಂ ಸಂಪೂಜ್ಯ ದೇವೀಂ ತಾಂ ದದ್ಯಾತ್ಪುಷ್ಪಾಂಜಲಿತ್ರಯಂ ।
ಯತ್ನೇನ ಪೂಜಯೇದ್ದೇವೀಂ ನಾಯಿಕಾಶ್ಚ ವ್ರತೇ ವ್ರತೇ ॥ ೩೯ ॥

---

೩೫ ಆಯಾಯ ಕಾಲದೇಶಾನುಗುಣವಾದ ಮಾಗಿದ ಹಣ್ಣುಗಳನ್ನೂ, ಲಡ್ಡು, ಪಾಯಸ ಮತ್ತು ಮಿಷ್ಟಾನ್ನಗಳನ್ನೂ ಭಕ್ತಿಯಿಂದರ್ಪಿಸುವೆನು, ಸ್ವೀಕರಿಸು.

೩೬. ಪಚ್ಚಕರ್ಪೂರದಿಂದ ಸುವಾಸಿತವಾಗಿ, ಎಲ್ಲ ಸುಖಕ್ಕೂ ಆಶ್ರಯವಾದ ದಿವ್ಯತಾಂಬೂಲವನ್ನು ಎಲೌ ದೇವಿಯೇ, ನೀನು ಸ್ವೀಕರಿಸು.

೩೭. ಅತ್ಯಂತ ಮಧುರವೂ, ಮನೋಹರವೂ ಆದ ರತ್ನದ ಪಾತ್ರೆಯಲ್ಲಿರುವ ಅನ್ನವನ್ನು ಭಕ್ತಿಯಿಂದ ನಿವೇದಿಸುವೆನು ಸ್ವೀಕರಿಸು.

೩೮. ಶ್ರೇಷ್ಠರತ್ನಗಳಿಂದ ಖಚಿತವಾಗಿ ಅಗ್ನಿಯಂತೆ ಪರಿಶುದ್ಧವಾದ ಬಟ್ಟೆಯಿಂದಲೂ, ದಿವ್ಯವಾದ ಪುಷ್ಪ ಮತ್ತು ಚಂದನದಿಂದಲೂ ಶೋಭಿತವಾದ ಶಯನವನ್ನು ಎಲೌ ದೇವಿಯೇ, ಸ್ವೀಕರಿಸು.

೩೯. ಈ ರೀತಿಯಾಗಿ ಆ ರಾಧಾದೇವಿಯನ್ನು ಪೂಜಿಸಿ ಮೂರುಸಾರಿ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು. ಇಂತು ರಾಧಾದೇವಿಯ ವ್ರತದಲ್ಲಿ ಪ್ರಯತ್ನಪೂರ್ವಕವಾಗಿ ರಾಧಾದೇವಿಯನ್ನೂ ಇತರ ನಾಯಿಕೆಯರನ್ನೂ ಶ್ರದ್ಧೆಯಿಂದ ಪೂಜಿಸಬೇಕು.

ಪ್ರಾಗಾದಿಕ್ರಮಯೋಗೇನ ದಕ್ಷಿಣಾವರ್ತತಃ ಪ್ರಿಯೇ ।
ಭಕ್ತ್ಯಾ ಪಂಚೋಪಚಾರೇಣ ಸುಪ್ರಿಯಾಃ ಪರಿಚಾರಿಕಾಃ ॥ ೪೦ ॥

ಮಾಲಾವತೀಂ ಪೂರ್ವಕೋಣೇ ವಹ್ನಿಕೋಣೇ ಚ ಮಾಧವೀಂ ।
ದಕ್ಷಿಣೇ ರತ್ನಮಾಲಾಂ ಚ ಸುಶೀಲಾಂ ನೈರ್ಋತೇ ಸತೀಂ ॥ ೪೧ ॥

ಪಶ್ಚಿಮೇ ವೈ ಶಶಿಕಲಾಂ ಪಾರಿಜಾತಾಂ ಚ ಮಾರುತೇ ।
ಪದ್ಮಾವತೀಮುತ್ತರೇ ಚಾಥೈಶಾನ್ಯಾಂ ಸುಂದರೀಂ ತಥಾ ॥ ೪೨ ॥

ಯೂಥಿಕಾಮಾಲತೀಪದ್ಮಮಾಲಾ ದದ್ಯಾದ್ವ್ರತೇ ವ್ರತೀ ।
ಪರಿಹಾರಂ ಚ ಕುರುತೇ ಸಾಮವೇದೋಕ್ತಮೇವ ಚ ॥ ೪೩ ॥

ತ್ವಂ ದೇವೀ ಜಗತಾಂ ಮಾತಾ ವಿಷ್ಣುಮಾಯಾ ಸನಾತನೀ ।
ಕೃಷ್ಣಪ್ರಾಣಾಧಿದೇವೀ ಚ ಕೃಷ್ಣಪ್ರಾಣಾಧಿಕಾ ಶುಭಾ ॥ ೪೪ ॥

---

೪೦. ಎಲೌ ಪ್ರಿಯಳಾದ ಪಾರ್ವತಿಯೇ, ಪ್ರದಕ್ಷಿಣಾಕಾರವಾಗಿ ಪೂರ್ವ ದಿಕ್ಕಿನಿಂದಾರಂಭಿಸಿಕೊಂಡು ದೇವಿಯ ಪ್ರೀತಿಪಾತ್ರರಾದ ಪರಿಚಾರಿಕೆಯರನ್ನು ಭಕ್ತಿ ಪೂರ್ವಕವಾಗಿ ಪಂಚೋಪಚಾರಗಳಿಂದ ಪೂಜಿಸಬೇಕು.

೪೧–೪೨. ಪೂರ್ವದಿಕ್ಕಿನಲ್ಲಿ ಮಾಲಾವತಿಯನ್ನೂ, ಆಗ್ನೇಯದಲ್ಲಿ ಮಾಧವೀ ದೇವಿಯನ್ನು, ದಕ್ಷಿಣದಲ್ಲಿ ರತ್ನಮಾಲೆಯನ್ನೂ, ನೈಋತ್ಯದಲ್ಲಿ ಸುಶೀಲೆಯನ್ನೂ, ಪಶ್ಚಿಮದಲ್ಲಿ ಶಶಿಕಲೆಯನ್ನೂ, ವಾಯುವ್ಯದಿಕ್ಕಿನಲ್ಲಿ ಪಾರಿಜಾತೆಯನ್ನೂ, ಉತ್ತರದಲ್ಲಿ ಪದ್ಮಾವತಿಯನ್ನೂ, ಈಶಾನ್ಯದಲ್ಲಿ ಸುಂದರಿಯನ್ನೂ ಆವಾಹಿಸಿ ಪೂಜಿಸಬೇಕು.

೪೩. ವ್ರತಪರನಾದವನು, ಗಿರಿಮಲ್ಲಿಕಾ, ಜಾಜಿ ಮತ್ತು ತಾವರೆ ಮುಂತಾದ ಪುಷ್ಪಗಳನ್ನು ಸಮರ್ಪಿಸಿ, ಸಾಮವೇದೋಕ್ತರೀತಿಯಲ್ಲಿ ಕಾಣಿಕೆಯನ್ನು ಸಲ್ಲಿಸಿ ಅಪರಾಧ ಕ್ಷಮಾಪಣೆಯನ್ನು ಬೇಡಿಕೊಳ್ಳಬೇಕು.

೪೪. ಜಗನ್ಮಾತೆಯೂ, ವಿಷ್ಣುಮಾಯೆಯೂ, ಅನಾದಿಯೂ ಆದ ಎಲೌ ದೇವಿಯೇ, ನೀನು ಶ್ರೀಕೃಷ್ಣನ ಪ್ರಾಣಗಳಿಗೆ ಅಧಿದೇವತೆಯೂ, ಪ್ರಾಣಕ್ಕಿಂತ ಪ್ರಿಯಳೂ ಆಗಿದ್ದೀಯೆ.

ಕೃಷ್ಣಪ್ರೇಮಮಯೀ ಶಕ್ತಿಃ ಕೃಷ್ಣೇ ಸೌಭಾಗ್ಯರೂಪಿಣೀ ।
ಕೃಷ್ಣಭಕ್ತಿಪ್ರದೇ ರಾಧೇ ನಮಸ್ತೇ ಮಂಗಲಪ್ರದೇ ॥ ೪೫ ॥

ಅದ್ಯ ಮೇ ಸಫಲಂ ಜನ್ಮ ಜೀವನಂ ಸಾರ್ಥಕಂ ಮಮ ।
ಪೂಜಿತಾಸಿ ಮಯಾ ಸಾ ಚ ಯಾ ಶ್ರೀಕೃಷ್ಣೇನ ಪೂಜಿತಾ ॥ ೪೬ ॥

ಕೃಷ್ಣವಕ್ಷಸಿ ಯಾ ರಾಧಾ ಸರ್ವಸೌಭಾಗ್ಯಸಂಯುತಾ ।
ರಾಸೇ ರಾಸೇಶ್ವರೀರೂಪಾ ವೃಂದಾ ವೃಂದಾವನೇ ವನೇ ॥ ೪೭ ॥

ಕೃಷ್ಣಪ್ರಿಯಾ ಚ ಗೋಲೋಕೇ ತುಲಸೀಕಾನನೇ ತು ಯಾ ।
ಚಂಪಾವತೀ ಕೃಷ್ಣಸಂಗೇ ಕ್ರೀಡಾಚಂಪಕಕಾನನೇ ॥ ೪೮ ॥

ಚಂದ್ರಾವತೀ ಚಂದ್ರವನೇ ಶತಶೃಂಗೇ ಸತೀತಿ ಚ ।
ವಿರಜಾದರ್ಪಹಂತ್ರೀ ಚ ವಿರಜಾತಟಕಾನನೇ ॥ ೪೯ ॥

---

೪೫. ಶ್ರೀಕೃಷ್ಣನ ಪ್ರೇಮಪಾತ್ರಳೂ, ಶಕ್ತಿಸ್ವರೂಪಳೂ, ಕೃಷ್ಣನಿಂದ ಸೌಭಾಗ್ಯವತಿಯೂ ಕೃಷ್ಣಭಕ್ತಿಯನ್ನು ಕೊಡುವವಳೂ, ಸರ್ವರಿಗೂ ಮಂಗಳ ಪ್ರದಳೂ ಆದ ಎಲೌ ರಾಧಾದೇವಿಯೇ ನಿನಗೆ ನಮಸ್ಕರಿಸುವೆನು.

೪೬. ಶ್ರೀಕೃಷ್ಣನಿಂದ ಪೂಜಿತಳಾದ ರಾಧಾದೇವಿಯನ್ನು ಪೂಜಿಸುವ ಪುಣ್ಯ ದೊರಕಿದ ಇಂದಿಗೆ ನನ್ನ ಜನ್ಮವು ಸಫಲವೂ, ನನ್ನ ಜೀವನವು ಸಾರ್ಥಕವೂ ಆಯಿತು.

೪೭–೪೮. ಸಕಲ ಸೌಭಾಗ್ಯಯುತಳಾದ ಯಾವ ದೇವಿಯು ಶ್ರೀಕೃಷ್ಣನ ವಕ್ಷಃಸ್ಥಲದಲ್ಲಿ ನೆಲೆಸಿ ರಾಧೆಯೆಂದೂ, ರಾಸಮಂಡಲದಲ್ಲಿ ರಾಸೇಶ್ವರಿಯೆಂದೂ, ವೃಂದಾವನದಲ್ಲಿ ವೃಂದೆಯೆಂದೂ, ಗೋಲೋಕದಲ್ಲಿ ಕೃಷ್ಣಪ್ರಿಯಳೆಂದೂ, ಅರಣ್ಯದಲ್ಲಿ ತುಳಸಿಯೆಂದೂ, ಚಂಪಕವನದಲ್ಲಿ ಶ್ರೀಕೃಷ್ಣನೊಡನೆ ಕ್ರೀಡಿಸುವಾಗ ಚಂಪಾವತಿ ಯೆಂದೂ ಹೆಸರು ಪಡೆಯುವಳು.

೪೯–೫೦. ಅಂತೆಯೇ ಚಂದ್ರವನದಲ್ಲಿರುವಾಗ ಚಂದ್ರಾವತಿಯೆಂದೂ, ಶತಶೃಂಗಪರ್ವತದಲ್ಲಿರುವಾಗ ಸತಿಯೆಂದೂ ವಿರಜಾನದಿಯ ದಡದ ವನದಲ್ಲಿ,

ಪದ್ಮಾವತೀ ಪದ್ಮವನೇ ಕೃಷ್ಣಾ ಕೃಷ್ಣಸರೋವರೇ ।
ಭದ್ರಾ ಕುಂಜಕುಟೀರೇ ಚ ಕಾಮ್ಯಾ ವೈ ಕಾಮ್ಯಕೇ ವನೇ ॥ ೫೦ ॥

ವೈಕುಂಠೇ ಚ ಮಹಾಲಕ್ಷ್ಮೀ ರ್ವಾಣೀ ನಾರಾಯಣೇ ವನೇ ।
ಕ್ಷೀರೋದೇ ಸಿಂಧುಕನ್ಯಾ ಚ ಮರ್ತ್ಯೇ ಲಕ್ಷ್ಮೀರ್ಹರಿಪ್ರಿಯಾ ॥ ೫೧ ॥

ಸರ್ವಸ್ವರ್ಗೇ ಸ್ವರ್ಗಲಕ್ಷ್ಮೀರ್ದೇವದುಃಖವಿನಾಶಿನಿ ।
ಸನಾತನೀ ವಿಷ್ಣುಮಾಯಾ ದುರ್ಗಾ ಶಂಕರವಕ್ಷಸಿ ॥ ೫೨ ॥

ಸಾವಿತ್ರೀ ವೇದಮಾತಾ ಚ ಕಲಯಾ ಬ್ರಹ್ಮವಕ್ಷಸಿ ।
ಕಲಯಾ ಧರ್ಮಪತ್ನೀ ತ್ವಂ ನರನಾರಾಯಣಪ್ರಭೋಃ ॥ ೫೩ ॥

---

ವಿರಜಾದರ್ಪವಿನಾಶಿನಿಯೆಂದೂ, ಪದ್ಮವನದಲ್ಲಿ ಪದ್ಮಾವತಿಯೆಂದೂ, ಕೃಷ್ಣಸರೋವರದಲ್ಲಿ ಕೃಷ್ಣೆಯೆಂದೂ, ಕುಂಜಕುಟೀರದಲ್ಲಿ ಭದ್ರೆಯೆಂದೂ, ಕಾಮ್ಯಕವನದಲ್ಲಿ ಕಾಮ್ಯಳೆಂದೂ ಪ್ರಸಿದ್ಧಳಾಗಿರುವಳು.

೫೧-೫೨. ವೈಕುಂಠದಲ್ಲಿರುವಾಗ ಮಹಾಲಕ್ಷ್ಮಿಯೆಂದೂ, ನಾರಾಯಣನ ವಕ್ಷಃಸ್ಥಲದಲ್ಲಿರುವಾಗ ವಾಣಿ (ಸರಸ್ವತಿ) ಯೆಂದೂ, ಕ್ಷೀರಸಮುದ್ರದಿಂದ ಉದ್ಭವಿಸಿ ಸಿಂಧುಕನ್ಯೆಯೆಂದೂ, ಭೂಲೋಕದಲ್ಲಿ ಶ್ರೀಹರಿಯ ಪ್ರಿಯಳಾದ ಲಕ್ಷ್ಮಿಯೆಂದೂ ಖ್ಯಾತಿಪಡೆದಿರುವವಳೇ, ಸಕಲ ಸ್ವರ್ಗಗಳಲ್ಲೂ ದೇವತೆಗಳ ದುಃಖವಿನಾಶಿನಿಯಾದ ಸ್ವರ್ಗಲಕ್ಷ್ಮಿಯೆಂದೂ, ಅನಾದಿಯೂ, ವಿಷ್ಣುಮಾಯಾಸ್ವರೂಪಿಣಿಯೂ ಆದ ಆ ದೇವಿಯೇ ಶಂಕರನ ವಕ್ಷಃಸ್ಥಲದಲ್ಲಿರುವಾ[illegible] ಎಂದು ಹೆಸರುವಾಸಿಯಾಗಿರುವಳು.

೫೩. ಆ ರಾಧಾದೇವಿಯು ತನ್ನದೊಂದು ಕಲೆಯಿಂದ ಬ್ರಹ್ಮನ ವಕ್ಷಃಸ್ಥಲದಲ್ಲಿ ನೆಲೆಸಿ ವೇದಮಾತೆಯಾದ ಸಾವಿತ್ರಿಯೆಂದೂ, ಮತ್ತೊಂದು ಕಲೆಯಿಂದ ಧರ್ಮಪತ್ನಿಯೂ, (ನರನಾರಾಯಣರ ಮಾತೆಯೂ ಆದ) ಮೂರ್ತಿದೇವಿಯೆಂದೂ, ಹೆಸರಾಂತಿರುವಳು.

ಕಲಯಾ ತುಲಸೀ ತ್ವಂ ಚ ಗಂಗಾಭುವನಪಾವನೀ ।
ಲೋಮಕೂಪೋದ್ಭವಾ ಗೋಪ್ಯಃ ಕಲಾಂಶಾ ರೋಹಿಣೀಪತಿಃ ॥ ೫೪ ॥

ಕಲಾ ಕಲಾಂಶರೂಪಾ ಚ ಶತರೂಪಾ ಶಚೀ ದಿತಿಃ ।
ಅದಿತಿರ್ದೇವಮಾತಾ ಚ ತ್ವತ್ಕಲಾಂಶಾ ಹರಿಪ್ರಿಯಾ ॥ ೫೫ ॥

ದೇವ್ಯಶ್ಚ ಮುನಿಪತ್ನ್ಯಶ್ಚ ತ್ವತ್ಕಲಾ ಕಲಯಾ ಶುಭೇ ।
ಕೃಷ್ಣಭಕ್ತಿಂ ಕೃಷ್ಣದಾಸ್ಯಂ ದೇಹಿ ಮೇ ಕೃಷ್ಣಪೂಜಿತೇ ॥ ೫೬ ॥

ಏವಂ ಕೃತ್ವಾ ಪರೀಹಾರಂ ಸ್ತುತ್ವಾ ಚ ಕವಚಂ ಪಠೇತ್ ।
ಪುರಾ ಕೃತಂ ಸ್ತೋತ್ರಮೇತದ್ಭಕ್ತಿದಾಸ್ಯಪ್ರದಂ ಶುಭಂ ॥ ೫೭ ॥

---

೫೪. ಒಂದು ಕಲೆಯಿಂದ ತುಳಸಿಯೆಂದೂ, ಮತ್ತೊಂದರಿಂದ ಭುವನ ಪಾವನಿಯಾದ ಗಂಗೆಯೆಂದೂ, ಬೇರೊಂದು ಕಲಾಂಶದಿಂದ ರೋಹಿಣಿ, ರತಿ ಮುಂತಾಗಿಯೂ ಹೆಸರು ಪಡೆದಿರುವ ರಾಧಾದೇವಿಯು ಲೋಮಕೂಪಗಳಿಂದ ಅನೇಕ ಗೋಪಿಯರು ಉದ್ಭವಿಸಿದರು.

೫೫. ಶತರೂಪೆ, ಶಚಿ, ದಿತಿ, ಅದಿತಿ ಮುಂತಾದ ದೇವಿಯರು ಯಾರ ಕಲಾಂಶಸ್ವರೂಪರೋ ಆ ದೇವಿಯ ಕಲಾಂಶದಿಂದಲೇ ಶ್ರೀಹರಿಯ ಪ್ರಿಯಳಾದ ಲಕ್ಷ್ಮಿಯೂ ಅವತರಿಸಿದಳು.

೫೬. ಈ ರೀತಿಯಾಗಿ ವಿಶ್ವವ್ಯಾಪಿನಿಯಾದ ಎಲೌ ರಾಧಾದೇವಿಯೇ, ಎಲ್ಲ ದೇವಿಯರೂ, ಋಷಿಪತ್ನಿಯರೂ ನಿನ್ನ ಕಲಾಂಶಸಂಭೂತರೇ ಆಗಿರುವರು. ಶ್ರೀಕೃಷ್ಣ ನಿಂದ ಪೂಜೆಗೊಂಡ ಎಲೌ ರಾಧಾದೇವಿಯೇ, ನನಗೆ ಶ್ರೀಕೃಷ್ಣಭಕ್ತಿಯನ್ನೂ, ಶ್ರೀಕೃಷ್ಣನ ಸೇವೆಯನ್ನೂ ಕರುಣಿಸು.

೫೭. ಈ ರೀತಿ ಭಕ್ತಿಪೂರ್ವಕವಾಗಿ ಸ್ತುತಿಸಿ, ರಾಧಾಕವಚವನ್ನು ಪಠಿಸ ಬೇಕು. ಪೂರ್ವದಲ್ಲಿ ರಚಿತವಾದ ಈ ರಾಧಾಸ್ತೋತ್ರವು ಶ್ರೀಕೃಷ್ಣನ ಭಕ್ತಿದಾಸ್ಯ ಗಳನ್ನು ಕೊಟ್ಟು ಶುಭಪ್ರದವಾಗಿದೆ.

ಏವಂ ನಿತ್ಯಂ ಪೂಜಯೇದ್ಯೋ ವಿಷ್ಣುತುಲ್ಯಃ ಸ ಭಾರತೇ ।
ಜೀವನ್ಮುಕ್ತಶ್ಚ ಪೂತಶ್ಚ ಗೋಲೋಕಂ ಯಾತಿ ನಿಶ್ಚಿತಂ ॥ ೫೮ ॥

ಕಾರ್ತಿಕೀಪೂರ್ಣಿಮಾಯಾಂ ಚ ರಾಧಾಂ ಯಃ ಪೂಜಯೇಚ್ಛಿವೇ ।
ಏವಂ ಕ್ರಮೇಣ ಪ್ರತ್ಯಬ್ದಂ ರಾಜಸೂಯಫಲಂ ಲಭೇತ್ ॥ ೫೯ ॥

ಪರಮೈಶ್ವರ್ಯಯುಕ್ತಸ್ಸ್ಯಾದಿಹಲೋಕೇ ಸುಪುಣ್ಯವಾನ್ ।
ಸರ್ವಪಾಪಾದ್ವಿನಿರ್ಮುಕ್ತೋ ಯಾತ್ಯಂತೇ ವಿಷ್ಣುಮಂದಿರಂ ॥ ೬೦ ॥

ಆದಾವೇವಂ ಕ್ರಮೇಣೈವ ರಾಸೇ ವೃಂದಾವನೇ ವನೇ ।
ಸ್ತುತಾ ಸಾ ಪೂಜಿತಾ ರಾಧಾ ಶ್ರೀಕೃಷ್ಣೇನ ಪುರಾ ಸತೀ ॥ ೬೧ ॥

ಸಂಪೂಜಿತಾ ದ್ವಿತೀಯೇ ಚ ಧಾತ್ರಾ ತ್ವೇವಂ ಕ್ರಮೇಣ ಚ ।
ತದ್ವರೇಣ ಚ ಸಂಪ್ರಾಪ್ಯ ವಿಧಾತಾ ವೇದಮಾತರಂ ॥ ೬೨ ॥

---

೫೮. ಇಂತು ನಿತ್ಯವೂ ಭರತಖಂಡದಲ್ಲಿರುವವರು ರಾಧಾದೇವಿಯನ್ನು ಪೂಜಿಸಿದರೆ ವಿಷ್ಣುಸದೃಶರಾಗವರು. ಅಲ್ಲದೆ ಪವಿತ್ರರೂ, ಜೀವನ್ಮುಕ್ತರೂ ಆಗಿ ನಿಶ್ಚಿತವಾಗಿಯೂ ಗೋಲೋಕಕ್ಕೆ ಹೋಗಿ ಸೇರುವರು.

೫೯. ಎಲೌ ಮಂಗಳಾಂಗಿಯೇ, ಯಾರು ರಾಧಾದೇವಿಯನ್ನು ಕಾರ್ತಿಕ ಮಾಸದ ಪೂರ್ಣಿಮಾ ದಿವಸ ಪ್ರತಿವರ್ಷವೂ ಕ್ರಮವಾಗಿ ಪೂಜಿಸುವರೋ ಅವರು ರಾಜಸೂಯಯಾಗದ ಫಲವನ್ನು ಹೊಂದುವರು

೬೦. ಆ ಪುಣ್ಯವಂತನು ಇಹಲೋಕದಲ್ಲಿರುವವರೆಗೆ ಸಂಪತ್ಸಮೃದ್ಧಿಯೊಡಗೂಡಿ ಬಾಳಿ, ಕೊನೆಯಲ್ಲಿ ಸಕಲ ಪಾಪನಿರ್ಮುಕ್ತನಾಗಿ ವಿಷ್ಣುಲೋಕಕ್ಕೆ ತೆರಳುವನು.

೬೧ ಮೊಟ್ಟಮೊದಲು ರಾಸಮಂಡಲದ ಬೃಂದಾವನದಲ್ಲಿ ರಾಧಾದೇವಿಯು ಇದೇ ಕ್ರಮದಲ್ಲಿ ಶ್ರೀಕೃಷ್ಣನಿಂದ ಪೂಜಿತಳಾದಳು.

೬೨. ಅನಂತರ ಬ್ರಹ್ಮನು ಇದೇ ಕ್ರಮದಲ್ಲಿ ರಾಧೆಯನ್ನು ಪೂಜಿಸಿ ಆಕೆಯ ವರದಿಂದ ವೇದಮಾತೆಯಾದ ಸಾವಿತ್ರೀದೇವಿಯನ್ನು ಪಡೆದನು.

ನಾರಾಯಣೋ ಮಹಾಲಕ್ಷ್ಮೀಂ ಪ್ರಾಪ ಸಂಪೂಜ್ಯ ಭಾರತೀಂ ।
ಗಂಗಾಂ ಚ ತುಲಸೀಂ ಚೈವ ಪರಾಂ ಭುವನಪಾವನೀಂ ॥ ೬೩ ॥

ವಿಷ್ಣುಃ ಕ್ಷೀರೋದಶಾಯೀ ಚ ಪ್ರಾಪ ಸಿಂಧುಸುತಾಂ ತಥಾ ।
ಮೃತಾಯಾಂ ದಕ್ಷಕನ್ಯಾಯಾಂ ಮಯಾ ಕೃಷ್ಣಾಜ್ಞಯಾ ಪುರಾ ॥ ೬೪ ॥

ತ್ವಮೇವ ದುರ್ಗಾ ಸಂಪ್ರಾಪ್ತಾ ಪೂಜಿತಾ ಪುಷ್ಕರೇ ಚ ಸಾ ।
ಅದಿತಿಂ ಕಶ್ಯಪಃ ಪ್ರಾಪ ಚಂದ್ರಃ ಸಂಪ್ರಾಪ ರೋಹಿಣೀಂ ॥ ೬೫ ॥

ಕಾಮೋ ರತಿಂ ಚ ಸಂಪ್ರಾಪ ಧರ್ಮೋ ಮೂರ್ತಿಂ ಪತಿವ್ರತಾಂ ।
ದೇವಾಶ್ಚ ಮುನಯಶ್ಚೈವ ಯಾಂ ಸಂಪೂಜ್ಯ ಪ್ರತಿವ್ರತಾಂ ॥ ೬೬ ॥

ಸಂಪ್ರಾಪುರ್ಯದ್ವರೇಣೈವ ಧರ್ಮಕಾಮಾರ್ಥಮೋಕ್ಷಕಂ ।
ಏವಂ ಪೂಜಾವಿಧಾನಂ ಚ ಕಥಿತಂ ಚ ಸ್ತವಂ ಶ್ರುಣು ॥ ೬೭ ॥

---

೬೩. ನಾರಾಯಣನೂ ಕೂಡ ರಾಧಾದೇವಿಯನ್ನು ಪೂಜಿಸಿ, ಮಹಾಲಕ್ಷ್ಮಿ ಸರಸ್ವತಿಯರನ್ನೂ ಭುವನಪಾವನೆಯಾದ ಗಂಗಾ ಮತ್ತು ತುಳಸೀದೇವಿಯರನ್ನೂ ಅವಳ ಅನುಗ್ರಹದಿಂದ ಪಡೆದನು.

೬೪. ಕ್ಷೀರಸಾಗರದಲ್ಲಿ ಮಲಗಿರುವ ಮಹಾವಿಷ್ಣುವೂ ಕೂಡ ರಾಧಾದೇವಿಯ ಅನುಗ್ರಹದಿಂದಲೇ ಸಿಂಧುಕನ್ಯೆಯನ್ನು ಪಡೆದನು.

೬೫. ಹಿಂದೆ ದಕ್ಷಪುತ್ರಿಯಾದ ದಾಕ್ಷಾಯಣಿಯು ದೇಹತ್ಯಾಗವಮಾಡಿದಾಗ, ನಾನೂ ಕೂಡ ಶ್ರೀಕೃಷ್ಣನ ಆಜ್ಞೆಯಂತೆ ಪುಷ್ಕರಕ್ಷೇತ್ರದಲ್ಲಿ ರಾಧಾದೇವಿಯನ್ನು ಪೂಜಿಸಿ ದುರ್ಗಾರೂಪಳಾದ ನಿನ್ನನ್ನು ಪಡೆದೆ. ಅಂತೆಯೇ ಕಶ್ಯಪನು ಅದಿತಿಯನ್ನೂ, ಚಂದ್ರನು ರೋಹಿಣಿಯನ್ನೂ ಆಕೆಯ ವರದಿಂದ ಪಡೆದರು.

೬೬–೬೭. ಪತಿವ್ರತೆಯಾದ ರಾಧಾದೇವಿಯ ಅನುಗ್ರಹದಿಂದಲೇ ಮನ್ಮಥನು ರತಿದೇವಿಯನ್ನೂ, ಧರ್ಮದೇವನು ಮೂರ್ತಿದೇವಿಯನ್ನೂ, ದೇವತೆಗಳು ಮತ್ತು ಮುನಿಗಳು ಧರ್ಮಾರ್ಥಕಾಮಮೋಕ್ಷಗಳನ್ನೂ ಪಡೆದರು. ಈ ರೀತಿಯಾಗಿ ರಾಧಾದೇವಿಯ ಪೂಜಾಕ್ರಮವನ್ನು ವಿವರಿಸಿದೆನು. ಈಗ ಸ್ತೋತ್ರಕ್ರಮವನ್ನು ಹೇಳುವೆನು ಕೇಳು.

|| ಶ್ರೀ ಮಹೇಶ್ವರ ಉವಾಚ ||

ಏಕದಾ ಮಾನಿನೀ ರಾಧಾ ಬಭೂವಾಗೋಚರಾ ಪ್ರಭೋಃ |
ಸಂಸಕ್ತಸ್ಯ ತುಲಸ್ಯಾಂ ಚ ಗೋಪ್ಯಾಂ ಚ ತುಲಸೀವನೇ || ೧೮ ||

ಸಾ ಸಂಹೃತ್ಯ ಸ್ವಮೂರ್ತೀಶ್ಚ ಕಲಾಃ ಸರ್ವಾಶ್ಚ ಲೀಲಯಾ |
ಸರ್ವೇ ಬಭೂವುರ್ದೇವಾಶ್ಚ ಬ್ರಹ್ಮವಿಷ್ಣುಶಿವಾದಯಃ || ೧೯ ||

ಭ್ರಷ್ಟೈಶ್ವರ್ಯಾಶ್ಚ ನಿಶ್ರೀಕಾ ಭಾರ್ಯಾಹೀನಾ ಹ್ಯುಪದ್ರುತಾಃ |
ತೇ ಚ ಸರ್ವೇ ಸಮಾಲೋಚ್ಯ ಶ್ರೀಕೃಷ್ಣಂ ಶರಣಂ ಯಯುಃ || ೨೦ ||

ತೇಷಾಂ ಸ್ತೋತ್ರೇಣ ಸಂತುಷ್ಟಃ ಸ್ನಾತ್ವಾ ಸಂಪೂಜ್ಯ ತಾಂ ಶುಚಿಃ |
ತುಷ್ಟಾವ ಪರಮಾತ್ಮಾ ಸ ಸರ್ವೇಷಾಂ ರಾಧಿಕಾಂ ಸತೀಂ || ೨೧ ||

---

೧೮. ಶ್ರೀಮಹೇಶ್ವರ:—ಒಮ್ಮೆ ತುಳಸೀವನದಲ್ಲಿ ತುಳಸಿಯೆಂಬ ಗೋಪಿಯಲ್ಲಿ ಆಸಕ್ತನಾದ ಶ್ರೀಕೃಷ್ಣನಲ್ಲಿ ಕುಪಿತಳಾಗಿ ಮಾನವತಿಯಾದ ರಾಧೆಯು ಕಣ್ಮರೆಯಾದಳು.

೧೯-೨೦. ತಾನು ಮಾತ್ರವಲ್ಲದೆ, ತನಗೆ ಅಭಿನ್ನರೂ ಮತ್ತು ಕಲಾಂಶ ಸಂಭೂತೆಯರೂ ಆದ ಸಕಲ ದೇವಿಯರನ್ನೂ ತನ್ನಲ್ಲಿಯೇ ಉಪಸಂಹಾರ ಮಾಡಿಕೊಂಡು ರಾಧಾದೇವಿಯು ಅಂತರ್ಧಾನಳಾಗಲು, ಬ್ರಹ್ಮ, ವಿಷ್ಣು, ಶಿವಾದಿ ಸಕಲ ದೇವತೆಗಳೂ, ಪತ್ನೀರಹಿತರೂ, ಸಂಪದ್ವಿಹೀನರೂ, ಅಧಿಕಾರಭ್ರಷ್ಟರೂ ಆಗಿ ಪೀಡೆಗೊಳಗಾದರು. ಆಗ ಅವರೆಲ್ಲರೂ ಪರ್ಯಾಲೋಚಿಸಿ ಶ್ರೀಕೃಷ್ಣನ ಮರೆಹೊಕ್ಕರು.

೨೧. ಆ ದೇವತೆಗಳ ಸ್ತೋತ್ರಕ್ಕೆ ಪ್ರೀತನಾದ ಶ್ರೀಕೃಷ್ಣಪರಮಾತ್ಮನು ಸ್ನಾನದಿಂದ ಶುಚಿಹೊಂದಿ ಎಲ್ಲರ ಹಿತಕ್ಕಾಗಿ ಪತಿವ್ರತೆಯಾದ ರಾಧಾದೇವಿಯನ್ನು ಪೂಜಿಸಿದನು.

॥ ಶ್ರೀಕೃಷ್ಣ ಉವಾಚ ॥

ಏವಮೇವ ಪ್ರಿಯೋಽಹಂ ತೇ ಪ್ರಮೋದಶ್ಚೈವ ತೇ ಮಯಿ।
ಸುವ್ಯಕ್ತಮದ್ಯ ಕಾಪಟ್ಯವಚನಂ ತೇ ವರಾನನೇ ॥ ೭೨ ॥

ಹೇ ಕೃಷ್ಣ ತ್ವಂ ಮಮಪ್ರಾಣಾ ಜೀವಾತ್ಮೇತಿ ಚ ಸಂತತಂ।
ಯದ್ಬ್ರೂಹಿ ನಿತ್ಯಂ ಪ್ರೇಮ್ಣಾ ತ್ವಂ ಸಾಂಪ್ರತಂ ತದ್ಗತಂ ದ್ರುತಂ ॥ ೭೩ ॥

ತಸ್ಮಾತ್ಸರ್ವಮಲೀಕಂ ತೇ ವಚನಂ ಜಗದಂಬಿಕೇ।
ಕ್ಷುರಧಾರಂ ಚ ಹೃದಯಂ ಸ್ತ್ರೀಜಾತೀನಾಂ ಚ ಸರ್ವತಃ ॥ ೭೪ ॥

ಅಸ್ಮಾಕಂ ವಚನಂ ಸತ್ಯಂ ಯದ್ಬ್ರವೀಮಿ ಚ ತದ್ಧ್ರುವಂ।
ಪಂಚಪ್ರಾಣಾಧಿದೇವೀ ತ್ವಂ ರಾಧಾ ಪ್ರಾಣಾಧಿಕೇತಿ ಮೇ ॥ ೭೫ ॥

---

೭೨. ಶ್ರೀಕೃಷ್ಣ:—ಎಲೌ ಸುಂದರಿಯೇ, 'ನೀನು ನನ್ನ ಪ್ರೀತಿಗೆ ಪಾತ್ರನು ನಿನ್ನಿಂದಲೇ ನನಗೆ ಸಂತೋಷವುಂಟಾಗುವುದು' ಎಂದಾಡುತ್ತಿದ್ದ ನಿನ್ನ ಮಾತು ಕಪಟವಾದುದೆಂದು ಇಂದು ನನಗೆ ವ್ಯಕ್ತವಾಯಿತು.

೭೩. 'ಎಲೈ ಕೃಷ್ಣನೇ ನೀನೇ ನನ್ನ ಪಂಚಪ್ರಾಣಸ್ವರೂಪನು, ನನ್ನ ಜೀವಾತ್ಮನೇ ನೀನು' ಎಂದು ನಿತ್ಯವೂ ಪ್ರೇಮಪೂರಿತವಾಗಿ ನೀನಾಡುತ್ತಿದ್ದ ಮಾತುಗಳು ಈಗ ಎಲ್ಲಿಯೋ ದೂರವಾದವು.

೭೪. ಆದುದರಿಂದ ಎಲೌ ಜಗದಂಬಿಕೆಯೇ, ನೀನಾಡಿದ ಮಾತುಗಳೆಲ್ಲವೂ ಸುಳ್ಳಾದವು. ಎಲ್ಲಿ ನೋಡಿದರೂ ಸ್ತ್ರೀಯರ ಮಾತು ಮಧುರವಾಗಿದ್ದರೂ, ಹೃದಯವು ಕತ್ತಿಯ ಅಲುಗಿನಂತೆ ಕ್ರೂರವಾದುದು.

೭೫. 'ಎಲೌ ರಾಧೆಯೇ, ನೀನು ನನ್ನ ಪಂಚಪ್ರಾಣಗಳಿಗೆ ಅಧಿದೇವಿಯು, ನನ್ನ ಪ್ರಾಣಕ್ಕಿಂತಲೂ ನೀನು ಹೆಚ್ಚು ಪ್ರೀತಿಪಾತ್ರಳು' ಎಂದು ನಾನಾಡುವ ಮಾತಾದರೋ ಎಂದೆಂದಿಗೂ ಸತ್ಯವಾದುದು.

**ಶಕ್ತೋ ನ ರಕ್ಷಿತುಂ ತ್ವಾಂ ಚ ಯಾಂತಿ ಪ್ರಾಣಾಸ್ತ್ವಯಾ ವಿನಾ ।**
**ವಿನಾಧಿಷ್ಠಾತೃದೇವೀಂ ಚ ಕೋ ವಾ ಕುತ್ರ ಚ ಜೀವತಿ ॥ ೭೬ ॥**

**ಮಹಾವಿಷ್ಣೋಶ್ಚ ಮಾತಾ ತ್ವಂ ಮೂಲಪ್ರಕೃತಿರೀಶ್ವರೀ ।**
**ಸುಗುಣಾ ತ್ವಂ ಚ ಕಲಯಾ ನಿರ್ಗುಣಾ ಸ್ವಯಮೇವ ತು ॥ ೭೭ ॥**

**ಜ್ಯೋತೀರೂಪಾ ನಿರಾಕಾರಾ ಭಕ್ತಾನುಗ್ರಹವಿಗ್ರಹಾ ।**
**ಭಕ್ತಾನಾಂ ರುಚಿವೈಚಿತ್ರ್ಯಾನ್ನಾನಾಮೂರ್ತೀಶ್ಚ ಬಿಭ್ರತೀ ॥ ೭೮ ॥**

**ಮಹಾಲಕ್ಷ್ಮೀಶ್ಚ ವೈಕುಂಠೇ ಭಾರತೀ ಚ ಸತಾಂ ಪ್ರಸೂಃ ।**
**ಪುಣ್ಯಕ್ಷೇತ್ರೇ ಭಾರತೇ ಚ ಸತೀ ತ್ವಂ ಪಾರ್ವತೀ ತಥಾ ॥ ೭೯ ॥**

---

೭೬. ನಿನ್ನನ್ನು ರಕ್ಷಿಸಿಕೊಳ್ಳಲು ನಾನು ಅಶಕ್ತನಾದೆನು. ನೀನಿಲ್ಲದೆ ನನ್ನ ಪ್ರಾಣಗಳೆಲ್ಲವೂ ಹೋಗುತ್ತಿವೆ. ಪ್ರಾಣಾಧಿಷ್ಠಾತೃದೇವತೆಯಿಲ್ಲದೆ ನನ್ನಂಥವರು ಹೇಗೆತಾನೆ ಜೀವಿಸಿಯಾರು?

೭೭. ಮಹಾವಿಷ್ಣುವಿನ ಮಾತೆಯಾದ ನೀನು ಮೂಲಪ್ರಕೃತಿಯೆಂದೂ, ಈಶ್ವರೀಯೆಂದೂ ಖ್ಯಾತಳಾಗಿರುವೆ. ಸ್ವತಃ ನಿರ್ಗುಣಳಾದ ನೀನು ನಿನ್ನದೇ ಒಂದು ಕಲೆಯಿಂದ ಸಗುಣಳಾಗಿರುವೆ.

೭೮. ಜ್ಯೋತಿಃಸ್ವರೂಪಳೂ, ನಿರಾಕಾರಳೂ ಆದ ನೀನು ಭಕ್ತಾನುಗ್ರಹಕ್ಕಾಗಿ ಶರೀರಧಾರಣೆಮಾಡಿ, ಭಕ್ತರ ವಿವಿದೇಚ್ಛಾನುಸಾರವಾಗಿ ನಾನಾಪ್ರಕಾರವಾದ ಆಕಾರವನ್ನು ಧರಿಸಿರುವೆ.

೭೯. ವೈಕುಂಠದಲ್ಲಿ ಮಹಾಲಕ್ಷ್ಮಿಯೂ, ಸತ್ಪುರುಷರ ಮಾತೆಯಾದ ಸರಸ್ವತಿಯೂ ಆಗಿರುವ ನೀನು ಪುಣ್ಯಕ್ಷೇತ್ರವಾದ ಭಾರತದಲ್ಲಿ ಪರ್ವತರಾಜನ ಮಗಳಾಗಿ ಪತಿವ್ರತೆಯಾದ ಪಾರ್ವತಿಯೆನಿಸುವೆ.

ತುಲಸೀ ಪುಣ್ಯರೂಪಾ ಚ ಗಂಗಾ ಭುವನಪಾವನೀ ।
ಬ್ರಹ್ಮಲೋಕೇ ಚ ಸಾವಿತ್ರೀ ಕಲಯಾ ತ್ವಂ ವಸುಂಧರಾ ॥ ೮೦ ॥

ಗೋಲೋಕೇ ರಾಧಿಕಾ ತ್ವಂ ಚ ಸರ್ವಗೋಪಾಲಕೇಶ್ವರೀ ।
ತ್ವಯಾ ವಿನಾಹಂ ನಿರ್ಜೀವೋ ಹ್ಯಶಕ್ತಃ ಸರ್ವಕರ್ಮಸು ॥ ೮೧ ॥

ಶಿವಶ್ಶಕ್ತಸ್ತ್ವಯಾ ಶಕ್ತ್ಯಾ ಶವಾಕಾರಸ್ತ್ವಯಾ ವಿನಾ ।
ವೇದಕರ್ತಾ ಸ್ವಯಂ ಬ್ರಹ್ಮಾ ವೇದಮಾತ್ರಾ ತ್ವಯಾ ಸಹ ॥ ೮೨ ॥

ನಾರಾಯಣಸ್ತ್ವಯಾ ಲಕ್ಷ್ಮ್ಯಾ ಜಗತ್ಪಾತಾ ಜಗತ್ಪತಿಃ ।
ಫಲಂ ದದಾತಿ ಯಜ್ಞಶ್ಚ ತ್ವಯಾ ದಕ್ಷಿಣಯಾ ಸಹ ॥ ೮೩ ॥

---

೮೦. ನಿನ್ನ ಕಲೆಯಿಂದ:ನೀನು ಬೃಂದಾವನದಲ್ಲಿ ಪುಣ್ಯಸ್ವರೂಪಳಾದ ತುಳಸಿಯೂ, ಭರತಖಂಡದಲ್ಲಿ ಭುವನಪಾವನೆಯಾದ ಗಂಗೆಯೂ, ಬ್ರಹ್ಮಲೋಕದಲ್ಲಿ ಸಾವಿತ್ರಿಯೂ, ಭೂಮಿಯಲ್ಲಿ ವಸುಂಧರೆಯೂ ಎನಿಸಿರುವೆ.

೮೧. ಗೋಲೋಕದಲ್ಲಿ ಸಕಲ ಗೋಪಾಲರಿಗೂ ಒಡತಿಯೆನಿಸಿದ ಎಲೌ ರಾಧಾದೇವಿಯೇ, ನಿನ್ನನ್ನಗಲಿದ ನಾನು ನಿರ್ಜೀವನಂತಾಗಿ ಎಲ್ಲ ಕಾರ್ಯಗಳಲ್ಲೂ ಅಶಕ್ತನಾಗಿದ್ದೇನೆ.

೮೨. ಶಕ್ತಿರೂಪಿಣಿಯಾದ ನಿನ್ನಿಂದಲೇ ಶಿವನು ಸ್ವಕಾರ್ಯದಲ್ಲಿ ಶಕ್ತನಾಗಿರುವನು. ನೀನಿಲ್ಲದಿದ್ದರೆ ಶಿವನು ಶವಸ್ವರೂಪನಾಗುವನು. ವೇದಮಾತೆಯಾದ ಸಾವಿತ್ರರೂಪದಿಂದಿರುವ ನಿನ್ನಿಂದಲೇ ಬ್ರಹ್ಮನು ವೇದಕರ್ತೃವೆನಿಸಿಕೊಂಡಿರುವನು.

೮೩. ಜಗತ್ಪತಿಯಾದ ನಾರಾಯಣನು ಲಕ್ಷ್ಮೀಸ್ವರೂಪಿಣಿಯಾದ ನಿನ್ನಿಂದಲೇ ಜಗತ್ಪಾಲಕನಾಗಿರುವನು. ದಕ್ಷಿಣಾಸ್ವರೂಪಿಣಿಯಾದ ನಿನ್ನಿಂದಲೇ ಯಜ್ಞಪುರುಷನು ಫಲದಾಯಕನಾಗಿರುವನು.

**ಬಿಭರ್ತಿ ಸೃಷ್ಟಿಂ ಶೇಷಶ್ಚ ತ್ವಾಂ ಕೃತ್ವಾ ಮಸ್ತಕೇ ಭುವಂ |**
**ಬಿಭರ್ತಿ ಗಂಗಾರೂಪಾಂ ತ್ವಾಂ ಮೂರ್ಧ್ನಿ ಗಂಗಾಧರಃ ಶಿವಃ || ೮೪ ||**

**ಶಕ್ತಿಮಚ್ಚ ಜಗತ್ಸರ್ವಂ ಶವರೂಪಂ ತ್ವಯಾ ವಿನಾ |**
**ವಕ್ತಾ ಸರ್ವಸ್ತ್ವಯಾ ವಾಣ್ಯಾ ಸೂತೋ ಮೂಕಸ್ತ್ವಯಾ ವಿನಾ || ೮೫ ||**

**ಯಥಾ ಮೃದಾ ಘಟಂ ಕರ್ತುಂ ಕುಲಾಲಃ ಶಕ್ತಿಮಾನ್ಸದಾ |**
**ಸ್ರಷ್ಟಾ ಸ್ರಷ್ಟುಂ ತಥಾಹಂ ಚ ಪ್ರಕೃತ್ಯಾ ಚ ತ್ವಯಾ ಸಹ || ೮೬ ||**

**ತ್ವಯಾ ವಿನಾ ಜಡಶ್ಚಾಹಂ ಸರ್ವತ್ರ ಚ ನ ಶಕ್ತಿಮಾನ್ |**
**ಸರ್ವಶಕ್ತಿಸ್ವರೂಪಾ ತ್ವಂ ತ್ವಮಾಗಚ್ಛ ಮಮಾಂತಿಕಂ || ೮೭ ||**

---

೮೪. ವಸುಂಧರಾರೂಪಿಣಿಯಾದ ನಿನ್ನನ್ನೇ ತಲೆಯ ಮೇಲಿಟ್ಟುಕೊಂಡು ಆದಿಶೇಷನು ಸಕಲ ಸೃಷ್ಟಿಯನ್ನೂ ಹೊತ್ತಿರುವನು. ಗಂಗಾಸ್ವರೂಪಿಣಿಯಾದ ನಿನ್ನನ್ನು ತಲೆಯಮೇಲೆ ಧರಿಸಿ ಶಿವನು ಗಂಗಾಧರನೆನಿಸಿರುವನು.

೮೫. ಸಕಲ ಜಗತ್ತೂ ನಿನ್ನಿಂದಲೇ ಶಕ್ತಿಯುತವಾಗಿರುವುದು. ನೀನಿಲ್ಲದಿದ್ದರೆ ಶವಸದೃಶವಾಗುವುದು. ವಾಣಿಸ್ವರೂಪಿಣಿಯಾದ ನಿನ್ನಿಂದಲೇ ಸರ್ವರೂ ವಾಚಾಳಿಗಳಾಗಿರುವರು. ನೀನಿಲ್ಲದಿದ್ದರೆ ವಾಚಾಳಿಯೂ ಮೂಕನಾಗುವನು.

೮೬. ಕುಂಬಾರನು ಮಣ್ಣಿನಿಂದ ಗಡಿಗೆಯನ್ನು ಮಾಡಲು ಹೇಗೆ ಸರ್ವದಾ ಶಕ್ತನಾಗಿರುವನೋ, ಹಾಗೆ ಪ್ರಕೃತಿಯಾದ ನಿನ್ನಿಂದ ನಾನು ಮತ್ತು ಬ್ರಹ್ಮನು ಸೃಷ್ಟಿಮಾಡಲು ಶಕ್ತರಾಗಿರುವೆವು.

೮೭. ನೀನಿಲ್ಲದಿದ್ದರೆ ನಾನು ಜಡಸ್ವರೂಪನಾಗಿ ಯಾವ ಕಾರ್ಯವಲ್ಲೂ ಶಕ್ತಿರಹಿತನಾಗುವೆನು. ಆದುದರಿಂದ ಸರ್ವಶಕ್ತಿಸ್ವರೂಪಳಾದ ನೀನು ನನ್ನ ಸಮೀಪಕ್ಕೆ ಬೇಗ ಬಾ.

ವಹ್ನೌ ತ್ವಂ ದಾಹಿಕಾಶಕ್ತಿರ್ನಾಗ್ನಿಶ್ಶಕ್ತಸ್ತ್ವಯಾ ವಿನಾ ।
ಶೋಭಾ ಸ್ವರೂಪಾ ಚಂದ್ರೇ ತ್ವಂ ತ್ವಾಂ ವಿನಾ ನ ಸ ಸುಂದರಃ ॥ ೮೮ ॥

ಪ್ರಭಾರೂಪಾ ಹಿ ಸೂರ್ಯೇ ತ್ವಂ ತ್ವಾಂ ವಿನಾ ನ ಸ ಭಾನುಮಾನ್ ।
ನ ಕಾಮಃ ಕಾಮಿನೀಬಂಧುಸ್ತ್ವಯಾ ರತ್ಯಾ ವಿನಾ ಪ್ರಿಯೇ ॥ ೮೯ ॥

ಇತ್ಯೇವಂ ಸ್ತವನಂ ಕೃತ್ವಾ ತಾಂ ಸಂಪ್ರಾಪ ಜಗತ್ಪ್ರಭುಃ ।
ದೇವಾ ಬಭೂವುಃ ಸಶ್ರೀಕಾಃ ಸಭಾರ್ಯಾಃ ಶಕ್ತಿಸಂಯುತಾಃ ॥ ೯೦ ॥

ಸಸ್ತ್ರೀಕಂ ಚ ಜಗತ್ಸರ್ವಂ ಸಮಭೂಚ್ಛೈಲಕನ್ಯಕೇ ।
ಗೋಪೀಪೂರ್ಣಶ್ಚ ಗೋಲೋಕೋ ಹ್ಯಭವತ್ತತ್ಪ್ರಸಾದತಃ ॥ ೯೧ ॥

---

೮೮. ಅಗ್ನಿಯಲ್ಲಿ ನೀನು ದಾಹಶಕ್ತಿಸ್ವರೂಪಿಣಿಯಾಗಿರುವೆ, ನೀನಿಲ್ಲದಿದ್ದರೆ ಅಗ್ನಿಯು ಯಾವುದನ್ನೂ ಸುಡಲು ಶಕ್ತವಾಗುತ್ತಿರಲಿಲ್ಲ. ಚಂದ್ರನಲ್ಲಿ ಶೋಭಾ ರೂಪಿಣಿಯಾಗಿ ನೀನಿರದಿದ್ದರೆ ಚಂದ್ರನು ಸುಂದರನೆನಿಸುತ್ತಿರಲಿಲ್ಲ.

೮೯. ಸೂರ್ಯನಲ್ಲಿ ತೇಜಃಸ್ವರೂಪಿಣಿಯಾಗಿ ನೀನಿರದಿದ್ದರೆ ಸೂರ್ಯನು ಭಾನುಮಂತನೆನಿಸುತ್ತಿರಲಿಲ್ಲ. ಎಲೌ ಪ್ರಿಯಳೇ, ರತಿರೂಪಿಣಿಯಾದ ನಿನ್ನನ್ನುಳಿದು ಮನ್ಮಥನು ಕಾಮಿನೀ ಬಂಧುವೆನಿಸುತ್ತಿರಲಿಲ್ಲ.

೯೦. ಜಗತ್ಪ್ರಭುವಾದ ಶ್ರೀಕೃಷ್ಣಪರಮಾತ್ಮನು ಈ ರೀತಿಯಾಗಿ ಸ್ತೋತ್ರ ಮಾಡಿ ಆ ರಾಧಾದೇವಿಯನ್ನು ಪ್ರತ್ಯಕ್ಷಮಾಡಿಕೊಂಡನು. ರಾಧೆಯು ಪ್ರಸನ್ನಳಾದ ಮೇಲೆ ದೇವತೆಗಳೆಲ್ಲರೂ, ಸಂಪದ್ಯುತರೂ, ಪತ್ನೀಯುತರೂ, ಶಕ್ತಿಯುತರೂ ಆದರು.

೯೧. ಎಲೌ ಶೈಲರಾಜಪುತ್ರಿಯೇ, ಆಗ ಜಗತ್ತೆಲ್ಲವೂ ಸ್ತ್ರೀಸಹಿತವಾಯಿತು. ಆ ರಾಧೆಯ ಅನುಗ್ರಹದಿಂದ ಗೋಲೋಕವೂ ಕೂಡ ಗೋಪಿಯರಿಂದ ಪರಿಪೂರ್ಣ ವಾಯಿತು.

ರಾಜಾ ಜಗಾಮ ಗೋಲೋಕಮಿತಿ ಸ್ತುತ್ವಾ ಹರಿಪ್ರಿಯಾಂ ।
ಶ್ರೀಕೃಷ್ಣೇನ ಕೃತಂ ಸ್ತೋತ್ರಂ ರಾಧಾಯಾ ಯಃ ಪಠೇನ್ನರಃ ॥ ೯೨ ॥

ಕೃಷ್ಣಭಕ್ತಿಂ ಚ ತದ್ದಾಸ್ಯಂ ಸಂಪ್ರಾಪ್ನೋತಿ ನ ಸಂಶಯಃ ।
ಸ್ತ್ರೀವಿಚ್ಛೇದೇ ಯಚ್ಛೃಣೋತಿ ಮಾಸಮೇಕಮಿದಂ ಶುಚಿಃ ॥ ೯೩ ॥

ಅಚಿರಾಲ್ಲಭತೇ ಭಾರ್ಯಾಂ ಸುಶೀಲಾಂ ಸುಂದರೀಂ ಸತೀಂ ।
ಭಾರ್ಯಾಹೀನೋ ಭಾಗ್ಯಹೀನೋ ವರ್ಷಮೇಕಂ ಶೃಣೋತಿ ಯಃ ॥ ೯೪ ॥

ಅಚಿರಾಲ್ಲಭತೇ ಭಾರ್ಯಾಂ ಸುಶೀಲಾಂ ಸುಂದರೀಂ ಸತೀಂ ।
ಪುರಾ ಮಯಾ ಚ ತ್ವಂ ಪ್ರಾಪ್ತಾ ಸ್ತೋತ್ರೇಣಾನೇನ ಪಾರ್ವತಿ ॥ ೯೫ ॥

---

೯೨. ಈ ರೀತಿಯಾಗಿ ಶ್ರೀಹರಿಯ ಪ್ರಿಯಳಾದ ರಾಧೆಯನ್ನು ಸ್ತುತಿಸಿ, ಆ ಸುಯಜ್ಞಮಹಾರಾಜನು ಗೋಲೋಕಕ್ಕೆ ತೆರಳಿದನು. ಶ್ರೀಕೃಷ್ಣನು ಮಾಡಿದ ರಾಧಾಸ್ತೋತ್ರವನ್ನು ಪಠನೆಮಾಡುವ ಮನುಷ್ಯನು ಶ್ರೀಕೃಷ್ಣಭಕ್ತಿಯನ್ನೂ, ಸೇವೆಯನ್ನೂ ನಿಶ್ಚಯವಾಗಿಯೂ ಹೊಂದುವನು.

೯೩. ಪತ್ನಿಯ ವಿಯೋಗವಾದಾಗ ಈ ಸ್ತೋತ್ರವನ್ನು ಒಂದು ತಿಂಗಳು ಶುಚಿರ್ಭೂತನಾಗಿ ಕೇಳುವುದರಿಂದ, ಪತಿವ್ರತೆಯೂ, ಸುಶೀಲೆಯೂ ಮತ್ತು ಸುಂದರಿಯೂ ಆದ ಪತ್ನಿಯನ್ನು ಪುನಃ ಪಡೆಯುವನು.

೯೪. ಪತ್ನಿಯಿಲ್ಲದವನೂ, ಭಾಗ್ಯರಹಿತನೂ ಒಂದು ವರ್ಷ ಈ ಸ್ತೋತ್ರವನ್ನು ಕೇಳಿದರೆ ಬಹಳ ಜಾಗ್ರತೆಯಾಗಿ ಸುಶೀಲೆಯೂ, ಸುಂದರಿಯೂ ಮತ್ತು ಪತಿವ್ರತೆಯೂ ಆದ ಪತ್ನಿಯನ್ನು ಪಡೆಯುವನು.

೯೫. ಎಲೌ ಪಾರ್ವತಿಯೇ, ದಕ್ಷಕನ್ಯೆಯಾಗಿದ್ದ ನೀನು ಮೃತಳಾದನಂತರ, ಪರಮಾತ್ಮನ ಅಪ್ಪಣೆಯಂತೆ ನಾನು ಈ ಸ್ತೋತ್ರವನ್ನು ಪಠಿಸಿದುದರಿಂದಲೇ ಪುನಃ ನೀನು ನನಗೆ ಲಭಿಸಿದೆ.

ಮೃತಾಯಾಂ ದಕ್ಷಕನ್ಯಾಯಾಮಾಜ್ಞಯಾ ಪಿತೃಮಾತ್ಮನಃ ।
ಸ್ತೋತ್ರೇಣಾನೇನ ಸಂಪ್ರಾಪ್ತಾ ಸಾವಿತ್ರೀ ಬ್ರಹ್ಮಣಾ ಪುರಾ ॥ ೯೬ ॥

ಪುರಾ ದುರ್ವಾಸಸಃ ಶಾಪಾನ್ನಿಶ್ರೀಕೇ ದೇವತಾಗಣೇ ।
ಸ್ತೋತ್ರೇಣಾನೇನ ದೇವೈಸ್ತೈಃ ಸಂಪ್ರಾಪ್ತಾ ಶ್ರೀಃ ಸುದುರ್ಲಭಾ ॥ ೯೭ ॥

ಶೃಣೋತಿ ವರ್ಷಮೇಕಂ ಚ ಪುತ್ರಾರ್ಥೀ ಲಭತೇ ಸುತಂ ।
ಮಹಾವ್ಯಾಧೀ ರೋಗಮುಕ್ತೋ ಭವೇತ್ಸ್ತೋತ್ರಪ್ರಸಾದತಃ ॥ ೯೮ ॥

ಕಾರ್ತಿಕೀಪೂರ್ಣಿಮಾಯಾಂ ತು ತಾಂ ಸಂಪೂಜ್ಯ ಪಠೇತ್ತು ಯಃ ।
ಅಚಲಾಂ ಶ್ರಿಯಮಾಪ್ನೋತಿ ರಾಜಸೂಯಫಲಂ ಲಭೇತ್ ॥ ೯೯ ॥

ನಾರೀ ಶೃಣೋತಿ ಚೇತ್ಸ್ತೋತ್ರಂ ಸ್ವಾಮಿಸೌಭಾಗ್ಯಸಂಯುತಾ ।
ಭಕ್ತ್ಯಾ ಶೃಣೋತಿ ಯಃ ಸ್ತೋತ್ರಂ ಬಂಧನಾನ್ಮುಚ್ಯತೇ ಧ್ರುವಂ ॥ ೧೦೦ ॥

---

೯೬. ಪೂರ್ವದಲ್ಲಿ ಇದೇ ಸ್ತೋತ್ರವನ್ನು ಪಠಿಸಿ ಬ್ರಹ್ಮನು ಸಾವಿತ್ರಿಯನ್ನು ಪಡೆದನು.

೯೭. ಹಿಂದೆ ದೂರ್ವಾಸಮಹರ್ಷಿಗಳ ಶಾಪದಿಂದ ದೇವತೆಗಳ ಸಂಪತ್ತೆಲ್ಲವೂ ನಾಶವಾದಾಗ ಆ ದೇವತೆಗಳೆಲ್ಲರೂ ಈ ಸ್ತೋತ್ರವನ್ನು ಪಠಿಸಿ ನಷ್ಟವಾದ ತಮ್ಮ ಸಂಪತ್ತನ್ನು ಪುನಃ ಪಡೆದರು.

೯೮. ಪುತ್ರಾಪೇಕ್ಷೆಯುಳ್ಳವನು ಒಂದು ವರ್ಷ ಈ ಸ್ತೋತ್ರವನ್ನು ಕೇಳಿದರೆ ಸತ್ಪುತ್ರನನ್ನು ಪಡೆಯುವನು. ಈ ಸ್ತೋತ್ರದ ಮಹಿಮೆಯಿಂದ ದೀರ್ಘರೋಗಿಯೂ ರೋಗದಿಂದ ಬಿಡುಗಡೆ ಹೊಂದುವನು.

೯೯. ಕಾರ್ತಿಕಮಾಸದ ಪೂರ್ಣಿಮೆಯ ದಿವಸ ಆ ಜಗನ್ಮಾತೆಯನ್ನು ಪೂಜಿಸಿ ಸ್ತೋತ್ರವನ್ನು ಪಠಿಸುವವನು, ಶಾಶ್ವತವಾದ ಸಂಪತ್ತನ್ನೂ ರಾಜಸೂಯ ಯಾಗದ ಫಲವನ್ನೂ ಪಡೆಯುವನು.

೧೦೦. ಈ ಸ್ತೋತ್ರವನ್ನು ಕೇಳಿದ ಹೆಂಗಸು ಸರ್ವದಾ ಪತಿ ಸೌಭಾಗ್ಯವನ್ನು ಪಡೆಯುವಳು. ಯಾವಾಗಲೂ ಈ ಸ್ತೋತ್ರವನ್ನು ಕೇಳುವವರು ಸಕಲ ವಿಧವಾದ ಬಂಧನಗಳಿಂದಲೂ ನಿಶ್ಚಯವಾಗಿಯೂ ಮುಕ್ತರಾಗುವರು.

**ನಿತ್ಯಂ ಪಠತಿ ಯೋ ಭಕ್ತ್ಯಾ ರಾಧಾಂ ಸಂಪೂಜ್ಯ ಭಕ್ತಿತಃ ।**
**ಸ ಪ್ರಯಾತಿ ಚ ಗೋಲೋಕಂ ನಿರ್ಮುಕ್ತೋ ಭಯಬಂಧನಾತ್ ॥ ೧೦೧ ॥**

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ಹರಗೌರೀಸಂವಾಹೇ ಶ್ರೀರಾಧಿಕೋಪಾಖ್ಯಾನೇ ರಾಧಾಪೂಜಾಸ್ತೋತ್ರಾದಿಕಥನಂ ನಾಮ ಪಂಚಪಂಚಾಶತ್ತಮೋಧ್ಯಾಯಃ**

---

೧೦೧. ನಿತ್ಯವೂ ರಾಧಾದೇವಿಯನ್ನು ಭಕ್ತಿಪೂರ್ವಕವಾಗಿ ಪೂಜಿಸಿ ಈ ಸ್ತೋತ್ರವನ್ನು ಪಠಿಸುವವರು ಸಂಸಾರಬಂಧನದಿಂದ ಬಿಡುಗಡೆ ಹೊಂದಿ ಗೋಲೋಕಕ್ಕೆ ಹೋಗಿ ಸೇರುವರು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ರಾಧೋಪಾಖ್ಯಾನವೆಂಬ ಐವತ್ತೈದನೆಯ ಅಧ್ಯಾಯವು ಮುಗಿದುದು.

## ಐವತ್ತೈದನೆಯ ಅಧ್ಯಾಯದ ಸಾರಾಂಶ

ಪುರುಷನ ಹೃದಯಕ್ಕಿಂತ ಸ್ತ್ರೀಹೃದಯವು ಬಹಳಬೇಗ ಕರುಣಾರ್ದ್ರವಾಗುವುದೆಂದು ಲೋಕವಿಧಿತವಾಗಿದೆ ಆದುದರಿಂದ ಸುತಪಮಹಾಮುನಿಯು ಶ್ರೀಕೃಷ್ಣನ ಉಪಾಸನೆಗಿಂತ ರಾಧಾದೇವಿಯ ಉಪಾಸನೆಯೇ ಶೀಘ್ರಫಲದಾಯಕವೆಂದು ತಿಳಿಸಿ ಸುಯಜ್ಞಮಹಾರಾಜನಿಗೆ ರಾಧಾದೇವಿಯ ಧ್ಯಾನ, ಕವಚ, ಸ್ತೋತ್ರ ಮಂತ್ರಾದಿಗಳನ್ನು ಉಪದೇಶಿಸಿದನು. ' ಓಂ ರಾಧಾಯೈ ಸ್ವಾಹಾ ' ಎಂಬ ಷಡಕ್ಷರಮಂತ್ರವನ್ನು ಉಪದೇಶಿಸಿ ರಾಧಾದೇವಿಯ ಪೂಜಾಕ್ರಮವನ್ನು ವಿವರಿಸಿದನು. ಅನಂತರ ಸುಯಜ್ಞ ಮಹಾರಾಜನು ಕಾರ್ತೀಕಮಾಸದ ಪೂರ್ಣಿಮೆಯ ದಿವಸ ರಾಧಾದೇವಿಯನ್ನು ಅನನ್ಯ ಭಕ್ತಿಯಿಂದ ಪೂಜಿಸಿ, ದೇವಿಯ ಅನುಗ್ರಹಕ್ಕೆ ಪಾತ್ರನಾದನು. ಹಿಂದೊಮ್ಮೆ ಶ್ರೀಕೃಷ್ಣಪರಮಾತ್ಮನು ತುಳಸೀದೇವಿಯಲ್ಲಿ ಅನುರಕ್ತನಾದುದನ್ನು ನೋಡಿ ರಾಧಾದೇವಿಯು ತನ್ನ ಕಲಾಂಶಸಂಭೂತರಾದ ದೇವಿಯರನ್ನೆಲ್ಲ ತನ್ನಲ್ಲೀ ಉಪಸಂಹಾರ ಮಾಡಿಕೊಂಡು ಅಂತರ್ಧಾನಳಾಗಲು ಪ್ರಪಂಚವೇ ಸ್ತ್ರೀರಹಿತವಾಗಿ ಪುರುಷಮಯವಾಯಿತು. ಆಗ ಬ್ರಹ್ಮಾದಿದೇವತೆಗಳೆಲ್ಲರೂ ಶ್ರೀಕೃಷ್ಣನಲ್ಲಿ ಮೊರೆಯಿಡಲು ಶ್ರೀಕೃಷ್ಣಪರಮಾತ್ಮನು ರಾಧಾದೇವಿಯನ್ನು ಆರಾಧಿಸಿ, ಪ್ರಸನ್ನಗೊಳಿಸಿ, ಪುನಃ ಸ್ತ್ರೀಸೃಷ್ಟಿಯನ್ನು ಮಾಡಿಸಿದನು. ರಾಧಾದೇವಿಯ ಸ್ತೋತ್ರವನ್ನು ಭಕ್ತಿಯಿಂದ ಪಠಿಸುವವರೂ, ಕೇಳುವವರ ಪಾಪನಿರ್ಮುಕ್ತರಾಗುವರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಷಟ್ಪಂಚಾಶತ್ತಮೋಽಧ್ಯಾಯಃ ||

|| ಶ್ರೀ ಪಾರ್ವತ್ಯುವಾಚ ||

ಪೂಜಾವಿಧಾನಂ ಸ್ತೋತ್ರಂ ಚ ಶ್ರುತಮತ್ಯದ್ಭುತಂ ಮಯಾ |
ಅಧುನಾ ಕವಚಂ ಬ್ರೂಹಿ ಶ್ರೋಷ್ಯಾಮಿ ತ್ವತ್ಪ್ರಸಾದತಃ || ೧ ||

|| ಶ್ರೀ ಮಹೇಶ್ವರ ಉವಾಚ ||

ಶೃಣು ವಕ್ಷ್ಯಾಮಿ ಹೇ ದುರ್ಗೇ ಕವಚಂ ಪರಮಾದ್ಭುತಂ |
ಪುರಾ ಮಹ್ಯಂ ನಿಗದಿತಂ ಗೋಲೋಕೇ ಪರಮಾತ್ಮನಾ || ೨ ||

---

### ಐವತ್ತಾರನೆಯ ಅಧ್ಯಾಯವು

೧. ಶ್ರೀ ಪಾರ್ವತಿ :—ರಾಧಾದೇವಿಯ ಅತ್ಯದ್ಭುತವಾದ ಪೂಜಾಕ್ರಮ ಮತ್ತು ಸ್ತೋತ್ರಕ್ರಮವನ್ನು ನಾನು ಕೇಳಿ ತಿಳಿದುದಾಯಿತು. ಈಗ ರಾಧಾಕವಚವನ್ನು ನಿನ್ನ ಅನುಗ್ರಹದಿಂದ ತಿಳಿಯಲು ಬಯಸುತ್ತೇನೆ.

೨. ಶ್ರೀ ಮಹೇಶ್ವರ :—ಎಲೌ ದುರ್ಗಾದೇವಿಯೇ, ಅತ್ಯದ್ಭುತವಾದ ರಾಧಾ ಕವಚವನ್ನು ವಿವರಿಸುವೆನು ಕೇಳು. ಪೂರ್ವದಲ್ಲಿ ಇದನ್ನು ಶ್ರೀಕೃಷ್ಣಪರಮಾತ್ಮನು ನನಗೆ ಗೋಲೋಕದಲ್ಲಿ ಉಪದೇಶಿಸಿದನು.

ಅತಿಗುಹ್ಯಂ ಪರಂ ತತ್ತ್ವಂ ಸರ್ವಮಂತ್ರೌಘವಿಗ್ರಹಂ ।
ಯದ್ಧೃತ್ವಾ ಪಠನಾದ್ಬ್ರಹ್ಮಾ ಸಂಪ್ರಾಪ್ತೋ ವೇದಮಾತರಂ ॥ ೩ ॥

ಯದ್ಧೃತ್ವಾಹಂ ತವ ಸ್ವಾಮೀ ಸರ್ವಮಾತಾಃ ಸುರೇಶ್ವರೀ ।
ನಾರಾಯಣಶ್ಚ ಯದ್ಧೃತ್ವಾ ಮಹಾಲಕ್ಷ್ಮೀಮವಾಪ ಸಃ ॥ ೪ ॥

ಯದ್ಧೃತ್ವಾ ಪರಮಾತ್ಮಾ ಚ ನಿರ್ಗುಣಃ ಪ್ರಕೃತೇಃ ಪರಃ ।
ಬಭೂವ ಶಕ್ತಿಮಾನ್ ಕೃಷ್ಣಃ ಸೃಷ್ಟಿಂ ಕರ್ತುಂ ಪುರಾ ವಿಭುಃ ॥ ೫ ॥

ವಿಷ್ಣುಃ ಪಾತಾ ಚ ಯದ್ಧೃತ್ವಾ ಸಂಪ್ರಾಪ್ತಸ್ಸಿಂಧುಕನ್ಯಕಾಂ ।
ಶೇಷೋ ಬಿಭರ್ತಿ ಬ್ರಹ್ಮಾಂಡಂ ಮೂರ್ಧ್ನಿ ಸರ್ಷಪವದ್ಯತಃ ॥ ೬ ॥

---

೩. ಅತ್ಯಂತ ಗೋಪ್ಯವೂ, ಪರತತ್ವ ಬೋಧಕವೂ, ಸಕಲ ಮಂತ್ರಗಳಿಗೂ, ಮೂಲರೂಪವೂ ಆದ ಈ ಕವಚವನ್ನು ಧಾರಣೆಮಾಡಿ ಮಂತ್ರಪಠನಮಾಡಿದುದರಿಂದಲೇ ಬ್ರಹ್ಮನು ವೇದಮಾತೆಯಾದ ಸಾವಿತ್ರಿಯನ್ನು ಪಡೆದನು.

೪. ನಾನೂ ಕೂಡ ಆ ಕವಚಧಾರಣೆಮಾಡಿ ನಿಖಿಲ ಜಗಜ್ಜನನಿಯೂ, ಸುರೇಶ್ವರಿಯೂ ಆದ ನಿನ್ನನ್ನು ಪಡೆದೆನು ಅಂತೆಯೇ ನಾರಾಯಣನೂ ಕೂಡ ರಾಧಾಕವಚವನ್ನು ಧಾರಣೆಮಾಡಿ ಮಹಾಲಕ್ಷ್ಮಿಯನ್ನು ಪಡೆದನು.

೫. ಅಷ್ಟೇಕೆ ನಿರ್ಗುಣನೂ, ಪ್ರಕೃತಿಗೆ ಸಿಲುಕದವನೂ ಆದ ಶ್ರೀಕೃಷ್ಣ ಪರಮಾತ್ಮನೂ ಕೂಡ ಈ ಕವಚಧಾರಣೆ ಮಾಡಿದುದರಿಂದಲೇ ಪೂರ್ವದಲ್ಲಿ ಸೃಷ್ಟಿ ಮಾಡಲು ಶಕ್ತಿಯುಳ್ಳವನಾದನು.

೬. ಜಗತ್ಪಾಲಕನಾದ ಮಹಾವಿಷ್ಣುವೂ ಕೂಡ ರಾಧಾಕವಚಧಾರಣೆಯ ಮಹಿಮೆಯಿಂದ ಸಿಂಧುಕನ್ಯೆಯನ್ನು ಸ್ವೀಕರಿಸಿದನು. ಇದರ ಮಹಿಮೆಯಿಂದಲೇ ಆದಿಶೇಷನೂ ಕೂಡ ಬ್ರಹ್ಮಾಂಡವನ್ನು ತನ್ನ ತಲೆಯ ಮೇಲೆ ಸಾಸಿವೆ ಕಾಳಿನಷ್ಟು ಹಗುರವಾಗಿ ಹೊತ್ತಿದ್ದಾನೆ.

ಪ್ರತ್ಯೇಕಂ ಲೋಮಕೂಪೇಷು ಬ್ರಹ್ಮಾಂಡಾನಿ ಮಹಾನ್ವಿರಾಟ್ ।
ಬಿಭರ್ತಿ ಧಾರಣಾದ್ಯಸ್ಯ ಸರ್ವಾಧಾರೋ ಬಭೂವ ಸಃ ॥ ೭ ॥

ಯದ್ಧಾರಣಾಚ್ಚ ಪಠನಾದ್ಧರ್ಮಃ ಸಾಕ್ಷೀ ಚ ಸರ್ವತಃ ।
ಯದ್ಧಾರಣಾತ್ಕುಬೇರಶ್ಚ ಧನಾಧ್ಯಕ್ಷಶ್ಚ ಭಾರತೇ ॥ ೮ ॥

ಇಂದ್ರಃ ಸುರಾಣಾಮೀಶಶ್ಚ ಪಠನಾದ್ಧಾರಣಾದ್ವಿಭುಃ ।
ನೃಪಾಣಾಂ ಮನುರೀಶಶ್ಚ ಪಠನಾದ್ಧಾರಣಾತ್ಪ್ರಭುಃ ॥ ೯ ॥

ಶ್ರೀಮಾಂಶ್ಚಂದ್ರಶ್ಚ ಯದ್ಧೃತ್ವಾ ರಾಜಸೂಯಂ ಚಕಾರ ಸಃ ।
ಸ್ವಯಂ ಸೂರ್ಯಸ್ತ್ರಿಲೋಕೇಶಃ ಪಠನಾದ್ಧಾರಣಾದ್ಧರಿಃ ॥ ೧೦ ॥

---

೭. ಮಹಾವಿರಾಟ್ಪುರುಷನೂ ಕೂಡ ರಾಧಾಕವಚಧಾರಣೆಮಾಡಿ ತನ್ನ ಪ್ರತ್ಯೇಕ ಲೋಮಕೂಪಗಳಲ್ಲೂ ಬ್ರಹ್ಮಾಂಡವನ್ನು ಧರಿಸಿ ಸರ್ವಾಧಾರನೆನಿಸಿ ಕೊಂಡಿರುವನು.

೮. ಯಾವ ಕವಚಧಾರಣೆಯ ಮತ್ತು ಮಂತ್ರಪಠನೆಯ ಪ್ರಭಾವದಿಂದಲೇ ಧರ್ಮಪುರುಷನು ಸರ್ವಸಾಕ್ಷಿಯಾಗಿಯೂ, ಕುಬೇರನು ಕೋಶಾಧ್ಯಕ್ಷನಾಗಿಯೂ ಭಾರತದಲ್ಲಿ ಕರೆಯಲ್ಪಡುವರು.

೯. ಈ ಕವಚದ ಧಾರಣ ಮತ್ತು ಮಂತ್ರಪಠನೆಯಿಂದ ಇಂದ್ರನು ದೇವತೆಗಳೊಡೆಯನಾಗಿಯೂ, ಮನುಚಕ್ರವರ್ತಿಯು ರಾಜರುಗಳಿಗೆ ಪ್ರಭುವಾಗಿಯೂ ಮೆರೆಯುತ್ತಿದ್ದಾರೆ.

೧೦. ಕಾಂತಿಯುತನಾದ ಚಂದ್ರನೂ ಕೂಡ ಈ ಕಚವಧಾರಣೆಮಾಡಿ ರಾಜಸೂಯಯಾಗವನ್ನು ಮಾಡಿದನು. ಸೂರ್ಯದೇವನೂ ಕೂಡ ಈ ಕವಚ ಧಾರಣೆ ಮತ್ತು ಮಂತ್ರ ಪಠನೆ ಮಹಿಮೆಯಿಂದಲೇ ಸರ್ವರ ಪಾಪಹಾರಕನಾಗಿ 'ಹರಿ'ಯೆನಿಸಿಕೊಂಡಿದ್ದಾನೆ.

ಯದ್ಧೃತ್ವಾ ಪಠನಾದಗ್ನಿರ್ಜಗತ್ಪೂತಂ ಕರೋತಿ ಚ ।
ಯದ್ಧೃತ್ವಾ ವಾತಿ ವಾತೋಽಯಂ ಪುನಾತಿ ಭುವನತ್ರಯಂ ॥ ೧೧ ॥

ಯದ್ಧೃತ್ವಾ ಚ ಸ್ವತಂತ್ರೋ ಹಿ ಮೃತ್ಯುಶ್ಚರತಿ ಜಂತುಷು ।
ತ್ರಿಃಸಪ್ತ ಕೃತ್ವೋ ನಿಃಕ್ಷತ್ರಾಂ ಚಕಾರ ಚ ವಸುಂಧರಾಂ ॥ ೧೨ ॥

ಜಾಮದಗ್ನ್ಯಶ್ಚ ರಾಮಶ್ಚ ಪಠನಾದ್ಧಾರಣಾತ್ಪ್ರಭೋ ।
ಪಪೌ ಸಮುದ್ರಂ ಯದ್ಧೃತ್ವಾ ಪಠನುತ್ಕುಂಭಸಂಭವಃ ॥ ೧೩ ॥

ಸನತ್ಕುಮಾರೋ ಭಗವಾನ್ಯದ್ಧೃತ್ವಾ ಜ್ಞಾನಿನಾಂ ಗುರುಃ ।
ಜೀವನ್ಮುಕ್ತೌ ಚ ಸಿದ್ಧೌ ಚ ನರನಾರಾಯಣಾವೃಷೀ ॥ ೧೪ ॥

ಯದ್ಧೃತ್ವಾ ಪಠನಾತ್ಸಿದ್ಧೋ ವಸಿಷ್ಠೋ ಬ್ರಹ್ಮಪುತ್ರಕಃ ।
ಸಿದ್ಧೇಶಃ ಕಪಿಲೋ ಯಸ್ಮಾದ್ಯಸ್ಮಾದ್ದಕ್ಷಃ ಪ್ರಜಾಪತಿಃ ॥ ೧೫ ॥

---

೧೧. ಅಗ್ನಿಯು ಈ ಕವಚಧಾರಣೆ ಮತ್ತು ಮಂತ್ರಪಠನದಿಂದಲೇ ಜಗತ್ತನ್ನು ಪವಿತ್ರಗೊಳಿಸಲು ಶಕ್ತನಾದನು. ವಾಯುದೇವನೂ ಕೂಡ ಇದರ ಮಹಿಮೆಯಿಂದಲೇ, ಎಲ್ಲೆಡೆಯಲ್ಲೂ ಚಲಿಸುತ್ತ ತ್ರಿಲೋಕವನ್ನೂ ಪವಿತ್ರಗೊಳಿಸುತ್ತಿದ್ದಾನೆ.

೧೨-೧೩. ಈ ಕವಚವನ್ನು ಧರಿಸಿರುವುದರಿಂದಲೇ ಮೃತ್ಯುದೇವನು ಎಲ್ಲ ಪ್ರಾಣಿಗಳಲ್ಲೂ ಸ್ವತಂತ್ರನಾಗಿ ಸಂಚರಿಸುತ್ತಿದ್ದಾನೆ ಪರಶುರಾಮನು ಇಪ್ಪತ್ತೊಂದು ಸಾರಿ ಸಂಚರಿಸಿ ಭೂಮಿಯಲ್ಲಿದ್ದ ಕ್ಷತ್ರಿಯರನ್ನೆಲ್ಲ ನಾಶಗೊಳಿಸಿದುದೂ, ಶ್ರೀರಾಮನು ರಾಜ್ಯವಾಳಿದುದೂ, ಈ ಕವಚಧಾರಣೆಯ ಮಹಿಮೆಯಿಂದಲೇ. ಅಗಸ್ತ್ಯನೂ ಕೂಡ ಇದನ್ನು ಧರಿಸಿ ಮಂತ್ರವನ್ನು ಪಠಿಸಿದುದರಿಂದಲೇ ಸಮುದ್ರಪಾನಮಾಡಲು ಶಕ್ತನಾದನು.

೧೪. ಭಗವಂತನಾದ ಸನತ್ಕುಮಾರನು ಜ್ಞಾನಿಗಳಿಗೆ ಗುರುವೆನಿಸಿದುದೂ, ನರನಾರಾಯಣಋಷಿಗಳು ತಪಃಸಿದ್ಧಿಯನ್ನು ಪಡೆದು ಜೀವನ್ಮುಕ್ತರಾದುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೧೫. ಬ್ರಹ್ಮಪುತ್ರನಾದ ವಸಿಷ್ಠನು ತಪಸ್ಸಿದ್ಧಿಯನ್ನು ಪಡೆದುದೂ, ಕಪಿಲ ಮಹರ್ಷಿಯು ಸಿದ್ಧರೊಡೆಯನಾದುದೂ, ದಕ್ಷಬ್ರಹ್ಮನು ಪ್ರಜಾಪತಿಯೆನಿಸಿದುದೂ, ಈ ಕವಚದ ಮಹಿಮೆಯಿಂದಲೇ.

**ಯಸ್ಮಾದ್ಭೃಗುಶ್ಚ ಮಾಂ ದ್ವೇಷ್ಟಿ ಕೂರ್ಮಃ ಶೇಷಂ ಬಿಭರ್ತಿ ಚ ।**
**ಸರ್ವಾಧಾರೋ ಯತೋ ವಾಯುರ್ವರುಣಃ ಪವನೋ ಯತಃ ॥ ೧೬ ॥**

**ಈಶಾನೋ ದಿಕ್ಪತಿಶ್ಚೈವ ಯಮಃ ಶಾಸ್ತಾ ಯತಃ ಶಿವೇ ।**
**ಕಾಲಃ ಕಾಲಾಗ್ನಿರುದ್ರಶ್ಚ ಸಂಹರ್ತಾ ಜಗತಾಂ ಯತಃ ॥ ೧೭ ॥**

**ಯದ್ಧೃತ್ವಾ ಗೌತಮಃ ಸಿದ್ಧಃ ಕಶ್ಯಪಶ್ಚ ಪ್ರಜಾಪತಿಃ ।**
**ವಸುದೇವಸುತಾಂ ಪ್ರಾಪ ಚೈಕಾಂಶೇನ ತು ತತ್ಕಲಾಂ ॥ ೧೮ ॥**

**ಪುರಾ ಸ್ವಜಾಯಾವಿಚ್ಛೇದೇ ದುರ್ವಾಸಾ ಮುನಿಪುಂಗವಃ ।**
**ಸಂಪ್ರಾಪ ರಾಮಃ ಸೀತಾಂ ಚ ರಾವಣೇನ ಹೃತಾಂ ಪುರಾ ॥ ೧೯ ॥**

---

೧೬. ಭೃಗುಮಹರ್ಷಿಯು ಮೃತ್ಯುಂಜಯನಾದ ನನ್ನನ್ನು ದ್ವೇಷಿಸುವುದೂ, ಆದಿಕೂರ್ಮನು ಆದಿಶೇಷನನ್ನು ಧರಿಸಿರುವುದೂ, ವರುಣ ಮತ್ತು ವಾಯುದೇವರು ಸರ್ವರಿಗೂ ಆಧಾರಸ್ವರೂಪರಾಗಿರುವುದೂ ಈ ಕವಚಧಾರಣಾಮಹಿಮೆಯಿಂದಲೇ.

೧೭. ರಾಧಾಕವಚದ ಪ್ರಭಾವದಿಂದಲೇ ಈಶಾನನು ದಿಕ್ಪಾಲಕನೆನಿಸಿಯೂ, ಯಮನು ಶಿಕ್ಷಕನಾಗಿಯೂ, ಕಾಲಪುರುಷ ಮತ್ತು ಕಾಲಾಗ್ನಿರುದ್ರರು ಜಗತ್ಸಂಹಾರ ಕರಾಗಿಯೂ ಹೆಸರುವಾಸಿಯಾಗಿರುವರು.

೧೮. ಗೌತಮನು ಈ ಕವಚಧಾರಣೆಮಾಡಿ ಸಿದ್ಧಾರ್ಥನೆನಿಸಿದನು. ಈ ಕವಚಧಾರಣೆಯ ಮಹಿಮೆಯಿಂದಲೇ ಕಶ್ಯಪಪ್ರಜಾಪತಿಯು ವಸುದೇವನಾಗಿ ಹುಟ್ಟಿ ರಾಧಾಕಲಾಂಶಸಂಭೂತಳಾದ ಪುತ್ರಿಯನ್ನು ಪಡೆದನು.

೧೯. ಹಿಂದೆ ತನ್ನ ಪತ್ನೀವಿಯೋಗವಾದಾಗ ಋಷಿಶ್ರೇಷ್ಠನಾದ ದೂರ್ವಾಸನೂ, ರಾವಣನು ಅಪಹರಿಸಿಕೊಂಡು ಹೋಗಿದ್ದ ಸೀತಾದೇವಿಯನ್ನು ಶ್ರೀರಾಮನೂ ಈ ಕವಚದ ಮಹಿಮೆಯಿಂದಲೇ ಪುನಃ ಪಡೆದರು. (ದೂರ್ವಾಸರಿಗೆ ಪತ್ನೀ ವಿಯೋಗವಾದುದು ಪುರಾಣಗಳಲ್ಲಿ ಉಕ್ತವಾಗಿಲ್ಲ)

ಪುರಾ ನಲಶ್ಚ ಸಂಪ್ರಾಪ ದಮಯಂತೀಂ ಯತಃ ಸತೀಂ ।
ಶಂಖಚೂಡೋ ಮಹಾವೀರೋ ದೈತ್ಯಾನಾಮೀಶ್ವರೋ ಯತಃ ॥ ೨೦ ॥

ವೃಷೋ ವಹತಿ ಮಾಂ ದುರ್ಗೇ ಯತೋ ಹಿ ಗರುಡೋ ಹರಿಂ ।
ಏವಂ ಸಂಪ್ರಾಪ ಸಂಸಿದ್ಧಿಂ ಸಿದ್ಧಾಶ್ಚ ಮುನಯಃ ಸುರಾಃ ॥ ೨೧ ॥

ಯದ್ಧೃತ್ವಾ ಚ ಮಹಾಲಕ್ಷ್ಮೀಃ ಪ್ರದಾತ್ರೀ ಸರ್ವಸಂಪದಾಂ ।
ಸರಸ್ವತೀ ಸತಾಂ ಶ್ರೇಷ್ಠಾ ಯತಃ ಕ್ರೀಡಾವತೀ ರತಿಃ ॥ ೨೨ ॥

ಸಾವಿತ್ರೀ ವೇದಮಾತಾ ಚ ಯತಃ ಸಿದ್ಧಿಮವಾಪ್ನುಯಾತ್ ।
ಸಿಂಧುಕನ್ಯಾ ಮರ್ತ್ಯಲಕ್ಷ್ಮೀರ್ಯತೋ ವಿಷ್ಣುಮವಾಪ ಸಾ ॥ ೨೩ ॥

---

೨೦. ಪತಿವ್ರತೆಯಾದ ದಮಯಂತಿಯನ್ನಗಲಿ ನಳನು ಪುನಃ ಆಕೆಯೊಡಗೂಡಿದುದೂ, ಮಹಾಪರಾಕ್ರಮಶಾಲಿಯಾದ ಶಂಖಚೂಡನು ರಾಕ್ಷಸರಾಜನೆನಿಸಿದುದೂ ಈ ಕವಚಪಠನೆಯ ಮಾಹಾತ್ಮ್ಯದಿಂದಲೇ.

೨೧. ಈ ಕವಚಧಾರಣೆಯ ಮಹಿಮೆಯಿಂದಲೇ ವೃಷಭೇಶ್ವರನು ನನ್ನನ್ನೂ, ಗರುಡನು ವಿಷ್ಣುವನ್ನೂ ಹೊತ್ತು ತಿರುಗುತ್ತಿರುವರು. ಇದೇ ರೀತಿಯಲ್ಲಿ ಸಿದ್ಧರೂ. ಮುನಿಗಳೂ ಪೂರ್ವದಲ್ಲಿ ತಮ್ಮ ಇಷ್ಟಸಿದ್ಧಿಯನ್ನು ಪಡೆದರು

೨೨ ಮಹಾಲಕ್ಷ್ಮಿಯು ಈ ಕವಚಧಾರಣೆಮಾಡಿ ಸಕಲರಿಗೂ ಸಂಪತ್ತನ್ನು ಕೊಡಲು ಶಕ್ತಳಾದಳು. ಸರಸ್ವತಿಯು ಜ್ಞಾನಿಗಳಿಂದ ಪೂಜ್ಯಳೂ, ರತೀದೇವಿಯು ಕ್ರೀಡಾಚತುರಳೂ ಆದುದು ಈ ಕವಚದ ಮಹಿಮೆಯಿಂದಲೇ

೨೩. ಈ ಕವಚಧಾರಣೆಮಾಡಿ ಸಾವಿತ್ರಿಯು ವೇದಮಾತೆಯೆಂದು ಖ್ಯಾತಳಾದಳು. ಮರ್ತ್ಯಲಕ್ಷ್ಮಿ ಎನಿಸಿಕೊಂಡ ಸಿಂಧುಕನ್ಯೆಯು ಮಹಾವಿಷ್ಣುವನ್ನು ಪಡೆದುದೂ ಈ ಕವಚದ ಪ್ರಭಾವದಿಂದಲೇ.

**ಯದ್ಧೃತ್ವಾ ತುಲಸೀ ಪೂತಾ ಗಂಗಾ ಭುವನಪಾವನೀ ।**
**ಯದ್ಧೃತ್ವಾ ಸರ್ವಸಸ್ಯಾಢ್ಯಾ ಸರ್ವಾಧಾರಾ ವಸುಂಧರಾ ॥ ೨೪ ॥**

**ಯದ್ಧೃತ್ವಾ ಮನಸಾ ದೇವೀ ಸಿದ್ಧಾ ವೈ ವಿಶ್ವಪೂಜಿತಾ ।**
**ಯದ್ಧೃತ್ವಾ ದೇವಮಾತಾ ಚ ವಿಷ್ಣುಂ ಪುತ್ರಮವಾಪ ಸಾ ॥ ೨೫ ॥**

**ಪತಿವ್ರತಾ ಚ ಯದ್ಧೃತ್ವಾ ಲೋಪಾಮುದ್ರಾಪ್ಯರುಂಧತೀ ।**
**ಲೇಭೇ ಚ ಕಪಿಲಂ ಪುತ್ರಂ ದೇವಹೂತೀ ಯತಃ ಸತೀ ॥ ೨೬ ॥**

**ಪ್ರಿಯವ್ರತೋತ್ತಾನಪಾದೌ ಸುತೌ ಪ್ರಾಪ ಚ ತತ್ಪ್ರಸೂಃ ।**
**ತ್ವನ್ಮಾತಾ ಚಾಪಿ ಸಂಪ್ರಾಪ ತ್ವಾಂ ದೇವೀಂ ಗಿರಿಜಾಂ ಯತಃ ॥ ೨೭ ॥**

---

೨೪. ತುಳಸೀದೇವಿಯು ಪವಿತ್ರಳೆನಿಸಿದುದೂ, ಗಂಗೆಯು ಭುವನಪಾವನೆಯೆನಿಸಿದುದೂ, ವಸುಂಧರೆಯು ಸರ್ವಾಧಾರಳು ಮತ್ತು ಸಕಲ ಸಸ್ಯಪರಿಪೂರ್ಣಳೆನಿಸಿದುದೂ ಈ ಕವಚಧಾರಣೆಯ ಪ್ರಭಾವದಿಂದಲೇ.

೨೫. ಈ ಕವಚಧಾರಣೆಮಾಡಿ ಮನಸಾದೇವಿಯು ಇಷ್ಟಾರ್ಥಸಿದ್ಧಿಯನ್ನು ಪಡೆದು ವಿಶ್ವಪೂಜ್ಯಳೆನಿಸಿದಳು. ದೇವಮಾತೆಯಾದ ಪ್ರಕೃತಿಯು ಸರ್ವಾಧಾರನಾದ ಮಹಾವಿಷ್ಣುವನ್ನು ಪುತ್ರನನ್ನಾಗಿ ಪಡೆದುದೂ ಈ ಕವಚದ ಪ್ರಭಾವದಿಂದಲೇ.

೨೬. ಈ ಕವಚಧಾರಣೆಮಾಡಿ ಲೋಪಾಮುದ್ರೆ ಮತ್ತು ಅರುಂಧತಿಯರು ಪತಿವ್ರತೆಯರೆನಿಸಿದರು. ಸತಿಯಾದ ದೇವಹೂತಿಯೂ ಕೂಡ ಕಪಿಲ ಮಹರ್ಷಿಯನ್ನು ಪುತ್ರನನ್ನಾಗಿ ಪಡೆದಳು.

೨೭. ಸ್ವಾಯಂಭುವಮನುವಿನ ಪತ್ನಿಯಾದ ಶತರೂಪೆಯು ಪ್ರಿಯವ್ರತ ಮತ್ತು ಉತ್ತಾನಪಾದರೆಂಬ ಪುತ್ರರನ್ನು ಪಡೆದುದೂ, ನಿನ್ನ ತಾಯಿಯಾದ ಮೇನೆಯು ಗಿರಿಜೆಯಾದ ನಿನ್ನನ್ನು ಪಡೆದುದೂ ಕೂಡ ಆ ಕವಚಧಾರಣೆಯ ಮಹಿಮೆಯಿಂದಲೇ.

ಏವಂ ಸರ್ವೇ ಸಿದ್ಧಗಣಾಃ ಸರ್ವೈಶ್ವರ್ಯಮವಾಪ್ನುಯುಃ ।
ಶ್ರೀಜಗನ್ಮಂಗಲಸ್ಯಾಸ್ಯ ಕವಚಸ್ಯ ಪ್ರಜಾಪತಿಃ ॥ ೨೮ ॥

ಋಷಿಶ್ಛಂದೋಽಸ್ಯ ಗಾಯತ್ರೀ ದೇವೋ ರಾಸೇಶ್ವರಃ ಸ್ವಯಂ ।
ಶ್ರೀಕೃಷ್ಣಭಕ್ತಿಸಂಪ್ರಾಪ್ತೌ ವಿನಿಯೋಗಃ ಪ್ರಕೀರ್ತಿತಃ ॥ ೨೯ ॥

ಶಿಷ್ಯಾಯ ಕೃಷ್ಣಭಕ್ತಾಯ ಬ್ರಾಹ್ಮಣಾಯ ಪ್ರಕಾಶಯೇತ್ ।
ಶಠಾಯ ಪರಶಿಷ್ಯಾಯ ದತ್ವಾ ಮೃತ್ಯುಮವಾಪ್ನುಯಾತ್ ॥ ೩೦ ॥

ರಾಜ್ಯಂ ದೇಯಂ ಶಿರೋ ದೇಯಂ ನ ದೇಯಂ ಕವಚಂ ಪ್ರಿಯೇ ।
ಕಂಠೇ ಧೃತಮಿದಂ ಭಕ್ತ್ಯಾ ಕೃಷ್ಣೇನ ಪರಮಾತ್ಮನಾ ॥ ೩೧ ॥

---

೨೮–೨೯. ಈ ಕವಚದ ಪ್ರಭಾವದಿಂದ ಸಿದ್ಧರೆಲ್ಲರೂ ಸಕಲೈಶ್ವರ್ಯವನ್ನೂ ಪಡೆದರು. ಇಂತು ಜಗತ್ತೆಲ್ಲಕ್ಕೂ ಮಂಗಳಕರವಾದ ಈ ರಾಧಾಕವಚಕ್ಕೆ ಪ್ರಜಾಪತಿಯೇ ಋಷಿಯು. ಗಾಯತ್ರಿಯೇ ಛಂದಸ್ಸು. ಸ್ವಯಂ ರಾಸೇಶ್ವರಿಯಾದ ರಾಧೆಯೇ ದೇವತೆಯು. ಶ್ರೀಕೃಷ್ಣಭಕ್ತಿಯನ್ನು ಪಡೆಯುವುದರಲ್ಲಿ ಈ ಕವಚದ ವಿನಿಯೋಗವಾಗುವುದು.

೩೦. ಈ ಕವಚವನ್ನು ಕೃಷ್ಣಭಕ್ತನೂ, ಬ್ರಾಹ್ಮಣನೂ ಆದ ಪ್ರಿಯಶಿಷ್ಯನಿಗೆ ಉಪದೇಶಿಸಬೇಕು. ಮೂರ್ಖನಿಗೂ, ಮತ್ತೊಬ್ಬರ ಶಿಷ್ಯನಿಗೂ ಉಪದೇಶಿಸಿದರೆ ಉಪದೇಶಿಸಿದವನಿಗೆ ಮರಣಪ್ರಾಪ್ತಿಯಾಗುವುದು.

೩೧. ಎಲೌ ಪ್ರಿಯಳಾದ ಪಾರ್ವತಿಯೇ, ರಾಜ್ಯವನ್ನಾಗಲೀ, ತನ್ನ ತಲೆಯನ್ನಾಗಲೀ ಮತ್ತೊಬ್ಬರಿಗೆ ಕೊಡಬಹುದು. ಆದರೆ ಈ ಕವಚವನ್ನು ಮಾತ್ರ ಯಾರಿಗೂ ಉಪದೇಶಿಸಕೂಡದು. ಶ್ರೀಕೃಷ್ಣಪರಮಾತ್ಮನು ಭಕ್ತಿಪೂರ್ವಕವಾಗಿ ಇದನ್ನು ತನ್ನ ಕಂಠದಲ್ಲಿ ಧರಿಸಿರುವನು.

ಮಯಾ ದೃಷ್ಟಂ ಚ ಗೋಲೋಕೇ ಬ್ರಹ್ಮಣಾ ವಿಷ್ಣುನಾ ಪುರಾ ।
ಓಂ ರಾಧೇತಿ ಚತುರ್ಥ್ಯಂತಂ ವಹ್ನಿಜಾಯಾಂತಮೇವ ಚ ॥ ೩೨ ॥

ಕೃಷ್ಣೇನೋಪಾಸಿತೋ ಮಂತ್ರಃ ಕಲ್ಪವೃಕ್ಷಃ ಶಿರೋಽವತು ।
ಓಂ ಹ್ರೀಂ ಶ್ರೀಂ ರಾಧಿಕಾಂ ಓಕೇನ್ತಂ ವಹ್ನಿಜಾಯಾಂತಮೇವ ಚ ॥ ೩೩ ॥

ಕಪಾಲಂ ನೇತ್ರಯುಗ್ಮಂ ಚ ಶ್ರೋತ್ರಯುಗ್ಮಂ ಸದಾವತು ।
ಓಂ ಐಂ ಹ್ರೀಂ ಶ್ರೀಂ ರಾಧಿಕಾಯೈ ವಹ್ನಿಜಾಯಾಂತಮೇವ ಚ ॥ ೩೪ ॥

ಮಸ್ತಕಂ ಕೇಶಸಂಘಾಂಶ್ಚ ಮಂತ್ರರಾಜಃ ಸದಾವತು ।
ಓಂ ರಾಂ ರಾಧಾ ಚತುರ್ಥ್ಯಂತಂ ವಹ್ನಿಜಾಯಾಂತಮೇವ ಚ ॥ ೩೫ ॥

ಸರ್ವಸಿದ್ಧಿಪ್ರದಃ ಪಾತು ಕಪೋಲಂ ನಾಸಿಕಾಂ ಮುಖಂ ।
ಕ್ಲೀಂ ಶ್ರೀಕೃಷ್ಣಪ್ರಿಯಾ ಜೇನ್ತಂ ಸ್ಕಂಧಂ ಪಾತು ನಮೋಽನ್ತಕಂ ॥ ೩೬ ॥

---

೩೨. ಗೋಲೋಕದಲ್ಲಿ ನಾನು ಬ್ರಹ್ಮ ಮತ್ತು ವಿಷ್ಣು ಮೂವರೂ ಶ್ರೀಕೃಷ್ಣನ ಕವಚವಿನ್ಯಾಸಕ್ರಮವನ್ನು ನೋಡಿದೆವು. 'ಓಂ ರಾಧಾಯ ಸ್ವಾಹಾ' ಎಂಬ ಕಲ್ಪವೃಕ್ಷ ಸದೃಶವಾದ ಶ್ರೀಕೃಷ್ಣನಿಂದ ಉಪಾಸನೆಮಾಡಲ್ಪಟ್ಟ ಈ ಮಂತ್ರವು ನಮ್ಮ ತಲೆಯನ್ನು ಕಾಪಾಡಲಿ

೩೩. 'ಓಂ ಹ್ರೀಂ ಶ್ರೀಂ ರಾಧಿಕಾಯ್ಕೆ ಸ್ವಾಹಾ' ಎಂಬ ಮಂತ್ರವು ಕಪೋಲ, ಕಣ್ಣು ಮತ್ತು ಕಿವಿಗಳನ್ನು ಸರ್ವದಾ ಕಾಪಾಡಲಿ.

೩೪. 'ಓಂ ಐಂ ಹ್ರೀಂ ಶ್ರೀಂ ರಾಧಿಕಾಯೈ ಸ್ವಾಹಾ' ಎಂಬ ಶ್ರೇಷ್ಠ ಮಂತ್ರವು ಮಸ್ತಕವನ್ನೂ, ಕೇಶಸಮೂಹವನ್ನೂ ಸರ್ವದಾ ಕಾಪಾಡಲಿ.

೩೫–೩೬. 'ಓಂ ರಾಂ ರಾಧಾಯೈ ಸ್ವಾಹಾ' ಎಂಬ ಸರ್ವಸಿದ್ಧಿವಿಧಾಯಕವಾದ ಮಂತ್ರವು, ಕಪೋಲ, ಮೂಗು ಮತ್ತು ಮುಖವನ್ನು ಕಾಪಾಡಲಿ 'ಕ್ಲೀಂ ಶ್ರೀ ಕೃಷ್ಣಪ್ರಿಯಾಯೈ ನಮಃ' ಎಂಬ ಮಂತ್ರವು ಕಂಠದೇಶವನ್ನು ಕಾಪಾಡಲಿ.

ಓಂ ರಾಂ ರಾಸೇಶ್ವರೀಂ ಜೇನ್ತುಂ ಸ್ಕಂಧಂ ಪಾತು ನಮೋಽನ್ತಕಂ ।
ಓಂ ರಾಂ ರಾಸವಿಲಾಸಿನ್ಯೈ ಸ್ವಾಹಾ ಪೃಷ್ಠಂ ಸದಾಽವತು ॥ ೩೭ ॥

ವೃಂದಾವನವಿಲಾಸಿನ್ಯೈ ಸ್ವಾಹಾ ಪಾತು ನಿತಂಬಕಂ ।
ತುಲಸೀವನವಾಸಿನ್ಯೈ ಸ್ವಾಹಾ ಬಾಹುಂ ಸದಾಽವತು ॥ ೩೮ ॥

ಕೃಷ್ಣಪ್ರಾಣಾಧಿಕಾ ಜೇನ್ತುಂ ಸ್ವಾಹಾಂತಂ ಪ್ರಣವಾದಿಕಂ ।
ಪಾದಯುಗ್ಮಂ ಚ ಸರ್ವಾಂಗಂ ಸಂತತಂ ಪಾತು ಸರ್ವತಃ ॥ ೩೯ ॥

ಪ್ರಾಚ್ಯಾಂ ರಕ್ಷತು ಸಾ ರಾಧಾ ವಹ್ನೌ ಕೃಷ್ಣಪ್ರಿಯಾಽವತು ।
ದಕ್ಷೇ ರಾಸೇಶ್ವರೀ ಪಾತು ಗೋಪೀಶಾ ನೈರ್ಋತೇಽವತು ॥ ೪೦ ॥

ಪಶ್ಚಿಮೇ ನಿರ್ಗುಣಾ ಪಾತು ವಾಯವ್ಯೇ ಕೃಷ್ಣಪೂಜಿತಾ ।
ಉತ್ತರೇ ಸಂತತಂ ಪಾತು ಮೂಲಪ್ರಕೃತಿರೀಶ್ವರೀ ॥ ೪೧ ॥

---

೩೭. 'ಓಂ ರಾಂ ರಾಸೇಶ್ವರ್ಯೈ ನಮಃ' ಎಂಬ ಮಂತ್ರವು ಹೆಗಲು ಪ್ರದೇಶವನ್ನೂ 'ಓಂ ರಾಂ ರಾಸವಿಲಾಸಿನ್ಯೈ ಸ್ವಾಹಾ' ಎಂಬ ಮಂತ್ರವು ಪೃಷ್ಠಭಾಗವನ್ನೂ ಸರ್ವದಾ ಕಾಪಾಡಲಿ.

೩೮. 'ವೃಂದಾವನವಿಲಾಸಿನ್ಯೈ ಸ್ವಾಹಾ' ಎಂಬ ಮಂತ್ರವು ಎದೆಯ ಪ್ರದೇಶವನ್ನೂ, 'ತುಲಸೀವನವಾಸಿನ್ಯೈ ಸ್ವಾಹಾ' ಎಂಬ ಮಂತ್ರವು ನಿತಂಬಸ್ಥಳವನ್ನೂ ಸರ್ವದಾ ಕಾಪಾಡಲಿ.

೩೯. 'ಓಂ ಕೃಷ್ಣ ಪ್ರಾಣಾಧಿಕಾಯೈ ಸ್ವಾಹಾ' ಎಂಬ ಮಂತ್ರವು ಎರಡು ಪಾದಗಳನ್ನೂ, ಸಕಲಾವಯವಗಳನ್ನೂ ಸರ್ವದಾ ಕಾಪಾಡಲಿ.

೪೦. ಪೂರ್ವದಿಕ್ಕಿನಲ್ಲಿ ರಾಧೆಯೂ, ಆಗ್ನೇಯದಲ್ಲಿ ಕೃಷ್ಣಪ್ರಿಯಳೂ, ದಕ್ಷಿಣದಲ್ಲಿ ರಾಸೇಶ್ವರಿಯೂ, ನೈಋತ್ಯದಲ್ಲಿ ಗೋಪೀಶಳೂ ಸರ್ವದಾ ಕಾಪಾಡಲಿ.

೪೧. ಪಶ್ಚಿಮದಲ್ಲಿ ನಿರ್ಗುಣಳೂ, ವಾಯುವ್ಯದಲ್ಲಿ ಕೃಷ್ಣಪೂಜಿತಳೂ, ಉತ್ತರದಲ್ಲಿ ಮೂಲಪ್ರತಿಯಾದ ಈಶ್ವರಿಯೂ ಸರ್ವದಾ ರಕ್ಷಿಸಲಿ.

**ಸರ್ವೇಶ್ವರೀ ಸದೈಶಾನ್ಯಾಂ ಪಾತು ಮಾಂ ಸರ್ವಪೂಜಿತಾ |**
**ಜಲೇ ಸ್ಥಲೇ ಚಾಂತರಿಕ್ಷೇ ಸ್ವಪ್ನೇ ಜಾಗರಣೇ ತಥಾ　　|| ೪೨ ||**

**ಮಹಾವಿಷ್ಣೋಶ್ಚ ಜನನೀ ಸರ್ವತಃ ಪಾತು ಸಂತತಂ |**
**ಕವಚಂ ಕಥಿತಂ ದುರ್ಗೇ ಶ್ರೀಜಗನ್ಮಂಗಲಂ ಪರಂ　　|| ೪೩ ||**

**ಯಸ್ಮೈ ಕಸ್ಮೈ ನ ದಾತವ್ಯಂ ಗುಹ್ಯಾದ್ಗುಹ್ಯತರಂ ಪರಂ |**
**ತವ ಸ್ನೇಹಾನ್ಮಯಾಖ್ಯಾತಂ ಪ್ರವಕ್ತವ್ಯಂ ನ ಕಸ್ಯಚಿತ್　　|| ೪೪ ||**

**ಗುರುಮಭ್ಯರ್ಚ್ಯ ವಿಧಿವದ್ವಸ್ತ್ರಾಲಂಕಾರ ಚಂದನೈಃ |**
**ಕಂಠೇ ವಾ ದಕ್ಷಿಣೇ ಬಾಹೌ ಧೃತ್ವಾ ವಿಷ್ಣುಸಮೋ ಭವೇತ್　　|| ೪೫ ||**

---

೪೨-೪೩. ಈಶಾನ್ಯ ದಿಕ್ಕಿನಲ್ಲಿ ಸರ್ವಪೂಜಿತಳೂ, ಸರ್ವೇಶ್ವರಿಯೂ ಆದ ದೇವಿಯು ನನ್ನನ್ನು ರಕ್ಷಿಸಲಿ　ನೀರಿನಲ್ಲೂ, ನೆಲದಲ್ಲೂ, ಅಂತರಿಕ್ಷದಲ್ಲೂ, ಸ್ವಪ್ನ ಕಾಲದಲ್ಲೂ, ಎಚ್ಚರಿಕೆಯಾಗಿರುವಾಗಲೂ ಮಹಾವಿಷ್ಣುವಿನ ಮಾತೆಯು ಸರ್ವದಾ ಕಾಪಾಡಲಿ. ಎಲೌ ದುರ್ಗಾದೇವಿಯೇ, ಈ ರೀತಿಯಾಗಿ ನಾನು ಹೇಳಿದ ರಾಧಾ ಕವಚವು ಜಗತ್ತಿಗೆ ಪರಮಮಂಗಳದಾಯಕವಾದುದು.

೪೪. ಗೋಪ್ಯವಾದುದರಲ್ಲೂ ಅತ್ಯಂತ ಗೋಪ್ಯವಾದ ಈ ಕವಚವನ್ನು ಎಲ್ಲರಿಗೂ ಉಪದೇಶಿಸಬಾರದು. ನಿನ್ನ ಪ್ರೀತಿಗಾಗಿ ನಾನು ಹೇಳಿದ ಈ ಕವಚವನ್ನು ಯಾರಿಗೂ ಉಪದೇಶಿಸಬೇಡ.

೪೫. ವಿಧಿಪೂರ್ವಕವಾಗಿ, ವಸ್ತ್ರ, ಅಲಂಕಾರ, ಚಂದನಾದಿಗಳಿಂದ ಗುರು ದೇವನನ್ನು ಪೂಜಿಸಿ ಆತನ ಅನುಗ್ರಹದಿಂದ ಈ ಕವಚೋಪದೇಶವನ್ನು ಪಡೆದು, ಕಂಠದಲ್ಲಾಗಲೀ, ದಕ್ಷಿಣಹಸ್ತದಲ್ಲಾಗಲೀ ಈ ಕವಚಧಾರಣೆಮಾಡುವ ಮನುಜನು ವಿಷ್ಣುಸದೃಶನಾಗುವನು.

ಶತಲಕ್ಷಜಪೇನೈವ ಸಿದ್ಧಂ ಚ ಕವಚಂ ಭವೇತ್ ।
ಯದಿ ಸ್ಯಾತ್ಸಿದ್ಧಕವಚೋ ನ ದಗ್ಧೋ ವಹ್ನಿನಾ ಭವೇತ್ ॥ ೪೬ ॥

ಏತಸ್ಮಾತ್ಕವಚಾದ್ದುರ್ಗೇ ರಾಜಾ ದುರ್ಯೋಧನಃ ಪುರಾ ।
ವಿಶಾರದೋ ಜಲಸ್ತಂಭಂ ವಹ್ನಿಸ್ತಂಭಂ ಚ ನಿಶ್ಚಿತಂ ॥ ೪೭ ॥

ಮಯಾ ಸನತ್ಕುಮಾರಾಯ ಪುರಾ ದತ್ತಂ ಚ ಪುಷ್ಕರೇ ।
ಸೂರ್ಯಪರ್ವಣಿ ಮೇರೌ ಚ ಸ ಸಾಂದೀಪನಯೇ ದದೌ ॥ ೪೮ ॥

ಬಲ್ಲಾಯ ತೇನ ದತ್ತಂ ಚ ದದೌ ದುರ್ಯೋಧನಾಯ ಸಃ ।
ಕವಚಸ್ಯ ಪ್ರಸಾದೇನ ಜೀವನ್ಮುಕ್ತೋ ಭವೇನ್ನರಃ ॥ ೪೯ ॥

ನಿತ್ಯಂ ಪಠತಿ ಭಕ್ತ್ಯೇದಂ ತನ್ಮಂತ್ರೋಪಾಸಕಶ್ಚ ಯಃ ।
ವಿಷ್ಣುತುಲ್ಯೋ ಭವೇನ್ನಿತ್ಯಂ ರಾಜಸೂಯಫಲಂ ಲಭೇತ್ ॥ ೫೦ ॥

---

೪೬. ಈ ಕವಚವನ್ನು ನೂರುಲಕ್ಷಸಾರಿ ಜಪಿಸಿದ ಮನುಜನು ಸಿದ್ಧಕವಚನಾಗುವನು. ಸಿದ್ಧಕವಚನಾದವನನ್ನು ಅಗ್ನಿಯೂ ಕೂಡ ದಹಿಸಲಶಕ್ತನಾಗುವನು.

೪೭. ಎಲೌ ದುರ್ಗಿಯೇ, ಈ ಕವಚದ ಮಹಿಮೆಯಿಂದ ಹಿಂದೆ ರಾಜನಾದ ದುರ್ಯೋಧನನು ಜಲಸ್ತಂಭ ಮತ್ತು ವಹ್ನಿಸ್ತಂಭ ವಿದ್ಯೆಯಲ್ಲಿ ವಿಶಾರದನಾಗಿದ್ದನು.

೪೮. ಪೂರ್ವದಲ್ಲಿ ನಾನು ಈ ಕವಚವನ್ನು ಸನತ್ಕುಮಾರನಿಗೆ ಪುಷ್ಕರಕ್ಷೇತ್ರದಲ್ಲಿ ಉಪದೇಶಿಸಿದೆನು. ಅವನೂ ಕೂಡ ಮೇರುಪರ್ವತದಲ್ಲಿ ಸಾಂದೀಪನಿಗೆ ಸೂರ್ಯಗ್ರಹಣಕಾಲದಲ್ಲಿ ಉಪದೇಶಿಸಿದನು.

೪೯. ಸಾಂದೀಪನಿಯು ಬಲ್ಲನಿಗೂ, ಬಲ್ಲನು ದುರ್ಯೋಧನನಿಗೂ ಕ್ರಮವಾಗಿ ಉಪದೇಶಿಸಿದರು. ಈ ಕವಚದ ಅನುಗ್ರಹ ಪಡೆದ ಮನುಜನು ಜೀವನ್ಮುಕ್ತನಾಗುವನು.

೫೦ ರಾಧಾಮಂತ್ರೋಪಾಸನೆಮಾಡುತ್ತಾ ನಿತ್ಯವೂ ಈ ಕವಚವನ್ನು ಭಕ್ತಿಯಿಂದ ಪಠಿಸುವವನು ವಿಷ್ಣುವಿಗೆ ಸಮಾನನಾಗಿ ರಾಜಸೂಯಯಾಗದ ಫಲವನ್ನು ಪಡೆಯುವನು.

ಸ್ನಾನೇನ ಸರ್ವತೀರ್ಥಾನಾಂ ಸರ್ವದಾನೇನ ಯತ್ಫಲಂ ।
ಸರ್ವವ್ರತೋಪವಾಸೇನ ಪೃಥಿವ್ಯಾಶ್ಚ ಪ್ರದಕ್ಷಿಣೈಃ ॥ ೫೧ ॥

ಸರ್ವಯಜ್ಞೇಷು ದೀಕ್ಷಾಯಾಂ ನಿತ್ಯಂ ವೈ ಸತ್ಯರಕ್ಷಣೇ ।
ನಿತ್ಯಂ ಶ್ರೀಕೃಷ್ಣಸೇವಾಯಾಂ ಕೃಷ್ಣನೈವೇದ್ಯ ಭಕ್ಷಣೇ ॥ ೫೨ ॥

ಪಾಠೇ ಚತುರ್ಣಾಂ ವೇದಾನಾಂ ಯತ್ಫಲಂ ಚ ಲಭೇನ್ನರಃ ।
ತತ್ಫಲಂ ಲಭತೇ ನೂನಂ ಪಠನಾತ್ಕವಚಸ್ಯ ಚ ॥ ೫೩ ॥

ರಾಜದ್ವಾರೇ ಶ್ಮಶಾನೇ ಚ ಸಿಂಹವ್ಯಾಘ್ರಾನ್ವಿತೇ ವನೇ ।
ದಾವಾಗ್ನೌ ಸಂಕಟೇ ಚೈವ ದಸ್ಯುಚೌರಾನ್ವಿತೇ ಭಯೇ ॥ ೫೪ ॥

ಕಾರಾಗಾರೇ ರಿಪುಗ್ರಸ್ತೇ ಘೋರೇ ಚ ದೃಢಬಂಧನೇ ।
ವ್ಯಾಧಿಯುಕ್ತೋ ಭವೇನ್ಮುಕ್ತೋ ಧಾರಣಾತ್ಕವಚಸ್ಯ ಚ ॥ ೫೫ ॥

---

೫೧–೫೨. ಸಕಲ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದರಿಂದಲೂ, ಸರ್ವಶ್ರೇಷ್ಠವಾದ ದ್ರವ್ಯಗಳನ್ನು ದಾನಮಾಡುವುದರಿಂದಲೂ, ಸಕಲ ಪುಣ್ಯವ್ರತಗಳನ್ನಾಚರಿಸಿ ಉಪವಾಸಮಾಡುವುದರಿಂದಲೂ, ಭೂಮಂಡಲವನ್ನು ಪ್ರದಕ್ಷಿಣೆಮಾಡುವುದರಿಂದಲೂ, ಎಲ್ಲ ಯಾಗಗಳಲ್ಲೂ ದೀಕ್ಷೆಯನ್ನು ಕೈಗೊಳ್ಳುವುದರಿಂದಲೂ, ನಿತ್ಯವೂ ಸತ್ಯಪರಿಪಾಲನೆ ಮಾಡುವುದರಿಂದಲೂ, ಪ್ರತಿದಿನವೂ ಶ್ರೀಕೃಷ್ಣನ ಸೇವೆಮಾಡಿ ನೈವೇದ್ಯವನ್ನು ಭುಜಿಸುವುದರಿಂದಲೂ ಲಭಿಸುವ ಪುಣ್ಯಫಲವು ಈ ಕವಚಧಾರಣೆ ಮಾತ್ರದಿಂದಲೇ ಲಭಿಸುವುದು.

೫೩. ಚತುರ್ವೇದಗಳನ್ನು ಬಾಯಿಪಾಠಮಾಡುವುದರಿಂದ ಲಭಿಸುವ ಪುಣ್ಯವೂ ಕೂಡ ಈ ಕವಚವನ್ನು ಪಠಿಸಿದ ಮಾತ್ರದಿಂದಲೇ ಮಾನುಜನಿಗೆ ಲಭಿಸುವುದು.

೫೪–೫೫ ರಾಜದ್ವಾರದಲ್ಲಾಗಲೀ, ಸ್ಮಶಾನದಲ್ಲಾಗಲೀ, ಸಿಂಹ, ಹುಲಿ ಮುಂತಾದ ದುಷ್ಟಪ್ರಾಣಿಗಳಿಂದ ಸಂಕುಲಿತವಾದ ಅರಣ್ಯದಲ್ಲಾಗಲೀ, ಕಾಡುಕಿಚ್ಚಿನ ಮಧ್ಯದಲ್ಲಾಗಲೀ, ಕಳ್ಳರ ಮತ್ತು ತಲೆಬಡಕರ ಗುಂಪಿನಲ್ಲಾಗಲೀ, ಕಾರಾಗೃಹದಲ್ಲಾಗಲೀ, ಘೋರವಿಪತ್ತಿಗೆ ಸಿಲುಕಿದಾಗಾಗಲೀ, ಭಯಂಕರ ರೋಗಕ್ಕೆ ತುತ್ತಾದಾಗಾಗಲೀ ಈ ಕವಚಧಾರಣೆಯ ಪ್ರಭಾವದಿಂದ ಸುರಕ್ಷಿತವಾಗಿ ಮನುಜನು ಮುಕ್ತನಾಗುವನು.

ಇತ್ಯೇತತ್ಕಥಿತಂ ದುರ್ಗೇ ತವೈವೇದಂ ಮಹೇಶ್ವರಿ ।
ತ್ವಮೇವ ಸರ್ವರೂಪಾ ಮಾಂ ಮಾಯಯಾ ಪೃಚ್ಛಸಿ ಮಾಯಯಾ ॥ ೫೬ ॥

॥ ಶ್ರೀ ನಾರಾಯಣ ಉವಾಚ ॥

ಇತ್ಯುಕ್ತ್ವಾ ರಾಧಿಕಾಖ್ಯಾನಂ ಸ್ಮಾರಂ ಸ್ಮಾರಂ ಚ ಮಾಧವಂ ।
ಪುಲಕಾಂಕಿತಸರ್ವಾಂಗಃ ಸಾಶ್ರುನೇತ್ರೋ ಬಭೂವ ಸಃ ॥ ೫೭ ॥

ನ ಕೃಷ್ಣಸದೃಶೋ ದೇವೋ ನ ಗಂಗಾಸದೃಶೀ ಸರಿತ್ ।
ನ ಪುಷ್ಕರಾತ್ಪರಂ ತೀರ್ಥಂ ನ ವರ್ಣೋ ಬ್ರಾಹ್ಮಣಾತ್ಪರಃ ॥ ೫೮ ॥

ಪರಮಾಣೋಃ ಪರಂ ಸೂಕ್ಷ್ಮಂ ಮಹಾವಿಷ್ಣೋಃ ಪರೋ ಮಹಾನ್ ।
ನಭಃ ಪರಂ ಚ ವಿಸ್ತೀರ್ಣಂ ಯಥಾ ನಾಸ್ತ್ಯೇವ ನಾರದ ॥ ೫೯ ॥

ಯಥಾ ನ ವೈಷ್ಣವಾಜ್ಜ್ಞಾನೀ ಯೋಗೀಂದ್ರಃ ಶಂಕರಾತ್ಪರಃ ।
ಕಾಮಕ್ರೋಧಲೋಭಮೋಹಾ ಜಿತಾಸ್ತೇನೈವ ನಾರದ ॥ ೬೦ ॥

---

೫೬. ಎಲೌ ದುರ್ಗಾದೇವಿಯೇ, ಈ ರೀತಿಯಾಗಿ ರಾಧಾಕವಚದ ಮಹಿಮೆಯನ್ನು ನಿನಗೆ ವಿವರಿಸಿದೆನು. ಮಾಯಾರೂಪಿಣಿಯಾದ ನೀನು ಎಲ್ಲವನ್ನೂ ತಿಳಿದಿದ್ದರೂ ಏನೂ ತಿಳಿಯದವಳಂತೆ ನಟಿಸಿ ನನ್ನಿಂದ ಕೇಳಿ ತಿಳಿದಿರುವೆ.

೫೭. ಶ್ರೀನಾರಾಯಣ:—ಶಂಕರನು ಪಾರ್ವತಿಗೆ ಇಂತು ರಾಧಾಖ್ಯಾನವನ್ನು ಹೇಳುತ್ತ ಶ್ರೀಕೃಷ್ಣಪರಮಾತ್ಮನನ್ನು ಸ್ಮರಿಸಿಕೊಳ್ಳುತ್ತ ರೋಮಾಂಚಿತ ಶರೀರನೂ, ಆನಂದಾಶ್ರುಪೂರಿತವಾದ ನೇತ್ರನೂ ಆದನು.

೫೮. ಶ್ರೀಕೃಷ್ಣನಿಗೆ ಸಮನಾದ ದೇವನೂ, ಗಂಗೆಗೆ ಸದೃಶವಾದ ಹೊಳೆಯೂ, ಪುಷ್ಕರಕ್ಕೆ ಸಮನಾದ ಪುಣ್ಯಕ್ಷೇತ್ರವೂ, ಬ್ರಾಹ್ಮಣಜಾತಿಗಿಂತ ಶ್ರೇಷ್ಠವಾದ ವರ್ಣವೂ ಬೇರೊಂದಿಲ್ಲ.

೫೯-೬೦. ಪರಮಾಣುವಿಗಿಂತ ಸೂಕ್ಷ್ಮವಾದುದೂ, ಮಹಾವಿಷ್ಣುವಿಗಿಂತ ಮಹತ್ತಾದುದೂ, ಆಕಾಶಕ್ಕಿಂತ ವಿಸ್ತಾರವಾದುದೂ ಬೇರಾವುದೂ ಹೇಗೆ ಇಲ್ಲವೋ ಹಾಗೆ ವಿಷ್ಣುಭಕ್ತನಿಗಿಂತ ಶ್ರೇಷ್ಠಜ್ಞಾನಿಯೂ, ಕಾಮಕ್ರೋಧಾದಿ ಅರಿಷಡ್ವರ್ಗಗಳನ್ನೂ ಜಯಿಸಿರುವ ಶಂಕರನಿಗಿಂತ ಶ್ರೇಷ್ಠನಾದ ಯೋಗೀಂದ್ರನೂ ಬೇರೊಬ್ಬನಿಲ್ಲ.

ಸ್ವಪ್ನೇ ಜಾಗರಣೇ ಶಶ್ವತ್ಕೃಷ್ಣಧ್ಯಾನರತಃ ಶಿವಃ ।
ಯಥಾ ಕೃಷ್ಣಸ್ತಥಾ ಶಂಭುರ್ನ ಭೇದೋ ಮಾಧವೇಶಯೋಃ ॥ ೬೧ ॥

ಯಥಾ ಶಂಭುರ್ವೈಷ್ಣವೇಷು ಯಥಾ ದೇವೇಷು ಮಾಧವಃ ।
ತಥೇದಂ ಕವಚಂ ವತ್ಸ ಕವಚೇಷು ಪ್ರಶಸ್ತಕಂ ॥ ೬೨ ॥

ಶಿಶಬ್ದೋ ಮಂಗಲಾರ್ಥಶ್ಚ ವಕಾರೋ ದಾತೃವಾಚಕಃ ।
ಮಂಗಲಾನಾಂ ಪ್ರದಾತಾ ಯಃ ಸ ಶಿವಃ ಪರಿಕೀರ್ತಿತಃ ॥ ೬೩ ॥

ನರಾಣಾಂ ಸಂತತಂ ವಿಶ್ವೇ ಶಂ ಕಲ್ಯಾಣಂ ಕರೋತಿ ಯಃ ।
ಕಲ್ಯಾಣಂ ಮೋಕ್ಷ ಇತ್ಯುಕ್ತಂ ಸ ಏವ ಶಂಕರಃ ಸ್ಮೃತಃ ॥ ೬೪ ॥

ಬ್ರಹ್ಮಾದೀನಾಂ ಸುರಾಣಾಂ ಚ ಮುನೀನಾಂ ವೇದವಾದಿನಾಂ ।
ತೇಷಾಂ ಚ ಮಹತಾಂ ದೇವೋ ಮಹಾದೇವಃ ಪ್ರಕೀರ್ತಿತಃ ॥ ೬೫ ॥

---

೬೧. ಪರಶಿವನು ಸ್ವಪ್ನಾವಸ್ಥೆಯಲ್ಲೂ, ಜಾಗ್ರದವಸ್ಥೆಯಲ್ಲೂ ಶ್ರೀಕೃಷ್ಣನ ಧ್ಯಾನದಲ್ಲೇ ಮಗ್ನನಾಗಿರುವುದರಿಂದ ಶ್ರೀಕೃಷ್ಣ ಮತ್ತು ಶಿವನಿಗೆ ಯಾವ ಭೇದವೂ ಇಲ್ಲ.

೬೨. ವಿಷ್ಣುಭಕ್ತರಲ್ಲಿ ಈಶ್ವರನೂ, ದೇವರಲ್ಲಿ ಶ್ರೀಕೃಷ್ಣನೂ, ಶ್ರೇಷ್ಠರಾಗಿರುವಂತೆ ವತ್ಸ ನಾರದನೇ, ಈ ರಾಧಾಕವಚವು ಕವಚಗಳಲ್ಲಿ ಅತ್ಯುತ್ತಮವಾಗಿದೆ.

೬೩. 'ಶಿ' ಎಂದರೆ ಮಂಗಳವೆಂದೂ 'ವ' ಎಂದರೆ ದಾನಮಾಡುವವನೆಂದೂ ಅರ್ಥವಾಗುವುದರಿಂದ ಮಂಗಳವನ್ನುಂಟುಮಾಡುವವನೇ ಶಿವನೆನಿಸುವನು.

೬೪. ಪ್ರಪಂಚದಲ್ಲಿರುವ ಎಲ್ಲ ಮನುಜರಿಗೂ 'ಶಂ' ಎಂದರೆ ಕಲ್ಯಾಣವನ್ನು 'ಕರ' ಎಂದರೆ ಉಂಟುಮಾಡುವನೋ (ಕಲ್ಯಾಣವೆಂದರೆ ಮೋಕ್ಷ) ಅವನೇ ಶಂಕರನೆನಿಸುವನು.

೬೫. ಬ್ರಹ್ಮಾದಿ ಸಕಲ ದೇವತೆಗಳಿಗೂ, ವೇದಜ್ಞರಾದ ಮುನಿಗಳಿಗೂ ಎಲ್ಲ ಮಹಾತ್ಮರಿಗೂ ಶ್ರೇಷ್ಠನಾದುದರಿಂದ ಶಿವನನ್ನು ಮಹಾದೇವನೆನ್ನುವರು

ಮಹತೀ ಪೂಜಿತಾ ವಿಶ್ವೇ ಮೂಲಪ್ರಕೃತಿರೀಶ್ವರೀ ।
ತಸ್ಯಾ ದೇವಃ ಪೂಜಿತಶ್ಚ ಮಹಾದೇವಃ ಸ ಚ ಸ್ಮೃತಃ ॥ ೬೬ ॥

ವಿಶ್ವಸ್ಥಾನಾಂ ಚ ಸರ್ವೇಷಾಂ ಮಹತಾಮೀಶ್ವರಃ ಸ್ವಯಂ ।
ಮಹೇಶ್ವರಂ ಚ ತೇನೇಮಂ ಪ್ರವದಂತಿ ಮನೀಷಿಣಃ ॥ ೬೭ ॥

ಹೇ ಬ್ರಹ್ಮಪುತ್ರ ಧನ್ಯೋಽಸಿ ಯದ್ಗುರುಶ್ಚ ಮಹೇಶ್ವರಃ ।
ಶ್ರೀಕೃಷ್ಣಭಕ್ತಿದಾತಾ ಯೋ ಭವಾನ್ಪೃಚ್ಛತಿ ಮಾಂ ಚ ಕಿಂ ॥ ೬೮ ॥

ಇತಿ ಶ್ರೀಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯಪ್ರಕರಣೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ರಾಧಿಕೋಪಾಖ್ಯಾನೇ ತನ್ಮಂತ್ರಾದಿ
ಕಥನಂ ನಾಮ ಷಟ್‌ಪಂಚಾಚತ್ತಮೋಽಧ್ಯಾಯಃ

---

೬೬. ಮೂಲಪ್ರಕೃತಿರೂಪಿಣಿಯಾದ ಈಶ್ವರಿಯು ಪ್ರಪಂಚದಲ್ಲಿ ಸಕಲರಿಂದಲೂ ಹೆಚ್ಚಾಗಿ ಪೂಜೆಗೊಂಡಿರುವಳು. ಆ ಮಹೇಶ್ವರಿಯ ಪತಿಯೂ, ಅವಳಿಂದ ಪೂಜಿತನೂ ಆದವನೇ ಮಹಾದೇವನೆನಿಸಿರುವನು.

೬೭. ನಿಖಿಲ ವಿಶ್ವದಲ್ಲಿರುವ ಸಕಲ ಮಹಾತ್ಮರಿಗೂ ಸ್ವಯಂ ಈಶ್ವರನಾಗಿರುವುದರಿಂದಲೂ, ಇವನನ್ನು ಮಹೇಶ್ವರನೆಂದು ಜ್ಞಾನಿಗಳು ಕರೆಯುವರು.

೬೮. ಎಲೈ ಬ್ರಹ್ಮಪುತ್ರನಾದ ನಾರದನೇ, ಶ್ರೀಕೃಷ್ಣಭಕ್ತಿಯನ್ನು ಕೊಡಬಲ್ಲ ಮಹೇಶ್ವರನೇ ನಿನ್ನ ಗುರುವಾದುರಿಂದ ನೀನೇ ಧನ್ಯನು. ನಿನ್ನಂಥವನು ನನ್ನಿಂದ ಕೇಳಿ ತಿಳಿಯಬೇಕಾದುದೇನಿದೆ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ
ರಾಧೋಪಾಖ್ಯಾನವೆಂಬ ಐವತ್ತಾರನೆಯ ಅಧ್ಯಾಯವು
ಮುಗಿದುದು.

## ಐವತ್ತಾರನೆಯ ಅಧ್ಯಾಯದ ಸಾರಾಂಶ

ಈ ಅಧ್ಯಾಯದಲ್ಲಿ ಪರಮೇಶ್ವರನು ಪಾರ್ವತಿಗೆ ರಾಧಾಕವಚದ ಮಹಿಮೆಯನ್ನು ಬಣ್ಣಿಸಿ, ಆ ಕವಚಧಾರಣೆ ಮಾಡಿದವರ ಪ್ರಭಾವವನ್ನು ವಿವರಿಸಿ, ಆ ಕವಚಧಾರಣೆಯ ಕ್ರಮವನ್ನೂ ಅಂಗನ್ಯಾಸ ಕರನ್ಯಾಸಾದಿಗಳನ್ನೂ, ಆತ್ಮರಕ್ಷಾಕ್ರಮವನ್ನೂ ನಿರೂಪಿಸಿರುವನು.

॥ ಓಂ ।

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### ॥ ಸಪ್ತಪಂಚಾಶತ್ತಮೋಽಧ್ಯಾಯಃ ॥

॥ ನಾರದ ಉವಾಚ ॥

ಸರ್ವಾಖ್ಯಾನಂ ಶ್ರುತಂ ಬ್ರಹ್ಮನ್ನತೀವ ಪರಮಾದ್ಭುತಂ ।
ಅಧುನಾ ಶ್ರೋತುಮಿಚ್ಛಾಮಿ ದುರ್ಗೋಪಾಖ್ಯಾನಮುತ್ತಮಂ ॥ ೧ ॥

ದುರ್ಗಾ ನಾರಾಯಣೀಶಾನಾ ವಿಷ್ಣುಮಾಯಾ ಶಿವಾ ಸತೀ ।
ನಿತ್ಯಾ ಸತ್ಯಾ ಭಗವತೀ ಶರ್ವಾಣೀ ಸರ್ವಮಂಗಲಾ ॥ ೨ ॥

ಅಂಬಿಕಾ ವೈಷ್ಣವೀ ಗೌರೀ ಪಾರ್ವತೀ ಚ ಸನಾತನೀ ।
ನಾಮಾನಿ ಕೌಥುಮೋಕ್ತಾನಿ ಸರ್ವೇಷಾಂ ಶುಭದಾನಿ ಚ ॥ ೩ ॥

---

### ಐವತ್ತೇಳನೆಯ ಅಧ್ಯಾಯವು

೧. ನಾರದ:—ಎಲೈ ನಾರಾಯಣನೇ, ಅತ್ಯದ್ಭುತವಾದ ಎಲ್ಲ ದೇವದೇವಿಯರ ಕಥೆಯನ್ನೂ ಕೇಳಿದುದಾಯಿತು. ಈಗ ಉತ್ತಮವಾದ ದುರ್ಗಾದೇವಿಯ ಕಥೆಯನ್ನು ಕೇಳಬಯಸುತ್ತೇನೆ.

೨-೩. 'ದುರ್ಗಾ, ನಾರಾಯಣೀ, ಈಶಾನಾ, ವಿಷ್ಣುಮಾಯಾ, ಶಿವಾ, ಸತೀ, ನಿತ್ಯಾ, ಸತ್ಯಾ, ಭಗವತೀ, ಶರ್ವಾಣೀ, ಸರ್ವಮಂಗಳಾ, ಅಂಬಿಕಾ, ವೈಷ್ಣವೀ, ಗೌರಿ , ಪಾರ್ವತೀ, ಸನಾತನೀ' ಎಂಬ ಷೋಡಶನಾಮಗಳು ಕೌಥುಮ ನಿಂದ ಉಕ್ತವಾಗಿ ಸಕಲರಿಗೂ ಮಂಗಳದಾಯಕವಾಗಿದೆ.

**ಅರ್ಥಂ ಷೋಡಶನಾಮ್ನಾಂ ಚ ಸರ್ವೇಷಾಮೀಪ್ಸಿತಂ ವರಂ ।**
**ಬ್ರೂಹಿ ವೇದವಿದಾಂ ಶ್ರೇಷ್ಠ ವೇದೋಕ್ತಂ ಸರ್ವಸಂಮತಂ　　　　॥ ೪ ॥**

**ಕೇನ ವಾ ಪೂಜಿತಾ ಸಾದೌ ದ್ವಿತೀಯೇ ಕೇನ ವಾ ಪುರಾ ।**
**ತೃತೀಯೇ ವಾ ಚತುರ್ಥೇ ವಾ ಕೇನ ಸರ್ವತ್ರ ಪೂಜಿತಾ　　　　॥ ೫ ॥**

**॥ ನಾರಾಯಣ ಉವಾಚ ॥**

**ಅರ್ಥಂ ಷೋಡಶನಾಮ್ನಾಂ ಚ ವಿಷ್ಣುರ್ವೇದೇ ಚಕಾರ ಸಃ ।**
**ಜ್ಞಾತ್ವಾ ಪುನಃ ಪೃಚ್ಛಸಿ ತ್ವಂ ಕಥಯಾಮಿ ಯಥಾಗಮಂ　　　　॥ ೬ ॥**

**ದುರ್ಗೋ ದೈತ್ಯೇ ಮಹಾವಿಘ್ನೇ ಭವಬಂಧೇ ಚ ಕರ್ಮಣಿ ।**
**ಶೋಕೇ ದುಃಖೇ ಚ ನರಕೇ ಯಮದಂಡೇ ಚ ಜನ್ಮನಿ　　　　॥ ೭ ॥**

**ಮಹಾಭಯೇಽತಿರೋಗೇ ಚಾಪ್ಯಾಶಬ್ದೋ ಹಂತೃವಾಚಕಃ ।**
**ಏತಾನ್ ಹಂತ್ಯೇವ ಯಾ ದೇವೀ ಸಾ ದುರ್ಗಾ ಪರಿಕೀರ್ತಿತಾ　　　　॥ ೮ ॥**

---

೪. ವೇದಜ್ಞರಲ್ಲಿ ಶ್ರೇಷ್ಠನಾದ ಎಲೈ ನಾರಾಯಣನೇ, ವೇದೋಕ್ತವೂ, ಸರ್ವಸಮ್ಮತವೂ ಇಷ್ಟಾರ್ಥದಾಯಕವೂ ಆದ ಈ ಷೋಡಶನಾಮಗಳ ಅರ್ಥವನ್ನು ದಯವಿಟ್ಟು ಹೇಳು.

೫. ಪೂರ್ವದಲ್ಲಿ ದುರ್ಗಾದೇವಿಯನ್ನು ಮೊಟ್ಟಮೊದಲು ಯಾರು ಪೂಜಿಸಿದರು. ಅನಂತರ ಕ್ರಮವಾಗಿ ಎರಡು, ಮೂರು ಮತ್ತು ನಾಲ್ಕನೆಯ ಸಾರಿ ಯಾರಿಂದ ಪೂಜಿತಳಾಗಿ ಆ ದುರ್ಗಾದೇವಿಯು ಸರ್ವಪೂಜಿತಳಾದಳು.

೬. ನಾರಾಯಣ:—ಈ ಷೋಡಶನಾಮಗಳ ಅರ್ಥವನ್ನು ವಿಷ್ಣುವು ವೇದದಲ್ಲಿ ವಿವರಿಸಿರುವನು. ನೀನು ಇವೆಲ್ಲವನ್ನೂ ತಿಳಿದೂ ಪುನಃ ಕೇಳುತ್ತಿದ್ದೀಯೆ. ಆಗಲಿ ಶಾಸ್ತ್ರೋಕ್ತಕ್ರಮದಲ್ಲಿ ಇವುಗಳ ಅರ್ಥವನ್ನು ಹೇಳುವೆನು ಕೇಳು.

೭–೮. 'ದುರ್ಗ'ವೆಂದರೆ ರಾಕ್ಷಸ, ಮಹಾವಿಘ್ನ, ಸಂಸಾರಬಂಧಕವಾದ ಕರ್ಮ, ದುಃಖ, ನರಕ, ಯಮದಂಡ, ಪುನರ್ಜನ್ಮ, ಮಹಾಭಯ ಮತ್ತು ದೀರ್ಘರೋಗ ಮುಂತಾದ ಅರ್ಥಗಳಾಗುತ್ತವೆ. 'ಆ' ಎಂದರೆ ಇವುಗಳನ್ನು ನಾಶಗೊಳಿಸುವವಳು ಎಂದರ್ಥವಾಗುತ್ತದೆ. ಆದುದರಿಂದ ಮೇಲೆ ಹೇಳಿದ ಅರಿಷ್ಟಗಳನ್ನೆಲ್ಲ ನಾಶಗೊಳಿಸುವ ದೇವಿಗೆ ದುರ್ಗಾ ಎಂದು ಹೆಸರು ಸಿದ್ಧವಾಗುವುದು.

ಯಶಸಾ ತೇಜಸಾ ರೂಪೈರ್ನಾರಾಯಣಸಮಾ ಗುಣೈಃ ।
ಶಕ್ತಿರ್ನಾರಾಯಣಸ್ಯೇಯಂ ತೇನ ನಾರಾಯಣೀ ಸ್ಮೃತಾ ॥ ೯ ॥

ಈಶಾನಃ ಸರ್ವಸಿದ್ಧ್ಯರ್ಥೇ ಚಾಶಬ್ದೋ ದಾತೃವಾಚಕಃ ।
ಸರ್ವಸಿದ್ಧಿಪ್ರದಾತ್ರೀ ಯಾ ಸಾಪೀಶಾನಾ ಪ್ರಕೀರ್ತಿತಾ ॥ ೧೦ ॥

ಸೃಷ್ಟ್ವಾ ಮಾಯಾ ಪುರಾ ಸೃಷ್ಟೌ ವಿಷ್ಣುನಾ ಪರಮಾತ್ಮನಾ ।
ಮೋಹಿತಂ ಮಾಯಯಾ ವಿಶ್ವಂ ವಿಷ್ಣುಮಾಯಾ ಪ್ರಕೀರ್ತಿತಾ ॥ ೧೧ ॥

ಶಿವೇ ಕಲ್ಯಾಣರೂಪಾ ಚ ಶಿವದಾ ಚ ಶಿವಪ್ರಿಯಾ ।
ಪ್ರಿಯೇ ದಾತರಿ ಚಾಶಬ್ದೋ ಶಿವಾ ತೇನ ಪ್ರಕೀರ್ತಿತಾ ॥ ೧೨ ॥

---

೯. ಯಾವ ದೇವಿಯು ತನ್ನ ಕೀರ್ತಿ, ತೇಜಸ್ಸು, ರೂಪ ಮತ್ತು ಗುಣಗಳಲ್ಲಿ ನಾರಾಯಣನಿಗೆ ಸಮಾನಳಾಗಿ ನಾರಾಯಣನ ಶಕ್ತಿಸ್ವರೂಪಳಾಗಿರುವಳೋ ಆ ದೇವಿಯು 'ನಾರಾಯಣಿ'ಯೆನಿಸುವಳು.

೧೦. 'ಈಶಾನ' ಎಂದರೆ ಸಕಲ ಇಷ್ಟಾರ್ಥಸಿದ್ಧಿಯೆಂದೂ, 'ಆ' ಎಂದರೆ ಅದನ್ನು ಕೊಡುವವಳು ಎಂದೂ ಅರ್ಥವಾಗುವುದರಿಂದ ಸರ್ವಸಿದ್ಧಿದಾಯಕಳೇ 'ಈಶಾನಾ'ಯೆಂದು ಹೆಸರಾಂತಳು.

೧೧. ಯಾರು ಆದಿಸೃಷ್ಟಿಯಲ್ಲಿ ಪರಮಾತ್ಮನಾದ ವಿಷ್ಣುವಿನಿಂದ ಸೃಷ್ಟಳಾಗಿ ತನ್ನ ಮಾಯೆಯಿಂದ ವಿಶ್ವವನ್ನು ಮೋಹಗೊಳಿಸಿದಳೋ ಆ ದೇವಿಯು 'ವಿಷ್ಣು ಮಾಯೆ'ಯೆನಿಸಿದಳು.

೧೨. 'ಶಿವ' ಎಂದರೆ ಕಲ್ಯಾಣವೆಂದೂ, 'ಆ' ಎಂದರೆ ಪ್ರಿಯಳು ಮತ್ತು ದಾನಮಾಡುವವಳೂ ಎಂದರ್ಥವಾಗುವುದರಿಂದ ಶಿವದಾಯಕಳೂ, ಶಿವಪ್ರಿಯಳೂ ಆದ ದೇವಿಯನ್ನು 'ಶಿವಾ'ಯೆನ್ನುವರು.

**ಸದ್ಬುದ್ಧ್ಯಧಿಷ್ಠಾತೃದೇವೀ ವಿದ್ಯಮಾನಾ ಯುಗೇ ಯುಗೇ ।**
**ಪತಿವ್ರತಾ ಸುಶೀಲಾ ಚ ಸಾ ಸತೀ ಪರಿಕೀರ್ತಿತಾ ॥ ೧೩ ॥**

**ಯಥಾ ನಿತ್ಯೋ ಹಿ ಭಗವಾನ್ನಿತ್ಯಾ ಭಗವತೀ ತಥಾ ।**
**ಸ್ವಮಾಯಯಾ ತಿರೋಭೂತಾ ತತ್ರೇಶೇ ಪ್ರಾಕೃತೇ ಲಯೇ ॥ ೧೪ ॥**

**ಆಬ್ರಹ್ಮಸ್ತಂಬಪರ್ಯಂತಂ ಸರ್ವಂ ಮಿಥ್ಯೈವ ಕೃತ್ರಿಮಂ ।**
**ದುರ್ಗಾ ಸತ್ಯಸ್ವರೂಪಾ ಸಾ ಪ್ರಕೃತಿರ್ಭಗವಾನ್ಯಥಾ ॥ ೧೫ ॥**

**ಸಿದ್ಧ್ಯೈಶ್ವರ್ಯಾದಿಕಂ ಸರ್ವಂ ಯಸ್ಯಾಮಸ್ತಿ ಯುಗೇ ಯುಗೇ ।**
**ಸಿದ್ಧಾದಿಕೇ ಭಗೋ ಜ್ಞೇಯಸ್ತೇನ ಸಾ ಭಗವತೀ ಸ್ಮೃತಾ ॥ ೧೬ ॥**

---

೧೩. ನಿತ್ಯಳಾದುದರಿಂದ ಪ್ರತಿಯುಗದಲ್ಲೂ ಸದ್ಬುದ್ಧಿಗೆ ಅಧಿಷ್ಠಾತೃದೇವಿಯಾಗಿದ್ದುಕೊಂಡು ಯಾರು ಪತಿವ್ರತೆ ಮತ್ತು ಸುಶೀಲೆಯೆನಿಸಿಕೊಂಡಳೋ ಆ ದೇವಿಯನ್ನು 'ಸತೀ'ಯೆಂದು ಕರೆದರು.

೧೪. ಭಗವಂತನಾದ ಪರಮಾತ್ಮನು ನಿತ್ಯವಾಗಿರುವಂತೆ ಭಗವತಿಯಾದ ಈ ದೇವಿಯೂ ಕೂಡ ನಿತ್ಯಳಾದುದರಿಂದ ಪ್ರಾಕೃತಪ್ರಳಯದಲ್ಲಿ ತನ್ನ ಮಾಯಾಶಕ್ತಿಯಿಂದ ಸರ್ವೇಶ್ವರನಲ್ಲಿ ಐಕ್ಯಳಾದರೂ 'ನಿತ್ಯಾ' ಯೆನಿಸಿಕೊಂಡಿರುವಳು.

೧೫. ಬ್ರಹ್ಮನಿಂದ ಒಂದು ಹುಲ್ಲುಕಡ್ಡಿಯವರೆಗೆ ಸಕಲಸೃಷ್ಟಿಯೂ, ಕೃತ್ರಿಮವೂ, ಅಸತ್ತೂ ಆಗಿರುತ್ತದೆ. ದುರ್ಗಾಪ್ರಕೃತಿಯಾದರೋ ಭಗವಂತನಂತೆ ಸತ್ಯಸ್ವರೂಪಳಾದುದರಿಂದ ' ಸತ್ಯಾ 'ಯೆನಿಸಿಕೊಳ್ಳುವಳು.

೧೬. ಸಮಗ್ರವಾದ ಐಶ್ವರ್ಯ, ಯಶಸ್ಸು, ತೇಜಸ್ಸು, ಸಂಪತ್ತು, ಜ್ಞಾನ ಮತ್ತು ವೈರಾಗ್ಯ ಈ ಆರಕ್ಕೆ ' ಭಗ ' ಎಂದು ಹೆಸರು. ಪ್ರತಿಯುಗದಲ್ಲೂ ಈ ಆರೂ ಯಾರಲ್ಲಿ ಪರಿಪೂರ್ಣವಾಗಿರುವುದೋ ಆ ದೇವಿಯನ್ನು ' ಭಗವತೀ 'ಯೆಂದು ಕರೆಯುವರು.

ಸರ್ವಾನ್ಮೋಕ್ಷಂ ಪ್ರಾಪಯತಿ ಜನ್ಮಮೃತ್ಯುಜರಾದಿಕಂ ।
ಚರಾಚರಾಂಶ್ಚ ವಿಶ್ವಸ್ಥಾಂಚ್ಛರ್ವಾಣೀ ತೇನ ಕೀರ್ತಿತಾ ॥ ೧೭ ॥

ಮಂಗಲಂ ಮೋಕ್ಷವಚನಂ ಚಾಽಽಶಬ್ದೋ ದಾತೃವಾಚಕಃ ।
ಸರ್ವಾನ್ಮೋಕ್ಷಾನ್ಯಾ ದದಾತಿ ಸೈವ ಸ್ಯಾತ್ಸರ್ವಮಂಗಲಾ ॥ ೧೮ ॥

ಹರ್ಷೇ ಸಂಪದಿ ಕಲ್ಯಾಣೇ ಮಂಗಲಂ ಪರಿಕೀರ್ತಿತಂ ।
ತಾನ್ದದಾತಿ ಚ ಸರ್ವೇಭ್ಯಸ್ತೇನ ಸಾ ಸರ್ವಮಂಗಲಾ ॥ ೧೯ ॥

ಅಂಬೇತಿ ಮಾತೃವಚನೋ ವಂದನೇ ಪೂಜನೇ ಸದಾ ।
ಪೂಜಿತಾ ವಂದಿತಾ ಮಾತಾ ಜಗತಾಂ ತೇನ ಸಾಂಬಿಕಾ ॥ ೨೦ ॥

ವಿಷ್ಣುಭಕ್ತಾ ವಿಷ್ಣುರೂಪಾ ವಿಷ್ಣೋಃ ಶಕ್ತಿಸ್ವರೂಪಿಣೀ ।
ಸೃಷ್ಟೌ ಚ ವಿಷ್ಣುನಾ ಸೃಷ್ಟಾ ವೈಷ್ಣವೀ ತೇನ ಕೀರ್ತಿತಾ ॥ ೨೧ ॥

---

೧೭. ವಿಶ್ವದಲ್ಲಿರುವ ಚರಾಚರಪ್ರಾಣಿಗಳ ಜನ್ಮಜರಾಮರಣಗಳನ್ನು ಪರಿಹರಿಸಿ ಸರ್ವರನ್ನೂ ಮೋಕ್ಷಕ್ಕೆ ಕರೆದೊಯ್ಯುವುದರಿಂದ ಆ ದೇವಿಯನ್ನು 'ಶರ್ವಾಣೀ' ಯೆನ್ನುವರು.

೧೮. 'ಮಂಗಳ' ವೆಂದರೆ ಮೋಕ್ಷವೆಂದೂ, 'ಆ' ಯೆಂದರೆ ಕೊಡುವವ ಳೆಂದೂ ಅರ್ಥವಾಗುವುದರಿಂದ ಎಲ್ಲರಿಗೂ ಮೋಕ್ಷಕೊಡುವವಳೇ 'ಸರ್ವಮಂಗಳಾ' ಎನಿಸುವಳು.

೧೯. ಅಂತೆಯೇ, ಸಂತೋಷ, ಸಂಪತ್ತು ಮತ್ತು ಮೋಕ್ಷವೆಂದು 'ಮಂಗಳ' ಶಬ್ದವು ಅರ್ಥಕೊಡುವುದು. ಅವುಗಳನ್ನು ಎಲ್ಲರಿಗೂ ಕೊಡುವವಳೇ ಸರ್ವಮಂಗಳಾಯೆನಿಸುವಳು.

೨೦. ಅಂಬಾ ಎಂದರೆ ತಾಯಿ, ವಂದನೆ ಮತ್ತು ಪೂಜೆ ಎಂದರ್ಥವಾಗು ವುದು. ಆದುದರಿಂದ ಜಗತ್ತಿನಲ್ಲಿ ಪೂಜಿತಳೂ, ವಂದಿತಳೂ ಆಗಿ ಜಗನ್ಮಾತೆ ಯಾವವಳನ್ನೇ 'ಅಂಬಿಕಾ' ಯೆನ್ನುವರು.

೨೧. ವಿಷ್ಣುಭಕ್ತಳೂ, ವಿಷ್ಣುರೂಪಿಣಿಯೂ, ವಿಷ್ಣುಶಕ್ತಿಸ್ವರೂಪಿಣಿಯೂ ಆಗಿ ವಿಷ್ಣುವಿನಿಂದಲೇ ಸೃಷ್ಟಳಾದುದರಿಂದ 'ವೈಷ್ಣವೀ 'ಯೆಂದು ಹೆಸರಾದಳು.

ಗೌರಃ ಪೀತೇ ಚ ನಿರ್ಲಿಪ್ತೇ ಪರೇ ಬ್ರಹ್ಮಣಿ ನಿರ್ಮಲೇ ।
ತಸ್ಯಾತ್ಮನಃ ಶಕ್ತಿರಿಯಂ ಗೌರೀ ತೇನ ಪ್ರಕೀರ್ತಿತಾ ॥ ೨೨ ॥

ಗುರುಃ ಶಂಭುಶ್ಚ ಸರ್ವೇಷಾಂ ತಸ್ಯ ಶಕ್ತಿಃ ಪ್ರಿಯಾ ಸತೀ ।
ಗುರುಃ ಕೃಷ್ಣಶ್ಚ ತನ್ಮಾಯಾ ಗೌರೀ ತೇನ ಪ್ರಕೀರ್ತಿತಾ ॥ ೨೩ ॥

ತಿಥಿಭೇದೇ ಪರ್ವಭೇದೇ ಕಲ್ಪಭೇದೇನ್ಯಭೇದಕೇ ।
ಖ್ಯಾತೌ ತೇಷು ಚ ವಿಖ್ಯಾತಾ ಪಾರ್ವತೀ ತೇನ ಕೀರ್ತಿತಾ ॥ ೨೪ ॥

ಮಹೋತ್ಸವವಿಶೇಷೇ ಚ ಪರ್ವನ್ನಿತಿ ಸುಕೀರ್ತಿತಾ ।
ತಸ್ಯಾಧಿದೇವೀ ಯಾ ಸಾ ಚ ಪಾರ್ವತೀ ಪರಿಕೀರ್ತಿತಾ ॥ ೨೫ ॥

ಪರ್ವತಸ್ಯ ಸುತಾ ದೇವೀ ಸಾವಿರ್ಭೂತಾ ಚ ಪರ್ವತೇ ।
ಪರ್ವತಾಧಿಷ್ಠಾತೃದೇವೀ ಪಾರ್ವತೀ ತೇನ ಕೀರ್ತಿತಾ ॥ ೨೬ ॥

---

೨೨. 'ಗೌರ' ಎಂದರೆ ಹೊಂಬಣ್ಣವೆಂದೂ, ನಿರ್ಲಿಪ್ತವಾದ ಪರಬ್ರಹ್ಮವೆಂದೂ, ನಿರ್ಮಲವಸ್ತುವೆಂದೂ ಅರ್ಥವಾಗುವುದರಿಂದ, ಆರೀತಿಯಾದ ಪರಮಾತ್ಮನ ಶಕ್ತಿರೂಪಿಣಿಯಾದುದರಿಂದ ಈ ದೇವಿಯನ್ನು 'ಗೌರೀ'ಯೆನ್ನುವರು.

೨೩. ಶಂಭುವು ಸಕಲರ ಗುರುವಾದುದರಿಂದ ಅವನ ಪ್ರಿಯಳೂ, ಶಕ್ತಿರೂಪಿಣಿಯೂ ಆದ ದೇವಿಯು 'ಗೌರೀ'ಯೆನಿಸುವಳು. ಗುರುವೆಂದರೆ ಶ್ರೀಕೃಷ್ಣನೆಂದರ್ಥವಾಗುವುದರಿಂದ ಆ ಪರಮಾತ್ಮನ ಮಾಯೆಗೆ 'ಗೌರೀ' ಎಂದು ಹೆಸರಿಟ್ಟರು.

೨೪. ಕೆಲವು ಪುಣ್ಯತಿಥಿ, ಪರ್ವ, ಕಲ್ಪ ಮುಂತಾದವುಗಳಲ್ಲಿ ಖ್ಯಾತಿಯೆತ್ತಿ ಪೂಜಿತಳಾಗಿರುವುದರಿಂದ ಆ ದೇವಿಯನ್ನು 'ಪಾರ್ವತಿ'ಯೆನ್ನುವರು.

೨೫ ಪರ್ವನ್ ಎಂದರೆ ಮಹೋತ್ಸವ ವಿಶೇಷಗಳೆಂದರ್ಥವಾಗುವುದು. ಆ ಉತ್ಸವಗಳ ಅಧಿದೇವತೆಯಾದವಳನ್ನೇ 'ಪಾರ್ವತಿ'ಯೆಂದು ಕರೆಯುವರು.

೨೬. ಪರ್ವತರಾಜನ ಮಗಳೂ, ಪರ್ವತದಿಂದ ಆವಿರ್ಭವಿಸಿದವಳೂ, ಪರ್ವತಗಳ ಅಧಿಷ್ಠಾತೃದೇವಿಯೂ ಆದ ದೇವಿಯನ್ನು 'ಪಾರ್ವತಿ'ಯೆನ್ನುವರು.

ಸರ್ವಕಾಲೇ ಸನಾಪ್ರೋಕ್ತೋ ವಿಸ್ತೃತೇ ಚ ತನೀತಿ ಚ ।
ಸರ್ವತ್ರ ಸರ್ವಕಾಲೇ ಚ ವಿದ್ಯಮಾನಾ ಸನಾತನೀ ॥ ೨೭ ॥

ಅರ್ಥಃ ಷೋಡಶನಾಮ್ನಾಂ ಚ ಕೀರ್ತಿತಶ್ಚ ಮಹಾಮುನೇ ।
ಯಥಾಗಮಂ ತ್ವಂ ವೇದೋಕ್ತೋಪಾಖ್ಯಾನಂ ಚ ನಿಶಾಮಯ ॥ ೨೮ ॥

ಪ್ರಥಮೇ ಪೂಜಿತಾ ಸಾ ಚ ಕೃಷ್ಣೇನ ಪರಮಾತ್ಮನಾ ।
ವೃಂದಾವನೇ ಚ ಸೃಷ್ಟ್ಯಾದೌ ಗೋಲೋಕೇ ರಾಸಮಂಡಲೇ ॥ ೨೯ ॥

ಮಧುಕೈಟಭಭೀತೇನ ಬ್ರಹ್ಮಣಾ ಸಾ ದ್ವಿತೀಯತಃ ।
ತ್ರಿಪುರಪ್ರೇರಿತೇನೈವ ತೃತೀಯೇ ತ್ರಿಪುರಾರಿಣಾ ॥ ೩೦ ॥

---

೨೭. 'ಸನಾ'ಯೆಂದರೆ ಸರ್ವಕಾಲವೆಂದೂ, 'ತನೀ'ಯೆಂದರೆ ವಿಸ್ತಾರವಾದುದೆಂದೂ, ಅರ್ಥವಾಗುವುದರಿಂದ, ಎಲ್ಲೆಡೆಯಲ್ಲೂ, ಎಲ್ಲ ಕಾಲದಲ್ಲೂ ಇರುವ ದೇವಿಯೇ 'ಸನಾತನಿ'ಯೆನಿಸುವಳು.

೨೮. ಎಲೈ ಮಹರ್ಷಿಯಾದ ನಾರದನೇ ಈ ರೀತಿಯಾಗಿ ದುರ್ಗಾದೇವಿಯ ಹದಿನಾರು ದಿವ್ಯನಾಮಗಳ ಅರ್ಥವನ್ನು ಶಾಸ್ತ್ರೋಕ್ತವಾಗಿ ವಿವರಿಸಿದೆನು. ಈಗ ವೇದೋಕ್ತವಾದ ಉಪಾಖ್ಯಾನವೊಂದನ್ನು ಹೇಳುವೆನು ಕೇಳು.

೨೯. ಸೃಷ್ಟಿಯ ಆದಿಯಲ್ಲಿ ಗೋಲೋಕದ ಬೃಂದಾವನದಲ್ಲಿರುವ ರಾಸಮಂಡಲದಲ್ಲಿ ಶ್ರೀಕೃಷ್ಣಪರಮಾತ್ಮನು ಮೊಟ್ಟಮೊದಲು ಆ ದೇವಿಯನ್ನು ಪೂಜಿಸಿದನು.

೩೦. ಎರಡನೆಯ ಸಾರಿ, ಮಧುಕೈಟಭರೆಂಬ ರಾಕ್ಷಸರಿಗೆ ಭೀತನಾದ ಬ್ರಹ್ಮನಿಂದಲೂ ಮೂರನೆಯ ಸಾರಿ ತ್ರಿಪುರನೆಂಬ ರಾಕ್ಷಸನಿಗೆ ಹೆದರಿದ ತ್ರಿಪುರಾರಿಯಿಂದಲೂ ಪೂಜೆಗೊಂಡಳು.

ಭ್ರಷ್ಟಶ್ರಿಯಾ ಮಹೇಂದ್ರೇಣ ಶಾಪಾದ್ದುರ್ವಾಸಸಃ ಪುರಾ ।
ಚತುರ್ಥೇ ಪೂಜಿತಾ ದೇವೀ ಭಕ್ತ್ಯಾ ಭಗವತೀ ಸತೀ ॥ ೩೧ ॥

ತದಾ ಮುನೀಂದ್ರೈಃ ಸಿದ್ಧೇಂದ್ರೈರ್ದೇವೈಶ್ಚ ಮುನಿಪುಂಗವೈಃ ।
ಪೂಜಿತಾ ಸರ್ವವಿಶ್ವೇಷು ಸಮಭೂತ್ಸರ್ವತಃ ಸದಾ ॥ ೩೨ ॥

ತೇಜಸ್ಸು ಸರ್ವದೇವಾನಾಂ ಸಾವಿರ್ಭೂತಾ ಪುರಾ ಮುನೇ ।
ಸರ್ವೇ ದೇವಾ ದದುಸ್ತಸ್ಯೈ ಶಸ್ತ್ರಾಣ್ಯಾಭರಣಾನಿ ಚ ॥ ೩೩ ॥

ದುರ್ಗಾದಯಶ್ಚ ದೈತ್ಯಾಶ್ಚ ನಿಹತಾ ದುರ್ಗಯಾ ತಯಾ ।
ದತ್ತಂ ಸ್ವರಾಜ್ಯಂ ದೇವೇಭ್ಯೋ ವರಂ ಚ ಯದಭೀಪ್ಸಿತಂ ॥ ೩೪ ॥

ಕಲ್ಪಾಂತರೇ ಪೂಜಿತಾ ಸಾ ಸುರಥೇನ ಮಹಾತ್ಮನಾ ।
ರಾಜ್ಞಾ ಸುಮೇಧಶಿಷ್ಯೇಣ ಮೃನ್ಮಯ್ಯಾಂ ಚ ಸರಿತ್ತಟೇ ॥ ೩೫ ॥

---

೩೧. ನಾಲ್ಕನೆಯ ಸಾರಿ, ದೂರ್ವಾಸಮಹರ್ಷಿಯ ಶಾಪದಿಂದ ಸಂಪತ್ತನ್ನು ಕಳೆದುಕೊಂಡ ಮಹೇಂದ್ರನಿಂದ ಭಕ್ತಿಪೂರ್ವಕವಾಗಿ ದುರ್ಗಾದೇವಿಯು ಪೂಜಿತಳಾದಳು.

೩೨. ಅನಂತರ ಸಿದ್ಧಶ್ರೇಷ್ಠರು, ಮುನಿಶ್ರೇಷ್ಠರು, ದೇವತೆಗಳು ಮುಂತಾದ ಸಕಲರೂ ಆ ದೇವಿಯನ್ನು ಪೂಜಿಸಿದುದರಿಂದ ಸರ್ವಪೂಜಿತಳಾದಳು.

೩೩. ಎಲೈ ನಾರದಮುನಿಯೇ, ಪೂರ್ವದಲ್ಲಿ ದುರ್ಗಾದೇವಿಯು ಎಲ್ಲ ದೇವತೆಗಳ ತೇಜಸ್ಸಿನಲ್ಲಿಯೂ ಆವಿರ್ಭವಿಸಿದಳು. ಆಗ ಎಲ್ಲ ದೇವತೆಗಳೂ ಆ ದೇವಿಗೆ ಅನೇಕ ಆಯುಧಗಳನ್ನೂ ದಿವ್ಯಾಭರಣಗಳನ್ನೂ ಸಮರ್ಪಿಸಿದರು.

೩೪. ಅನಂತರ ಆ ದುರ್ಗಾದೇವಿಯು ದುರ್ಗ ಮುಂತಾದ ರಾಕ್ಷಸರನ್ನು ಸಂಹಾರಮಾಡಿ ದೇವತೆಗಳಿಗೆ ಸ್ವರಾಜ್ಯವನ್ನೂ ಅವರ ಅಭೀಪ್ಸಿತವರವನ್ನೂ ಕೊಟ್ಟಳು.

೩೫. ಮತ್ತೊಂದು ಕಲ್ಪದಲ್ಲಿ ಸುಮೇಧನ ಶಿಷ್ಯನಾದ ಸುರಥನೆಂಬ ಮಹಾರಾಜನು ಹೊಳೆಯ ದಡದಲ್ಲಿ ಮಣ್ಣಿನಿಂದ ದುರ್ಗಾ ಪ್ರತಿಮೆಯನ್ನು ಮಾಡಿ ಪೂಜಿಸಿದನು (ಟಿಪ್ಪಣಿ) (ಇವನು ಸ್ವಾರೋಚಿಷಮನ್ವಂತರದ ಒಬ್ಬ ಚೈತ್ರವಂಶದ ರಾಜ. ಮ್ಲೇಚ್ಛರು ಇವನ ರಾಜ್ಯವನ್ನು ಆಕ್ರಮಿಸಿದಾಗ ಸುಮೇಧಮಹರ್ಷಿಯ ಆಶ್ರಮಕ್ಕೆ

ಮೇಷಾದಿಭಿಶ್ಚ ಮಹಿಷೈಃ ಕೃಷ್ಣಸಾರೈಶ್ಚ ಮಂಡಕೈಃ ।
ಛಾಗೈರಿಕ್ಷುಸುಕೂಷ್ಮಾಂಡೈಃ ಪಕ್ಷಿಭಿರ್ಬಲಿಭಿರ್ಮುನೇ ॥ ೩೬ ॥

ವೇದೋಕ್ತಾಂಶ್ಚೈವ ದತ್ತ್ವೈವಮುಪಚಾರಾಂಸ್ತು ಷೋಡಶ ।
ಧ್ಯಾತ್ವಾ ಚ ಕವಚಂ ಧೃತ್ವಾ ಸಂಪೂಜ್ಯ ಚ ವಿಧಾನತಃ ॥ ೩೭ ॥

ರಾಜಾ ಕೃತ್ವಾ ಪರೀಹಾರಂ ವರಂ ಪ್ರಾಪ ಯಥೇಪ್ಸಿತಂ ।
ಮುಕ್ತಿಂ ಸಂಪ್ರಾಪ ವೈಶ್ಯಶ್ಚ ಸಂಪೂಜ್ಯ ಚ ಸರಿತ್ತಟೇ ॥ ೩೮ ॥

ತುಷ್ಟಾವ ರಾಜಾ ವೈಶ್ಯಶ್ಚ ಸಾಶ್ರುನೇತ್ರಃ ಕೃತಾಂಜಲಿಃ ।
ಸಸರ್ಜ ಮೃನ್ಮಯೀಂ ತಾಂ ವೈ ಗಭೀರೇ ನಿರ್ಮಲೇ ಜಲೇ ॥ ೩೯ ॥

ಮೃನ್ಮಯೀಂ ತಾಮದೃಷ್ಟ್ವಾ ಚ ಜಲಧೌ ತಾಂ ನರಾಧಿಪಃ ।
ರುರೋದ ಚ ತದಾ ವೈಶ್ಯಸ್ತತಃ ಸ್ಥಾನಾಂತರಂ ಯಯೌ ॥ ೪೦ ॥

---

ಹೋಗಿ ಅವನಿಂದ ದೇವೀಮಹಾತ್ಮೆಯನ್ನು ತಿಳಿದು ಮೂರು ವರ್ಷಗಳ ಕಾಲ ದೇವಿಯನ್ನು ಆರಾಧಿಸಿ ತನ್ನ ರಾಜ್ಯವನ್ನು ಪಡೆದನು.)

೩೬–೩೭. ಕುರಿಕೋಣಗಳನ್ನೂ, ಗಂಡುಜಿಂಕೆ, ಕಪ್ಪೆ, ಹೋತ ಮುಂತಾದ ಪ್ರಾಣಿಗಳನ್ನೂ, ಕಬ್ಬು, ಕುಂಬಳಕಾಯಿಗಳನ್ನೂ, ಪಕ್ಷಿಗಳನ್ನೂ ಆ ದುರ್ಗಾದೇವಿಗೆ ಬಲಿಯಾಗಿ ಅರ್ಪಿಸಿ, ವೇದೋಕ್ತವಾದ ಷೋಡಶೋಪಚಾರಗಳನ್ನು ಸಮರ್ಪಿಸಿ, ಧ್ಯಾನಪೂರ್ವಕ ಕವಚಧಾರಣೆಮಾಡಿ ವಿಧಿವತ್ತಾಗಿ ಪೂಜಿಸಿದನು.

೩೮. ಆ ಸುರಥನೆಂಬ ವೈಶ್ಯರಾಜನು ಈ ರೀತಿ ಬಲಿಯನ್ನು ಸಮರ್ಪಿಸಿ, ನದಿಯ ದಡದಲ್ಲಿ ಆ ದೇವಿಯನ್ನು ಪೂಜಿಸಿ ತನಗೆ ಅಭೀಷ್ಟವಾದ ವರವನ್ನೂ, ಕಡೆಗೆ ಮುಕ್ತಿಯನ್ನೂ ಪಡೆದನು.

೩೯. ಅಂಜಲಿಬದ್ಧನಾದ ಆ ರಾಜನು ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಸುರಿಸುತ್ತ ಮಣ್ಣಿನಿಂದ ಮಾಡಿದ್ದ ಆ ದುರ್ಗಾಪ್ರತಿಮೆಯನ್ನು ಅತ್ಯಂತ ಆಳವೂ ನಿರ್ಮಲವೂ ಆಗಿದ್ದ ಆ ನದೀಜಲದಲ್ಲಿ ವಿಸರ್ಜನೆಮಾಡಿದನು.

೪೦. ಅನಂತರ ನೀರಿನೊಳಗೆ ಆ ಮಣ್ಣಿನ ಪ್ರತಿಮೆಯನ್ನು ಕಾಣದೆ ಸ್ವಲ್ಪ ಹೊತ್ತು ಗೋಳಾಡಿ ಬೇರೆಯ ಸ್ಥಳಕ್ಕೆ ಹೊರಟುಹೋದನು.

ತ್ಯಕ್ತ್ವಾ ದೇಹಂ ಚ ವೈಶ್ಯಸ್ತು ಪುಷ್ಕರೇ ದುಷ್ಕರಂ ತಪಃ ॥ ೪೧ ॥

ಕೃತ್ವಾ ಜಗಾಮ ಗೋಲೋಕಂ ದುರ್ಗಾದೇವೀವರೇಣ ಸಃ ।
ರಾಜಾ ಯಯೌ ಸ್ವರಾಜ್ಯಂ ಚ ಪೂಜ್ಯೋ ನಿಷ್ಕಂಟಕಂ ಬಲೀ ॥ ೪೨ ॥

ಭೋಗಂ ಚ ಬುಭುಜೇ ಭೂಪಃ ಷಷ್ಠಿವರ್ಷಸಹಸ್ರಕಂ ।
ಭಾರ್ಯಾಂ ಸ್ವರಾಜ್ಯಂ ಸಂನ್ಯಸ್ಯ ಪುತ್ರೇ ವೈ ಕಾಲಯೋಗತಃ ॥ ೪೩ ॥

ಮನುರ್ಬಭೂವ ಸಾವರ್ಣಿಸ್ತಪ್ತ್ವಾ ವೈ ಪುಷ್ಕರೇ ತಪಃ ।
ಇತ್ಯೇವಂ ಕಥಿತಂ ವತ್ಸ ಸಮಾಸೇನ ಯಥಾಗಮಂ ॥ ೪೪ ॥

ದುರ್ಗಾಖ್ಯಾನಂ ಮುನಿಶ್ರೇಷ್ಠ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ
ದುರ್ಗಾದಿನಾಮವ್ಯುತ್ಪತ್ಯಾದಿಕಥನಂ ನಾಮ
ಸಪ್ತಪಂಚಾಶತ್ತಮೋಽಧ್ಯಾಯಃ

---

೪೧. ಆ ರಾಜನು ಪ್ರಾಕೃತ ಶರೀರವನ್ನು ತ್ಯಾಗಮಾಡಿ, ಪುಷ್ಕರಕ್ಷೇತ್ರದಲ್ಲಿ ಅತ್ಯಂತ ದುಷ್ಕರವಾದ ತಪಸ್ಸನ್ನು ಮಾಡಿ, ದುರ್ಗಾದೇವಿಯ ವರದಿಂದ ಗೋಲೋಕಕ್ಕೆ ಹೋಗಿ ಸೇರಿದನು.

೪೨–೪೫. ಪೂಜ್ಯನಾದ ಆ ರಾಜನು ಪುನಃ ನಿಷ್ಕಂಟಕವಾದ ತನ್ನ ರಾಜ್ಯವನ್ನು ಪಡೆದು, ಅರವತ್ತುಸಾವಿರ ವರ್ಷಗಳು ರಾಜ್ಯಭೋಗಗಳನ್ನು ಅನುಭವಿಸಿ, ಕಾಲಕ್ರಮದಲ್ಲಿ ತನ್ನ ಪತ್ನಿಯನ್ನೂ, ರಾಜ್ಯವನ್ನೂ ಮಗನ ವಶಕ್ಕೆ ಕೊಟ್ಟು, ಪುನಃ ಪುಷ್ಕರದಲ್ಲಿ ಕಠಿನವಾದ ತಪಸ್ಸನ್ನು ಮಾಡಿ ಸಾವರ್ಣಿಮನುವಾಗಿ ಜನಿಸಿದನು. ಎಲೈ ಮುನಿವರ್ಯನೇ, ದುರ್ಗಾದೇವಿಯ ಕಥೆಯನ್ನು ಶಾಸ್ತ್ರೋಕ್ತವಾಗಿ ನಿನಗೆ ತಿಳಿಸಿದುದಾಯಿತು. ಇನ್ನೇನನ್ನು ಕೇಳಬೇಕೆಂದು ನಿನಗೆ ಇಚ್ಛೆಯಿದೆ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ದುರ್ಗೋಪಾಖ್ಯಾನದಲ್ಲಿ
ದುರ್ಗಾದೇವಿಯ ನಾಮವ್ಯುತ್ಪತ್ತಿಯನ್ನು ತಿಳಿಸುವ
ಐವತ್ತೇಳನೆಯ ಅಧ್ಯಾಯವು ಮುಗಿದುದು.

## ಐವತ್ತೇಳನೆಯ ಅಧ್ಯಾಯದ ಸಾರಾಂಶವು

ನಾರಾಯಣಮಹರ್ಷಿಯು ನಾರದಮಹರ್ಷಿಗೆ ದುರ್ಗಾದೇವಿಯ ಮಹಿಮೆಯನ್ನೂ, ಆಕೆಯ ಷೋಡಶ ದಿವ್ಯನಾಮಗಳ ಅನ್ವರ್ಥತೆಯನ್ನೂ ವಿವರಿಸಿ, 'ಸುಮೇಧನ ಶಿಷ್ಯನಾದ ಸುರಥಮಹಾರಾಜನು ರಾಜ್ಯವನ್ನು ಕಳೆದುಕೊಂಡಾಗ ದುರ್ಗಾದೇವಿಯನ್ನು ಭಕ್ತಿಯಿಂದ ಆರಾಧಿಸಿ, ಆಕೆಯ ಅನುಗ್ರಹದಿಂದ ಪುನಃ ರಾಜ್ಯವನ್ನು ಪಡೆದು, ಅರವತ್ತು ಸಾವಿರ ವರ್ಷಗಳು ರಾಜ್ಯಸುಖವನ್ನನುಭವಿಸಿ, ದೇವಿಯ ವರದಿಂದ 'ಸಾವರ್ಣಿ' ಮನುವಾಗಿ ಜನಿಸಿದನೆಂದೂ' ಆದಕಾರಣ ದುರ್ಗಾದೇವಿಯ ಮಹಿಮೆಯು ಅಪಾರವಾದುದೆಂದೂ ನಿರೂಪಿಸಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

### || ಅಷ್ಟಪಂಚಾಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಕಸ್ಯ ವಂಶೋದ್ಭವೋ ರಾಜಾ ಸುರಥೋ ಧರ್ಮಿಣಾಂ ವರಃ ।
ಕಥಂ ಸಂಪ್ರಾಪ ವೈ ಜ್ಞಾನಂ ಮೇಧಸೋ ಜ್ಞಾನಿನಾಂ ವರಾತ್ || ೧ ||

ಕಸ್ಯ ವಂಶೋದ್ಭವೋ ಬ್ರಹ್ಮನ್ಮೇಧಸೋ ಮುನಿಸತ್ತಮ ।
ಬಭೂವ ಕುತ್ರ ಸಂವಾದೋ ನೃಪಸ್ಯ ಮುನಿನಾ ಸಹ || ೨ ||

ಸಖ್ಯಂ ಬಭೂವ ಕುತ್ರಾಸ್ಯ ವಾ ಪ್ರಭೋ ನೃಪವೈಶ್ಯಯೋಃ ।
ವ್ಯಾಸೇನ ಶ್ರೋತುಮಿಚ್ಛಾಮಿ ವದ ವೇದವಿದಾಂ ವರ || ೩ ||

---

### ಐವತ್ತೆಂಟನೆಯ ಅಧ್ಯಾಯವು

೧. ನಾರದ:—ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಸುರಥನು ಯಾರ ವಂಶದಲ್ಲಿ ಹುಟ್ಟಿದವನು? ಆ ರಾಜನು ಜ್ಞಾನಿಶ್ರೇಷ್ಠನಾದ ಮೇಧಸ್ಸೆಂಬ ಋಷಿಯಿಂದ ಜ್ಞಾನೋಪದೇಶವನ್ನು ಪಡೆದುದೆಂತು?

೨. ಎಲೈ ನಾರಾಯಣ ಮಹರ್ಷಿಯೇ, ಆ ಮೇಧಸ್ಸೆಂಬ ಮುನಿಶ್ರೇಷ್ಠನೂ ಕೂಡ ಯಾರ ವಂಶದಲ್ಲಿ ಜನಿಸಿದನು? ಈ ಮಹರ್ಷಿಗೂ ಆ ರಾಜನಿಗೂ ಎಲ್ಲಿ ಪರಸ್ಪರ ಸಂಭಾಷಣೆಯಾಯಿತು?

೩. ವೈಶ್ಯರಾಜನಿಗೂ ಆ ಮುನಿಗೂ ಎಲ್ಲಿ ಸ್ನೇಹವುಂಟಾಯಿತು? ವೇದಜ್ಞರಲ್ಲಿ ಶ್ರೇಷ್ಠನಾದ ಮಹರ್ಷಿಯೇ, ಇವೆಲ್ಲವನ್ನೂ ವಿಸ್ತರಿಸಿ ಹೇಳು.

॥ ನಾರಾಯಣ ಉವಾಚ ॥

ಅತ್ರಿಶ್ಚ ಬ್ರಹ್ಮಣಃ ಪುತ್ರಸ್ತಸ್ಯ ಪುತ್ರೋ ನಿಶಾಕರಃ ।
ಸ ಚ ಕೃತ್ವಾ ರಾಜಸೂಯಂ ದ್ವಿಜರಾಜೋ ಬಭೂವ ಹ ॥ ೪ ॥

ಗುರುಪತ್ನ್ಯಾಂ ಚ ತಾರಾಯಾಂ ತಸ್ಯಾಭೂಚ್ಚ ಬುಧಃ ಸುತಃ ।
ಬುಧಪುತ್ರಸ್ತು ಚೈತ್ರಶ್ಚ ತತ್ಪುತ್ರಃ ಸುರಥಃ ಸ್ಮೃತಃ ॥ ೫ ॥

॥ ನಾರದ ಉವಾಚ ॥

ಗುರುಪತ್ನ್ಯಾಂ ಚ ತಾರಾಯಾಂ ಸಮುಭೂತ್ತತ್ಸುತಃ ಕಥಂ ।
ಅಹೋ ವ್ಯತಿಕ್ರಮಂ ಬ್ರೂಹಿ ವೇದಸ್ಯ ಚ ಮಹಾಮುನೇ ॥ ೬ ॥

॥ ನಾರಾಯಣ ಉವಾಚ ॥

ಸಂಪನ್ಮತ್ತೋ ಮಹಾಕಾಮೀ ವ್ಯಚರಜ್ಜಾಹ್ನವೀತಟೇ ।
ತಾರಾಂ ಸುರಗುರೋಃ ಪತ್ನೀಂ ಧರ್ಮಿಷ್ಠಾಂ ಚ ಪತಿವ್ರತಾಂ ॥ ೭ ॥

---

೪. ನಾರಾಯಣ:—ಅತ್ರಿಮಹರ್ಷಿಯು ಬ್ರಹ್ಮನ ಮಗನು. ಅತ್ರಿಯ ಮಗನು ಚಂದ್ರನು. ಆ ಚಂದ್ರನು ರಾಜಸೂಯಯಾಗಮಾಡಿ ದ್ವಿಜರಾಜನೆನಿಸಿದನು.

೫. ಆ ಚಂದ್ರನು ಗುರುಪತ್ನಿಯಾದ ತಾರೆಯೊಡನೆ ಸಂಗಮಿಸಿ ಬುಧನೆಂಬ ಮಗನನ್ನು ಪಡೆದನು ಬುಧನ ಮಗನು ಚೈತ್ರನು. ಆ ಚೈತ್ರನ ಮಗನೇ ಈ ಸುರಥನು.

೬. ನಾರದ:—ಗುರುಪತ್ನಿಯಾದ ತಾರೆಯಲ್ಲಿ ಚಂದ್ರಪುತ್ರನು ಉತ್ಪತ್ತಿ ಪಡೆದುದೆಂತು? ವೇದವಿರುದ್ಧವಾದ ಆ ವಿಷಯವನ್ನು ಮಹರ್ಷಿಯಾದ ನೀನು ವಿಸ್ತರಿಸಿ ಹೇಳು.

೭. ನಾರಾಯಣ:—ಮಹಾಕಾಮಿಯಾದ ಚಂದ್ರನು ತನ್ನ ಸಂಪತ್ತಿನಿಂದ ಮದಿಸಿದವನಾಗಿ ಗಂಗಾನದಿಯ ದಡದಲ್ಲಿ ಒಮ್ಮೆ ಸಂಚರಿಸುತ್ತಿದ್ದನು. ಆಗ ಧರ್ಮಪರಾಯಣಳೂ, ಪತಿವ್ರತೆಯೂ, ದೇವಗುರುವಾದ ಬೃಹಸ್ಪತ್ಯಾಚಾರ್ಯನ ಪತ್ನಿಯೂ ಆದ ತಾರಾದೇವಿಯನ್ನು ಕಂಡನು.

ಸುಸ್ನಾತಾಂ ಸುಂದರೀಂ ರಮ್ಯಾಂ ಪೀನೋನ್ನತಪಯೋಧರಾಂ ।
ಸುಶ್ರೋಣೀಂ ಸುನಿತಂಬಾಢ್ಯಾಂ ಮಧ್ಯಕ್ಷೀಣಾಂ ಮನೋಹರಾಂ ॥ ೮ ॥

ಸುದತೀಂ ಕೋಮಲಾಂಗೀಂ ಚ ನವಯೌವನಸಂಯುತಾಂ ।
ಸೂಕ್ಷ್ಮವಸ್ತ್ರಪರೀಧಾನಾಂ ರತ್ನಭೂಷಣಭೂಷಿತಾಂ ॥ ೯ ॥

ಕಸ್ತೂರೀಬಿಂದುನಾ ಸಾರ್ಧಮಧಶ್ಚಂದನಬಿಂದುನಾ ।
ಸಿಂದೂರಬಿಂದುನಾ ಚಾರು ಫಾಲಮಧ್ಯಸ್ಥಲೋಜ್ಜ್ವಲಾಂ ॥ ೧೦ ॥

ವಾಯುನಾಧೋವಸ್ತ್ರಹೀನಾಂ ಸಕಾಮಾಂ ರಕ್ತಲೋಚನಾಂ ।
ಶರತ್ಪಾರ್ವಣಚಂದ್ರಾಸ್ಯಾಂ ಪಕ್ವಬಿಂಬಾಧರಾಂ ವರಾಂ ॥ ೧೧ ॥

---

೮. ಅತ್ಯುನ್ನತವಾದ ಸ್ತನಗಳಿಂದಲೂ, ಅತಿ ಸೂಕ್ಷ್ಮವಾದ ಸೊಂಟದಿಂದಲೂ, ದಪ್ಪವಾಗಿರುವ ನಿತಂಬ ಭಾಗದಿಂದಲೂ ಬಹಳ ಮನೋಹರಳಾಗಿದ್ದ ಆ ಸುಂದರಿಯು ಋತುಸ್ನಾತಳಾಗಿ ಬಂದಿದ್ದಳು.

೯. ದಾಳಿಂಬೆ ಬೀಜದಂತಿರುವ ದಂತಪಂಙ್ತಿಗಳಿಂದಲೂ, ಕುಸುಮಕೋಮಲವಾದ ಅವಯವಗಳಿಂದಲೂ ಶೋಭಿಸುತ್ತಿದ್ದ ಆ ನವಯುವತಿಯು ಬಹಳ ನವುರಾದ ಬಟ್ಟೆಯನ್ನುಟ್ಟು ರತ್ನಾಭರಣಗಳನ್ನು ಧರಿಸಿದ್ದಳು.

೧೦. ಹಣೆಯಲ್ಲಿ ಕಸ್ತೂರಿ, ಕುಂಕುಮ, ಚಂದನ ಮತ್ತು ಚಂದ್ರದ ಬೊಟ್ಟುಗಳನ್ನು ಉಚಿತವಾದ ಸ್ಥಳದಲ್ಲಿ ಧರಿಸಿ ಅತಿ ಮನೋಹರಳಾಗಿದ್ದಳು.

೧೧. ಶರತ್ಪೂರ್ಣಿಮಾಚಂದ್ರನಂತೆ ಕಾಂತಿಯುತವಾದ ಮುಖದಿಂದಲೂ, ಚೆನ್ನಾಗಿ ಪಕ್ವವಾದ ತೊಂಡೆಹಣ್ಣಿನಂತೆ ಕೆಂಪಾದ ತುಟಿಯಿಂದಲೂ, ಕೆಂದಾವರೆಯಂತಿರುವ ಕಡೆಗಣ್ಣುಗಳಿಂದಲೂ ಕೂಡಿದ ಆ ಕಾಮಿನಿಯು ಧರಿಸಿದ್ದ ವಸ್ತ್ರವು ವಾಯುವಿನಿಂದ ಅಸ್ತವ್ಯಸ್ತವಾಯಿತು.

ಸಸ್ಮಿತಾಂ ನಮ್ರವಕ್ತ್ರಾಂ ಚ ಲಜ್ಜಯಾ ಚಂದ್ರದರ್ಶನಾತ್ ।
ಗಚ್ಛಂತೀಂ ಸ್ವಗೃಹಂ ಹರ್ಷಾನ್ಮತ್ತವಾರಣಗಾಮಿನೀಂ ॥ ೧೨ ॥

ತಾಂ ದೃಷ್ಟ್ವಾ ಮನ್ಮಥಾಕ್ರಾಂತಶ್ಚಂದ್ರೋ ಲಜ್ಜಾಂ ಜಹೌ ಮುನೇ ।
ಪುಲಕಾಂಕಿತಸರ್ವಾಂಗಃ ಸಕಾಮಸ್ತಾಮುವಾಚ ಸಃ ॥ ೧೩ ॥

॥ ಚಂದ್ರ ಉವಾಚ ॥

ಯೋಷಿಚ್ಛ್ರೇಷ್ಠೇ ಕ್ಷಣಂ ತಿಷ್ಠ ವರಿಷ್ಠೇ ರಸಿಕಾಸು ಚ ।
ಸಂವಿದಗ್ಧೇ ವಿದಗ್ಧಾನಾಂ ಮನೋ ಹರಸಿ ಸಂತತಂ ॥ ೧೪ ॥

ನಿಷೇವ್ಯ ಪ್ರಕೃತಿಂ ಜನ್ಮಸಹಸ್ರಂ ಕಾಮಸಾಗರೇ ।
ತಪಃ ಫಲೇನ ತ್ವಾಂ ಪ್ರಾಪ ಬೃಹಚ್ಛ್ರೋಣೀಂ ಬೃಹಸ್ಪತಿಃ ॥ ೧೫ ॥

---

೧೨. ಮತ್ತಗಜಗಮನೆಯೂ, ಸ್ಮಿತವದನೆಯೂ ಆದ ಆ ತಾರಾದೇವಿಯು ಅಲ್ಲಿ ಚಂದ್ರನಿರುವುದನ್ನು ನೋಡಿ ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ತನ್ನ ಮಂದಿರದ ಕಡೆಗೆ ಹೊರಟಳು.

೧೩. ಎಲೌ ಮುನಿಯೇ, ಇಂತು ಸೌಂದರ್ಯಪರಿಪೂರ್ಣಳಾದ ಆಕೆಯ ಅವಯುವಸೌಷ್ಠವವನ್ನು ನೋಡಿದ ಚಂದ್ರನು ಕಾಮಪೀಡಿತನೂ, ಲಜ್ಜಾರಹಿತನೂ ರೋಮಾಂಚಿತಶರೀರನೂ ಆಗಿ ಅವಳನ್ನು ಕುರಿತು ಕಾಮೋದ್ದೀಪಕವಾದ ಕೆಲವು ನುಡಿಗಳನ್ನಾಡಿದನು.

೧೪. ಚಂದ್ರ :—ಸ್ತ್ರೀಯರಲ್ಲಿ ಉತ್ತಮಳೂ, ರಸಿಕಶ್ರೇಷ್ಠಳೂ ಆದ ಎಲೌ ಸುಂದರಿಯೇ ಒಂದು ಕ್ಷಣಕಾಲ ನಿಲ್ಲು. ಕಾಮಕಲಾನಿಪುಣೆಯಾದ ನೀನು ಕಾಮಕಲಾ ಚತುರರ ಮನಸ್ಸನ್ನು ಸರ್ವದಾ ಅಪಹರಿಸುತ್ತಿರುವೆ.

೧೫. ಬೃಹಸ್ಪತ್ಯಾಚಾರ್ಯನು ಸಹಸ್ರ ಜನ್ಮಗಳೆತ್ತಿ ಪ್ರಕೃತಿದೇವಿಯನ್ನು ಕುರಿತು ತಪಸ್ಸುಮಾಡಿ ಆ ಸೇವೆಯ ಫಲವಾಗಿ ಪೀನನಿತಂಬಗಳುಳ್ಳ ನಿನ್ನನ್ನು ಕಾಮಸಾಗರದಲ್ಲಿ ಪಡೆದಿರಬೇಕು.

ಅಹೋ ತಪಸ್ವಿನಾ ಸಾರ್ಧಮವಿದಗ್ಧೇನ ವೇಧಸಾ ।
ಯೋಜಿತಾ ತ್ವಂ ರಸವತೀ ಶಶ್ವತ್ಕಾಮಾತುರಾ ವರಾ ॥ ೧೬ ॥

ಕಿಂ ವಾ ಸುಖಂ ಚ ವಿಜ್ಞಾತಮವಿಜ್ಞೇಷು ಸಮಾಗಮೇ ।
ವಿದಗ್ಧಾಯಾ ವಿದಗ್ಧೇನ ಸಂಗಮಃ ಸುಖಸಾಗರಃ ॥ ೧೭ ॥

ಕಾಮೇನ ಕಾಮಿನೀ ತ್ವಂ ಚ ದಗ್ಧಾಸಿ ವ್ಯರ್ಥಮೀಶ್ವರಿ ।
ಕರ್ಮಣಾ ವಾತ್ಮದೋಷಾದ್ವಾ ಕೋ ಜಾನಾತಿ ಮನಃ ಸ್ತ್ರಿಯಾಃ ॥ ೧೮ ॥

ದಿನೇ ದಿನೇ ವೃಥಾ ಯಾತಿ ದುರ್ಲಭಂ ನವಯೌವನಂ ।
ನವೀನಯೌವನಸ್ಥಾಯಾ ವೃದ್ಧೇನ ಸ್ವಾಮಿನಾ ತವ ॥ ೧೯ ॥

---

೧೬. ಅಯ್ಯೋ ಏನನ್ಯಾಯ? ಅವಿಚಾರಪರನಾದ ಬ್ರಹ್ಮನು ತಪೋನಿರತನಾದ ಬೃಹಸ್ಪತಿಯೊಡನೆ, ಕಾಮಾತುರಳೂ, ರಸಿಕಶ್ರೇಷ್ಠಳೂ ಆದ ನಿನ್ನನ್ನು ಸೇರಿಸಿದನಲ್ಲ.

೧೭. ಕಾಮಕಲಾಚತುರಳಾದ ನೀನು ಕಾಮಕಲಾಪರಿಚಯವೇ ಇಲ್ಲವೆ ವಿರಾಗಿಯೊಡಗೂಡಿ ಅನುಭವಿಸಿದ ಸುಖವೇನು? ವಿದಗ್ಧಳಾದ ಸ್ತ್ರೀಯು ತನಗೆ ಅನುರೂಪನಾದ ವಿದಗ್ಧ ಪುರುಷನೊಡನೆ ಸೇರಿದರಲ್ಲವೇ ಸುಖಸಾಗರದ ಸವಿಯು ದೊರೆಯುವುದು.

೧೮. ಎಲೌ ಕಾಮಿನಿಯೇ, ನೀನು ಮನ್ಮಥ ವ್ಯಥೆಯಿಂದ ಅನ್ಯಾಯವಾಗಿ ಕ್ಷೀಣಿಸುತ್ತಿರುವೆಯಲ್ಲ, ಇದೇನು? ನಿನ್ನ ದುಷ್ಕರ್ಮದ ಫಲವೋ ಅಥವಾ ಸ್ವಯಂ ಕೃತಾಪರಾಧವೋ? ಹೆಂಗಸರ ಮನಸ್ಸಿನಲ್ಲಿರುವುದನ್ನು ಯಾರುತಾನೇ ತಿಳಿಯಬಲ್ಲರು.

೧೯. ನವಯುವತಿಯಾದ ನೀನು ವೃದ್ಧನಾದ ಪತಿಯೊಡಗೂಡಿರುವುದರಿಂದ, ದುರ್ಲಭವಾದ ನಿನ್ನ ನವಯೌವನವು ದಿನದಿನವೂ ವ್ಯರ್ಥವಾಗಿ ಕಳೆದು ಹೋಗುತ್ತಿದೆ.

ಶಶ್ವತ್ತಪಸ್ಯಾಯುಕ್ತಶ್ಚ ಕೃಷ್ಣಮಾತ್ಮಾನಮೀಪ್ಸಿತಂ ।
ಸ್ವಪ್ನೇ ಜಾಗರಣೇ ವಾಪಿ ಧ್ಯಾಯನ್ನಾಸ್ತೇ ಬೃಹಸ್ಪತಿಃ ॥ ೨೦ ॥

ಸರ್ವಕಾಮರಸಜ್ಞಾ ತ್ವಂ ನಿಷ್ಕಾಮಂ ಕಾಮಮೀಪ್ಸಿತಂ ।
ಧ್ಯಾಯಂತೀ ಕಾಮುಕೀ ಶಶ್ವದ್ಯೂನಾಂ ಶೃಂಗಾರಮಾತ್ಮನಿ ॥ ೨೧ ॥

ಅನ್ಯಶ್ಚ ತ್ವನ್ಮನಃ ಕಾಮೋ ಭಿನ್ನಂ ತ್ವದ್ಭರ್ತುರೀಪ್ಸಿತಂ ।
ಯಯೋಶ್ಚ ಭಿನ್ನೌ ವಿಷಯೌ ಕಾ ಪ್ರೀತಿಃ ಸಂಗಮೋ ತಯೋಃ ॥ ೨೨ ॥

ವಾಸಂತೀ ಪುಷ್ಪತಲ್ಪೇ ಚ ಗಂಧಚಂದನಚರ್ಚಿತೇ ।
ಮೋದಸ್ವ ಮಾಂ ಗೃಹೀತ್ವಾ ತ್ವಂ ವಸಂತೇ ಮಾಧವೀವನೇ ॥ ೨೩ ॥

ಸುಗಂಧ್ಯುತ್ಫುಲ್ಲಕುಸುಮೇ ನಿರ್ಜನೇ ಚಂದನೇ ವನೇ ।
ಭವತೀ ಯುವತೀ ಭಾಗ್ಯವತೀ ತತ್ರೈವ ಮೋದತಾಂ ॥ ೨೪ ॥

---

೨೦ ನಿನ್ನ ಪತಿಯಾದ ಬೃಹಸ್ಪತಿಯಾದರೋ ಯಾವಾಗಲೂ ತಪೋನಿರತನಾಗಿ, ತನ್ನ ಇಷ್ಟದೇವನಾದ ಶ್ರೀಕೃಷ್ಣನನ್ನು ನಿದ್ರೆಯಲ್ಲೂ, ಎಚ್ಚರದಲ್ಲೂ ಧ್ಯಾನಿಸಿಕೊಂಡಿರುವನು.

೨೧. ಕಾಮುಕಿಯೂ, ಕಾಮರಸಾಸ್ವಾದ ಚತುರಳೂ ಆದ ನೀನು ನಿಷ್ಕಾಮನಾದ ಪತಿಯಿಂದ, ನಿನ್ನಿಷ್ಟಾರ್ಥವನ್ನು ಹೊಂದಲಾಗದೆ, ಯುವಕರ ಶೃಂಗಾರ ಚೇಷ್ಟೆಗಳನ್ನೆಲ್ಲ ನಿನ್ನ ಮನಸ್ಸಿನಲ್ಲಿಯೇ ಸರ್ವದಾ ಧ್ಯಾನಿಸುತ್ತಿರುವೆ.

೨೨. ಮತ್ತೊಂದು ವಿಷಯವೇನೆಂದರೇ, ನೀನಾದರೋ ಕಾಮುಕಿಯು. ನಿನ್ನ ಪತಿಯು ನಿಷ್ಕಾಮನು. ಈ ರೀತಿಯಾಗಿ ನಿಮ್ಮಿಬ್ಬರ ಉದ್ದೇಶವೇ ಬೇರೆ ಬೇರೆಯಾಗಿರುವಾಗ ನಿಮ್ಮಿಬ್ಬರ ಸಂಗಮದಿಂದ ಸುಖವೆಲ್ಲಿ ಬಂತು?

೨೩. ವಸಂತಾಭಿಮಾನಿದೇವತೆಯಂತಿರುವ ನೀನು ಈ ವಸಂತಋತುವಿನಲ್ಲಿ ಜಾಜೀವನದಲ್ಲಿ ಚಂದನಗಂಧದಿಂದ ಲಿಪ್ತವಾದ ಪುಷ್ಪಶಯನದಲ್ಲಿ ನನ್ನೊಡನೆ ಕೂಡಿ ಸಂತೋಷಪಡು.

೨೪. ಚೆನ್ನಾಗಿ ಅರಳಿರುವ ಹೂಗಳಿಂದ ಸುವಾಸನೆ ಬೀರುವ ನಿರ್ಜನವಾದ ಚಂದನವನದಲ್ಲಿ ನವಯುವತಿಯಾದ ನೀನು ಭೋಗಿಸಿ ಭಾಗ್ಯವತಿಯಾಗು.

**ಚಂದನೇ ಚಂಪಕವನೇ ಶೀತಂ ಚಂಪಕವಾಯುನಾ ।**
**ರಮ್ಯೇ ಚಂಪಕತಲ್ಪೇ ಚ ಕ್ರೀಡಾಂ ಕುರು ಮಯಾ ಸಹ ॥ ೨೫ ॥**

**ಇತ್ಯುಕ್ತ್ವಾ ಮದನೋನ್ಮತ್ತೋ ಮದನಾಧಿಕಸುಂದರಃ ।**
**ಪಪಾತ ಚರಣೇ ದೇವ್ಯಾ ಮಂದೋ ಮಂದಾಕಿನೀತಟೇ ॥ ೨೬ ॥**

**ನಿರುದ್ಧಮಾರ್ಗಾ ಚಂದ್ರೇಣ ಶುಷ್ಕಕಂಠೌಷ್ಠತಾಲುಕಾ ।**
**ಅಭೀತೋವಾಚ ಕೋಪೇನ ರಕ್ತಪಂಕಜಲೋಚನಾ ॥ ೨೭ ॥**

**॥ ತಾರೋವಾಚ ॥**

**ಧಿಕ್ ತ್ವಾಂ ಚಂದ್ರ ತೃಣಂ ಮನ್ಯೇ ಪರಸ್ತ್ರೀಲಂಪಟಂ ಶಠಂ ।**
**ಅತ್ರೇರಭಾಗ್ಯಾತ್ತ್ವಂ ಪುತ್ರೋ ವ್ಯರ್ಥಸ್ತೇ ಜನ್ಮಜೀವನಂ ॥ ೨೮ ॥**

---

೨೫. ಚಂದನವೃಕ್ಷಗಳಿಂದ ಭರಿತವಾದ ಚಂಪಕವನದಲ್ಲಿ ತಂಪಾದ ಚಂದನ ವೃಕ್ಷಗಳ ವಾಯುವನ್ನು ಸೇವಿಸುತ್ತಾ ಸುಂದರವಾದ ಸಂಪಿಗೆಯ ಹಾಸಿಗೆಯಲ್ಲಿ ನನ್ನೊಡನೆ ಕ್ರೀಡಿಸು.

೨೬. ಈ ರೀತಿ ಹೇಳುತ್ತ ಮನ್ಮಥನಿಗಿಂತಲೂ ಸೌಂದರ್ಯವುಳ್ಳ ಆ ಚಂದ್ರನು ಮನ್ಮಥಾವೇಶದಿಂದ ಉನ್ಮತ್ತನೂ, ಜಡನೂ ಆಗಿ ಆ ಗಂಗಾತಟದಲ್ಲಿ ಆ ತಾರಾದೇವಿಯ ಕಾಲುಗಳ ಮೇಲೆ ಬಿದ್ದನು.

೨೭. ಈ ರೀತಿಯಾಗಿ ಚಂದ್ರನು ತನ್ನ ದಾರಿಗೆ ಅಡ್ಡಲಾಗಿ ಬರಲು, ತಾರಾ ದೇವಿಯು ಕುಪಿತಳಾಗಿ ತಾವರೆಯಂತಿರುವ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು ನಿರ್ಭೀತಳಾಗಿ ಒಣಗಿದ ಗಂಟಲುಗಳಿಂದ ಕೆಲವು ಮಾತುಗಳನ್ನಾಡಿದಳು.

೨೮. ತಾರೆ:—ನೀಚನಾದ ಚಂದ್ರನೇ, ನಿನ್ನ ಜನ್ಮವನ್ನು ಸುಡಬೇಕು. ಪರಸ್ತ್ರೀಲೋಲುಪನಾದ ಮೂರ್ಖನನ್ನು ನಾನು ಹುಲ್ಲಿಗಿಂತ ಕಡೆಯಾಗೆಣಿಸುವೆನು. ಅತ್ರಿಮಹರ್ಷಿಯ ದುರದೃಷ್ಟದಿಂದ ನೀನು ಅವನ ಪುತ್ರನಾಗಿ ಜನಿಸಿದೆ. ನಿನ್ನ ಜನ್ಮವೂ ಮತ್ತು ಜೀವನವೂ ವ್ಯರ್ಥ.

ಅರೇ ಕೃತ್ವಾ ರಾಜಸೂಯಮಾತ್ಮಾನಂ ಮನ್ಯಸೇ ಬಲೀ ।
ಬಭೂವ ಪುಣ್ಯಂ ತೇ ವ್ಯರ್ಥಂ ವಿಪ್ರಸ್ತ್ರೀಷು ಚ ಯನ್ಮನಃ ॥ ೨೯ ॥

ಯಸ್ಯ ಚಿತ್ತಂ ಪರಸ್ತ್ರೀಷು ಸೋಽಶುಚಿಃ ಸರ್ವಕರ್ಮಸು ।
ನ ಕರ್ಮಫಲಭಾಕ್ಪಾಪೀ ನಿಂದ್ಯೋ ವಿಶ್ವೇಷು ಸರ್ವತಃ ॥ ೩೦ ॥

ಸತೀತ್ವಂ ಮೇ ನಾಶಯಸಿ ಯಕ್ಷ್ಮಗ್ರಸ್ತೋ ಭವಿಷ್ಯಸಿ ।
ಅತ್ಯುಚ್ಛ್ರಿತೋ ನಿಪತನಂ ಪ್ರಾಪ್ನೋತೀತಿ ಶ್ರುತೌ ಶ್ರುತಂ ॥ ೩೧ ॥

ದುಷ್ಟಾನಾಂ ದರ್ಪಹಾ ಕೃಷ್ಣೋ ದರ್ಪಂ ತೇ ನಿಹನಿಷ್ಯತಿ ।
ತ್ಯಜ ಮಾಂ ಮಾತರಂ ವತ್ಸ ಸತ್ಯಂ ತೇ ಶಂ ಭವಿಷ್ಯತಿ ॥ ೩೨ ॥

---

೨೯. ನೀನು ರಾಜಸೂಯಯಾಗವನ್ನು ಮಾಡಿ ನಾನೇ ಬಹಳ ಬಲ್ಲಿದನೆಂದು ತಿಳಿದಿರುವೆ. ಬ್ರಾಹ್ಮಣಸ್ತ್ರೀಯನ್ನು ಬಯಸಿದ ನಿನ್ನ ಪುಣ್ಯಗಳೆಲ್ಲವೂ ನಿರರ್ಥಕವಾದವು.

೩೦. ಪರಸ್ತ್ರೀಲೋಲುಪನಾದವನು ಅಶುಚಿಯಾದುದರಿಂದ ಯಾವ ಪುಣ್ಯಕರ್ಮಾಚರಣೆಗೂ ಯೋಗ್ಯನಲ್ಲ. ಪ್ರಪಂಚದಲ್ಲೆಲ್ಲ ನಿಂದಿಸಲ್ಪಡುವ ಆ ಪಾಪಿಯು ಯಾವ ಪುಣ್ಯಕರ್ಮಗಳ ಫಲವನ್ನೂ ಪಡೆಯಲಾರನು.

೩೧. ನೀನು ನನ್ನ ಪಾತಿವ್ರತ್ಯವನ್ನು ನಾಶಗೊಳಿಸಿದರೆ ಕ್ಷಯರೋಗಿಯಾಗುವೆ. ಬಹಳ ಮೇಲೇರಿದವನು ಕೆಳಕ್ಕೆ ಬಿದ್ದೇ ಬೀಳುವನೆಂದು ಶ್ರುತಿಸಿದ್ಧವಾಗಿದೆ.

೩೨. ದುಷ್ಟರ ದರ್ಪನಾಶಕನಾದ ಶ್ರೀಕೃಷ್ಣಪರಮಾತ್ಮನು ನಿನ್ನ ದರ್ಪವನ್ನೂ ನಾಶಗೊಳಿಸುವನು. ಆದುದರಿಂದ ಎಲೈ ವತ್ಸನೇ, ನಿನ್ನ ತಾಯಿಗೆ ಸಮಾನಳಾದ ನನ್ನನ್ನು ಬಿಡು. ಸತ್ಯವಾಗಿಯೂ ನಿನಗೆ ಮಂಗಳವುಂಟಾಗುವುದು.

ಇತ್ಯುಕ್ತ್ವಾ ತಾರಕಾ ಸಾಧ್ವೀ ರುರೋದ ಚ ಮುಹುರ್ಮುಹುಃ ।
ಚಕಾರ ಸಾಕ್ಷಿಣಂ ಧರ್ಮಂ ಸೂರ್ಯಂ ವಾಯುಂ ಹುತಾಶನಂ ॥ ೩೩ ॥

ಬ್ರಹ್ಮಾಣಂ ಪರಮಾತ್ಮಾನಮಾಕಾಶಂ ಪವನಂ ಧರಾಂ ।
ದಿನಂ ರಾತ್ರಿಂ ಚ ಸಂಧ್ಯಾಂ ಚ ಸರ್ವಂ ಸುರಗಣಂ ಮುನೇ ॥ ೩೪ ॥

ತಾರಕಾವಚನಂ ಶ್ರುತ್ವಾ ನ ಭೀತಃ ಸ ಚುಕೋಪ ಹ ।
ಕರೇ ಧೃತ್ವಾ ರಥೇ ತೂರ್ಣಂ ಸ್ಥಾಪಯಾಮಾಸ ಸುಂದರೀಂ ॥ ೩೫ ॥

ರಥಂ ಚ ಚಾಲಯಾಮಾಸ ಮನೋಯಾಯೀ ಮನೋಹರಂ ।
ಮನೋಹರಾಂ ಗೃಹೀತ್ವಾ ತಾಂ ಸ ಚ ರೇಮೋ ಮನೋಹರಂ ॥ ೩೬ ॥

ವಿಸ್ಪಂದಕೇ ಸುರವನೇ ಚಂದನೇ ಪುಷ್ಪಭದ್ರಕೇ ।
ಪುಷ್ಕರೇ ಚ ನದೀತೀರೇ ಪುಷ್ಪಿತೇ ಪುಷ್ಪಕಾನನೇ ॥ ೩೭ ॥

---

೩೩–೩೪. ಸಾಧ್ವೀಮಣಿಯಾದ ಆ ತಾರಾದೇವಿಯು ಇಂತು ನುಡಿದು, ಗೋಳಾಡಿ, ಧರ್ಮದೇವನನ್ನೂ, ಸೂರ್ಯ, ವಾಯು ಮತ್ತು ಅಗ್ನಿದೇವರನ್ನೂ, ಬ್ರಹ್ಮ ಮತ್ತು ಪರಮಾತ್ಮನನ್ನೂ, ಭೂಮ್ಯಾಕಾಶಗಳನ್ನೂ, ದಿನರಾತ್ರಿಗಳನ್ನೂ, ತ್ರಿಸಂಧ್ಯೆಯನ್ನೂ ಮತ್ತು ಎಲ್ಲ ದೇವತೆಗಳನ್ನೂ. ತನ್ನ ಪಾತಿವ್ರತ್ಯಕ್ಕೆ ಸಾಕ್ಷಿಯಾಗಿರಬೇಕೆಂದು ಬೇಡಿದಳು.

೩೫. ತಾರಾದೇವಿಯ ಮಾತುಗಳನ್ನು ಕೇಳಿದರೂ ಚಂದ್ರನು ಭಯಪಡದೆ, ಕುಪಿತನಾಗಿ ಆಕೆಯನ್ನು ಬಲಾತ್ಕಾರದಿಂದ ಎತ್ತಿ ರಥದಲ್ಲಿ ಕುಳ್ಳಿರಿಸಿಕೊಂಡನು.

೩೬. ಮನಸ್ಸಿನಷ್ಟು ವೇಗವಾಗಿ ಹೋಗಬಲ್ಲ ಆ ಚಂದ್ರನು ತನ್ನ ಮನೋಹರವಾದ ರಥವನ್ನು ಮುಂದಕ್ಕೆ ನಡೆಸಿದನು. ಮತ್ತು ಮನೋಹರೆಯಾದ ಆಕೆಯೊಡನೆ ಸಂತೋಷದಿಂದ ಕ್ರೀಡಿಸಿದನು.

೩೭–೩೯. ಪುಷ್ಪಭದ್ರಾನದಿಯ ದಡದಲ್ಲಿರುವ, ನಿರ್ಜನವಾದ ಚಂದನವನದಲ್ಲಿಯೂ, ಪುಷ್ಕರಕ್ಷೇತ್ರದ ನದಿಯ ದಡದಲ್ಲಿ ಚೆನ್ನಾಗಿ ಅರಳಿರುವ ಪುಷ್ಪ

ಸುಗಂಧಿಪುಷ್ಪತಲ್ಪೇ ಚ ಪುಷ್ಪಚಂದನವಾಯುನಾ ।
ನಿರ್ಜನೇ ಮಲಯದ್ರೋಣ್ಯಾಂ ಸ್ನಿಗ್ಧಚಂದನಚರ್ಚಿತೇ ॥ ೩೮ ॥

ಶೈಲೇ ಶೈಲೇ ನದೇ ನದ್ಯಾಂ ಶೃಂಗಾರಂ ಕುರ್ವತೋಸ್ತಯೋಃ ।
ಗತಂ ವರ್ಷಶತಂ ಹರ್ಷಾನ್ಮುಹೂರ್ತಮಿವ ನಾರದ ॥ ೩೯ ॥

ಬಭೂವ ಶರಣಾಪನ್ನೋ ಭೀತೋ ದೈತ್ಯೇಷು ಚಂದ್ರಮಾಃ ।
ತೇಜಸ್ವಿನಿ ತಥಾ ಶುಕ್ರೇ ತೇಷಾಂ ಚ ಬಲಿನಾಂ ಗುರೌ ॥ ೪೦ ॥

ಅಭಯಂ ಚ ದದೌ ತಸ್ಮೈ ಕೃಪಯಾ ಭೃಗುನಂದನಃ ।
ಗುರುಂ ಜಹಾಸ ದೇವಾನಾಂ ಸುವಿಪಕ್ಷಂ ಬೃಹಸ್ಪತಿಂ ॥ ೪೧ ॥

ಸಭಾಯಾಂ ಜಹುಸುರ್ದೃಷ್ಟ್ವಾ ಬಲಿನೋ ದಿತಿನಂದನಾಃ ।
ಅಭಯಂ ಚ ದದುಸ್ತಸ್ಮೈ ಭೀತಾಯ ಚ ಕಲಂಕಿನೇ ॥ ೪೨ ॥

---

ಪನವಲ್ಲಿಯೂ, ನಿರ್ಜನವಾದ ಮಲಯಪರ್ವತದ ದ್ರೋಣಿಯಲ್ಲಿ ಚಂದನದಿಂದ ಚರ್ಚಿತವಾಗಿ ಚಂದನವಾಯುವಿನಿಂದ ಸುವಾಸಿತವಾಗಿರುವ ಪುಷ್ಪಶಯನದಲ್ಲಿಯೂ, ಅಲ್ಲದೆ ರಮ್ಯವಾದ ಎಲ್ಲ ಬೆಟ್ಟಗಳಲ್ಲಿಯೂ, ನದನದಿಗಳಲ್ಲಿಯೂ, ರತಿಕ್ರೀಡಾರಹಿತರಾದ ಆ ಚಂದ್ರತಾರೆಯರಿಗೆ ನೂರಾರು ವರ್ಷಗಳೂ ಒಂದು ಮುಹೂರ್ತದಂತೆ ಕಳೆದು ಹೋದವು.

೪೦. ಈ ರೀತಿಯಾಗಿ ರಮಿಸಿ ನಿರ್ವೀರ್ಯನಾದ ಚಂದ್ರನು ರಾಕ್ಷಸರಿಗೆ ಭಯಗೊಂಡು, ತೇಜಸ್ವಿಯೂ, ಬಲಿಷ್ಠರಾದ ರಾಕ್ಷಸರ ಗುರುವೂ ಆದ ಶುಕ್ರಾಚಾರ್ಯನನ್ನು ಮರೆಹೊಕ್ಕನು.

೪೧. ಆಗ ಭೃಗುಮಹರ್ಷಿಯ ಮಗನಾದ ಶುಕ್ರಾಚಾರ್ಯನು ಚಂದ್ರನಿಗೆ ಅಭಯಕೊಟ್ಟುದುದಲ್ಲದೆ, ತನ್ನ ವಿರೋಧಿಗಳ ಪಕ್ಷದವನೂ, ದೇವತೆಗಳ ಗುರುವೂ ಆದ ಬೃಹಸ್ಪತಿಯನ್ನು ಹಾಸ್ಯಮಾಡಿದನು.

೪೨. ಆ ಸಭೆಯಲ್ಲಿದ್ದ ಬಲಿಷ್ಠರೂ ದಿತಿಯ ಪುತ್ರರೂ ಆದ ರಾಕ್ಷಸರು ಆ ಚಂದ್ರನ ದುಃಸ್ಥಿತಿಯನ್ನು ನೋಡಿ ನಕ್ಕು, ಭಯಭೀತನೂ, ಕಳಂಕಿಯೂ ಆದ ಆ ಚಂದ್ರನಿಗೆ ಅಭಯದಾನ ಮಾಡಿದರು.

**ಸತೀ ಸತೀತ್ವಧ್ವಂಸೇನ ಪಾಪಿಷ್ಠಂ ಚಂದ್ರಮಂಡಲೇ ।**
**ಬಭೂವ ಶಶರೂಪಂ ಚ ಕಲಂಕಂ ನಿರ್ಮಲೇ ಮಲಂ ॥ ೪೩ ॥**

**ಉವಾಚ ತಂ ಮಹಾಭೀತಂ ಶುಕ್ರೋ ವೇದವಿದಾಂ ವರಃ ।**
**ಹಿತಂ ತಥ್ಯಂ ವೇದಯುಕ್ತಂ ಪರಿಣಾಮಸುಖಾವಹಂ ॥ ೪೪ ॥**

**॥ ಶುಕ್ರ ಉವಾಚ ॥**

**ತ್ವಮಹೋ ಬ್ರಹ್ಮಣಃ ಪುತ್ರೋಽಪ್ಯತ್ರೇರ್ಭಗವತಃ ಸುತಃ ।**
**ದುರ್ನೀತಂ ಕರ್ಮ ತೇ ಪುತ್ರ ನೀಚವನ್ನ ಯಶಸ್ಕರಂ ॥ ೪೫ ॥**

**ರಾಜಸೂಯಸ್ಯ ಸುಫಲೇ ನಿರ್ಮಲೇ ಕೀರ್ತಿಮಂಡಲೇ ।**
**ಸುಧಾರಾಶೌ ಸುರಾಬಿಂದುರೂಪಮಂಕಮುಪಾರ್ಜಿತಂ ॥ ೪೬ ॥**

---

೪೩. ಪತಿವ್ರತೆಯಾದ ತಾರಾದೇವಿಯ ಪಾತಿವ್ರತ್ಯಭಂಗದಿಂದ, ಉಂಟಾದ ಪಾಪವು ನಿರ್ಮಲವಾದ ಚಂದ್ರಮಂಡಲದಲ್ಲಿ ಮೊಲದ ಆಕಾರವುಳ್ಳ ಶಾಶ್ವತವಾದ ಕಳಂಕವಾಯಿತು.

೪೪. ಆಗ ಬಹಳ ಭಯಗೊಂಡ ಚಂದ್ರನನ್ನು ಕುರಿತು ವೇದಜ್ಞರಲ್ಲಿ ಶ್ರೇಷ್ಠನಾದ ಶುಕ್ರಾಚಾರ್ಯನು ಹಿತವೂ, ಸತ್ಯವೂ, ಪರಿಣಾಮದಲ್ಲಿ ಸುಖಕರವೂ ಆದ ಕೆಲವು ಮಾತುಗಳನ್ನು ಹೇಳಿದನು.

೪೫. ಶುಕ್ರ :—ಎಲೈ ಶಿಷ್ಯನೇ, ಪೂಜ್ಯನಾದ ಬ್ರಹ್ಮನ ಮೊಮ್ಮಗನೂ, ಅತ್ರಿಮಹರ್ಷಿಯ ಮಗನೂ ಆಗಿ ನೀಚನಂತೆ ನೀನು ಮಾಡಿದ ದುಷ್ಕರ್ಮವು ಅಪಕೀರ್ತಿ ತರುವುದಾಗಿದೆ.

೪೬. ರಾಜಸೂಯಯಾಗಮಾಡಿ ಅದರ ಫಲವಾಗಿ ಪಡೆದ ಪವಿತ್ರವಾದ ಕೀರ್ತಿಗೆ, ಅಮೃತರಾಶಿಯಲ್ಲಿ ಮದ್ಯದ ಒಂದು ತೊಟ್ಟನ್ನು ಹಾಕಿ ಕೆಡಿಸಿದಂತೆ ಕಳಂಕವನ್ನು ತಂದುಕೊಂಡೆ.

ತ್ಯಜ ದೇವಗುರೋಃ ಪತ್ನೀಂ ಪ್ರಸೂಮಿವ ಮಹಾಸತೀಂ ।
ಧರ್ಮಿಷ್ಠಸ್ಯ ವರಿಷ್ಠಸ್ಯ ಬ್ರಾಹ್ಮಣಾನಾಂ ಬೃಹಸ್ಪತೇಃ ॥ ೪೭ ॥

ಶಂಭೋಃ ಸುರಾಣಾಮೀಶಸ್ಯ ಗುರುಪುತ್ರಸ್ಯ ವೇಧಸಃ ।
ಪೌತ್ರಸ್ಯಾಂಗಿರಸೇ ನಿತ್ಯಂ ಜ್ವಲತೋ ಬ್ರಹ್ಮತೇಜಸಾ ॥ ೪೮ ॥

ಶತ್ರೋರಪಿ ಗುಣಾ ವಾಚ್ಯಾ ದೋಷಾ ವಾಚ್ಯಾ ಗುರೋರಪಿ ।
ಇತಿ ಸದ್ವಂಶಜಾತಾನಾಂ ಸ್ವಭಾವಂ ಚ ಸತಾಮಪಿ ॥ ೪೯ ॥

ಸ ಶತ್ರುರ್ಮೇ ಸುರಗುರುಃ ಪರೋ ವಿಶ್ವೇ ನಿಶಾಕರ ।
ತಥಾಪಿ ಸಹಜಾಖ್ಯಾನಂ ವರ್ಣಿತಂ ಧರ್ಮಸಂಸದಿ ।
ಯತ್ರ ಲೋಕಾಶ್ಚ ಧರ್ಮಿಷ್ಠಾಸ್ತತ್ರ ಧರ್ಮಃ ಸನಾತನಃ ॥ ೫೦ ॥

---

೪೭. ಬ್ರಾಹ್ಮಣರಲ್ಲಿ ಅತ್ಯಂತ ಧರ್ಮಪರನೂ, ಶ್ರೇಷ್ಠನೂ, ದೇವತೆಗಳ ಗುರುವೂ ಆದ ಬೃಹಸ್ಪತ್ಯಾಚಾರ್ಯನ ಪತ್ನಿಯೂ, ಮಹಾಪತಿವ್ರತೆಯೂ, ನಿನ್ನ ತಾಯಿಗೆ ಸಮಾನಳೂ ಆದ ತಾರಾದೇವಿಯನ್ನು ಬಿಟ್ಟುಬಿಡು.

೪೮. ದೇವತೆಗಳಿಗೊಡೆಯನಾದ ಶಂಭುವಿಗೆ ಗುರುಪುತ್ರನೂ, ಬ್ರಹ್ಮನ ಮೊಮ್ಮಗನೂ, ಅಂಗಿರಸನ ಮಗನೂ ಆಗಿ, ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿರುವ ಬೃಹಸ್ಪತಿಗೆ ತಾರೆಯನ್ನರ್ಪಿಸು.

೪೯. 'ಗುಣವು ಶತ್ರುವಿನಲ್ಲಿದ್ದರೂ ಕೊಂಡಾಡಬೇಕು, ದೋಷವು ಗುರುವಿನಲ್ಲಿದ್ದರೂ, ಹೊರಗೆಡಹಬೇಕು' ಎಂದು ಸದ್ವಂಶದಲ್ಲಿ ಹುಟ್ಟಿದ ಸತ್ಪುರುಷರು ಸ್ವಭಾವವಾಗಿ ಹೇಳುವರು.

೫೦. ಎಲೈ ಚಂದ್ರನೇ, ಆ ದೇವತೆಗಳ ಗುರುವಾದ ಆ ಬೃಹಸ್ಪತಿಯು ನನಗೆ ಶತ್ರುವು. ಆದರೂ ಧರ್ಮಿಷ್ಠರ ಸಭೆಯಲ್ಲಿ ಆತನ ಗುಣವನ್ನು ಇದ್ದಂತೆಯೇ ಹೇಳಿರುವೆನು. ಎಲ್ಲಿ ಜನಗಳು ಧರ್ಮಿಷ್ಠರಾಗಿರುವರೋ ಅಲ್ಲಿ ಸನಾತನ ಧರ್ಮವು ನೆಲೆಸಿರುವುದು.

ಯತೋ ಧರ್ಮಸ್ತತಃ ಕೃಷ್ಣೋ ಯತಃ ಕೃಷ್ಣಸ್ತತೋ ಜಯಃ ।
ಗೌರೇಕಂ ಪಂಚ ಚ ವ್ಯಾಘ್ರೀ ಸಿಂಹೀ ಸಪ್ತ ಪ್ರಸೂಯತೇ ॥ ೫೧ ॥

ಹಿಂಸಕಾಃ ಪ್ರಲಯಂ ಯಾಂತಿ ಧರ್ಮೋ ರಕ್ಷತಿ ಧಾರ್ಮಿಕಂ ।
ದೇವಾಶ್ಚ ಗುರುವೋ ವಿಪ್ರಾಃ ಶಕ್ತಾ ಯದ್ಯಪಿ ರಕ್ಷಿತುಂ ॥ ೫೨ ॥

ತಥಾಪಿ ನ ಹಿ ರಕ್ಷಂತಿ ಧರ್ಮಘ್ನಂ ಪಾಪಿನಂ ಜನಂ ।
ಕುಲಟಾವಿಪ್ರಪತ್ನೀನಾಂ ಗಮನೇ ಸುರವಿಪ್ರಯೋಃ ॥ ೫೩ ॥

ಬ್ರಹ್ಮಹತ್ಯಾಷೋಡಶಾಂಶಪಾತಕಂ ಚ ಭವೇದ್ಧ್ರುವಂ ।
ತಾಸಾಮುಪಸ್ಥಿತಾನಾಂ ಚ ಗಮನೇ ತಚ್ಚತುರ್ಥಕಂ ॥ ೫೪ ॥

ವಿಪ್ರಪತ್ನೀಸತೀನಾಂ ಚ ಗಮನಂ ವೈ ಬಲೇನ ಚೇತ್ ।
ಬ್ರಹ್ಮಹತ್ಯಾಶತಪಾಪಂ ಭವೇದೇವ ಶ್ರುತೌ ಶ್ರುತಂ ॥ ೫೫ ॥

---

೫೧. ಎಲ್ಲಿ ಧರ್ಮವಿದೆಯೋ ಅಲ್ಲಿ ಶ್ರೀಕೃಷ್ಣಪರಮಾತ್ಮನಿರುವನು. ಎಲ್ಲಿ ಶ್ರೀಕೃಷ್ಣನಿರುವನೋ ಅಲ್ಲಿ ಇಷ್ಟಾರ್ಥಸಿದ್ಧಿಯುಂಟಾಗುವುದು. ಹಸುವು ಒಂದೇ ಕರುವನ್ನೂ, ಹುಲಿಯು ಐದು ಮರಿಯನ್ನೂ, ಸಿಂಹವು ಏಳು ಮರಿಯನ್ನೂ ಏಕ ಕಾಲದಲ್ಲಿ ಪ್ರಸವಿಸುತ್ತವೆ. ಆದರೇನು ಹಿಂಸಕರೆಲ್ಲರೂ ನಾಶಹೊಂದುತ್ತಾರೆ. ಧರ್ಮಿಷ್ಠನನ್ನು ಧರ್ಮವೇ ಕಾಪಾಡುತ್ತದೆ.

೫೨. ಧರ್ಮಪರಾಯಣನನ್ನು ದೇವತೆಗಳು, ಗುರುಗಳು ಮತ್ತು ಬ್ರಾಹ್ಮಣರು ರಕ್ಷಣೆಮಾಡಲು ಶಕ್ತರಾಗಿದ್ದರೂ, ಧರ್ಮವನ್ನಳಿದ ಪಾಪಿಯನ್ನು ರಕ್ಷಿಸಲು ಅಶಕ್ತರಾಗುವರು.

೫೩–೫೪. ದೇವತೆಗಳು ಮತ್ತು ಬ್ರಾಹ್ಮಣರು, ವೇಶ್ಯೆಯರ ಮತ್ತು ಬ್ರಾಹ್ಮಣ ಸ್ತ್ರೀಯರ ಸಂಗಮಮಾಡುವುದರಿಂದ ಬ್ರಹ್ಮಹತ್ಯಾದೋಷದ ಹದಿನಾರನೆಯ ಒಂದಂಶ ಪಾಪವು ಲಭಿಸುವುದು. ಮೇಲೆ ಹೇಳಿದ ಸ್ತ್ರೀಯರು ತಾವಾಗಿಯೇ ಬಯಸಿ ಬಂದಾಗ ಅವರ ಸಂಗಮಮಾಡಿದರೆ, ಅದರ ನಾಲ್ಕನೆಯ ಒಂದು ಭಾಗ ಮಾತ್ರ ದೋಷ ಸಂಭವಿಸುವುದು.

೫೫. ಪತಿವ್ರತೆಯರಾದ ಬ್ರಾಹ್ಮಣಸ್ತ್ರೀಯೊಡನೆ ಬಲಾತ್ಕಾರದಿಂದ ಸಂಗಮಿಸಿದರೆ ನೂರು ಬ್ರಹ್ಮಹತ್ಯೆ ಮಾಡಿದಷ್ಟು ದೋಷವುಂಟಾಗುವುದೆಂದು ವೇದೋಕ್ತವಾಗಿದೆ

**ಧರ್ಮಂ ಚರ ಮಹಾಭಾಗ ಬ್ರಾಹ್ಮಣೀಂ ತ್ಯಜ ಸಾಂಪ್ರತಂ ।**
**ಕೃತ್ವಾನುತಾಪಂ ಪಾಪಾಚ್ಚ ನಿವೃತ್ತಿಸ್ತು ಮಹಾಫಲಾ ॥ ೫೬ ॥**

**ಉಪಾಯೇನ ಚ ತೇ ಪಾಪಂ ದೂರೀಭೂತಂ ಭವೇನ್ನನು ।**
**ಶರಣಾಗತಭೀತಸ್ಯ ಮಯಿ ದೇವಸ್ಯ ಧರ್ಮತಃ ॥ ೫೭ ॥**

**ಶಸ್ತ್ರಹೀನಂ ಚ ಭೀತಂ ಚ ದೀನಂ ಚ ಶರಣಾರ್ಥಿನಂ ।**
**ಯೋ ನ ರಕ್ಷತ್ಯಧರ್ಮಿಷ್ಠಃ ಕುಂಭೀಪಾಕೇ ವಸೇದ್ಧ್ರುವಂ ॥ ೫೮ ॥**

**ರಾಜಸೂಯಶತಾನಾಂ ಚ ರಕ್ಷಿತಾ ಲಭತೇ ಫಲಂ ।**
**ಪರಮೈಶ್ವರ್ಯಯುಕ್ತಶ್ಚ ಧರ್ಮೇಣ ಸ ಭವೇದಿಹ ॥ ೫೯ ॥**

**ಇತ್ಯುಕ್ತ್ವಾ ವೈ ದೈತ್ಯಗುರುಃ ಸ್ವರ್ಗೇ ಮಂದಾಕಿನೀ ತಟೇ ।**
**ಸ್ನಾತ್ವಾ ತಂ ಸ್ನಾಪಯಾಮಾಸ ವಿಷ್ಣುಪೂಜಾಂ ಚಕಾರ ಸಃ ॥ ೬೦ ॥**

---

೫೬. ಆದುದರಿಂದ ಎಲೈ ಮಹಾಭಾಗ್ಯಶಾಲಿಯಾದ ಚಂದ್ರನೇ, ಬ್ರಾಹ್ಮಣ ಸ್ತ್ರೀಯನ್ನು ಬಿಟ್ಟು, ಧರ್ಮವನ್ನು ಕಾಪಾಡಿಕೋ. ತಿಳಿಯದೆ ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಡುವುದರಿಂದ, ಆ ಪಾಪ ನಿವೃತ್ತಿಯಾಗುವುದು. ಇದೇ ಮಹಾಫಲವು.

೫೭. ಧರ್ಮಭೀತನೂ, ಶರಣಾಗತನೂ, ದೇವತೆಯೂ ಆದ ನೀನು ನಾನು ಹೇಳಿದ ಈ ಉಪಾಯವನ್ನು ಅನುಸರಿಸುವುದರಿಂದ ನಿನ್ನ ಪಾಪವು ದೂರವಾಗುವುದು ನಿಶ್ಚಯ.

೫೮. ಧರ್ಮಪರಾಯಣನಾದವನು ಆಯುಧರಹಿತನನ್ನೂ, ಭಯಗೊಂಡವನನ್ನೂ, ದೀನನನ್ನೂ, ಶರಣುಹೊಕ್ಕವನನ್ನೂ ಕಾಪಾಡದಿದ್ದರೆ ಕುಂಭೀಪಾಕವೆಂಬ ನರಕದಲ್ಲಿ ಬೀಳುವನು.

೫೯. ಈ ರೀತಿಯಾದ ಶರಣಾಗತರನ್ನು ರಕ್ಷಿಸುವವನು, ನೂರು ರಾಜಸೂಯ ಯಾಗಗಳ ಫಲವನ್ನು ಪಡೆದು ಐಶ್ವರ್ಯಭರಿತನಾಗಿ ಧರ್ಮಪರಾಯಣನಾಗಿರುವನು.

೬೦. ರಾಕ್ಷಸರ ಗುರುವಾದ ಶುಕ್ರಾಚಾರ್ಯನು ಇಂತು ನುಡಿದು ಸ್ವರ್ಗಂಗಾ ನದಿಯಲ್ಲಿ ಸ್ನಾನಮಾಡಿ, ಚಂದ್ರನಿಗೂ ಸ್ನಾನಮಾಡಿಸಿ, ಶ್ರೀಹರಿಯ ಪೂಜೆಯನ್ನು ಮಾಡಿದನು.

**ವಿಷ್ಣುಪಾದಾಬ್ಜಜಾತೇನ ತನ್ನೈವೇದ್ಯಂ ಶುಭಪ್ರದಂ ।**
**ಗಂಗೋದಕೇನ ಪುಣ್ಯೇನ ಭೋಜಯಾಮಾಸ ಚಂದ್ರಕಂ ॥ ೬೧ ॥**

**ಕ್ರೋಡೇ ಕೃತ್ವಾ ತು ತಂ ಭೀತಂ ಲಜ್ಜಿತಂ ಪಾಪಕರ್ಮಣಾ ।**
**ಕುಶಹಸ್ತಸ್ತ್ವಿತ್ಯುವಾಚೇ ಸ್ಮಾರಂ ಸ್ಮಾರಂ ಹರಿಂ ಮುನೇ ॥ ೬೨ ॥**

**॥ ಶುಕ್ರ ಉವಾಚ ॥**

**ಯದ್ಯದ್ಯೇತಿ ತಪಃ ಸತ್ಯಂ ಸತ್ಯಂ ಪೂಜಾಫಲಂ ಹರೇಃ ।**
**ಸತ್ಯಂ ವ್ರತಫಲಂ ಚೈವ ಸತ್ಯಂ ಸತ್ಯವಚಃ ಫಲಂ ॥ ೬೩ ॥**

**ತೀರ್ಥಸ್ನಾನಫಲಂ ಸತ್ಯಂ ಸತ್ಯಂ ದಾನಫಲಂ ಯದಿ ।**
**ಉಪವಾಸಫಲಂ ಸತ್ಯಂ ಪಾಪಾನ್ಮುಕ್ತೋ ಭವಾನ್ಭವೇತ್ ॥ ೬೪ ॥**

**ವಿಪ್ರಂ ತ್ರಿಸಂಧ್ಯಾಹೀನಂ ಚ ವಿಷ್ಣುಪೂಜಾವಿಹೀನಕಂ ।**
**ತಮಾಪ್ನೋತು ಮಹಾಘೋರಂ ಚಂದ್ರಪಾಪಂ ಸುದಾರುಣಂ ॥ ೬೫ ॥**

---

೬೧. ಅನಂತರ ವಿಷ್ಣುವಿನ ಪಾದದಿಂದ ಜನಿಸಿ ಪವಿತ್ರವಾದ ಗಂಗೆಯ ನೀರನ್ನೂ, ವಿಷ್ಣುವಿಗೆ ನಿವೇದಿಸಿದ ಆಹಾರಪದಾರ್ಥಗಳನ್ನೂ ಚಂದ್ರನಿಗೆ ಉಣ ಬಡಿಸಿದನು.

೬೨. ತಾನು ಮಾಡಿದ ಪಾಪಕಾರ್ಯದಿಂದ ನಾಚಿ, ಭಯಪಡುತ್ತಿರುವ ಚಂದ್ರನನ್ನು ತನ್ನ ಬಾಹುಗಳಿಂದ ಅಪ್ಪಿಕೊಂಡು, ಕೈಯಲ್ಲಿ ಪವಿತ್ರವಾದ ದರ್ಭೆಯನ್ನು ಧರಿಸಿ, ಶ್ರೀಹರಿಯನ್ನು ನೆನೆಸಿಕೊಳ್ಳುತ್ತ ಇಂತು ನುಡಿದನು.

೬೩–೬೪. ಶುಕ್ರಾಚಾರ್ಯ:— ನನ್ನ ತಪಸ್ಸಿನ ಫಲವೂ, ಶ್ರೀಹರಿಯ ಪೂಜಾಫಲವೂ, ವ್ರತಾಚರಣೆಯ ಫಲವೂ, ಸತ್ಯವಚನವಾಡಿದುದರ ಫಲವೂ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿದುದರ ಫಲವೂ, ದಾನಮಾಡಿದುದರ ಫಲವೂ, ಉಪವಾಸಮಾಡಿದುದರ ಫಲವೂ. ನಿಜವಾಗಿಯೂ ನನ್ನಲ್ಲಿದ್ದರೆ ನೀನು ಪಾಪದಿಂದ ವಿಮುಕ್ತನಾಗುವೆ.

೬೫. ಅತ್ಯಂತ ಭಯಂಕರವಾದ ಈ ಚಂದ್ರನ ಪಾಪವು ತ್ರಿಸಂಧ್ಯಾಚರಣೆಯನ್ನೂ, ಶ್ರೀಹರಿಯ ಪೂಜೆಯನ್ನೂ ಮಾಡದ ಬ್ರಾಹ್ಮಣನಿಗೆ ಸಂಘಟಿಸಲಿ.

ಸ್ವಭಾರ್ಯಾಂ ವಂಚನಂ ಕೃತ್ವಾ ಯಃ ಪ್ರಯಾತಿ ಪರಸ್ತ್ರಿಯಂ ।
ಸ ಯಾತು ನರಕಂ ಘೋರಂ ಚಂದ್ರಪಾಪೇನ ಪಾತಕೀ ॥ ೯೬ ॥

ವಾಚಾ ವಾ ತಾಡಯೇತ್ಕಾಂತಂ ದುಶ್ಶೀಲಾ ದುರ್ಮುಖಾ ಚ ಯಾ ।
ಸಾ ಯುಗಂ ಚಂದ್ರಪಾಪೇನ ಯಾತು ಲಾಲಾಮುಖಂ ಧ್ರುವಂ ॥ ೯೭ ॥

ಅನ್ನೈವೇದ್ಯಂ ವೃಥಾನ್ನಂ ಚ ಯಶ್ಚ ಭುಂಕ್ತೇ ಹರೇರ್ದ್ವಿಜಃ ।
ಸ ಯಾತು ಕಾಲಸೂತ್ರಂ ಚ ಚಂದ್ರಪಾಪಾಚ್ಚತುರ್ಯುಗಂ ॥ ೬೮ ॥

ಅಂಬುವಾಚ್ಯಂ ಭೂಖನನಂ ಯಃ ಕರೋತಿ ನರಾಧಮಃ ।
ಚಂದ್ರಪಾಪಾದ್ಯುಗಶತಂ ಕಾಲಸೂತ್ರಂ ಸ ಗಚ್ಛತು ॥ ೬೯ ॥

---

೬೬. ಯಾರು ತನ್ನ ಧರ್ಮಪತ್ನಿಯನ್ನು ವಂಚಿಸಿ, ಪರಸ್ತ್ರೀಯೊಡನೆ ಸಂಗಮಿಸುವರೋ, ಆ ಪಾಪಿಗಳು ಚಂದ್ರಕೃತವಾದ ಪಾಪದಿಂದ ಕೂಡಿ ಘೋರ ನರಕಕ್ಕೆ ಹೋಗಲಿ.

೬೭. . ತನ್ನ ಪತಿಯನ್ನು ಕಠಿನ ವಾಕ್ಯಗಳಿಂದ ಬಯ್ಯುವವಳೂ, ದುರ್ನಡತೆಯುಳ್ಳವಳೂ, ಕೆಟ್ಟನುಡಿಯಾಡುವವಳೂ ಆದ ಸ್ತ್ರೀಯು ಚಂದ್ರನ ಪಾಪದಿಂದ ಕೂಡಿ ಯುಗಪರ್ಯಂತ ಲಾಲಾಮುಖವೆಂಬ ನರಕಕ್ಕೆ ಹೋಗಿ ಬೀಳಲಿ.

೬೮. ಶ್ರೀಹರಿಗೆ ನಿವೇದನಮಾಡದಿರುವ ದುಷ್ಟಾನ್ನವನ್ನು ತಿನ್ನುವ ಬ್ರಾಹ್ಮಣನು ಚಂದ್ರನ ಪಾಪದಿಂದ ಕೂಡಿ ನಾಲ್ಕು ಯುಗಗಳಕಾಲ ಕಾಲಸೂತ್ರವೆಂಬ ನರಕಕ್ಕೆ ಹೋಗಲಿ

೬೯. ಭೂದೇವಿಯು ರಜಸ್ವಲೆಯಾದಾಗ ಭೂಮಿಯನ್ನು ಅಗೆಯುವ ನೀಚ ಮನುಷ್ಯನು ಚಂದ್ರಪಾಪದಿಂದ ಕೂಡಿ ನೂರು ಯುಗಗಳಕಾಲ ಕಾಲಸೂತ್ರವೆಂಬ ನರಕಕ್ಕೆ ಹೋಗಲಿ.

ಸ್ವಕಾಂತಂ ವಂಚಯಿತ್ವಾ ಚ ಯಾ ಯಾತಿ ಪರಪೂರುಷಂ ।
ಸಾ ಯಾತು ವಹ್ನಿಕುಂಡಂ ಚ ಚಂದ್ರಪಾಪಾಚ್ಚತುರ್ಯುಗಂ ॥ ೨೦ ॥

ಕೀರ್ತಿಂ ಕರೋತಿ ರಜಸಾ ಪರಕೀರ್ತಿಂ ವಿಲುಪ್ಯ ಚ ।
ಸ ಯುಗಂ ಚಂದ್ರಪಾಪೇನ ಕುಂಭೀಪಾಕಂ ಚ ಗಚ್ಛತು ॥ ೨೧ ॥

ಪಿತರಂ ಮಾತರಂ ಭಾರ್ಯಾಂ ಯೋ ನ ಪುಷ್ಣಾತಿ ಪಾತಕೀ ।
ಸ್ವಗುರುಂ ಚಂದ್ರಪಾಪೇನ ಯಾತು ಚಂಡಾಲತಾಂ ಧ್ರುವಂ ॥ ೨೨ ॥

ಕುಲಟಾನ್ನಮವೀರಾನ್ನಮೃತುಸ್ನಾತಾನ್ನಮೇವ ಚ ।
ಯೋಽಶ್ನಾತಿ ಚಂದ್ರಪಾಪಂ ಚ ಯಾತು ತಂ ಪಾಪಿನಂ ಧ್ರುವಂ ॥ ೨೩ ॥

ಸ ಯಾತು ತೇನ ಪಾಪೇನ ಕುಂಭೀಪಾಕಂ ಚತುರ್ಯುಗಂ ।
ತಸ್ಮಾದುತ್ತೀರ್ಯ ಚಾಂಡಾಲೀಂ ಯೋನಿಮಾಪ್ನೋತಿ ಪಾತಕೀ ॥ ೨೪ ॥

---

೨೦. ತನ್ನ ಪತಿಗೆ ವಂಚನೆಮಾಡಿ ಪರಪುರುಷನೊಡನೆ ಸೇರುವ ಹೆಂಗಸು ಚಂದ್ರನ ಪಾಪದಿಂದ ಕೂಡಿ ನಾಲ್ಕುಯುಗಗಳಕಾಲ ಅಗ್ನಿಕುಂಡವೆಂಬ ನರಕಕ್ಕೆ ಹೋಗಲಿ.

೨೧. ಮತ್ತೊಬ್ಬರ ಕೀರ್ತಿಯನ್ನು ಅಳಿಸಿ, ಅದು ತನಗೆ ಸಲ್ಲಬೇಕೆಂದು ಹೇಳಿಕೊಳ್ಳುವ ರಜೋಗುಣವುಳ್ಳ ಮನುಷ್ಯನು ಚಂದ್ರನ ಪಾಪದಿಂದ ಕೂಡಿ ಒಂದುಯುಗದವರೆಗೆ ಕುಂಭೀಪಾಕನರಕಕ್ಕೆ ಹೋಗಲಿ.

೨೨. ತಂದೆತಾಯಿಯರನ್ನೂ, ಹೆಂಡತಿಯನ್ನೂ ಮತ್ತು ತನ್ನ ವಿದ್ಯಾಗುರುವನ್ನೂ ಪೋಷಿಸದಿರುವ ಪಾಪಿಯು ಚಂದ್ರನ ಪಾಪದಿಂದ ಕೂಡಿ ಚಂಡಾಲನಾಗಲಿ.

೨೩. ಕುಲಟೆಯರು, ಪತಿಪುತ್ರರಿಲ್ಲದವರು ಮತ್ತು ಮುಟ್ಟಾಗಿ ಮಿಂದ ಸ್ತ್ರೀಯರು ಮಾಡಿದ ಅನ್ನವನ್ನು ತಿನ್ನುವ ಪಾಪಿಯು ಚಂದ್ರನ ಪಾಪವನ್ನು ಖಂಡಿತವಾಗಿ ಪಡೆಯಲಿ.

೨೪. ಆ ಪಾಪದೊಡಗೂಡಿ ನಾಲ್ಕು ಯುಗಗಳಕಾಲ ಕುಂಭೀಪಾಕ ನರಕದಲ್ಲಿದ್ದು, ಅನಂತರ ಅಲ್ಲಿಂದ ಮೇಲಕ್ಕೆ ಬಂದ ಆ ಪಾಪಿಯು ಚಂಡಾಲಯೋನಿಯಲ್ಲಿ ಜನ್ಮವೆತ್ತಲಿ.

ದಿವಸೇ ಯೋ ಗ್ರಾಮ್ಯಧರ್ಮಂ ಮಹಾಪಾಪೀ ಕರೋತಿ ಚ ।
ಯೋ ಗಚ್ಛೇತ್ಕಾಮತಃ ಕಾಮೀ ಗುರ್ವಿಣೀಂ ವಾ ರಜಸ್ವಲಾಂ ॥ ೭೫ ॥

ತಂ ಯಾತು ಚಂದ್ರಪಾಪಂ ಚ ಮಹಾಘೋರಂ ಚ ಪಾಪಿನಂ ।
ಸ ಯಾತು ತೇನ ಪಾಪೇನ ಕಾಲಸೂತ್ರಂ ಚತುರ್ಯುಗಂ ॥ ೭೬ ॥

ಮುಖಂ ಶ್ರೋಣೀಂ ಸ್ತನಂ ಚಾಪಿ ಯಃ ಪಶ್ಯತಿ ಪರಸ್ತ್ರಿಯಾಃ ।
ಕಾಮತಃ ಕಾಮದಗ್ಧಶ್ಚ ಯಾತು ತಂ ಚಂದ್ರಕಲ್ಮಷಂ ॥ ೭೭ ॥

ಸ ಯಾತು ಲಾಲಾಭಕ್ಷ್ಯಂ ಚ ಚಂದ್ರಪಾಪಾಚ್ಚತುರ್ಯುಗಂ ।
ತಸ್ಮಾದುತ್ತೀರ್ಯ ಭವತು ಚಾಂಡಾಲಾಂಧೋ ನಪುಂಸಕಃ ॥ ೭೮ ॥

ಕುಹೂಪೂರ್ಣೇಂದುಸಂಕ್ರಾಂತಿ ಚತುರ್ದಶ್ಯಷ್ಟಮೀಷು ಚ ।
ಮಾಂಸಂ ಮಸೂರಂ ಲಕುಚಂ ಯಶ್ಚ ಭುಂಕ್ತೇ ರವೇರ್ದಿನೇ ॥ ೭೯ ॥

---

೭೫-೭೬. ಯಾವ ಮಹಾಪಾಪಿಯು ಹಗಲುಹೊತ್ತಿನಲ್ಲಿ ಸ್ತ್ರೀಸಂಗಮ ಮಾಡುವನೋ, ಯಾವ ಕಾಮಿಯು ಕಾಮಪರವಶನಾಗಿ ಗರ್ಭಿಣಿ ಮತ್ತು ರಜಸ್ವಲೆಯರಾದ ಸ್ತ್ರೀಯರ ಸಂಗಮ ಮಾಡುವನೋ ಆ ಪಾಪಿಗೆ ಮಹಾ ಭಯಂಕರವಾದ ಚಂದ್ರನ ಪಾಪವು ಸಂಭವಿಸಲಿ. ಆ ಪಾಪದೊಡನೆ ಅವನು ನಾಲ್ಕುಯುಗಗಳಕಾಲ ಕಾಲಸೂತ್ರವೆಂಬ ನರಕದಲ್ಲಿ ನರಳಲಿ.

೭೭. ಕಾಮಿಯಾದ ಯಾವ ಪುರುಷನು ಕಾಮಸಂತಪ್ತನಾಗಿ ಪರಸ್ತ್ರೀಯರ ಮುಖ, ಸ್ತನಗಳು ಮತ್ತು ನಿತಂಬಬಿಂಬಗಳನ್ನು ನೋಡುವನೋ ಅಂಥವನಿಗೆ ಚಂದ್ರನ ಪಾಪವು ಸಂಘಟಿಸಲಿ.

೭೮. ಆ ಪಾಪದೊಡನೆ ನಾಲ್ಕುಯುಗಕಾಲ ಲಾಲಾಭಕ್ಷ್ಯವೆಂಬ ನರಕಕ್ಕೆ ಹೋಗಿದ್ದು ಅನಂತರ ಅಲ್ಲಿಂದ ಪಾರಾಗಿ, ಚಂಡಾಲನೂ, ಕುರುಡನೂ ಮತ್ತು ನಪುಂಸಕನೂ ಆಗಿ ಹುಟ್ಟಲಿ.

೭೯-೮೦. ಅಮಾವಾಸ್ಯಾ, ಪೂರ್ಣಿಮಾ, ಸಂಕ್ರಮಣ, ಚತುರ್ದಶಿ, ಅಷ್ಟಮೀ ಮತ್ತು ಭಾನುವಾರದ ದಿವಸಗಳಲ್ಲಿ ಮಾಂಸ, ಕಿರುಗಡಲೆ ಮತ್ತು ಗಜನಿಂಬೆಗಳನ್ನು ತಿನ್ನುವವರಿಗೂ ಮತ್ತು ಸ್ತ್ರೀಸಂಗಮಮಾಡುವವರಿಗೂ, ಚಂದ್ರ

ಕುರುತೇ ಗ್ರಾಮ್ಯಧರ್ಮಂ ಚ ಯಾತು ತಂ ಚಂದ್ರಕಿಲ್ಬಿಷಂ।
ಚತುರ್ಯುಗಂ ಕಾಲಸೂತ್ರಂ ತೇನ ಪಾಪೇನ ಗಚ್ಛತು ॥ ೮೦ ॥

ತಸ್ಮಾದುತ್ತೀರ್ಯ ಚಾಂಡಾಲೀಂ ಯೋನಿಮಾಪ್ನೋತಿ ಪಾತಕೀ।
ಸಪ್ತಜನ್ಮಸು ಸದ್ರೋಗೀ ದರಿದ್ರಃ ಕುಬ್ಜ ಏವ ಚ ॥ ೮೧ ॥

ಏಕಾದಶ್ಯಾಂ ಚ ಯೋ ಭುಂಕ್ತೇ ಕೃಷ್ಣಜನ್ಮಾಷ್ಟಮೀದಿನೇ।
ಶಿವರಾತ್ರೌ ಮಹಾಪಾಪೀ ಯಾತು ತಂ ಚಂದ್ರಪಾತಕಂ ॥ ೮೨ ॥

ಸ ಯಾತು ಕುಂಭೀಪಾಕಂ ಚ ಯಾವದಿಂದ್ರಾಶ್ಚತುರ್ದಶ।
ತೇನ ಪಾಪೇನ ಚಾಪ್ನೋತು ಚಾಂಡಾಲೀಂ ಯೋನಿಮೇವ ಚ ॥ ೮೩ ॥

---

ಕೃತವಾದ ಪಾಪವು ಸಂಘಟಿಸಿ ಆ ಪಾಪಿಯು ನಾಲ್ಕು ಯುಗಗಳಕಾಲ ಕಾಲಸೂತ್ರವೆಂಬ ನರಕದಲ್ಲಿ ನರಳಲಿ.

೮೧. ಅನಂತರ ಆ ಪಾಪಿಯು ಆ ನರಕಕುಂಡದಿಂದ ಪಾರಾಗಿ, ಏಳು ಜನ್ಮಗಳು ಚಂಡಾಲನಾಗಿ ಹುಟ್ಟಿ ರೋಗಿಯೂ, ದರಿದ್ರನೂ ಮತ್ತು ಕುಳ್ಳನೂ ಆಗುವನು.

೮೨ ಏಕಾದಶೀ ದಿವಸಗಳಲ್ಲೂ, ಶ್ರೀಕೃಷ್ಣಜನ್ಮಾಷ್ಟಮಿಯ ದಿನವೂ ಮತ್ತು ಮಹಾಶಿವರಾತ್ರಿಯ ದಿವಸದಲ್ಲೂ ಊಟಮಾಡುವವನಿಗೆ ಚಂದ್ರನ ಮಹಾಪಾಪವು ಸಂಘಟಿಸುವುದು.

೮೩. ಆ ಪಾಪಿಯು ಹದಿನಾಲ್ಕು ಇಂದ್ರರ ಜೀವಿತಕಾಲದವರೆಗೆ ಕುಂಭೀಪಾಕವೆಂಬ ನರಕದಲ್ಲಿದ್ದು ಅನಂತರ ತನ್ನ ಪಾಪಕ್ಕೆ ಅನುಗುಣವಾಗಿ ಚಂಡಾಲ ಜನ್ಮವೆತ್ತುವನು.

ತಾಮ್ರಸ್ಥಂ ದುಗ್ಧಮಾಧ್ವೀಕಮುಚ್ಛಿಷ್ಟೈ ಘೃತಮೇವ ಚ ।
ನಾರಿಕೇಲೋದಕಂ ಕಾಂಸ್ಯೇ ದುಗ್ಧಂ ಸಲವಣಂ ತಥಾ ॥ ೮೪ ॥

ಪೀತಶೇಷಜಲಂ ಚೈವ ಭುಕ್ತಶೇಷಂ ತಥೌದನಂ ।
ಅಸಕೃಚ್ಛಾದನಂ ಭುಂಕ್ತೇ ಸೂರ್ಯೇ ನಾಸ್ತಂಗತೇ ದ್ವಿಜಃ ॥ ೮೫ ॥

ತಂ ಯಾತು ಚಂದ್ರಪಾಪಂ ಚ ದುರ್ನಿವಾರಂ ಚ ದಾರುಣಂ ।
ಸ ಯಾತು ತೇನ ಪಾಪೇನ ಚಾಂಧಕೂಪಂ ಚತುರ್ಯುಗಂ ॥ ೮೬ ॥

ಸ್ವಕನ್ಯಾವಿಕ್ರಯೀ ವಿಪ್ರೋ ದೇವಲೋ ವೃಷವಾಹಕಃ ।
ಶೂದ್ರಾಣಾಂ ಶವದಾಹೀ ಚ ತೇಷಾಂ ವೈ ಸೂಪಕಾರಕಃ ॥ ೮೭ ॥

ಅಶ್ವತ್ಥತರುಘಾತೀ ಚ ವಿಷ್ಣುವೈಷ್ಣವನಿಂದಕಃ ।
ತಂ ಯಾತು ಚಂದ್ರಪಾಪಂ ಚ ದಾರುಣಂ ಪಾಪಿನಂ ಭೃಶಂ ॥ ೮೮ ॥

---

೮೪-೮೬. ತಾಮ್ರಪಾತ್ರೆಯಲ್ಲಿರುವ ಹಾಲು ಮತ್ತು ಜೇನನ್ನೂ, ಎಂಜಲು ತುಪ್ಪವನ್ನೂ, ಕಂಚಿನಪಾತ್ರೆಯಲ್ಲಿ ಎಳನೀರನ್ನೂ, ಉಪ್ಪುಮಿಶ್ರಿತವಾದ ಹಾಲನ್ನೂ, ಒಬ್ಬರು ಕುಡಿದುಳಿದ ನೀರನ್ನೂ, ಊಟಮಾಡಿ ಮಿಕ್ಕ ಅನ್ನವನ್ನೂ, ಸೂರ್ಯಾಸ್ತವಾಗುವುದಕ್ಕೆ ಮೊದಲೇ ಅನೇಕಸಾರಿ ಊಟವನ್ನೂ ಸೇವಿಸುವ ಬ್ರಾಹ್ಮಣನು ದಾರುಣವಾದ ಚಂದ್ರನ ಪಾಪವನ್ನು ಪಡೆದು ನಾಲ್ಕು ಯುಗಗಳಕಾಲ ನರಕದಲ್ಲಿ ನರಳುವನು.

೮೭-೮೮. ಬ್ರಾಹ್ಮಣನಾಗಿ ಹುಟ್ಟಿ ತನ್ನ ಕನ್ಯೆಯನ್ನು ಮಾರಿಕೊಳ್ಳುವವನೂ, ದೇವರ ವೃತ್ತಿನಿಂದ ಜೀವಿಸುವವನೂ, ಎತ್ತುಗಳನ್ನು ನೇಗಿಲು, ಗಾಡಿ ಮುಂತಾದವುಗಳಿಗೆ ಕಟ್ಟಿ ಎಳೆಸುವವನೂ, ಶೂದ್ರರ ಶವವನ್ನು ಸುಡುವವನೂ, ಶೂದ್ರರ ಪರಿಚಾರಿಕೆಮಾಡುವವನೂ, ಅರಳಿಯ ಮರವನ್ನು ಕಡಿಸುವವನೂ, ವಿಷ್ಣು ಮತ್ತು ವಿಷ್ಣುಭಕ್ತರನ್ನು ದೂಷಿಸುವವನೂ ಚಂದ್ರನ ಪಾಪವನ್ನು ಪಡೆದು ಮಹಾಪಾಪಿಯಾಗುವನು.

**ಸ ಯಾತು ತೆಸ್ಮಾತ್ಪಾಪಾಚ್ಚ ತಪ್ತಸೂರ್ಮಿಂ ಚ ಪಾತಕೀ।**
**ಶಶ್ವದ್ದಗ್ಧೋ ಭವತು ಸ ಯಾವದಿಂದ್ರಾಶ್ಚತುರ್ದಶ || ೮೯ ||**

**ತಸ್ಮಾದುತ್ತೀರ್ಯ ಚಾಂಡಾಲೀಂ ಯೋನಿಮಾಪ್ನೋತಿ ಪಾತಕೀ।**
**ಸಪ್ತಜನ್ಮಸು ಚಾಂಡಾಲೋ ವೃಷಭಃ ಪಂಚಜನ್ಮಸು || ೯೦ ||**

**ಗರ್ದಭೋ ಜನ್ಮಶತಕಂ ಸೂಕರಃ ಸಪ್ತಜನ್ಮಸು।**
**ತೀರ್ಥಧ್ವಾಂಕ್ಷಸ್ಸಪ್ತಸು ವೈ ವಿಟ್ಕ್ರಿಮಿಃ ಪಂಚಜನ್ಮಸು।**
**ಜಲೌಕಾ ಜನ್ಮಶತಕಂ ಶುಚಿರ್ಭವತು ತತ್ಪರಂ || ೯೧ ||**

**ವೃಥಾ ಮಾಂಸಂ ಚ ಯೋ ಭುಂಕ್ತೇ ಸ್ವಾರ್ಥಂ ಪಾಕಾನ್ನಮೇವ ಚ।**
**ತದದತ್ತಂ ಮಹಾಪಾಪೀ ಪ್ರಾಪ್ನುಯಾಚ್ಚಂದ್ರಪಾತಕಂ || ೯೨ ||**

**ಸ ಯಾತು ಚಂದ್ರಪಾಪೇನ ಚಾಸಿಪತ್ರಂ ಚತುರ್ಯುಗಂ।**
**ತತೋ ಭವತು ಸರ್ಪಶ್ಚ ಪಶುಸ್ಸ್ಯಾತ್ಸಪ್ತಜನ್ಮಸು || ೯೩ ||**

---

೮೯. ಅಂಥವನು ಆ ಪಾಪದೊಡನೆ ತಪ್ತಸೂರ್ಮಿ ಎಂಬ ನರಕದಲ್ಲಿ ಹದಿನಾಲ್ಕು ಇಂದ್ರರ ಜೀವಿತಕಾಲದವರೆಗೆ ಬಿದ್ದು ಸಂಕಟಪಡಲಿ.

೯೦–೯೧. ಆ ನರಕದಿಂದ ದಾಟಿ ಬಂದು ಏಳು ಜನ್ಮಗಳಲ್ಲಿ ಚಂಡಾಲನಾಗಿಯೂ, ಐದು ಜನ್ಮಗಳಲ್ಲಿ ಎತ್ತಾಗಿಯೂ, ನೂರು ಜನ್ಮಗಳಲ್ಲಿ ಕತ್ತೆಯಾಗಿಯೂ, ಏಳು ಜನ್ಮಗಳಲ್ಲಿ ಹಂದಿಯಾಗಿಯೂ, ಏಳು ಜನ್ಮಗಳಲ್ಲಿ ಕಾಗೆಯಾಗಿಯೂ, ಐದು ಜನ್ಮಗಳಲ್ಲಿ ಮಲಕ್ರಿಮಿಯಾಗಿಯೂ, ನೂರು ಜನ್ಮಗಳಲ್ಲಿ ಜಿಗಣೆಯಾಗಿಯೂ ಹುಟ್ಟಿದನಂತರ ಶುಚಿಯಾಗುವನು.

೯೨. ವಿಧಿವಿಹಿತವಾಗದೆ ಮಾಂಸವನ್ನು ತಿನ್ನುವವನೂ, ಮತ್ತೊಬ್ಬರಿಗೆ ಉಣಬಡಿಸದೆ ಸ್ವಾರ್ಥಕ್ಕಾಗಿ ಬೇಯಿಸಿಕೊಂಡು ತಿನ್ನುವವನೂ ಚಂದ್ರನ ಪಾಪವನ್ನು ಹೊಂದಿ ಮಹಾಪಾಪಿಯಾಗುವನು.

೯೩. ಆ ಪಾಪಿಯು ನಾಲ್ಕು ಯುಗಗಳಕಾಲ ಅಸಿಪತ್ರವೆಂಬ ನರಕದಲ್ಲಿ ತೊಳಲಿ ಅನಂತರ ಏಳು ಜನ್ಮಗಳಲ್ಲಿ ಹಾವಾಗಿಯೂ, ಮತ್ತೇಳು ಜನ್ಮಗಳಲ್ಲಿ ಪಶುವಾಗಿಯೂ ಜನಿಸುವನು.

ವಿಪ್ರೋ ವಾರ್ಧುಷಿಕೋ ಯೋ ಹಿ ಯೋನಿಜೀವೀ ಚಿಕಿತ್ಸಕಃ ।
ಹರೇರ್ನಾಮ್ನಾಂ ಚ ವಿಕ್ರೇತಾ ಯಶ್ಚ ವಾ ಸ್ವಾಂಗವಿಕ್ರಯೀ ॥ ೯೪ ॥

ಸ್ವಧರ್ಮಕಥಕಶ್ಚೈವ ಯಶ್ಚ ಸ್ವಾತ್ಮಪ್ರಶಂಸಕಃ ।
ಮಷೀಜೀವೀ ಧಾವಕಶ್ಚ ಕುಲಟಾಪೋಷ್ಯ ಏವ ಚ ॥ ೯೫ ॥

ತಂ ಯಾತು ಚಂದ್ರಪಾಪಂ ಚ ಚಂದ್ರೋ ಭವತು ವಿಜ್ವರಃ ।
ಸ ಯಾತು ತೇನ ಪಾಪೇನ ಶೂಲಪ್ರೋತಂ ಸುದಾರುಣಂ ॥ ೯೬ ॥

ತತ್ರ ವಿದ್ಧೋ ಭವತು ಸ ಯಾವದಿಂದ್ರಾಶ್ಚತುರ್ದಶ ।
ತತೋ ದರಿದ್ರೋ ರೋಗೀ ಚ ದೀಕ್ಷಾಹೀನೋ ನರಃ ಪಶುಃ ॥ ೯೭ ॥

ಲಾಕ್ಷಾಮಾಂಸರಸಾನಾಂ ಚ ತಿಲಾನಾಂ ಲವಣಸ್ಯ ಚ ।
ಅಶ್ವಾನಾಂ ಚೈವ ಲೋಹಾನಾಂ ವಿಕ್ರೇತಾ ನರಘಾತಕಃ ॥ ೯೮ ॥

---

೯೪-೯೬. ಹಣದ ಬಡ್ಡಿಯಿಂದಲೂ, ಸ್ತ್ರೀಯರ ಯೋನಿವಿಕ್ರಯದಿಂದಲೂ, ಚಿಕಿತ್ಸಾವೃತ್ತಿಯಿಂದಲೂ, ಶ್ರೀಹರಿಯ ಹೆಸರನ್ನು ಬರೆದು ಮಾರುವುದರಿಂದಲೂ, ತನ್ನ ಶರೀರವನ್ನೇ ಪರಾಧೀನಗೊಳಿಸುವುದರಿಂದಲೂ, ತನ್ನ ಧರ್ಮರಹಸ್ಯವನ್ನು ಹೇಳುವುದರಿಂದಲೂ, ಸ್ವಾತ್ಮಪ್ರಶಂಸೆಯಿಂದಲೂ, ಬರೆವಣಿಗೆಯಿಂದಲೂ, ಅಗಸನ ವೃತ್ತಿಯಿಂದಲೂ, ವೇಶ್ಯೆಯರ ಅಧೀನದಿಂದಲೂ ಜೀವಿಸುವ ಬ್ರಾಹ್ಮಣನು ಚಂದ್ರನ ಮಹಾಪಾಪವನ್ನು ಪಡೆಯಲಿ. ಮತ್ತು ಆ ಪಾಪಿಯು ಶೂಲಪ್ರೋತವೆಂಬ ಭಯಂಕರವಾದ ನರಕಕ್ಕೆ ಹೋಗಿ ಬೀಳಲಿ. ಚಂದ್ರನು ಪಾಪನಿರ್ಮುಕ್ತನಾಗಲಿ.

೯೭. ಅಲ್ಲಿ ಹದಿನಾಲ್ಕು ಇಂದ್ರರ ಜೀವಿತಕಾಲದವರೆಗೆ ಶೂಲದ ಯಾತನೆಯನ್ನು ಅನುಭವಿಸುತ್ತಿದ್ದು ಅನಂತರ ಕ್ರಮವಾಗಿ ದರಿದ್ರನೂ, ರೋಗಿಯೂ, ಯಜ್ಞದೀಕ್ಷೆಗೆ ಅರ್ಹನಲ್ಲದ ಮನುಷ್ಯನೂ, ಪಶುವೂ ಆಗಿ ಹುಟ್ಟಲಿ.

೯೮-೯೯. ಅರಗು, ಮಾಂಸ, ರಸಪದಾರ್ಥಗಳು, ಎಳ್ಳು, ಉಪ್ಪು, ಕುದುರೆ ಮತ್ತು ಲೋಹಗಳನ್ನು ಮಾರುವ, ಮನುಷ್ಯರನ್ನು ಕೊಲ್ಲುವ, ಕುಂಬಾರವೃತ್ತಿ

ವಿಪ್ರಃ ಕುಲಾಲಃ ಚೌರಶ್ಚ ಯಾತು ತಂ ಚಂದ್ರಪಾತಕಂ ।
ಸ ಯಾತು ತೇನ ಪಾಪೇನ ಕ್ಷುರಧಾರಂ ಸುದುಃಸಹಂ ॥ ೯೯ ॥

ತತ್ರಚ್ಛಿನ್ನೋ ಭವತು ಸ ಯಾವದಿಂದ್ರಸಹಸ್ರಕಂ ।
ತಸ್ಮಾದುತ್ತೀರ್ಯ ಸ ಭವೇತ್ಸೃಗಾಲಃ ಸಪ್ತಜನ್ಮಸು ॥ ೧೦೦ ॥

ಸಪ್ತಜನ್ಮಸು ಮಾರ್ಜಾರೋ ಮಹಿಷೋ ಜನ್ಮಪಂಚಕಂ ।
ಸಪ್ತಜನ್ಮಸು ಭಲ್ಲೂಕಃ ಕುಕ್ಕುರಃ ಸಪ್ತಜನ್ಮಸು ॥ ೧೦೧ ॥

ಆಖುಶ್ಚ ಜನ್ಮಶತಕಂ ಕುಕ್ಕುಟೀಜನ್ಮಪಂಚಕಂ ।
ಗೋಧಿಕಾಜನ್ಮಶತಕಂ ಗರ್ದಭಃ ಸಪ್ತಜನ್ಮಸು ॥ ೧೦೨ ॥

ಸಪ್ತಜನ್ಮಸು ಮಂಡೂಕಸ್ತತಸ್ಸ್ಯಾನ್ಮಾನವೋಽಧಮಃ ।
ಚರ್ಮಕಾರಶ್ಚ ರಜಕಸ್ತೈಲಕಾರಶ್ಚ ವರ್ಧಕಿಃ ॥ ೧೦೩ ॥

ನಾವಿಕಃ ಶವಜೀವೀ ಚ ವ್ಯಾಧಶ್ಚ ಸ್ವರ್ಣಕಾರಕಃ ।
ಕುಂಭಕಾರೋ ಲೋಹಕಾರಸ್ತತಃ ಕ್ಷತ್ರಸ್ತತೋ ದ್ವಿಜಃ ॥ ೧೦೪ ॥

---

ಯನ್ನೂ, ಕಳ್ಳತನವನ್ನೂ ಮಾಡುವ ಬ್ರಾಹ್ಮಣನು ಚಂದ್ರನ ಪಾಪವನ್ನು ಹೊಂದಲಿ. ಆ ಪಾಪದೊಡನೆ ಅವನು ಕ್ಷುರಧಾರೆಯೆಂಬ ದಾರುಣವಾದ ನರಕಕ್ಕೆ ಹೋಗಲಿ.

೧೦೦. ಅಲ್ಲಿ ಸಾವಿರ ಇಂದ್ರರ ಜೀವಿತಕಾಲದವರೆಗೆ ಕತ್ತಿಯ ಅಲುಗಿನಿಂದ ಕೊಯ್ಯಿಸಿಕೊಳ್ಳುತ್ತಿದ್ದು ಅನಂತರ ಅಲ್ಲಿಂದ ಪಾರಾಗಿ ಎಳು ಜನ್ಮಗಳಲ್ಲಿ ನರಿಯಾಗಿ ಹುಟ್ಟುವನು.

೧೦೧-೧೦೪. ಏಳು ಜನ್ಮಗಳಲ್ಲಿ ಬೆಕ್ಕಾಗಿಯೂ, ಐದು ಜನ್ಮಗಳಲ್ಲಿ ಕೋಣನಾಗಿಯೂ, ಏಳು ಜನ್ಮಗಳಲ್ಲಿ ಕರಡಿಯಾಗಿಯೂ, ಏಳು ಜನ್ಮಗಳಲ್ಲಿ ನಾಯಿಯಾಗಿಯೂ, ನೂರು ಜನ್ಮಗಳಲ್ಲಿ ಮೂಷಕನಾಗಿಯೂ, ಐದು ಜನ್ಮಗಳಲ್ಲಿ ಲಕ್ಕಿಯಾಗಿಯೂ, ನೂರು ಜನ್ಮಗಳಲ್ಲಿ ಹೆಂಟೆಗೊದ್ದನಾಗಿಯೂ, ಏಳು ಜನ್ಮಗಳಲ್ಲಿ ಕತ್ತೆಯಾಗಿಯೂ, ಏಳು ಜನ್ಮಗಳಲ್ಲಿ ಕಪ್ಪೆಯಾಗಿಯೂ ಹುಟ್ಟಿದನಂತರ ಪುನಃ ನೀಚ ಮನುಷ್ಯನಾಗಿ ಹುಟ್ಟುವನು. ಕ್ರಮವಾಗಿ ಚಮ್ಮಾರ, ಅಗಸ, ಗಾಣಿಗ, ಬಡಗಿ, ಅಂಬಿಗ, ಹೆಣವನ್ನು ಹೊರುವವ, ಬೇಡ, ಅಕ್ಕಸಾಲೆ, ಕುಂಬಾರ, ಕಂಚುಗಾರ ಮತ್ತು ಕ್ಷತ್ರಿಯನಾಗಿ ಹುಟ್ಟಿ ಪುನಃ ಬ್ರಾಹ್ಮಣಜನ್ಮವನ್ನೆತ್ತುವನು.

ಇತಿ ಚಂದ್ರಂ ಶುಚಿಂ ಕೃತ್ವಾ ಸಮುವಾಚ ತು ತಾರಕಾಂ ।
ತ್ಯಕ್ತ್ವಾ ಚಂದ್ರಂ ಮಹಾಸಾಧ್ವಿ ಗಚ್ಛ ಕಾಂತಮಿತಿ ದ್ವಿಜಃ ॥ ೧೦೫ ॥

ಪ್ರಾಯಶ್ಚಿತ್ತಂ ವಿನಾ ಪೂತಾ ತ್ವಮೇವಂ ಶುದ್ಧಮಾನಸಾ ।
ಅಕಾಮಾ ಯೋ ಬಲಿಷ್ಠೇನ ನ ಸ್ತ್ರೀ ಜಾರೇಣ ದುಷ್ಯತಿ ॥ ೧೦೬ ॥

ಇತ್ಯೇವಮುಕ್ತ್ವಾ ಶುಕ್ರಶ್ಚ ಚಂದ್ರಂ ವಾ ತಾರಕಾಂ ಸತೀಂ ।
ಸಸ್ಮಿತಾಂ ಸಸ್ಮಿತಂ ಚೈವ ಚಕಾರ ಚ ಶುಭಾಶಿಷಃ ॥ ೧೦೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ
ತಾರಾಚಂದ್ರಯೋರ್ದೋಷನಿವಾರಣಂ
ನಾಮಾಷ್ಟಪಂಚಾಶತ್ತಮೋಽಧ್ಯಾಯಃ

---

೧೦೫. ಈ ರೀತಿಯಾಗಿ ಶುಕ್ರಾಚಾರ್ಯನು ಚಂದ್ರನನ್ನು ಪಾಪವಿಮುಕ್ತನನ್ನಾಗಿ ಮಾಡಿ ಪತಿವ್ರತೆಯಾದ ತಾರಾದೇವಿಯನ್ನು ಕುರಿತು 'ಎಲೌ ಸಾಧ್ವೀಮಣಿಯೇ, ನೀನು ಚಂದ್ರನನ್ನು ಬಿಟ್ಟು ನಿನ್ನ ಪತಿಯ ಸಮೀಪಕ್ಕೆ ಹೋಗು' ಎಂದನು.

೧೦೬. ಶುದ್ಧ ಮನಸ್ಸುಳ್ಳ ನಿನ್ನ ಪರಿಶುದ್ಧಿಗಾಗಿ ಯಾವ ಪ್ರಾಯಶ್ಚಿತ್ತವೂ ಅನವಶ್ಯಕ. ತಾನು ಕಾಮಪರವಶಳಾಗದೆ, ಬಲಿಷ್ಠನಾದ ಪುರುಷನಿಂದ ಬಲಾತ್ಕಾರವಾಗಿ ಉಪಭೋಗಿಸಲ್ಪಡುವ ಸ್ತ್ರೀಯು ಜಾರೆಯಾಗುವುದಿಲ್ಲ.

೧೦೭. ಈ ರೀತಿಯಾಗಿ ಚಂದ್ರ ತಾರೆಯರನ್ನು ಕುರಿತು ಶುಕ್ರಾಚಾರ್ಯನು ಹೇಳಿ ಅವರನ್ನು ಸಂತೋಷಗೊಳಿಸಿ, ಶುಭಾಶೀರ್ವಾದಗಳನ್ನು ಮಾಡಿ ಕಳುಹಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ಚಂದ್ರ ತಾರೆಯರ ದೋಷನಿವಾರಣಾರೂಪವಾದ ಐವತ್ತೆಂಟನೆಯ ಅಧ್ಯಾಯವು ಮುಗಿದುದು.

## ಐವತ್ತೆಂಟನೆಯ ಅಧ್ಯಾಯದ ಸಾರಾಂಶವು

ಸುರಥಮಹಾರಾಜನು ಯಾರ ವಂಶದವನೆಂದು ಕೇಳಿದ ನಾರದನನ್ನು ಕುರಿತು ನಾರಾಯಣಮಹರ್ಷಿಯು ಅವನು ಚಂದ್ರ ವಂಶದವನೆಂದು ಹೇಳಿ 'ಒಮ್ಮೆ ಚಂದ್ರನು ಗಂಗಾನದಿಯ ತೀರದಲ್ಲಿದ್ದಾಗ ಏಕಾಂಗಿಯಾಗಿ ಬಂದಿದ್ದ ಗುರುಪತ್ನಿಯಾದ ತಾರಾದೇವಿಯ ಸೌಂದರ್ಯಕ್ಕೆ ಮರುಳಾಗಿ, ಬಲಾತ್ಕಾರದಿಂದ ಆಕೆಯನ್ನು ಪಭೋಗಿಸಿ, ಮಹಾಪಾಪಿಯಾಗಿ, ಶುಕ್ರಾಚಾರ್ಯನ ಮರೆಹೊಕ್ಕು, ಅವನ ಪ್ರಭಾವದಿಂದ ತನ್ನ ಮಹಾಪಾಪವನ್ನು ಪಾಪಿಗಳಿಗೆಲ್ಲ ಹಂಚಿ ತಾನು ಪಾಪವಿಮುಕ್ತನಾದನೆಂದೂ' ವಿವರಿಸಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಏಕೋನಷಷ್ಟಿತಮೋಽಧ್ಯಾಯಃ ||

|| ನಾರದ ಉವಾಚ ||

ಬೃಹಸ್ಪತಿಃ ಕಿಂ ಚಕಾರ ತಾರಕಾಹರಣಾಂತರೇ |
ಕಥಂ ಸಂಪ್ರಾಪ ತಾಂ ಸಾಧ್ವೀಂ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

|| ಶ್ರೀ ನಾರಾಯಣ ಉವಾಚ ||

ದೃಷ್ಟ್ವಾ ವಿಲಂಬಂ ತಾರಾಯಾಃ ಸ್ನಾಂತ್ಯಾಶ್ಚಾಪಿ ಗುರುಃ ಸ್ವಯಂ |
ಪ್ರಸ್ಥಾಪಯಾಮಾಸ ಶಿಷ್ಯಮನ್ವೇಷಾರ್ಥಂ ಚ ಜಾಹ್ನವೀಂ || ೨ ||

---

### ಐವತ್ತೊಂಭತ್ತನೆಯ ಅಧ್ಯಾಯವು

೧. ನಾರದ:—ಎಲೈ ನಾರಾಯಣಮಹರ್ಷಿಯೇ, ಚಂದ್ರನು ತಾರಾದೇವಿಯನ್ನು ಅಪಹರಿಸಿಕೊಂಡು ಹೋದ ಮೇಲೆ ಬೃಹಸ್ಪತಿಯು ಏನುಮಾಡಿದನು? ಆ ಸಾಧ್ವೀಮಣಿಯನ್ನು ಪಡೆದುದು ಹೇಗೆ? ಇದನ್ನು ನನಗೆ ದಯವಿಟ್ಟು ವಿವರಿಸು.

೨. ಶ್ರೀ ನಾರಾಯಣ:—ಗಂಗಾನದಿಯಲ್ಲಿ ಸ್ನಾನಮಾಡಲು ಹೋದ ತಾರಾದೇವಿಯು ಎಷ್ಟು ಹೊತ್ತಾದರೂ ಹಿಂತಿರುಗಿ ಬರದಿರುವುದನ್ನು ನೋಡಿ ಬೃಹಸ್ಪತಿಯು ಆಕೆಯನ್ನು ಹುಡುಕಲು ತನ್ನ ಶಿಷ್ಯನನ್ನು ಕಳುಹಿಸಿದನು.

ಶಿಷ್ಯೋ ಗತ್ವಾ ಚ ತದ್ವೃತ್ತಂ ಜ್ಞಾತ್ವಾ ವೈ ಲೋಕವಕ್ತ್ರತಃ ।
ರುದನ್ನುವಾಚ ಸ್ವಗುರುಂ ತಾರಕಾಹರಣಂ ಮುನೇ ॥ ೩ ॥

ಶ್ರುತ್ವಾ ಸುರಗುರುರ್ವಾರ್ತಾಂ ಶಶಿನಾ ಚ ಪ್ರಿಯಾಂ ಹೃತಾಂ ।
ಮುಹೂರ್ತಂ ಪ್ರಾಪ ಮೂರ್ಛಾಂ ಚ ತತಃ ಸಂಪ್ರಾಪ್ಯ ಚೇತನಾಂ ॥ ೪ ॥

ರುರೋದೋಚ್ಚೈಃ ಸಶಿಷ್ಯಶ್ಚ ಹೃದಯೇನ ವಿದೂಯತಾ ।
ಶೋಕೇನ ಲಜ್ಜಯಾವಿಷ್ಟೋ ವಿಲಲಾಪ ಮುಹುರ್ಮುಹುಃ ॥ ೫ ॥

ಉವಾಚ ಶಿಷ್ಯಾನ್ಸಂಬೋಧ್ಯ ನೀತಿಂ ಚ ಶ್ರುತಿಸಂಮತಾಂ ।
ಸಾಶ್ರುನೇತ್ರಃ ಸಾಶ್ರುನೇತ್ರಾಂಚ್ಛೋಕಾರ್ತಃ ಶೋಕಕರ್ಶಿತಾನ್ ॥ ೬ ॥

---

೩. ಅದೇ ರೀತಿಯಾಗಿ ಹೋದ ಶಿಷ್ಯನು ಜನರಾಡುತ್ತಿದ್ದ ಆಕೆಯ ಸಮಾಚಾರವನ್ನು ಕೇಳಿ, ಗೋಳಾಡುತ್ತ ಬಂದು ಚಂದ್ರನು ತಾರಾಪಹರಣ ಮಾಡಿದ ವಿಷಯವನ್ನು ತನ್ನ ಗುರುವಿಗೆ ತಿಳಿಸಿದನು.

೪. ಚಂದ್ರನು ತನ್ನ ಪತ್ನಿಯ ಅಪಹರಣ ಮಾಡಿದ ಸಮಾಚಾರವನ್ನು ಕೇಳಿ, ಬೃಹಸ್ಪತಿಯು ಒಂದು ಮುಹೂರ್ತಕಾಲ ಮೂರ್ಛೆಗೊಂಡು ಮತ್ತೆ ಚೇತನವನ್ನು ಪಡೆದನು.

೫. ಅನಂತರ ವ್ಯಥೆಗೊಂಡ ಮನಸ್ಸುಳ್ಳವನಾಗಿ ಶಿಷ್ಯನೊಡನೆ ಗೋಳಾಡುತ್ತ, ಪ್ರಿಯಾ ವಿರಹದುಃಖದಿಂದಲೂ, ಅಪಹೃತಳಾದಳೆಂಬ ನಾಚಿಕೆಯಿಂದಲೂ ಮತ್ತೆ ಮತ್ತೆ ಪ್ರಲಾಪಿಸಿದನು.

೬. ಶೋಕಪೂರಿತನಾಗಿ ಕಣ್ಣುಗಳಲ್ಲಿ ನೀರನ್ನು ಸುರಿಸುತ್ತ, ದುಃಖಿತರಾದ ಶಿಷ್ಯರನ್ನು ಕುರಿತು ನೀತಿಯುತವೂ, ಶ್ರುತ್ಯುಕ್ತವೂ ಆದ ಕೆಲವು ಮಾತುಗಳನ್ನಾಡಿದನು.

॥ ಬೃಹಸ್ಪತಿರುವಾಚ ॥

ಹೇ ವತ್ಸಾಃ ಕೇನ ಶಪ್ತೋಽಹಂ ನ ಜಾನೇ ಕಾರಣಂ ಪರಂ ।
ದುಃಖಂ ಧರ್ಮವಿರುದ್ಧೋ ಯಃ ಸ ಪ್ರಾಪ್ನೋತಿ ನ ಸಂಶಯಃ ॥ ೭ ॥

ಯಸ್ಯ ನಾಸ್ತಿ ಸತೀ ಭಾರ್ಯಾ ಗೃಹೇಷು ಪ್ರಿಯವಾದಿನೀ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ॥ ೮ ॥

ಭಾವಾನುರಕ್ತಾ ವನಿತಾ ಹೃತಾ ಯಸ್ಯ ಚ ಶತ್ರುಣಾ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ॥ ೯ ॥

ಸುಶೀಲಾ ಸುಂದರೀ ಭಾರ್ಯಾ ಗತಾ ಯಸ್ಯ ಗೃಹಾದಹೋ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ॥ ೧೦ ॥

---

೭. ಬೃಹಸ್ಪತಿ:—ಎಲೈ ಬಾಲಕರೇ, ನನಗೆ ಪತ್ನೀವಿಯೋಗವಾಗಲೆಂದು ಯಾರು ಶಪಿಸಿದರೋ, ಇದಕ್ಕೆ ಕಾರಣವೇನೋ, ನನಗೆ ತಿಳಿಯದು. ಧರ್ಮಕ್ಕೆ ವಿರುದ್ಧವಾಗಿ ನಡೆದವನು ದುಃಖಭಾಗಿಯಾಗುವನು. ಇದಕ್ಕೆ ಸಂದೇಹವಿಲ್ಲ.

೮. ಯಾರಿಗೆ ಮನೆಯಲ್ಲಿ ಹಿತನುಡಿಯುವವಳೂ, ಪತಿವ್ರತೆಯೂ ಆದ ಹೆಂಡತಿಯಿಲ್ಲವೋ ಅವನು ಕಾಡಿಗೆ ಹೋಗುವುದೊಳಿತು. ಏಕೆಂದರೆ ಅವನ ಮನೆಗೂ ಕಾಡಿಗೂ ಏನೂ ವ್ಯತ್ಯಾಸವಿಲ್ಲ.

೯. ಪತಿಯ ಮನೋಭಿಪ್ರಾಯವನ್ನರಿತು ನಡೆಯುವ ಸತಿಯನ್ನು ಶತ್ರುವು ಅಪಹರಿಸಿದ ಮೇಲೆ ಪತಿಗೆ ಕಾಡೂ, ಮನೆಯೂ ಒಂದೇ ಆದುದರಿಂದ ಅವನು ಕಾಡಿಗೆ ಹೋಗುವುದು ಒಳ್ಳೆಯದು.

೧೦. ಯಾವ ಗೃಹಸ್ಥನ ಮನೆಯಿಂದ, ಒಳ್ಳೆಯ ನಡತೆವಂತಳೂ, ಸುಂದರಿಯೂ ಆದ ಹೆಂಡತಿಯು ಹೊರಟುಹೋಗುವಳೋ ಆ ಗೃಹಸ್ಥನಿಗೆ ಕಾಡಿಗೂ ತನ್ನ ಮನೆಗೂ ವ್ಯತ್ಯಾಸವಿಲ್ಲದುದರಿಂದ ಅವನು ಕಾಡಿಗೆ ಹೋಗಬೇಕು.

ದೈವೇನಾಪಹೃತಾ ಯಸ್ಯ ಪತಿಸಾಧ್ವ್ಯಾ ಪತಿವ್ರತಾ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ॥ ೧೧ ॥

ಯಸ್ಯ ಮಾತಾ ಗೃಹೇ ನಾಸ್ತಿ ಗೃಹಿಣೀ ವಾ ಸುಶಾಸಿತಾ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ॥ ೧೨ ॥

ಪ್ರಿಯಾಹೀನಂ ಗೃಹಂ ಯಸ್ಯ ಪೂರ್ಣಂ ದ್ರವಿಣಬಂಧುಭಿಃ ।
ಅರಣ್ಯಂ ತೇನ ಗಂತವ್ಯಂ ಯಥಾರಣ್ಯಂ ತಥಾ ಗೃಹಂ ॥ ೧೩ ॥

ಭಾರ್ಯಾಶೂನ್ಯಾ ವನಸಮಾಃ ಸಭಾರ್ಯಾಶ್ಚ ಗೃಹಾ ಗೃಹಾಃ ।
ಗೃಹಿಣೀ ಚ ಗೃಹಂ ಪ್ರೋಕ್ತಂ ನ ಗೃಹಂ ಗೃಹಮುಚ್ಯತೇ ॥ ೧೪ ॥

---

೧೧. ಪತಿಯ ಚಿತ್ತಾನುಸರಣಮಾಡುತ್ತಿರುವ ಪತಿವ್ರತೆಯಾದ ಸ್ತ್ರೀಯನ್ನು ದುರದೃಷ್ಟದಿಂದ ಅಪಹರಿಸಲೆಡೆಕೊಟ್ಟ ಪುರುಷನಿಗೆ ಕಾಡಿಗೂ ಮನೆಗೂ ಭೇದವಿಲ್ಲ ದುದರಿಂದ ಅವನು ಕಾಡಿಗೆ ಹೋಗುವುದೇ ಉತ್ತಮ.

೧೨. ಪುರುಷನನ್ನು ಸನ್ಮಾರ್ಗಕ್ಕೆ ತರುವ ತಾಯಿಯಾಗಲೀ, ಹೆಂಡತಿಯಾಗಲೀ ಮನೆಯಲ್ಲಿಲ್ಲದ ಮೇಲೆ ಅವನಿಗೆ, ಕಾಡೂ ಮನೆಯೂ ಒಂದೇ ಆದುದರಿಂದ, ಕಾಡಿಗೆ ಹೋಗುವುದೇ ಯುಕ್ತವಾದುದು.

೧೩. ಮನುಜನು ಹಣದಿಂದಲೂ, ಬಂಧುಗಳಿಂದಲೂ ಪರಿಪೂರ್ಣನಾಗಿದ್ದರೂ, ಪ್ರಿಯಾರಹಿತನಾಗಿದ್ದರೆ, ಅಂಥವನು ಮನೆಯಲ್ಲಿ ವಾಸಿಸುವುದಕ್ಕಿಂತ ಕಾಡಿಗೆ ಹೋಗುವುದು ಅತ್ಯುತ್ತಮ.

೧೪. ಹೆಂಡತಿಯಿಲ್ಲದ ಮನೆಯು ಕಾಡಿಗೆ ಸಮನಾದುದರಿಂದ. ಹೆಂಡತಿಯಿದ್ದರೇ ಮನೆಯು ಗೃಹವೆನಿಸುವುದು. ಏಕೆಂದರೆ, ಗೃಹಿಣಿ (ಹೆಂಡತಿ) ಯುಳ್ಳದ್ದು ಗೃಹವೆನಿಸುವುದೇ ಹೊರತು ಕೇವಲ ಮನೆಗೆ ಗೃಹವೆಂದು ಹೇಳುವುದಿಲ್ಲ.

ಅಶುಚಿಃ ಸ್ತ್ರೀವಿಹೀನಶ್ಚ ದೈವೇ ಪಿತ್ರ್ಯೇ ಚ ಕರ್ಮಣಿ ।
ಯದಹ್ನಾ ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥ ೧೫ ॥

ದಾಹಿಕಾಶಕ್ತಿಹೀನಶ್ಚ ಯಥಾ ಮಂದೋ ಹುತಾಶನಃ ।
ಪ್ರಭಾಹೀನೋ ಯಥಾ ಸೂರ್ಯಃ ಶೋಭಾಹೀನೋ ಯಥಾ ಶಶೀ ॥ ೧೬ ॥

ಶಕ್ತಿಹೀನೋ ಯಥಾ ಜೀವೋ ಯಥಾ ಚಾತ್ಮಾ ತನುಂ ವಿನಾ ।
ವಿನಾಧಾರಂ ಯಥಾಽಧೇಯೋ ಯಥೇಶಃ ಪ್ರಕೃತಿಂ ವಿನಾ ॥ ೧೭ ॥

ನ ಚ ಶಕ್ತೋ ಯಥಾ ಯಜ್ಞಃ ಫಲದೋ ದಕ್ಷಿಣಾಂ ವಿನಾ ।
ಕರ್ಮಣಾಂ ಚ ಫಲಂ ದಾತುಂ ಸಾಮಗ್ರೀಮೂಲಮೇವ ಚ ॥ ೧೮ ॥

ವಿನಾ ಸ್ವರ್ಣಂ ಸ್ವರ್ಣಕಾರೋ ಯಥಾಶಕ್ತಃ ಸ್ವಕರ್ಮಣಿ ।
ಯಥಾಶಕ್ತಃ ಕುಲಾಲಶ್ಚ ಘಟಂ ಚ ಮೃತ್ತಿಕಾಂ ವಿನಾ ॥ ೧೯ ॥

---

೧೫. ಹೆಂಡತಿಯಿಲ್ಲದವನು, ದೇವ ಮತ್ತು ಪಿತೃಕಾರ್ಯಗಳನ್ನಾಚರಿಸಲು ಅಶುಚಿಯೆನಿಸುವನು. ಅವನು ಪ್ರತಿನಿತ್ಯವೂ ಮಾಡಿದ ಸತ್ಕರ್ಮಫಲವನ್ನು ಅವನು ಹೊಂದಲಾರನು.

೧೬–೧೭. ಸುಡುವ ಶಕ್ತಿಯಿಲ್ಲದ ಬೆಂಕಿಯೂ, ತೇಜೋಹೀನನಾದ ಸೂರ್ಯನೂ, ಕಾಂತಿಹೀನವಾದ ಚಂದ್ರನೂ, ಚೇತನಾಶಕ್ತಿಯಿಲ್ಲದ ಜೀವನೂ, ಶರೀರವಿಲ್ಲದ ಆತ್ಮನೂ, ಆಧಾರವಿಲ್ಲದ ವಸ್ತುವೂ, ಪ್ರಕೃತಿರಹಿತನಾದ ಪುರುಷನೂ, ಜಡವಾಗಿರುವಂತೆ, ಹೆಂಡತಿಯಿಲ್ಲದ ಮನುಜನು ಜಡನಾಗಿರುವನು.

೧೮–೨೦. ಯಜ್ಞಪುರುಷನು ದಕ್ಷಿಣಾದೇವಿಯಿಲ್ಲದೆ ಹೇಗೆ ಫಲವನ್ನು ಕೊಡಲಾರನೋ, ಸಾಧನಸಾಮಗ್ರಿಗಳಿಲ್ಲದ ಕರ್ಮವು ಹೇಗೆ ಫಲಪ್ರದವಾಗುವುದಿಲ್ಲವೋ, ಅಕ್ಕಸಾಲೆಯು ಚಿನ್ನವಿಲ್ಲದೆ ಹೇಗೆ ತನ್ನ ಕೆಲಸಮಾಡಲಾರನೋ, ಕುಂಬಾರನು ಮಣ್ಣಿಲ್ಲದೆ ಮಡಕೆಯನ್ನು ಹೇಗೆ ಮಾಡಲಾರನೋ, ಅಂತೆಯೇ

ತಥಾ ಗೃಹೀ ನ ಶಕ್ತಶ್ಚ ಸತತಂ ಸರ್ವಕರ್ಮಣಿ ।
ಗೃಹಾಧಿಷ್ಠಾತೃದೇವೀಂ ಚ ಸ್ವಶಕ್ತಿಗೃಹಿಣೀಂ ವಿನಾ ॥ ೨೦ ॥

ಭಾರ್ಯಾಮೂಲಾಶ್ಚ ಪುತ್ರಾಶ್ಚ ಭಾರ್ಯಾ ಮೂಲಾ ಗೃಹಾಸ್ತಥಾ ।
ಭಾರ್ಯಾಮೂಲಂ ಸುಖಂ ಸರ್ವಂ ಗೃಹಸ್ಥಾನಾಂ ಗೃಹೇ ಸದಾ ॥ ೨೧ ॥

ಭಾರ್ಯಾಮೂಲಃ ಸದಾ ಹರ್ಷೋ ಭಾರ್ಯಾಮೂಲಂ ಚ ಮಂಗಲಂ ।
ಭಾರ್ಯಾಮೂಲಂ ಚ ಸಂಸಾರೋ ಭಾರ್ಯಾಮೂಲಂ ಚ ಸೌರಭಂ ॥ ೨೨ ॥

ಯಥಾ ರಥಶ್ಚ ರಥಿನಾಂ ಗೃಹಿಣಾಂ ಚ ತಥಾ ಗೃಹಂ ।
ಸಾರಥಿಸ್ತು ಯಥಾ ತೇಷಾಂ ಗೃಹಿಣಾಂ ಚ ತಥಾ ಪ್ರಿಯಾ ॥ ೨೩ ॥

ಸರ್ವರತ್ನಪ್ರಧಾನಾ ಚ ಸ್ತ್ರೀರತ್ನಂ ದುಷ್ಕುಲಾದಪಿ ।
ಗೃಹೀತಾ ಸಾ ಗೃಹಸ್ಥೇನೈವೇತ್ಯಾಹ ಕಮಲೋದ್ಭವಃ ॥ ೨೪ ॥

---

ಮನೆಗೆ ಅಧಿಷ್ಠಾತೃದೇವತೆಯೂ, ತನ್ನ ಶಕ್ತಿಸ್ವರೂಪಿಣಿಯೂ ಆದ ಪತ್ನಿಯಿಲ್ಲದ ಗೃಹಸ್ಥನು ಎಲ್ಲ ಕರ್ಮಗಳಲ್ಲೂ ಅಶಕ್ತನಾಗುವನು.

೨೧. ಸಂಸಾರಿಗಳ ಮನೆಯಲ್ಲಿ ನಡೆಯುವ ಸತ್ಕ್ರಿಯೆಗಳೂ, ಅನುಭವಿಸುವ ಸುಖಸಂಪತ್ತುಗಳೂ, ಭಾರ್ಯಾಮೂಲಕವಾದುವೇ.

೨೨. ಸಂತೋಷವೂ, ಮಂಗಳಪರಂಪರೆಯೂ, ಅಭಿವೃದ್ಧಿಯೂ, ಅಷ್ಟೇಕೆ ಸಂಸಾರದ ಸಕಲ ಸೌಭಾಗ್ಯವೂ ಹೆಂಡತಿಯಿಂದುಂಟಾಗುವುದು.

೨೩. ರಥದಲ್ಲಿ ಸಂಚರಿಸುವವರಿಗೆ ರಥವು ಹೇಗೋ ಹಾಗೆ ಗೃಹಸ್ಥರಿಗೆ ಮನೆಯು ಇರುವುದು. ರಥಿಕರಿಗೆ ಸಾರಥಿಯಿರುವಂತೆ ಗೃಹಸ್ಥರಿಗೆ ಹೆಂಡತಿಯಿರುವಳು.

೨೪ ಸ್ತ್ರೀರತ್ನವೆಂಬುದು ಎಲ್ಲ ರತ್ನಗಳಿಗೂ ಶ್ರೇಷ್ಠವಾದುದು. ಆದುದರಿಂದಲೇ ಗೃಹಸ್ಥನಾಗಬಯಸುವ ಪುರುಷನು ದುಷ್ಕುಲದಲ್ಲಿ ಹುಟ್ಟಿದ ಸ್ತ್ರೀಯನ್ನಾದರೂ ಪರಿಗ್ರಹಿಸಬೇಕೆಂದು ಬ್ರಹ್ಮನು ಹೇಳಿರುವನು.

ಯಥಾ ಜಲಂ ವಿನಾ ಪದ್ಮಂ ಪದ್ಮಂ ಶೋಭಾಂ ವಿನಾ ಯಥಾ ।
ತಥೈವ ಪುಂಸಾಂ ಸ್ವಗೃಹಂ ಗೃಹಿಣಾಂ ಗೃಹಿಣೀಂ ವಿನಾ ॥ ೨೫ ॥

ಇತ್ಯೇವಮುಕ್ತ್ವಾ ಸ ಗುರುಃ ಪ್ರವಿವೇಶ ಗೃಹಂ ಮುಹುಃ ।
ಗೃಹಾದ್ಬಹಿರ್ನಿಸ್ಸಸಾರ ಭೂಯೋ ಭೂಯಃ ಶುಚಾನ್ವಿತಃ ॥ ೨೬ ॥

ಮುಹುರ್ಮುಹುಶ್ಚ ಮೂರ್ಛಾಂ ಚ ಚೇತನಾಂ ಸಮವಾಪ ಸಃ ।
ಭೂಯೋ ಭೂಯೋ ರುರೋದೋಚ್ಚೈಃ ಸ್ಮಾರಂ ಸ್ಮಾರಂ ಪ್ರಿಯಾಗುಣಾನ್ ॥

ಅಥಾಂತರೇ ಮಹಾಜ್ಞಾನೀ ಜ್ಞಾನಿಭಿಶ್ಚ ಪ್ರಬೋಧಿತಃ ।
ಸಚ್ಛಿಷ್ಯೈರ್ಮುನಿಭಿಶ್ಚಾನ್ಯೈಃ ಪುರಂದರಗೃಹಂ ಯಯೌ ॥ ೨೮ ॥

ಸ ಗುರುಃ ಪೂಜಿತಸ್ತೇನ ಚಾತಿಥ್ಯೇನ ಮರುತ್ವತಾ ।
ತಮುವಾಚ ಸ್ವವೃತ್ತಾಂತಂ ಹೃದಿ ಶಲ್ಯಮಿವಾಪ್ರಿಯಂ ॥ ೨೯ ॥

---

೨೫. ತಾವರೆಯಿಲ್ಲದ ನೀರಿನಂತೆಯೂ, ಕಾಂತಿಯಿಲ್ಲದ ತಾವರೆಯಂತೆಯೂ ಗೃಹಿಣಿಯರಿಲ್ಲದ ಗೃಹಸ್ಥರ ಮನೆಯು ಗೆಲುವಿರುವುದಿಲ್ಲ.

೨೬. ಈ ರೀತಿಯಾಗಿ ನುಡಿದು, ಬೃಹಸ್ಪತಿಯು ವ್ಯಾಕುಲಗೊಂಡ ಮನಸ್ಸಿನಿಂದ ಮನೆಯ ಒಳಕ್ಕೂ ಹೊರಕ್ಕೂ ಮತ್ತೆ ಮತ್ತೆ ತಿರುಗಾಡಿದನು.

೨೭. ಕ್ಷಣಕ್ಷಣಕ್ಕೂ ಮೂರ್ಛೆಗೊಂಡು ಚೇತನವನ್ನು ಪಡೆಯುತ್ತಿದ್ದನು. ತನ್ನ ಪತ್ನಿಯ ಗುಣಗಳನ್ನು ನೆನೆಸಿಕೊಂಡು ಪುನಃ ಪುನಃ ಗಟ್ಟಿಯಾಗಿ ಅತ್ತನು.

೨೮. ಅನಂತರ ಜ್ಞಾನಿಶ್ರೇಷ್ಠನಾದ ಆ ಬೃಹಸ್ಪತಿಯು ತನಗಿಂತಲೂ ಬಲ್ಲವರಿಂದ ಪ್ರೇರಣೆಹೊಂದಿ, ಅನೇಕ ಶಿಷ್ಯರು ಮತ್ತು ಮುನಿಗಳೊಡಗೂಡಿ ದೇವೇಂದ್ರನ ಮನೆಗೆ ಹೋದನು.

೨೯. ಅಲ್ಲಿ ದೇವೇಂದ್ರನ ಪೂಜೆಯನ್ನೂ ಆತಿಥ್ಯವನ್ನೂ ಕೈಗೊಂಡು, ಆತನನ್ನು ಕುರಿತು, ತನ್ನ ಮನಸ್ಸಿಗೆ ಮುಳ್ಳಿನಂತೆ ಚುಚ್ಚುತ್ತಿದ್ದ ಪತ್ನೀವಿರಹದ ಸಮಾಚಾರವನ್ನು ತಿಳಿಸಿದನು.

ಬೃಹಸ್ಪತಿವಚಃ ಶ್ರುತ್ವಾ ರಕ್ತಪಂಕಜಲೋಚನಃ ।
ತಮುವಾಚ ಮಹೇಂದ್ರಶ್ಚ ಕೋಪಪ್ರಸ್ಫುರಿತಾಧರಃ ॥ ೩೦ ॥

॥ ಮಹೇಂದ್ರ ಉವಾಚ ॥

ದೂತಾನಾಂ ವೈ ಸಹಸ್ರಂ ಚ ಚಾರಕರ್ಮಣಿ ಗಚ್ಛತು ।
ಅತೀವ ನಿಪುಣಂ ದಕ್ಷಂ ತತ್ವಪ್ರಾಪ್ತಿನಿಮಿತ್ತಕಂ ॥ ೩೧ ॥

ಯತ್ರಾಸ್ತಿ ಪಾತಕೀ ಚಂದ್ರೋ ಮನ್ಮಾತ್ರಾ ತಾರಯಾ ಸಹ ।
ಗಚ್ಛಾಮಿ ತತ್ರ ಸನ್ನದ್ಧಃ ಸರ್ವೈರ್ದೇವಗಣೈಃ ಸಹ ॥ ೩೨ ॥

ತ್ಯಜ ಚಿಂತಾಂ ಮಹಾಭಾಗ ಸರ್ವಂ ಭದ್ರಂ ಭವಿಷ್ಯತಿ ।
ಭದ್ರಬೀಜಂ ದುರ್ಗಮಿದಂ ಕಸ್ಯ ಸಂಪದ್ವಿಪದ್ವಿನಾ ॥ ೩೩ ॥

---

೩೦. ಬೃಹಸ್ಪತಿಯ ಮಾತನ್ನು ಕೇಳಿ ಮಹೇಂದ್ರನು ಕೆಂದಾವರೆಯಂತಿರುವ ಕಣ್ಣುಗಳನ್ನು ಕೋಪದಿಂದ ಮತ್ತೂ ಕೆಂಪಗೆಮಾಡಿಕೊಂಡು, ಕೆಳತುಟಿಯನ್ನು ನಡುಗಿಸುತ್ತ ಇಂತೆಂದನು.

೩೧. ಮಹೇಂದ್ರ :—ಚಂದ್ರ ಮತ್ತು ತಾರೆಯರು ಎಲ್ಲಿರುವರೆಂಬ ಸತ್ಯಾಂಶವನ್ನು ತಿಳಿಯುವುದಕ್ಕಾಗಿ ಬಹಳ ನಿಪುಣರೂ ಸಮರ್ಥರೂ ಆದ ಸಾವಿರಾರು ದೂತರು ಹುಡುಕುವ ಕಾರ್ಯದಲ್ಲಿ ತೊಡಗಲಿ.

೩೨. ನಾನೂ ಎಲ್ಲ ದೇವತೆಗಳೊಡಗೂಡಿ, ಆ ಪಾಪಿ ಚಂದ್ರನು ನನ್ನ ಮಾತೃಸದೃಶಳಾದ ತಾರೆಯೊಡನೆ ಎಲ್ಲಿರುವನೆಂಬುದನ್ನು ತಿಳಿಯಲು ಹೋಗುವೆನು.

೩೩. ಆದುದರಿಂದ ಎಲೈ ಮಹಾಜ್ಞಾನಿಯಾದ ಬೃಹಸ್ಪತಿಯೇ ಯೋಚನೆಯನ್ನು ಬಿಡು. ಎಲ್ಲವೂ ಅನುಕೂಲವಾಗುತ್ತದೆ. ಈ ಕಷ್ಟವು ಮುಂದಿನ ಮಂಗಳಕ್ಕೆ ಕಾರಣವಾಗಿದೆ. ಏಕೆಂದರೆ ಕಷ್ಟಬಂದ ಹೊರತು ಯಾರಿಗೂ ಸುಖ ದೊರೆಯುವುದಿಲ್ಲ.

ಇತ್ಯುಕ್ತ್ವಾ ಚ ಶುನಾಸೀರೋ ದೂತಾನಾಂ ಚ ಸಹಸ್ರಕಂ ।
ತೂರ್ಣಂ ಪ್ರಸ್ಥಾಪಯಾಮಾಸ ತತ್ಕರ್ಮನಿಪುಣಂ ಮುನೇ ॥ ೩೪ ॥

ತೇ ದೂತಾ ವೈ ವರ್ಷಶತಂ ಯಯುರ್ನಿರ್ಜನಮೇವ ಚ ।
ಸುದುರ್ಲಂಘ್ಯಂ ಚ ವಿಶ್ವೇಷು ಭ್ರಮಿತ್ವಾ ಶಕ್ರಮಾಯಯುಃ ॥ ೩೫ ॥

ಚಂದ್ರಂ ಚ ಶುಕ್ರಭವನೇ ತಂ ಪ್ರಸನ್ನಂ ಚ ವಿಜ್ವರಂ ।
ದೃಷ್ಟ್ವಾ ಸತಾರಕಂ ಭೀತಂ ಕಥಯಾಮಾಸುರೀಶ್ವರಂ ॥ ೩೬ ॥

ಇತಿ ಶ್ರುತ್ವಾ ಶುನಾಸೀರೋ ನತವಕ್ತ್ರೋ ಬೃಹಸ್ಪತಿಂ ।
ಉವಾಚ ಶೋಕಸಂತಪ್ತೋ ಹೃದಯೇನ ವಿದೂಯತಾ ॥ ೩೭ ॥

---

೩೪ ದೇವೇಂದ್ರನು ಇಂತು ನುಡಿದು ಹುಡುಕುವ ಕಾರ್ಯದಲ್ಲಿ ಬಹಳ ನಿಪುಣರಾದ ಸಾವಿರಾರು ದೂತರನ್ನು ಜಾಗ್ರತೆ ಕಳುಹಿಸಿದನು.

೩೫. ಆ ದೂತರೆಲ್ಲರೂ, ನೂರು ವರ್ಷಗಳಕಾಲ ನಿರ್ಜನ ಪ್ರದೇಶದಲ್ಲೆಲ್ಲಾ ಬಹಳವಾಗಿ ಹುಡುಕಿ, ಪ್ರಪಂಚದಲ್ಲಿ ದುರ್ಗಮವಾದ ಸ್ಥಳಗಳಲ್ಲೆಲ್ಲಾ ಅಲೆದಾಡಿ ಚಂದ್ರ ತಾರೆಯರನ್ನು ಕಂಡು ಪುನಃ ಇಂದ್ರನ ಹತ್ತಿರಕ್ಕೆ ಬಂದರು.

೩೬. ಚಂದ್ರನು ತಾರಾದೇವಿಯೊಡನೆ. ಪಾತಾಳಲೋಕದಲ್ಲಿ ರಾಕ್ಷಸಗುರುವಾದ ಶುಕ್ರನನ್ನು ಶರಣುಹೊಂದಿ ಪಾಪರಹಿತನೂ, ನಿರ್ಭೀತನೂ ಆಗಿರುವುದನ್ನು ತಮ್ಮ ಒಡೆಯನಾದ ಇಂದ್ರನಿಗೆ ತಿಳಿಸಿದರು.

೩೭ ಈ ಮಾತನ್ನು ಕೇಳಿ ದೇವೇಂದ್ರನು ಬೃಹಸ್ಪತಿಯ ಮುಂದೆ ತಲೆಬಾಗಿ ಮನಸ್ಸಿನಲ್ಲಿಯೇ ಸಂಕಟಪಡುತ್ತಾ ಗದ್ಗದಕಂಠದಿಂದ ಕೆಲವು ಮಾತುಗಳನ್ನು ಆಡಿದನು.

॥ ಮಹೇಂದ್ರ ಉವಾಚ ॥

ಶೃಣು ನಾಥ ಪ್ರವಕ್ಷ್ಯಾಮಿ ಪರಿಣಾಮಸುಖಾವಹಂ ।
ಭಯಂ ತ್ಯಜ ಮಹಾಭಾಗ ಸರ್ವಂ ಭದ್ರಂ ಭವಿಷ್ಯತಿ ॥ ೩೮ ॥

ತ್ವಯಾ ನ ಹಿ ಜಿತಃ ಶುಕ್ರೋ ನ ಮಯಾದಿತಿನಂದನಃ ।
ಏತದಾಲೋಚ್ಯ ಚಂದ್ರಶ್ಚ ಜಗಾಮ ಶರಣಂ ಕವಿಂ ॥ ೩೯ ॥

ಗಚ್ಛ ಶೀಘ್ರಂ ಬ್ರಹ್ಮಲೋಕಮಸ್ಮಾಭಿಃ ಸಾರ್ಧಮೇವ ಚ ।
ಬ್ರಹ್ಮಣಾ ಸಹ ಯಾಸ್ಯಾಮಃ ಕೈಲಾಸಂ ಶಂಕರಾಲಯಂ ॥ ೪೦ ॥

ಇತ್ಯುಕ್ತ್ವಾ ತು ಮಹೇಂದ್ರಶ್ಚ ಸಂತಪ್ತೋ ಗುರುಣಾ ಸಹ ।
ಜಗಾಮ ಬ್ರಹ್ಮಲೋಕಂ ಚ ಸುಖದೃಶ್ಯಂ ಮನೋಹರಂ ॥ ೪೧ ॥

---

೩೮. ಮಹೇಂದ್ರ :—ಎಲೈ ಗುರುದೇವನೇ, ಪರಿಣಾಮ ಸುಖಕಾರಿಯಾದ ಕೆಲವು ಮಾತುಗಳನ್ನು ಹೇಳುವೆನು ಕೇಳು ನಿನ್ನ ಮನಸ್ಸಿನ ಭಯವನ್ನು ದೂರ ಮಾಡು. ಎಲ್ಲವೂ ಅನುಕೂಲವಾಗುವುದು.

೩೯. ದಿತಿಯ ಮಗನಾದ ಶುಕ್ರಾಚಾರ್ಯನನ್ನು ನೀನಾಗಲೀ, ನಾನಾಗಲೀ ಗೆಲ್ಲಲಾಗುವುದಿಲ್ಲ ಚಂದ್ರನು ಇದನ್ನು ಯೋಚಿಸಿಯೇ ಶುಕ್ರಾಚಾರ್ಯನ ಶರಣು ಹೊಕ್ಕನು.

೪೦. ಆದುದರಿಂದ ನಮ್ಮೆಲ್ಲರೊಡನೆ ಜಾಗ್ರತೆಯಾಗಿ ಬ್ರಹ್ಮಲೋಕಕ್ಕೆ ನೀನೂ ಬಂದರೆ, ಬ್ರಹ್ಮನೊಡನೆ ಎಲ್ಲರೂ ಕೈಲಾಸದಲ್ಲಿರುವ ಶಂಕರನ ಸಮೀಪಕ್ಕೆ ಹೋಗೋಣ.

೪೧. ದುಃಖಿತನಾದ ಮಹೇಂದ್ರನು ಇಂತು ನುಡಿದು, ಬೃಹಸ್ಪತಿಯೊಡನೆ ಅತ್ಯಂತ ಮನೋಹರವೂ, ರೋಗರಹಿತವೂ ಆದ ಬ್ರಹ್ಮಲೋಕಕ್ಕೆ ಹೋದನು.

ತತ್ರ ದೃಷ್ಟ್ವಾ ಚ ಬ್ರಹ್ಮಾಣಂ ನನಾಮ ಗುರುಣಾ ಸಹ ।
ಪ್ರೋವಾಚ ಸರ್ವವೃತ್ತಾಂತಂ ದೇವಾನಾಮೀಶ್ವರಂ ಪರಂ ॥ ೪೨ ॥

ಮಹೇಂದ್ರವಚನಂ ಶ್ರುತ್ವಾ ಹಸಿತ್ವಾ ಕಮಲೋದ್ಭವಃ ।
ಹಿತಂ ತಥ್ಯಂ ನೀತಿಸಾರಮುವಾಚ ವಿನಯಾನ್ವಿತಃ ॥ ೪೩ ॥

॥ ಬ್ರಹ್ಮೋವಾಚ ॥

ಯೋ ದದಾತಿ ಪರಸ್ಮೈ ಚ ದುಃಖಮೇವ ಚ ಸರ್ವತಃ ।
ತಸ್ಮೈ ದದಾತಿ ದುಃಖಂ ಚ ಶಾಸ್ತಾ ಕೃಷ್ಣಃ ಸನಾತನಃ ॥ ೪೪ ॥

ಅಹಂ ಸ್ರಷ್ಟಾ ಚ ಸೃಷ್ಟೇಶ್ಚ ಪಾತಾ ವಿಷ್ಣುಃ ಸನಾತನಃ ।
ಯಥಾ ರುದ್ರಶ್ಚ ಸಂಹರ್ತಾ ದದಾತಿ ಚ ಶಿವಂ ಶಿವಃ ॥ ೪೫ ॥

ನಿರಂತರಂ ಸರ್ವಸಾಕ್ಷೀ ಧರ್ಮೋ ವೈ ಸರ್ವಕಾರಣಂ ।
ಸರ್ವೇ ದೇವಾ ವಿಷಯಿಣಃ ಕೃಷ್ಣಾಜ್ಞಾಪರಿಪಾಲಕಾಃ ॥ ೪೬ ॥

---

೪೨. ಅಲ್ಲಿ ಬ್ರಹ್ಮನನ್ನು ನೋಡಿ ಬೃಹಸ್ಪತಿಯೊಡನೆ ಅವನಿಗೆ ನಮಸ್ಕರಿಸಿ. ದೇವತೆಗಳಿಗೆಲ್ಲ ಒಡೆಯನಾದ ಅವನಿಗೆ ಸಮಾಚಾರವನ್ನೆಲ್ಲಾ ತಿಳಿಸಿದನು.

೪೩. ಮಹೇಂದ್ರನ ಮಾತನ್ನು ಕೇಳಿದ ಕಮಲಾಸನನು, ಹಿತವೂ, ಸತ್ಯವೂ, ನೀತಿಬೋಧಕವೂ ಆದ ಕೆಲವು ನಯನುಡಿಗಳನ್ನು ಹೇಳಿದನು.

೪೪. ಬ್ರಹ್ಮ:—ಯಾರು ಮತ್ತೊಬ್ಬರಿಗೆ ಯಾವಾಗಲೂ ದುಃಖವನ್ನೇ ಕೊಡುತ್ತಿರುವರೋ ಅವರಿಗೆ ಅನಾದಿಯೂ, ಸರ್ವರಕ್ಷಕನೂ ಆದ ಶ್ರೀಕೃಷ್ಣನೂ ಕೂಡ ದುಃಖವನ್ನೊದಗಿಸುವನು.

೪೫–೪೬. ನಾನು ಜಗತ್ತನ್ನೆಲ್ಲ ಸೃಷ್ಟಿಮಾಡುತ್ತಿರುವುದೂ, ವಿಷ್ಣುವು ರಕ್ಷಿಸುತ್ತಿರುವುದೂ, ಕಾಲಾಗ್ನಿರುದ್ರನು ಸಂಹರಿಸುತ್ತಿರುವುದೂ, ಶಿವನು ಜಗತ್ತಿಗೆಲ್ಲ ಮಂಗಳಕರನಾಗಿರುವುದೂ, ಯಾವಾಗಲೂ ಧರ್ಮದೇವನು ಸರ್ವಕರ್ಮಗಳಿಗೂ ಸಾಕ್ಷಿಯಾಗಿರುವುದೂ ಮತ್ತು ಎಲ್ಲ ದೇವತೆಗಳೂ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿರುವುದೂ, ಶ್ರೀಕೃಷ್ಣಪರಮಾತ್ಮನ ಆಜ್ಞೆಯನ್ನು ಪಾಲಿಸುವುದಕ್ಕಾಗಿಯೇ.

ಬೃಹಸ್ಪತಿರುತಥ್ಯಶ್ಚ ಸಂವರ್ತಶ್ಚ ಜಿತೇಂದ್ರಿಯಃ ।
ತ್ರಯಶ್ಚಾಂಗಿರಸಃ ಪುತ್ರಾ ವೇದವೇದಾಂಗಪಾರಗಾಃ ॥ ೪೭ ॥

ಸಂವರ್ತಾಯ ಕನಿಷ್ಠಾಯ ನ ಚ ಕಿಂಚಿದ್ದದೌ ಗುರುಃ ।
ಸ ಬಭೂವ ತಪಸ್ವೀ ಚ ಕೃಷ್ಣಂ ಧ್ಯಾಯತಿ ಚೇಶ್ವರಂ ॥ ೪೮ ॥

ಮಧ್ಯಮಸ್ಯೋತಥ್ಯಕಸ್ಯ ಸತೀಂ ಭಾರ್ಯಾಂ ಚ ಗುರ್ವಿಣೀಂ ।
ಜಹಾರ ಕಾಮತಸ್ತಾಂ ಚ ಭ್ರಾತೃಜಾಯಾಮಕಾಮುಕೀಂ ॥ ೪೯ ॥

ಯೋ ಹರೇದ್ಭ್ರಾತೃಜಾಯಾಂ ಚ ಕಾಮೀ ಕಾಮಾದಕಾಮುಕೀಂ ।
ಬ್ರಹ್ಮಹತ್ಯಾಸಹಸ್ರಂ ಚ ಲಭತೇ ನಾತ್ರ ಸಂಶಯಃ ॥ ೫೦ ॥

---

೪೭. ಅಂಗಿರಸ ಪ್ರಜಾಪತಿಗೆ ಬೃಹಸ್ಪತಿ, ಉತಥ್ಯ ಮತ್ತು ಜಿತೇಂದ್ರಿಯನಾದ ಸಂವರ್ತ ಈ ಮೂವರೂ ಮಕ್ಕಳಾಗಿ ಜನಿಸಿ ವೇದವೇದಾಂಗಪಾರಂಗತರೆನಿಸಿಕೊಂಡಿದ್ದಾರೆ.

೪೮. ಇವರಲ್ಲಿ ಹಿರಿಯವನಾದ ಬೃಹಸ್ಪತಿಯು ಕೊನೆಯವನಾದ ಸಂವರ್ತನಿಗೆ ಯಾವ ಆಸ್ತಿಯನ್ನೂ ಕೊಡಲಿಲ್ಲ. ಆ ಸಂವರ್ತನು ತಪಸ್ವಿಯಾಗಿ ಶ್ರೀಕೃಷ್ಣ ಪರಮಾತ್ಮನನ್ನು ಸರ್ವದಾ ಧ್ಯಾನಿಸುತ್ತಿರುವನು.

೪೯. ಎರಡನೆಯವನಾದ ಆ ಉತಥ್ಯನ ಧರ್ಮಪತ್ನಿಯೂ, ಗರ್ಭಿಣಿಯೂ, ಕಾಮರಹಿತಳೂ ಆದ ತನ್ನ ನಾದಿನಿಯನ್ನು ಬೃಹಸ್ಪತಿಯು ಕಾಮಪರವಶನಾಗಿ ಅಪಹರಿಸಿದನು.

೫೦. ಯಾರು ಕಾಮುಕರಾಗಿ ಕಾಮರಹಿತಳಾದ ಸಹೋದರ ಪತ್ನಿಯನ್ನು ಅಪಹರಿಸುವರೋ ಅವರಿಗೆ ಸಾವಿರ ಬ್ರಹ್ಮಹತ್ಯಾದೋಷವು ನಿಜವಾಗಿಯೂ ಸಂಘಟಿಸುವುದು.

**ಸ ಯಾತಿ ಕುಂಭೀಪಾಕಂ ಚ ಯಾವಚ್ಚಂದ್ರದಿವಾಕರಂ ।**
**ಭ್ರಾತೃಜಾಯಾಪಹಾರೀ ಚ ಮಾತೃಗಾಮೀ ಭವೇನ್ನರಃ ॥ ೫೧ ॥**

**ತಸ್ಮಾದುತ್ತೀರ್ಯ ಪಾಪೀ ಚ ವಿಷ್ಠಾಯಾಂ ಜಾಯತೇ ಕೃಮಿಃ ।**
**ವರ್ಷಕೋಟಿಸಹಸ್ರಾಣಿ ತತ್ರ ಸ್ಥಿತ್ವಾ ಚ ಪಾತಕೀ ॥ ೫೨ ॥**

**ತತೋ ಭವೇನ್ಮಹಾಪಾಪೀ ವರ್ಷಕೋಟಿಸಹಸ್ರಕಂ ।**
**ಪುಂಶ್ಚಲೀಯೋನಿಗರ್ತೇ ಚ ಕೃಮಿಶ್ಚೈವ ಪುರಂದರ ॥ ೫೩ ॥**

**ಗೃಧ್ರಕೋಟಿಸಹಸ್ರಾಣಿ ಶತಜನ್ಮಾನಿ ಕುಕ್ಕುರಃ ।**
**ಭ್ರಾತೃಜಾಯಾಪಹರಣಾಚ್ಛತಜನ್ಮಾನಿ ಸೂಕರಃ ॥ ೫೪ ॥**

**ದದಾತಿ ಯೋ ನ ದಾಯಂ ಚ ಬಲಿಷ್ಠೋ ದುರ್ಬಲಾಯ ಚ ।**
**ಸ ಯಾತಿ ಕುಂಭೀಪಾಕಂ ಚ ಯಾವಚ್ಚಂದ್ರದಿವಾಕರಂ ॥ ೫೫ ॥**

---

೫೧. ಅಲ್ಲದೆ ಚಂದ್ರಸೂರ್ಯರಿರುವವರೆಗೆ ಅವನು ಕುಂಭೀಪಾಕವೆಂಬ ನರಕಕ್ಕೆ ಹೋಗುವನು. ಸಹೋದರರನ ಪತ್ನಿಯನ್ನು ಅಪಹರಿಸಿದವನು, ಹೆತ್ತ ತಾಯಿಯೊಡನೆ ಸಂಗಮಮಾಡಿದ ಮಹಾಪಾಪಕ್ಕೆ ಗುರಿಯಾಗುವನು.

೫೨–೫೩. ಅನಂತರ ಆ ಪಾಪಿಯು ಕುಂಭೀಪಾಕದಿಂದ ಪಾರಾಗಿ ಮಲಕ್ರಿಮಿಯಾಗಿ ಜನಿಸುವನು. ಒಂದು ಕೋಟಿಸಾವಿರವರ್ಷ ಮಲಕ್ರಿಮಿಯಾಗಿದ್ದು ಮುಂದೆ ಆ ಮಹಾಪಾಪಿಯು ವೇಶ್ಯೆಯರ ಯೋನಿಪ್ರದೇಶವೆಂಬ ಕೂಪದಲ್ಲಿ ಇನ್ನೂ ಕೋಟಿ ಸಾವಿರ ವರ್ಷಗಳು ಕ್ರಿಮಿಯಾಗಿ ಹುಟ್ಟುವನು.

೫೪. ಕೋಟಿಸಾವಿರ ವರ್ಷಗಳು ಹದ್ದಾಗಿಯೂ, ನೂರು ಜನ್ಮಗಳಲ್ಲಿ ನಾಯಿಯಾಗಿಯೂ, ನೂರು ಜನ್ಮಗಳಲ್ಲಿ ಹಂದಿಯಾಗಿಯೂ ಹುಟ್ಟಿ, ಸಹೋದರ ಪತ್ನಿಯ ಅಪಹರಣ ದೋಷದಿಂದ ಪಾರಾಗುವನು.

೫೫. ಯಾವನಾದರೂ ಬಲಶಾಲಿಯಾದ ಮನುಷ್ಯನು, ಬಲಹೀನನಾದ ತನ್ನ ಸಹೋದರನಿಗೆ ಆಸ್ತಿಯ ಭಾಗವನ್ನು ಕೊಡದಿದ್ದರೆ ಅವನು ಚಂದ್ರಸೂರ್ಯರಿರುವವರೆಗೆ ಕುಂಭೀಪಾಕಕ್ಕೆ ಹೋಗಿ ಬೀಳುವನು.

ನಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ॥ ೫೬ ॥

ಜಗದ್ಗುರೋಃ ಶಿವಸ್ಯಾಪಿ ಗುರುಪುತ್ರೋ ಬೃಹಸ್ಪತಿಃ ।
ಜ್ಞಾತಂ ಕರೋತು ವೃತ್ತಾಂತಮೀಶ್ವರಂ ಬಲಿನಾಂ ವರಂ ॥ ೫೭ ॥

ಸರ್ವೇ ಸಮೂಹಾ ದೇವಾನಾಂ ಸನ್ನದ್ಧಾಶ್ಚ ಸವಾಹನಾಃ ।
ಮಧ್ಯಸ್ಥಾ ಮುನಯಶ್ಚೈವ ಸಂತು ವೈ ನರ್ಮದಾತಟೇ ॥ ೫೮ ॥

ಪಶ್ಚಾದಹಂ ಚ ಯಾಸ್ಯಾಮಿ ಪುಣ್ಯಂ ತನ್ನರ್ಮದಾತಟಂ ।
ಗುರುಸ್ತದ್ಗುರುಪುತ್ರೋಽಪಿ ಶೀಘ್ರಂ ಯಾತು ಶಿವಾಲಯಂ ॥ ೫೯ ॥

॥ ಮಹೇಂದ್ರ ಉವಾಚ ॥

ಕಥಂ ವಾ ವೇದಕರ್ತುಶ್ಚ ಸಿದ್ಧಾನಾಂ ಯೋಗಿನಾಂ ಗುರೋಃ ।
ಮೃತ್ಯುಂಜಯಸ್ಯ ಶಂಭೋಶ್ಚ ಗುರುಪುತ್ರೋ ಬೃಹಸ್ಪತಿಃ ॥ ೬೦ ॥

---

೫೬. ತಾನು ಮಾಡಿದ ಪುಣ್ಯ ಪಾಪಕರ್ಮಗಳ ಫಲವನ್ನು ತಾನೇ ಅನುಭವಿಸಿದ ಹೊರತು ಆ ಕರ್ಮಗಳು ಕ್ಷೀಣವಾಗುವುದಿಲ್ಲ. ಆದುದರಿಂದ ತಾನು ಮಾಡಿದ ಶುಭಾಶುಭ ಕರ್ಮಗಳ ಫಲವನ್ನು ತಾನೇ ಅನುಭವಿಸಿಯೇ ತೀರಬೇಕು.

೫೭. ಗುರುಪುತ್ರನಾದ ಬೃಹಸ್ಪತಿಯು, ಜಗದ್ಗುರುವೂ, ಬಲಿಷ್ಠನೂ ಆದ ಪರಮೇಶ್ವರನಿಗೂ ಈ ಸಮಾಚಾರವನ್ನು ವಿಜ್ಞಾಪಿಸಿಕೊಳ್ಳಲಿ.

೫೮. ಸಕಲ ದೇವತೆಗಳೂ ಮತ್ತು ಮುನಿಗಳೂ, ವಾಹನಾದಿ ಪರಿಕರಗಳಿಂದ ಸನ್ನದ್ಧರಾಗಿ ನರ್ಮದಾನದಿಯ ದಡದಲ್ಲಿ ನನ್ನನ್ನು ನಿರೀಕ್ಷಣೆಮಾಡುತ್ತಿರಲಿ.

೫೯. ಅನಂತರ ನಾನೂ ಕೂಡ ಪುಣ್ಯಕರವಾದ ನರ್ಮದಾನದಿಯ ತೀರಕ್ಕೆ ಬರುವೆನು. ಶಿವನ ಗುರುಪುತ್ರನಾದ ಬೃಹಸ್ಪತಿಯೂ ಕೂಡ ಜಾಗ್ರತೆಯಾಗಿ ಶಿವನ ಮಂದಿರಕ್ಕೆ ಹೋಗಲಿ.

೬೦. ಮಹೇಂದ್ರ:—ನಿಗಮಾತೀತನೂ, ಸಿದ್ಧರಿಗೂ ಮತ್ತು ಯೋಗಿಗಳಿಗೂ ಗುರುವೂ, ಮೃತ್ಯುಂಜಯನೂ ಆದ ಶಂಕರನಿಗೆ ಬೃಹಸ್ಪತಿಯು ಹೇಗೆ ಗುರುಪುತ್ರನಾಗಬೇಕು?

ಅಂಗಿರಾಸ್ತವ ಪುತ್ರಶ್ಚ ತತ್ಪುತ್ರಶ್ಚ ಬೃಹಸ್ಪತಿಃ ।
ತ್ವತ್ತೋ ಜ್ಞಾನೀ ಮಹಾದೇವಃ ಕಥಂ ಶಿಷ್ಯೋ ಗುರೋಃ ಸುತಃ ॥ ೬೧ ॥

॥ ಬ್ರಹ್ಮೋವಾಚ ॥

ಕಥೇಯಮತಿಗುಪ್ತಾ ಚ ಪುರಾಣೇಷು ಪುರಂದರ ।
ಇಮಾಂ ಪುರಾ ಪ್ರವೃತ್ತಿಂ ಚ ಕಥಯಾಮಿ ನಿಶಾಮಯ ॥ ೬೨ ॥

ಮೃತವತ್ಸಾ ಕರ್ಮದೋಷಾದ್ಭಾರ್ಯಾ ಚಾಂಗಿರಸಃ ಪುರಾ ।
ವ್ರತಂ ಚಕಾರ ಸಾ ಚೈವಂ ಕೃಷ್ಣಸ್ಯ ಪರಮಾತ್ಮನಃ ॥ ೬೩ ॥

ವ್ರತಂ ಪುಂಸವನಂ ನಾಮ ವರ್ಷಮೇಕಂ ಚಕಾರ ಸಾ ।
ಸನತ್ಕುಮಾರೋ ಭಗವಾನ್ಕಾರಯಾಮಾಸ ತಾಂ ವ್ರತಂ ॥ ೬೪ ॥

---

೬೧. ಎಲೈ ಬ್ರಹ್ಮದೇವನೇ, ಅಂಗಿರಸ ಪ್ರಜಾಪತಿಯು ನಿನ್ನ ಮಗನು. ಅಂಗಿರಸನ ಮಗನು ಬೃಹಸ್ಪತಿಯು. ಮಹಾದೇವನು ನಿನ್ನ ಅನುಗ್ರಹದಿಂದ ಜ್ಞಾನಿಯಾಗಿರುವನು. ಹೀಗಿರುವಾಗ ಬೃಹಸ್ಪತಿಯ ತಂದೆಗೆ ಶಿವನು ಹೇಗೆ ಶಿಷ್ಯನಾಗುವನು.

೬೨. ಬ್ರಹ್ಮ:—ಎಲೈ ಇಂದ್ರನೇ, ಈ ಕಥೆಯು ಪುರಾಣದಲ್ಲಿ ಬಹಳ ಗೋಪ್ಯವಾಗಿದೆ. ಈ ಪೂರ್ವವೃತ್ತಾಂತವನ್ನು ನಾನು ನಿನಗೆ ಹೇಳುವೆನು, ಅವಧರಿಸು.

೬೩. ಪೂರ್ವದಲ್ಲಿ ಅಂಗಿರಸನ ಪತ್ನಿಯು ಜನ್ಮಾಂತರ ದುಷ್ಕರ್ಮದ ಫಲವಾಗಿ ತನ್ನ ಶಿಶುವನ್ನು ಕಳೆದುಕೊಂಡು ಶ್ರೀಕೃಷ್ಣಪರಮಾತ್ಮನ ಅನುಗ್ರಹಕ್ಕಾಗಿ ವ್ರತನಿಯಮಗಳನ್ನು ಆಚರಿಸಿದಳು.

೬೪. 'ಪುಂಸವನ'ವೆಂಬ ಆ ವ್ರತವನ್ನು ಪೂಜ್ಯನಾದ ಸನತ್ಕುಮಾರನು ಒಂದು ವರ್ಷಕಾಲ ಆಕೆಯಿಂದ ಮಾಡಿಸಿದನು.

**ತದಾಗತ್ಯ ಚ ಗೋಲೋಕಾತ್ಪರಮಾತ್ಮಾ ಕೃಪಾಮಯಃ ।**
**ಸ್ವೇಚ್ಛಾಮಯಂ ಪರಂ ಬ್ರಹ್ಮ ಭಕ್ತಾನುಗ್ರಹವಿಗ್ರಹಃ ॥ ೬೫ ॥**

**ಸುವ್ರತಾಂ ಚ ಸಲಕ್ಷ್ಮೀಕಾಂ ತಾಮುವಾಚ ಕೃಪಾನಿಧಿಃ ।**
**ಪ್ರಣತಾಂ ಸಾಶ್ರುನೇತ್ರಾಂ ಚ ವಿನೀತಾಂ ಚ ತಯಾ ಸ್ತುತಃ ॥ ೬೬ ॥**

**॥ ಶ್ರೀ ಕೃಷ್ಣ ಉವಾಚ ॥**

**ಗೃಹಾಣೇದಂ ವ್ರತಫಲಂ ಮಮ ತೇಜಸ್ಸಮನ್ವಿತಂ ।**
**ಭುಂಕ್ಷ್ವ ಮದ್ವರತಃ ಪುತ್ರಿ ಭವಿಷ್ಯತಿ ಮದಂಶತಃ ॥ ೬೭ ॥**

**ಪತಿರ್ಗುರುಶ್ಚ ದೇವಾನಾಂ ಮಹತಾಂ ಜ್ಞಾನಿನಾಂ ವರಃ ।**
**ಪುತ್ರಸ್ತೇ ಭವಿತಾ ಸಾಧ್ವಿ ಮದ್ವರೇಣ ಬೃಹಸ್ಪತಿಃ ॥ ೬೮ ॥**

---

೬೫. ಆಗ ದಯಾಮಯನೂ, ಸ್ವೇಚ್ಛಾಮಯನೂ ಆದ ಶ್ರೀಕೃಷ್ಣ ಪರಮಾತ್ಮನು ಆಕೆಯ ಅನುಗ್ರಹಕ್ಕಾಗಿ ದಿವ್ಯಸುಂದರ ವಿಗ್ರಹವನ್ನು ಧರಿಸಿ ಅಲ್ಲಿಗೆ ಬಂದನು.

೬೬. ಅಶ್ರುಪೂರಿತಲೋಚನಳಾಗಿ ವಿನಯದಿಂದ ಪರಮಾತ್ಮನನ್ನು ಸ್ತುತಿಸುತ್ತಿದ್ದ ವ್ರತಾಸಕ್ತಳೂ, ಕಾಂತಿಯುತಳೂ ಆದ ಆಕೆಯನ್ನು ಕುರಿತು ದಯಾಮಯನಾದ ಪರಮಾತ್ಮನಿಂತೆಂದನು.

೬೭. ಶ್ರೀಕೃಷ್ಣ :—ಎಲೌ ಮಗಳೇ, ನಿನ್ನ ಭಕ್ತಿಪೂರ್ವಕವಾದ ವ್ರತಕ್ಕೆ ನಾನು ಮೆಚ್ಚಿದೆನು. ಅದರ ಫಲವಾಗಿ ನನ್ನ ಅಂಶದಿಂದಲೂ, ತೇಜಸ್ಸಿನಿಂದಲೂ ಕೂಡಿದ ಒಬ್ಬ ಸತ್ಪುತ್ರನನ್ನು ನಿನಗೆ ಅನುಗ್ರಹಿಸಿರುವೆನು.

೬೮. ಎಲೌ ಪತಿವ್ರತೆಯೇ, ನನ್ನ ವರದಿಂದ ನಿನಗೆ ಜನಿಸುವ ಪುತ್ರನು ದೇವತೆಗಳಿಗೆಲ್ಲ ಗುರುವೂ, ಮಹಾಜ್ಞಾನಿಗಳಲ್ಲಿ ಶ್ರೇಷ್ಠನೂ ಆಗಿ ಬೃಹಸ್ಪತಿಯೆಂಬ ಹೆಸರಿನಿಂದ ವಿಖ್ಯಾತನಾಗುವನು.

ಮದ್ವರೇಣ ಭವೇದ್ಯೋ ಹಿ ಸ ಚ ಮದ್ವರಪುತ್ರಕಃ ।
ತ್ವದ್ಗರ್ಭೇ ಮಮ ಪುತ್ರೋಽಯಂ ಚಿರಂಜೀವೀ ಭವಿಷ್ಯತಿ ॥ ೧೯ ॥

ವರಜೋ ವೀರ್ಯಜಶ್ಚೈವ ಕ್ಷೇತ್ರಜಃ ಪಾಲಕಸ್ತಥಾ ।
ವಿದ್ಯಾಮಂತ್ರಸುತೌ ಚೈವ ಗೃಹೀತಃ ಸಪ್ತಮಃ ಸುತಃ ॥ ೨೦ ॥

ಇತ್ಯುಕ್ತ್ವಾ ರಾಧಿಕಾನಾಥೋ ಸ್ವಲೋಕಂ ಚ ಜಗಾಮ ಸಃ ।
ಶ್ರೀಕೃಷ್ಣ ವರಪುತ್ರೋಽಯಂ ಜ್ಞಾನೀಶ್ವರಗುರುಃ ಸ್ವಯಂ ।
ಮೃತ್ಯುಂಜಯಂ ಮಹಾಜ್ಞಾನಂ ಶಿವಾಯ ಪ್ರದದೌ ಪುರಾ ॥ ೨೧ ॥

ದಿವ್ಯಂ ವರ್ಷತ್ರಿಲಕ್ಷಂ ಚ ತಪಶ್ಚಕ್ರೇ ಹಿಮಾಲಯೇ ।
ಸ್ವಯೋಗಂ ಜ್ಞಾನಮಖಿಲಂ ತೇಜಸ್ಸ್ವಾತ್ಮಸಮಂ ಪರಂ ।
ಸ್ವಶಕ್ತಿಂ ವಿಷ್ಣುಮಾಯಾಂ ಚ ಸ್ವಾಂಶಂ ವೈ ವಾಹನಂ ವೃಷಂ ॥ ೨೨ ॥

---

೧೯. ಯಾರು ನನ್ನ ವರದಿಂದ ಜನಿಸುವನೋ ಆವನು ನನ್ನ ವರಪುತ್ರನೆನಿಸುವನು. ನಿನ್ನ ಗರ್ಭದಲ್ಲಿ ಜನಿಸುವ ನನ್ನ ವರಪುತ್ರನು ದೀರ್ಘಾಯುವಾಗುವನು.

೨೦. ವರದಿಂದ ಹುಟ್ಟಿದವನು, ವೀರ್ಯದಿಂದ ಹುಟ್ಟಿದವನು, ತನ್ನ ಪತ್ನಿಯಲ್ಲಿ ಅನ್ಯರಿಗೆ ಹುಟ್ಟಿದವನು, ತನ್ನ ರಕ್ಷಣೆಗೊಳಗಾದವನು, ತನ್ನಿಂದ ವಿದ್ಯಾಭ್ಯಾಸ ಮಾಡಿದವನು, ಮಂತ್ರೋಪದೇಶವನ್ನು ಸ್ವೀಕರಿಸಿದವನು, ದತ್ತುವಾಗಿ ಸ್ವೀಕರಿಸಲ್ಪಟ್ಟವನು ಎಂದು ಮಕ್ಕಳಲ್ಲಿ ಏಳು ವಿಧವುಂಟು.

೨೧. ಇಂತು ನುಡಿದು ರಾಧಾಪತಿಯಾದ ಶ್ರೀಕೃಷ್ಣನು ತನ್ನ ಲೋಕಕ್ಕೆ ಹಿಂತಿರುಗಿದನು. ಆದುದರಿಂದ ಜ್ಞಾನಿಯಾದ ಬೃಹಸ್ಪತಿಯು ಶ್ರೀಕೃಷ್ಣನ ವರದಿಂದ ಜನಿಸಿದವನು. ಶ್ರೀಕೃಷ್ಣಪರಮಾತ್ಮನು ಶಿವನಿಗೆ ಮೃತ್ಯುಂಜಯಶಕ್ತಿಯನ್ನೂ, ಮಹಾಜ್ಞಾನವನ್ನೂ ಅನುಗ್ರಹಿಸಿ ಶಿವನ ಗುರುವೆನಿಸಿದನು.

೨೨–೨೩ ಶಿವನು ಹಿಮಾಲಯದಲ್ಲಿ ಪರಂಜ್ಯೋತಿಃಸ್ವರೂಪನಾದ ಪರಮಾತ್ಮನನ್ನು ಕುರಿತು ದಿವ್ಯ ಮೂರು ಲಕ್ಷವರ್ಷಗಳ ಕಾಲ ತಪಸ್ಸುಮಾಡಿ ದಿವ್ಯ ತೇಜಸ್ಸನ್ನೂ, ಮಹಾಜ್ಞಾನವನ್ನೂ ಪಡೆದು ಯೋಗಿಶ್ರೇಷ್ಠನೆನಿಸಿದನು ಅಲ್ಲದೆ ವಿಷ್ಣುಮಾಯಾ ಶಕ್ತಿಸ್ವರೂಪಿಣಿಯಾದ ದುರ್ಗಾದೇವಿಯನ್ನೂ, ಪರಮಾತ್ಮನ

ಸ್ವಶೂಲಂ ಚ ಸ್ವಕವಚಂ ಸ್ವಮಂತ್ರಂ ದ್ವಾದಶಾಕ್ಷರಂ ।
ಕೃಪಾಮಯಸ್ಸ ತಸ್ಮೈನ ಶ್ರೀಕೃಷ್ಣಶ್ಚ ಪರಾತ್ಪರಃ ।
ಶಿವಲೋಕೇ ಶಿವಾ ಸಾ ಚ ವಿಷ್ಣುಮಾಯಾ ಶಿವಪ್ರಿಯಾ ॥ ೭೩ ॥

ಶಕ್ತಿರ್ನಾರಾಯಣಸ್ಯೇಯಂ ಸಾವಿರ್ಭೂತಾ ಸನಾತನೀ ।
ತೇಜಸ್ಸು ಸರ್ವದೇವಾನಾಂ ಸಾವಿರ್ಭೂತಾ ಸನಾತನೀ ॥ ೭೪ ॥

ಜಘಾನ ದೈತ್ಯನಿಕರಂ ದೇವೇಭ್ಯಃ ಪ್ರದದೌ ಪದಂ ।
ಕಲ್ಪಾಂತೇ ದಕ್ಷಕನ್ಯಾ ಚ ಸಾ ಮೂಲಪ್ರಕೃತಿಃ ಸತೀ ॥ ೭೫ ॥

ಪಿತೃಯಜ್ಞೇ ತನುಂ ತ್ಯಕ್ತ್ವಾ ಯೋಗಾದ್ವೈ ಸಿದ್ಧಯೋಗಿನೀ ।
ಬಭೂವ ಶೈಲಕನ್ಯಾ ಸಾ ಸಾಧ್ವೀ ವೈ ಭರ್ತೃನಿಂದಯಾ ॥ ೭೬ ॥

---

ಅಂಶದಿಂದ ಅವತರಿಸಿದ ವೃಷಭನನ್ನೂ, ಪಡೆದನು. ತ್ರಿಶೂಲಾದಿ ಆಯುಧಗಳನ್ನೂ ಕವಚ ಸ್ತೋತ್ರ ಮತ್ತು ದ್ವಾದಶಾಕ್ಷರ ಮಂತ್ರವನ್ನೂ ದಯಾಮಯನಾದ ಶ್ರೀಕೃಷ್ಣನ ಅನುಗ್ರಹದಿಂದ ಪಡೆದನು,

೭೪ ವಿಷ್ಣುಮಾಯಾಸ್ವರೂಪಿಣಿಯೂ, ಅನಾದಿಯೂ, ನಾರಾಯಣನ ಶಕ್ತಿ ರೂಪಿಣಿಯೂ, ಶಿವನ ಪ್ರಿಯಳೂ ಆದ ದುರ್ಗಾದೇವಿಯೂ ಕೂಡ ಎಲ್ಲ ದೇವತೆಗಳ ತೇಜಸ್ಸಿನಿಂದಲೂ ಆವಿರ್ಭವಿಸಿದವಳು.

೭೫. ಚಾಮುಂಡೇಶ್ವರಿಯ ಅವತಾರವಮಾಡಿದ ಆ ಮೂಲಪ್ರಕೃತಿಯು ಮಹಿಷಾಸುರ ಮುಂತಾದ ರಾಕ್ಷಸರ ಸಮೂಹವನ್ನು ನಿರ್ಮೂಲಗೊಳಿಸಿ ದೇವತೆ ಗಳಿಗೆ ಉತ್ತಮಪದವಿಯನ್ನು ಕೊಟ್ಟು ಕಲ್ಪದ ಕೊನೆಯ ಭಾಗದಲ್ಲಿ ದಕ್ಷಬ್ರಹ್ಮನ ಪುತ್ರಿಯಾಗಿ ದಾಕ್ಷಾಯಣಿಯೆನಿಸಿಕೊಂಡಳು

೭೬ ಯೋಗಸಿದ್ಧಿಯನ್ನು ಪಡೆದ ಆ ಸಾಧ್ವೀಶಿರೋಮಣಿಯು ತನ್ನ ಪತಿಯ ನಿಂದೆಯನ್ನು ಸಹಿಸಲಾಗದೆ ತನ್ನ ತಂದೆಯಾದ ದಕ್ಷಬ್ರಹ್ಮನು ಮಾಡು ತ್ತಿದ್ದ ಯಾಗದ ಅಗ್ನಿಕುಂಡದಲ್ಲಿ ಶರೀರತ್ಯಾಗಮಾಡಿ, ಹಿಮವಂತನ ಪುತ್ರಿಯಾಗಿ ಜನಿಸಿದಳು.

ಕಾಲೇನ ಕೃಷ್ಣತಪಸಾ ಶಂಕರಂ ಪ್ರಾಪ ಸುಂದರೀ ।
ಶ್ರೀಕೃಷ್ಣೋ ಹಿ ಗುರುಃ ಶಂಭೋಃ ಪರಮಾತ್ಮಾ ಪರಾತ್ಪರಃ ॥ ೨೭ ॥

ಕೃಷ್ಣಸ್ಯ ವರಪುತ್ರೋಽಯಂ ಸ್ವಯಮೇವ ಬೃಹಸ್ಪತಿಃ ।
ಅತೋ ಹೇತೋಃ ಸುರಗುರುರ್ಗುರುಪುತ್ರಃ ಶಿವಸ್ಯ ಚ ॥ ೨೮ ॥

ಇತ್ಯೇವಂ ಕಥಿತಂ ಸರ್ವಮತಿಗುಹ್ಯಂ ಪುರಾತನಂ ।
ಇತಿ ಪ್ರಧಾನಸಂಬಂಧಃ ಶ್ರುತಶ್ಚ ಕಥಿತೋ ಮಯಾ ॥ ೨೯ ॥

ಪಾರಂಪರಿಕಮನ್ಯಂ ಚ ಕಥಯಾಮಿ ನಿಶಾಮಯ ।
ದುರ್ವಾಸಾ ಗರುಡಶ್ಚೈವ ಶಂಕರಾಂಶಃ ಪ್ರತಾಪವಾನ್ ॥ ೩೦ ॥

---

೨೭. ಆ ಸುಂದರಿಯಾದ ಗಿರಿಜೆಯು ಕಾಲಕ್ರಮದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ತಪಸ್ಸಿನಿಂದ ಮೆಚ್ಚಿಸಿ ಶಂಕರನನ್ನೇ ವರಿಸಿದಳು. ಆದಕಾರಣ ಸರ್ವಶ್ರೇಷ್ಠನಾದ ಶ್ರೀಕೃಷ್ಣಪರಮಾತ್ಮನು ಶಂಕರನಿಗೆ ಗುರುವೆನಿಸಿದನು.

೨೮. ಈ ಬೃಹಸ್ಪತ್ಯಾಚಾರ್ಯನು ಶ್ರೀಕೃಷ್ಣನ ವರಪುತ್ರನು, ಆದುದರಿಂದಲೇ ಸುರಗುರುವಾದ ಬೃಹಸ್ಪತಿಯು ಶಿವನಿಗೆ ಗುರುಪುತ್ರನಾದನು.

೨೯. ಈ ರೀತಿಯಾಗಿ, ಅತ್ಯಂತ ಗೋಪ್ಯವೂ ಬಹಳ ಪುರಾತನವೂ ಆದ, ಶ್ರೀಕೃಷ್ಣಪರಮಾತ್ಮನಿಗೂ ಬೃಹಸ್ಪತಿಗೂ ಇರುವ, ಮುಖ್ಯ ಸಂಬಂಧವನ್ನು ವಿವರಿಸಿದೆನು.

೩೦. ಈಗ ಇವರಿಬ್ಬರಿಗೂ ಇರುವ ಪರಮ್ಪರಾ ಸಂಬಂಧವನ್ನು ಹೇಳುವೆನು ಕೇಳು, ದೂರ್ವಾಸಮಹರ್ಷಿಯೂ, ಪ್ರತಾಪಶಾಲಿಯಾದ ಗರುಡನೂ ಶಂಕರನ ಅಂಶದಿಂದ ಜನಿಸಿದವರಾದ್ದರಿಂದ ಶಂಕರನಿಗೆ ಅಭಿನ್ನರು.

ಶಿಷ್ಯೌ ಚಾಂಗಿರಸಸ್ತ್ರೌ ದ್ವೌ ಗುರುಪುತ್ರೋsಥವಾ ತತಃ ।
ಪ್ರಾಣಾಧಿಕಾಯಾಂ ಸತ್ಯಾಂ ಚ ಮೃತಾಯಾಂ ದಕ್ಷಶಾಪತಃ ॥ ೮೧ ॥

ಸ್ವಜ್ಞಾನಂ ಸ್ವಂ ಚ ಭಗವಾನ್ವಿಸಸ್ಮಾರ ಸ್ವಮೋಹತಃ ।
ಸ್ಮರಣಂ ಕಾರಯಾಮಾಸ ಕೃಷ್ಣೇನ ಪ್ರೇರಿತೋಂsಗಿರಾಃ ॥ ೮೨ ॥

ಅತೋ ಹೇತೋರ್ಗುರುಶ್ಚೈವಂ ಮತ್ಸುತಸ್ಯಾಚ್ಛಿವಸ್ಯ ಸಃ ।
ಶೀಘ್ರಂ ಗಚ್ಛತು ಕೈಲಾಸಂ ಸ್ವಯಮೇವ ಬೃಹಸ್ಪತಿಃ ॥ ೮೩ ॥

ತ್ವಂ ಗಚ್ಛ ತತ್ರ ಸನ್ನದ್ಧಃ ಸದೇವೋ ನರ್ಮದಾತಟಂ ।
ಇತ್ಯುಕ್ತ್ವಾ ಜಗತಾಂ ಧಾತಾ ವಿರರಾಮ ಚ ನಾರದ ॥ ೮೪ ॥

---

೮೧. ಅವರಿಬ್ಬರೂ ಅಂಗಿರಸನಿಗೆ ಶಿಷ್ಯರಾದ್ದರಿಂದ ಶಂಕರನಿಗೂ ಅಂಗಿರಸನು ಗುರುವಾದಂತಾಯಿತು. ಹಾಗಾದರೂ ಬೃಹಸ್ಪತಿಯು ಗುರುಪುತ್ರನೆನಿಸುವನು.

೮೨. ತನ್ನ ಪ್ರಾಣಾಧಿಕಳಾದ ಸತೀದೇವಿಯು ದಕ್ಷನ ಶಾಪದಿಂದ ದೇಹತ್ಯಾಗಮಾಡಲು ಭಗವಂತನಾದ ಶಂಕರನು ಜ್ಞಾನಶೂನ್ಯನಾಗಿ ಮೂರ್ಛಿತನಾದನು. ಆಗ ಅಂಗಿರಸನು ಶ್ರೀಕೃಷ್ಣನ ಪ್ರೇರಣೆಯಂತೆ ಅವನಿಗೆ ಜ್ಞಾನಬೋಧೆ ಮಾಡಿದನು.

೮೩. ಆ ಕಾರಣದಿಂದಲೂ, ನನ್ನ ಪುತ್ರನಾದ ಶಿವನಿಗೆ ಅಂಗಿರಸನು ಗುರುವೆನಿಸುವನು. ಆದ್ದರಿಂದ ಬೃಹಸ್ಪತಿಯು ತಾನೇ ಜಾಗ್ರತೆಯಾಗಿ ಕೈಲಾಸಕ್ಕೆ ಹೋಗಲಿ.

೮೪–೮೫. 'ನೀನೂ ಕೂಡ ಸಕಲ ದೇವತೆಗಳೊಡಗೂಡಿ ನರ್ಮದಾನದಿಯ ದಡದಲ್ಲಿ ಸಿದ್ಧನಾಗಿರು,' ಎಂದು ನುಡಿದು ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಸುಮ್ಮ

ಗುರುರ್ಯಯೌ ಚ ಕೈಲಾಸಂ ಮಹೇಂದ್ರೋ ನರ್ಮದಾತಟಂ || ೮೫ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ
ಬೃಹಸ್ಪತೇಃ ಕೈಲಾಸಗಮನಂ ನಾಮ
ಏಕೋನಷಷ್ಟಿತಮೋಽಧ್ಯಾಯಃ

---

ನಾರದನು ಆಗ ಗುರುವಾದ ಬೃಹಸ್ಪತಿಯು ಕೈಲಾಸಕ್ಕೂ ಮಹೇಂದ್ರನು ನರ್ಮದಾ ನದಿಯ ದಡಕ್ಕೂ ತೆರಳಿದರು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿ ಖಂಡದಲ್ಲಿ ಬೃಹಸ್ಪತಿಯು
ಕೈಲಾಸಕ್ಕೆ ತೆರಳಿದನೆಂಬ ಐವತ್ತೊಂಭತ್ತನೆಯ ಅಧ್ಯಾಯವು
ಮುಗಿದುದು.

## ಐವತ್ತೊಂಭತ್ತನೆಯ ಅಧ್ಯಾಯದ ಸಾರಾಂಶ

ಗಂಗಾನದಿಗೆ ಸ್ನಾನಕ್ಕೆಂದು ಹೋದ ತನ್ನ ಪ್ರಿಯಪತ್ನಿಯಾದ ತಾರಾದೇವಿಯು ಎಷ್ಟು ಹೊತ್ತಾದರೂ ಹಿಂತಿರುಗದಿರುವುದನ್ನು ನೋಡಿ ಬೃಹಸ್ಪತಿಯು ಚಿಂತಾಕ್ರಾಂತನಾಗಿ ಅವಳನ್ನು ಕರೆತರಲು ತನ್ನ ಶಿಷ್ಯನನ್ನು ಕಳುಹಿಸಿದನು. ಅದರಂತೆ ಶಿಷ್ಯನು ಹೋಗಿಬಂದು ಚಂದ್ರನು ತಾರಾಪಹರಣಮಾಡಿದ ಸಮಾಚಾರವನ್ನು ತಿಳಿಸಲು, ಪತ್ನೀವಿಯೋಗದಿಂದ ಬೃಹಸ್ಪತಿಯು ವ್ಯಾಕುಲಗೊಂಡು ಶಿಷ್ಯರೊಡನೆ ದೇವೇಂದ್ರನ ಸಮೀಪಕ್ಕೆ ಬಂದು ನಡೆದ ಸಮಾಚಾರವನ್ನು ಅರುಹಿದನು. ಇಂದ್ರನು ದೂತರ ಮುಖಾಂತರ ಚಂದ್ರನು ತಾರಾದೇವಿಯೊಡನೆ ಪಾತಾಳಲೋಕದಲ್ಲಿ ಶುಕ್ರಾಚಾರ್ಯನ ಮರೆಹೊಕ್ಕಿರುವುದನ್ನು ತಿಳಿದು, ಶುಕ್ರಾಚಾರ್ಯನು ಅಜೇಯನಾದುದರಿಂದ ನಾವು ಬ್ರಹ್ಮ ಮತ್ತು ಮಹೇಶ್ವರನ ಬೆಂಬಲದಿಂದ ಅವನನ್ನು ಗೆಲ್ಲಬೇಕೆಂದು ಹೇಳಿ ಬೃಹಸ್ಪತಿಯನ್ನು ಬ್ರಹ್ಮಲೋಕಕ್ಕೆ ಕರೆದೊಯ್ದನು. ಬ್ರಹ್ಮನು ಮಹೇಶನನ್ನು ಕರೆತರುವಂತೆ ಹೇಳಿ ಬೃಹಸ್ಪತಿಯನ್ನು ಕೈಲಾಸಕ್ಕೆ ಕಳುಹಿಸಿ, ಇಂದ್ರನನ್ನು ಸೇನಾಸಮೇತನಾಗಿ ನರ್ಮದಾ ತೀರಕ್ಕೆ ಕಳುಹಿಸಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಷಷ್ಠಿತಮೋಽಧ್ಯಾಯಃ ||

|| ನಾರದ ಉವಾಚ ||

ನಾರಾಯಣ ಮಹಾಭಾಗ ವೇದವೇದಾಂಗಪಾರಗ |
ನಿಪೀತಂ ಚ ಮಹಾಖ್ಯಾನಂ ತ್ವನ್ಮುಖೇಂದುವಿನಿಸ್ಸೃತಂ || ೧ ||

ಅಧುನಾ ಶ್ರೋತುಮಿಚ್ಛಾಮಿ ಕಿಮುವಾಚ ಬೃಹಸ್ಪತಿಃ |
ಶಿವಂ ಚ ಗತ್ವಾ ಕೈಲಾಸಂ ದಾತಾರಂ ಸರ್ವಸಂಪದಾಂ || ೨ ||

ಜಗತ್ಕರ್ತಾ ವಿಧಾತಾ ಚ ಕಿಂ ವಾ ತಂ ಪ್ರತ್ಯುವಾಚ ಸಃ |
ಏತತ್ಸರ್ವಂ ಸಮಾಲೋಚ್ಯ ವದ ವೇದವಿದಾಂ ವರ || ೩ ||

---

### ಅರವತ್ತನೆಯ ಅಧ್ಯಾಯ

೧. ನಾರದ :— ವೇದವೇದಾಂಗಪಾರಂಗತನಾದ ಎಲೈ ನಾರಾಯಣ ಮಹರ್ಷಿಯೇ, ನಿನ್ನ ಮುಖಚಂದ್ರದಿಂದ ಹೊರಬಂದ, ದಿವ್ಯಕಥಾರೂಪವಾದ ಅಮೃತವನ್ನು ಪಾನಮಾಡಿ ಸಂತೋಷಪಟ್ಟೆನು.

೨. ಬೃಹಸ್ಪತಿಯು ಕೈಲಾಸಕ್ಕೆ ಹೋಗಿ ಸಕಲ ಸಂಪತ್ಪ್ರದಾತೃವಾದ ಶಿವನನ್ನು ಕುರಿತು ಏನು ಹೇಳಿದನೆಂಬುದನ್ನು ಈಗ ತಿಳಿಯಲು ಬಯಸುತ್ತೇನೆ.

೩. ಜಗತ್ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನೂ ಕೂಡ ಆ ಶಿವನನ್ನು ಕುರಿತು ಏನು ಹೇಳಿದನೆಂಬುದನ್ನು ವೇದವೇದಾಂಗಪಾರಂಗತನಾದ ನೀನು ವಿಸ್ತರಿಸಿ ಹೇಳು.

॥ ನಾರಾಯಣ ಉವಾಚ ॥

ಶೀಘ್ರಂ ಗತ್ವಾ ಚ ಕೈಲಾಸಂ ಭ್ರಷ್ಟಶ್ರೀಃ ಶಂಕರಂ ಗುರುಃ ।
ಪ್ರಣಮ್ಯ ತಸ್ಥೌ ಪುರತೋ ಲಜ್ಜಾವನತಕಂಧರಃ ॥ ೪ ॥

ದೃಷ್ಟ್ವಾ ಗುರುಸುತಂ ಶಂಭುರುದತಿಷ್ಠತ್ಕುಶಾಸನಾತ್ ।
ಆಲಿಂಗನಂ ದದೌ ತಸ್ಮೈ ಶೀಘ್ರಂ ಮಾಂಗಲಿಕಾಶಿಷಃ ॥ ೫ ॥

ಸ್ವಾಸನೇ ವಾಸಯಿತ್ವಾ ವೈ ಪಪ್ರಚ್ಛ ಕುಶಲಂ ವಚಃ ।
ಉವಾಚ ಮಧುರಂ ವಾಕ್ಯಂ ಭೀತಂ ತಂ ಲಜ್ಜಿತಂ ಶಿವಃ ॥ ೬ ॥

॥ ಶ್ರೀ ಶಂಕರ ಉವಾಚ ॥

ಕಥಮೇವಂ ವಿಧಸ್ತ್ವಂ ಚ ದುಃಖೀ ಮಲಿನವಿಗ್ರಹಃ ।
ಸಾಶ್ರುನೇತ್ರೋ ಲಜ್ಜಿತಶ್ಚ ಭ್ರಾತಸ್ತತ್ಕಾರಣಂ ವದ ॥ ೭ ॥

---

೪. ನಾರಾಯಣ :—ಭಾರ್ಯಾವಿರಹದಿಂದ ಕಳೆಗುಂದಿದ ಬೃಹಸ್ಪತಿಯು ಜಾಗ್ರತೆ ಕೈಲಾಸಕ್ಕೆ ಹೋಗಿ ಶಂಕರನಿಗೆ ವಂದಿಸಿ ನಾಚಿಕೆಯಿಂದ ತಲೆಬಾಗಿ ನಿಂತುಕೊಂಡನು.

೫. ಶಿವನು ತನ್ನ ಗುರುಪುತ್ರನನ್ನು ನೋಡಿದ ಕೂಡಲೇ ದರ್ಭಪೀಠದಿಂದ ಮೇಲಕ್ಕೆದ್ದು ಪ್ರೀತಿಯಿಂದ ಆಲಂಗಿಸಿಕೊಂಡು ಮಂಗಳಾಶೀರ್ವಾದ ಮಾಡಿದನು.

೬. ತನ್ನ ಪೀಠದಲ್ಲಿಯೇ ಆತನನ್ನು ಕುಳ್ಳಿರಿಸಿ ಕುಶಲಪ್ರಶ್ನೆಮಾಡಿದನು. ಮತ್ತು ಭಯ ನಾಚಿಕೆಗಳಿಂದ ತಲೆಬಾಗಿಸಿರುವ ಅವನನ್ನು ಕುರಿತು ಶಿವನು ಇಂತು ಮೃದುಮಧುರವಾಕ್ಯವನ್ನು ನುಡಿದನು.

೭. ಶ್ರೀಶಂಕರ :—ಎಲೈ ಸಹೋದರನೇ, ಇದೇನು, ನಿನ್ನಂಥ ಪ್ರಾಜ್ಞನೂ ದುಃಖಕ್ಕೊಳಗಾಗಿ, ಕಂಬನಿತುಂಬಿದ ಕಣ್ಣುಗಳಿಂದಲೂ, ಕೊಳಕಾದ ಶರೀರದಿಂದಲೂ ಕೂಡಿ ನಾಚಿನಿಂತಿರುವೆ. ಇದಕ್ಕೆ ಕಾರಣವನ್ನು ಹೇಳು.

ಕಿಂ ವಾ ತಪಸ್ಯಾಹೀನಾ ತೇ ಸಂಧ್ಯಾಹೀನಾಽಥವಾ ಮುನೇ ।
ಕಿಂ ವಾ ಶ್ರೀಕೃಷ್ಣ ಸೇವಾ ಸಾ ವಿಹೀನಾ ದೈವದೋಷತಃ ॥ ೮ ॥

ಕಿಂ ವಾ ಗುರೌ ಭಕ್ತಿಹೀನೋಽಭೀಷ್ಟದೇವೇಽಥವಾ ಗುರೌ ।
ಕಿಂ ವಾ ನ ರಕ್ಷಿತುಂ ಶಕ್ತಃ ಪ್ರಪನ್ನಂ ಶರಣಾಗತಂ ॥ ೯ ॥

ಕಿಂ ವಾಽತಿಥಿಸ್ತೇ ವಿಮುಖಃ ಕಿಂ ವಾ ಪೋಷ್ಯಾ ಬುಭುಕ್ಷಿತಾಃ ।
ಕಿಂ ವಾ ಸ್ವತಂತ್ರಾ ಸ್ತ್ರೀ ವಾ ತೇ ಕಿಂ ವಾ ಪುತ್ರೋಽವಚಸ್ಕರಃ ॥ ೧೦ ॥

ಸುಶಾಸಿತೋ ನ ಶಿಷ್ಯೋ ವಾ ಕಿಂ ಭೃತ್ಯಾಶ್ಚೋತ್ತರಪ್ರದಾಃ ।
ಕಿಂ ವಾ ತೇ ವಿಮುಖಾ ಲಕ್ಷ್ಮೀಃ ಕಿಂ ವಾ ರುಷ್ಟೋ ಗುರುಸ್ತವ ॥ ೧೧ ॥

ವರಿಷ್ಠಶ್ಚ ವರಿಷ್ಠಶ್ಚ ಶಶ್ವತ್ಸಂತುಷ್ಟಮಾನಸಃ ।
ಗುರುಸ್ತವ ವಸಿಷ್ಠಶ್ಚ ಪ್ರೇಷ್ಠಃ ಶ್ರೇಷ್ಠಃ ಸತಾಮಹೋ ॥ ೧೨ ॥

---

೮. ಎಲೈ ಮುನಿಶ್ರೇಷ್ಠನೇ, ದುರ್ದೈವದಿಂದ ನಿನಗೆ ತಪಸ್ಸಿನಲ್ಲಾಗಲೀ, ಸಂಧ್ಯಾಕರ್ಮದಲ್ಲಾಗಲೀ; ಶ್ರೀಕೃಷ್ಣಪರಮಾತ್ಮನ ಸೇವೆಯಲ್ಲಾಗಲೀ, ಏನಾದರೂ ನ್ಯೂನತೆಯುಂಟಾಯಿತೇ ?

೯. ನಿನ್ನ ಇಷ್ಟದೇವತೆಯಲ್ಲಾಗಲಿ , ಗುರುವಿನಲ್ಲಾಗಲೀ ನೀನು ಭಕ್ತಿಹೀನನಾದೆಯಾ ? ಅಥವಾ ನಿನ್ನ ಮರೆಹೊಕ್ಕವನನ್ನು ಕಾಪಾಡಲು ನಿನ್ನಿಂದ ಸಾಧ್ಯವಾಗಲಿಲ್ಲವೇ ?

೧೦. ನಿನ್ನ ಮನೆಗೆ ಬಂದಿದ್ದ ಅತಿಥಿ ಏನಾದರೂ ಹಿಂತಿರುಗಿಹೋದನೇ ? ಅಥವಾ ನಿನ್ನ ರಕ್ಷಣೆಗೊಳಗಾದವರೆಲ್ಲ ಹಸಿವಿನಿಂದ ನರಳುತ್ತಿರುವರೇ ? ನಿನ್ನ ಹೆಂಡತಿಯೇನಾದರೂ ಸ್ವತಂತ್ರಳಾಗಿರುವಳೇ ಅಥವಾ ನಿನ್ನ ಮಗನು ನಿನ್ನ ಮಾತನ್ನು ಮೀರಿ ನಡೆಯುವನೇ ?

೧೧ ನಿನ್ನ ಶಿಷ್ಯನಿಗೆ ಯೋಗ್ಯವಾದ ಶಿಕ್ಷಣಕೊಡಲಾಗಲಿಲ್ಲವೇ ? ಅಥವಾ ನಿನ್ನ ಸೇವಕರೇನಾದರೂ ನಿನಗೆ ಬದಲು ನುಡಿಯುವರೇ ? ಲಕ್ಷ್ಮಿಯು ನಿನಗೆ ಒಲಿಯಲಿಲ್ಲವೇ ? ಅಥವಾ ನಿನ್ನ ಗುರುವೇನಾದರೂ ನಿನ್ನಲ್ಲಿ ಕುಪಿತನಾಗಿರುವನೇ ?

೧೨. ಸರ್ವಶ್ರೇಷ್ಠನೂ ತೃಪ್ತಿಯಿಂದ ಸರ್ವದಾ ಸಂತೋಷಭರಿತನೂ, ಆದ ನಿನ್ನ ಗುರುವಾದ ವಸಿಷ್ಠನು ಸತ್ಪುರುಷರಿಗೆಲ್ಲ ಶ್ರೇಷ್ಠನೆನಿಸಿರುವನು. (ಅವನು ಕೋಪಿಸಿಕೊಳ್ಳಲಾರನೆಂದು ತಾತ್ಪರ್ಯ)

ಕಿಂ ವಾ ರುಷ್ಟೋಽಭೀಷ್ಟದೇವಃ ಕಿಂ ವಾ ರುಷ್ಟಾಶ್ಚ ವಾಡವಾಃ ।
ಕಿಂ ವಾ ರುಷ್ಟಾ ವೈಷ್ಣವಾಶ್ಚ ಕಿಂ ವಾ ತೇ ಪ್ರಬಲೋ ರಿಪುಃ ॥ ೧೩ ॥

ಕಿಂ ವಾ ತೇ ಬಂಧುವಿಚ್ಛೇದೋ ವಿಗ್ರಹೋ ಬಲಿನಾ ಸಹ ।
ಕಿಂ ವಾ ಪದಂ ಪರಗ್ರಸ್ತಂ ಕಿಂ ವಾ ಬಂಧುಧನಂ ಚ ವಾ ॥ ೧೪ ॥

ಕೇನ ತೇ ವಾ ಕೃತಾ ನಿಂದಾ ಖಲೈರ್ವಾ ಪಾಪಿಭಿರ್ಮುನೇ ।
ಕೇನ ವಾ ತ್ವಂ ಪರಿತ್ಯಕ್ತೋ ಬಾಂಧವೇನ ಪ್ರಿಯೇಣ ವಾ ॥ ೧೫ ॥

ಬಂಧುಸ್ತ್ಯಕ್ತಸ್ತ್ವಯಾ ಕಿಂ ವಾ ವೈರಾಗ್ಯೇಣ ಕ್ರುಧಾಥವಾ ।
ಕಿಂ ವಾ ತೀರ್ಥೇ ನ ಹಿ ಸ್ನಾತಂ ನ ದತ್ತಂ ಪುಣ್ಯವಾಸರೇ ॥ ೧೬ ॥

---

೧೩. ನಿನ್ನ ಇಷ್ಟದೇವತೆಯಾಗಲೀ, ಬ್ರಾಹ್ಮಣರಾಗಲೀ, ವಿಷ್ಣುಭಕ್ತರಾಗಲೀ, ನಿನ್ನ ವಿಷಯದಲ್ಲಿ ಕುಪಿತರಾಗಿರುವರೇ ? ಅಥವಾ ನಿನ್ನ ಶತ್ರು ಯಾರಾದರೂ ನಿನಗಿಂತ ಬಲಿಷ್ಠನಾಗಿರುವನೇ ?

೧೪. ಬಂಧುವಿರಹವಾಗಲೀ, ಬಲಶಾಲಿಯೊಡನೆ ಯುದ್ಧವಾಗಲೀ ನಿನಗೆ ಸಂಭವಿಸಿದೆಯೇ ? ನಿನ್ನ ಪದವಿಯನ್ನಾಗಲೀ, ಬಂಧುಗಳನ್ನಾಗಲೀ, ಧನವನ್ನಾಗಲೀ, ಯಾರಾದರೂ ಅಪಹರಿಸಿದರೇ ?

೧೫. ಎಲೈ ಮುನಿಯೇ, ಪಾಪಿಗಳಾಗಲೀ, ದುಷ್ಟರಾಗಲೀ ಯಾರಾದರೂ ನಿನ್ನನ್ನು ನಿಂದಿಸಿದರೇ ? ನಿನ್ನ ಪ್ರಿಯ ಬಂಧುಗಳು ಯಾರಾದರೂ ನಿನ್ನನ್ನು ದೂರಮಾಡಿದರೇ ?

೧೬. ವೈರಾಗ್ಯಬುದ್ಧಿಯಿಂದಾಗಲೀ, ಕೋಪದಿಂದಾಗಲೀ, ನೀನೇನಾದರೂ ನಿನ್ನ ಬಂಧುಗಳನ್ನು ಬಿಟ್ಟುಬಂದೆಯಾ ? ಅಥವಾ ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಪುಣ್ಯದಿನಗಳಲ್ಲಿ ದಾನಮಾಡಲಿಲ್ಲವೇ ?

ಗುರುನಿಂದಾ ಬಂಧುನಿಂದಾ ಖಲವಕ್ತ್ರಾಚ್ಚ್ರುತಾ ಕಥಾ ।
ಗುರುನಿಂದಾ ಹಿ ಸಾಧೂನಾಂ ಮರಣಾದತಿರಿಚ್ಯತೇ ॥ ೧೭ ॥

ಅಸದ್ವಂಶಪ್ರಜಾತಾನಾಂ ಖಲಾನಾಂ ನಿಂದನಂ ತಥಾ ।
ದೌಶ್ಶೀಲ್ಯಮೇವಮುಸತಾಂ ಶಶ್ವನ್ನಾರಕಿಣಾಮಿಹ ॥ ೧೮ ॥

ಪರಪ್ರಶಂಸಕಾಃ ಸಂತಃ ಪುಣ್ಯವಂತೋ ಹಿ ಭಾರತೇ ।
ಶಶ್ವತ್ಸಂಗಲಯುಕ್ತಾಶ್ಚ ರಾಜನ್ತೇ ಮನಸಾ ಸದಾ ॥ ೧೯ ॥

ಪುತ್ರೇ ಯಶಸಿ ತೋಯೇ ಚ ಸಮೃದ್ಧೇ ಚ ಪರಾಕ್ರಮೇ ।
ಐಶ್ವರ್ಯೇ ವಾ ಪ್ರತಾಪೇ ಚ ಪ್ರಜಾಭೂಮಿಧನೇಷು ಚ ॥ ೨೦ ॥

---

೧೭. ದುಷ್ಟರ ಬಾಯಿನಿಂದ ನಿನ್ನ ಗುರುನಿಂದೆಯನ್ನಾಗಲೀ, ಬಂಧುಗಳ ನಿಂದೆಯನ್ನಾಗಲೀ ನೀನು ಕೇಳಿದೆಯಾ? ಸತ್ಪುರುಷರಿಗೆ ಗುರುನಿಂದೆಯನ್ನು ಕೇಳುವುದು ಸಾವಿಗಿಂತಲೂ ಕಷ್ಟತರವಾದುದು.

೧೮. ಕೆಟ್ಟ ವಂಶದಲ್ಲಿ ಹುಟ್ಟಿದ ದುಷ್ಟರು ಯಾವಾಗಲೂ ಪರರನ್ನು ದೂಷಿಸುವದು ಸ್ವಭಾವವುಳ್ಳವರಾಗಿ ನರಕಭಾಗಿಗಳಾಗುತ್ತಾರೆ.

೧೯. ಸತ್ಪುರುಷರಾದವರೋ ಮತ್ತೊಬ್ಬರನ್ನು ಯಾವಾಗಲೂ ಹೊಗಳುತ್ತ, ನಿರ್ಮಲವಾದ ಮನಸ್ಸಿನಿಂದ ಕೂಡಿ ಭಾರತದಲ್ಲಿ ಪುಣ್ಯವಂತರೆನಿಸಿಕೊಳ್ಳುತ್ತಾರೆ

೨೦. ಮನುಷ್ಯರ ಮನಸ್ಸು, ಅವರ ಮಕ್ಕಳಿಂದಲೂ, ಗಳಿಸಿರುವ ಕೀರ್ತಿಯಿಂದಲೂ, (ಕೊಡುವ ನೀರಿನಿಂದಲೂ) ಒದಗುವ ಸಮೃದ್ಧಿಯಿಂದಲೂ, ತಡೆಯಿಲ್ಲದ ಪರಾಕ್ರಮದಿಂದಲೂ, ಐಶ್ವರ್ಯ ಮತ್ತು ಪ್ರತಾಪಗಳಿಂದಲೂ ಪ್ರಜೆ, ಭೂಮಿ, ಧನ ಮುಂತಾದ ಸಮೃದ್ಧಿಗಳಿಂದಲೂ ಪ್ರಪುಷ್ಟವಾಗುವುದು.

ವಚನೇಷು ಚ ಬುದ್ಧೌ ಚ ಸ್ವಭಾವೇ ಚ ಚರಿತ್ರತಃ ।
ಆಚಾರೇ ವ್ಯವಹಾರೇ ಚ ಜ್ಞಾಯತೇ ಹೃದಯಂ ನೃಣಾಂ ॥ ೨೧ ॥

ಯಾದೃಗ್ಯೇಷಾಂ ಚ ಹೃದಯಂ ತಾದೃಕ್ತೇಷಾಂ ಚ ಮಂಗಲಂ ।
ಯಾದೃಗ್ಯೇಷಾಂ ಪೂರ್ವಪುಣ್ಯಂ ತಾದೃಕ್ತೇಷಾಂ ಚ ಮಾನಸಂ ॥ ೨೨ ॥

ಇತ್ಯುಕ್ತ್ವಾ ಚ ಮಹಾದೇವೋ ವಿರರಾಮ ಸ್ವಸಂಸದಿ ।
ತಮುವಾಚ ಮಹಾವಕ್ತಾ ಸ್ವಯಮೇವ ಬೃಹಸ್ಪತಿಃ ॥ ೨೩ ॥

॥ ಬೃಹಸ್ಪತಿರುವಾಚ ॥

ಅಕಥ್ಯಮೇವ ವೃತ್ತಾಂತಂ ಕಥಯಾಮಿ ಕಿಮೀಶ್ವರ ।
ಲೋಕಾಃ ಕರ್ಮವಶಾನ್ನಿತ್ಯಂ ನಾನಾ ಜನ್ಮಸು ಯತ್ಕೃತಂ ॥ ೨೪ ॥

ಸ್ವಕರ್ಮಣಾಂ ಫಲಂ ಭುಂಕ್ತೇ ಜಂತುರ್ಜನ್ಮನಿ ಜನ್ಮನಿ ।
ನ ಹಿ ನಷ್ಟಂ ಚ ತತ್ಕರ್ಮ ವಿನಾ ಭೋಗಾಚ್ಚ ಭಾರತೇ ॥ ೨೫ ॥

---

೨೧. ಅಂತೆಯೇ ಮಾತು ಮತ್ತು ಬುದ್ಧಿಯಿಂದಲೂ, ಸ್ವಭಾವ ಮತ್ತು ನಡತೆಯಿಂದಲೂ, ಆಚಾರವ್ಯವಹಾರಗಳಿಂದಲೂ, ಮನುಷ್ಯರ ಹೃದಯವನ್ನು ಅರಿಯಬಹುದು.

೨೨. ಯಾರ ಮನಸ್ಸು ಹೇಗೆ ಇದೆಯೋ ಅದಕ್ಕೆ ಅನುಗುಣವಾಗಿ ಅವರಿಗೆ ಮಂಗಳವುಂಟಾಗುವುದು. ಯಾರ ಪೂರ್ವಪುಣ್ಯವು ಹೇಗಿದೆಯೋ ಅದಕ್ಕೆ ತಕ್ಕಂತೆ ಅವರ ಮನಸ್ಸಿರುವುದು.

೨೩. ಹೀಗೆ ನುಡಿದು ಮಹೇಶ್ವರನು ತನ್ನ ಸಭೆಯಲ್ಲಿ ಸುಮ್ಮನೆ ಕುಳಿತುಕೊಳ್ಳಲು, ಆಗ ಮಾತಿನಲ್ಲಿ ನಿಪುಣನಾದ ಬೃಹಸ್ಪತಿಯು ಅವನನ್ನು ಕುರಿತಿಂತೆಂದನು.

೨೪–೨೫. ಬೃಹಸ್ಪತಿ:—ಎಲೈ ಈಶನೇ, ಹೇಳಬಾರದ ನನ್ನ ವೃತ್ತಾಂತವನ್ನು ನಾನು ಹೇಗೆ ಹೇಳಲಿ ಪ್ರಪಂಚದಲ್ಲಿ ಮನುಜರು ಮತ್ತು ಇತರ ಪ್ರಾಣಿಗಳು ಜನ್ಮಾಂತರಗಳಲ್ಲಿ ತಾವು ಆಚರಿಸಿದ ಕರ್ಮಗಳ ಫಲವನ್ನು ಅನ್ಯಜನ್ಮದಲ್ಲಿ ಅನುಭವಿಸಿಯೇ ತೀರಬೇಕು. ಭರತಖಂಡದಲ್ಲಿ ಕರ್ಮಫಲವನ್ನು ಅನುಭವಿಸಿದ ಹೊರತು ಮಾಡಿದ ಕರ್ಮವು ಸವೆಯುವಂತಿಲ್ಲ.

ಸುಖಂ ದುಃಖಂ ಭಯಂ ಶೋಕಂ ನರಾಣಾಂ ಭಾರತೇ ಪ್ರಭೋ ।
ಕೇಚಿದ್ವದಂತಿ ಹಿ ಭವೇತ್ಸ್ವಕೃತೇನ ಚ ಕರ್ಮಣಾ ॥ ೨೭ ॥

ಕೇಚಿದ್ವದಂತಿ ದೈವೇನ ಸ್ವಭಾವೇನೇತಿ ಕೇಚನ ।
ತ್ರಿವಿಧಾ ಗತಯೋ ಹ್ಯಸ್ಯ ವೇದವೇದಾಂಗಪಾರಗ ॥ ೨೭ ॥

ಸ್ವಯಂ ಚ ಕರ್ಮಜನಕಃ ಕರ್ಮ ವೈ ದೇವಕಾರಣಂ ।
ಸ್ವಭಾವೋ ಜಾಯತೇ ನೃಣಾಂ ಸ್ವಾತ್ಮನಃ ಪೂರ್ವಕರ್ಮಣಃ ॥ ೨೮ ॥

ಸ್ವಕರ್ಮಣಾಂ ಚ ಸರ್ವೇಷಾಂ ಜಂತೂನಾಂ ಪ್ರತಿಜನ್ಮನಿ ।
ಸುಖಂ ದುಃಖಂ ಭಯಂ ಶೋಕಂ ಸ್ವಾತ್ಮನಶ್ಚ ಪ್ರಜಾಯತೇ ॥ ೨೯ ॥

---

೨೬. ಎಲೈ ಪ್ರಭುವೇ, ಭಾರತದಲ್ಲಿ ಮನುಜರಿಗೆ ಸುಖದುಃಖಗಳೂ, ಭಯ ಶೋಕಗಳೂ ಜನ್ಮಾಂತರದ ಕರ್ಮಾನುಗುಣವಾಗಿ ಸಂಭವಿಸುವುವೆಂದು ಕೆಲವರು ನುಡಿಯುವರು.

೨೭. ಇನ್ನು ಕೆಲವರು, ಮನುಜರಿಗೆ ಸುಖದುಃಖಗಳು ಸಂಭವಿಸುವುದು ಅದೃಷ್ಟಾನುಗುಣವೆಂದೂ, ಮತ್ತೆ ಕೆಲವರು ಸ್ವಭಾವಾನುಗುಣವೆಂದೂ ಹೇಳುವರು. ಎಲೈ ವೇದವೇದಾಂಗಪಾರಂಗತನಾದ ಶಂಕರನೇ, ಸುಖದುಃಖಗಳು ಸಂಭವಿಸಲು ಈ ಮೂರು ಮಾರ್ಗವನ್ನು ಹೇಳುವರು.

೨೮. ಜೀವನು ಕರ್ಮಕ್ಕೆ ಕಾರಣನು, ಕರ್ಮವು ಅದೃಷ್ಟಕ್ಕೆ ಕಾರಣವು. ಜನ್ಮಾಂತರ ಕರ್ಮಾನುಗುಣವಾಗಿ ಮನುಜನ ಸ್ವಭಾವವುಂಟಾಗುವುದು.

೨೯. ಎಲ್ಲ ಪ್ರಾಣಿಗಳಿಗೂ ಪ್ರತಿ ಜನ್ಮದಲ್ಲೂ ಸುಖದುಃಖಗಳೂ, ಭಯ ಶೋಕಗಳೂ ಕರ್ಮಾನುಗುಣವಾಗಿಯೇ ಸಂಭವಿಸುವುದು.

**ಸ್ವಕರ್ಮಫಲಭೋಕ್ತಾ ಚ ಜೀವೋ ಹಿ ಸಗುಣಃ ಸದಾ ।**
**ಆತ್ಮಭೋಜಯಿತಾ ಸಾಕ್ಷೀ ನಿರ್ಗುಣಃ ಪ್ರಕೃತೇಃ ಪರಃ ॥ ೩೦ ॥**

**ಸ ಏವಾತ್ಮಾ ಸರ್ವಸೇವ್ಯಃ ಸರ್ವೇಷಾಂ ಚ ಫಲಪ್ರದಃ ।**
**ಸ ವೈ ಸೃಜತಿ ದೈವಂ ಚ ಸ್ವಭಾವಂ ಕರ್ಮ ಚೈವ ಹಿ ॥ ೩೧ ॥**

**ಕರ್ಮಣಾ ಚ ನೃಣಾಂ ಲಜ್ಜಾ ಪ್ರಶಂಸಾ ಚ ಪ್ರಫುಲ್ಲತಾ ।**
**ಲಜ್ಜಾಬೀಜಂ ಚ ವೃತ್ತಾಂತಂ ತದಾಪಿ ಕಥಯಾಮಿ ತೇ ॥ ೩೨ ॥**

**ಇತ್ಯುಕ್ತ್ವಾ ಸರ್ವವೃತ್ತಾಂತಮುವಾಚತ್ತಂ ಬೃಹಸ್ಪತಿಃ ।**
**ಶ್ರುತ್ವಾ ಬಭೂವ ನಮ್ರಾಸ್ಯೋ ಗೌರೀಶೋ ಲಜ್ಜಯಾ ತದಾ ॥ ೩೩ ॥**

---

೩೦. ಕರ್ಮಫಲವನ್ನು ಅನುಭವಿಸುವ ಜೀವನು ಸರ್ವದಾ ತ್ರಿಗುಣಾತ್ಮಕನಾದುದರಿಂದ ಸಗುಣನೆನಿಸುವನು. ಕರ್ಮಫಲವನ್ನು ಕೊಡುವ ಪರಮಾತ್ಮನು, ಕೇವಲ ಸಾಕ್ಷಿಮಾತ್ರನಾದುದರಿಂದ ನಿರ್ಗುಣನೂ ಪ್ರಕೃತಿಗಿಂತ ಪರನೂ ಎನಿಸುವನು.

೩೧. ಎಲ್ಲರಿಂದ ಸೇವೆಯನ್ನು ಕೈಗೊಳ್ಳುವವನೂ, ಎಲ್ಲ ಕಾರ್ಯಗಳಿಗೂ ಫಲದಾಯಕನೂ ಆದ ಆ ಆತ್ಮನೇ ಅದೃಷ್ಟ, ಸ್ವಭಾವ ಮತ್ತು ಕರ್ಮಗಳನ್ನೂ ಸೃಜಿಸುವನು.

೩೨. ತಮ್ಮ ಕರ್ಮಾನುಗುಣವಾಗಿಯೇ ಮನುಜರಿಗೆ ಅವಮಾನವಾಗಲೀ, ಗೌರವವಾಗಲೀ, ಉಲ್ಲಾಸವಾಗಲೀ ಲಭಿಸುವುದು. ಏನೇ ಆಗಲಿ ನನ್ನ ಅವಮಾನಕ್ಕೆ ಮೂಲಕಾರಣವಾದ ಸಮಾಚಾರವನ್ನು ನಿನಗೆ ತಿಳಿಸಿಬಿಡುವೆನು.

೩೩. ಹೀಗೆ ಹೇಳಿ ಬೃಹಸ್ಪತಿಯು ನಡೆದ ಸಮಾಚಾರವನ್ನೆಲ್ಲ ಪರಮೇಶ್ವರನಿಗೆ ತಿಳಿಸಿದನು ಅದನ್ನು ಕೇಳಿ ಗೌರೀವಲ್ಲಭನಾದ ಶಿವನು ನಾಚಿಕೆಯಿಂದ ತಲೆ ಬಾಗಿದನು.

ಜಪಮಾಲಾ ಕರಾದ್ಭ್ರಷ್ಟಾ ಕೋಪಾವಿಷ್ಟಸ್ಯ ಶೂಲಿನಃ ।
ಬಭೂವ ಸದ್ಯಃ ಕಂಪಶ್ಚ ರಕ್ತಪಂಕಜಲೋಚನೇ ॥ ೩೪ ॥

ಸಂಹರ್ತುರೀಶೋ ರುದ್ರಸ್ಯ ವಿಷ್ಣೋಃ ಪಾತುಃ ಸಖಾ ಶಿವಃ ।
ಸ್ರಷ್ಟುಸ್ತ್ರ್ಯಶ್ಚ ಮಾನ್ಯಶ್ಚ ಸ್ವಾತ್ಮನಃ ಪರಮಾತ್ಮನಃ ॥ ೩೫ ॥

ನಿರ್ಗುಣಸ್ಯ ಚ ಕೃಷ್ಣಸ್ಯ ಪ್ರಕೃತೀಶಸ್ಯ ನಾರದ ।
ಕೋಪಾತ್ಪ್ರವಕ್ತುಮಾರೇಭೇ ಶುಷ್ಕಕಂಠೌಷ್ಠತಾಲುಕಃ ॥ ೩೬ ॥

॥ ಶಿವ ಉವಾಚ ॥

ಶಿವಮಸ್ತು ಚ ಸಾಧೂನಾಂ ವೈಷ್ಣವಾನಾಂ ಸತಾಮಿಹ ।
ಅವೈಷ್ಣವಾನಾಮಸತಾಮಶಿವಂ ಚ ಪದೇ ಪದೇ ॥ ೩೭ ॥

ದದಾತಿ ವೈಷ್ಣವೇಭ್ಯಶ್ಚ ಯೋ ದುಃಖಂ ಸುಸ್ಥಿತೋ ಜನಃ ।
ಶ್ರೀಕೃಷ್ಣಸ್ತಸ್ಯ ಸಂಹರ್ತಾ ವಿಘ್ನಸ್ತಸ್ಯ ಪದೇ ಪದೇ ॥ ೩೮ ॥

---

೩೪. ಸ್ವಲ್ಪ ಹೊತ್ತಿನಲ್ಲಿಯೇ ಲಜ್ಜೆಯು ಅಳಿದು, ಕೋಪೋದ್ರೇಕವಾಗಿ ಶಿವನ ಹಸ್ತದಿಂದ ಜಪಮಾಲೆಯು ತಾನಾಗಿಯೇ ಜಾರಿಬಿದ್ದಿತು. ಕೂಡಲೆ ಮೈನಡುಗ ಹತ್ತಿತು. ಕಣ್ಣುಗಳು ಕೆಂದಾವರೆಯಂತಾದವು.

೩೫–೩೬. ಎಲೈ ನಾರದನೇ, ಜಗತ್ಸಂಹಾರಕನಾದ ಕಾಲಾಗ್ನಿರುದ್ರನಿಗೆ ಒಡೆಯನೂ, ಪಾಲಕನಾದ ವಿಷ್ಣುವಿಗೆ ಮಿತ್ರನೂ, ಸೃಷ್ಟಿಕರ್ತನಾದ ಬ್ರಹ್ಮನಿಗೆ ಮಾನ್ಯನೂ, ನಿರ್ಗುಣನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಶ್ರೀಕೃಷ್ಣಪರಮಾತ್ಮನಿಗೆ ಸಮಾನನೂ, ಆದ ಶಿವನು ಕೋಪದಿಂದ ಒಣಗಿಹೋದ ಗಂಟಲಿನಲ್ಲಿ ಮಾತನಾಡ ಲಾರಂಭಿಸಿದನು.

೩೭. ಶಿವ :— ವಿಷ್ಣುಭಕ್ತರಾದ ಸತ್ಪುರುಷರಿಗೆ ಮಂಗಳವೂ, ವಿಷ್ಣುಭಕ್ತರಲ್ಲದ ದುಷ್ಟರಿಗೆ ಅಮಂಗಳವೂ ಯಾವಾಗಲೂ ಉಂಟಾಗಲಿ.

೩೮. ಯಾರು ಸ್ವಾರ್ಥಪರರಾಗಿ ವಿಷ್ಣುಭಕ್ತರಿಗೆ ಕಷ್ಟವನ್ನು ಕೊಡುವರೋ ಅಂಥವರಿಗೆ ಶ್ರೀಕೃಷ್ಣನು ಪದೇ ಪದೇ ತೊಂದರೆಗಳನ್ನು ಕೊಟ್ಟು ನಾಶ ಗೊಳಿಸುವನು.

ಅವೈಷ್ಣವಾನಾಂ ಹೃದಯಂ ನ ಹಿ ಶುದ್ಧಂ ಸದಾ ಮಲಂ ।
ಶ್ರೀಕೃಷ್ಣಮಂತ್ರಸ್ಮರಣಂ ಮನೋನೈರ್ಮಲ್ಯಕಾರಣಂ　　॥ ೩೯ ॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ವಿಷ್ಣುಮಂತ್ರೋಪಾಸನಯಾ ಕ್ಷೀಯತೇ ಕರ್ಮ ತನ್ನೃಣಾಂ　　॥ ೪೦ ॥

ಅಹೋ ಶ್ರೀಕೃಷ್ಣದಾಸಾನಾಂ ಕಃ ಸ್ವಭಾವಃ ಸುನಿರ್ಮಲಃ ।
ಹೃತಭಾರ್ಯಂ ಮೂರ್ಛಿತಶ್ಚ ನ ಶಶಾಪ ರಿಪುಂ ಗುರುಃ　　॥ ೪೧ ॥

ಗುರುರ್ಯಸ್ಯ ವರಿಷ್ಠಶ್ಚ ಕ್ರೋಧಹೀನಶ್ಚ ಧಾರ್ಮಿಕಃ ।
ಶತಪುತ್ರಘ್ನಮಪ್ಯೇನಂ ನ ಶಶಾಪ ರಿಪುಂ ಮುನಿಃ　　॥ ೪೨ ॥

---

೩೯. ವಿಷ್ಣುಭಕ್ತರಲ್ಲದವರ ಮನಸ್ಸು ಸರ್ವದಾ ಕೊಳಕೂ, ಅಪರಿಶುದ್ಧವೂ ಆಬುದು. ಶ್ರೀಕೃಷ್ಣಮಂತ್ರೋಪದೇಶವನ್ನು ಪಡೆದು ಅದನ್ನು ಅನವರತ ಸ್ಮರಿಸುವುದರಿಂದ ಮನಸ್ಸು ನಿರ್ಮಲವಾಗುವುದು.

೪೦. ವಿಷ್ಣುಮಂತ್ರೋಪಾಸನೆಯಿಂದ, ಮನಸ್ಸಂಕೋಚವು ಅಳಿದು, ಸಕಲ ಸಂದೇಹಗಳೂ ನಿವೃತ್ತಿಯಾಗಿ, ಕರ್ಮವು ನಶಿಸಿಹೋಗುವುದು.

೪೧. ಆಹಾ! ಶ್ರೀಕೃಷ್ಣಭಕ್ತರ ಸ್ವಭಾವವು ಬಹಳ ನಿರ್ಮಲವೂ, ಪವಿತ್ರವೂ ಆದುದು. ಬೃಹಸ್ಪತಿಯು ಪತ್ನಿಯ ಅಪಹಾರವನ್ನು ಕೇಳಿ ಮೂರ್ಛೆಗೊಂಡನೇ ಹೊರತು ಚಂದ್ರನನ್ನು ಶಪಿಸಲಿಲ್ಲವಲ್ಲ.

೪೨. ಪರಮಧಾರ್ಮಿಕನೂ, ಕೋಪರಹಿತನೂ ಮತ್ತು ಶ್ರೇಷ್ಠನೂ ಆದ ಬೃಹಸ್ಪತಿಯು ನೂರು ಶಿಶುಹತ್ಯೆಯಿಂದ ಸಂಭವಿಸುವ ಪಾಪಕ್ಕೆ ಭಾಗಿಯಾದ ಚಂದ್ರನನ್ನು ಶಪಿಸಲಿಲ್ಲ.

ನಿಶ್ವಾಸಾದ್ವೈ ಸುರಗುರೋರ್ಭ್ರಾತುರ್ಮಮ ಬೃಹಸ್ಪತೇಃ ।
ಭಸ್ಮೀಭೂತೋ ನಿಮೇಷೇಣ ಶತಚಂದ್ರೋ ಭವೇದ್ಧ್ರುವಂ ॥ ೪೩ ॥

ತಥಾಪಿ ತಂ ನೋ ಶಶಾಪ ಧರ್ಮಭಂಗಭಯೇನ ಚ ।
ತಪಸ್ಯಾ ಹೀಯತೇ ಶಪ್ತುಃ ಕೋಪಾವಿಷ್ಟಸ್ಯ ನಿತ್ಯಶಃ ॥ ೪೪ ।

ಅಹೋ ಹ್ಯತ್ರೇರಸತ್ಪುತ್ರಃ ಪರಸ್ತ್ರೀಲುಬ್ಧಕಃ ಶಠಃ ।
ತಪಸ್ವಿನೋ ವೈಷ್ಣವಸ್ಯ ಬ್ರಹ್ಮಪುತ್ರಸ್ಯ ಧೀಮತಃ ॥ ೪೫ ॥

ಧರ್ಮಿಷ್ಠಾ ಬ್ರಹ್ಮಣಃ ಪುತ್ರಾ ವೈಷ್ಣವಾ ಬ್ರಾಹ್ಮಣಾಸ್ತಥಾ ।
ಕೇಚಿದ್ದೇವಾ ದ್ವಿಜಾ ದೈತ್ಯಾಃ ಪೌತ್ರಾಶ್ಚ ತ್ರಿವಿಧಾ ಮತಾಃ ॥ ೪೬ ॥

---

೪೩. ದೇವತೆಗಳಿಗೆ ಗುರುವೂ, ನನಗೆ ಭ್ರಾತೃಸಮನೂ ಆದ ಬೃಹಸ್ಪತಿಯು ನಿಶ್ವಾಸಮಾತ್ರದಿಂದ ಒಂದು ನಿಮಿಷದಲ್ಲಿ ಚಂದ್ರನು ಬೂದಿಯಾಗಿ ನೂರು ಚೂರಾಗಬಹುದು.

೪೪. ಆದರೂ ಬೃಹಸ್ಪತಿಯು ಧರ್ಮವು ನಾಶವಾಗುವುದೆಂಬ ಭಯದಿಂದ ಅವನನ್ನು ಶಪಿಸಲಿಲ್ಲ. ಕೋಪಿಷ್ಠನಾಗಿ ಶಾಪಕೊಡುವವನ ತಪಃಶಕ್ತಿಯು ಖಂಡಿತವಾಗಿಯೂ ನಾಶವಾಗುವುದು.

೪೫. ತಪಸ್ವಿಯೂ, ಪರಮವೈಷ್ಣವನೂ, ಬ್ರಹ್ಮಪುತ್ರನೂ ಮತ್ತು ಬುದ್ಧಿವಂತನೂ ಆದ ಅತ್ರಿಮಹರ್ಷಿಗೆ ಪರಸ್ತ್ರೀಲೋಲುಪನೂ, ದುಷ್ಟನೂ ಆದ ಚಂದ್ರನು ಮಗನಾಗಿ ಜನಿಸಿದುದು ದುರ್ದೈವವೇ ಸರಿ.

೪೬. ಬ್ರಹ್ಮನ ಮಕ್ಕಳೆಲ್ಲರೂ, ಬಹಳ ಧರ್ಮಿಷ್ಠರೂ, ಪರಮವೈಷ್ಣವರೂ ಆದ ಬ್ರಾಹ್ಮಣರೆನಿಸಿದರು. ಬ್ರಹ್ಮನ ಮೊಮ್ಮಕ್ಕಳಲ್ಲಿ ಕೆಲವರು ದೇವತೆಗಳೂ ಮತ್ತೆ ಕೆಲವರು ಬ್ರಾಹ್ಮಣರೂ, ಇನ್ನೂ ಕೆಲವರು ರಾಕ್ಷಸರೂ ಎನಿಸಿಕೊಂಡರು.

**ಯೇ ಸಾತ್ವಿಕಾ ಬ್ರಾಹ್ಮಣಾಸ್ತೇ ದೇವಾ ರಾಜಸಿಕಾಸ್ತಥಾ ।**
**ದೈತ್ಯಾಸ್ತಾಮಸಿಕಾ ರೌದ್ರಾ ಬಲಿಷ್ಠಾ ಶ್ಚೋದ್ಧತಾಃ ಸದಾ ॥ ೪೭ ॥**

**ಸ್ವಧರ್ಮನಿರತಾ ವಿಪ್ರಾ ನಾರಾಯಣಪರಾಯಣಾಃ ।**
**ಶೈವಾಃ ಶಾಕ್ತಾಶ್ಚ ತೇ ದೇವಾ ದೈತ್ಯಾಃ ಪೂಜಾವಿವರ್ಜಿತಾಃ ॥ ೪೮ ॥**

**ಮುಮುಕ್ಷವೋ ವಿಷ್ಣುಭಕ್ತಾ ಬ್ರಾಹ್ಮಣಾ ದಾಸ್ಯಲಿಪ್ಸವಃ ।**
**ಐಶ್ವರ್ಯಲಿಪ್ಸವೋ ದೇವಾಶ್ಚಾಸುರಾಸ್ತಾಮಸಾಸ್ತಥಾ ॥ ೪೯ ॥**

**ಬ್ರಾಹ್ಮಣಾನಾಂ ಸ್ವಧರ್ಮಶ್ಚ ಕೃಷ್ಣಸ್ಯಾರ್ಚನಮೀಪ್ಸಿತಂ ।**
**ನಿಷ್ಕಾಮಾನಾಂ ನಿರ್ಗುಣಸ್ಯ ಪರಸ್ಯ ಪ್ರಕೃತೇರಪಿ ॥ ೫೦ ॥**

---

೪೭. ಸತ್ವಗುಣಸಂಪನ್ನರು ಬ್ರಾಹ್ಮಣರೆಂದೂ, ರಜೋಗುಣಸಂಪನ್ನರು ದೇವತೆಗಳೆಂದೂ ಹೆಸರಾಂತರು. ತಮೋಗುಣಪ್ರಧಾನರಾದವರು ಅತ್ಯುದ್ಧತರೂ, ಬಲಿಷ್ಠರೂ, ಭಯಂಕರರೂಪಿಗಳೂ ಆಗಿ ರಾಕ್ಷಸರೆನಿಸಿಕೊಂಡರು.

೪೮. ಸ್ವಧರ್ಮನಿರತರಾಗಿ ನಾರಾಯಣನಲ್ಲಿ ಭಕ್ತಿಯುಳ್ಳವರೇ ವಿಪ್ರರೆನಿಸುವರು. ಶಿವನನ್ನೂ ಮತ್ತು ಶಕ್ತಿದೇವತೆಯನ್ನು ಉಪಾಸನೆಮಾಡುವವರು ದೇವತೆಗಳು. ಯಾವ ದೇವತೆಯನ್ನೂ ಪೂಜಿಸದವರು ರಾಕ್ಷಸರು.

೪೯. ಬ್ರಾಹ್ಮಣರು ಭವಬಂಧನದಿಂದ ಮುಕ್ತಿಯನ್ನೂ, ವಿಷ್ಣುವಿನ ಸೇವೆಯನ್ನೂ ಬಯಸಿ ವಿಷ್ಣುಭಕ್ತರಾಗುವರು. ದೇವತೆಗಳು ಅಧಿಕಾರವೇ ಮುಂತಾದ ಐಶ್ವರ್ಯವನ್ನು ಬಯಸುವರು. ಆದರೆ ರಾಕ್ಷಸರು ಕೇವಲ ತಮೋಗುಣಪ್ರಧಾನರಾಗಿ ಆಸುರೀವೃತ್ತಿಯಲ್ಲಿ ತೊಡಗುವರು.

೫೦. ನಿಷ್ಕಾಮಿಗಳಾದ ಬ್ರಾಹ್ಮಣರಿಗೆ ನಿರ್ಗುಣನೂ, ಪ್ರಕೃತಿಗಿಂತ ಶ್ರೇಷ್ಠನೂ ಆದ ಶ್ರೀಕೃಷ್ಣಪರಮಾತ್ಮನನ್ನು ಪೂಜಿಸುವುದೇ ಸ್ವಧರ್ಮವೆನಿಸುವುದು.

ಯೇ ಬ್ರಾಹ್ಮಣಾ ವೈಷ್ಣವಾಶ್ಚ ಸ್ವತಂತ್ರಾಃ ಪರಮಂ ಪದಂ।
ಯೊಾನ್ತ್ಯನ್ಯೋಪಾಸಕಾಶ್ಚಾನ್ಯೈಃ ಸಾರ್ಧಂ ಚ ಪ್ರಾಕೃತೇ ಲಯೇ ॥ ೫೧ ॥

ವರ್ಣಾನಾಂ ಬ್ರಾಹ್ಮಣಾಃ ಶ್ರೇಷ್ಠಾಃ ಸಾಧವೋ ವೈಷ್ಣವಾ ಯದಿ।
ವಿಷ್ಣುಮಂತ್ರವಿಹೀನೇಭ್ಯೋ ದ್ವಿಜೇಭ್ಯೋ ಶ್ವಪಚೋ ವರಃ ॥ ೫೨ ॥

ಪರಿಪಕ್ವಾ ವಿಪಕ್ವಾ ವಾ ವೈಷ್ಣವಾಃ ಸಾಧವಶ್ಚ ತೇ।
ಸತತಂ ಪಾತಿ ತಾಂಶ್ಚೈವ ವಿಷ್ಣುಚಕ್ರಂ ಸುದರ್ಶನಂ ॥ ೫೩ ॥

ಯಥಾ ವಹ್ನೌ ಶುಷ್ಕತೃಣಂ ಭಸ್ಮೀಭೂತಂ ಭವೇತ್ಸದಾ।
ತಥಾ ಪಾಪಂ ವೈಷ್ಣವೇಷು ಕಾಷ್ಠಾನೀವ ಹುತಾಶನೇ ॥ ೫೪ ॥

---

೫೧. ಪ್ರಾಕೃತ ಪ್ರಳಯದಲ್ಲಿ ವಿಷ್ಣುಭಕ್ತರಾದ ಬ್ರಾಹ್ಮಣರು, ವಿಷ್ಣುವಿನ ಪರಮಪದವನ್ನು ಸ್ವತಂತ್ರರಾಗಿಯೂ, ಇತರ ದೇವತೆಗಳನ್ನು ಉಪಾಸಿಸುವವರು ಆಯಾ ದೇವತೆಗಳ ಮೂಲಕವಾಗಿಯೂ ಪಡೆಯುವರು.

೫೨ ಚತುರ್ವರ್ಣದವರಲ್ಲಿ ಬ್ರಾಹ್ಮಣರು ಸಾಧುಗಳೂ, ವಿಷ್ಣುಭಕ್ತರೂ ಆಗಿದ್ದರೆ ಉತ್ತಮರೆನಿಸುವರು. ವಿಷ್ಣುಮಂತ್ರೋಪಾಸಕರಲ್ಲದ ಬ್ರಾಹ್ಮಣರಿಗಿಂತ ಶ್ವಪಚನು ಎಷ್ಟೋ ಉತ್ತಮನೆನಿಸುವನು.

೫೩. ಬುದ್ಧಿಯು ಪಕ್ವವಾಗಿರಲಿ, ಇಲ್ಲದಿರಲಿ, ವಿಷ್ಣುವಿನಲ್ಲಿ ನಂಬಿಕೆಯುಳ್ಳವರೇ ಸಾಧುಗಳೆನಿಸುವರು. ಅಂಥವರನ್ನು ಸರ್ವದಾ ವಿಷ್ಣುವಿನ ಚಕ್ರವಾದ ಸುದರ್ಶನವು ಕಾಪಾಡುವುದು.

೫೪. ಅಗ್ನಿಯಲ್ಲಿ ಹಾಕಿದ ಒಣಹುಲ್ಲು ಹೇಗೆ ಕ್ಷಣದಲ್ಲಿಯೇ ಭಸ್ಮವಾಗುವುದೋ ಮತ್ತು ಕಟ್ಟಿಗೆಯು ಉರಿದು ಬೂದಿಯಾಗುವುದೋ ಹಾಗೆ ವಿಷ್ಣುಭಕ್ತರಲ್ಲಿ ಪಾಪಗಳು ಬೂದಿಯಾಗುವುವು.

**ಗುರುವಕ್ತ್ರಾದ್ವಿಷ್ಣುಮಂತ್ರೋ ಯಸ್ಯ ಕರ್ಣೇ ಪ್ರವೇಕ್ಷ್ಯತಿ ।**
**ತಂ ವೈಷ್ಣವಂ ಮಹಾಪೂತಂ ಪ್ರವದಂತಿ ಮನೀಷಿಣಃ ॥ ೫೫ ॥**

**ಪುಂಸಾಂ ಶತಂ ಪಿತೄಣಾಂ ಚ ಶತಂ ಮಾತಾಮಹಸ್ಯ ಚ ।**
**ಸ್ವಸೋದರಾಂಶ್ಚ ಜನನೀಮುದ್ಧರಂತ್ಯೇವ ವೈಷ್ಣವಾಃ ॥ ೫೬ ॥**

**ಗಯಾಯಾಂ ಪಿಂಡದಾನೇನ ಪಿಂಡದಾಃ ಪಿಂಡಭೋಜಿನಂ ।**
**ಸಮುದ್ಧರಂತಿ ಪುಂಸಾಂ ಚ ವೈಷ್ಣವಾಶ್ಚ ಶತಂ ಶತಂ ॥ ೫೭ ॥**

**ಮಂತ್ರಗ್ರಹಣಮಾತ್ರೇಣ ಜೀವನ್ಮುಕ್ತೋ ಭವೇನ್ನರಃ ।**
**ಯಮಸ್ತಸ್ಮಾನ್ಮಹಾಭೀತೋ ವೈನತೇಯಾದಿವೋರಗಃ ॥ ೫೮ ॥**

---

೫೫. ಯಾರ ಕಿವಿಯಲ್ಲಿ ವಿಷ್ಣುವಿನ ಮಂತ್ರವು ಗುರುವಿನ ಉಪದೇಶದಿಂದ ಪ್ರವೇಶಿಸುವುದೋ ಅವನನ್ನೇ ಪರಮ ಪವಿತ್ರನಾದ ವೈಷ್ಣವನೆಂದು ಬಲ್ಲವರು ಹೇಳುವರು.

೫೬. ವಿಷ್ಣುಭಕ್ತರು ತಮ್ಮ ವಂಶದಲ್ಲಿ ಹುಟ್ಟಿದ ನೂರಾರು ಪುರುಷರನ್ನೂ, ನೂರಾರು ಪಿತೃಗಳನ್ನೂ, ಮಾತಾಮಹನ ವಂಶಜರನ್ನೂ, ಸೋದರರು ಮತ್ತು ತಾಯಿಯರನ್ನೂ ಉದ್ಧರಿಸುವರು.

೫೭. ವಿಷ್ಣುಭಕ್ತರು ಗಯಾಕ್ಷೇತ್ರದಲ್ಲಿ ಪಿಂಡದಾನಮಾಡಿ, ಆ ಪಿಂಡವನ್ನು ಸ್ವೀಕರಿಸುವ ನೂರಾರು ಪಿತೃಗಳನ್ನು ಉದ್ಧರಿಸುವರು.

೫೮. ಮನುಷ್ಯನು ವಿಷ್ಣುಮಂತ್ರೋಪದೇಶವನ್ನು ಪಡೆದ ಮಾತ್ರದಿಂದಲೇ ಜೀವನ್ಮುಕ್ತನಾಗುವನು. ಗರುಡನನ್ನು ಕಂಡು ಹಾವು ದೂರ ಓಡುವಂತೆ ಯಮನು ವಿಷ್ಣುಮಂತ್ರೋಪಾಸಕನಾದ ಭಕ್ತನನ್ನು ಕಂಡು ದೂರಹೋಗುವನು.

ಪುನಂತ್ಯೇವ ಹಿ ತೀರ್ಥಾನಿ ಗಂಗಾದೀನಿ ಚ ಭಾರತೇ ।
ಕೃಷ್ಣಮಂತ್ರೋಪಾಸಕಾಶ್ಚ ಸ್ಪರ್ಶಮಾತ್ರೇಣ ವಾಕ್ಪತೇ ॥ ೫೯ ॥

ಪಾಪಾನಿ ಪಾಪಿನಾಂ ತೀರ್ಥೇ ಯಾನಿ ಸಂತಿ ಪ್ರಭವಂತಿ ಚ ।
ನಶ್ಯಂತಿ ತಾನಿ ಸರ್ವಾಣಿ ವೈಷ್ಣವಸ್ಪರ್ಶಮಾತ್ರತಃ ॥ ೬೦ ॥

ಕೃಷ್ಣಮಂತ್ರೋಪಾಸಕಾನಾಂ ರಜಸಾ ಪಾದಪದ್ಮಯೋಃ ।
ಸದ್ಯೋ ಮುಕ್ತಾಃ ಪಾತಕೇಭ್ಯಃ ಕೃತ್ಸ್ನಾ ಪೂತಾ ವಸುಂಧರಾ ॥ ೬೧ ॥

ವಾಯುಶ್ಚ ಪವನೋ ವಹ್ನಿಃ ಸೂರ್ಯಃ ಸರ್ವಂ ಪುನಾತಿ ಚ ।
ಏತೇ ಪೂತಾ ವೈಷ್ಣವಾನಾಂ ಸ್ಪರ್ಶಮಾತ್ರೇಣ ಲೀಲಯಾ ॥ ೬೨ ॥

ಅಹಂ ಬ್ರಹ್ಮಾ ಚ ಶೇಷಶ್ಚ ಧರ್ಮಃ ಸಾಕ್ಷೀ ಚ ಕರ್ಮಣಾಂ ।
ಏತೇ ದೃಷ್ಟ್ವಾಶ್ಚ ವಾಂಛಂತಿ ವೈಷ್ಣವಾನಾಂ ಸಮಾಗಮಂ ॥ ೬೩ ॥

---

೫೯. ಭರತಖಂಡದಲ್ಲಿರುವ ಗಂಗಾ ಮುಂತಾದ ನದಿಗಳು ತನ್ನಲ್ಲಿ ಸ್ನಾನ ಮಾಡಿದವರನ್ನು ಪವಿತ್ರಗೊಳಿಸುವುವು. ಆದರೆ ಕೃಷ್ಣಮಂತ್ರೋಪಾಸಕರಾದ ಭಕ್ತರು ತಮ್ಮ ಸ್ಪರ್ಶಮಾಡಿದವರನ್ನೂ ಪವಿತ್ರಮಾಡುವರು.

೬೦. ಪಾಪಿಗಳು ಪುಣ್ಯತೀರ್ಥಗಳಲ್ಲಿ ಮಾಡಿದ ಪಾಪಗಳೆಲ್ಲವೂ ವಿಷ್ಣುಭಕ್ತರನ್ನು ಸ್ಪರ್ಶಮಾಡಿದ ಮಾತ್ರದಿಂದಲೇ ಪರಿಹಾರವಾಗುವುವು.

೬೧. ಕೃಷ್ಣಮಂತ್ರೋಪಾಸನೆಮಾಡುವವರ ಪಾದಕಮಲಗಳ ಧೂಳಿಯ ಸ್ಪರ್ಶಮಾತ್ರದಿಂದ ಪಾಪಿಗಳು ಪಾಪದಿಂದ ಪಾರಾಗುವರು. ಅವರ ಸ್ಪರ್ಶದಿಂದ ಭೂಮಂಡಲವೂ ಪವಿತ್ರವಾಗುವುದು.

೬೨. ವಾಯು, ಅಗ್ನಿ ಮತ್ತು ಸೂರ್ಯ, ಈ ದೇವತೆಗಳು ಅಪವಿತ್ರವಾದ ವಸ್ತುಗಳನ್ನೆಲ್ಲ ಪವಿತ್ರಗೊಳಿಸುವರು. ಇವರೂ ಕೂಡ ವಿಷ್ಣುಭಕ್ತರ ಸ್ಪರ್ಶಮಾತ್ರದಿಂದ ಪವಿತ್ರರಾಗುವರು.

೬೩. ನಾನು, ಬ್ರಹ್ಮ, ಆದಿಶೇಷ ಮತ್ತು ಕರ್ಮಸಾಕ್ಷಿಯಾದ ಧರ್ಮ ಎಲ್ಲರೂ ವಿಷ್ಣುಭಕ್ತರ ಸಹವಾಸವನ್ನು ಸರ್ವದಾ ಬಯಸುತ್ತೇವೆ

ಫಲಂ ಕರ್ಮಾನುರೂಪೇಣ ಸರ್ವೇಷಾಂ ಭಾರತೇ ಭವೇತ್ ।
ನ ಭವೇತ್ತದ್ವೈಷ್ಣವೇ ಚ ಸಿದ್ಧಧಾನ್ಯೇ ಯಥಾಙ್ಕುರಂ ॥ ೬೪ ॥

ಹಂತಿ ತೇಷಾಂ ಕರ್ಮ ಪೂರ್ವಂ ಭಕ್ತಾನಾಂ ಭಕ್ತವತ್ಸಲಃ ।
ಕೃಪಯಾ ಸ್ವಪದಂ ತೇಭ್ಯೋ ದದಾತ್ಯೇವ ಕೃಪಾನಿಧಿಃ ॥ ೬೫ ॥

ತೇಜಸ್ವಿನಾಂ ಚ ಪ್ರವರಂ ವೈಷ್ಣವಂ ಭೃಗುನಂದನಂ ।
ಸ ಚಂದ್ರೋ ದುರ್ಬಲೋ ಭೀತಃ ಶುಕ್ರಂ ಚ ಶರಣಂ ಯಯೌ ॥ ೬೬ ॥

ಸುದರ್ಶನೋ ಬಲಿಷ್ಠಂ ಚ ಶುಕ್ರಂ ಜೇತುಂ ನ ಶಕ್ತಿಮಾನ್ ।
ತಥಾಪಿ ಚೋದ್ಧರಿಷ್ಯಾಮಿ ತಾರಾಂ ಮಂತ್ರೇಣ ಯದ್ಗುರೋಃ ॥ ೬೭ ॥

---

೬೪. ಭರತಖಂಡದಲ್ಲಿ ಎಲ್ಲರಿಗೂ ಅವರವರ ಕರ್ಮಾನುಗುಣವಾಗಿ ಫಲವು ದೊರೆಯುವುದು. ಆದರೆ ವಿಷ್ಣುಭಕ್ತರಿಗೆ, ಪರಮಾತ್ಮನ ಸೇವಾರೂಪವಾದ ನಿಶ್ಚಿತ ಫಲವೊಂದೇ ಹೊರತು ಬೇರೆಯ ಫಲವಿಲ್ಲ ಆಗತಾನೇ ಪಕ್ವವಾಗಿರುವ ಧಾನ್ಯದಲ್ಲಿ ಮೊಳಕೆಯುಂಟಾಗದಿರುವಂತೆ ವಿಷ್ಣುಭಕ್ತರು ಮಾಡಿದ ಪುಣ್ಯಪಾಪಕರ್ಮಗಳಲ್ಲಿ ಅವರಿಗೆ ಲೇಶಸಂಬಂಧವೂ ಇರುವುದಿಲ್ಲ

೬೫. ಭಕ್ತವತ್ಸಲನೂ, ದಯಾಮಯನೂ ಆದ ಪರಮಾತ್ಮನು ತನ್ನ ಭಕ್ತರ ಶುಭಾಶುಭಕರ್ಮವನ್ನೆಲ್ಲ ನಿರ್ಮೂಲಗೊಳಿಸಿ, ತನ್ನ ದಿವ್ಯಪದವಿಯನ್ನು ಅವರಿಗೆ ಅನುಗ್ರಹಿಸುವನು.

೬೬. ವಿಷ್ಣುಭಕ್ತನೂ, ತೇಜಸ್ವಿಗಳಲ್ಲಿ ಶ್ರೇಷ್ಠನೂ, ಭೃಗುಪುತ್ರನೂ ಆದ ಶುಕ್ರಾಚಾರ್ಯನನ್ನು ದುರ್ಬಲನೂ, ಭಯಗ್ರಸ್ತನೂ ಆದ ಚಂದ್ರನು ಶರಣು ಹೊಕ್ಕನು.

೬೭. ವಿಷ್ಣುಭಕ್ತನಾದ ಶುಕ್ರಾಚಾರ್ಯನನ್ನು ವಿಷ್ಣುವಿನ ಸುದರ್ಶನ ಚಕ್ರವು ಜಯಿಸಲಾರದು. ಆದರೂ ಗುರೂಪದಿಷ್ಟವಾದ ಮಂತ್ರದಿಂದ ತಾರೆಯನ್ನು ಉದ್ಧರಿಸುವೆನು.

ಭಜ ಸತ್ಯಂ ಪರಂ ಬ್ರಹ್ಮ ಕೃಷ್ಣಮಾತ್ಮಾನಮೀಶ್ವರಂ ।
ಸುಪ್ರಸನ್ನೇ ಭಗವತಿ ಪತ್ನೀಂ ಪ್ರಾಪ್ಸ್ಯಸಿ ಲೀಲಯಾ ॥ ೧೮ ॥

ಮಂತ್ರಂ ತಸ್ಯ ಪ್ರದಾಸ್ಯಾಮಿ ಭ್ರಾತಃ ಕಲ್ಪತರುಂ ಪರಂ ।
ಕೋಟಿಜನ್ಮಾಘನಿಘ್ನಂ ಚ ಸರ್ವಮಂಗಲಕಾರಣಂ ॥ ೧೯ ॥

ಬ್ರಹ್ಮಾದಿಸ್ತಂಬಪರ್ಯಂತಂ ನಶ್ವರಂ ಜಲಬಿಂಬವತ್ ।
ಶರಣಂ ಯಾಹಿ ಗೋವಿಂದಂ ಪರಮಾತ್ಮಾನಮೀಶ್ವರಂ ।
ತಾವದ್ಭವೇಚ್ಛಾ ಭೋಗೇಚ್ಛಾ ಸ್ತ್ರೀಸುಖೇಚ್ಛಾ ನೃಣಾಮಿಹ ॥ ೨೦ ॥

ಯಾವದ್ಗುರುಮುಖಾಂಭೋಜಾನ್ನ ಪ್ರಾಪ್ನೋತಿ ಮನುಂ ಹರೇಃ ।
ಸಂಪ್ರಾಪ್ಯ ದುರ್ಲಭಂ ಮಂತ್ರಂ ವಿತೃಷ್ಣೋ ಹಿ ಭವೇನ್ನರಃ ॥ ೨೧ ॥

---

೧೮. ನೀನೂ ಕೂಡ, ಸತ್ಯಸ್ವರೂಪನೂ, ಪರಬ್ರಹ್ಮನೂ ಆದ ಶ್ರೀಕೃಷ್ಣ ಪರಮಾತ್ಮನನ್ನು ಭಜಿಸು. ಆ ಭಗವಂತನು ನಿನ್ನ ವಿಷಯದಲ್ಲಿ ಪ್ರಸನ್ನನಾದರೆ, ಪುನಃ ನಿನ್ನ ಪತ್ನಿಯನ್ನು ಸುಲಭವಾಗಿ ಪಡೆಯುವೆ

೧೯. ಎಲೈ ಸಹೋದರನೇ, ಕಲ್ಪವೃಕ್ಷದಂತೆ ಇಷ್ಟಾರ್ಥಫಲಪ್ರದವೂ, ಕೋಟಿಜನ್ಮಗಳ ಪಾಪನಾಶಕವೂ, ಸರ್ವಮಂಗಳದಾಯಕವೂ ಆದ ಶ್ರೀಕೃಷ್ಣ ಮಂತ್ರವನ್ನು ನಿನಗೆ ಉಪದೇಶಿಸುವೆನು.

೨೦. ಬ್ರಹ್ಮನು ಮೊದಲುಗೊಂಡು ಹುಲ್ಲುಕಡ್ಡಿಯವರೆಗೆ ಸಕಲವೂ, ನೀರ ಮೇಲಣ ಗುಳ್ಳೆಯಂತೆ ಕ್ಷಣಿಕವಾದುದು. ಆದುದರಿಂದ ಪರಮಾತ್ಮನಾದ ಗೋವಿಂದನನ್ನು ಶರಣುಹೊಂದು.

೨೧. ಗುರುವಿನ ಮುಖಪದ್ಮದಿಂದ ಶ್ರೀಹರಿಯ ಮಂತ್ರೋಪದೇಶವನ್ನು ಪಡೆಯುವವರೆಗೆ ಸಂಸಾರದ ಭೋಗವನ್ನೂ, ಸ್ತ್ರೀಸುಖವನ್ನೂ ಮನುಜನು ಬಯಸುವನು. ಎಲ್ಲರಿಗೂ ಸುಲಭವಲ್ಲದ ಈ ಮಂತ್ರವನ್ನು ಉಪದೇಶ ಪಡೆದ ಮೇಲೆ ಮನುಜನು ವಿಷಯಾಭಿಲಾಷೆಯನ್ನು ತ್ಯಜಿಸುವನು.

ಇಂದ್ರತ್ವಮಮರತ್ವಂ ಚ ನ ಹಿ ವಾಂಛಂತಿ ವೈಷ್ಣವಾಃ ।
ನ ಹಿ ವಾಂಛಂತಿ ಮೋಕ್ಷಂ ಚ ದಾಸ್ಯಂ ಭಕ್ತಿಂ ವಿನಾ ಹರೇಃ ॥ ೬೨ ॥

ಭಕ್ತಿನಿರ್ಮಥನಂ ಭಕ್ತೋ ಮೋಕ್ಷಂ ನೋ ವಾಂಛತಿ ಪ್ರಭೋಃ ।
ಜ್ಞಾನಂ ಮೃತ್ಯುಂಜಯತ್ವಂ ಚ ಸರ್ವಸಿದ್ಧಿಂ ತದೀಪ್ಸಿತಂ ॥ ೬೩ ॥

ವಾಕ್ಸಿದ್ಧಿಂ ಚೈವ ಧಾತೃತ್ವಂ ಭಕ್ತಾನಾಂ ನ ಹಿ ವಾಂಛಿತಂ ।
ಭಕ್ತಿಂ ವಿಹಾಯ ಕೃಷ್ಣಸ್ಯ ವಿಷಯಂ ಯೋ ಹಿ ವಾಂಛತಿ ॥ ೬೪ ॥

ವಿಷಮತ್ತಿ ಸುಧಾಂ ತ್ಯಕ್ತ್ವಾ ವಂಚಿತೋ ವಿಷ್ಣುಮಾಯಯಾ ।
ಅಹಂ ಬ್ರಹ್ಮಾ ಚ ವಿಷ್ಣುಶ್ಚ ಧರ್ಮೋಽನಂತಶ್ಚ ಕಶ್ಯಪಃ ॥ ೬೫ ॥

ಕಪಿಲಶ್ಚ ಕುಮಾರಶ್ಚ ನರನಾರಾಯಣಾವೃಷೀ ।
ಸ್ವಾಯಂಭುವೋ ಮನುಶ್ಚೈವ ಪ್ರಹ್ಲಾದಶ್ಚ ಪರಾಶರಃ ॥ ೬೬ ॥

---

೬೨. ವಿಷ್ಣುಭಕ್ತರು ಶ್ರೀಹರಿಯ ಸೇವೆಯನ್ನಲ್ಲದೆ ಇಂದ್ರಪದವಿಯನ್ನಾಗಲೀ, ದೇವತಾಪದವಿಯನ್ನಾಗಲೀ ಕಡೆಗೆ, ಮುಕ್ತಿಯನ್ನೇ ಆಗಲಿ ಬಯಸುವುದಿಲ್ಲ.

೬೩–೬೪. ವಾಕ್ಸಿದ್ಧಿಯಾಗಲೀ, ಜಗತ್ಸೃಷ್ಟಿಕರ್ತೃತ್ವವಾಗಲೀ, ಭಕ್ತರಿಗೆ ಬೇಕಾಗಿಲ್ಲ. ಯಾರು ಶ್ರೀಕೃಷ್ಣಭಕ್ತಿಯನ್ನು ಬಿಟ್ಟು ವಿಷಯಸುಖವನ್ನು ಬಯಸುವರೋ ಅಂಥವರು ವಿಷ್ಣುವಿನ ಮಾಯೆಗೆ ಸಿಲುಕಿ, ಅಮೃತಪಾನವನ್ನು ಬಿಟ್ಟು ವಿಷಪಾನಮಾಡಿದಂತಾಗುವುದು.

೬೫–೬೬. ನಾನು, ಬ್ರಹ್ಮ, ವಿಷ್ಣು, ಧರ್ಮಪುರುಷ, ಅನಂತ, ಕಶ್ಯಪ, ಕಪಿಲ, ಷಣ್ಮುಖ ಮುಂತಾದವರೂ, ನರನಾರಾಯಣ ಋಷಿಗಳೂ, ಸ್ವಾಯಂಭುವ ಮನು, ಪ್ರಹ್ಲಾದ ಮತ್ತು ಪರಾಶರರೂ ಶ್ರೀಕೃಷ್ಣನ ಭಕ್ತರು.

ಭೃಗುಃ ಶುಕ್ರಶ್ಚ ದುರ್ವಾಸಾ ವಸಿಷ್ಠಃ ಕ್ರತುರಂಗಿರಾಃ ।
ಬಲಿಶ್ಚ ವಾಲಖಿಲ್ಯಾಶ್ಚ ವರುಣಶ್ಚ ಹುತಾಶನಃ ॥ ೭೭ ॥

ವಾಯುಃ ಸೂರ್ಯಶ್ಚ ಗರುಡೋ ದಕ್ಷೋ ಗಣಪತಿಃ ಸ್ವಯಂ ।
ಏತೇ ಪರಾ ಭಕ್ತವರಾಃ ಕೃಷ್ಣಸ್ಯ ಪರಮಾತ್ಮನಃ ॥ ೭೮ ॥

ಯೇ ಚ ತಸ್ಯ ಕಲಾಃ ಶ್ರೇಷ್ಠಾಸ್ತೇ ತದ್ಭಕ್ತಿಪರಾಯಣಾಃ ।
ಇತ್ಯುಕ್ತ್ವಾ ಶಂಕರಸ್ತಸ್ಮೈ ದದೌ ಕಲ್ಪತರುಂ ಮನುಂ ॥ ೭೯ ॥

ಲಕ್ಷ್ಮೀಮಾಯಾ ಕಾಮಬೀಜಂ ಜೇಸ್ತಂ ಕೃಷ್ಣಪದಂ ಮುನೇ ।
ವರಂ ಪೂಜಾವಿಧಾನಂ ಚ ಸ್ತೋತ್ರಂ ಚ ಕವಚಂ ಮುನೇ ॥ ೮೦ ॥

ತತ್ಪುರಶ್ಚರಣಂ ಧ್ಯಾನಂ ಶುದ್ಧೇ ಮಂದಾಕಿನೀತಟೇ ।
ಗುರುಃ ಸಂಪ್ರಾಪ್ಯ ತಂ ಮಂತ್ರಂ ಶಂಕರಾಚ್ಚ ಜಗದ್ಗುರೋಃ ॥ ೮೧ ॥

---

೭೭–೭೮. ಭೃಗು, ಶುಕ್ರ, ದೂರ್ವಾಸ, ವಸಿಷ್ಠ, ಕ್ರತು, ಅಂಗಿರಸ್ಸು, ಬಲಿ, ವಾಲಖಿಲ್ಯ, ವರುಣ, ಅಗ್ನಿ, ವಾಯು, ಸೂರ್ಯ, ಗರುಡ, ದಕ್ಷ ಮತ್ತು ಗಣಪತಿ ಇವರುಗಳೂ ಕೂಡ ಶ್ರೀಕೃಷ್ಣಪರಮಾತ್ಮನ ಭಕ್ತಶ್ರೇಷ್ಠರು.

೭೯. ಯಾರು ಪರಮಾತ್ಮನ ಕಲೆಯಿಂದ ಜನಿಸಿ ಶ್ರೇಷ್ಠರೆನಿಸಿರುವರೋ ಅವರೆಲ್ಲರೂ ಪರಮಾತ್ಮನ ಭಕ್ತರು. ಈ ರೀತಿಯಾಗಿ ಶಂಕರನು ನುಡಿದು ಬೃಹಸ್ಪತಿಗೆ ಕಲ್ಪವೃಕ್ಷದಂತೆ ವಾಂಛಿತ ಫಲದಾಯಕವಾದ ಮಂತ್ರವೊಂದನ್ನು ಉಪದೇಶಿಸಿದನು.

೮೦–೮೧. ಲಕ್ಷ್ಮೀ, ಮಾಯಾ ಮತ್ತು ಕಾಮವೇ ಬೀಜಸ್ವರೂಪವಾಗಿರುವ 'ಶ್ರೀಂ, ಹ್ರೀಂ, ಕ್ಲೀಂ, ಶ್ರೀಕೃಷ್ಣಾಯ ಸ್ವಾಹಾ' ಎಂಬುದೇ ಆ ಮಂತ್ರವು. ಎಲೈ ನಾರದನೇ, ಈಶ್ವರನು ಈ ಮಂತ್ರೋಪದೇಶ ಮಾಡಿದುದಲ್ಲದೆ, ಪೂಜಾ ಕ್ರಮವನ್ನೂ, ಸ್ತೋತ್ರಕವಚಗಳನ್ನೂ, ಅದರ ಪುರಶ್ಚರಣಾದಿಕ್ರಮವನ್ನೂ, ಧ್ಯಾನ ವನ್ನೂ ಪವಿತ್ರವಾದ ಗಂಗೆಯ ದಡದಲ್ಲಿ ಉಪದೇಶಿಸಿದನು.

ವಿಷಣ್ಣೋ ಹಿ ಭವಾಬ್ಧೌ ಚ ಬಭೂವ ತಮುವಾಚ ಹ ॥ ೮೨ ॥

॥ ಬೃಹಸ್ಪತಿರುವಾಚ ॥

ಆಜ್ಞಾಂ ಕುರು ಜಗನ್ನಾಥ ಯಾಮಿ ತಪ್ತುಂ ಹರೇಸ್ತಪಃ ।
ತಾರಾ ತಿಷ್ಠತು ತತ್ರೈವ ನ ತಯಾ ಮೇ ಪ್ರಯೋಜನಂ ॥ ೮೩ ॥

ಪಶ್ಯಾಮಿ ವಿಷತುಲ್ಯಂ ಚ ಸರ್ವಂ ನಶ್ವರಮೀಶ್ವರ ।
ಶ್ರೀಕೃಷ್ಣಂ ಶರಣಂ ಯಾಮಿ ಸತ್ಯಂ ನಿತ್ಯಂ ಚ ನಿರ್ಗುಣಂ ॥ ೮೪ ॥

॥ ಶ್ರೀ ಮಹಾದೇವ ಉವಾಚ ॥

ಪರಗ್ರಸ್ತಾಂ ಪ್ರಿಯಂ ತ್ಯಕ್ತ್ವಾ ನ ಪ್ರಶಂಸ್ಯಂ ತಪೋ ಮುನೇ ।
ಸಂಭಾವಿತಸ್ಯ ದುಷ್ಕೀರ್ತಿ ಮರಣಾದತಿರಿಚ್ಯತೇ ॥ ೮೫ ॥

---

೮೨. ಜಗದ್ಗುರುವಾದ ಶಂಕರನಿಂದ ಬೃಹಸ್ಪತಿಯು ಈ ಮಂತ್ರವನ್ನು ಉಪದೇಶವಾಗಿ ಪಡೆದು, ಸಂಸಾರಸಾಗರದಲ್ಲಿ ಬೇಸರಗೊಂಡವನಾಗಿ ಅವನನ್ನು ಕುರಿತಿಂತೆಂದನು.

೮೩. ಬೃಹಸ್ಪತಿ :—ಎಲೈ ಜಗದೊಡೆಯನಾದ ಶಂಕರನೇ, ನೀನು ಅಪ್ಪಣೆ ಕೊಟ್ಟರೆ ನಾನು ಶ್ರೀಕೃಷ್ಣನನ್ನು ಕುರಿತು ತಪಸ್ಸುಮಾಡುವೆನು. ಸಂಸಾರದಲ್ಲಿ ವಿರಕ್ತನಾದ ನನಗೆ ತಾರೆಯಿಂದ ಯಾವ ಪ್ರಯೋಜನವೂ ಇಲ್ಲವಾಗಿ ಅವಳು ಚಂದ್ರನೊಡನೆಯೇ ಇರಲಿ.

೮೪. ಎಲೈ ಈಶ್ವರನೇ, ನಶ್ವರವಾದ ಈ ಪ್ರಪಂಚವೆಲ್ಲವೂ ನನಗೆ ವಿಷಸದೃಶವಾಗಿ ತೋರುವುದು ಆದುದರಿಂದ ಸತ್ಯಸ್ವರೂಪನೂ, ನಿತ್ಯನೂ, ನಿರ್ಗುಣನೂ ಆದ ಶ್ರೀಕೃಷ್ಣನನ್ನು ಶರಣುಹೋಗುವೆನು.

೮೫. ಮಹಾದೇವ:—ಎಲೈ ಬೃಹಸ್ಪತಿಯೇ, ಪರಪುರುಷಾಧೀನಳಾಗಿರುವ ಪತ್ನಿಯನ್ನು ಬಿಟ್ಟು ತಪಸ್ಸುಮಾಡಲು ಹೋಗುವುದು ಅನುಚಿತ. ನಮ್ಮ ವಿಷಯದಲ್ಲಿ ಉಂಟಾಗುವ ಅಪವಾದವನ್ನು ಕೇಳುವುದಕ್ಕಿಂತ ಸಾಯುವುದೇ ಮೇಲು.

ಪುರೋ ಗಚ್ಛ ಮಹಾಭಾಗ ತಮೇತಂ ನರ್ಮದಾತಟಂ।
ಯತ್ರ ಬ್ರಹ್ಮಾದಯೋ ದೇವಾಸ್ತತ್ರಾಹಂ ಯಾಮಿ ಸತ್ವರಂ ॥ ೮೬ ॥

ಶಿವಸ್ಯ ವಚನಂ ಶ್ರುತ್ವಾ ಯಯೌ ಸುರಗುರುಃ ಸ್ವಯಂ ।
ಆಯಯೌ ಚ ಮಹಾಭಾಗಃ ಶಂಕರೋ ನರ್ಮದಾತಟಂ ॥ ೮೭ ॥

ಸಗಣಂ ಶಂಕರಂ ದೃಷ್ಟ್ವಾ ಪ್ರಸನ್ನವದನೇಕ್ಷಣಂ ।
ಪ್ರಣೇಮುರ್ದೇವತಾಃ ಸರ್ವಾ ಮನವೋ ಮುನಯಸ್ತಥಾ ॥ ೮೮ ॥

ನನಾಮ ಶಂಭುಃ ಶಿರಸಾ ವಿಷ್ಣುಂ ಚ ಕಮಲೋದ್ಭವಂ ।
ದದತುಸ್ತೌ ಮಹೇಶಾಯ ಪ್ರೇಮ್ಣಾಲಿಂಗನಮಾಸನಂ ॥ ೮೯ ॥

ಏತಸ್ಮಿನ್ನಂತರೇ ತತ್ರ ಚಾಗಮಚ್ಚ ಬೃಹಸ್ಪತಿಃ ।
ಪ್ರಣನಾಮ ಮಹಾದೇವಂ ವಿಷ್ಣುಂ ಚ ಕಮಲೋದ್ಭವಂ ॥ ೯೦ ॥

---

೮೬. ಆದ್ದರಿಂದ ಎಲೈ ಮಹಾತ್ಮನೇ. ಮೊದಲು ನರ್ಮದಾನದಿಯ ದಡಕ್ಕೆ ಹೋಗು. ಬ್ರಹ್ಮಾದಿಸಕಲದೇವತೆಗಳೂ ಸೇರಿರುವ ಅಲ್ಲಿಗೆ ನಾನೂ ಜಾಗ್ರತೆಯಾಗಿ ಬರುವೆನು.

೮೭. ಹೀಗೆ ಹೇಳಿದ ಶಿವನ ನುಡಿಯನ್ನು ಕೇಳಿ ಬೃಹಸ್ಪತಿಯು ಅಲ್ಲಿಗೆ ತೆರಳಿದನು. ಇತ್ತ ಪೂಜ್ಯನಾದ ಶಂಕರನೂ ಕೂಡ ನರ್ಮದಾನದಿಯ ದಡಕ್ಕೆ ಬಂದನು.

೮೮. ತನ್ನ ಪ್ರಮಥಗಣಗಳೊಡಗೂಡಿ ಶಂಕರನು ಪ್ರಸನ್ನಮುಖನಾಗಿ ಬಂದಿರುವುದನ್ನು ನೋಡಿ ಸಕಲ ದೇವತೆಗಳೂ, ಮನುಗಳೂ ಮತ್ತು ಮುನಿಗಳೂ ಅವನಿಗೆ ನಮಸ್ಕರಿಸಿದರು.

೮೯. ಅನಂತರ ಶಂಕರನು ವಿಷ್ಣುವಿಗೂ ಕಮಲಸಂಭವ (ಬ್ರಹ್ಮ)ನಿಗೂ ತಲೆಬಾಗಿ ನಮಸ್ಕರಿಸಿದನು. ಆಗ ವಿಷ್ಣುವು ಮಹೇಶ್ವರನನ್ನು ಪ್ರೇಮದಿಂದ ಅಪ್ಪಿಕೊಂಡು, ಕುಳಿತುಕೊಳ್ಳಲು ಪೀಠವನ್ನು ಕೊಟ್ಟನು.

೯೦. ಅಷ್ಟುಹೊತ್ತಿಗೆ ಸರಿಯಾಗಿ ಅಲ್ಲಿಗೆ ಬೃಹಸ್ಪತಿಯು ಬಂದು ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ವಂದಿಸಿದನು.

ಸೂರ್ಯಂ ಧರ್ಮಮನಂತಂ ಚ ನರಂ ಮಾಂ ಚ ಮುನೀಶ್ವರಾನ್ ।
ಸ್ವಗುರುಂ ಪಿತರಂ ಭಕ್ತ್ಯಾ ಚಾವಸತ್ತತ್ರ ಸಂಸದಿ　　॥ ೯೧ ॥

ಸಂಚಿಂತ್ಯ ಮನಸಾ ಯುಕ್ತಿಮೂಚೇ ತತ್ರ ಚ ಸಂಸದಿ ।
ಸ್ವಯಂ ವಿಷ್ಣುಶ್ಚ ಭಗವಾನ್ಬ್ರಹ್ಮಾಣಂ ಚಂದ್ರಶೇಖರಂ　　॥ ೯೨ ॥

॥ ವಿಷ್ಣುರುವಾಚ ॥

ಯುವಾಂ ಚ ಮುನಯಶ್ಚೈವ ಸಮುದ್ರಪುಲಿನಂ ದ್ರುತಂ ।
ಶುಕ್ರಂ ಕಂಚಿಚ್ಚ ಮಧ್ಯಸ್ಥಂ ಪ್ರಸ್ಥಾಪಯಿತುಮರ್ಹತಃ　　॥ ೯೩ ॥

ವಿಗ್ರಹೇಣೈವ ವಿಷಮಂ ಭವಿಷ್ಯತಿ ನ ಸಂಶಯಃ ।
ಮದಾಶಿಷಾ ಸುರಗುರುಸ್ತಾರಾಂ ಪ್ರಾಪ್ಸ್ಯತಿ ನಿಶ್ಚಿತಂ　　॥ ೯೪ ॥

---

೯೧. ಅಲ್ಲದೆ ಸೂರ್ಯ, ಧರ್ಮ, ಅನಂತ ಮುಂತಾದ ದೇವತೆಗಳಿಗೂ ನರನಾರಾಯಣಾದಿ ಮುನಿಗಳಿಗೂ, ತನ್ನ ಗುರು, ತಂದೆ ಮುಂತಾದವರಿಗೂ ಭಕ್ತಿಯಿಂದ ನಮಸ್ಕರಿಸಿ ಆ ಸಭೆಯಲ್ಲಿ ಮಂಡಿಸಿದನು.

೯೨. ಆಗ ಭಗವಂತನಾದ ವಿಷ್ಣುವು ತನ್ನ ಮನಸ್ಸಿನಲ್ಲಿಯೇ ಯುಕ್ತಿಯನ್ನು ಯೋಚಿಸಿ ಬ್ರಹ್ಮನನ್ನೂ, ಶಿವನನ್ನೂ ಕುರಿತು ಆ ಸಭೆಯಲ್ಲಿ ಇಂತು ನುಡಿದನು.

೯೩. ವಿಷ್ಣು :—ನೀವೂ ಮುನಿಗಳೂ ಸೇರಿ ಸಮುದ್ರದ ಮರಳಿನ ಮಧ್ಯದಲ್ಲಿರುವ ಶುಕ್ರಾಚಾರ್ಯನ ಹತ್ತಿರಕ್ಕೆ ಜಾಗ್ರತೆಯಾಗಿ ಯಾರನ್ನಾದರೂ ಮಧ್ಯಸ್ಥಿಕೆ ಮಾಡಲು ಕಳುಹಿಸಿ.

೯೪. ಯುದ್ಧಮಾಡುವುದರಿಂದ ಅನರ್ಥವುಂಟಾಗುವುದರಲ್ಲಿ ಸಂದೇಹವಿಲ್ಲ. ನನ್ನ ಆಶೀರ್ವಾದದಿಂದ ಬೃಹಸ್ಪತಿಯು ತಾರೆಯನ್ನು ನಿಶ್ಚಯವಾಗಿಯೂ ಪಡೆಯುವನು.

ಸುರೈಃಸ್ತುತಶ್ಚ ಸಂತುಷ್ಟಃ ಶುಕ್ರಾಚಾರ್ಯೋ ಭವಿಷ್ಯತಿ।
ಸುರೈಃ ಶುಕ್ರೋ ಹಿ ನ ಜಿತಃ ಕೃಷ್ಣಚಕ್ರೇಣ ರಕ್ಷಿತಃ ॥ ೯೫ ॥

ಯುವಾಭ್ಯಾಂ ಪ್ರಾರ್ಥ್ಯಮಾನೋಽಹಂ ಯುವಯೋಃ ಸ್ತವನೇನ ಚ।
ಶ್ವೇತದ್ವೀಪಾದಾಗತೋಽಸ್ಮಿ ಪರಿತುಷ್ಟಃ ಸ್ತವೇನ ಚ।
ಶುಕ್ರಾಶ್ರಮಸಮೀಪಂ ಸರ್ವಾ ಗಚ್ಛಂತು ದೇವತಾಃ ॥ ೯೬ ॥

ರಿಪುರ್ಬಲಿಷ್ಠಃ ಸ್ತೋತ್ರೇಣ ವಶೀಭೂತ ಇತಿ ಶ್ರುತಿಃ।
ಇತ್ಯುಕ್ತ್ವಾ ಜಗತಾಂ ನಾಥಸ್ತತ್ರೈವಾಂತರಧೀಯತ ॥ ೯೭ ॥

ಸ್ತುತೋ ಬ್ರಹ್ಮಾದಿಭಿರ್ದೇವೈಃ ಪ್ರಣತೈಃ ಪರಿಪೂಜಿತಃ।
ಗತೇ ಚ ಜಗತಾಂ ನಾಥೇ ಶ್ವೇತದ್ವೀಪಂ ಚ ನಾರದ ॥ ೯೮ ॥

---

೯೫. ದೇವತೆಗಳು ಶುಕ್ರಾಚಾರ್ಯನನ್ನು ಹೊಗಳಿದರೆ ಆತನು ಸಂತುಷ್ಟನಾಗುವನು. ಏಕೆಂದರೆ ದೇವತೆಗಳು ಕೃಷ್ಣಚಕ್ರದ ರಕ್ಷಣೆಗೊಳಗಾದ ಶುಕ್ರಾಚಾರ್ಯನನ್ನು ಗೆಲ್ಲಲಾಗಲಿಲ್ಲ.

೯೬. ನಿಮ್ಮಿಬ್ಬರ ಸ್ತೋತ್ರಕ್ಕೂ, ಪ್ರಾರ್ಥನೆಗೂ ಮೆಚ್ಚಿ ನಿಮಗೆ ಅನುಗ್ರಹಿಸಲು ಶ್ವೇತದ್ವೀಪದಿಂದ ನಾನು ಬಂದಿರುವೆನು. ಆದುದರಿಂದ ನೀವೆಲ್ಲರೂ ಶುಕ್ರಾಚಾರ್ಯನ ಆಶ್ರಮದ ಸಮೀಪಕ್ಕೆ ದೇವತೆಗಳೊಡನೆ ತೆರಳಿ.

೯೭. ನಮಗಿಂತ ಬಲಶಾಲಿಯಾದ ಶತ್ರುವೂ ಕೂಡ ಸ್ತೋತ್ರದಿಂದ ವಶನಾಗುವನೆಂದು ಶ್ರುತ್ಯುಕ್ತವಾಗಿದೆ ಈ ರೀತಿಯಾಗಿ ನುಡಿದು ಜಗದೊಡೆಯನಾದ ವಿಷ್ಣುವು ಅಲ್ಲಿಯೇ ಅಂತರ್ಧಾನಹೊಂದಿದನು.

೯೮. ಇಂತು ಬ್ರಹ್ಮಾದಿಸಕಲದೇವತೆಗಳಿಂದ ಸ್ತುತನೂ, ಪೂಜಿತನೂ, ವಂದಿತನೂ ಆದ ಪರಮಾತ್ಮನು ಶ್ವೇತದ್ವೀಪಕ್ಕೆ ಹಿಂತಿರುಗಿದನು.

**ಚಿಂತಿತಾಶ್ಚ ಸುರಾಃ ಸರ್ವೇ ವಿಷಣ್ಣಮನಸಸ್ತಥಾ ।**
**ಮುನೀನ್ದೇವಾಂಶ್ಚ ಸಂಬೋಧ್ಯ ಬ್ರಹ್ಮಾ ವೈ ತತ್ರ ಸಂಸದಿ ॥ ೯೯ ॥**

**ಉವಾಚ ನೀತಿಸಾರಂ ತತ್ಸಮ್ಮತಂ ಶಂಕರಸ್ಯ ಚ ॥ ೧೦೦ ॥**

**॥ ಬ್ರಹ್ಮೋವಾಚ ॥**

**ಮಮ ಶಂಭೋಶ್ಚ ಧರ್ಮಸ್ಯ ವಿಷ್ಣೋರ್ವಾ ಸರ್ವಸಾಕ್ಷಿಣಃ ।**
**ಅಸ್ಮಾಕಂ ಚ ಸಮಃ ಸ್ನೇಹೋ ದೈತ್ಯೇ ದೇವೇ ಚ ಪುತ್ರಕಾಃ ॥ ೧೦೧ ॥**

**ದೈತ್ಯಾನಾಂ ಚ ಗುರುಂ ಶುಕ್ರಂ ಪ್ರಪನ್ನಶ್ಚ ನಿಶಾಕರಃ ।**
**ನ ಜಿತಶ್ಚ ಸುರೈಃ ಶುಕ್ರಃ ಪೂಜಿತೋ ದಿತಿನಂದನೈಃ ॥ ೧೦೨ ॥**

**ತಾರಾಹೇತೋರಹಂ ಯಾಮಿ ಶುಕ್ರಸ್ಯ ಭವನಂ ಸುರಾಃ ।**
**ಸರ್ವೇ ಸಮುದ್ರಪುಲಿನಂ ಯಾಂತು ವಿಷ್ಣೋರ್ನಿದೇಶತಃ ॥ ೧೦೩ ॥**

---

೯೯–೧೦೦. ಆಗ ಅಲ್ಲಿದ್ದ ಸಕಲ ದೇವತೆಗಳೂ ವ್ಯಥೆಗೊಂಡ ಮನಸ್ಸಿನಿಂದ ಆಕುಲರಾಗಿರಲು ಬ್ರಹ್ಮನು ಸಭೆಯಲ್ಲಿದ್ದ ಸಕಲ ಮುನಿ ಮತ್ತು ದೇವತೆಗಳನ್ನು ಕುರಿತು ನೀತಿಸಾರವೂ, ಶಂಕರನಿಗೆ ಒಪ್ಪಿಗೆಯೂ ಆದ ಕೆಲವು ನುಡಿಗಳನ್ನಾಡಿದನು.

೧೦೧. ಬ್ರಹ್ಮ:—ನನಗೂ, ಶಂಕರನಿಗೂ, ವಿಷ್ಣುವಿಗೂ ಮತ್ತು ಸರ್ವಸಾಕ್ಷಿಯಾದ ಧರ್ಮನಿಗೂ ಪರಸ್ಪರ ಸ್ನೇಹವಿರುವಂತೆ ತಮ್ಮೆಲ್ಲರಿಗೆ ದೇವದಾನವರಲ್ಲಿ ಸಮನಾದ ಸ್ನೇಹವುಂಟು.

೧೦೨ ಈಗ ಚಂದ್ರನು ರಾಕ್ಷಸ ಗುರುವಾದ ಶುಕ್ರಾಚಾರ್ಯನನ್ನು ಶರಣು ಹೊಕ್ಕಿರುವನು. ಇದುವರೆಗೆ ದೇವತೆಗಳಾರೂ ಶುಕ್ರಾಚಾರ್ಯನನ್ನು ಗೆಲ್ಲಲಾಗದೆ ಪೂಜಿಸುತ್ತಿದ್ದಾರೆ

೧೦೩. ಎಲೈ ದೇವತೆಗಳೇ, ನಾನು ತಾರಾದೇವಿಯನ್ನು ಕರೆತರಲೋಸುಗ ಶುಕ್ರಾಚಾರ್ಯನ ಮನೆಗೆ ಹೋಗುತ್ತೇನೆ. ನೀವೆಲ್ಲರೂ ವಿಷ್ಣುವಿನ ಅಪ್ಪಣೆಯಂತೆ ಸಮುದ್ರದ ಮರಳಿನ ಸಮೀಪಕ್ಕೆ ಬನ್ನಿರಿ.

ಇತ್ಯುಕ್ತ್ವಾ ಜಗತಾಂ ಧಾತಾ ಜಾಗಮಚ್ಛುಕ್ರಸನ್ನಿಧಿಂ ।
ಪ್ರಯಯುರ್ದೇವತಾ ವಿಪ್ರಾಃ ಸಮುದ್ರಪುಲಿನಂ ಮುನೇ ॥ ೧೦೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ಶ್ರೀಕೃಷ್ಣೋಪದಿಷ್ಟ
ತಾರೋದ್ಧರಣೋಪಾಯಜ್ಞಾನಂ ನಾಮ
ಷಷ್ಟಿತಮೋಽಧ್ಯಾಯಃ

---

೧೦೪. ಇಂತು ನುಡಿದು ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಶುಕ್ರಾಚಾರ್ಯನ ಮನೆಗೆ ಹೋದನು. ಅನಂತರ ಆ ದೇವತೆಗಳೂ, ಮುನಿಗಳೂ ಸಮುದ್ರದ ಬಯಲಿಗೆ ತೆರಳಿದರು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ತಾರೋದ್ಧರಣೋ
ಪಾಯವನ್ನು ತಿಳಿಸುವ ಅರವತ್ತನೆಯ ಅಧ್ಯಾಯವು
ಮುಗಿದುದು.

## ಅರವತ್ತನೆಯ ಅಧ್ಯಾಯದ ಸಾರಾಂಶವು

ಭಾರ್ಯಾವಿರಹದುಃಖಿತನಾದ ಬೃಹಸ್ಪತಿಯು ಕೈಲಾಸಕ್ಕೆ ಹೋಗಿ ಶಂಕರನಿಗೆ ವಂದಿಸಿ ನಾಚಿಕೆಯಿಂದ ತಲೆಬಾಗಿ ನಿಂತನು. ಶಂಕರನು ಚಿಂತೆಗೆ ಕಾರಣವೇನೆಂದು ಕೇಳಲು ಬೃಹಸ್ಪತಿಯು ತನ್ನ ಪ್ರಿಯಪತ್ನಿಯನ್ನು ಚಂದ್ರನು ಅಪಹರಿಸಿರುವನೆಂದು ತಿಳಿಸಿ ತನ್ನ ಜನ್ಮಾಂತರದ ದುಷ್ಕರ್ಮಕ್ಕಾಗಿ ಬಹಳ ಪರಿತಪಿಸಿದನು. ತಾರಾಪಹರಣದ ವಿಷಯವನ್ನು ಕೇಳಿ ಚಂದ್ರನಮೇಲೆ ಕೋಪಗೊಂಡ ಶಂಕರನು ಬೃಹಸ್ಪತಿಯ ಮನಃಶಾಂತಿಗೆ ಮೆಚ್ಚಿ ಚಂದ್ರನು ವಿಷ್ಣುಭಕ್ತನಾದ ಶುಕ್ರಾಚಾರ್ಯನ ಮರೆಹೊಕ್ಕಿರುವುದರಿಂದ ಅವನನ್ನು ನಿಗ್ರಹಿಸುವುದು ಸುಲಭಸಾಧ್ಯವಲ್ಲದಿದ್ದರೂ ಗುರೂಪದಿಷ್ಟವಾದ ಮಂತ್ರದ ಮಹಿಮೆಯಿಂದ ತಾರಾದೇವಿಯನ್ನುದ್ಧರಿಸುವುದಾಗಿ ಹೇಳಿ ಬೃಹಸ್ಪತಿಗೆ ಶ್ರೀಕೃಷ್ಣಮಂತ್ರವನ್ನುಪದೇಶಿಸಿದನು. ಆ ಮಂತ್ರದ ಪ್ರಭಾವದಿಂದ ಬೃಹಸ್ಪತಿಗೆ ಜ್ಞಾನೋದಯವಾಗಿ ಸಂಸಾರದಿಂದ ವಿರಕ್ತನಾಗಬಯಸಲು ಪರಪುರುಷನ ಅಧೀನಳಾಗಿರುವ ಪತ್ನಿಯನ್ನುದ್ಧರಿಸುವುದು ಪ್ರಥಮಕರ್ತವ್ಯವೆಂದು ತಿಳಿಸಿ ಶಂಕರನು ಬೃಹಸ್ಪತಿಯನ್ನು ನರ್ಮದಾತೀರಕ್ಕೆ ಕಳುಹಿ ತಾನೂ ಅಲ್ಲಿಗೆ ಬಂದನು. ಅಲ್ಲಿ ಬ್ರಹ್ಮಾದಿಸಕಲದೇವತೆಗಳೂ ಸೇರಿದ್ದರು. ವಿಷ್ಣುವು ದೇವದಾನವರ ಯುದ್ಧದಿಂದ ಮಹಾನರ್ಥವುಂಟಾಗುವುದೆಂದು ಹೇಳಿ ಶುಕ್ರಾಚಾರ್ಯನ ಸಮೀಪಕ್ಕೆ ಮಾಧ್ಯಸ್ಥ್ಯಕ್ಕಾಗಿ ಯಾರನ್ನಾದರೂ ಕಳುಹಿರೆಂದು ತಿಳಿಸಿ ಅಂತರ್ಧಾನನಾದನು. ಆಗ ಬ್ರಹ್ಮನು ಇತರ ದೇವತೆಗಳಿಗೆಲ್ಲ ತನ್ನನ್ನು ಪ್ರತೀಕ್ಷಿಸಿಕೊಂಡಿರುವಂತೆ ಆಜ್ಞಾಪಿಸಿ ತಾನೇ ಪಾತಾಳಲೋಕದಲ್ಲಿದ್ದ ಶುಕ್ರಾಚಾರ್ಯನೆಡೆಗೆ ತೆರಳಿದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಏಕಷಷ್ಠಿತಮೋಽಧ್ಯಾಯಃ ||

**|| ನಾರದ ಉವಾಚ ||**

**ತತಃ ಪರಂ ಕಿಂ ರಹಸ್ಯಂ ಬಭೂವಾಸುರದೇವಯೋಃ |**
**ಶ್ರೋತುಮಿಚ್ಛಾಮಿ ಭಗವನ್ ಪರಂ ಕೌತೂಹಲಂ ಮಮ || ೧ ||**

**|| ನಾರಾಯಣ ಉವಾಚ ||**

**ಬ್ರಹ್ಮಾ ಜಗಾಮ ನಿಲಯಂ ಶುಕ್ರಸ್ಯ ಚ ಮಹಾತ್ಮನಃ |**
**ನಾನಾದೈತ್ಯಗಣಾಕೀರ್ಣಂ ರತ್ನಮಂಡಪಭೂಷಿತಂ || ೨ ||**

---

### ಅರವತ್ತೊಂದನೆಯ ಅಧ್ಯಾಯವು

೧. ನಾರದ :—ಎಲೈ ನಾರಾಯಣಮಹರ್ಷಿಯೇ, ಬ್ರಹ್ಮನು ಶುಕ್ರಾಚಾರ್ಯನೆಡೆಗೆ ತೆರಳಿದಮೇಲೆ ದೇವತೆಗಳಿಗೂ, ರಾಕ್ಷಸರಿಗೂ ನಡೆದ ರಹಸ್ಯ ವೃತ್ತಾಂತವೇನೆಂಬುದನ್ನು ತಿಳಿಯಲು ನನಗೆ ಬಹಳ ಕುತೂಹಲವಿದೆ.

೨. ನಾರಾಯಣ :—ಅನಂತರ ಬ್ರಹ್ಮನು ರತ್ನಮಂಟಪಗಳಿಂದ ಅಲಂಕೃತವಾಗಿ ಅನೇಕ ರಾಕ್ಷಸರಿಂದ ಪರಿಪೂರ್ಣವಾದ ಶುಕ್ರಾಚಾರ್ಯನ ಮಂದಿರಕ್ಕೆ ಹೋದನು

ಪಂಚಾಶತ್ಕೋಟಿಭಿಃ ಶಿಷ್ಯೈಃ ಪರೀತಂ ಬ್ರಹ್ಮವಾದಿಭಿಃ ।
ಸಪ್ತಭಿಃ ಪರಿಖಾಭಿಶ್ಚ ವೇಷ್ಟಿತಂ ದುರ್ಗಮೇವ ಚ　　॥ ೩ ॥

ರಕ್ಷಿತಂ ರಕ್ಷಕಗಣೈರ್ದೈತ್ಯೈಶ್ಚ ಶತಕೋಟಿಭಿಃ ।
ಪದ್ಮರಾಗೈರ್ವಿರಚಿತೈಃ ಪ್ರಾಕಾರೈಃ ಪರಿಶೋಭಿತಂ　　॥ ೪ ॥

ದದರ್ಶ ಜಗತಾಂ ಧಾತಾ ಸಭಾಯಾಂ ಭೃಗುನಂದನಂ ।
ಸ್ತುತಂ ಮುನಿಗಣೈರ್ದೈತ್ಯೈ ರತ್ನಸಿಂಹಾಸನಸ್ಥಿತಂ　　॥ ೫ ॥

ಜಪಂತಂ ಪರಮಂ ಬ್ರಹ್ಮ ಕೃಷ್ಣಮಾತ್ಮಾನಮೀಶ್ವರಂ ।
ಕೋಟಿಸೂರ್ಯಪ್ರಭಂ ಶಶ್ವಜ್ಜ್ವಲಂತಂ ಬ್ರಹ್ಮತೇಜಸಾ　　॥ ೬ ॥

---

೩. ಆ ಮಂದಿರವನ್ನು ಬ್ರಹ್ಮಜ್ಞಾನಿಗಳಾದ ಐವತ್ತುಕೋಟಿ ಶಿಷ್ಯರು ಆವರಿಸಿಕೊಂಡಿದ್ದರು. ದಾಟಲಸಾಧ್ಯವಾದ ಏಳು ಕಂದಕಗಳು ಕೋಟೆಯ ಸುತ್ತಲೂ ಇದ್ದವು.

೪. ಶುಕ್ರಾಚಾರ್ಯನ ಆ ಮಂದಿರವನ್ನು ನೂರುಕೋಟಿ ದೈತ್ಯರೂ, ರಾಕ್ಷಸರೂ ಕಾವಲು ಕಾಯುತ್ತಿದ್ದರು. ಸುತ್ತಲೂ ಪದ್ಮರಾಗರತ್ನಗಳಿಂದ ನಿರ್ಮಿತವಾದ ಕೋಟೆಗಳು ಪ್ರಕಾಶಿಸುತ್ತಿದ್ದವು.

೫. ಆ ಮಂದಿರದ ಸಭಾಮಂಟಪದಲ್ಲಿ ರತ್ನಸಿಂಹಾಸನದಲ್ಲಿ ಕುಳಿತು ಅನೇಕ ಮುನಿಗಳಿಂದಲೂ, ದೈತ್ಯರಿಂದಲೂ ಹೊಗಳಿಸಿಕೊಳ್ಳುತ್ತಿರುವ ಭೃಗುಪುತ್ರನಾದ ಶುಕ್ರಾಚಾರ್ಯನನ್ನು ಬ್ರಹ್ಮನು ಕಂಡನು

೬. ಕೋಟಿಸೂರ್ಯರ ಪ್ರಭೆಯನ್ನು ಮೀರುವ ಬ್ರಹ್ಮತೇಜಸ್ಸಿನಿಂದ ಬೆಳಗುತ್ತಿದ್ದ ಆ ಶುಕ್ರಾಚಾರ್ಯನು ಶ್ರೀಕೃಷ್ಣಪರಮಾತ್ಮನ ದಿವ್ಯನಾಮವನ್ನು ಅನವರತವೂ ಜಪಿಸುತ್ತಿದ್ದನು.

ದೃಷ್ಟ್ವಾ ಪೌತ್ರಂ ಪ್ರಭಾಯುಕ್ತಂ ವಿಧಾತಾ ಹೃಷ್ಟಮಾನಸಃ ।
ಆತ್ಮಾನಂ ಕೃತಿನಂ ಮೇನೇ ಪುತ್ರಂ ಪೌತ್ರಂ ಚ ನಾರದ ॥ ೭ ॥

ದೃಷ್ಟ್ವಾ ಪಿತಾಮಹಂ ಶುಕ್ರೋ ಧಾತಾರಂ ಜಗತಾಂ ಪ್ರಭುಂ ।
ಉತ್ಥಾಯ ಸಹಸಾ ಭೀತಃ ಪ್ರಣನಾಮ ಕೃತಾಂಜಲಿಃ ॥ ೮ ॥

ಆದಾಯ ಪೂಜಯಾಮಾಸ ಚೋಪಚಾರಾಂಸ್ತು ಷೋಡಶ ।
ತುಷ್ಟಾವ ಪರಯಾ ಭಕ್ತ್ಯಾ ಸಂಭ್ರಮೇಣ ಯಥಾಗಮಂ ॥ ೯ ॥

ವಿದ್ಯಾಮಂತ್ರಪ್ರದಾತಾರಂ ದಾತಾರಂ ಸರ್ವಸಂಪದಾಂ ।
ಸ್ವಕರ್ಮಣಾಂ ಚ ಫಲದಂ ಸರ್ವೇಷಾಂ ವಿಶ್ವತೋ ವರಂ ॥ ೧೦ ॥

ಶುಕ್ರಸ್ಯ ಸ್ತವನೇನೈವ ಸಂತುಷ್ಟೋ ಜಗತಾಂ ಪತಿಃ ।
ಅವರುಹ್ಯ ರಥಾತ್ತೂರ್ಣಮುವಸತ್ತತ್ರ ಸಂಸದಿ ॥ ೧೧ ॥

---

೭. ಬ್ರಹ್ಮನು ತೇಜಃಪರಿಪೂರ್ಣನಾದ ತನ್ನ ಮೊಮ್ಮಗ (ಶುಕ್ರ) ನನ್ನು ನೋಡಿ ಸಂತೋಷಗೊಂಡುದಲ್ಲದೆ ಅಂಥ ಪೌತ್ರನನ್ನು ಪಡೆದ ತಾನೇ ಧನ್ಯನೆಂದು ಕೊಂಡನು.

೮. ಶುಕ್ರಾಚಾರ್ಯನು ಜಗತ್ಸೃಷ್ಟಿಕರ್ತನೂ, ತನ್ನ ಅಜ್ಜನೂ ಆದ ಬ್ರಹ್ಮನನ್ನು ನೋಡಿ ಭಯಭಕ್ತಿಯಿಂದ ಮೇಲಕ್ಕೆದ್ದು ಕೈಮುಗಿದುಕೊಂಡು ನಮಸ್ಕರಿಸಿದನು.

೯. ಷೋಡಶೋಪಚಾರಸಾಮಗ್ರಿಗಳನ್ನೂ ತಂದು ಭಕ್ತಿಯಿಂದ ಪೂಜಿಸಿ, ಸಂಭ್ರಮದಿಂದ ಕೂಡಿ ಶಾಸ್ತ್ರೋಕ್ತವಾಗಿ ಭಕ್ತಿಯಿಂದ ಸ್ತುತಿಸಿದನು.

೧೦. ವಿದ್ಯಾಮಂತ್ರೋಪದೇಶಕನೂ, ಸರ್ವಸಂಪತ್ಪ್ರದಾತೃವೂ, ತನ್ನ ಕರ್ಮಗಳ ಫಲದಾತೃವೂ, ವಿಶ್ವಶ್ರೇಷ್ಠನೂ ಆದ ಬ್ರಹ್ಮನನ್ನು ಶುಕ್ರಾಚಾರ್ಯನು ಸ್ತುತಿಸಿದನು.

೧೧ ಶುಕ್ರಾಚಾರ್ಯನ ಸ್ತೋತ್ರವನ್ನು ಕೇಳಿ ಸಂತಸಗೊಂಡ ಜಗತ್ಪತಿ ಯಾದ ಬ್ರಹ್ಮನು ಜಾಗ್ರತೆಯಾಗಿ ತನ್ನ ವಾಹನದಿಂದಿಳಿದು ಸಭಾಂಗಣಕ್ಕೆ ತೆರಳಿದನು.

ಶುಕ್ರೇಣ ಶಿರಸಾ ದತ್ತರತ್ನಸಿಂಹಾಸನೇ ವರೇ ।
ತೇಜಸೋಜ್ವಲಿತೇ ರಮ್ಯೇ ನಿರ್ಮಿತೇ ವಿಶ್ವಕರ್ಮಣಾ ॥ ೧೨ ॥

ಶುಕ್ರಃ ಪ್ರಣಮ್ಯ ಬ್ರಹ್ಮಾಣಂ ಕುಮಾರಂ ಶಕುನಂ ಕ್ರತುಂ ।
ವಸಿಷ್ಠಂ ಚ ಮರೀಚಿಂ ಚ ಸನಂದಂ ಚ ಸನಾತನಂ ॥ ೧೩ ॥

ಕಪಿಲಂ ವೈ ಪಂಚಶಿಖಂ ವೋಢುಮಂಗಿರಸಂ ಮುನೇ ।
ಧರ್ಮಂ ಮಾಂ ಚ ನರಂ ಭಕ್ತ್ಯಾ ಪ್ರಣನಾಮ ಕೃತಾಂಜಲಿಃ ॥ ೧೪ ॥

ಪ್ರತ್ಯೇಕಂ ಪೂಜಯಾಮಾಸ ಸಾದರಂ ಚ ಯಥೋಚಿತಂ ।
ಸಿಂಹಾಸನೇಷು ರತ್ನೇಷು ವಾಸಯಾಮಾಸ ಧಾರ್ಮಿಕಃ ॥ ೧೫ ॥

ಪ್ರಹೃಷ್ಟವದನಾಃ ಸರ್ವೇ ಪ್ರಣೇಮುರ್ದಿತಿನಂದನಾಃ ।
ಋಷಿಸಂಘಾಶ್ಚ ಧಾತಾರಂ ತುಷ್ಟುವುಶ್ಚ ಯಥಾಗಮಂ ॥ ೧೬ ॥

---

೧೨. ಅಲ್ಲಿ ಶುಕ್ರಾಚಾರ್ಯನು ನಮ್ರತೆಯಿಂದ ತೋರಿಸಿದ ವಿಶ್ವಕರ್ಮನಿಂದ ನಿರ್ಮಿತವಾಗಿ ತೇಜೋಮಯವಾಗಿರುವ ರತ್ನಸಿಂಹಾಸನದಲ್ಲಿ ಕುಳಿತನು.

೧೩–೧೪. ಶುಕ್ರಾಚಾಯನು ಬ್ರಹ್ಮನಿಗೆ ನಮಸ್ಕರಿಸಿದನಂತರ ಕುಮಾರ, ಶಕುನ, ಕ್ರತು, ವಸಿಷ್ಠ, ಮರೀಚಿ, ಸನಂದ, ಸನಾತನ, ಕಪಿಲ, ಪಂಚಶಿಖ, ವೋಢು, ಅಂಗಿರಸ ಮುಂತಾದ ಮಹರ್ಷಿಗಳಿಗೂ, ಧರ್ಮಪುರುಷನಿಗೂ, ನರನಿಗೂ, ನನಗೂ ಭಕ್ತಿಯಿಂದ ಕೈಮುಗಿದು ನಮಸ್ಕರಿಸಿದನು.

೧೫. ಧರ್ಮಿಷ್ಠನಾದ ಶುಕ್ರಾಚಾರ್ಯನು ಒಬ್ಬೊಬ್ಬರನ್ನಾಗಿ ಎಲ್ಲರನ್ನೂ ಆದರದಿಂದ ಪೂಜಿಸಿ, ಅವರವರಿಗುಚಿತವಾದ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿದನು.

೧೬. ಅನಂತರ ಸಂತುಷ್ಟರಾದ ಸಕಲ ದೇವತೆಗಳಿಗೂ ಅಲ್ಲಿದ್ದ ಋಷಿಗಳು ಮತ್ತು ರಾಕ್ಷಸರು ನಮಸ್ಕರಿಸಿ ಜಗತ್ಸೃಷ್ಟಿಕರ್ತನಾದ ಬ್ರಹ್ಮನನ್ನು ಹೊಗಳಿದರು.

ಸರ್ವಾನ್ಸಂಸ್ತೂಯ ಸ ಕವಿರವೋಚತ್ಸಂಪುಟಾಂಜಲಿಃ ।
ಸಾಶ್ರುನೇತ್ರಃ ಸಪುಲಕಃ ಪ್ರಣತೋ ವಿನಯಾನ್ವಿತಃ ॥ ೧೭ ॥

॥ ಶುಕ್ರ ಉವಾಚ ॥

ಅದ್ಯ ಮೇ ಸಫಲಂ ಜನ್ಮ ಜೀವಿತಂ ಚ ಸುಜೀವಿತಂ ।
ಸ್ವಯಂ ವಿಧಾತಾ ಭಗವಾನ್ ಸಾಕ್ಷಾದ್ದೃಷ್ಟಃ ಸ್ವಮಂದಿರೇ ॥ ೧೮ ॥

ಸಾಕ್ಷಾದ್ದೃಷ್ಟಾಶ್ಚ ತತ್ಪುತ್ರಾ ಭಗವಂತಃ ಸನಾತನಾಃ ।
ತುಷ್ಟಃ ಕೃಷ್ಣೋಽದ್ಯ ಮಾಮೇವಂ ಪರಮಾತ್ಮಾ ಪರಾತ್ಪರಃ ॥ ೧೯ ॥

ಕೃತಾರ್ಥಂ ಕರ್ತುಮೀಶಾ ಮಾಂ ಯುಷ್ಮಾಕಂ ಸ್ವಾಗತಂ ಶಿವಂ।
ಸ್ವಾತ್ಮಾರಾಮೇಷು ಕುಶಲಂ ಪ್ರಶ್ನಮೇವಂ ವಿಡಂಬನಂ ॥ ೨೦ ॥

---

೧೭. 'ಕವಿ' ಎಂಬ ಅನ್ವರ್ಥನಾಮವುಳ್ಳ ಶುಕ್ರಾಚಾರ್ಯನೂ ಕೂಡ ಕೈಮುಗಿದುಕೊಂಡು, ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ರೋಮಾಂಚಿತ ಶರೀರನಾಗಿ ವಿನಯದಿಂದ ಎಲ್ಲರಿಗೂ ವಂದಿಸಿ ಇಂತು ನುಡಿದನು.

೧೮. ಶುಕ್ರ :—ಭಗವಂತನಾದ ಚತುರ್ಮುಖಬ್ರಹ್ಮನನ್ನು ನಾನು ನನ್ನ ಮನೆಯಲ್ಲಿಯೇ ಪ್ರತ್ಯಕ್ಷವಾಗಿ ನೋಡಿದ ಇಂದೇ ನನ್ನ ಜನ್ಮವೂ, ಜೀವಿತವೂ ಸಫಲವಾಯಿತು.

೧೯. ಪೂಜ್ಯರೂ, ಸನಾತನಿಗಳೂ ಆದ ಬ್ರಹ್ಮಪುತ್ರರನ್ನೂ ಇಂದು ನೋಡಿ ಸಂತಸಗೊಂಡೆನು. ಪರಾತ್ಪರನಾದ ಶ್ರೀಕೃಷ್ಣಪರಮಾತ್ಮನು ನನ್ನಲ್ಲಿ ಕರುಣೆಯನ್ನು ತೋರಿದನು.

೨೦. ನನ್ನನ್ನು ಕೃತಾರ್ಥನನ್ನಾಗಿಮಾಡಲು ಶಕ್ತರಾದ ನಿಮಗೆಲ್ಲರಿಗೂ ಸುಖಾಗಮನವನ್ನೂ, ಮಂಗಳವನ್ನೂ ಬಯಸುವೆನು. ಆತ್ಮನಿಷ್ಠರಾದ ನಿಮ್ಮನ್ನು ಕುಶಲಪ್ರಶ್ನೆ ಮಾಡಿದರೆ ಹಾಸ್ಯಕ್ಕೀಡಾಗುವೆನು.

ಪವಿತ್ರಂ ಕರ್ತುಮಿಹಾಶಾ ಮಾಂ ಹೇತುರಾಗಮನೇಽತ್ರ ವಃ ।
ಅಪರಂ ಬ್ರೂಥ ಕಿಂ ವಾಪಿ ಶಾಸ್ತನಃ ಕರವಾಮಿ ಕಿಂ ॥ ೨೧ ॥

॥ ಬ್ರಹ್ಮೋವಾಚ ॥

ಉದ್ವಿಗ್ನಶ್ಚಿರವಿಚ್ಛೇದಾತ್ತ್ವಾಂ ಪೌತ್ರಂ ದ್ರಷ್ಟುಮಾಗತಃ ।
ವಿಚ್ಛೇದಃ ಪುತ್ರಪೌತ್ರಾಣಾಂ ಮರಣಾದತಿರಿಚ್ಯತೇ ॥ ೨೨ ॥

ಕುಶಲಂ ತೇ ಮುನಿಶ್ರೇಷ್ಠ ಪುತ್ರಯೋಽಶ್ಚಾಪಿ ಯೋಷಿತಃ ।
ಕುಶಲಂ ತೇ ಸ್ವಧರ್ಮಾಣಾಂ ಕಾಮ್ಯಾನಾಂ ತಪಸಾಮಪಿ ॥ ೨೩ ॥

ದಿನೇ ದಿನೇಽಪರಿಚ್ಛಿನ್ನಂ ಶ್ರೀಕೃಷ್ಣಾರ್ಚನಮೀಪ್ಸಿತಂ ।
ಸ್ವಗುರೋಃ ಸೇವನಂ ನಿತ್ಯಮವಿಚ್ಛಿನ್ನಂ ಭವೇತ್ತವ ॥ ೨೪ ॥

---

೨೧. ನನ್ನನ್ನು ಪಾವನಗೊಳಿಸಲು ಸಮರ್ಥರಾದ ನೀವುಗಳು ಇಲ್ಲಿಗೆ ಬರಲು ಪ್ರಬಲವಾದ ಕಾರಣವಾವುದು? ಅಥವಾ ನನ್ನಿಂದ ಯಾವುದಾದರೂ ಕಾರ್ಯವಾಗಬೇಕಾಗಿದ್ದರೆ ಏನಾಗಬೇಕೆಂಬುದನ್ನು ಅಪ್ಪಣೆ ಕೊಡಿ.

೨೨. ಬ್ರಹ್ಮ:—ನನ್ನ ಮುಮ್ಮಗನಾದ ನಿನ್ನನ್ನು ನೋಡಿ ಬಹಳ ದಿವಸಗಳಾದ್ದರಿಂದ ವಿರಹಾಕುಲಿತನಾಗಿ ನಿನ್ನನ್ನು ನೋಡಲು ಬಂದೆನು. ಮಕ್ಕಳ ಮತ್ತು ಮುಮ್ಮಕ್ಕಳ ವಿರಹವನ್ನು ಸಹಿಸುವುದು ಸಾವಿಗಿಂತಲೂ ಕಷ್ಟತರವಾದುದು.

೨೩. ಎಲೈ ಶುಕ್ರಾಚಾರ್ಯನೇ ನಿನಗೂ ಮತ್ತು ನಿನ್ನ ಪತ್ನೀಪುತ್ರರಿಗೂ ಕುಶಲವೇ? ನಿನ್ನ ಧರ್ಮಾಚರಣೆಗೂ ಮತ್ತು ಕಾಮ್ಯವಾದ ತಪಸ್ಸು ಮುಂತಾದ ಕರ್ಮಗಳಿಗೂ ಯಾವ ತೊಂದರೆಯೂ ಇಲ್ಲವಲ್ಲವೇ?

೨೪. ನಿನಗಭೀಪ್ಸಿತವಾದ ಶ್ರೀಕೃಷ್ಣಪರಮಾತ್ಮನ ಪೂಜೆಯು ಪ್ರತಿದಿನವೂ ನಿರ್ವಿಘ್ನವಾಗಿ ನೆರವೇರುತ್ತಿದೆಯೆ? ಪ್ರತಿನಿತ್ಯವೂ ನೀನು ಮಾಡುತ್ತಿರುವ ಗುರು ಸೇವೆಗೆ ಯಾವ ವಿಘ್ನಗಳೂ ಇಲ್ಲವಲ್ಲವೇ?

ಗುರ್ವಿಷ್ಟಯೋಃ ಪೂಜನಂ ಚ ಸರ್ವಮಂಗಲಕಾರಣಂ ।
ಪಾಪಾಧಿರೋಗಶೋಕಘ್ನಂ ಪುಣ್ಯಹರ್ಷಪ್ರದಂ ಶುಭಂ ॥ ೨೫ ॥

ಅಭೀಷ್ಟದೇವಃ ಸಂತುಷ್ಟೋ ಗುರೌ ತುಷ್ಟೇ ನೃಣಾಮಿಹ ।
ಇಷ್ಟದೇವೇ ಚ ಸಂತುಷ್ಟೇ ಸಂತುಷ್ಟಾಃ ಸರ್ವದೇವತಾಃ ॥ ೨೬ ॥

ಗುರುರ್ವಿಪ್ರಃ ಸುರೋರುಷ್ಟೋ ಯೇಷಾಂ ಪಾತಕಿನಾಮಿಹ ।
ತೇಷಾಂ ಚ ಕುಶಲಂ ನಾಸ್ತಿ ವಿಘ್ನಸ್ತಸ್ಯ ಪದೇ ಪದೇ ॥ ೨೭ ॥

ತುಷ್ಟಶ್ಚ ಸತತಂ ವತ್ಸ ಶ್ರೀಕೃಷ್ಣಃ ಪ್ರಕೃತೇಃ ಪರಃ ।
ಸರ್ವಾಂತರಾತ್ಮಾ ಭಗವಾಂಸ್ತವ ಭಕ್ತ್ಯಾ ಚ ನಿರ್ಗುಣಃ ॥ ೨೮ ॥

ತವ ತುಷ್ಟೋ ಗುರುರಹಂ ವಿಧಾತಾ ಜಗತಾಮಪಿ ।
ಮಯಿ ತುಷ್ಟೇ ಹರಿಸ್ತುಷ್ಟೋ ಹರೌ ತುಷ್ಟೇ ತು ದೇವತಾಃ ॥ ೨೯ ॥

---

೨೫. ಗುರು ಮತ್ತು ಇಷ್ಟದೇವತೆಗಳನ್ನು ಪೂಜಿಸುವುದರಿಂದ ಜನ್ಮಾಂತರದ ಪಾಪವೂ, ಮನೋವ್ಯಥೆ, ಮತ್ತು ರೋಗಶೋಕಗಳೂ ಪರಿಹಾರವಾಗಿ, ಪುಣ್ಯವೂ, ಸಂತೋಷವೂ ಮತ್ತು ಮಂಗಳವೂ ಲಭಿಸುವುದು.

೨೬. ಮನುಜನ ಗುರುವು ಸಂತೋಷಗೊಂಡರೆ ಇಷ್ಟದೇವನೂ ಸಂತೋಷ ಗೊಳ್ಳುವನು. ಇಷ್ಟದೇವತೆಯು ತೃಪ್ತವಾದರೆ ಎಲ್ಲ ದೇವತೆಗಳೂ ತೃಪ್ತರಾಗುವರು.

೨೭. ಗುರು ಬ್ರಾಹ್ಮಣ ಮತ್ತು ದೇವತೆಗಳ ಕೋಪಕ್ಕೊಳಗಾದ ಪಾಪಿಯು ಪದೇ ಪದೇ ತೊಂದರೆಗೊಳಗಾಗುವನೇ ಹೊರತು ಅವನಿಗೆ ಎಂದೆಂದಿಗೂ ಕುಶಲ ವಿಲ್ಲವು.

೨೮. ಎಲೈ ವತ್ಸನೇ, ಸರ್ವಾಂತರ್ಯಾಮಿಯೂ, ಪ್ರಕೃತಿಗಿಂತ ಶ್ರೇಷ್ಠನೂ, ನಿರ್ಗುಣನೂ. ಆದ ಶ್ರೀಕೃಷ್ಣಭಗವಂತನು ನಿನ್ನ ಭಕ್ತಿಗೆ ಮೆಚ್ಚಿ ಪ್ರೀತನಾಗಿ ರುವನು.

೨೯. ನಿನ್ನ ಗುರುವೂ, ಜಗತ್ಸೃಷ್ಟಿಕರ್ತನೂ ಆದ ನಾನೂ ನಿನ್ನಲ್ಲಿ ಪ್ರಸನ್ನ ನಾಗಿರುವೆನು. ನಾನು ತೃಪ್ತನಾದಮೇಲೆ, ಶ್ರೀಹರಿಯೂ, ಶ್ರೀಹರಿಯು ತೃಪ್ತ ನಾದಮೇಲೆ ಎಲ್ಲ ದೇವತೆಗಳೂ ತೃಪ್ತಿಗೊಂಡಂತೆಯೇ ಸರಿ.

ಸಾಂಪ್ರತಂ ಶ್ರುಣು ಮೇ ಧೀಮನ್ನತ್ರಾಗಮನಕಾರಣಂ ।
ಪ್ರೇಷಿತಸ್ಯ ಸುರಾಣಾಂ ಚ ವಿಶ್ವಸಂಹರ್ತುರೇವ ಚ ॥ ೩೦ ॥

ಶಿವಸ್ಯ ಗುರುಪುತ್ರಸ್ಯ ಸಾಧ್ವೀಂ ತಾರಾಂ ಬೃಹಸ್ಪತೇಃ ।
ಅಪಹೃತ್ಯ ನಿಶಾನಾಥಸ್ತ್ವೈವ ಶರಣಾಗತಃ ॥ ೩೧ ॥

ಶಂಭುರ್ಧರ್ಮಶ್ಚ ಸೂರ್ಯಶ್ಚ ಶಕ್ರೋಽನಂತಶ್ಚ ಪುತ್ರಕ ।
ಆದಿತ್ಯಾ ವಸವೋ ರುದ್ರಾ ದಿಕ್ಪಾಲಾಶ್ಚ ದಿಗೀಶ್ವರಾಃ ॥ ೩೨ ॥

ಯುದ್ಧಾಯಾಯಾಂತಿ ಸನ್ನದ್ಧಾಸ್ತಿಸ್ರಃ ಕೋಟ್ಯಶ್ಚ ದೇವತಾಃ ।
ನಾಗಾಃ ಕಿಂಪುರುಷಾಶ್ಚೈವ ಯಕ್ಷರಾಕ್ಷಸಗುಹ್ಯಕಾಃ ॥ ೩೩ ॥

ಭೂತಾಃ ಪ್ರೇತಾಃ ಪಿಶಾಚಾಶ್ಚ ಕೂಷ್ಮಾಂಡಾ ಬ್ರಹ್ಮರಾಕ್ಷಸಾಃ ।
ಕಿರಾತಾಶ್ಚೈವ ಗಂಧರ್ವಾಃ ಸಮುದ್ರಪುಲಿನೇಽಧುನಾ ॥ ೩೪ ॥

---

೩೦. ಎಲೈ ಸುಬುದ್ಧಿಯೇ, ಎಲ್ಲ ದೇವತೆಗಳೂ, ವಿಶ್ವಸಂಹಾರಕನಾದ ಶಿವನೂ ಇಲ್ಲಿಗೆ ಬಂದಿರುವ ಕಾರಣವನ್ನು ಈಗ ನಿನಗೆ ಹೇಳುವೆನು. ಕೇಳು.

೩೧. ಶಿವನ ಗುರುಪುತ್ರನಾದ ಬೃಹಸ್ಪತಿಯ ಪತ್ನಿಯೂ, ಪರಮ ಪತಿವ್ರತೆಯೂ ಆದ ತಾರಾದೇವಿಯನ್ನು ಚಂದ್ರನು ಅಪಹರಿಸಿ ನಿನ್ನ ಮರೆ ಹೊಕ್ಕಿರುವನು

೩೨. ಎಲೈ ವತ್ಸನೇ, ಅದಕ್ಕಾಗಿ ಶಂಕರ, ಧರ್ಮ, ಸೂರ್ಯ, ಇಂದ್ರ, ಅನಂತ ಮುಂತಾದ ದೇವತೆಗಳೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ಏಕಾದಶ ರುದ್ರರೂ, ಅಷ್ಟದಿಕ್ಪಾಲಕರೂ, ಮತ್ತು ಮೂರುಕೋಟಿ ದೇವತೆಗಳೂ. ನಿನ್ನಮೇಲೆ ಯುದ್ಧಸನ್ನದ್ಧರಾಗಿದ್ದಾರೆ.

೩೩–೩೪. ಅಲ್ಲದೆ ನಾಗರೂ, ಕಿಂಪುರುಷರೂ, ಯಕ್ಷರಾಕ್ಷಸರೂ, ಗುಹ್ಯಕರೂ ಭೂತಪ್ರೇತಪಿಶಾಚಾದಿಗಳೂ, ಕೂಷ್ಮಾಂಡಬ್ರಹ್ಮರಾಕ್ಷಸರೂ, ಕಿರಾತರೂ ಮತ್ತು ಗಂಧರ್ವರೂ ಈಗ ಸಮುದ್ರದ ಮರಳಮೇಲೆ ಯುದ್ಧಸಿದ್ಧರಾಗಿ ನಿಂತಿದ್ದಾರೆ.

ತಾರಕಾಮಯಸಂಗ್ರಾಮೇ ಮಧ್ಯಸ್ಥೋಽಹಂ ಸುತೈಸ್ಸಹ ।
ದೇಹಿ ತಾರಾಂ ರಣಂ ಕಿಂ ವಾ ತ್ಯಜ ಚಂದ್ರಂ ಚ ಕಾಮಿನಂ ॥ ೩೫ ॥

॥ ಶುಕ್ರ ಉವಾಚ ॥

ಆಗಚ್ಛಂತು ಸುರಾಃ ಸರ್ವೇ ಸನ್ನದ್ಧಾ ರಣದುರ್ಮದಾಃ ।
ಯೋತ್ಸ್ಯೇ ವಿನಾ ಮಹೇಶಂ ಚ ಸರ್ವೇಷಾಂ ಚ ಗುರುಂ ಪರಂ ॥ ೩೬ ॥

॥ ದೈತ್ಯಾ ಊಚುಃ ॥

ಉಭಯೇಷಾಂ ಗುರುಃ ಶಂಭುರ್ಮಾನ್ಯೋ ವಂದ್ಯಶ್ಚ ಸರ್ವದಾ ।
ಧರ್ಮಶ್ಚ ಸಾಕ್ಷೀ ಸರ್ವೇಷಾಂ ತ್ವಮೇವ ಚ ಪಿತಾಮಹ ॥ ೩೭ ॥

ಅನ್ಯಾಂಶ್ಚ ತೃಣತುಲ್ಯಾಂಶ್ಚ ನ ಹಿ ಮನ್ಯಾಮಹೇ ವಯಂ ।
ಆಗಚ್ಛಂತು ಚ ಯೋತ್ಸ್ಯಾಮೋ ವ್ರಜ ಬ್ರೂಹಿ ಜಗದ್ಗುರೋ ॥ ೩೮ ॥

---

೩೫. ತಾರೆಯ ವಿಮೋಚನಕ್ಕಾಗಿ ನಡೆಯುವ ಈ ಯುದ್ಧಕ್ಕೆ ಮೊದಲು ನಾನು ನನ್ನ ಮಕ್ಕಳೊಡನೆ ಮಧ್ಯಸ್ಥಿಕೆಗೆ ಬಂದಿದ್ದೇನೆ. ಆದುದರಿಂದ ಯುದ್ಧಕ್ಕೆ ಕೈಹಾಕದೆ ತಾರೆಯನ್ನು ಹಿಂದಕ್ಕೆ ಕೊಟ್ಟು ಚಂದ್ರನನ್ನು ದೂರಮಾಡು.

೩೬ ಶುಕ್ರ :—ಯುದ್ಧಮಾಡಿ ಗೆಲ್ಲುವೆನೆಂಬ ದುರಹಂಕಾರದಿಂದ ಕೂಡಿದ ಎಲ್ಲ ದೇವತೆಗಳೂ ಯುದ್ಧಸನ್ನದ್ಧರಾಗಿ ಬರಲಿ. ಎಲ್ಲರಿಗೂ ಗುರುವಾದ ಮಹೇಶನೊಬ್ಬನನ್ನು ಬಿಟ್ಟು ಉಳಿದ ಎಲ್ಲರೊಡನೆಯೂ ಯುದ್ಧಮಾಡುವೆನು.

೩೭. ದೈತ್ಯರು :—ನಮಗೂ ದೇವತೆಗಳಿಗೂ ಗುರುವಾದ ಶಂಭುವೂ, ಸರ್ವಸಾಕ್ಷಿಯಾದ ಧರ್ಮನೂ, ಎಲ್ಲರಿಗೂ ಪಿತಾಮಹನಾದ ನೀನೂ ನಮಗೆ ಸರ್ವದಾ ವಂದ್ಯರು.

೩೮. ಉಳಿದ ದೇವತೆಗಳೆಲ್ಲರೂ ನಮಗೆ ಹುಲ್ಲಿಗಿಂತ ಕಡೆ. ಅವರಿಗೆ ನಾವು ಗೌರವ ಕೊಡುವುದಿಲ್ಲ. ಅವರೆಲ್ಲರೂ ಯುದ್ಧಕ್ಕೆ ಬರಲಿ, ಯುದ್ಧಮಾಡುವೆವು. ನೀನು ಹೋಗಿ ಅವರಿಗೆ ಹೇಳು.

ಕೃಪಯಾ ಗುರುಪುತ್ರಸ್ಯ ಯದ್ಯಾಯಾತಿ ಮಹೇಶ್ವರಃ ।
ಆಗ್ನೇಯಾಸ್ತ್ರಂ ಪ್ರಯೋಕ್ಷ್ಯಾಮಃ ಪಶ್ಚಾದ್ಯೋತ್ಸ್ಯಾಮಹೇ ಪ್ರಭೋ ॥

॥ ಬ್ರಹ್ಮೋವಾಚ ॥

ಕಾಲಾಗ್ನಿರುದ್ರಃ ಸಂಹರ್ತಾ ವಿಶ್ವಸ್ಯ ಬಲಿನಾಂ ವರಃ ।
ಹೇ ವತ್ಸಾಸ್ತೇನ ಸಾರ್ಧಂ ಚ ಕೋ ವಾ ಯುದ್ಧಂ ಕರಿಷ್ಯತಿ ॥ ೪೦ ॥

ಭದ್ರಕಾಲೀ ಜಗನ್ಮಾತಾ ಖಡ್ಗಖರ್ಪರಧಾರಿಣೀ ।
ತಯಾ ದುರ್ಧರ್ಷಯಾ ಸಾರ್ಧಂ ಕೋ ವಾ ಯುದ್ಧಂ ಕರಿಷ್ಯತಿ ॥ ೪೧ ॥

ಸಾ ಸಹಸ್ರಭುಜಾ ದೇವೀ ಮುಂಡಮಾಲಾವಿಭೂಷಣಾ ।
ಯೋಜನಾಯುತವಕ್ತ್ರಾ ಚ ದಶಯೋಜನವಿಸ್ತೃತಾ ॥ ೪೨ ॥

---

೩೯. ಗುರುಪುತ್ರನ ವಾತ್ಸಲ್ಯದಿಂದ ಮಹೇಶ್ವರನೇನಾದರೂ ಯುದ್ಧಕ್ಕೆ ಬರುವುದಾದರೆ, ಅವನ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿ ಅನಂತರ ಎಲ್ಲರೊಡನೆ ಯುದ್ಧಮಾಡುವೆವು.

೪೦. ಬ್ರಹ್ಮ:—ಮಕ್ಕಳಿರಾ, ಜಗತ್ಸಂಹಾರಕನಾದ ಕಾಲಾಗ್ನಿರುದ್ರನು ಬಲಶಾಲಿಗಳಲ್ಲಿ ಅಗ್ರಗಣ್ಯನು. ಅವನೊಡನೆ ಯುದ್ಧಮಾಡುವವನು ನಿಮ್ಮಲ್ಲಾವ ನಿರುವನು?

೪೧. ಜಗನ್ಮಾತೆಯಾದ ಭದ್ರಕಾಳಿಯು, ಖಡ್ಗ ಮತ್ತು ಕಪಾಲಗಳನ್ನು ಧರಿಸಿ ಬಂದರೆ ಅವಳನ್ನು ಎದುರಿಸಿ ಯುದ್ಧಮಾಡುವವನಾರು?

೪೨. ಸಹಸ್ರ ಬಾಹುಗಳುಳ್ಳ ಆ ದೇವಿಯು, ಕಂಠದಲ್ಲಿ ರುಂಡಮಾಲೆಗಳನ್ನು ಧರಿಸಿ, ಒಂದುಯೋಜನ ದೀರ್ಘವಾಗಿಯೂ, ಹತ್ತುಯೋಜನ ಅಗಲವಾಗಿಯೂ ಇರುವ ಮುಖದಿಂದ ಭಯಂಕರಳಾಗಿದ್ದಾಳೆ.

ಸಪ್ತತಾಲಪ್ರಮಾಣಾಶ್ಚ ಯಸ್ಯಾ ದಂತಾ ಭಯಾನಕಾಃ ।
ಕ್ರೋಶಪ್ರಮಾಣಜಿಹ್ವಾ ಚ ಮಹಾಲೋಲಾ ಭಯಂಕರೀ ॥ ೪೩ ॥

ಅತೀವ ರೌದ್ರಾಃ ಸನ್ನದ್ಧಾ ಭೀಮಾಃ ಶಂಕರಕಿಂಕರಾಃ ।
ಅತಿಭೀಮಾ ಭೈರವಾಶ್ಚ ನಂದೀ ಚರಣಕರ್ಕಶಃ ॥ ೪೪ ॥

ಶಿವಸ್ಯ ಪಾರ್ಷದಾಃ ಸರ್ವೇ ಮಹಾಬಲಪರಾಕ್ರಮಾಃ ।
ವೀರಭದ್ರಾದಯಃ ಶೂರಾಃ ಕೋಟಿಸೂರ್ಯಸಮಪ್ರಭಾಃ ॥ ೪೫ ॥

ಸಹಸ್ರಮೂರ್ಧ್ನಃ ಶೇಷಸ್ಯ ಫಣಾಮಂಡಲಭೂಷಣಂ ।
ವಿಶ್ವಂ ಸರ್ಷಪತುಲ್ಯಂ ಚ ಕೋ ವಾ ಯೋದ್ಧಾ ಚ ತತ್ಸಮಃ ॥ ೪೬ ॥

ಕಾಲಾಗ್ನಿರುದ್ರಃ ಸಂಹರ್ತಾ ಯಸ್ಯ ಶಂಭೋಶ್ಚ ಕಿಂಕರಾಃ ।
ಶೂಲಿನಸ್ತ್ರಿಪುರಘ್ನಸ್ಯ ಜ್ವಲತೋ ಬ್ರಹ್ಮತೇಜಸಾ ॥ ೪೭ ॥

---

೪೩. ಆಕೆಯ ಹಲ್ಲುಗಳು ಏಳು ತಾಳೆಯಮರದಷ್ಟು ಉದ್ದವಾಗಿಯೂ, ನಾಲಿಗೆಯು ಒಂದು ಹರಿದಾರಿಯಷ್ಟು ಉದ್ದವಾಗಿಯೂ ನೋಡಿದವರಿಗೆ ಭಯ ಜನಕವಾಗಿದೆ

೪೪. ಅಲ್ಲದೆ ಶಂಕರನ ಕಿಂಕರರಾದ ಭೈರವರು ರೌದ್ರಾಕಾರದಿಂದ ಕೂಡಿ ಯುದ್ಧಸನ್ನದ್ಧರಾಗಿದ್ದಾರೆ. ಕಠಿನ ಚರಣಗಳುಳ್ಳ ನಂದಿಯೂ ಕೂಡ ಯುದ್ಧ ಸಿದ್ಧನಾಗಿರುವನು.

೪೫. ಶಿವನ ಪಾರ್ಷದರೆಲ್ಲರೂ ಹೆಚ್ಚು ಬಲಪರಾಕ್ರಮಗಳಿಂದ ಮೆರೆಯು ತ್ತಿರುವರು. ಶೂರರಾದ ವೀರಭದ್ರ ಮುಂತಾದವರು ಕೋಟಿಸೂರ್ಯರಂತೆ ಉಗ್ರ ವಾಗಿದ್ದಾರೆ.

೪೬. ಸಾವಿರ ತಲೆಯುಳ್ಳ ಆದಿಶೇಷನು ತನ್ನ ಹೆಡೆಗಳಿಗೆ ಅಲಂಕಾರಪ್ರಾಯ ವಾಗಿರುವ ಭೂಮಂಡಲವನ್ನು ಸಾಸಿವೆಕಾಳಿಗೆ ಸಮನಾಗಿ ಎಣಿಸುವನು. ಅಂಥ ವೀರನನ್ನು ಎದುರಿಸುವವರಾರು ?

೪೭. ಶೂಲಿಯೂ, ತ್ರಿಪುರಾರಿಯೂ, ಬ್ರಹ್ಮತೇಜಸ್ವಿಯೂ ಆದ ಶಂಭುವಿನ ಕಿಂಕರನಾದ ಕಾಲಾಗ್ನಿರುದ್ರನು ಜಗತ್ತನ್ನೆಲ್ಲ ಸಂಹರಿಸಬಲ್ಲ ಶಕ್ತನಾಗಿರುವನು. ಅವನನ್ನು ಎದುರಿಸುವವರಾರು ?

ಯಸ್ಯ ಪಾಶುಪತಾಸ್ತ್ರೇಣ ದುರ್ನಿವಾರ್ಯೇಣ ಪುತ್ರಕಾಃ ।
ಭಸ್ಮೀಭೂತಂ ಭವೇದ್ವಿಶ್ವಂ ದೈತ್ಯಾನಾಂ ಚೈವ ಕಾ ಕಥಾ ॥ ೪೮ ॥

ಯಸ್ಯ ಶೂಲೇನ ಭಿನ್ನಶ್ಚ ಶಂಖಚೂಡಃ ಪ್ರತಾಪವಾನ್ ।
ಸುದಾಮಾ ಪಾರ್ಷದವರಃ ಕೃಷ್ಣಸ್ಯ ಪರಮಾತ್ಮನಃ ॥ ೪೯ ॥

ತ್ರಿಕೋಟಿಸೂರ್ಯಸದೃಶಸ್ತೇಜಸ್ವೀ ಪರಮಾದ್ಭುತಃ ।
ರಾಧಾಕವಚಕಂಠಶ್ಚ ಸರ್ವದೈತ್ಯಜನೇಶ್ವರಃ ॥ ೫೦ ॥

ಮಧುಕೈಟಭಯೋರ್ಹನ್ತಾ ಹಿರಣ್ಯಕಶಿಪೋಶ್ಚ ಯಃ ।
ಸ ಚ ವಿಷ್ಣುಃ ಸಮಾಯಾತಿ ಶ್ವೇತದ್ವೀಪಾತ್ಸ್ವಯಂ ಪ್ರಭುಃ ॥ ೫೧ ॥

ಇತ್ಯುಕ್ತ್ವಾ ಜಗತಾಂ ಧಾತಾ ವಿರರಾಮ ಚ ಸಂಸದಿ ।
ಪ್ರಹಸ್ಯೋವಾಚ ದೈತೇಯೋ ದಾನವಾನಾಮಧೀಶ್ವರಃ ॥ ೫೨ ॥

---

೪೮. ಎಲೈ ಮಕ್ಕಳಿರಾ, ಯಾವ ಶಿವನ ಅಪ್ರತಿಹತವಾದ ಪಾಶುಪತಾಸ್ತ್ರದಿಂದ ನಿಖಿಲ ಜಗತ್ತೇ ಭಸ್ಮವಾಗುವಾಗ ಇನ್ನು ದೈತ್ಯರ ಗತಿಯನ್ನು ಹೇಳಬೇಕೆ?

೪೯. ಯಾವ ಪರಶಿವನ ಶೂಲಾಯುಧದಿಂದ ಪ್ರತಾಪಶಾಲಿಯಾದ ಶಂಖಚೂಡನು ಪೆಟ್ಟುತಿಂದು ಶ್ರೀಕೃಷ್ಣಪರಮಾತ್ಮನ ಪಾರ್ಷದನಾಗಿ ಸುದಾಮನೆನಿಸಿಕೊಂಡನೋ ಆ ಶಿವನ ಮಹಿಮೆಯನ್ನು ಎಷ್ಟು ಹೇಳಲಿ.

೫೦–೫೧. ಅಲ್ಲದೆ ಮೂರುಕೋಟಿ ಸೂರ್ಯರಂತೆ ಅತ್ಯುಗ್ರನೂ, ಕಂಠದಲ್ಲಿ ರಾಧಾಕವಚವನ್ನು ಧರಿಸಿರುವವನೂ, ಸಕಲ ದೈತ್ಯರಿಗೆ ಒಡೆಯನೂ, ಮಧುಕೈಟಭರ ಮತ್ತು ಹಿರಣ್ಯಕಶಿಪುವಿನ ಸಂಹಾರಕನೂ ನಿಗ್ರಹಾನುಗ್ರಹ ಸಮರ್ಥನೂ ಆದ ಮಹಾವಿಷ್ಣುವು ಶ್ವೇತದೀಪದಿಂದ ಬರುವನು.

೫೨. ಈ ಪ್ರಕಾರವಾಗಿ ಹೇಳಿ ಜಗದೊಡೆಯನಾದ ಬ್ರಹ್ಮನು ಆ ಸಭೆಯಲ್ಲಿ ಮೌನವಹಿಸಿದನು. ಆ ಮಾತುಗಳನ್ನು ಕೇಳಿ ದಾನವರಿಗೆಲ್ಲ ಶ್ರೇಷ್ಠನಾದ ಪ್ರಹ್ಲಾದನು ನಸುನಕ್ಕು ಇಂತುನುಡಿದನು.

|| ಪ್ರಹ್ಲಾದ ಉವಾಚ ||

ನಮಸ್ತುಭ್ಯಂ ಜಗದ್ಧಾತಃ ಸರ್ವೇಷಾಂ ಪ್ರಾಕ್ತನೇಶ್ವರ ।
ಸರ್ವಪೂಜ್ಯಃ ಸರ್ವನಾಥಃ ಕಿಂ ವಕ್ಷ್ಯಾಮಿ ತವಾಗ್ರತಃ || ೫೩ ||

ಹಿರಣ್ಯಕಶಿಪೋರ್ಹನ್ತಾ ಮಧುಕೈಟಭಯೋಶ್ಚ ಯಃ ।
ಸಾ ಕಲಾ ಯಸ್ಯ ಕೃಷ್ಣಸ್ಯ ಪರಿಪೂರ್ಣತಮಸ್ಯ ಚ || ೫೪ ||

ಸರ್ವಾಂತರಾತ್ಮನಸ್ತಸ್ಯ ಚಕ್ರಂ ನಾಮ ಸುದರ್ಶನಂ ।
ಅಸ್ಮಾಕಂ ಲೋಕಮಸ್ಮಾಂಶ್ಚ ತದ್ರಾಗ್ಥಕ್ಷ್ಯತಿ ದುಸ್ಸಹಂ || ೫೫ ||

ತತೋ ನ ಬಲವಾನ್ಶಂಭುರ್ನ ಚ ಪಾಶುಪತಂ ವಿಧೇ ।
ನ ಚ ಕಾಲೀ ನ ಶೇಷಶ್ಚ ನ ಚ ರುದ್ರಾದಯಃ ಸುರಾಃ || ೫೬ ||

ಯಸ್ಯ ಲೋಮಸು ವಿಶ್ವಾನಿ ನಿಖಿಲಾನಿ ಜಗತ್ಪತೇ ।
ಸರ್ವಾಧಾರಸ್ಯ ಚ ವಿಭೋಃ ಸ್ಥೂಲಾತ್ಸ್ಥೂಲತರಸ್ಯ ಚ || ೫೭ ||

---

೫೩. ಪ್ರಹ್ಲಾದ:—ಎಲೈ ಜಗತ್ಸೃಷ್ಟಿಕರ್ತನೇ, ಸರ್ವಾದಿಯೂ, ಸರ್ವಪೂಜ್ಯನೂ, ಸರ್ವರೊಡೆಯನೂ ಆದ ನಿನ್ನ ಮುಂದೆ ನಾನು ಏನು ನುಡಿಯಲಿ.

೫೪. ಹಿರಣ್ಯಕಶಿಪು ಮತ್ತು ಮಧುಕೈಟಭರ ಸಂಹಾರಕನಾದ ಮಹಾವಿಷ್ಣುವು ಪರಿಪೂರ್ಣನಾದ ಶ್ರೀಕೃಷ್ಣಪರಮಾತ್ಮನ ಕಲಾಮಾತ್ರನು.

೫೫ ಸರ್ವಾಂತರ್ಯಾಮಿಯಾದ ಶ್ರೀಕೃಷ್ಣಪರಮಾತ್ಮನ ದುರ್ದರ್ಶವಾದ ಸುದರ್ಶನವೆಂಬ ಚಕ್ರವು ನಮ್ಮನ್ನೂ, ನಮ್ಮ ಲೋಕವನ್ನೂ ಸರ್ವದಾ ರಕ್ಷಿಸುತ್ತಿರುವುದು.

೫೬. ಎಲೈ ವಿಧಿಯೇ, ಶಿವನಾಗಲೀ, ಅವನ ಪಾಶುಪತಾಸ್ತ್ರವಾಗಲೀ, ದುರ್ಗಿಯಾಗಲೀ, ಶೇಷನಾಗಲೀ, ಏಕಾದಶರುದ್ರರೇ ಆಗಲೀ, ದೇವತೆಗಳೇ ಆಗಲಿ ಆ ಚಕ್ರಕ್ಕಿಂತ ಬಲಿಷ್ಠರಲ್ಲ.

೫೭. ಸರ್ವಾಧಾರನೂ, ಸ್ಥೂಲವಸ್ತುಗಳಿಗಿಂತ ಸ್ಥೂಲನೂ ಆದ ಆ ಜಗದೊಡೆಯನ ಲೋಮಕೂಪಗಳಲ್ಲಿ ನಿಖಿಲ ವಿಶ್ವವೂ ಅಡಗಿದೆ.

ಷೋಡಶಾಂಶೋ ಭಗವತಃ ಸ ಚೈವ ಹಿ ಮಹಾನ್ವಿರಾಟ್ ।
ಅನಂತೋ ನ ಹಿ ತತ್ಸ್ಥೂಲೋ ನ ಕಾಲೀ ಬೃಹತೀ ತತಃ ॥ ೫೮ ॥

ಆಗಚ್ಛಂತು ಸುರಾಃ ಸರ್ವೇ ಯುದ್ಧಂ ಕುರ್ವಂತು ಸಾಂಪ್ರತಂ ।
ನ ಬಿಭೇಮಿ ಶರೇಭ್ಯಶ್ಚ ನ ಚ ಪಾಶುಪತಾದ್ಧರಾತ್ ॥ ೫೯ ॥

ನಮಸ್ತಸ್ಮೈ ಭಗವತೇ ಶಿವಾಯ ಶಿವರೂಪಿಣೇ ।
ನಮೋಽನಂತಾಯ ಸಾಧುಭ್ಯೋ ವೈಷ್ಣವೇಭ್ಯಃ ಪ್ರಜಾಪತೇ ॥ ೬೦ ॥

ಶ್ರೀಕೃಷ್ಣಸ್ಯ ಪ್ರಸಾದೇನ ನಿರ್ಭಯೋಽಹಂ ನಿರಾಮಯಃ ।
ನ ಮೇ ಸ್ವಾತ್ಮಬಲಂ ಬ್ರಹ್ಮಂಸ್ತದ್ಬಲಂ ಯತ್ಪ್ರಭೋರ್ಬಲಂ ॥ ೬೧ ॥

ಸ್ವಪಾಪೇನ ಮೃತೆಸ್ತತೋ ಪುರಾ ವೈ ವಿಷ್ಣುನಿಂದಯಾ ।
ನಿರ್ಬಂಧಾಚ್ಛಂಖಚೂಡಶ್ಚ ದರ್ಪಾಚ್ಚ ಮಧುಕೈಟಭೌ ॥ ೬೨ ॥

---

೫೮. ಮಹಾವಿರಾಟ್ಪುರುಷನು ಆ ಪರಮಾತ್ಮನ ಹದಿನಾರನೆಯ ಒಂದಂಶ ಮಾತ್ರನಾಗಿರುವನು ಅನಂತನಾಗಲೀ, ಮಹಾಕಾಳಿಯಾಗಲೀ, ಆ ಪರಮಾತ್ಮನಿಗಿಂತ ವ್ಯಾಪಕರಲ್ಲ.

೫೯. ಆದುದರಿಂದ ಈಗ ಎಲ್ಲ ದೇವತೆಗಳೂ ಬಂದು ನನ್ನೊಡನೆ ಕಾದಾಡಲಿ. ನಾವು ಶಂಭುವಿಗಾಗಲೀ, ಅವನ ಪಾಶಪತಾಸ್ತ್ರಕ್ಕಾಗಲೀ ಲೇಶಮಾತ್ರವೂ ಹೆದರುವುದಿಲ್ಲ.

೬೦. ಎಲೈ ಬ್ರಹ್ಮದೇವನೇ, ಸರ್ವಮಂಗಳಸ್ವರೂಪನಾದ ಶಿವನಿಗೂ, ಆದಿಶೇಷನಿಗೂ, ವಿಷ್ಣುಭಕ್ತರಾದ ಸಂತರಿಗೂ ನಾನು ನಮಸ್ಕರಿಸುವೆನು.

೬೧. ಶ್ರೀಕೃಷ್ಣಪರಮಾತ್ಮನ ಪ್ರಭಾವದಿಂದ ನಾನು ನಿರೋಗಿಯೂ, ನಿರ್ಭಯನೂ ಆಗಿದ್ದೇನೆ. ಎಲೈ ಬ್ರಹ್ಮನೇ, ನನಗೆ ಸ್ವಂತಬಲವಿಲ್ಲ. ನನಗಿರುವ ಬಲವೆಲ್ಲವೂ ಆ ಪರಮಾತ್ಮನದೇ.

೬೨. ಪೂರ್ವದಲ್ಲಿ ನಮ್ಮ ತಂದೆಯು ವಿಷ್ಣುನಿಂದೆ ಮಾಡಿದ ಪಾಪಕ್ಕೆ ಗುರಿಯಾಗಿ ಮೃತಿಹೊಂದಿದನು. ಶಂಖಚೂಡನೂ ಮತ್ತು ಮಧುಕೈಟಭರೂ ತಮ್ಮ ದರ್ಪದಿಂದ ನಾಶಹೊಂದಿದರು.

ತ್ರಿಪುರಃ ಕಿಂಕರೋಽಸ್ಮಾಕಂ ವೀರತ್ವೇನ ನ ಗಣ್ಯತೇ ।
ತಥಾಪಿ ಪ್ರೇರಿತಸ್ತೇನ ಸರಥಸ್ಥೋ ಮಹೇಶ್ವರಃ ॥ ೬೩ ॥

ಇತ್ಯುಕ್ತ್ವಾ ದಾನವಶ್ರೇಷ್ಠೋ ವಿರರಾಮ ಚ ಸಂಸದಿ ।
ಉವಾಚ ಜಗತಾಂ ಧಾತಾ ಪುನರೇವ ಚ ನಾರದ ॥ ೬೪ ॥

॥ ಬ್ರಹ್ಮೋವಾಚ ॥

ವಿನಾಶಕಾರಣಂ ಯುದ್ಧಮುಭಯೋರ್ದೈತ್ಯದೇವಯೋಃ ।
ಸುಪ್ರೀತ್ಯಾಚರಣಂ ವತ್ಸ ಸರ್ವಮಂಗಳಕಾರಣಂ ॥ ೬೫ ॥

ತಾರಾಂ ಭಿಕ್ಷಾಂ ದೇಹಿ ಮಹ್ಯಂ ಭಿಕ್ಷುಕಾಯ ಚ ವೇಧಸೇ ।
ವಿಮುಖೇ ಭಿಕ್ಷುಕೇ ರಾಜನ್ಗೃಹಸ್ಥಃ ಸರ್ವಪಾಪಭಾಕ್ ॥ ೬೬ ॥

---

೬೩. ನಮ್ಮ ಸೇವಕವೃಂದಕ್ಕೆ ಸೇರಿದ ತ್ರಿಪುರನನ್ನು ನಾವು ವೀರನೆಂದೇ ಎಣಿಸುವುದಿಲ್ಲ. ಆದರೂ ಅವನು ರಥದಲ್ಲಿ ಕುಳಿತಿದ್ದ ಮಹೇಶ್ವರನನ್ನು ಕೆಣಕಿ ನಾಶವಾದನು.

೬೪. ಎಲೈ ನಾರದನೇ, ದಾನವಾಗ್ರಗಣ್ಯನಾದ ಪ್ರಹ್ಲಾದನು ಆ ಸಭೆಯಲ್ಲಿ ಇಂತು ನುಡಿದು ಸುಮ್ಮನಾಗಲು ಜಗದ್ವಿಧಾಯಕನಾದ ಬ್ರಹ್ಮನು ಪುನಃ ಹೀಗೆ ಹೇಳಿದನು.

೬೫. ಬ್ರಹ್ಮ:—ದೇವತೆಗಳಿಗೂ, ದೈತ್ಯರಿಗೂ ಯುದ್ಧವಾಗುವುದರಿಂದ ಎಲ್ಲರ ನಾಶವುಂಟಾಗುವುದೇ ಹೊರತು ಯಾವ ಪ್ರಯೋಜನವೂ ಇಲ್ಲ. ಆದುದರಿಂದ ಎಲೈ ವತ್ಸನಾದ ಪ್ರಹ್ಲಾದನೇ, ನಾವು ಅನ್ಯೋನ್ಯಪ್ರೀತಿಯಿಂದಿರುವುದು ನಮ್ಮೆಲ್ಲರ ಮಂಗಳಾಭಿವೃದ್ಧಿಗೆ ಕಾರಣವಾಗುವುದು.

೬೬. ನಿನ್ನ ಮುಂದೆ ಯಾಚಕನಾಗಿ ನಿಂತಿರುವ ನನಗೆ ತಾರೆಯನ್ನು ಭಿಕ್ಷೆಯಾಗಿ ನೀಡು. ಯಾಚಕನಿಗೆ ವಿಮುಖನಾಗುವ ಗೃಹಸ್ಥನು ಸಕಲ ಪಾಪಗಳಿಗೂ ಪಾತ್ರನಾಗುವನು.

|| ಸನತ್ಕುಮಾರ ಉವಾಚ ||

ಸ್ವಕೀರ್ತಿಂ ರಕ್ಷ ರಾಜೇಂದ್ರ ಸಿಂಹಸ್ತ್ವಂ ಸುರದೈತ್ಯಯೋಃ |
ಯಸ್ಯ ಭಿಕ್ಷುರ್ಜಗದ್ಧಾತಾ ತಸ್ಯ ಕೀರ್ತೇಶ್ಚ ಕಾ ಕಥಾ || ೬೭ ||

|| ಸನಾತನ ಉವಾಚ ||

ನ ಜಿತಸ್ತ್ವಂ ಸುರೇಂದ್ರೈಶ್ಚ ಬ್ರಹ್ಮೇಶಾನಪುರೋಗಮೈಃ |
ರಕ್ಷಿತಃ ಕೃಷ್ಣಚಕ್ರೇಣ ವೈಷ್ಣವಃ ಪುಣ್ಯವಾಂಚ್ಛುಚಿಃ || ೬೮ ||

|| ಸನಂದನ ಉವಾಚ ||

ಯಸ್ಯೇಷ್ಟದೇವಃ ಸರ್ವಾತ್ಮಾ ಶ್ರೀಕೃಷ್ಣಃ ಪ್ರಕೃತೇಃ ಪರಃ |
ಗುರುಶ್ಚ ವೈಷ್ಣವಃ ಶುಕ್ರಃ ಸ ಚ ಕೇನ ಜಿತೋ ಮಹಾನ್ || ೬೯ ||

|| ಸನಕ ಉವಾಚ ||

ಪುಣ್ಯವಾನ್ನ ಜಿತಃ ಕೇನ ಜಿತಃ ಪಾಪೀ ಸ್ವಪಾತಕೈಃ |
ಪುಣ್ಯದೀಪೋ ನ ನಿರ್ವಾತಿ ಪಾಷಂಡೇನೈವ ವಾಯುನಾ || ೭೦ ||

---

೬೭. ಸನತ್ಕುಮಾರ :—ಎಲೈ ದಾನವೇಶ್ವರನಾದ ಪ್ರಹ್ಲಾದನೇ, ದೇವತೆಗಳಲ್ಲೂ ಮತ್ತು ದೈತ್ಯರಲ್ಲೂ ಸಿಂಹಸದೃಶವಾದ ನೀನು ನಿನ್ನ ಕೀರ್ತಿಯನ್ನು ಉಳಿಸಿಕೋ. ಜಗತ್ಸೃಷ್ಟಿಕರ್ತನಾದ ಬ್ರಹ್ಮನೇ ನಿನ್ನ ಮುಂದೆ ಭಿಕ್ಷುಕನಾಗಿ ನಿಂತಿರುವಾಗ ನಿನ್ನ ಕೀರ್ತಿ ಎಷ್ಟಿರಬೇಕು?

೬೮ ಸನಾತನ :—ವಿಷ್ಣುಭಕ್ತನೂ, ಪುಣ್ಯಶಾಲಿಯೂ, ಆಚಾರನಿಷ್ಠನೂ ಆದ ನಿನ್ನನ್ನು, ಬ್ರಹ್ಮ, ಮಹೇಶ ಮತ್ತು ಇತರ ದೇವತೆಗಳೂ ಗೆಲ್ಲಲಾರದೆ ಹೋದರು.

೬೯. ಸನಂದನ :—ಯಾರ ಇಷ್ಟದೇವನು ಪ್ರಕೃತಿಗಿಂತ ಶ್ರೇಷ್ಠನಾದ ಶ್ರೀಕೃಷ್ಣಪರಮಾತ್ಮನೋ ಮತ್ತು ಗುರುವು ಪರಮವೈಷ್ಣವನಾದ ಶುಕ್ರಾಚಾರ್ಯನೋ ಆ ಮಹಾಮಹಿಮನಾದ ಪ್ರಹ್ಲಾದನನ್ನು ಗೆಲ್ಲುವರಾರು?

೭೦. ಸನಕ :—ಪುಣ್ಯಮಾಡಿದವನನ್ನು ಯಾರೂ ಗೆಲ್ಲಲಾಗುವುದಿಲ್ಲ. ಪಾಪಮಾಡಿದವನನ್ನು ಅವನ ಪಾಪಗಳೇ ನಾಶಗೊಳಿಸುವುವು. ಪುಣ್ಯದೀಪವೆಂಬುದು ಪ್ರಾಕೃತವಾಯುವಿನಿಂದ ನಾಶವಾಗುವುದಿಲ್ಲ.

॥ ಋಷಯ ಊಚುಃ ॥

ದೇಹಿ ತಾರಾಂ ಮಹಾಭಾಗ ಚಂದ್ರ ಪ್ರಾಣಾಧಿಕಾಂ ಗುರೋಃ ।
ಸ್ವಕೀರ್ತಿಂ ರಕ್ಷ ಸುಚಿರಂ ಪ್ರಾರ್ಥಯಾಮ ಪುನಃ ಪುನಃ ॥ ೨೦ ॥

॥ ಪ್ರಹ್ಲಾದ ಉವಾಚ ॥

ಸ್ಥಿತೇ ಮದೀಶ್ವರೇ ಸಾಕ್ಷಾನ್ನ ಹಿ ಭೃತ್ಯೋ ವಿರಾಜತೇ ।
ಕರ್ತಾರಂ ಬ್ರೂಹಿ ಮನ್ನಾಥಂ ಗುರುಂ ಶುಕ್ರಂ ಸತಾಂ ವರಂ ॥ ೨೧ ॥

ಶಿಷ್ಯಾಣಾಮಾಧಿಪತ್ಯೇ ಚ ಸಾಧೂನಾಂ ಗುರುರೀಶ್ವರಃ ।
ಗುರೌ ಸಮರ್ಪಿತಂ ಪೂರ್ವಂ ಸರ್ವೈಶ್ವರ್ಯಂ ಮುನೀಶ್ವರೇ ॥ ೨೨ ॥

ವಯಂ ಭೃತ್ಯಾಶ್ಚ ಪೋಷ್ಯಾಶ್ಚ ಸ್ವಗುರೋಃ ಪರಿಚಾರಕಾಃ ।
ತೇ ಚ ಶಿಷ್ಯಾಃ ಕುಶಲಿನೋ ಗುರ್ವಾಜ್ಞಾಂ ಪಾಲಯಂತಿ ಯೇ ॥ ೨೩ ॥

---

೨೦. ಋಷಿಗಳು:—ಎಲೈ ಮಹಾತ್ಮನೇ, ಗುರುವಾದ ಬೃಹಸ್ಪತಿಗೆ, ಚಂದ್ರನ ಪ್ರಾಣಗಳಿಗಿಂತಲೂ ಮಿಗಿಲಾದ ತಾರೆಯನ್ನು ಹಿಂದಕ್ಕೆ ಕೊಟ್ಟು, ನಿನ್ನ ಕೀರ್ತಿಯನ್ನು ಉಳಿಸಿಕೊಳ್ಳೆಂದು ಮತ್ತೆ ಮತ್ತೆ ಪ್ರಾರ್ಥಿಸುತ್ತೇವೆ.

೨೧. ಪ್ರಹ್ಲಾದ:—ನನ್ನ ಗುರುವಾದ ಶುಕ್ರಾಚಾರ್ಯನೇ ಇಲ್ಲಿರುವಾಗ ಸೇವಕನಾದ ನನಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಆದುದರಿಂದ ನಮಗೆಲ್ಲ ಅಧಿಪನೂ, ಸತ್ಪುರುಷರಲ್ಲಿ ಶ್ರೇಷ್ಠನೂ ಆದ ಶುಕ್ರಾಚಾರ್ಯರಲ್ಲಿ ವಿಜ್ಞಾಪಿಸಿಕೊಳ್ಳಿರಿ.

೨೨. ಸಚ್ಛಿಷ್ಯರು ಸರ್ವಶಕ್ತನಾದ ತಮ್ಮ ಗುರುವಿಗೆ ಅಧೀನರು, ಆದುದರಿಂದ ನಮ್ಮ ಸಕಲ ಸ್ವಾತಂತ್ರ್ಯವನ್ನೂ ಮುನಿಶ್ರೇಷ್ಠನಾದ ಶುಕ್ರಾಚಾರ್ಯನಿಗೆ ಸಮರ್ಪಿಸಿರುವೆವು.

೨೩. ಸೇವಕರೂ, ಪೋಷ್ಯವರ್ಗಕ್ಕೆ ಸೇರಿದವರೂ ಆದ ನಾವು ನಮ್ಮ ಗುರುವಿನ ಪರಿಚರ್ಯೆಯಲ್ಲಿ ಆಸಕ್ತರಾಗಿರುವೆವು. ಯಾರು ಗುರುವಿನ ಆಜ್ಞೆಯನ್ನು ಶಿರಸಾ ವಹಿಸಿ ನಡೆಯುವರೋ ಅವರೇ ಶಿಷ್ಯರಲ್ಲಿ ಧನ್ಯರು.

ಪ್ರಹ್ಲಾದಸ್ಯ ವಚಃ ಶ್ರುತ್ವಾ ಚಕಾರ ಪ್ರಾರ್ಥನಾಂ ಕವಿಂ ।
ದದೌ ಶುಕ್ರಶ್ಚ ತಾರಾಂ ತಾಂ ಚಂದ್ರಂ ಚ ಮಲಿನಂ ಮುನೇ ॥ ೭೫ ॥

ದತ್ವಾ ತಾರಾಂ ವಿಧುಂ ಶುಕ್ರಃ ಪ್ರಣನಾಮ ವಿಧೇಃ ಪದೇ ।
ನಮಸ್ಕೃತ್ಯ ಮುನಿಭ್ಯಶ್ಚ ಪ್ರಣತಃ ಸ್ವಪುರಂ ಯಯೌ ॥ ೭೬ ॥

ಪ್ರಹ್ಲಾದಃ ಸಗಣೋ ಭಕ್ತ್ಯಾ ನಮಸ್ಕೃತ್ಯ ವಿಧೇಃ ಪದೇ ।
ಪ್ರತ್ಯೇಕಂ ವೈಃಮುನಿಗಣಾನ್ಪ್ರಣತಃ ಸ್ವಗೃಹಂ ಯಯೌ ॥ ೭೭ ॥

ಬ್ರಹ್ಮಾ ದದರ್ಶ ತಾರಾಂ ಚ ಪ್ರಣತಾಂ ಸ್ವಪದೇ ಸತೀಂ ।
ಲಜ್ಜಯಾ ನಮ್ರವಕ್ತ್ರಾಂ ಚ ರುದತೀಂ ಗುರ್ವಿಣೀಂ ಮುನೇ ॥ ೭೮ ॥

ಚಂದ್ರಂ ಚ ಪ್ರಣತಂ ಧಾತಾ ಕ್ರೋಡೇ ಸಂಸ್ಥಾಪ್ಯ ಮಾಯಯಾ ।
ಉವಾಚ ಮಲಿನಾಂ ತಾರಾಂ ಕಾತರಾಂ ಚ ಕೃಪಾಮಯಃ ॥ ೭೯ ॥

---

೭೫. ಈ ರೀತಿಯಾದ ಪ್ರಹ್ಲಾದನ ಮಾತುಗಳನ್ನು ಕೇಳಿ ಎಲ್ಲರೂ ಶುಕ್ರಾಚಾರ್ಯನನ್ನು ಪ್ರಾರ್ಥಿಸಿದರು. ಆಗ ಶುಕ್ರಾಚಾರ್ಯನು ತಾರಾದೇವಿಯನ್ನೂ, ಕಳಂಕಿತನಾದ ಚಂದ್ರನನ್ನೂ ಹಿಂದಕ್ಕೆ ಕೊಟ್ಟನು.

೭೬. ಶುಕ್ರಾಚಾರ್ಯನು ತಾರಾದೇವಿಯನ್ನೂ, ಚಂದ್ರನನ್ನೂ ದೇವತೆಗಳಿಗೆ ಅರ್ಪಿಸಿ, ಬ್ರಹ್ಮನ ಪಾದಕಮಲಗಳಿಗೆ ವಂದಿಸಿದನು. ಆ ಮುನಿಗಳಿಗೂ ನಮಸ್ಕರಿಸಿ ತನ್ನ ಮಂದಿರಕ್ಕೆ ಹಿಂತಿರುಗಿದನು.

೭೭. ಪ್ರಹ್ಲಾದನೂ ಕೂಡ ತನ್ನ ಪರಿವಾರದೊಡಗೂಡಿ ಭಕ್ತಿಯಿಂದ ಬ್ರಹ್ಮನ ಚರಣಗಳಿಗೆ ವಂದಿಸಿ, ಆ ಮುನಿಗಳಿಗೂ ಪ್ರತ್ಯೇಕವಾಗಿ ನಮಿಸಿ ತನ್ನಾಲಯಕ್ಕೆ ತೆರಳಿದನು.

೭೮. ಅನಂತರ ಬ್ರಹ್ಮನು ದುಃಖದಿಂದಲೂ, ನಾಚಿಕೆಯಿಂದಲೂ ತಲೆಬಾಗಿ ತನ್ನ ಕಾಲುಗಳಿಗೆ ನಮಸ್ಕರಿಸಿದ ಪತಿವ್ರತೆಯೂ, ಗರ್ಭಿಣಿಯೂ ಆದ ತಾರೆಯನ್ನು ನೋಡಿ ಆಶೀರ್ವದಿಸಿದನು.

೭೯. ತನಗೆ ಸಾಷ್ಟಾಂಗವೆರಗಿದ ಚಂದ್ರನನ್ನೂ ಕೂಡ ತನ್ನ ಎದೆಯಲ್ಲಿ ಅಪ್ಪಿಕೊಂಡು, ಕೃಪಾಳುವಾದ ಬ್ರಹ್ಮನು, ಪಾತಿವ್ರತ್ಯ ಭಂಗವಾಯಿತೆಂದು ವ್ಯಥಿತಳಾದ ತಾರೆಯನ್ನು ಕುರಿತಿಂತೆಂದನು.

ತಾರೇ ತ್ಯಜ ಭಯಂ ಮತ್ತಃ ಭಯಂ ಕಿಂ ತೇ ಮಯಿ ಸ್ಥಿತೇ
ಸೌಭಾಗ್ಯಯುಕ್ತಾ ಸ್ವಪತೌ ಭವಿಷ್ಯಸಿ ವರೇಣ ಮೇ ‖ ೮೦ ‖

ದುರ್ಬಲಾ ಬಲಿನಾ ಗ್ರಸ್ತಾ ನಿಷ್ಕಾಮಾ ನ ಚ್ಯುತಾ ಭವೇತ್ ।
ಪ್ರಾಯಶ್ಚಿತ್ತೇನ ಶುದ್ಧಾ ಸಾ ನ ಸ್ತ್ರೀ ಜಾರೇಣ ದುಷ್ಯತಿ ‖ ೮೧ ‖

ಸಕಾಮಾ ಕಾಮತೋ ಜಾರಂ ಭಜತೇ ಸ್ವಸುಖೇನ ಚ ।
ಪ್ರಾಯಶ್ಚಿತ್ತಾನ್ನ ಶುದ್ಧಾ ಸಾ ಸ್ವಾಮಿನಾ ಪರಿವರ್ಜಿತಾ ‖ ೮೨ ‖

ಕುಂಭೀಪಾಕೇ ಪಚ್ಯತೇ ಸಾ ಯಾವಚ್ಚಂದ್ರದಿವಾಕರೌ ।
ಅನ್ನಂ ವಿಷ್ಠಾ ಜಲಂ ಮೂತ್ರಂ ಸ್ಪರ್ಶನಂ ಸರ್ವಪಾಪದಂ ‖ ೮೩ ‖

---

೮೦. ಎಲೌ ತಾರೆಯೇ, ನಾನಿರುವಾಗ ನಿನಗೆ ಭಯವೇತರದು. ನನ್ನ ವರದಿಂದ ಪುನಃ ನಿನ್ನ ಪತಿಸೌಭಾಗ್ಯವನ್ನು ನೀನು ಪಡೆಯುವೆ.

೮೧. ಅಬಲೆಯೂ, ನಿಷ್ಕಾಮಳೂ ಆದ ಸ್ತ್ರೀಯನ್ನು ಬಲಿಷ್ಠನೂ, ಕಾಮಿಯೂ ಆದವನು ಬಲಾತ್ಕಾರದಿಂದ ಸ್ವೀಕರಿಸಿದ ಮಾತ್ರಕ್ಕೆ ಅವಳ ಪಾತಿವ್ರತ್ಯವು ಚ್ಯುತಿ ಹೊಂದುವುದಿಲ್ಲ. ಆ ಹೆಂಗಸು ಪ್ರಾಯಶ್ಚಿತ್ತದಿಂದ ಶುದ್ಧಿಯಾಗುವಳು. ಅವಳಲ್ಲಿ ವ್ಯಭಿಚಾರ ದೋಷವಿರುವುದಿಲ್ಲ.

೮೨. ಕಾಮಿನಿಯು ಕಾಮಾತುರಳಾಗಿ, ರತಿಸುಖಾಪೇಕ್ಷೆಯಿಂದ ಜಾರನನ್ನು ಕೂಡಿದರೆ, ಅವಳು ಪ್ರಾಯಶ್ಚಿತ್ತದಿಂದ ಶುದ್ಧಳಾಗುವುದಿಲ್ಲ. ಆಕೆಯ ಪತಿಯು ಅವಳನ್ನು ತ್ಯಜಿಸುವನು.

೮೩. ಆ ಕುಲಟೆಯು ಚಂದ್ರಸೂರ್ಯರಿರುವವರೆಗೆ ಕುಂಭೀಪಾಕ ನರಕದಲ್ಲಿ ತೊಳಲುವಳು. ಆಕೆಯು ಮುಟ್ಟಿದ ಅನ್ನವು ಮಲಸದೃಶವೂ, ಜಲವು ಮೂತ್ರ ಸದೃಶವೂ ಆಗುವುದು.

ಸಾಪೀ ಯಸ್ಯಾಶ್ಚ ತಸ್ಯಾಶ್ಚ ಸಾಧುಭಿಃ ಪರಿವರ್ಜಿತಂ ।
ಕಸ್ಯ ಗರ್ಭಂ ವದ ಶುಭೇ ಗಚ್ಛ ವತ್ಸೇ ಗುರೋರ್ಗೃಹಂ || ೮೪ ||

ತ್ಯಜ ಲಜ್ಜಾಂ ಮಹಾಭಾಗೇ ಸರ್ವಂ ಚ ಪ್ರಾಕ್ತನಾದ್ಭವೇತ್ ।
ಬ್ರಹ್ಮಣೋ ವಚನಂ ಶ್ರುತ್ವಾ ತಮುವಾಚ ಸತೀ ತದಾ || ೮೫ ||

ಚಂದ್ರಸ್ಯ ಗರ್ಭಂ ಹೇ ತಾತ ಬಿಭರ್ಮ್ಯದ್ಯ ಸ್ವಕರ್ಮಣಾ ।
ಸರ್ವೇ ಮೇ ಸಾಕ್ಷಿಣಃ ಸಂತಿ ದುರ್ಬಲಾಯಾಃ ಪ್ರಜಾಪತೇ || ೮೬ ||

ಯದಾ ಜಗ್ರಾಹ ಚಂದ್ರೋ ಮಾಂ ದಯಾಹೀನಶ್ಚ ದುರ್ಮತಿಃ ।
ಇತ್ಯುಕ್ತ್ವಾ ತಾರಕಾ ದೇವೀ ಸುಷಾವ ಕನಕಪ್ರಭಂ || ೮೭ ||

ಕುಮಾರಂ ಸುಂದರಂ ತತ್ರ ಜ್ವಲಂತಂ ಬ್ರಹ್ಮತೇಜಸಾ ।
ಗೃಹೀತ್ವಾ ತನಯಂ ಚಂದ್ರೋ ನತ್ವಾ ಬ್ರಹ್ಮಾಣಮೀಶ್ವರಂ || ೮೮ ||

---

೮೪. ಸಾಧುಗಳು ಪಾಪಕೃತ್ಯವನ್ನು ಮಾಡಿದ ತನ್ನ ಸ್ತ್ರೀಯನ್ನು ಮುಟ್ಟದೆ ದೂರಮಾಡುವರು. ನೀನಾದರೋ ಬಲಾತ್ಕಾರಪಡಿಸಿದ ಚಂದ್ರನಿಂದ ಗರ್ಭವತಿಯಾಗಿದ್ದರೂ ನಿರ್ದೋಷಳಾಗಿರುವೆ. ಆದಕಾರಣ ನೀನು ನಿನ್ನ ಪತಿಗೃಹಕ್ಕೆ ಹೋಗಬಹುದು.

೮೫. 'ಮಹಾತಾಯಿಯೇ, ನೀನು ನಾಚಿಕೆಯನ್ನು ಬಿಡು. ಜನ್ಮಾಂತರದ ಕರ್ಮಾನುಗುಣವಾಗಿ ಎಲ್ಲವೂ ಸಂಭವಿಸುವುದು.' ಎಂದು ನುಡಿದ ಬ್ರಹ್ಮನ ಮಾತುಗಳನ್ನು ಕೇಳಿ ಪತಿವ್ರತೆಯಾದ ತಾರೆಯು ಇಂತೆಂದಳು.

೮೬. ಎಲೈ ಪಿತನೇ, ನಾನು ಕರ್ಮಾನುಗುಣವಾಗಿ ಈಗ ಚಂದ್ರನಿಂದ ಗರ್ಭಧಾರಣೆ ಮಾಡಿರುವೆನು. ದುರ್ಬಲೆಯಾದ ನನ್ನ ಈ ದೋಷಕ್ಕೆ ಎಲ್ಲರೂ ಸಾಕ್ಷಿಯಾಗಿದ್ದಾರೆ.

೮೭. ದಯಾರಹಿತನೂ, ದುರ್ಬುದ್ಧಿಯುಳ್ಳವನೂ ಆದ ಚಂದ್ರನು ನನ್ನನ್ನು ಬಲಾತ್ಕಾರದಿಂದೊಯ್ದುದುದು ಎಲ್ಲರಿಗೂ ತಿಳಿದಿದೆ.

೮೮. ಹೀಗೆ ಹೇಳಿ ತಾರಾದೇವಿಯು ಅಲ್ಲಿಯೇ ಚಿನ್ನದಂತೆ ಹೊಳೆಯುವ ಮೈಬಣ್ಣದಿಂದಲೂ, ಬ್ರಹ್ಮತೇಜಸ್ಸಿನಿಂದಲೂ ಪ್ರಜ್ವಲಿಸುತ್ತಿರುವ ಶಿಶುವನ್ನು ಪ್ರಸುವಿಸಿದಳು.

ಜಗಾಮ ಸ ಸ್ವಭವನಂ ಬ್ರಹ್ಮಾ ಸಿಂಧುತಟಂ ಯಯೌ |
ಸಾಧ್ವೀಂ ತಾರಾಂ ಚ ಗುರವೇ ದೇವೇಭ್ಯೋಽಪ್ಯಭಯಂ ದದೌ || ೮೯ ||

ಆಶಿಷಂ ಶಂಭುಧರ್ಮಾಭ್ಯಾಂ ದತ್ವಾ ಲೋಕಂ ಯಯೌ ವಿಧಿಃ |
ದೇವಾ ಯಯುಃ ಸ್ವಭವನಂ ಸ್ವಗೃಹಂ ಚ ಬೃಹಸ್ಪತಿಃ || ೯೦ ||

ಭಾವಾನುರಕ್ತವನಿತಾಂ ಪ್ರಾಪ್ಯ ಸಂಹೃಷ್ಟಮಾನಸಃ |
ತಾರಕಾಗರ್ಭಸಂಭೂತಃ ಸ ಏವ ಚ ಬುಧಃ ಸ್ವಯಂ || ೯೧ ||

ತೇಜಸ್ವೀ ಸದ್ಗ್ರಹೋ ಬ್ರಹ್ಮಂಶ್ಚಂದ್ರಸ್ಯ ತನಯೋ ಮಹಾನ್ |
ಸ ಏವ ನಂದನವನೇ ಚಿತ್ರಾಂ ಸಂಪ್ರಾಪ್ಯ ನಿರ್ಜನೇ || ೯೨ ||

ಘೃತಾಚ್ಯಾ ಗರ್ಭಸಂಭೂತಾಂ ಕುಬೇರಸ್ಯ ಚ ರೇತಸಾ |
ದೃಷ್ಟ್ವಾ ಚ ನಿರ್ಜನೇ ರಮ್ಯಾಂ ಕನ್ಯಾಂ ಕಮಲಲೋಚನಾಂ || ೯೩ ||

---

೮೯. ಚಂದ್ರನು ಆ ಶಿಶುವನ್ನು ಎತ್ತಿಕೊಂಡು ಬ್ರಹ್ಮನಿಗೂ, ಈಶ್ವರನಿಗೂ ವಂದಿಸಿ ತನ್ನಾಲಯಕ್ಕೆ ತೆರಳಿದನು. ಅನಂತರ ಬ್ರಹ್ಮನೂ ಸಮುದ್ರತೀರಕ್ಕೆ ಹೋಗಿ ಪತಿವ್ರತೆಯಾದ ತಾರೆಯನ್ನು ಗುರುವಿಗರ್ಪಿಸಿ ಎಲ್ಲ ದೇವತೆಗಳಿಗೂ ಅಭಯವಿತ್ತನು.

೯೦. ಶಂಕರನಿಗೂ, ಧರ್ಮನಿಗೂ ಆಶೀರ್ವದಿಸಿ ಬ್ರಹ್ಮನು ತನ್ನ ಲೋಕಕ್ಕೆ ತೆರಳಿದನು. ಇತ್ತ ದೇವತೆಗಳೂ ಮತ್ತು ಬೃಹಸ್ಪತಿಯೂ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು. ಬೃಹಸ್ಪತಿಯು ತನ್ನಲ್ಲಿ ಅನುರಕ್ತಳಾದ ಪತ್ನಿಯೊಡಗೂಡಿ ಸುಖ ಸಂತೋಷದಿಂದಿದ್ದನು.

೯೧. ಆ ತಾರೆಯ ಗರ್ಭದಲ್ಲಿ ಚಂದ್ರನಿಂದ ಜನಿಸಿದವನೇ ಬುಧನೆನಿಸಿದನು.

೯೨-೯೩. ಚಂದ್ರಪುತ್ರನಾದ ಬುಧನು ಗ್ರಹಗಳಲ್ಲಿ ಅತಿ ತೇಜಸ್ವಿಯೂ, ಮಹಾಮಹಿಮನೂ ಆಗಿರುವನು. ಅವನು ನಿರ್ಜನವಾದ ನಂದನವನದಲ್ಲಿ ಕುಬೇರನ ವೀರ್ಯದಿಂದ ಘೃತಾಚಿಯ ಗರ್ಭಸಂಭೂತಳಾಗಿ ಅತ್ಯಂತ ಸುಂದರಿಯಾದ 'ಚಿತ್ರಾ' ಎಂಬ ಕನ್ಯೆಯನ್ನು ನೋಡಿದನು.

ಅತೀವ ಯೌವನಸ್ಥಾಂ ಚ ಬಾಲಾಂ ಷೋಡಶವಾರ್ಷಿಕೀಂ ।
ಗಾಂಧರ್ವೇಣ ವಿವಾಹೇನ ತಾಂ ಜಗ್ರಾಹ ವಿಧೋಃ ಸುತಃ　　|| ೯೪ ||

ತಸ್ಯಾಮಥಾಯುಂ ರಹಸಿ ವೀರ್ಯಾಧಾನಂ ಚಕಾರ ಸಃ ।
ಬಭೂವ ರಾಜಾ ಚಿತ್ರಾಯಾಂ ಚೈತ್ರೋ ವೈ ಮಂಡಲೇಶ್ವರಃ　　|| ೯೫ ||

ಸಪ್ತದ್ವೀಪವತೀಂ ಪೃಥ್ವೀಂ ಶಾಸ್ತಿ ವೈ ಧಾರ್ಮಿಕೋ ಬಲೀ ।
ಶತಂ ನದ್ಯೋ ಘೃತಾನಾಂ ಚ ದಧ್ನಾಂ ನದ್ಯಃ ಶತಾನಿ ಚ　　|| ೯೬ ||

ಶತಾನಿ ನದ್ಯೋ ದುಗ್ಧಾನಾಂ ಮಧುನದ್ಯಶ್ಚ ಷೋಡಶ ।
ದಶ ನದ್ಯಶ್ಚ ತೈಲಾನಾಂ ಶರ್ಕರಾ ಲಕ್ಷರಾಶಯಃ　　|| ೯೭ ||

ಮಿಷ್ಟಾನ್ನಾನಾಂ ಸ್ವಸ್ತಿಕಾನಾಂ ಲಕ್ಷರಾಶಿಶ್ಚ ನಿತ್ಯಶಃ ।
ಪಂಚಕೋಟಿಗವಾಂ ಮಾಂಸಂ ಸಾಪೂಪಂ ಸ್ವನ್ನಮೇವ ಚ　　|| ೯೮ ||

---

೯೪. ಹದಿನಾರು ವರ್ಷದ ಯುವತಿಯಾದ ಆ ಸುಂದರಿಯನ್ನು ಚಂದ್ರ ಸುತನಾದ ಬುಧನು ಗಾಂಧರ್ವವಿಧಿಯಿಂದ ವಿವಾಹಮಾಡಿಕೊಂಡನು.

೯೫. ಅನಂತರ ಏಕಾಂತದಲ್ಲಿ ಆಕೆಯ ಗರ್ಭದಲ್ಲಿ ತನ್ನ ವೀರ್ಯವನ್ನಿರಿಸಿದನು. ಆ ಚಿತ್ರಾದೇವಿಯು ಗರ್ಭದಿಂದ ಚೈತ್ರನೆಂಬುವನು ಜನಿಸಿ ಚಕ್ರವರ್ತಿಯಾದನು.

೯೬. ಅವನು ಧರ್ಮಪರಾಯಣನಾಗಿ ಸಪ್ತದ್ವೀಪಾವೃತವಾದ ಭೂಮಂಡಲವನ್ನಾಳುತ್ತಿದ್ದನು.

೯೭. ಅವನ ರಾಜ್ಯದಲ್ಲಿ ಹರಿಯುತ್ತಿದ್ದ ತುಪ್ಪ, ಮೊಸರು ಮತ್ತು ಹಾಲಿನ ನೂರಾರು ನದಿಗಳನ್ನು ಬ್ರಾಹ್ಮಣರು ನಿತ್ಯವೂ ಪಾನಮಾಡುತ್ತಿದ್ದರು. ಹದಿನಾರು ಜೇನಿನ ನದಿಗಳು, ಹತ್ತು ಎಣ್ಣೆಯ ನದಿಗಳು, ಅನೇಕ ಸಕ್ಕರೆಯ ರಾಶಿಗಳು ಅವನ ರಾಜ್ಯದಲ್ಲಿದ್ದು ಬ್ರಾಹ್ಮಣರಿಗೆ ತೃಪ್ತಿಯುಂಟುಮಾಡುತ್ತಿದ್ದವು.

೯೮. ಅವನು ನಿತ್ಯವೂ ಮಿಷ್ಟಾನ್ನ ಮತ್ತು ಸ್ವಸ್ತಿಕಾದಿಭಕ್ಷ್ಯಗಳ ಲಕ್ಷರಾಶಿಗಳನ್ನೂ, ಐದುಕೋಟಿ ಹಸುಗಳ ಮಾಂಸವನ್ನೂ, ಅಪೂಪಸಹಿತವಾದ ಅನ್ನವನ್ನೂ ದಾನಮಾಡುತ್ತಿದ್ದನು.

ಏತೇಷಾಂ ಚ ನದೀರಾಶೀಭಿರ್ಭುಂಜತೇ ಬ್ರಾಹ್ಮಣಾ ಮುನೇ ।
ಗವಾಂ ಲಕ್ಷಂ ಚ ರತ್ನಾನಾಂ ಮಣೀನಾಂ ಲಕ್ಷಮೇವ ಚ ॥ ೯೯ ॥

ಶತಲಕ್ಷಂ ಸುವರ್ಣಾನಾಂ ಲಕ್ಷಂ ವೈ ಸೂಕ್ಷ್ಮವಾಸಸಾಂ ।
ರತ್ನನಾಂ ಭೂಷಣಂ ಪಾತ್ರಮತೀವ ಸುಮನೋಹರಂ ॥ ೧೦೦ ॥

ದದೌ ದ್ವಿಜಾತಯೇ ರಾಜಾ ನಿತ್ಯಂ ವೈ ಜೀವಿತಾವಧಿ ।
ತಸ್ಯ ಚೈತ್ರಸ್ಯ ಪುತ್ರಶ್ಚ ರಾಜಾಧಿರಥ ಏವ ಚ ॥ ೧೦೧ ॥

ತಸ್ಯ ಪುತ್ರಶ್ಚ ಸುರಥಶ್ಚಕ್ರವರ್ತೀ ಬೃಹಚ್ಛ್ರವಾಃ ।
ಮಹಾಜ್ಞಾನಂ ಚ ಸಂಪ್ರಾಪ್ಯ ಮೇಧಸೋ ಮುನಿಸತ್ತಮಾತ್ ॥ ೧೦೨ ॥

ಭೇಜೇ ಪುರಾ ವಿಷ್ಣುಮಾಯಾಂ ಪುಣ್ಯಕ್ಷೇತ್ರೇ ಚ ಭಾರತೇ ।
ಶರತ್ಕಾಲೇ ಮಹಾಪೂಜಾಂ ಚಕಾರ ಸ ಸರಿತ್ತಟೇ ॥ ೧೦೩ ॥

---

೯೯–೧೦೧. ಮೇಲೆ ಹೇಳಿದ ನದಿಗಳು ಮತ್ತು ಅನ್ನರಾಶಿಗಳಿಂದ ಬ್ರಾಹ್ಮಣರು ತೃಪ್ತರಾದಮೇಲೆ, ಲಕ್ಷಗೋವುಗಳನ್ನೂ, ಲಕ್ಷಾಂತರಮಣಿರತ್ನಗಳನ್ನೂ, ನೂರುಲಕ್ಷಸುವರ್ಣವನ್ನೂ, ಲಕ್ಷಸೂಕ್ಷ್ಮವಸ್ತ್ರಗಳನ್ನೂ, ರತ್ನಾಭರಣಗಳನ್ನೂ, ಮನೋಹರವಾದ ರತ್ನಪಾತ್ರೆಗಳನ್ನೂ, ತಾನು ಬದುಕಿರುವವರೆಗೂ ಆ ರಾಜನು ಬ್ರಾಹ್ಮಣರಿಗೆ ದಾನಮಾಡುತ್ತಿದ್ದನು. ಆ ಚೈತ್ರನ ಮಗನೇ ಅಧಿರಥನೆಂಬ ರಾಜನು.

೧೦೨. ಅವನ ಮಗನೇ ಬಹಳ ಜ್ಞಾನಿಯಾದ ಸುರಥಚಕ್ರವರ್ತಿಯು. ಅವನು ಮೇಧಸ್ಸೆಂಬ ಮುನಿಶ್ರೇಷ್ಠನಿಂದ ದಿವ್ಯಜ್ಞಾನವನ್ನು ಪಡೆದನು,

೧೦೩. ಆತನು ಪೂರ್ವದಲ್ಲಿ ಪುಣ್ಯಕ್ಷೇತ್ರವಾದ ಭರತಖಂಡದಲ್ಲಿ ವಿಷ್ಣುಮಾಯಾರೂಪಿಣಿಯಾದ ಪ್ರಕೃತಿಯನ್ನು ಪುಣ್ಯನದಿಯ ದಡದಲ್ಲಿ ಶರದೃತುವಿನಲ್ಲಿ ಪೂಜಿಸಿ ಭಜಿಸಿದನು.

ವೈಶ್ಯೇನ ಸಾರ್ಧಂ ಸ ಮಹಾನ್ ಜ್ಞಾನಿನಾಂ ಮುನಿಸತ್ತಮ ।
ರಾಜಾ ಕಲಿಂಗದೇಶಸ್ಯ ವಿರಾಧಶ್ಚ ವಿಶಾಂ ವರಃ ॥ ೧೦೪ ॥

ತಸ್ಯ ಪುತ್ರೋ ಮಹಾಯೋಗೀ ದ್ರುಮಿಣೋ ಜ್ಞಾನಿನಾಂ ವರಃ ।
ದ್ರುಮಿಣೋ ವೈಷ್ಣವಃ ಪ್ರಾಜ್ಞಃ ಪುಷ್ಕರೇ ದುಷ್ಕರಂ ತಪಃ ॥ ೧೦೫ ॥

ಕೃತ್ವಾ ಸಮಾಧಿಂ ಸಂಪ್ರಾಪ ಜ್ಞಾನಿನಾಂ ವೈಷ್ಣವಾಗ್ರಣೀಃ ।
ಪುತ್ರೈರ್ದಾರೈರ್ನಿರಸ್ತಶ್ಚ ಧನಲೋಭಾದ್ದುರಾತ್ಮಭಿಃ ॥ ೧೦೬ ॥

ಸ ಚ ಕೋಟಿಸುವರ್ಣಂ ಚ ನಿತ್ಯಂ ದತ್ವಾ ಜಲಂ ಪಪೌ ।
ಮುಕ್ತಿಂ ಸಂಪ್ರಾಪ ಸಂಸೇವ್ಯ ವಿಷ್ಣುಮಾಯಾಂ ಸನಾತನೀಂ ॥ ೧೦೭ ॥

---

೧೦೪. ಕಳಿಂಗದೇಶದ ರಾಜನೂ, ವೈಶ್ಯರಲ್ಲಿ ಶ್ರೇಷ್ಠನೂ ಆದ ವಿರಾಧನೆಂಬುವನೊಬ್ಬನಿದ್ದನು. ಆತನೂ ಮಹಾಜ್ಞಾನಿಯಾದ ಸುರಥನೊಡನೆ ಪ್ರಕೃತಿಯ ಪೂಜೆಯನ್ನು ಮಾಡಿದನು.

೧೦೫. ಅವನ ಮಗನೇ ಮಹಾಯೋಗಿಯೂ, ಜ್ಞಾನಿಗಳಲ್ಲಿ ಶ್ರೇಷ್ಠನೂ ಆದ ದ್ರುಮಿಣನೆಂಬುವನು. ಪರಮವೈಷ್ಣವನೂ, ಪ್ರಾಜ್ಞನೂ ಆದ ಆ ದ್ರುಮಿಣನು ಪುಷ್ಕರಕ್ಷೇತ್ರದಲ್ಲಿ ಕಷ್ಟಸಾಧ್ಯವಾದ ತಪಸ್ಸನ್ನುಮಾಡಿ ಸಮಾಧಿಸ್ಥನಾಗಿ ಜ್ಞಾನಿಗಳಲ್ಲೂ ಮತ್ತು ವೈಷ್ಣವರಲ್ಲೂ ಶ್ರೇಷ್ಠನೆನಿಸಿದನು. (ಇವನಿಗೆ ಸಮಾಧಿಯೆಂಬ ಮತ್ತೊಂದು ಹೆಸರು.)

೧೦೬. ಅವನನ್ನು ದುರಾತ್ಮರಾದ ಮಕ್ಕಳು ಮತ್ತು ಹೆಂಡತಿಯು ಹಣದಾಸೆಯಿಂದ ದೂರಮಾಡಿದರು.

೧೦೭. ಅವನು ನಿತ್ಯವೂ ಒಂದುಕೋಟಿ ಸುವರ್ಣವನ್ನು ದಾನಮಾಡಿ ಜಲಪಾನಮಾಡುತ್ತಿದ್ದುದರಿಂದ ವಿಷ್ಣುಮಾಯೆಯಾದ ಪ್ರಕೃತಿಯ ಅನುಗ್ರಹದಿಂದ ಮುಕ್ತಿಯನ್ನು ಪಡೆದನು.

ರಾಜಾ ಲೇಭೆ ಮನುತ್ವಂ ಚ ರಾಜ್ಯಂ ನಿಷ್ಕಂಟಕಂ ಮುನೇ ।
ಉವಾಚ ಮಧುರಂ ವಾಕ್ಯಂ ಧಾತಾ ತ್ರಿಜಗತಾಂ ಪತಿಃ ॥ ೧೦೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ
ಗುರೋಸ್ತಾರಾಪ್ರಾಪ್ತಿಬುಧೋತ್ಪತ್ತ್ಯಾದಿವರ್ಣನಂ
ನಾಮ ಏಕಷಷ್ಠಿತಮೋಽಧ್ಯಾಯಃ

---

೧೦೮. ಇತ್ತ ಸುರಥನೆಂಬ ಆ ರಾಜನು 'ಸಾವರ್ಣಿ' ಎಂಬ ಮನುವಾಗಿ ಚಕ್ರವರ್ತಿಪದವಿಯನ್ನು ಪಡೆದು ರಾಜ್ಯವನ್ನು ನಿಷ್ಕಂಟವಾಗಿ ಆಳುತ್ತಿದ್ದನು. ಈರೀತಿಯಾಗಿ ಮೂರು ಲೋಕಕ್ಕೂ ಒಡೆಯನಾದ ಬ್ರಹ್ಮನು ಮಧುರನುಡಿಗಳನ್ನಾಡಿದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಬೃಹಸ್ಪತಿಗೆ
ತಾರಾಪ್ರಾಪ್ತಿಯನ್ನು ತಿಳಿಸುವ ಅರವತ್ತೊಂದನೆಯ
ಅಧ್ಯಾಯವು ಮುಗಿದುದು.

## ಅರವತ್ತೊಂದನೆಯ ಅಧ್ಯಾಯದ ಸಾರಾಂಶವು

ಪಾತಾಳಲೋಕದಲ್ಲಿ ಅತ್ಯಂತ ವೈಭವದಿಂದ ಮೆರೆಯುತ್ತಿರುವ ಶುಕ್ರಾಚಾರ್ಯನ ಮಂದಿರಕ್ಕೆ ಬ್ರಹ್ಮದೇವನು ಬರಲು, ಶುಕ್ರಾಚಾರ್ಯನು ಭಕ್ತಿವಿನಯಗಳಿಂದ ಪ್ರತ್ಯುತ್ಥಾನಮಾಡಿ ಬ್ರಹ್ಮನನ್ನು ಆತಿಥ್ಯದಿಂದ ಸತ್ಕರಿಸಿ ಸ್ತುತಿಸಿದನು. ಅನಂತರ ಬ್ರಹ್ಮನನ್ನು ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ಬಂದ ಸಮಾಚಾರವೇನೆಂದು ಶುಕ್ರಾಚಾರ್ಯನು ಕೇಳಲು 'ತಾರಾಪಹರಣಮಾಡಿದ ಚಂದ್ರನಿಗೆ ರಕ್ಷಣೆಯನ್ನು ಕೊಟ್ಟಿರುವ ನಿನ್ನ ಮೇಲೆ ಯುದ್ಧಮಾಡಲು ದೇವತೆಗಳು ಸಿದ್ಧರಾಗಿ ಬಂದಿದ್ದಾರೆ. ದೇವದಾನವರ ಯುದ್ಧದಿಂದ ಅನರ್ಥವುಂಟಾಗುವುದೇ ಹೊರತು ಫಲವೇನೂ ಇಲ್ಲ. ಆದಕಾರಣ ತಾರೆಯನ್ನು ಬೃಹಸ್ಪತಿಗೆ ಅರ್ಪಿಸಿ ಚಂದ್ರನನ್ನು ತ್ಯಜಿಸು' ಎಂದು ಬ್ರಹ್ಮನು ಹೇಳಿದನು. ಪರಮವೈಷ್ಣವನಾದ ಶುಕ್ರಾಚಾರ್ಯನು ಈ ಗೊಡ್ಡು ಬೆದರಿಕೆಗೆ ಸಗ್ಗಲಿಲ್ಲ. ಎಲ್ಲ ದೇವತೆಗಳೊಡನೆಯೂ ಕಾದಾಡುವೆನೆಂದು ಹೇಳಿದನು. ಅನಂತರ ಬ್ರಹ್ಮನ ಮಾತನ್ನು ಕೇಳಿದ ಪ್ರಹ್ಲಾದನೂ ವಿಷ್ಣುಭಕ್ತರ ಮಾಹಾತ್ಮ್ಯವನ್ನು ಪ್ರಶಂಸಿಸಿ ವಿಷ್ಣುಭಕ್ತರಾದ ದಾನವರು ದೇವತೆಗಳಿಗೆ ಸೋಲುವುದಿಲ್ಲವೆಂದು ಹೇಳಿದನು. ಆಗ ಬ್ರಹ್ಮನು ತಾರಾದೇವಿಯನ್ನು ಬಿಟ್ಟುಬಿಡಬೇಕೆಂದು ಯಾಚಿಸಲು ದಯಾಮಯನಾದ ಶುಕ್ರಾಚಾರ್ಯನು ತಾರೆಯನ್ನೂ ಕಳಂಕಲಾಂಛಿತನಾದ ಚಂದ್ರನನ್ನೂ ದೇವತೆಗಳಿಗೆ ಸಮರ್ಪಿಸಿದನು. ಆಗ ತಾರಾದೇವಿಯು ಭಯಭಕ್ತಿಯಿಂದ ವಂದಿಸಲು 'ಚಂದ್ರನ ಬಲಾತ್ಕಾರಕ್ಕೊಳಗಾದ ಅಬಲೆಯಾದ ನೀನು ಗರ್ಭವತಿಯಾಗಿದ್ದರೂ ನಿಷ್ಪಾಪಳಾಗಿರುವೆ. ಆದಕಾರಣ ನನ್ನ ಅನುಗ್ರಹದಿಂದ ನೀನು ಪುನಃ ಪತಿಸೌಭಾಗ್ಯವನ್ನು ಪಡೆ' ಎಂದು ಬ್ರಹ್ಮನು ಆಶೀರ್ವದಿಸಿದನು. ಅನಂತರ ತಾರಾದೇವಿಯು ಸುವರ್ಣದಂತೆ ತೇಜಸ್ವಿಯಾದ ಪುತ್ರನನ್ನು ಪ್ರಸುವಿಸಿ ಚಂದ್ರನಿಗೆ ಸಮರ್ಪಿಸಿದಳು. ಚಂದ್ರನು ಆ ಶಿಶುವನ್ನು ಎತ್ತಿಕೊಂಡು ಬ್ರಹ್ಮಾದಿಗಳಿಗೆ ವಂದಿಸಿ ತನ್ನಾಲಯಕ್ಕೆ ತೆರಳಿದನು. ಚಂದ್ರನ ಮಗನಾದ ಆ ಬುಧನೂ ಕೂಡ ಕುಬೇರನ ವೀರ್ಯದಿಂದ ಘೃತಾಚಿಯ ಗರ್ಭದಲ್ಲಿ ಜನಿಸಿದ 'ಚಿತ್ರಾ' ಎಂಬ

ಕನ್ಯೆಯನ್ನು ಗಾಂಧರ್ವವಿಧಿಯಿಂದ ವರಿಸಿದನು. ಆ ಚಿತ್ರಾದೇವಿಯ ಗರ್ಭದಲ್ಲಿ ಚೈತ್ರನೆಂಬುವನು ಜನಿಸಿದನು. ಅವನು ಧರ್ಮಪರಾಯಣನಾಗಿ ಸಪ್ತದ್ವೀಪಾವೃತವಾದ ಭೂಮಂಡಲವನ್ನಾಳುತ್ತಿದ್ದನು. ಆ ಚೈತ್ರನ ಮಗನೇ ಅಧಿರಥನೆಂಬ ರಾಜನು. ಅವನ ಮಗನೇ ಸುರಥಚಕ್ರವರ್ತಿಯು. ಅವನು ಕಳಿಂಗಾಧಿಪತಿಯಾದ ವಿರಾಧನೊಡನೆ ಸುಮೇಧಸಮಹರ್ಷಿಯಿಂದ ದಿವ್ಯಜ್ಞಾನವನ್ನು ಪಡೆದು, ಶರದೃತುವಿನಲ್ಲಿ ರಾಧಾದೇವಿಯ ಪೂಜೆಯನ್ನು ಮಾಡಿ ಆಕೆಯ ಅನುಗ್ರಹಕ್ಕೆ ಪಾತ್ರನಾಗಿ 'ಸಾವರ್ಣಿ' ಎಂಬ ಮನುಚಕ್ರವರ್ತಿಯಾದನು. ಇತ್ತ ವಿರಾಧನ ಮಗನಾದ ದ್ರುಮಿಣನೂ ಕೂಡ ಪತ್ನೀಪುತ್ರರಿಂದ ಪರಿತ್ಯಕ್ತನಾಗಿ ಸಮಾಧಿಸ್ಥನಾಗಿ ಮುಕ್ತನಾದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

|| ದ್ವಿಷಷ್ಟಿತಮೋಽಧ್ಯಾಯಃ ||

|| ನಾರದ ಉವಾಚ ||

ಕಥಂ ರಾಜಾ ಮಹಾಜ್ಞಾನಂ ಸಂಪ್ರಾಪ ಮುನಿಸತ್ತಮಾತ್ ।
ವೈಶ್ಯೋ ಮುಕ್ತಿಂ ಮೇಧಸಶ್ಚ ತನ್ಮೇ ವ್ಯಾಖ್ಯಾತುಮರ್ಹಸಿ || ೧ ||

|| ಶ್ರೀನಾರಾಯಣ ಉವಾಚ ||

ಧ್ರುವಸ್ಯ ಪೌತ್ರೋ ಬಲವಾನ್ನಂದಿರುತ್ಕಲನಂದನಃ ।
ಸ್ವಾಯಂಭುವಮನೋರ್ವಂಶ್ಯಃ ಸತ್ಯವಾದೀ ಜಿತೇಂದ್ರಿಯಃ || ೨ ||

---

### ಅರವತ್ತೆರಡನೆಯ ಅಧ್ಯಾಯವು

೧. ನಾರದ :—ಮೇಧಸ್ಸೆಂಬ ಮಹಾಮುನಿಯಿಂದ ರಾಜನಾದ ಸುರಥನೂ ವೈಶ್ಯನಾದ ಸಮಾಧಿಯೂ ಮುಕ್ತಿಯನ್ನು ಪಡೆದುದು ಹೇಗೆಂಬುದನ್ನು ನನಗೆ ದಯವಿಟ್ಟು ವಿವರಿಸು.

೨. ಶ್ರೀನಾರಾಯಣ :—ಸ್ವಾಯಂಭುವಮನುವಿನ ವಂಶದಲ್ಲಿ ಧ್ರುವನ ಮೊಮ್ಮಗನಾಗಿ ಜನಿಸಿದ ಉತ್ಕಲನಂದನನೆಂಬುವನು ಸತ್ಯವಂತನೂ, ಜಿತೇಂದ್ರಿಯನೂ ಆಗಿದ್ದನು. ನಂದಿಯೆಂದು ಆತನ ನಾಮಾಂತರ

ಅಕ್ಷೌಹಿಣೀನಾಂ ಶತಕಂ ಗೃಹೀತ್ವಾ ಸೈನ್ಯಮೇವ ಚ ।
ಕೋಲಾಂ ಚ ವೇಷ್ಟಯಾಮಾಸ ಸುರಥಸ್ಯ ಮಹಾಮತೇಃ ॥ ೩ ॥

ಯುದ್ಧಂ ಬಭೂವ ನಿಯತಂ ಪೂರ್ಣಮಬ್ದಂ ಚ ನಾರದ ।
ಚಿರಂಜೀವೀ ವೈಷ್ಣವಶ್ಚ ಜಿಗಾಯ ಸುರಥಂ ನೃಪಃ ॥ ೪ ॥

ಏಕಾಕೀ ಸುರಥೋ ಭೀತೋ ನಂದಿನಾ ಚ ಬಹಿಷ್ಕೃತಃ ।
ನಿಶಾಯಾಂ ಹಯಮಾರುಹ್ಯ ಜಗಾಮ ಗಹನಂ ವನಂ ॥ ೫ ॥

ದದರ್ಶ ತತ್ರ ವೈಶ್ಯಂ ಚ ಪುಷ್ಪಭದ್ರಾನದೀತಟೇ ।
ತಯೋರ್ಬಭೂವ ಸಂಪ್ರೀತಿಃ ಕೃತಬಾಂಧವಯೋರ್ಮನೇ ॥ ೬ ॥

ವೈಶ್ಯೇನ ಸಾರ್ಧಂ ನೃಪತಿರಗಚ್ಛನ್ಮೇಧಸಾಶ್ರಮಂ ।
ಪುಷ್ಕರಂ ದುಷ್ಕರಂ ಪುಣ್ಯಕ್ಷೇತ್ರಂ ವೈ ಭಾರತೇ ಸತಾಂ ॥ ೭ ॥

---

೩. ಅವನು ನೂರು ಅಕ್ಷೌಹಿಣೀ ಸೈನ್ಯವನ್ನು ತೆಗೆದುಕೊಂಡು ಮಹಾತ್ಮನಾದ ಸುರಥನ ಸೈನ್ಯವನ್ನು ಮುತ್ತಿದನು.

೪. ಎಲೈ ನಾರದನೇ, ಅವರಿಬ್ಬರಿಗೂ ಒಂದುವರ್ಷಗಳಕಾಲ ಯುದ್ಧವಾಯಿತು. ವಿಷ್ಣುಭಕ್ತನೂ, ಚಿರಂಜೀವಿಯೂ ಆದ ಆ ಉತ್ಕಲರಾಜನು ಸುರಥನನ್ನು ಗೆದ್ದನು.

೫. ಈರೀತಿ ನಂದಿ (ಉತ್ಕಲನಿ)ಗೆ ಸೋತುಹೋದ ಸುರಥನು ಭಯಗ್ರಸ್ಥನಾಗಿ ಒಬ್ಬನೇ ಅರ್ಧರಾತ್ರಿಯಲ್ಲಿ ಕುದುರೆಯನ್ನು ಹತ್ತಿ ಕಾಡಿನ ಕಡೆಗೆ ತೆರಳಿದನು.

೬. ಅಲ್ಲಿ ಪುಷ್ಪಭದ್ರಾನದಿಯ ದಡದಲ್ಲಿ ಸಮಾಧಿಯೆಂಬ ವೈಶ್ಯನನ್ನು ಕಂಡನು. ಆಗ ಅವರಿಬ್ಬರಿಗೂ ಪರಿಚಯವೂ, ಅನ್ಯೋನ್ಯಸ್ನೇಹವೂ ಉಂಟಾಯಿತು.

೭. ಸಮಾಧಿಯೊಡನೆ ಆ ಸುರಥನು ಭರತಖಂಡದಲ್ಲಿ ಸತ್ಪುರುಷರಿಗೆಲ್ಲ ಪುಣ್ಯಕ್ಷೇತ್ರವೆನಿಸಿದ ಪುಷ್ಕರಕ್ಷೇತ್ರದಲ್ಲಿದ್ದ ಮೇಧಸ್ಸೆಂಬ ಋಷಿಯ ಆಶ್ರಮಕ್ಕೆ ಹೋದನು.

ದದರ್ಶ ತತ್ರ ನೃಪತಿರ್ಮುನಿಂ ತಂ ತೀವ್ರತೇಜಸಂ ।
ಶಿಷ್ಯೇಭ್ಯಶ್ಚ ಪ್ರವೋಚಂತಂ ಬ್ರಹ್ಮತತ್ವಂ ಸುದುರ್ಲಭಂ ॥ ೮ ॥

ರಾಜಾ ನನಾಮ ವೈಶ್ಯಶ್ಚ ಶಿರಸಾ ಮುನಿಪುಂಗವಂ ।
ಮುನಿಸ್ತೌ ಪೂಜಯಾಮಾಸ ದದೌ ತಾಭ್ಯಾಂ ಶುಭಾಶಿಷಂ ॥ ೯ ॥

ಪ್ರಶ್ನಂ ಚಕಾರ ಕುಶಲಂ ಜಾತಿನಾಮ ಪೃಥಕ್ಪೃಥಕ್ ।
ದದೌ ಪ್ರತ್ಯುತ್ತರಂ ರಾಜಾ ಕ್ರಮೇಣ ಮುನಿಪುಂಗವಂ ॥ ೧೦ ॥

॥ ಸುರಥ ಉವಾಚ ॥

ರಾಜಾಹಂ ಸುರಥೋ ಬ್ರಹ್ಮನ್ ಚೈತ್ರವಂಶಸಮುದ್ಭವಃ ।
ಬಹಿರ್ಭೂತಃ ಸ್ವರಾಜ್ಯಾಚ್ಚ ನಂದಿನಾ ಬಲಿನಾಧುನಾ ॥ ೧೧ ॥

---

೮. ಅಲ್ಲಿ ತನ್ನ ಶಿಷ್ಯರಿಗೆಲ್ಲ ಸರ್ವಸುಲಭವಲ್ಲದ ಬ್ರಹ್ಮತತ್ವವನ್ನು ಉಪದೇಶಿಸುತ್ತಿದ್ದ ಪರಮತೇಜಸ್ವಿಯಾದ ಆ ಮುನಿಯನ್ನು ರಾಜನು ಕಂಡನು.

೯. ಅನಂತರ ರಾಜನಾದ ಸುರಥನೂ, ಸಮಾಧಿಯೆಂಬ ವೈಶ್ಯನೂ ಆ ಮುನಿಪುಂಗವನಿಗೆ ಸಾಷ್ಟಾಂಗವೆರಗಿದರು ಆ ಮಹರ್ಷಿಯೂ ಕೂಡ ಅವರಿಬ್ಬರನ್ನೂ ಗೌರವಿಸಿ ಆಶೀರ್ವಾದಮಾಡಿದನು.

೧೦ ಆ ಮುನಿಯು ಇವರನ್ನು ಕುರಿತು ಕುಶಲಪ್ರಶ್ನೆ ಮಾಡಿ ಪ್ರತ್ಯೇಕವಾಗಿ ಜಾತಿ, ಕುಲ, ಹೆಸರು ಮುಂತಾದವುಗಳನ್ನು ಕೇಳಿದನು. ಸುರಥನೂ ಕೂಡ ಆ ಮುನಿಶ್ರೇಷ್ಠನ ಪ್ರಶ್ನೆಗಳಿಗೆಲ್ಲ ಕ್ರಮವಾಗಿ ಉತ್ತರವಿತ್ತನು.

೧೧. ಸುರಥ :—ಎಲೈ ಮುನಿಶ್ರೇಷ್ಠನೇ, ನಾನು ಚೈತ್ರನ ವಂಶದಲ್ಲಿ ಜನಿಸಿದ ಸುರಥನೆಂಬ ರಾಜನು. ಈಗ ಬಲಿಷ್ಠನಾದ ನಂದಿಗೆ ಸೋತು ಸ್ವರಾಜ್ಯಭ್ರಷ್ಟನಾಗಿ ಬಂದಿರುವೆನು.

ಕಿಮುಪಾಯಂ ಕರಿಷ್ಯಾಮಿ ಕಥಂ ರಾಜ್ಯಂ ಭವೇನ್ಮಮ ।
ತನ್ಮಾಂ ಬ್ರೂಹಿ ಮಹಾಭಾಗ ತ್ವಾಮೇವ ಶರಣಾಗತಂ ॥ ೧೨ ॥

ಅಯಂ ವೈಶ್ಯಃ ಸಮಾಧಿಶ್ಚ ಸ್ವಗೃಹಾಚ್ಚ ಬಹಿಷ್ಕೃತಃ ।
ಪುತ್ರೈಃ ಕಲತ್ರೈರ್ದೈವೇನ ಧನಲೋಭೇನ ಧಾರ್ಮಿಕಃ ॥ ೧೩ ॥

ಬ್ರಾಹ್ಮಣಾಯ ದದೌ ನಿತ್ಯಂ ರತ್ನಕೋಟಿಂ ದಿನೇ ದಿನೇ ।
ನಿಷಿದ್ಧ್ಯಮಾನಃ ಪುತ್ರೈಶ್ಚ ಕಲತ್ರೈರ್ಬಾಂಧವೈರಯಂ ॥ ೧೪ ॥

ಕೋಪಾನ್ನಿರಾಕೃತಸ್ತೈಶ್ಚ ಪುನರನ್ವೇಷಿತಃ ಶುಚಾ ।
ಅಯಂ ಗೃಹಂ ಚ ನ ಯಯೌ ವಿರಕ್ತೋ ಜ್ಞಾನವಾಂಚ್ಛುಚಿಃ ॥ ೧೫ ॥

ಪುತ್ರಾಶ್ಚ ಪಿತೃಶೋಕೇನ ಗೃಹಂ ತ್ಯಕ್ತ್ವಾ ಯಯುರ್ವನಂ ।
ದತ್ವಾ ದಾನಾನಿ ವಿಪ್ರೇಭ್ಯೋ ವಿರಕ್ತಾಃ ಸರ್ವಕರ್ಮಸು ॥ ೧೬ ॥

---

೧೨. ಈಗ ನನ್ನ ರಾಜ್ಯವನ್ನು ಪುನಃ ಪಡೆಯಲು ಯಾವ ಉಪಾಯವನ್ನು ಮಾಡಲಿ ಮಹಾತ್ಮನಾದ ನಿನಗೆ ನಾನು ಶರಣುಹೊಕ್ಕಿರುವೆನು. ನನ್ನನ್ನು ಕಾಪಾಡು.

೧೩. ಧರ್ಮಿಷ್ಠನಾದ ಸಮಾಧಿಯೆಂಬ ವೈಶ್ಯನನ್ನು ಧನಲೋಭಿಗಳಾದ ಪುತ್ರಕಳತ್ರರು ಮನೆಯಿಂದ ಹೊರದೂಡಿದರು.

೧೪. ಇವನು ಪ್ರತಿದಿನವೂ ಬ್ರಾಹ್ಮಣರಿಗೆ ಕೋಟ್ಯಾಂತರ ರತ್ನವನ್ನು ದಾನಮಾಡುತ್ತಿದ್ದನು. ಇವನ ಬಂಧುಮಿತ್ರಕಳತ್ರರು ಅದನ್ನು ಸಹಿಸದೆ ಬೇಡ ವೆಂದು ತಡೆಯುತ್ತಿದ್ದರು.

೧೫. ಇವನು ಕೇಳದಿರಲು ಅವರು ಕುಪಿತರಾಗಿ ಮನೆಯಿಂದ ಹೊರಕ್ಕೆ ನೂಕಿ ಅನಂತರ ಪಶ್ಚಾತ್ತಾಪಗೊಂಡು ಇವನನ್ನು ಹುಡುಕಿದರು. ಜ್ಞಾನಿಯೂ ಶುದ್ಧಾಚಾರಪರನೂ ಆದ ಇವನಾದರೋ ಪುನಃ ಮನೆಗೆ ಹಿಂತಿರುಗಲಿಲ್ಲ.

೧೬. ತಂದೆಯು ಸಿಕ್ಕಲಿಲ್ಲವೆಂಬ ವ್ಯಥೆಯಿಂದ ಎಲ್ಲ ವಸ್ತುಗಳನ್ನೂ ಬ್ರಾಹ್ಮಣರಿಗೆ ದಾನಮಾಡಿ ಎಲ್ಲ ಕಾರ್ಯದಲ್ಲೂ ವಿರಕ್ತರಾಗಿ ಇವನ ಮಕ್ಕಳೆಲ್ಲರೂ ಮನೆಯನ್ನು ಬಿಟ್ಟು ಕಾಡಿಗೆ ಹೋದರು.

ಸುದುರ್ಲಭಂ ಹರೇರ್ದಾಸ್ಯಂ ವೈಶ್ಯಸ್ಯಾಸ್ಯ ಚ ವಾಂಛಿತಂ ।
ಕಥಂ ಪ್ರಾಪ್ನೋತಿ ನಿಷ್ಕಾಮಸ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೧೭ ॥

॥ ಶ್ರೀಮೇಧಾ ಉವಾಚ ॥

ಕರೋತಿ ಮಾಯಯಾಚ್ಛನ್ನಂ ವಿಷ್ಣುಮಾಯಾ ದುರತ್ಯಯಾ ।
ನಿರ್ಗುಣಸ್ಯ ಚ ಕೃಷ್ಣಸ್ಯ ತ್ರಿಗುಣಾ ವಿಶ್ವಮಾಜ್ಞಯಾ ॥ ೧೮ ॥

ಕೃಪಾಂ ಕರೋತಿ ಯೇಷಾಂ ಸಾ ಧರ್ಮಿಣಾಂ ಚ ಕೃಪಾಮಯೀ ।
ತೇಭ್ಯೋ ದದಾತಿ ಕೃಪಯಾ ಕೃಷ್ಣಭಕ್ತಿಂ ಸುದುರ್ಲಭಾಂ ॥ ೧೯ ॥

ಯೇಷಾಂ ಮಾಯಾವಿನಾಂ ಮಾಯಾ ನ ಕರೋತಿ ಕೃಪಾಂ ನೃಪ ।
ಮಾಯಯಾ ತಾನ್ನಿಬಧ್ನಾತಿ ಮೋಹಜಾಲೇನ ದುರ್ಗತಾನ್ ॥ ೨೦ ॥

ನಶ್ವರೇ ನಿತ್ಯಸಂಸಾರೇ ಭ್ರಾಮಯೇದ್ವರ್ಬರಾ ಸದಾ ।
ಕುರ್ವಂತೇ ನಿತ್ಯಬುದ್ಧಿಂ ಚ ವಿಹಾಯ ಪರಮೇಶ್ವರಂ ॥ ೨೧ ॥

---

೧೭. ಆದುದರಿಂದ ಈ ವೈಶ್ಯನೂ ಕೂಡ ದುರ್ಲಭವಾದ ಶ್ರೀಹರಿಯ ದಾಸ್ಯವನ್ನು ಬಯಸುವನು. ನಿಷ್ಕಾಮನಾದವನು ಶ್ರೀಹರಿಯ ಸೇವೆಯನ್ನು ಹೇಗೆ ಪಡೆಯಬೇಕೆಂಬುದನ್ನು ನಮಗೆ ವಿಸ್ತರಿಸಿ ಹೇಳು.

೧೮. ಶ್ರೀಮೇಧಸ್ಸು :—ನಿರ್ಗುಣನಾದ ಶ್ರೀಕೃಷ್ಣಪರಮಾತ್ಮನ ಆಜ್ಞೆಯಂತೆ ತ್ರಿಗುಣಾತ್ಮಕಳಾದ ವಿಷ್ಣುಮಾಯೆಯು ತನ್ನ ಮಾಯಾಶಕ್ತಿಯಿಂದ ಎಲ್ಲರನ್ನೂ ಆವರಿಸಿಕೊಂಡು ಯಾರಿಂದಲೂ ಮೀರಲಸದಳವಾಗಿರುವಳು.

೧೯. ದಯಾಮಯಳಾದ ಆ ದೇವಿಯು ಯಾವ ಧರ್ಮಿಷ್ಠರಿಗೆ ದಯೆ ತೋರುವಳೋ ಅವರಿಗೆ ಸರ್ವಸುಲಭವಲ್ಲದ ವಿಷ್ಣುಭಕ್ತಿಯನ್ನು ಅನುಗ್ರಹಿಸುವಳು.

೨೦. ಮಾಯೆಯ ಅನುಗ್ರಹಕ್ಕೆ ಪಾತ್ರರಾಗದ ಪಾಪಿಗಳು ಮಾಯೆಯ ಮೋಹಕ್ಕೆ ಸಿಲುಕಿ ಗತಿಕಾಣದೆ ತೊಳಲುವರು.

೨೧. ಮೂಢರು ಅನಿತ್ಯವೂ, ನಶ್ವರವೂ ಆದ ಸಂಸಾರವನ್ನು ನಿತ್ಯವಾದುದೆಂದು ನಂಬಿ ನಿತ್ಯನಾದ ಪರಮಾತ್ಮನನ್ನು ದೂರಮಾಡಿ ಯಾವಾಗಲೂ ಸಂಸಾರದಲ್ಲಿ ಭ್ರಮಿಸುವರು.

ದೇವಮನ್ಯಂ ನಿಷೇವಂತೇ ತನ್ಮಂತ್ರಂ ಚ ಜಪಂತಿ ಚ ।
ಮಿಥ್ಯಾ ಕಿಂಚಿನ್ನಿಮಿತ್ತಂ ಚ ಕೃತ್ವಾ ಮನಸಿ ಲೋಭತಃ ॥ ೨೨ ॥

ಸಪ್ತಜನ್ಮಸು ಸಂಸೇವ್ಯ ದೇವತಾಶ್ಚ ಹರೇಃ ಕಲಾಃ ।
ತದಾ ಪ್ರಕೃತ್ಯಾ ಕೃಪಯಾ ಸೇವಂತೇ ಪ್ರಕೃತಿಂ ತದಾ ॥ ೨೩ ॥

ಸಪ್ತಜನ್ಮಸು ಸಂಸೇವ್ಯ ವಿಷ್ಣುಮಾಯಾಂ ಕೃಪಾಮಯೀಂ ।
ಶಿವೇ ಭಕ್ತಿಂ ಲಭಂತೇ ತೇ ಜ್ಞಾನಾನಂದೇ ಸನಾತನೇ ॥ ೨೪ ॥

ಜ್ಞಾನಾಧಿಷ್ಠಾತೃದೇವಂ ಚ ಹರೇಸ್ಸಂಸೇವ್ಯ ಶಂಕರಂ ।
ಅಚಿರಾದ್ವಿಷ್ಣುಭಕ್ತಿಂ ಚ ಪ್ರಾಪ್ನುವಂತಿ ಮಹೇಶ್ವರಾತ್ ॥ ೨೫ ॥

ಸೇವಂತೇ ಸಗುಣಂ ಸತ್ವಂ ವಿಷ್ಣುಂ ವಿಷಯಿಣಂ ತಥಾ ।
ತತ್ವಜ್ಞಾನಾಚ್ಚ ಪಶ್ಯಂತಿ ಜ್ಞಾನಂ ವೈ ನಿರ್ಮಲಂ ನರಾಃ ॥ ೨೬ ॥

---

೨೨. ಅಂಥವರು ಮನಸ್ಸಿನಲ್ಲಿ ಏನಾದರೊಂದು ದ್ರವ್ಯರಾಶಿಯನ್ನು ಇಟ್ಟು ಕೊಂಡು ಅದರ ಪ್ರಾಪ್ತಿಗಾಗಿ ಕಪಟಬುದ್ಧಿಯಿಂದ ಯಾವುದಾದರೊಂದು ದೇವತೆಯನ್ನು ಸೇವಿಸುವಂತೆಯೂ, ಮಂತ್ರವನ್ನು ಜಪಿಸುವಂತೆಯೂ ನಟನೆಮಾಡುವರು.

೨೩. ಈರೀತಿಯಾಗಿ ಶ್ರೀಹರಿಯ ಕಲಾತ್ಮಕರಾದ ದೇವತೆಗಳನ್ನು ಏಳು ಜನ್ಮಗಳಲ್ಲಿ ಸೇವಿಸಿ ಅನಂತರ ಪ್ರಕೃತಿಯ ಅನುಗ್ರಹಕ್ಕೆ ಪಾತ್ರರಾಗಿ ಆಕೆಯನ್ನು ಸೇವಿಸುವರು.

೨೪. ಕರುಣಾಮಯಳಾದ ಆ ವಿಷ್ಣುಮಾಯೆಯನ್ನು ಏಳು ಜನ್ಮಗಳಲ್ಲಿ ಸೇವಿಸಿ ಅನಂತರ ಜ್ಞಾನಾನಂದಮಯನೂ, ಅನಾದಿಯೂ ಆದ ಶಿವನಲ್ಲಿ ಭಕ್ತಿಯನ್ನು ಪಡೆಯುವರು.

೨೫. ಇಂತು ಶ್ರೀಹರಿಯ ಜ್ಞಾನಾಧಿಷ್ಠಾತೃದೇವತೆಯಾದ ಶಂಕರನನ್ನು ಸೇವಿಸಿ ಅವನ ಅನುಗ್ರಹದಿಂದ ಜಾಗ್ರತೆ ವಿಷ್ಣುಭಕ್ತಿಯನ್ನು ಪಡೆಯುವರು.

೨೬. ಆಗ ನಿರ್ಮಲಜ್ಞಾನಸ್ವರೂಪನಾದ ವಿಷ್ಣುವನ್ನು ಸುಗುಣಾತ್ಮಕನೆಂದೂ, ಸತ್ವಗುಣಪ್ರಧಾನನೆಂದೂ, ವಿಷಯಾಸಕ್ತನೆಂದೂ ಬಗೆದು ಅವನನ್ನು ಸೇವಿಸುವರು.

ನಿಷೇವ್ಯ ಸಗುಣಂ ವಿಷ್ಣುಂ ಸಾತ್ವಿಕಾ ವೈಷ್ಣವಾ ನರಾಃ ।
ಲಭಂತೇ ನಿರ್ಗುಣೇ ಭಕ್ತಿಂ ಶ್ರೀಕೃಷ್ಣೇ ಪ್ರಕೃತೇಃ ಪರೇ || ೨೭ ||

ಗೃಹ್ಣಂತಿ ಸಂತಸ್ತದ್ಭಕ್ತಾತ್ ಮಂತ್ರಂ ತಸ್ಯ ನಿರಾಮಯಂ ।
ನಿಷೇವ್ಯ ನಿರ್ಗುಣಂ ದೇವಂ ತೇ ಭವಂತಿ ಚ ನಿರ್ಗುಣಾಃ || ೨೮ ||

ಅಸಂಖ್ಯಬ್ರಹ್ಮಣಾಂ ಪಾತಂ ತೇ ಚ ಪಶ್ಯಂತಿ ವೈಷ್ಣವಾಃ ।
ದಾಸ್ಯಂ ಕುರ್ವಂತಿ ಸತತಂ ಗೋಲೋಕೇ ಚ ನಿರಾಮಯೇ || ೨೯ ||

ಕೃಷ್ಣಭಕ್ತಾತ್ ಕೃಷ್ಣಮಂತ್ರಂ ಯೋ ಗೃಹ್ಣಾತಿ ನರೋತ್ತಮಃ ।
ಪುರುಷಾಣಾಂ ಸಹಸ್ರಂ ಚ ಸ್ವಪಿತ್ರ್ಯಾಣಾಂ ಸಮುದ್ಧರೇತ್ || ೩೦ ||

ಮಾತಾಮಹಾನಾಂ ಸಾಹಸ್ರಮುದ್ಧರೇನ್ಮಾತರಂ ತಥಾ ।
ದಾಸಾದಿಕಂ ಸಮುದ್ಧೃತ್ಯ ಗೋಲೋಕಂ ಸ ಪ್ರಯಾತಿ ಚ || ೩೧ ||

---

೨೭. ಇಂತು ಸುಗುಣಾತ್ಮಕನಾದ ವಿಷ್ಣುವನ್ನು ಸೇವಿಸಿ ಸಾತ್ವಿಕರೆನಿಸಿಕೊಂಡ ವೈಷ್ಣವರು ಪ್ರಕೃತಿಗಿಂತ ಶ್ರೇಷ್ಠನೂ, ನಿರ್ಗುಣನೂ ಆದ ಶ್ರೀಕೃಷ್ಣ ಪರಮಾತ್ಮನಲ್ಲಿ ಭಕ್ತಿಯನ್ನು ಹೊಂದುವರು.

೨೮. ಆಗ ಸಂತರೆನಿಸಿಕೊಳ್ಳುವ ಆ ಕೃಷ್ಣಭಕ್ತರು ಶ್ರೀಕೃಷ್ಣಪರಮಾತ್ಮನ ದಿವ್ಯಮಂತ್ರೋಪದೇಶವನ್ನು ಪಡೆದು ನಿರ್ಗುಣನಾದ ಪರಮಾತ್ಮನನ್ನು ಸೇವಿಸಿ ತಾವೂ ನಿರ್ಗುಣರಾಗುವರು.

೨೯. ವಿಷ್ಣುಭಕ್ತರು ರೋಗರುಜಿನವಿಲ್ಲದವರಾಗಿ ಗೋಲೋಕದಲ್ಲಿ ಶ್ರೀಕೃಷ್ಣ ಪರಮಾತ್ಮನ ಸೇವೆಗೈಯ್ಯುತ್ತ ಅಸಂಖ್ಯ ಚತುರ್ಮುಖಬ್ರಹ್ಮರ ಪತನವನ್ನು ನೋಡುವರು.

೩೦ ಯಾವ ಶ್ರೇಷ್ಠಮನುಜರು ಶ್ರೀಕೃಷ್ಣನ ಭಕ್ತರಿಂದ ಶ್ರೀಕೃಷ್ಣ ಮಂತ್ರೋಪದೇಶವನ್ನು ಪಡೆಯುವರೋ ಅವರು ನಮ್ಮ ವಂಶಜರಾದ ಸಾವಿರಾರು ಪಿತೃಗಳನ್ನು ಉದ್ಧರಿಸುವರು.

೩೧. ಅಲ್ಲದೆ ತಮ್ಮ ತಾಯಿಯನ್ನೂ, ಮಾತಾಮಹನ ವಂಶಜರಾದ ಸಾವಿರ ಪುರುಷರನ್ನೂ ಮತ್ತು ತನ್ನ ದಾಸದಾಸಿಯರನ್ನೂ ಕೂಡ ಉದ್ಧಾರಮಾಡಿ ತಾವೂ ಗೋಲೋಕಕ್ಕೆ ಹೋಗುವರು.

**ಭವಾರ್ಣವೇ ಮಹಾಘೋರೇ ಕರ್ಣಧಾರಸ್ವರೂಪಿಣೀ ।**
**ದೀನಾನ್ಪಾರಯತೇ ನಿತ್ಯಂ ಕೃಷ್ಣಭಕ್ತ್ಯಾ ಚ ನೌಕಯಾ ॥ ೩೨ ॥**

**ಸ್ವಕರ್ಮಬಂಧನಂ ಛೇತ್ತುಂ ವೈಷ್ಣವಾನಾಂ ಚ ವೈಷ್ಣವೀ ।**
**ತೀಕ್ಷ್ಣಶಸ್ತ್ರಸ್ವರೂಪಾ ಸಾ ಕೃಷ್ಣಸ್ಯ ಪರಮಾತ್ಮನಃ ॥ ೩೩ ॥**

**ವಿವೇಚಿಕಾಚಾವರಣೀ ಶಕ್ತೇಃ ಶಕ್ತಿರ್ದ್ವಿಧಾ ನೃಪ ।**
**ಪೂರ್ವಂ ದದಾತಿ ಭಕ್ತಾಯ ಚೇತರಾಯ ಪರಾತ್ಪರಾ ॥ ೩೪ ॥**

**ಸತ್ಯಸ್ವರೂಪಃ ಶ್ರೀಕೃಷ್ಣಸ್ತಸ್ಮಾತ್ಸರ್ವಂ ಚ ನಶ್ವರಂ ।**
**ಬುದ್ಧಿರ್ವಿವೇಚಿಕೇತ್ಯೇವಂ ವೈಷ್ಣವಾನಾಂ ಸತಾಮಪಿ ॥ ೩೫ ॥**

**ನಿತ್ಯರೂಪಾ ಮಮೇಯಂ ಶ್ರೀರಿತಿ ಚಾವರಣೀ ಚ ಧೀಃ ।**
**ಅವೈಷ್ಣವಾನಾಮಸತಾಂ ಕರ್ಮಭೋಗಭುಜಾಮಹೋ ॥ ೩೬ ॥**

---

೩೨. ಸಂಸಾರವೆಂಬ ಘೋರಸಮುದ್ರವನ್ನು ದಾಟಿಸಲು ನಾವಿಕಳಂತಿರುವ ಪ್ರಕೃತಿದೇವಿಯು ಕೃಷ್ಣಭಕ್ತಿಯೆಂಬ ಹಡಗಿನಿಂದ ದೀನರನ್ನು ಪಾರಗಾಣಿಸುವಳು.

೩೩. ವೈಷ್ಣವರಲ್ಲೇ ಪರಮವೈಷ್ಣವಿಯೆನಿಸಿಕೊಂಡಿರುವ ಆ ಪ್ರಕೃತಿಯು ಜನ್ಮಾಂತರದ ಕರ್ಮಪಾಪಗಳನ್ನು ಕತ್ತರಿಸಲು ಶ್ರೀಕೃಷ್ಣಪರಮಾತ್ಮನಿಗೆ ತೀಕ್ಷ್ಣ ಶಸ್ತ್ರದಂತಿರುವಳು.

೩೪. ಎಲೈ ರಾಜನೇ, ಪ್ರಕೃತಿದೇವಿಯ ಶಕ್ತಿಯು ವಿವೇಚಿಕಾಶಕ್ತಿ ಮತ್ತು ಆವರಣಶಕ್ತಿಯೆಂದು ಇಬ್ಬಗೆಯಾಗಿರುವುದು. ಅದರಲ್ಲಿ ಮೊದಲನೆಯದನ್ನು ಭಕ್ತನಿಗೂ, ಎರಡನೆಯದನ್ನು ಇತರರಿಗೂ ಕೊಡುವಳು.

೩೫. 'ಶ್ರೀಕೃಷ್ಣನೊಬ್ಬನೇ ಸತ್ಯಸ್ವರೂಪನು. ಉಳಿದುದದೆಲ್ಲವೂ ನಶ್ವರವಾದುದು.' ಎಂಬ ವಿಷಯವನ್ನು ಸನಾತನಿಯಾದ ವಿವೇಚಿಕಾಶಕ್ತಿಯಿಂದ ತಿಳಿಯಬಹುದು.

೩೬. ಸ್ವಕರ್ಮಫಲವನ್ನು ಅನುಭವಿಸುತ್ತಿರುವ ವೈಷ್ಣವರಲ್ಲದವರು ತಮ್ಮ ರೂಪವೂ, ಸಂಪತ್ತೂ ನಿತ್ಯವೆಂದು ತಿಳಿಯುವರು. ಇದೇ ಆವರಣಶಕ್ತಿಯ ಪ್ರಭಾವವು.

ಅಹಂ ಪ್ರಚೇತಸಃ ಪುತ್ರಃ ಪೌತ್ರಶ್ಚ ಬ್ರಹ್ಮಣೋ ನೃಪ ।
ಭಜಾಮಿ ಕೃಷ್ಣಮಾತ್ಮಾನಂ ಜ್ಞಾನಂ ಸಂಪ್ರಾಪ್ಯ ಶಂಕರಾತ್ ॥ ೩೭ ॥

ಗಚ್ಛ ರಾಜನ್ನದೀತೀರಂ ಭಜ ದುರ್ಗಾಂ ಸನಾತನೀಂ ।
ಬುದ್ಧಿಮಾವರಣೀಂ ತುಭ್ಯಂ ದೇವೀ ದಾಸ್ಯತಿ ಕಾಮಿನೇ ॥ ೩೮ ॥

ನಿಷ್ಕಾಮಾಯ ಚ ವೈಶ್ಯಾಯ ವೈಷ್ಣವಾಯ ಚ ವೈಷ್ಣವೀ ।
ಬುದ್ಧಿಂ ವಿವೇಚಿಕಾಂ ಶುದ್ಧಾಂ ದಾಸ್ಯತ್ಯೇವ ಕೃಪಾಮಯಿ ॥ ೩೯ ॥

ಇತ್ಯುಕ್ತ್ವಾ ಚ ಮುನಿಶ್ರೇಷ್ಠೋ ದದೌ ತಾಭ್ಯಾಂ ಕೃಪಾನಿಧಿಃ ।
ಪೂಜಾವಿಧಾನಂ ದುರ್ಗಾಯಾಃ ಸ್ತೋತ್ರಂ ಚ ಕವಚಂ ಮನುಂ ॥ ೪೦ ॥

ವೈಶ್ಯೋ ಮುಕ್ತಿಂ ಚ ಸಂಪ್ರಾಪ ತಂ ನಿಷೇವ್ಯ ಕೃಪಾಮಯೀಂ ।
ರಾಜಾ ರಾಜ್ಯಂ ಮನುತ್ವಂ ಚ ಪರಮೈಶ್ವರ್ಯಮೀಪ್ಸಿತಂ ॥ ೪೧ ॥

---

೩೭. ಎಲೈ ರಾಜನೇ, ನಾನು ವರುಣನ ಮಗನು ಮತ್ತು ಬ್ರಹ್ಮನ ಮೊಮ್ಮಗನು. ಶಂಕರನಿಂದ ದಿವ್ಯಜ್ಞಾನೋಪದೇಶವನ್ನು ಪಡೆದು ಶ್ರೀಕೃಷ್ಣ ಪರಮಾತ್ಮನನ್ನು ಭಜಿಸುತ್ತಿದ್ದೇನೆ.

೩೮. ಆದುದರಿಂದ ಎಲೈ ರಾಜನೇ, ನೀನು ನದಿಯ ತೀರಕ್ಕೆ ಹೋಗಿ ಸನಾತನಿಯಾದ ದುರ್ಗಾದೇವಿಯನ್ನು ಭಜಿಸು. ಆ ದೇವಿಯು ಕಾಮಿನಿಯಾದ ನಿನಗೆ ಆವರಣಾತ್ಮಿಕವಾದ ಬುದ್ಧಿಯನ್ನು ಅನುಗ್ರಹಿಸುವಳು.

೩೯. ಕಾಮರಹಿತನೂ, ಪರಮವೈಷ್ಣವನೂ ಆದ ಸಮಾಧಿಯೆಂಬ ಈ ವೈಶ್ಯನಿಗೆ ದಯಾಮಯಳಾದ ದುರ್ಗಿಯು ಶುದ್ಧವಾದ ವಿವೇಚಿಕಾಬುದ್ಧಿಯನ್ನು ಅನುಗ್ರಹಿಸುವಳು.

೪೦. ದಯಾನಿಧಿಯಾದ ಆ ಮುನಿಯು ಇಂತು ನುಡಿದು ಅವರಿಬ್ಬರಿಗೂ ದುರ್ಗಾದೇವಿಯ ಪೂಜಾವಿಧಾನವನ್ನೂ, ಕವಚ, ಸ್ತೋತ್ರ, ಮಂತ್ರಾದಿಗಳನ್ನೂ ಉಪದೇಶಿಸಿದನು.

೪೧ ೪೨. ಅದರಂತೆ ದಯಾಮಯಳಾದ ದುರ್ಗಾದೇವಿಯನ್ನು ಭಜಿಸಿ ವೈಶ್ಯನು ಮುಕ್ತಿಯನ್ನು ಪಡೆದನು. ಸುರಥರಾಜನು ಕಳೆದುಹೋದ ರಾಜ್ಯವನ್ನೂ,

**ಇತ್ಯೇವಂ ಕಥಿತಂ ಸರ್ವಂ ದುರ್ಗೋಪಾಖ್ಯಾನಮುತ್ತಮಂ ।**
**ಸುಖದಂ ಮೋಕ್ಷದಂ ಸಾರಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೨ ॥**

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ ಸುರಥ-ಮೇಧಸ್ಸಂವಾದೇ ಸುರಥವೈಶ್ಯಯೋರಭಿಲಷಿತ ಸಿದ್ಧಿರ್ನಾಮದ್ವಿಷಷ್ಠಿತಮೋಽಧ್ಯಾಯಃ**

---

ಸಾವರ್ಣಿಮನುವಿನ ಪದವಿಯನ್ನೂ ಮತ್ತು ತನ್ನ ಸಕಲೇಷ್ಟಾರ್ಥಗಳನ್ನೂ ಪಡೆದನು.

೪೨. ಅತ್ಯಂತ ಸಾರರೂಪವೂ, ಸುಖಕರವೂ ಮೋಕ್ಷದಾಯಕವೂ ಆದ ದುರ್ಗಾದೇವಿಯ ಕಥೆಯನ್ನು ಹೇಳಿದೆನು. ಇನ್ನೇನನ್ನು ಕೇಳಬೇಕೆಂದು ನೀನು ಬಯಸುವೆ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಪ್ರಕೃತಿಖಂಡದಲ್ಲಿ ಸುರಥನೆಂಬ ವೈಶ್ಯನಿಗೆ ಇಷ್ಟಾರ್ಥಸಿದ್ಧಿಯಾದುದನ್ನು ತಿಳಿಸುವ ಅರವತ್ತೆರಡನೆಯ ಅಧ್ಯಾಯವು ಮುಗಿದುದು.

# ಅರವತ್ತೆರಡನೆಯ ಅಧ್ಯಾಯದ ಸಾರಾಂಶವು

ಸುರಥನು ಧ್ರುವನ ಮುಮ್ಮಗನಾದ ಉತ್ಕಲನಿಗೆ ರಾಜ್ಯವನ್ನು ಸೋತು ಪುನಃ ರಾಜ್ಯವನ್ನು ಹೊಂದಲು ಮಾರ್ಗಾಂತರ ತಿಳಿಯದೆ ಸುಮೇಧಸನ ಸಮೀಪಕ್ಕೆ ಬಂದನು. ಸಮಾಧಿಯೆಂಬ ವೈಶ್ಯನು ಪತ್ನೀಪುತ್ರರಿಂದ ನಿಷ್ಕಾಸಿತನಾಗಿ ವೈರಾಗ್ಯ ಬುದ್ಧಿಯಿಂದ ಪರಮಾತ್ಮನ ಕೈಂಕರ್ಯವನ್ನು ಪಡೆಯಲು ಸುಮೇಧಸನ ಸಮೀಪಕ್ಕೆ ಬಂದನು. ಆ ಮಹಾಮುನಿಯು ಇವರಿಬ್ಬರಿಗೂ ಪ್ರಕೃತಿದೇವಿಯ ಉಪಾಸನಾಕ್ರಮವನ್ನು ವಿವರಿಸಿದನು. ಅದರಂತೆ ಇಬ್ಬರೂ ಪ್ರಕೃತಿಯನ್ನಾರಾಧಿಸಿದರು. ಪ್ರಕೃತಿಯು ಕಾಮಿಯಾದ ಸುರಥನಿಗೆ 'ಆವರಣೀ' ಶಕ್ತಿಯ ಪ್ರಭಾವದಿಂದ ಈಪ್ಸಿತವಾದ ರಾಜ್ಯಸಂಪತ್ತನ್ನೂ, ವಿರಾಗಿಯಾದ ಸಮಾಧಿಗೆ 'ವಿವೇಚಿಕಾ' ಶಕ್ತಿಯ ಮಹಿಮೆಯಿಂದ ಪರಮಾನಂದಸ್ವರೂಪವಾದ ಮೋಕ್ಷವನ್ನೂ ದಯಪಾಲಿಸಿದಳು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ತ್ರಿಷಷ್ಠಿತಮೋಽಧ್ಯಾಯಃ ||

|| ನಾರದ ಉವಾಚ ||

ನಾರಾಯಣ ಮಹಾಭಾಗ ವದ ವೇದವಿದಾಂ ವರ |
ರಾಜಾ ಕೇನ ಪ್ರಕಾರೇಣ ಸಿಷೇವೇ ಪ್ರಕೃತಿಂ ಪರಾಂ || ೧ ||

ಸಮಾಧಿರ್ನಾಮ ವೈಶ್ಯೋ ವಾ ನಿಷ್ಕಾಮಂ ನಿರ್ಗುಣಂ ವಿಭುಂ |
ಭೇಜೇ ಕೇನ ಪ್ರಕಾರೇಣ ಪ್ರಕೃತೇರುಪದೇಶತಃ || ೨ ||

ಕಿಂ ವಾ ಪೂಜಾವಿಧಾನಂ ಚ ಧ್ಯಾನಂ ವಾ ಮನುರೇವ ಚ |
ಕಿಂ ಸ್ತೋತ್ರಂ ಕವಚಂ ಕಿಂ ವಾ ದದೌ ರಾಜ್ಞೇ ಮಹಾಮುನಿಃ || ೩ ||

---

### ಅರವತ್ತಮೂರನೆಯ ಅಧ್ಯಾಯವು

೧ ನಾರದ :—ವೇದವೇದಾಂಗಪಾರಂಗತನಾದ ಎಲೈ ನಾರಾಯಣ ಮಹರ್ಷಿಯೇ, ಆ ಸುರಥರಾಜನು ಪರಾಶಕ್ತಿರೂಪಿಣಿಯಾದ ಪ್ರಕೃತಿಯನ್ನು ಯಾವ ರೀತಿಯಿಂದ ಸೇವಿಸಿದನು.

೨. ಸಮಾಧಿಯೆಂಬ ಆ ವೈಶ್ಯನೂ ಕೂಡ ಪ್ರಕೃತಿಯ ಉಪದೇಶದಿಂದ ನಿಷ್ಕಾಮನೂ, ನಿರ್ಗುಣನೂ, ವಿಶ್ವವ್ಯಾಪಕನೂ ಆದ ಪರಮಾತ್ಮನನ್ನು ಭಜಿಸಿದುದು ಹೇಗೆ ?

೩ ಮಹಾಮುನಿಯಾದ ಮೇಧಸ್ಸು ಆ ಸುರಥಮಹಾರಾಜನಿಗೆ ಉಪದೇಶ ಮಾಡಿದ ಪೂಜಾವಿಧಿಯೂ ಧ್ಯಾನಮಂತ್ರಗಳೂ, ಸ್ತೋತ್ರಕವಚಗಳೂ ಯಾವುವು ?

ವೈಶ್ಯಾಯ ಪ್ರಕೃತಿಸ್ತಸ್ಮೈ ಕಿಂ ವಾ ಜ್ಞಾನಂ ದದೌ ಪರಂ ।
ಸಾಕ್ಷಾದ್ಬಭೂವ ಸಹಸಾ ಕೇನ ವಾ ಪ್ರಕೃತಿಸ್ತಯೋಃ ॥ ೪ ॥

ಜ್ಞಾನಂ ಸಂಪ್ರಾಪ್ಯ ವೈಶ್ಯಶ್ಚ ಕಿಂ ಪದಂ ಪ್ರಾಪ ದುರ್ಲಭಂ ।
ಗತಿರ್ಬಭೂವ ರಾಜ್ಞಶ್ಚ ಕಾ ವಾ ತಾಂ ಚ ಶೃಣೋಮ್ಯಹಂ ॥ ೫ ॥

॥ ಶ್ರೀ ನಾರಾಯಣ ಉವಾಚ ॥

ರಾಜಾ ವೈಶ್ಯಶ್ಚ ಸಂಪ್ರಾಪ್ಯ ಮಂತ್ರಂ ವೈ ಮೇಧಸೋ ಮುನೇಃ ।
ಸ್ತೋತ್ರಂ ಚ ಕವಚಂ ದೇವ್ಯಾ ಧ್ಯಾನಂ ಚೈವ ಪುರಸ್ಕ್ರಿಯಾಂ ॥ ೬ ॥

ಸ್ನಾತ್ವಾ ತ್ರಿಕಾಲಂ ವರ್ಷಂ ಚ ತತಃ ಶುದ್ಧೋ ಬಭೂವ ಸಃ ।
ಸಾಕ್ಷಾದ್ಬಭೂವ ತತ್ರೈವ ಮೂಲಪ್ರಕೃತಿರೀಶ್ವರೀ ॥ ೭ ॥

---

೪. ಅಲ್ಲದೆ ಪ್ರಕೃತಿದೇವಿಯು ಆ ವೈಶ್ಯನಿಗೆ ಬೋಧಿಸಿದ ದಿವ್ಯಜ್ಞಾನ ವಾವುದು ? ಅವರಿಬ್ಬರಿಗೂ ಪ್ರಕೃತಿಯು ಪ್ರತ್ಯಕ್ಷಳಾದುದು ಹೇಗೆ ?

೫. ಪ್ರಕೃತಿಯಿಂದ ದಿವ್ಯಜ್ಞಾನೋಪದೇಶವನ್ನು ಪಡೆದ ಆ ವೈಶ್ಯನು ಹೊಂದಿದ ದುರ್ಲಭವಾದ ಪದವಿಯಾವುದು ? ಸುರಥಮಹಾರಾಜನಿಗೆ ಯಾವ ಪದವಿ ದೊರಕಿತು ? ಎಂಬುದನ್ನು ನನಗೆ ವಿಸ್ತರಿಸಿ ಹೇಳು.

೬-೭. ಶ್ರೀನಾರಾಯಣ :—ಎಲೈ ನಾರದನೇ, ಸುರಥನೂ ಮತ್ತು ಸಮಾಧಿಯೂ ಆ ಮೇಧಸ್ಸೆಂಬ ಮುನಿಯಿಂದ ಪ್ರಕೃತಿದೇವಿಯ ಧ್ಯಾನಕ್ರಮವನ್ನೂ ಮಂತ್ರವನ್ನೂ, ಕವಚಸ್ತೋತ್ರ ಪೂಜಾವಿಧಿಗಳನ್ನೂ ಉಪದೇಶವಾಗಿ ಪಡೆದು, ಪುಷ್ಕರಕ್ಷೇತ್ರದಲ್ಲಿ ಸ್ನಾನಮಾಡಿ ತ್ರಿಸಂಧ್ಯೆಯಲ್ಲೂ ಆ ಮಂತ್ರವನ್ನು ಒಂದು ವರ್ಷಕಾಲ ಜಪಿಸಿ, ಶುದ್ಧರಾದರು. ಆಗ ಮೂಲಪ್ರಕೃತಿಯಾದ ದುರ್ಗೇಶ್ವರಿಯು ಅವರಿಗೆ ಅಲ್ಲಿಯೇ ತನ್ನ ದಿವ್ಯದರ್ಶನವನ್ನು ಕೊಟ್ಟಳು.

ರಾಜ್ಞೇ ದದೌ ರಾಜ್ಯವರಂ ಮನುತ್ವಂ ವಾಂಛಿತಂ ಸುಖಂ।
ಜ್ಞಾನಂ ನಿಗೂಢಂ ವೈಶ್ಯಾಯ ದದೌ ಚಾತಿಸುದುರ್ಲಭಂ ॥ ೮ ॥

ಯದ್ದತ್ತಂ ಶೂಲಿನೇ ಪೂರ್ವಂ ಕೃಷ್ಣೇನ ಪರಮಾತ್ಮನಾ।
ನಿರಾಹಾರಮತಿಕ್ಲಿಷ್ಟಂ ದೃಷ್ಟ್ವಾ ವೈಶ್ಯಂ ಕೃಪಾಮಯೀ ॥ ೯ ॥

ರುರೋದ ಕೃತ್ವಾ ಕ್ರೋಡೇ ತಮಚೇಷ್ಟಂ ಶ್ವಾಸವರ್ಜಿತಂ।
ಚೇತನಾಂ ಕುರು ಭೋ ವತ್ಸೇತ್ಯುಚ್ಚಾರ್ಯ ಚ ಪುನಃ ಪುನಃ ॥ ೧೦ ॥

ಚೇತನಾಂ ಚ ದದೌ ತಸ್ಮೈ ಸ್ವಯಂ ಚೈತನ್ಯರೂಪಿಣೀ।
ಸಂಪ್ರಾಪ್ಯ ಚೇತನಾಂ ವೈಶ್ಯೋ ರುರೋದ ಪ್ರಕೃತೇಃ ಪುನಃ ॥ ೧೧ ॥

ತಮುವಾಚ ಪ್ರಸನ್ನಾಸೌ ಕೃಪಯಾತಿಕೃಪಾಮಯೀ ॥ ೧೨ ॥

---

೮. ಅನಂತರ ರಾಜನಿಗೆ ಅವನ ರಾಜ್ಯವನ್ನೂ, ಮನುಪದವಿಯನ್ನೂ, ಇಷ್ಟಾರ್ಥಫಲಗಳನ್ನೂ ಅನುಗ್ರಹಿಸಿದಳು. ಆ ವೈಶ್ಯನಿಗೆ ಸರ್ವಸುಲಭವಲ್ಲದ ದಿವ್ಯ ಜ್ಞಾನವನ್ನು ಉಪದೇಶಿಸಿದಳು.

೯. ಆಹಾರವಿಲ್ಲದೆ ಅತಿ ಕ್ಲೇಶಪಡುತ್ತಿರುವ ಆ ವೈಶ್ಯನನ್ನು ನೋಡಿ ಕರುಣಾಮಯಿಯಾದ ದೇವಿಯು ಶ್ರೀಕೃಷ್ಣಪರಮಾತ್ಮನು ಪೂರ್ವದಲ್ಲಿ ಶಂಕರನಿಗೆ ಅನುಗ್ರಹಿಸಿದ ದಿವ್ಯಜ್ಞಾನವನ್ನು ಅನುಗ್ರಹಿಸಿದಳು

೧೦. ನಿರಾಹಾರನಾಗಿ ಅಚೇತನನೂ. ಶ್ವಾಸರಹಿತನೂ ಆದ ಆ ವೈಶ್ಯನನ್ನು ದಯಾಸಾಗರಳಾದ ದೇವಿಯು ತನ್ನ ಎದೆಗಪ್ಪಿಕೊಂಡು, " ಎಲೈ ವತ್ಸನೇ, ಎಚ್ಚರ ಹೊಂದು " ಎಂದು ಮತ್ತೆ ಮತ್ತೆ ಹೇಳುತ್ತ ಅವನಿಗಾಗಿ ವ್ಯಥೆಪಟ್ಟಳು.

೧೧. ಚೈತನ್ಯಸ್ವರೂಪಿಣಿಯಾದ ಆಕೆಯು ಆತನಿಗೆ ಚೈತನ್ಯವನ್ನು ಕೊಡಲು, ಪ್ರಕೃತಿಸ್ಥನಾದ ವೈಶ್ಯನು ಆ ಪ್ರಕೃತಿಯ ಮುಂದೆ ದೈನ್ಯದಿಂದ ಗೋಳಾಡಿದನು

೧೨. ಪ್ರಸನ್ನಳಾದ ಪ್ರಕೃತಿದೇವಿಯು ಅವನನ್ನು ಕುರಿತು ದಯೆಯಿಂದ ಹೀಗೆ ಹೇಳಿದಳು.

॥ ಶ್ರೀ ಪ್ರಕೃತಿರುವಾಚ ॥

ವರಂ ವೃಣುಷ್ವ ಹೇ ವತ್ಸ ಯತ್ತೇ ಮನಸಿ ವರ್ತತೇ ।
ಬ್ರಹ್ಮತ್ವಮಮರತ್ವಂ ವಾ ತತೋ ವಾತಿಸುದುರ್ಲಭಂ　　॥ ೧೩ ॥

ಇಂದ್ರತ್ವಂ ವಾ ಮನುತ್ವಂ ವಾ ಸರ್ವಸಿದ್ಧತ್ವಮೇವ ಚ ।
ತುಚ್ಛಂ ತುಭ್ಯಂ ನ ದಾಸ್ಯಾಮಿ ನಶ್ವರಂ ಬಾಲವಂಚನಂ　　॥ ೧೪ ॥

॥ ವೈಶ್ಯ ಉವಾಚ ॥

ಬ್ರಹ್ಮತ್ವಮಮರತ್ವಂ ವಾ ಮಾತರ್ಮೇ ನ ಹಿ ವಾಂಛಿತಂ ।
ತತೋಽತಿದುರ್ಲಭಂ ಕಿಂ ವಾ ನ ಜಾನೇ ತದಭೀಪ್ಸಿತಂ　　॥ ೧೫ ॥

ತ್ವಯ್ಯೇವ ಶರಣಾಪನ್ನೋ ದೇಹಿ ಯದ್ವಾಂಛಿತಂ ತವ ।
ಅನಶ್ವರಂ ಸರ್ವಸಾರಂ ವರಂ ಮೇ ದಾತುಮರ್ಹಸಿ　　॥ ೧೬ ॥

---

೧೩. ಪ್ರಕೃತಿ:—ಎಲೈ ವತ್ಸನೇ, ನಿನ್ನ ಮನಸ್ಸಿನಲ್ಲಿರುವ ಆಶೆಯನ್ನು ಬಿಚ್ಚಿ ಹೇಳು. ಬ್ರಹ್ಮಪದವಿಯನ್ನಾಗಲೀ, ದೇವತಾಸ್ವರೂಪವನ್ನಾಗಲೀ, ಅಥವಾ ಅದಕ್ಕಿಂತಲೂ ದುರ್ಲಭವಾದ ಸ್ಥಾನವನ್ನಾಗಲೀ ನೀನು ಬಯಸಿದರೂ ನಾನು ಕೊಡುವೆನು.

೧೪. ಇಂದ್ರಪದವಿಯನ್ನಾಗಲೀ, ಮನುಪದವಿಯನ್ನಾಗಲೀ. ಸಕಲ ಇಷ್ಟಾರ್ಥಸಿದ್ಧಿಯನ್ನಾಗಲೀ ನಾನು ಕೊಡಬಲ್ಲೆನು. ಆದರೆ ಅತ್ಯಂತ ತುಚ್ಛವೂ, ನಶ್ವರವೂ ಆದುದನ್ನು ಬಾಲನಾದ ನಿನಗೆ ಕೊಟ್ಟರೆ ಮೋಸಮಾಡಿದಂತಾಗುವುದು.

೧೫. ವೈಶ್ಯ:—ಎಲೌ ತಾಯಿಯೇ, ನನಗೆ ಬ್ರಹ್ಮಪದವಿಯಲ್ಲಾಗಲೀ, ಅಮರ ಪದವಿಯಲ್ಲಾಗಲೀ ಇಚ್ಛೆಯಿಲ್ಲ. ಅದಕ್ಕಿಂತಲೂ ದುರ್ಲಭವಾದ ಇಷ್ಟಾರ್ಥವೇನೆಂಬುದೇ ನನಗೆ ತಿಳಿಯದು.

೧೬. ನಾನು ನಿನ್ನನ್ನು ಶರಣುಹೊಂದುವೆನು. ನಿನಗೆ ಇಷ್ಟವಾದುದನ್ನೇ ನನಗೆ ದಯಪಾಲಿಸು. ನಿತ್ಯವೂ ಸಾರಭೂತವೂ ಆದ ವರವನ್ನು ಮಾತ್ರ ನನಗೆ ಕರುಣಿಸು.

|| ಪ್ರಕೃತಿರುವಾಚ ||

ಅದೇಯಂ ನಾಸ್ತಿ ಮೇ ತುಭ್ಯಂ ದಾಸ್ಯಾಮಿ ಮಮ ವಾಂಛಿತಂ |
ಯತೋ ಯಾಸ್ಯಸಿ ಗೋಲೋಕಂ ಪದಮೇವ ಸುದುರ್ಲಭಂ || ೧೭ ||

ಸರ್ವಸಾರಂ ಚ ಯಜ್ಜ್ಞಾನಂ ಸುರರ್ಷೀಣಾಂ ಸುದುರ್ಲಭಂ |
ತದ್ಗೃಹ್ಯತಾಂ ಮಹಾಭಾಗ ಗಚ್ಛ ವತ್ಸ ಹರೇಃ ಪದಂ || ೧೮ ||

ಸ್ಮರಣಂ ವಂದನಂ ಧ್ಯಾನಮರ್ಚನಂ ಗುಣಕೀರ್ತನಂ |
ಶ್ರವಣಂ ಭಾವನಂ ಸೇವಾ ಕೃಷ್ಣೇ ಸರ್ವನಿವೇದನಂ || ೧೯ ||

ಏತದೇವಂ ವೈಷ್ಣವಾನಾಂ ನವಧಾ ಭಕ್ತಿಲಕ್ಷಣಂ |
ಜನ್ಮಮೃತ್ಯುಜರಾವ್ಯಾಧಿಯಮತಾಡನಖಂಡನಂ || ೨೦ ||

---

೧೭. ಪ್ರಕೃತಿ:—ನಿನಗೆ ಕೊಡಬಾರದು ಯಾವುದೂ ಇಲ್ಲ. ಸರ್ವರಿಗೂ ದುರ್ಲಭವೂ, ನನಗೆ ಸಮ್ಮತವೂ ಆದ ಗೋಲೋಕಪ್ರಾಪ್ತಿರೂಪವಾದ ವರವನ್ನು ನಿನಗೆ ಅನುಗ್ರಹಿಸುವೆನು.

೧೮. ದೇವರ್ಷಿಗಣಕ್ಕೆ ದುರ್ಲಭವೂ, ಸರ್ವಸಾರವೂ ಆದ ದಿವ್ಯಜ್ಞಾನವನ್ನು ಉಪದೇಶಿಸುವೆನು. ಎಲೈ ಮಹಾತ್ಮನೇ, ಅದನ್ನು ಸ್ವೀಕರಿಸಿ ಶ್ರೀಹರಿಯ ಪದವನ್ನು ಪಡೆಯುವೆ.

೧೯–೨೦. ಪರಮಾತ್ಮನ ದಿವ್ಯರೂಪವನ್ನು ಸ್ಮರಿಸುವುದು, ಪರಮಾತ್ಮನಿಗೆ ವಂದಿಸುವುದು, ಧ್ಯಾನಿಸುವುದು, ಪೂಜಿಸುವುದು, ದಿವ್ಯಗುಣಗಳನ್ನು ಕೀರ್ತನ ಮಾಡುವುದು, ಶ್ರವಣಮಾಡುವುದು, ಮನಸ್ಸಿನಲ್ಲಿಯೇ ಭಾವನೆಮಾಡುವುದು, ಸೇವೆ ಗೈಯ್ಯುವುದು ಸಕಲವನ್ನೂ ನಿಷ್ಕಾಮ ಬುದ್ಧಿಯಿಂದ ಪರಮಾತ್ಮನಿಗರ್ಪಿಸುವುದು ಈ ಒಂಭತ್ತೂ ವಿಷ್ಣುಭಕ್ತರು ತಮ್ಮ ಭಕ್ತಿಯನ್ನು ಪ್ರಕಟಿಸುವ ಮಾರ್ಗಗಳು. ಈ ಭಕ್ತಿಮಾರ್ಗದಲ್ಲಿರವವರಿಗೆ ಜನ್ಮಮೃತ್ಯುಗಳೂ, ಜರಾವ್ಯಾಧಿಗಳೂ ಪರಿಹೃತವಾಗಿ ಯಮನ ಶಿಕ್ಷೆಯು ದೂರವಾಗುವುದು.

ಆಯುರ್ಹರತಿ ಲೋಕಾನಾಂ ರವಿರೇವ ಹಿ ಸಂತತಂ ।
ನವಧಾ ಭಕ್ತಿಹೀನಾನಾಮಸತಾಂ ಪಾಪಿನಾಮಪಿ ॥ ೨೧ ॥

ಭಕ್ತಾಸ್ತದ್ಗತಚಿತ್ತಾಶ್ಚ ವೈಷ್ಣವಾಶ್ಚಿರಜೀವಿನಃ ।
ಜೀವನ್ಮುಕ್ತಾಶ್ಚ ನಿಷ್ಪಾಪಾ ಜನ್ಮಾದಿಪರಿವರ್ಜಿತಾಃ ॥ ೨೨ ॥

ಶಿವಃ ಶೇಷಶ್ಚ ಧರ್ಮಶ್ಚ ಬ್ರಹ್ಮಾ ವಿಷ್ಣುರ್ಮಹಾನ್ವಿರಾಟ್ ।
ಸನತ್ಕುಮಾರಃ ಕಪಿಲಃ ಸನಕಶ್ಚ ಸನಂದನಃ ॥ ೨೩ ॥

ವೋಢುಃ ಪಂಚಶಿಖೋ ದಕ್ಷೋ ನಾರದಶ್ಚ ಸನಾತನಃ ।
ಭೃಗುರ್ಮರೀಚಿರ್ದುರ್ವಾಸಾಃ ಕಶ್ಯಪಃ ಪುಲಹೋಽಙ್ಗಿರಾಃ ॥ ೨೪ ॥

ಮೇಧಾವೀ ಲೋಮಶಃ ಶುಕ್ರೋ ವಸಿಷ್ಠಃ ಕ್ರತುರೇವ ಚ ।
ಬೃಹಸ್ಪತಿಃ ಕರ್ದಮಶ್ಚ ಶಕ್ತಿರತ್ರಿಃ ಪರಾಶರಃ ॥ ೨೫ ॥

ಮಾರ್ಕಂಡೇಯೋ ಬಲಿಶ್ಚೈವ ಪ್ರಹ್ಲಾದಶ್ಚ ಗಣೇಶ್ವರಃ ।
ಯಮಃ ಸೂರ್ಯಶ್ಚ ವರುಣೋ ವಾಯುಶ್ಚಂದ್ರೋ ಹುತಾಶನಃ ॥ ೨೬ ॥

---

೨೧. ಈ ಒಂಭತ್ತು ರೀತಿಯ ಭಕ್ತಿಯಿಲ್ಲದ ಪಾಪಿಗಳ ಆಯುಸ್ಸನ್ನು ಸೂರ್ಯನು ಸರ್ವದಾ ಕ್ಷೀಣಗೊಳಿಸುತ್ತಿರುವನು.

೨೨. ಪರಮಾತ್ಮನಲ್ಲಿ ಮನಸ್ಸನ್ನು ಸ್ಥಿರವಾಗಿಟ್ಟಿರುವ ಭಕ್ತರು ಚಿರಂಜೀವಿಗಳಾಗಿದ್ದು ಪಾಪದೂರರಾಗಿ, ಜನ್ಮಜರಾಮರಣಗಳಿಲ್ಲದೆ ಜೀವನ್ಮುಕ್ತರಾಗುವರು.

೨೩—೨೪. ಶಿವ, ಶೇಷ, ಧರ್ಮ, ಬ್ರಹ್ಮ, ವಿಷ್ಣು, ಮಹಾವಿರಾಟ್, ಸನತ್ಕುಮಾರ, ಕಪಿಲ, ಸನಕ, ಸನಂದನ, ವೋಢು, ಪಂಚಶಿಖ, ದಕ್ಷ, ನಾರದ, ಸನಾತನ, ಭೃಗು, ಮರೀಚ, ದೂರ್ವಾಸ, ಕಶ್ಯಪ, ಪುಲಹ ಮತ್ತು ಅಂಗಿರಸ್ಸು, ಇವರೆಲ್ಲರೂ ಪರಮಾತ್ಮನ ಭಕ್ತಾಗ್ರಗಣ್ಯರು.

೨೫—೨೮. ಹಾಗೆಯೇ, ಮಹಾತ್ಮರಾದ ಮೇಧಾವಿ, ಲೋಮಶ, ಶುಕ್ರ, ವಸಿಷ್ಠ, ಕ್ರತು, ಬೃಹಸ್ಪತಿ ಮತ್ತು ಕರ್ದಮರೂ, ಶಕ್ತಿ, ಅತ್ರಿ, ಪರಾಶರ, ಮಾರ್ಕಂಡೇಯ, ಬಲಿ ಮತ್ತು ಪ್ರಹ್ಲಾದರೂ, ಗಣೇಶ, ಯಮ, ಸೂರ್ಯ, ವರುಣ, ವಾಯು,

ಅಕೂಪಾರ ಉಲೂಕಶ್ಚ ನಾಡೀಜಂಘಶ್ಚ ವಾಯುಜಃ ।
ನರನಾರಾಯಣೌ ಕೂರ್ಮ ಇಂದ್ರದ್ಯುಮ್ನೋ ವಿಭೀಷಣಃ ॥ ೨೭ ॥

ನವಧಾ ಭಕ್ತಿಯುಕ್ತಾಶ್ಚ ಕೃಷ್ಣಸ್ಯ ಪರಮಾತ್ಮನಃ ।
ಏತೇ ಮಹಾಂತೋ ಧರ್ಮಿಷ್ಠಾ ಭಕ್ತಾನಾಂ ಪ್ರವರಾಸ್ತಥಾ ॥ ೨೮ ॥

ಯೇ ತದ್ಭಕ್ತಾಸ್ತೇ ತದಂಶಾ ಜೀವನ್ಮುಕ್ತಾಶ್ಚ ಸಂತತಂ ।
ಪಾಪಾಪಹಾರಾಸ್ತೀರ್ಥಾನಾಂ ಪೃಥಿವ್ಯಾಶ್ಚ ವಿಶಾಂ ಪತೇ ॥ ೨೯ ॥

ಊರ್ಧ್ವಂ ಚ ಸಪ್ತಸ್ವರ್ಗಾಶ್ಚ ಸಪ್ತದ್ವೀಪಾ ವಸುಂಧರಾ ।
ಅಧಃ ಸಪ್ತ ಚ ಪಾತಾಲಾ ಏತದ್ಬ್ರಹ್ಮಾಂಡಮೇವ ಚ ॥ ೩೦ ॥

ಏವಂ ವಿಧಾನಾಂ ವಿಶ್ವಾನಾಂ ಸಂಖ್ಯಾ ನಾಸ್ತ್ಯೇವ ಪುತ್ರಕ ।
ಏವಂ ಚ ಪ್ರತಿವಿಶ್ವೇಷು ಬ್ರಹ್ಮವಿಷ್ಣುಶಿವಾದಯಃ ॥ ೩೧ ॥

---

ಮತ್ತು ಚಂದ್ರರೂ, ಅಗ್ನಿ, ಸಮುದ್ರ, ಉಲೂಕ, ನಾಡೀಜಂಘ, ಆಂಜನೇಯ ಮತ್ತು ನರನಾರಾಯಣರೂ, ಕೂರ್ಮ, ಇಂದ್ರದ್ಯುಮ್ನ ಮತ್ತು ವಿಭೀಷಣರೂ ಕೂಡ ಶ್ರೀಕೃಷ್ಣಪರಮಾತ್ಮನಲ್ಲಿ ಮೇಲೆ ಹೇಳಿದ ನವವಿಧ ಭಕ್ತಿಯನ್ನೂ ಇಟ್ಟುಕೊಂಡು ಭಕ್ತಶ್ರೇಷ್ಠರೆನಿಸಿರುವರು.

೨೯. ಎಲೈ ಮಹಾರಾಜನೇ, ಪರಮಾತ್ಮನ ಭಕ್ತರೂ ಮತ್ತು ಅಂಶದಿಂದ ಅವತರಿಸಿದವರೂ ಜೀವನ್ಮುಕ್ತರಾಗುವುದಲ್ಲದೆ ಅವರ ಸಂಪರ್ಕದಿಂದ ತೀರ್ಥಕ್ಷೇತ್ರಗಳ ಪಾಪವೂ ಪರಿಹಾರವಾಗುವುದು.

೩೦. ಸಪ್ತದ್ವೀಪಗಳಿಂದ ಕೂಡಿದ ಭೂಮಂಡಲದ ಮೇಲುಭಾಗದಲ್ಲಿ ಸಪ್ತ ಸ್ವರ್ಗಗಳೂ, ಕೆಳಭಾಗದಲ್ಲಿ ಸಪ್ತಪಾತಾಳ ಲೋಕಗಳೂ ಇವೆ. ಇವೆಲ್ಲವೂ ಸೇರಿ ಬ್ರಹ್ಮಾಂಡವೆನಿಸುವುದು.

೩೧. ಈ ಪ್ರಕಾರವಾಗಿ ಬ್ರಹ್ಮಾಂಡಗಳು ಎಷ್ಟಿವೆಯೆಂದು ಗಣಿಸಲು ಸಾಧ್ಯವಿಲ್ಲ. ಪ್ರತಿ ಬ್ರಹ್ಮಾಂಡಲ್ಲಿಯೂ ಬ್ರಹ್ಮ ವಿಷ್ಣು, ಶಿವಾದಿಗಳಿರುವರು.

**ದೇವಾ ದೇವರ್ಷಯಶ್ಚೈವ ಮನವೋ ಮಾನವಾದಯಃ ।**
**ಸರ್ವಾಶ್ರಮಾಶ್ಚ ಸರ್ವತ್ರ ಸಂತಿ ಬದ್ಧಾಶ್ಚ ಮಾಯಯಾ ॥ ೩೨ ॥**

**ಮಹಾವಿಷ್ಣೋರ್ಲೋಮಕೂಪೇ ಸಂತಿ ವಿಶ್ವಾನಿ ಯಸ್ಯ ಚ ।**
**ಸ ಷೋಡಶಾಂಶಃ ಕೃಷ್ಣಸ್ಯ ಚಾತ್ಮನಶ್ಚ ಮಹಾವಿರಾಟ್ ॥ ೩೩ ॥**

**ಭಜ ಸತ್ಯಂ ಪರಂ ಬ್ರಹ್ಮ ನಿತ್ಯಂ ನಿರ್ಗುಣಮಚ್ಯುತಂ ।**
**ಪ್ರಕೃತೇಃ ಪರಮೀಶಾನಂ ಕೃಷ್ಣಮಾತ್ಮಾನಮೀಪ್ಸಿತಂ ॥ ೩೪ ॥**

**ನಿರೀಹಂ ಚ ನಿರಾಕಾರಂ ನಿರ್ವಿಕಾರಂ ನಿರಂಜನಂ ।**
**ನಿಷ್ಕಾಮಂ ನಿರ್ವಿರೋಧಂ ಚ ನಿತ್ಯಾನಂದಂ ಸನಾತನಂ ॥ ೩೫ ॥**

**ಸ್ವೇಚ್ಛಾಮಯಂ ಸರ್ವರೂಪಂ ಭಕ್ತಾನುಗ್ರಹವಿಗ್ರಹಂ ।**
**ತೇಜಸ್ಸ್ವರೂಪಂ ಪರಮಂ ದಾತಾರಂ ಸರ್ವಸಂಪದಾಂ ॥ ೩೬ ॥**

---

೩೨. ಅಲ್ಲದೆ ದೇವತೆಗಳು, ದೇವರ್ಷಿಗಳು ಮತ್ತು ಮನು ಮಾನವರೂ, ಪ್ರತಿ ಬ್ರಹ್ಮಾಂಡದಲ್ಲಿಯೂ ಪ್ರಕೃತಿಯ ಮಾಯಾ ಜಾಲಕ್ಕೆ ಸಿಲುಕಿರುವರು.

೩೩. ಈ ಪ್ರಕಾರವಾದ ಅಗಣಿತ ಬ್ರಹ್ಮಾಂಡಗಳು ಯಾವ ಮಹಾವಿಷ್ಣುವಿನ ಲೋಮಕೂಪಗಳಲ್ಲಿ ಅಡಗಿರುವುವೋ, ಆ ಮಹಾವಿರಾಟ್ಪುರುಷನೂ ಕೂಡ ಶ್ರೀಕೃಷ್ಣ ಪರಮಾತ್ಮನ ಹದಿನಾರನೆಯ ಒಂದಂಶಮಾತ್ರನಾಗಿರುವನು.

೩೪. ಆದುದರಿಂದ ನಿತ್ಯನೂ, ನಿರ್ಗುಣನೂ, ಅವಿನಾಶಿಯೂ, ಸತ್ಯ ಸ್ವರೂಪನೂ ಪ್ರಕೃತಿಯ ಮಾಯೆಗೆ ಸಿಲುಕದವನೂ ಆದ ಶ್ರೀಕೃಷ್ಣಪರಮಾತ್ಮನನ್ನು ಭಕ್ತಿಯಿಂದ ಭಜಿಸು.

೩೫–೩೬. ಇಚ್ಛಾರಹಿತನೂ, ಆಕಾರವಿಕಾರಗಳಿಲ್ಲದವನೂ, ನಿರ್ಲಿಪ್ತನೂ, ನಿಷ್ಕಾಮನೂ, ದ್ವಂದ್ವಾತೀತನೂ, ನಿತ್ಯಾನಂದಮಯನೂ, ಅನಾದಿಯೂ ಆದ ಆ ಪರಮಾತ್ಮನು ಸ್ವೇಚ್ಛಾಮಯನಾದುದರಿಂದ ವಸ್ತುತಃ ತೇಜೋಮಯನಾದರೂ ಭಕ್ತರ ಅನುಗ್ರಹಕ್ಕಾಗಿ ಸ್ವೇಚ್ಛಾರೂಪವನ್ನು ಧರಿಸಿ ಅವರ ಇಷ್ಟಾರ್ಥವನ್ನು ನೆರವೇರಿಸುವನು.

ಧ್ಯಾನಾಸಾಧ್ಯಂ ದುರಾರಾಧ್ಯಂ ಶಿವಾದೀನಾಂ ಚ ಯೋಗಿನಾಂ ।
ಸರ್ವೇಶ್ವರಂ ಸರ್ವಪೂಜ್ಯಂ ಸರ್ವೇಷಾಂ ಸರ್ವಕಾಮದಂ ॥ ೩೭ ॥

ಸರ್ವಾಧಾರಂ ಚ ಸರ್ವಜ್ಞಂ ಸರ್ವಾನಂದಕರಂ ಪರಂ ।
ಸರ್ವಧರ್ಮಪ್ರದಂ ಸರ್ವಂ ಸರ್ವಜ್ಞಂ ಪ್ರಾಣರೂಪಿಣಂ ॥ ೩೮ ॥

ಸರ್ವಧರ್ಮಸ್ವರೂಪಂ ಚ ಸರ್ವಕಾರಣಕಾರಣಂ ।
ಸುಖದಂ ಮೋಕ್ಷದಂ ಸಾರಂ ಪರರೂಪಂ ಚ ಭಕ್ತಿದಂ ॥ ೩೯ ॥

ದಾಸ್ಯದಂ ಧರ್ಮದಂ ಚೈವ ಸರ್ವಸಿದ್ಧಿಪ್ರದಂ ಸತಾಂ ।
ಸರ್ವಂ ತದತಿರಿಕ್ತಂ ಚ ನಶ್ವರಂ ಕೃತ್ರಿಮಂ ಸದಾ ॥ ೪೦ ॥

ಪರಾತ್ಪರತರಂ ಶುದ್ಧಂ ಪರಿಪೂರ್ಣತಮಂ ಶಿವಂ ।
ಯಥಾ ಸುಖಂ ಗಚ್ಛ ವತ್ಸ ಭಗವಂತಮಧೋಕ್ಷಜಂ ॥ ೪೧ ॥

ಕೃಷ್ಣೇತಿ ದ್ವ್ಯಕ್ಷರಂ ಮಂತ್ರಂ ಗೃಹೀತ್ವಾ ಕೃಷ್ಣದಾಸ್ಯದಂ ।
ಪುಷ್ಕರಂ ಮುಷ್ಕರಂ ಗತ್ವಾ ದಶಲಕ್ಷಮಿಮಂ ಜಪ ॥ ೪೨ ॥

---

೩೭–೩೮. ಶಿವನೇ ಮೊದಲಾದ ಯೋಗೀಶ್ವರರ ಪೂಜೆಯಿಂದ ಮಾತ್ರ ತೃಪ್ತನಾಗದೆ, ಧ್ಯಾನೈಕಗಮ್ಯನಾಗಿರುವ ಆ ಪರಮಾತ್ಮನು ಭಕ್ತಿಯಿಂದ ತನ್ನನ್ನು ಪೂಜಿಸಿದವರ ಇಷ್ಟಾರ್ಥದಾಯಕನಾಗಿಯೂ, ಸರ್ವಾಧಾರನೂ ಸರ್ವಜ್ಞನೂ ಆದುದರಿಂದ ಸರ್ವಾನಂದಕರನಾಗಿಯೂ, ಸಕಲರ ಪ್ರಾಣಸ್ವರೂಪನಾಗಿಯೂ ಇರುವನು.

೩೯–೪೦. ಸರ್ವಧರ್ಮಸ್ವರೂಪನೂ, ಕಾರಣಗಳಿಗೆಲ್ಲ ಆದಿಕಾರಣನೂ, ಭಕ್ತಿ, ಸುಖ ಮತ್ತು ಮೋಕ್ಷಗಳನ್ನೂ, ತನ್ನ ದಾಸ್ಯವನ್ನೂ, ಸಕಲೇಷ್ಟಾರ್ಥವನ್ನೂ, ಕೊಡುವವನೂ ಆದ ಆ ಪರಮಾತ್ಮನೊಬ್ಬನನ್ನುಳಿದು ಎಲ್ಲವೂ ಕೃತ್ರಿಮವೂ, ನಶ್ವರವೂ, ಆದುದು.

೪೧. ಆದುದರಿಂದ, ಸರ್ವೋತ್ತಮನೂ, ಪರಿಪೂರ್ಣತಮನೂ, ಶುದ್ಧ ಸತ್ವರೂಪನೂ. ಮಂಗಳಪ್ರದನೂ ಆದ ಆ ಅಧೋಕ್ಷಜನನ್ನು ಭಕ್ತಿಯಿಂದ ಭಜಿಸಿ ಸುಖಿಯಾಗು.

೪೨. ಶ್ರೀಕೃಷ್ಣನ ಸೇವಾಪ್ರಾಪ್ತಿಗೆ ಕಾರಣವಾದ 'ಕೃಷ್ಣ' ಎಂಬ ಎರಡಕ್ಷರದ ಮಂತ್ರವನ್ನು ನನ್ನಿಂದ ಉಪದೇಶವಾಗಿ ಸ್ವೀಕರಿಸಿ ಪುಷ್ಕರಕ್ಷೇತ್ರಕ್ಕೆ ಹೋಗಿ ಹತ್ತು ಲಕ್ಷಸಾರಿ ಆ ಮಂತ್ರವನ್ನು ಜಪಿಸು.

ದಶಲಕ್ಷಜಪೇನೈವ ಮಂತ್ರಸಿದ್ಧಿರ್ಭವೇತ್ತವ ।
ಇತ್ಯುಕ್ತ್ವಾ ಸಾ ಭಗವತೀ ತತ್ರೈವಾಂತರಧೀಯತ ॥ ೪೩ ॥

ವೈಶ್ಯೋ ನತ್ವಾ ಚ ತಾಂ ಭಕ್ತ್ಯಾ ಚಾಗಮತ್ಪುಷ್ಕರಂ ಮುನೇ ।
ಪುಷ್ಕರೇ ದುಸ್ತರಂ ತಪ್ತ್ವಾ ಸ ಲೇಭೇ ಕೃಷ್ಣಮೀಶ್ವರಂ ।
ಭಗವತ್ಯಾಃ ಪ್ರಸಾದೇನ ಕೃಷ್ಣದಾಸೋ ಬಭೂವ ಸಃ ॥ ೪೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ ಸುರಥ
ಸಮಾಧಿಮೇಧಸ್ಸಂವಾದೇ ಪ್ರಕೃತಿ ವೈಶ್ಯಸಂವಾದಕಥನಂ
ನಾಮ ತ್ರಿಷಷ್ಟಿತಮೋಽಧ್ಯಾಯಃ

---

೪೩. ಆರೀತಿ ಹತ್ತುಲಕ್ಷಸಾರಿ ಜಪಿಸಿದ ಮಾತ್ರದಿಂದಲೇ ನಿನಗೆ ಮಂತ್ರ ಸಿದ್ಧಿಯೂ, ಇಷ್ಟಾರ್ಥವೂ ಲಭಿಸುವುದು. ಪ್ರಕೃತೀದೇವಿಯು ಈ ರೀತಿಯಾಗಿ ಹೇಳಿ ಅಲ್ಲಿಯೇ ಅಂತರ್ಧಾನ ಹೊಂದಿದಳು.

೪೪. ಆ ವೈಶ್ಯನೂ ಕೂಡ ಪ್ರಕೃತಿಗೆ ಭಕ್ತಿಯಿಂದ ನಮಿಸಿ, ಪುಷ್ಕರಕ್ಷೇತ್ರಕ್ಕೆ ಬಂದು, ಶ್ರೀಕೃಷ್ಣಪರಮಾತ್ಮನನ್ನುದ್ದೇಶಿಸಿ ದುಸ್ತರವಾದ ತಪಸ್ಸನ್ನಾಚರಿಸಿ ಪ್ರಕೃತಿಯ ಅನುಗ್ರಹದಿಂದ ಶ್ರೀಕೃಷ್ಣಪರಮಾತ್ಮನ ದಾಸನಾದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ
ಪ್ರಕೃತಿ ಮತ್ತು ವೈಶ್ಯನ ಸಂವಾದವನ್ನು ತಿಳಿಸುವ
ಅರವತ್ತಮೂರನೆಯ ಅಧ್ಯಾಯವು ಮುಗಿದುದು.

## ಅರವತ್ತಮೂರನೆಯ ಅಧ್ಯಾಯದ ಸಾರಾಂಶವು

ಸುಮೇಧಸನ ಉಪದೇಶದಂತೆ ಸುರಥನೂ ಸಮಾಧಿಯೂ ಪುಷ್ಕರಕ್ಷೇತ್ರಕ್ಕೆ ಹೋಗಿ ಪ್ರಕೃತಿದೇವಿಯನ್ನು ಕುರಿತು ಅನನ್ಯಭಕ್ತಿಯಿಂದ ತಪಸ್ಸುಮಾಡಿದರು. ಆಗ ಪ್ರಕೃತಿಯು ಪ್ರತ್ಯಕ್ಷಳಾಗಿ ಸುರಥಮಹಾರಾಜನಿಗೆ ಅಭೀಪ್ಸಿತವಾದ ರಾಜ್ಯಪದವಿಯನ್ನು ಅನುಗ್ರಹಿಸಿ ನಿಷ್ಕಾಮಿಯಾದ ಸಮಾಧಿ ಎಂಬ ವೈಶ್ಯನಿಗೆ ನವವಿಧಭಕ್ತಿಸ್ವರೂಪವನ್ನು ತಿಳಿಸಿ, ಧ್ಯಾನೈಕಗಮ್ಯನೂ ನಿಗಮಾತೀತನೂ ನಿರ್ಗುಣ ಮತ್ತು ನಿರಾಕಾರನೂ ಆದ ಶ್ರೀಕೃಷ್ಣನನ್ನು ಭಕ್ತಿಯಿಂದ ಭಜಿಸುವಂತೆ ಹೇಳಿ, ಶ್ರೀಕೃಷ್ಣ ಮಂತ್ರವನ್ನುಪದೇಶಿಸಿದಳು. ಅದರಂತೆ ಆ ವೈಶ್ಯನು ಪುಷ್ಕರಕ್ಷೇತದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಕುರಿತು ತಪಸ್ಸುಮಾಡಿ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾದನು.

|| ಓಂ |

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಚತುಃಷಷ್ಟಿತಮೋಽಧ್ಯಾಯಃ ||

|| ನಾರಾಯಣ ಉವಾಚ ||

ರಾಜಾ ಯೇನ ಕ್ರಮೇಣೈವ ಭೇಜೇ ತಾಂ ಪ್ರಕೃತಿಂ ಪರಾಂ |
ತಚ್ಛ್ರೂಯತಾಂ ಮಹಾಭಾಗ ವೇದೋಕ್ತಂ ಕ್ರಮಮೇವ ಚ || ೧ ||

ಸ್ನಾತ್ವಾಚಮ್ಯ ಮಹಾರಾಜಃ ಕೃತ್ವಾ ನ್ಯಾಸತ್ರಯಂ ತದಾ |
ಸ್ವಕರಾಂಗಾಂಗಮಂತ್ರಾಣಾಂ ಭೂತಶುದ್ಧಿಂ ಚಕಾರ ಸಃ || ೨ ||

ಪ್ರಾಣಾಯಾಮಂ ತತಃ ಕೃತ್ವಾ ಕೃತ್ವಾ ಚ ಶಂಖಶೋಧನಂ |
ಧ್ಯಾತ್ವಾ ದೇವೀಂ ಚ ಮೃಣ್ಮಯ್ಯಾಂ ಚಕಾರಾವಾಹನಂ ತದಾ || ೩ ||

---

### ಅರವತ್ತನಾಲ್ಕನೆಯ ಅಧ್ಯಾಯವು

೧. ನಾರಾಯಣ :—ಎಲೈ ನಾರದನೇ, ಆ ಸುರಥಮಹಾರಾಜನು ಪ್ರಕೃತಿ ದೇವಿಯನ್ನು ವೇದೋಕ್ತಕ್ರಮದಲ್ಲಿ ಎಂತು ಭಜಿಸಿದನೆಂಬುದನ್ನು ಈಗ ನಿನಗೆ ಹೇಳುವೆನು.

೨. ಆ ಮಹಾರಾಜನು ಸ್ನಾನಮಾಡಿ ಆಚಮನದಿಂದ ಅಂತಃಶುದ್ಧಿಯನ್ನು ಹೊಂದಿ ಮಂತ್ರೋಕ್ತಕ್ರಮದಂತೆ ಅಂಗನ್ಯಾಸ ಕರನ್ಯಾಸಾದಿಗಳನ್ನೂ, ಭೂತ ನಿರಸನವನ್ನೂ ಮಾಡಿಕೊಂಡನು.

೩. ಅನಂತರ ಪ್ರಾಣಾಯಾಮವನ್ನೂ ಶಂಖಪ್ರಕ್ಷಾಳನೆಯನ್ನೂ ಮಾಡಿ, ಮಣ್ಣಿನ ಪ್ರತಿಮೆಯಲ್ಲಿ ದೇವಿಯನ್ನು ಧ್ಯಾನಿಸಿ ಆವಾಹನೆಮಾಡಿದನು.

ಪುನರ್ಧ್ಯಾತ್ವಾ ಚ ಭಕ್ತ್ಯಾ ಚ ಪೂಜಯಾಮಾಸ ಭಕ್ತಿತಃ ।
ದೇವ್ಯಾಶ್ಚ ದಕ್ಷಿಣೇ ಭಾಗೇ ಸಂಸ್ಥಾಪ್ಯ ಕಮಲಾಲಯಾಂ ॥ ೪ ॥

ಸಂಪೂಜ್ಯ ಭಕ್ತಿಭಾವೇನ ಭಕ್ತ್ಯಾ ಪರಮಧಾರ್ಮಿಕಃ ।
ದೇವಷಟ್ಕಂ ಸಮಾವಾಹ್ಯ ದೇವ್ಯಾಶ್ಚ ಪುರತೋ ಘಟೇ ॥ ೫ ॥

ಭಕ್ತ್ಯಾ ಚ ಪೂಜಯಾಮಾಸ ವಿಧಿಪೂರ್ವಂ ಚ ನಾರದ ।
ಗಣೇಶಂ ಚ ದಿನೇಶಂ ಚ ವಹ್ನಿಂ ವಿಷ್ಣುಂ ಶಿವಂ ಶಿವಾಂ ॥ ೬ ॥

ದೇವಷಟ್ಕಂ ಚ ಸಂಪೂಜ್ಯ ನಮಸ್ಕೃತ್ಯ ವಿಚಕ್ಷಣಃ ।
ತದಾ ಧ್ಯಾಯೇನ್ಮಹಾದೇವೀಂ ಧ್ಯಾನೇನಾನೇನ ಭಕ್ತಿತಃ ॥ ೭ ॥

ಧ್ಯಾನಂ ಚ ಸಾಮವೇದೋಕ್ತಂ ಪರಂ ಕಲ್ಪತರುಂ ಮುನೇ ।
ಧ್ಯಾಯೇನ್ನಿತ್ಯಂ ಮಹಾದೇವೀಂ ಮೂಲಪ್ರಕೃತಿಮೀಶ್ವರೀಂ ॥ ೮ ॥

---

೪. ಪುನಃ ಭಕ್ತಿಪೂರ್ವಕವಾಗಿ ಭಜಿಸಿ ಪ್ರಕೃತಿ ದೇವಿಯ ಬಲಭಾಗದಲ್ಲಿ ಲಕ್ಷ್ಮೀದೇವಿಯನ್ನು ಆವಾಹನೆಮಾಡಿ ಭಕ್ತಿಯಿಂದ ಪೂಜಿಸಿದನು.

೫. ಪರಮಧಾರ್ಮಿಕನಾದ ಆ ರಾಜನು ಅನಂತರ ದೇವಿಯ ಮುಂಭಾಗದಲ್ಲಿ ಇರುವ ಕಲಶದಲ್ಲಿ ಮುಂದೆ ಹೇಳುವ ಆರು ದೇವತೆಗಳನ್ನು ಆವಾಹನೆ ಮಾಡಿದನು.

೬. ಗಣೇಶ, ದಿನೇಶ (ಸೂರ್ಯ), ಅಗ್ನಿ, ವಿಷ್ಣು, ಶಿವ ಮತ್ತು ಪಾರ್ವತಿಯರನ್ನು ಆ ಕಲಶದಲ್ಲಿ ಆವಾಹನೆಮಾಡಿ ವಿಧಿಪೂರ್ವಕವಾಗಿ ಭಕ್ತಿಯಿಂದ ಪೂಜಿಸಿದನು.

೭. ಕುಶಲಮತಿಯಾದ ಆ ರಾಜನು ಇಂತು ಆರು ದೇವತೆಗಳನ್ನು ಪೂಜಿಸಿ, ಸಮರ್ಪಿಸಿದನಂತರ, ಪ್ರಕೃತಿದೇವಿಯನ್ನು ಮುಂದೆ ಹೇಳುವ ಕ್ರಮದಿಂದ ಧ್ಯಾನ ಮಾಡಿದನು.

೮. ಕಲ್ಪವೃಕ್ಷಕ್ಕೆ ಸದೃಶಳಾದ ದೇವಿಯ ಈ ಧ್ಯಾನಸ್ತೋತ್ರವು ಸಾಮವೇದೋಕ್ತವಾಗಿದೆ. ಸರ್ವೇಶ್ವರಿಯೂ ಮೂಲಪ್ರಕೃತಿಯೂ ಆದ ಮಹಾದೇವಿಯನ್ನು ನಿತ್ಯವೂ ಭಜಿಸುವೆನು.

ಬ್ರಹ್ಮವಿಷ್ಣು ಶಿವಾದೀನಾಂ ಪೂಜ್ಯಾಂ ವಂದ್ಯಾಂ ಸನಾತನೀಂ ।
ನಾರಾಯಣೀಂ ವಿಷ್ಣುಮಾಯಾಂ ವೈಷ್ಣವೀಂ ವಿಷ್ಣುಭಕ್ತಿದಾಂ ॥ ೯ ॥

ಸರ್ವಸ್ವರೂಪಾಂ ಸರ್ವೇಷಾಂ ಸರ್ವಾಧಾರಾಂ ಪರಾತ್ಪರಾಂ ।
ಸರ್ವವಿದ್ಯಾಸರ್ವಮಂತ್ರಸರ್ವಶಕ್ತಿ ಸ್ವರೂಪಿಣೀಂ ॥ ೧೦ ॥

ಸಗುಣಾಂ ನಿರ್ಗುಣಾಂ ಸತ್ಯಾಂ ವರಾಂ ಸ್ವೇಚ್ಛಾಮಯೀಂ ಸತೀಂ ।
ಮಹಾವಿಷ್ಣೋಶ್ಚ ಜನನೀಂ ಕೃಷ್ಣಸ್ಯಾರ್ಧಾಂಗಸಂಭವಾಂ ॥ ೧೧ ॥

ಕೃಷ್ಣಪ್ರಿಯಾಂ ಕೃಷ್ಣಶಕ್ತಿಂ ಕೃಷ್ಣಬುದ್ಧ್ಯಧಿದೇವತಾಂ ।
ಕೃಷ್ಣಸ್ತುತಾಂ ಕೃಷ್ಣಪೂಜ್ಯಾಂ ಕೃಷ್ಣವಂದ್ಯಾಂ ಕೃಪಾಮಯೀಂ ॥ ೧೨ ॥

---

೯. ಅನಾದಿಸ್ವರೂಪಿಣಿಯೂ, ಬ್ರಹ್ಮ, ವಿಷ್ಣು, ಶಿವಾದಿಗಳಿಂದ ಪೂಜಿತಳೂ ವಿಷ್ಣುಮಾಯಾರೂಪಿಣಿಯೂ. ವಿಷ್ಣುಭಕ್ತಿಯನ್ನು ಕೊಡುವವಳೂ ಆದ ಪರಮ ವೈಷ್ಣವಿಯನ್ನು ಧ್ಯಾನಿಸುವೆನು.

೧೦. ಸರ್ವಸ್ವರೂಪಳೂ, ಸರ್ವಾಧಾರಳೂ, ಸರ್ವೇಶ್ವರಿಯೂ, ಸಕಲವಿದ್ಯಾ ಮಂತ್ರ ಮತ್ತು ಶಕ್ತಿಸ್ವರೂಪಿಣಿಯೂ ಆದ ಪರಾತ್ಪರದೇವಿಯನ್ನು ಭಜಿಸುವೆನು.

೧೧. ನಿಜವಾಗಿ ನಿರ್ಗುಣಳಾದರೂ, ಸ್ವೇಚ್ಛಾರೂಪಿಣಿಯಾದುದರಿಂದ, ಮಹಾವಿಷ್ಣುವಿನ ಮಾತೆಯೂ, ಶ್ರೀಕೃಷ್ಣನ ಅರ್ಧಾಂಗಿನಿಯೂ ಆದ ದೇವಿಯನ್ನು ಧ್ಯಾನಿಸುವೆನು.

೧೨. ಶ್ರೀಕೃಷ್ಣನಿಗೆ ಪ್ರಿಯಳೂ, ಅವನ ಶಕ್ತಿಸ್ವರೂಪಿಣಿಯೂ, ಅವನ ಬುದ್ಧಿಗೆ ಅಧಿದೇವತೆಯೂ, ಶ್ರೀಕೃಷ್ಣನ ಪೂಜಾಸ್ತುತಿನುತಿಗಳಿಗೆ ಯೋಗ್ಯಳೂ, ದಯಾಮಯಿಯೂ ಆದ ಜಗದಂಬೆಗೆ ನಮಿಸುವೆನು.

ತಪ್ತಕಾಂಚನವರ್ಣಾಭಾಂ ಕೋಟಿಸೂರ್ಯಸಮಪ್ರಭಾಂ ।
ಈಷದ್ಧಾಸ್ಯಪ್ರಸನ್ನಾಸ್ಯಾಂ ಭಕ್ತಾನುಗ್ರಹಕಾರಕಾಂ ॥ ೧೩ ॥

ದುರ್ಗಾಂ ಶತಭುಜಾಂ ದೇವೀಂ ಮಹದ್ದುರ್ಗತಿನಾಶಿನೀಂ ।
ತ್ರಿಲೋಚನಪ್ರಿಯಾಂ ಸಾಧ್ವೀಂ ತ್ರಿಗುಣಾಂ ಚ ತ್ರಿಲೋಚನಾಂ ॥ ೧೪ ॥

ತ್ರಿಲೋಚನಪ್ರಾಣರೂಪಾಂ ಶುದ್ಧಾರ್ಧಚಂದ್ರಶೇಖರಾಂ ।
ಬಿಭ್ರತೀಂ ಕಬರೀಭಾರಂ ಮಾಲತೀಮಾಲ್ಯಮಂಡಿತಂ ॥ ೧೫ ॥

ವರ್ತುಲಂ ವಾಮವಕ್ತ್ರಂ ಚ ಶಂಭೋರ್ಮಾನಸಮೋಹಿನೀಂ ।
ರತ್ನಕುಂಡಲಯುಗ್ಮೇನ ಗಂಡಸ್ಥಲವಿರಾಜಿತಾಂ ॥ ೧೬ ॥

---

೧೩. ಪುಟಕ್ಕೆ ಹಾಕಿದ ಚಿನ್ನದಂತಿರುವ ಮೈಬಣ್ಣದಿಂದ ಕೂಡಿ, ಕೋಟಿ ಸೂರ್ಯರಂತೆ ಪ್ರಭಾವತಿಯೂ, ಸ್ಮಿತಮುಖಿಯೂ, ಪ್ರಸನ್ನವದನೆಯೂ, ಭಕ್ತರಿಗೆ ಅನುಗ್ರಹಮಾಡುವವಳೂ ಆದ ದೇವಿಯನ್ನು ಧ್ಯಾನಿಸುವೆನು.

೧೪. ನೂರು ಭುಜವುಳ್ಳವಳೂ, ವಿಪತ್ತುಗಳಿಂದ ಪಾರುಗಾಣಿಸುವವಳೂ, ಪರಮೇಶ್ವರನ ಪ್ರಿಯಳೂ, ಮೂರು ಕಣ್ಣುಳ್ಳವಳೂ, ತ್ರಿಗುಣಾತ್ಮಕಳೂ, ಸಾಧ್ವೀ ಶಿರೋಮಣಿಯೂ ಆದ ದುರ್ಗಾದೇವಿಯನ್ನು ಭಕ್ತಿಪೂರ್ವಕವಾಗಿ ಭಜಿಸುವೆನು.

೧೫. ತಲೆಯಲ್ಲಿ ಅರ್ಧಚಂದ್ರನನ್ನು ಧರಿಸಿ, ಹೆರಳಿನಲ್ಲಿ ಜಾಜೀ ಹೂಮಾಲೆಯನ್ನು ಮುಡಿದಿರುವ ಮುಕ್ಕಣ್ಣನ ಪ್ರಾಣಸ್ವರೂಪಳಾದ ದೇವಿಯನ್ನು ಧ್ಯಾನಿಸುವೆನು.

೧೬. ವರ್ತುಳಾಕಾರವೂ, ಸುಂದರವೂ ಆದ ಮುಖದಿಂದಲೂ, ಕಪೋಲ ಸ್ಥಲದಲ್ಲಿ ಪ್ರತಿಫಲಿತವಾದ ರತ್ನಕುಂಡಲಗಳಿಂದಲೂ, ಶಿವನ ಮನಮೋಹಕಳಾಗಿರುವ ದೇವಿಯನ್ನು ಭಜಿಸುವೆನು.

**ನಾಸಾದಕ್ಷಿಣಭಾಗೇನ ಬಿಭ್ರತೀಂ ಗಜಮೌಕ್ತಿಕಂ ।**
**ಅಮೂಲ್ಯರತ್ನಂ ಬಹುಲಂ ಬಿಭ್ರತೀಂ ಶ್ರವಣೋಪರಿ ॥ ೧೭ ॥**

**ಮುಕ್ತಾಪಂಕ್ತಿವಿನಿಂದ್ಯೈಕದಂತಪಂಕ್ತಿಸುಶೋಭಿತಾಂ ।**
**ಪಕ್ವಬಿಂಬಾಧರೋಷ್ಠೀಂ ಚ ಸುಪ್ರಸನ್ನಾಂ ಸುಮಂಗಲಾಂ ॥ ೧೮ ॥**

**ಚಿತ್ರಪತ್ರಾವಲೀರಮ್ಯಕಪೋಲಯುಗಲೋಜ್ಜ್ವಲಾಂ ।**
**ರತ್ನಕೇಯೂರವಲಯರತ್ನಮಂಜೀರರಂಜಿತಾಂ ॥ ೧೯ ॥**

**ರತ್ನಕಂಕಣಭೂಷಾಢ್ಯಾಂ ರತ್ನಪಾಶಕಶೋಭಿತಾಂ ।**
**ರತ್ನಾಂಗುಲೀಯನಿಕರೈಃ ಕರಾಂಗುಲಿಚಯೋಜ್ಜ್ವಲಾಂ ॥ ೨೦ ॥**

**ಪದಾಂಗುಲಿನಖಾಸಕ್ತಾಲಕ್ತರೇಖಾಸುಶೋಭನಾಂ ।**
**ವಹ್ನಿಶುದ್ಧಾಂಶುಕಾಧಾನಾಂ ಗಂಧಚಂದನಚರ್ಚಿತಾಂ ॥ ೨೧ ॥**

---

೧೭-೧೮. ಮೂಗಿನ ಬಲಭಾಗದಲ್ಲಿ ಆನೆಯ ಕುಂಭಸ್ಥಳದ ಮುತ್ತನ್ನು ಧರಿಸಿ, ಕಿವಿಯಲ್ಲಿ ಅಮೂಲ್ಯವಾದ ರತ್ನಾಭರಣಗಳನ್ನಿಟ್ಟು, ಮುತ್ತಿನ ಪಂಕ್ತಿಯನ್ನು ಅಲ್ಲಗಳೆಯುವ ದಂತಪಂಕ್ತಿಯಿಂದ ಶೋಭಿತಳಾಗಿ, ಪಕ್ವವಾದ ಬಿಂಬಫಲದಂತಿರುವ ಕೆಳತುಟಿಯಿಂದ ಮನೋಹರಳಾಗಿ, ಸರ್ವರಿಗೂ ಮಂಗಳಪ್ರದಳಾಗಿರುವ ದೇವಿಯನ್ನು ಧ್ಯಾನಿಸುವೆನು.

೧೯-೨೦. ಕಪೋಲಗಳಲ್ಲಿ ಚಿತ್ರಿತವಾಗಿರುವ ಪತ್ರಾವಳಿಗಳಿಂದ ಮನೋಹರಳೂ, ರತ್ನದ ಬಾಹುಪುರಿ, ಬಳೆ ಮತ್ತು ಕಾಲುಸರಗಳಿಂದ ಅಲಂಕೃತಳೂ, ರತ್ನಕಂಕಣಗಳಿಂದಲೂ, ರತ್ನದ ವಡ್ಯಾಣಗಳಿಂದಲೂ ಭೂಷಿತಳೂ. ರತ್ನದ ಉಂಗುರಗಳಿಂದ ಕೈ ಬೆರಳುಗಳನ್ನು ಅಲಂಕರಿಸಿಕೊಂಡಿರುವವಳೂ ಆದ ಮಹಾದೇವಿಯನ್ನು ಧ್ಯಾನಿಸುವೆನು

೨೧-೨೨. ಕಾಲಿನ ಉಗುರುಗಳಿಗೆ ಲೇಪಿಸಿಕೊಂಡಿರುವ ಅರಗಿನ ರಸದಿಂದ ಸುಶೋಭಿತಳೂ, ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನುಟ್ಟು ಮೈಗೆಲ್ಲ ಚಂದನ ಗಂಧವನ್ನು ಲೇಪಿಸಿಕೊಂಡಿರುವವಳೂ, ಸ್ತನಪ್ರದೇಶಗಳಲ್ಲಿ ಕಸ್ತೂರಿ ಬೊಟ್ಟುಗಳಿಂದ

ಬಿಭ್ರತೀಂ ಸ್ತನಯುಗ್ಮಂ ಚ ಕಸ್ತೂರೀಬಿಂದುಶೋಭಿತಾಂ ।
ಸರ್ವರೂಪಗುಣವತೀಂ ಗಜೇಂದ್ರಮಂದಗಾಮಿನೀಂ ॥ ೨೨ ॥

ಅತೀವಕಾಂತಾಂ ಶಾಂತಾಂ ಚ ನಿತಾಂತಾಂ ಯೋಗಸಿದ್ಧಿಷು ।
ವಿಧಾತುಶ್ಚ ವಿಧಾತ್ರೀಂ ಚ ಸರ್ವಧಾತ್ರೀಂ ಚ ಶಂಕರೀಂ ॥ ೨೩ ॥

ಶರತ್ಪಾರ್ವಣಚಂದ್ರಾಸ್ಯಾಮತೀವ ಸುಮನೋಹರಾಂ ।
ಕಸ್ತೂರೀಬಿಂದುಭಿಃ ಸಾರ್ಧಮಧಶ್ಚಂದನಬಿಂದುನಾ ॥ ೨೪ ॥

ಸಿಂದೂರಬಿಂದುನಾ ಶಶ್ವದ್ಭಾಲಮಧ್ಯಸ್ಥಲೋಜ್ಜ್ವಲಾಂ ।
ಶರನ್ಮಧ್ಯಾಹ್ನಕಮಲಪ್ರಭಾಮೋಚನಲೋಚನಾಂ ॥ ೨೫ ॥

ಚಾರುಕಜ್ಜಲರೇಖಾಭ್ಯಾಂ ಸರ್ವತಶ್ಚ ಸಮುಜ್ಜ್ವಲಾಂ ।
ಕೋಟಿಕಂದರ್ಪಲಾವಣ್ಯಲೀಲಾನಂದಿತವಿಗ್ರಹಾಂ ॥ ೨೬ ॥

---

ಅಲಂಕರಿಸಿಕೊಂಡಿರುವವಳೂ, ಸಮಸ್ತ ಕಲ್ಯಾಣಗುಣಗಳಿಂದಲೂ, ಸುಂದರ ರೂಪಿನಿಂದಲೂ ಕೂಡಿ ಗಜರಾಜನಂತೆ ಮಂದಗಮನೆಯೂ ಆದ ದೇವಿಯನ್ನು ಭಜಿಸುವೆನು.

೨೩. ಶಾಂತಳೂ, ಕಾಂತಳೂ, ಯೋಗಸಿದ್ಧಿಪಡೆದವಳೂ, ಬ್ರಹ್ಮನ ಉತ್ಪತ್ತಿಗೆ ಕಾರಣಳೂ, ಸರ್ವಾಧಾರಳೂ ಆದ ಶಂಕರಿಯನ್ನು ಭಜಿಸುವೆನು.

೨೪–೨೫. ಶರತ್ಪೂರ್ಣಿಮಾ ಚಂದ್ರನಂತೆ ಉಜ್ಜ್ವಲವಾದ ಮುಖಮಂಡಲದಿಂದಲೂ ಹಣೆಯ ಮಧ್ಯದಲ್ಲಿ ಉಚಿತಸ್ಥಾನದಲ್ಲಿ ಧರಿಸಿರುವ ಕಸ್ತೂರಿ, ಕುಂಕುಮ ಕೇಸರಿ, ಚಂದ್ರ ಮತ್ತು ಚಂದನದ ಬೊಟ್ಟುಗಳಿಂದಲೂ, ಶರದೃತುವಿನ ಮಧ್ಯಾಹ್ನ ಕಾಲದ ತಾವರೆಯನ್ನಲ್ಲಗಳೆಯುವ ಲೋಚನಗಳಿಂದಲೂ, ಮನೋಹರಳಾಗಿರುವ ದೇವಿಯನ್ನು ಧ್ಯಾನಿಸುವೆನು.

೨೬. ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿಕೊಂಡು, ಕೋಟಿಮನ್ಮಥ ಸೌಂದರ್ಯವನ್ನು ಧಿಕ್ಕರಿಸುವ ಲಾವಣ್ಯವತಿಯಾದ ದೇವಿಯನ್ನು ಭಜಿಸುವೆನು.

ರತ್ನಸಿಂಹಾಸನಸ್ಥಾಂ ಚ ಸದ್ರತ್ನಮುಕುಟೋಜ್ವಲಾಂ ।
ಸೃಷ್ಟ್ವಾ ಸ್ರಷ್ಟುಃ ಸೃಷ್ಟಿರೂಪಾಂ ದಯಾಂ ಪಾತುಶ್ಚ ಪಾಲನೇ ॥ ೨೭ ॥

ಸಂಹಾರಕಾಲೇ ಸಂಹರ್ತುಃ ಪರಾಂ ಸಂಹಾರರೂಪಿಣೀಂ ।
ನಿಶುಂಭಶುಂಭಮಥಿನೀಂ ಮಹಿಷಾಸುರಮರ್ಧಿನೀಂ ॥ ೨೮ ॥

ಪುರಾ ತ್ರಿಪುರಯುದ್ಧೇ ಚ ಸಂಸ್ತುತಾಂ ತ್ರಿಪುರಾರಿಣಾ ।
ಮಧುಕೈಟಭಯೋರ್ಯುದ್ಧೇ ವಿಷ್ಣುಶಕ್ತಿಸ್ವರೂಪಿಣೀಂ ॥ ೨೯ ॥

ಸರ್ವದೈತ್ಯನಿಹಂತ್ರೀಂ ಚ ರಕ್ತಬೀಜವಿನಾಶಿನೀಂ ।
ನೃಸಿಂಹಶಕ್ತಿರೂಪಾಂ ಚ ಹಿರಣ್ಯಕಶಿಪೋರ್ವಧೇ ॥ ೩೦ ॥

ವರಾಹಶಕ್ತಿಂ ವಾರಾಹೇ ಹಿರಣ್ಯಾಕ್ಷವಧೇ ತಥಾ ।
ಪರಬ್ರಹ್ಮಸ್ವರೂಪಾಂ ಚ ಸರ್ವಶಕ್ತಿಂ ಸದಾ ಭಜೇ ॥ ೩೧ ॥

---

೨೭–೨೮. ರತ್ನಸಿಂಹಾಸನದಲ್ಲಿ ಕುಳಿತು ರತ್ನಕಿರೀಟದಿಂದ ಶೋಭಿತಳಾದ ಆ ದೇವಿಯು ಜಗತ್‌ಸೃಷ್ಟಿಕರ್ತನಾದ ಬ್ರಹ್ಮನ ಸೃಷ್ಟಿಯಲ್ಲಿ ಸೃಷ್ಟಿರೂಪಳಾಗಿಯೂ, ಪಾಲಕನಾದ ವಿಷ್ಣುವಿನ ಪಾಲನೆಯಲ್ಲಿ ದಯಾರೂಪಳಾಗಿಯೂ, ಸಂಹಾರಕನಾದ ಕಾಲಾಗ್ನಿರುದ್ರನ ಸಂಹಾರದಲ್ಲಿ ಸಂಹಾರರೂಪಿಣಿಯಾಗಿಯೂ ಇದ್ದು, ನಿಶುಂಭ, ಶುಂಭ, ಮಹಿಷಾಸುರ ಮುಂತಾದ ರಾಕ್ಷಸರನ್ನು ಸಂಹರಿಸಿ ಜಗದ್ವಿಖ್ಯಾತಳಾಗಿದ್ದಾಳೆ.

೨೯–೩೧. ತ್ರಿಪುರಾಸುರನ ಸಂಹಾರಕಾಲದಲ್ಲಿ ತ್ರಿಪುರಾರಿಯಿಂದ ಸ್ತುತಳಾದ ದೇವಿಯೇ ಮಧುಕೈಟಭರ ಸಂಹಾರಕಾಲದಲ್ಲಿ ವಿಷ್ಣುಶಕ್ತಿ ಸ್ವರೂಪಿಣಿಯೂ, ಹಿರಣ್ಯಕಶಿಪು ಸಂಹಾರಕಾಲದಲ್ಲಿ ನೃಸಿಂಹಶಕ್ತಿರೂಪಿಣಿಯೂ, ವರಾಹಕಲ್ಪದಲ್ಲಿ ನಡೆದ ಹಿರಣ್ಯಾಕ್ಷನ ವಧೆಯಲ್ಲಿ ವರಾಹಶಕ್ತಿ ಸ್ವರೂಪಿಣಿಯೂ, ಅದುದಲ್ಲದೆ, ರಕ್ತಬೀಜನೇ ಮುಂತಾದ ಅನೇಕ ದೈತ್ಯರನ್ನು ಸಂಹರಿಸಿ ಸರ್ವಶಕ್ತಿಮಯಳಾದ ಆ ಪರಬ್ರಹ್ಮ ಶಕ್ತಿಯನ್ನು ಭಜಿಸುವೆನು.

ಇತಿ ಧ್ಯಾತ್ವಾ ಸ್ವಶಿರಸಿ ಪುಷ್ಪಂ ದತ್ವಾ ವಿಚಕ್ಷಣಃ।
ಪುನರ್ಧ್ಯಾತ್ವಾ ಚೈವ ಭಕ್ತ್ಯಾ ಕುರ್ಯಾದಾವಾಹನಂ ತತಃ ॥ ೩೨ ॥

ಪ್ರಕೃತೇಃ ಪ್ರತಿಮಾಂ ಧೃತ್ವಾ ಮಂತ್ರಮೇವಂ ಪಠೇನ್ನರಃ।
ಜೀವನ್ಯಾಸಂ ತತಃ ಕುರ್ಯಾನ್ಮನುನಾನೇನ ಯತ್ನತಃ ॥ ೩೩ ॥

ಏಹ್ಯೇಹಿ ಭಗವತ್ಯಂಬ ಶಿವಲೋಕಾತ್ಸನಾತನಿ।
ಗೃಹಾಣ ಮಮ ಪೂಜಾಂ ಚ ಶಾರದೀಯಾಂ ಸುರೇಶ್ವರಿ ॥ ೩೪ ॥

ಇಹಾಗಚ್ಛ ಜಗತ್ಪೂಜ್ಯೇ ತಿಷ್ಠ ತಿಷ್ಠ ಮಹೇಶ್ವರಿ।
ಹೇ ಮಾತರಸ್ಯಾಮರ್ಚಾಯಾಂ ಸನ್ನಿರುದ್ಧಾ ಭವಾಂಬಿಕೇ ॥ ೩೫ ॥

ಇಹಾಗಚ್ಛಂತು ತ್ವತ್ಪ್ರಾಣಾಶ್ಚಾಧಿಪಸ್ಪ್ರಾಣೈಃ ಸಹಾಽಚ್ಯುತೇ।
ಇಹಾಗಚ್ಛಂತು ತ್ವರಿತಂ ತವೈವ ಸರ್ವಶಕ್ತಯಃ ॥ ೩೬ ॥

---

೩೨. ಕುಶಲಿಯಾದವನು ಈ ರೀತಿಯಾಗಿ ದೇವಿಯನ್ನು ಧ್ಯಾನಿಸಿ ಪ್ರಸಾದ ಪುಷ್ಪವನ್ನು ತಲೆಯಲ್ಲಿ ಧರಿಸಿ ಪುನಃ ಭಕ್ತಿಯಿಂದ ಧ್ಯಾನಿಸಿ ಅನಂತರ ಆವಾಹನೆ ಮಾಡಬೇಕು.

೩೩. ಪುಷ್ಪಮಂತ್ರಾಕ್ಷತೆಗಳಿಂದ ಪ್ರಕೃತಿದೇವಿಯ ಪ್ರತಿಮೆಯನ್ನು ಹಿಡಿದು ಕೊಂಡು ಮುಂದೆ ಹೇಳುವ ಮಂತ್ರವನ್ನುಚ್ಚರಿಸಿ ಆ ಪ್ರತಿಮೆಯಲ್ಲಿ ಪ್ರಾಣ ಪ್ರತಿಷ್ಠಾಪನೆಯನ್ನು ಮಾಡಬೇಕು.

೩೪. ಸುರೇಶ್ವರಿಯೂ, ಸನಾತನಿಯೂ ಆದ ಎಲೌ (ಭಗವತಿ) ಮಾತೆಯೇ, ಶಿವಲೋಕದಿಂದ ಈ ಪ್ರತಿಮೆಗೆ ಬಂದು ನಾನು ಮಾಡುವ ಶರತ್ಕಾಲದ ಪೂಜೆಯನ್ನು ಸ್ವೀಕರಿಸು.

೩೫. ಜಗತ್ಪೂಜ್ಯಳೂ, ಮಹೇಶ್ವರಿಯೂ ಆದ ಎಲೌ ಜಗದಂಬಿಕೆಯೇ, ಈ ಪ್ರತಿಮೆಯೊಳಗೆ ಬಂದು ನೆಲಸಿ ನನ್ನ ಪೂಜೆಯನ್ನು ಸ್ವೀಕರಿಸು

೩೬. ನಿನ್ನ ಮುಖ್ಯ ಪ್ರಾಣಗಳೂ, ಉಪಪ್ರಾಣಗಳೂ, ಸರ್ವಶಕ್ತಿಗಳೂ. ನಿನ್ನೊಡನೆಯೇ ಈ ಪ್ರತಿಮೆಯೊಳಗೆ ನೆಲಸಲಿ.

ಓಂ ಹ್ರೀಂ ಶ್ರೀಂ ಕ್ಲೀಂ ಚ ದುರ್ಗಾಯೈ ವಹ್ನಿಜಾಯಾಂತಮೇವ ಚ ।
ಸಮುಚ್ಚಾರ್ಯೋದರೇಸಿ ಪ್ರಾಣಾಃ ಸಂತಿಷ್ಠಂತು ಸದಾಶಿವೇ　　॥ ೩೭ ॥

ಸರ್ವೇಂದ್ರಿಯಾಧಿದೇವಾಸ್ತೇ ಇಹಾಗಚ್ಛಂತು ಚಂಡಿಕೇ ।
ತೇ ಶಕ್ತಯೋಽತ್ರಾಗಚ್ಛಂತು ಇಹಾಗಚ್ಛಂತು ಈಶ್ವರಾಃ　　॥ ೩೮ ॥

ಸ ಇಹಾಗಚ್ಛೇತ್ಯಾವಾಹ್ಯ ಪರಿಹಾರಂ ಕರೋತಿ ಚ ।
ಮಂತ್ರೇಣಾನೇನ ವಿಪ್ರೇಂದ್ರ ತಚ್ಛೃಣುಷ್ವ ಸಮಾಹಿತಃ　　॥ ೩೯ ॥

ಸ್ವಾಗತಂ ಭಗವತ್ಯಂಬ ಶಿವಲೋಕಾಚ್ಛಿವಪ್ರಿಯೇ ।
ಪ್ರಸಾದಂ ಕುರು ಮಾಂ ಭದ್ರೇ ಭದ್ರಕಾಲಿ ನಮೋಽಸ್ತು ತೇ　　॥ ೪೦ ॥

ಧನ್ಯೋಽಹಂ ಕೃತಕೃತ್ಯೋಽಹಂ ಸಫಲಂ ಜೀವನಂ ಮಮ ।
ಆಗತಾಸಿ ಯತೋ ದುರ್ಗೇ ಮಾಹೇಶ್ವರಿ ಮದಾಲಯಂ　　॥ ೪೧ ॥

---

೩೭. ಈ ರೀತಿಯಾಗಿ ಹೇಳಿ, ' ಓಂ ಹ್ರೀಂ ಶ್ರೀಂ ಕ್ಲೀಂ ದುರ್ಗಾಯೈ ಸ್ವಾಹಾ ' ಎಂಬ ಮಂತ್ರೋಚ್ಚಾರಣ ಪೂರ್ವಕವಾಗಿ ದೇವಿಯ ಉದರದಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡಬೇಕು.

೩೮. ಎಲೌ ಚಂಡಿಕೇಶ್ವರಿಯೇ, ಸಕಲೇಂದ್ರಿಯಗಳೂ ಎಲ್ಲಾ ಅಧಿದೇವತೆಗಳೂ, ಸಕಲಶಕ್ತಿಗಳೂ, ಸರ್ವೇಶ್ವರರೂ ಈ ನಿನ್ನ ಪ್ರತಿಮೆಯಲ್ಲಿ ಬಂದು ನೆಲಸಲಿ.

೩೯. ' ಸಮಸ್ತಶಕ್ತಿ ವಿಶಿಷ್ಟಳಾದ ದೇವಿಯು ಇಲ್ಲಿಗೆ ಬರಲಿ ' ಎಂದು ಆವಾಹನೆ ಮಾಡಿ, ನಂತರ ಉಪಚರಿಸಬೇಕು. ಆ ಉಪಚಾರಮಂತ್ರವನ್ನು ಮುಂದೆ ಹೇಳುವೆನು. ಸಾವಧಾನದಿಂದ ಕೇಳು.

೪೦. ಶಿವಲೋಕದಿಂದ ಬಂದ, ಶಿವಪ್ರಿಯಳೂ, ಷಡ್ಗುಣೈಶ್ವರ್ಯ ಪರಿಪೂರ್ಣಳೂ ಆದ ಎಲೌ ಮಾತೆಯೇ, ನಿನಗೆ ಸುಸ್ವಾಗತವು. ಎಲೌ ಭದ್ರಕಾಳಿಯೇ, ನಿನಗೆ ವಂದಿಸುವೆನು. ನನ್ನಲ್ಲಿ ಅನುಗ್ರಹವಿಡು.

೪೧. ಮಹೇಶ್ವರಿಯಾದ ನೀನು ನನ್ನ ಗೃಹಕ್ಕೆ ಬಂದುದರಿಂದಲೇ ನಾನು ಧನ್ಯನೂ, ಕೃತಕೃತ್ಯನೂ ಆದೆನು. ನನ್ನ ಜೀವನವು ಸಾರ್ಥಕವಾಯಿತು.

ಅದ್ಯ ಮೇ ಸಫಲಂ ಜನ್ಮ ಸಾರ್ಥಕಂ ಜೀವನಂ ಮಮ ।
ಪೂಜಯಾಮಿ ಯತೋ ದುರ್ಗಾಂ ಪುಣ್ಯಕ್ಷೇತ್ರೇ ಚ ಭಾರತೇ ॥ ೪೨ ॥

ಭಾರತೇ ಭವತೀಂ ಪೂಜ್ಯಾಂ ದುರ್ಗಾಂ ಯಃ ಪೂಜಯೇದ್ಬುಧಃ ।
ಸೋಽನ್ತೇ ಯಾತಿ ಚ ಗೋಲೋಕಂ ಪರಮೈಶ್ವರ್ಯವಾನಿಹ ॥ ೪೩ ॥

ಕೃತ್ವಾ ಚ ವೈಷ್ಣವೀಪೂಜಾಂ ವಿಷ್ಣುಲೋಕಂ ವ್ರಜೇತ್ಸುಧೀಃ ।
ಮಾಹೇಶ್ವರೀಂ ಚ ಸಂಪೂಜ್ಯ ಶಿವಲೋಕಂ ಚ ಗಚ್ಛತಿ ॥ ೪೪ ॥

ಸಾತ್ವಿಕೀ ರಾಜಸೀ ಚೈವ ತ್ರಿಧಾ ಪೂಜಾ ಚ ತಾಮಸೀ ।
ಭಗವತ್ಯಾಶ್ಚ ವೇದೋಕ್ತಾ ಚೋತ್ತಮಾ ಮಧ್ಯಮಾಧಮಾ ॥ ೪೫ ॥

---

೪೨. ಪುಣ್ಯಕ್ಷೇತ್ರವೆನಿಸಿದ ಭರತಖಂಡದಲ್ಲಿ ದುರ್ಗಾದೇವಿಯನ್ನು ಪೂಜಿಸುವ ಈ ದಿನವೇ ಸುದಿನವು ಮತ್ತು ಇಂದಿಗೆ ನನ್ನ ಜನ್ಮವು ಸಫಲವೆನಿಸಿತು.

೪೩. ಪೂಜ್ಯಳಾದ ದುರ್ಗಾದೇವಿಯನ್ನು ಭಾರತದಲ್ಲಿ ಪೂಜಿಸುವ ಪಂಡಿತನು ತನ್ನ ಜೀವಿತಾವಧಿ ಐಶ್ವರ್ಯಭರಿತನಾಗಿದ್ದು, ಅವಸಾನಕಾಲದಲ್ಲಿ ಗೋಲೋಕಕ್ಕೆ ಹೋಗಿ ಸೇರುವನು.

೪೪. ಪ್ರಕೃತಿದೇವಿಯನ್ನು ವಿಷ್ಣುಶಕ್ತಿಸ್ವರೂಪಿಣಿಯೆಂದು ತಿಳಿದು ಪೂಜಿಸುವವನು ವಿಷ್ಣುಲೋಕವನ್ನೂ, ಶಿವಶಕ್ತಿಸ್ವರೂಪಿಣಿಯೆಂದು ತಿಳಿದು ಪೂಜಿಸುವವನು ಶಿವಲೋಕವನ್ನೂ ಸೇರುವನು.

೪೫. ಪ್ರಕೃತಿಮಾತೆಯನ್ನು ಸತ್ವಗುಣ ಪ್ರಧಾನಳೆಂದು ಬಗೆದು ಪೂಜಿಸುವುದು ಉತ್ತಮವೆಂದೂ, ರಜೋಗುಣಪ್ರಧಾನಳೆಂದು ತಿಳಿದು ಪೂಜಿಸುವುದು ಮಧ್ಯಮವೆಂದೂ, ತಮೋಗುಣಪ್ರಧಾನಳೆಂದು ಅರಿತು ಪೂಜಿಸುವುದು ಅಧಮವೆಂದೂ ವೇದೋಕ್ತವಾಗಿದೆ.

ಸಾತ್ವಿಕೀ ವೈಷ್ಣವಾನಾಂ ಚ ಶಾಕ್ತಾದೀನಾಂ ಚ ರಾಜಸೀ ।
ಅದೀಕ್ಷಿತಾನಾಮಸತಾಮನ್ಯೇಷಾಂ ತಾಮಸೀ ಸ್ಮೃತಾ ॥ ೪೬ ॥

ಜೀವಹತ್ಯಾವಿಹೀನಾ ಯಾ ವರಾ ಪೂಜಾ ತು ವೈಷ್ಣವೀ ।
ವೈಷ್ಣವಾ ಯಾಂತಿ ಗೋಲೋಕಂ ವೈಷ್ಣವೀ ಬಲಿದಾನತಃ ॥ ೪೭ ॥

ಮಾಹೇಶ್ವರೀ ರಾಜಸೀ ಚ ಬಲಿದಾನಸಮನ್ವಿತಾ ।
ಶಾಕ್ತಾದಯೋ ರಾಜಸಾಶ್ಚ ಕೈಲಾಸಂ ಯಾಂತಿ ತೇ ತಥಾ ॥ ೪೮ ॥

ಕಿರಾತಾಸ್ತ್ರಿದಿವಂ ಯಾಂತಿ ತಾಮಸ್ಯಾ ಪೂಜಯಾ ತಯಾ ।
ತ್ವಮೇವ ಜಗತಾಂ ಮಾತಶ್ಚತುರ್ವರ್ಗಫಲಪ್ರದಾ ॥ ೪೯ ॥

ಸರ್ವಶಕ್ತಿಸ್ವರೂಪಾ ಚ ಕೃಷ್ಣಸ್ಯ ಪರಮಾತ್ಮನಃ ।
ಜನ್ಮಮೃತ್ಯುಜರಾವ್ಯಾಧಿಹರಾ ತ್ವಂ ಚ ಪರಾತ್ಪರಾ ॥ ೫೦ ॥

---

೪೬. ವಿಷ್ಣುಭಕ್ತರು ಮಾಡುವ ಪೂಜೆಯು ಸಾತ್ವಿಕವಾದುದೆಂದೂ, ಶಾಕ್ತರ ಮಾಡುವ ಪೂಜೆಯು ರಾಜಸವಾದುದೆಂದೂ, ದೀಕ್ಷೆಯನ್ನು ಕೈಗೊಳ್ಳದ ಅಧಮರು ಮಾಡುವ ಪೂಜೆಯು ತಾಮಸವಾದುದೆಂದೂ ಹೇಳುವರು.

೪೭. ವಿಷ್ಣುಭಕ್ತರು ಮಾಡುವ ಪ್ರಾಣಿಹಿಂಸೆ ಇಲ್ಲದ ಪೂಜೆಯೇ ಉತ್ತಮವಾದುದು. ವಿಷ್ಣುಶಕ್ತಿ ಸ್ವರೂಪಿಣಿಯಾದ ದೇವಿಯನ್ನು ಪೂಜಿಸುವ ವೈಷ್ಣವರು ಗೋಲೋಕಕ್ಕೆ ತೆರಳುವರು.

೪೮. ರಜೋಗುಣಪ್ರಧಾನಳಾದ ಮಹೇಶ್ವರಿಗೆ ಪ್ರಾಣಿಗಳನ್ನು ಬಲಿಕೊಡುವ ಶಾಕ್ತರು ರಜೋಗುಣವಿಶಿಷ್ಟರಾಗಿಯೇ ಕೈಲಾಸವನ್ನು ಸೇರುತ್ತಾರೆ.

೪೯. ತಾಮಸ ಪೂಜೆಯನ್ನು ಮಾಡುವ ಬೇಡರೇ ಮುಂತಾದವರು, ತಮೋಗುಣವಿಶಿಷ್ಟರಾಗಿ ಸ್ವರ್ಗಕ್ಕೆ ಹೋಗುತ್ತಾರೆ. ಎಲೌ ಜಗನ್ಮಾತೆಯೇ ಮನುಜರಿಗೆ ನೀನೇ ಪುರುಷಾರ್ಥ ಚತುಷ್ಟಯಗಳನ್ನು ಕೊಡುವವಳು.

೫೦. ಶ್ರೀ ಕೃಷ್ಣಪರಮಾತ್ಮನ ಸಕಲಶಕ್ತಿ ಸ್ವರೂಪಿಣಿಯಾದ ನೀನು, ಎಲ್ಲರ ಜನ್ಮ, ಜರಾಮರಣವ್ಯಾಧಿಗಳನ್ನು ಪರಿಹರಿಸಿ ಪರಾತ್ಪರಳೆನಿಸಿರುವೆ.

ಸುಖದಾ ಮೋಕ್ಷದಾ ಭದ್ರಾ ಕೃಷ್ಣಭಕ್ತಿಪ್ರದಾ ಸದಾ ।
ನಾರಾಯಣ ಮಹಾಮಾಯೇ ದುರ್ಗೇ ದುರ್ಗತಿನಾಶಿನಿ ॥ ೫೧ ॥

ದುರ್ಗೇತಿ ಸ್ಮೃತಿಮಾತ್ರೇಣ ಯಾತಿ ದುರ್ಗಂ ನೃಣಾಮಿಹ ।
ಇತಿ ಕೃತ್ವಾ ಪರೀಹಾರಂ ದೇವ್ಯಾ ವಾಮೇ ಚ ಸಾಧಕಃ ॥ ೫೨ ॥

ತ್ರಿಪದ್ಯಾ ಉಪರಿಷ್ಟಾತ್ತು ಶಂಖಂ ಸಂಸ್ಥಾಪಯೇತ್ತು ಸಃ ।
ತತ್ರ ದತ್ವಾ ಜಲಂ ಪೂರ್ಣಂ ದೂರ್ವಾಂ ಪುಷ್ಪಂ ಚ ಚಂದನಂ ॥ ೫೩ ॥

ಧೃತ್ವಾ ದಕ್ಷಿಣಹಸ್ತೇನ ಮಂತ್ರಮೇವಂ ಪಠೇನ್ನರಃ ।
ಪುಣ್ಯಸ್ತ್ವಂ ಶಂಖ ಪುಣ್ಯಾನಾಂ ಮಂಗಲಾನಾಂ ಚ ಮಂಗಲಂ ।
ಪ್ರಭೂತಃ ಶಂಖಚೂಡಾತ್ತ್ವಂ ಪುರಾ ಕಲ್ಪೇ ಪವಿತ್ರಕಃ ॥ ೫೪ ॥

---

೫೧. ಭಕ್ತಿ, ಮುಕ್ತಿ ಮತ್ತು ಸುಖಗಳನ್ನು ನೀಡುವ ಮಹಾಮಾಯೆಯೆನಿಸಿದ ಎಲೌ ದುರ್ಗಿಯೇ ನೀನೇ ಎಲ್ಲರ ದುರ್ಗತಿ (ಕಷ್ಟ) ಯನ್ನು ನಾಶಗೊಳಿಸುವೆ.

೫೨. 'ದುರ್ಗಿ' ಎಂದು ಸ್ಮರಿಸಿದ ಮಾತ್ರದಿಂದಲೇ ಮನುಜರ ದುರ್ಗಪ್ರಾಯವಾದ ಕಷ್ಟಗಳೆಲ್ಲವೂ ಕಣ್ಮರೆಯಾಗುವುವು.

೫೩. ಈರೀತಿಯಾಗಿ ದೇವಿಗೆ ಭಕ್ತಿಕಾಣಿಕೆಯನ್ನರ್ಪಿಸಿದನಂತರ ಭಕ್ತನು ದೇವಿಯ ಎಡಭಾಗದಲ್ಲಿರುವ ತ್ರಿಪಾದಪೀಠದಲ್ಲಿ ಶಂಖವನ್ನು ತೊಳೆದು ನೀರು ತುಂಬಿರಿಸಿ, ಗಂಧಪುಷ್ಪಾಕ್ಷತೆಗಳಿಂದ ಪೂಜಿಸಬೇಕು.

೫೪. ಅನಂತರ ಆ ಶಂಖವನ್ನು ಬಲಗೈನಲ್ಲಿ ಹಿಡಿದು ಈರೀತಿಯಾಗಿ ಅರ್ಘ್ಯಕೊಡುವ ಮಂತ್ರೋಚ್ಚಾರಣೆ ಮಾಡಬೇಕು. ಎಲೈ ಶಂಖವೇ, ಪುಣ್ಯತಮವೂ, ಮಂಗಳಪ್ರದವೂ ಆಗಿರುವ ನೀನು ಹಿಂದೊಂದು ಕಲ್ಪದಲ್ಲಿ ಪವಿತ್ರತಮನಾದ ಶಂಖಚೂಡನೆನಿಸಿಕೊಂಡಿದ್ದೆ.

ತತೋಽರ್ಘ್ಯಪಾತ್ರಂ ಸಂಪ್ರಾಪ್ಯ ವಿಧಿನಾನೇನ ಪಂಡಿತಃ ।
ದತ್ವಾ ಸಂಪೂಜಯೇದ್ದೇವೀಮುಪಚಾರಾಣಿ ಷೋಡಶ ॥ ೫೫ ॥

ತ್ರಿಕೋಣಮಂಡಲಂ ಕೃತ್ವಾ ಸಜಲೇನ ಕುಶೇನ ಚ ।
ಕೂರ್ಮಂ ಶೇಷಂ ಧರಿತ್ರೀಂ ಚ ಪೂಜಯೇತ್ತತ್ರ ಧಾರ್ಮಿಕಃ ॥ ೫೬ ॥

ತ್ರಿಪದೀಂ ಸ್ಥಾಪಯೇತ್ತತ್ರ ತ್ರಿಪದ್ಯಾಂ ಶಂಖಮೇವ ಚ ।
ಶಂಖೇ ತ್ರಿಭಾಗತೋಯಂ ಚ ದತ್ವಾ ಸಂಪೂಜಯೇತ್ತತಃ ॥ ೫೭ ॥

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧು ಕಾವೇರಿ ಚಂದ್ರಭಾಗೇ ಚ ಕೌಶಿಕಿ ॥ ೫೮ ॥

ಸ್ವರ್ಣರೇಖೇ ಕನಖಲೇ ಪಾರಿಭದ್ರೇ ಚ ಗಂಡಕಿ ।
ಶ್ವೇತಗಂಗೇ ಚಂದ್ರರೇಖೇ ಪಂಪೇ ಚಂಪೇ ಚ ಗೋಮತಿ ॥ ೫೯ ॥

---

೫೫. ಈರೀತಿಯಾಗಿ ಶಂಖಪೂಜೆಯನ್ನು ಮಾಡಿದನಂತರ, ಪೂಜಾ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಪಂಡಿತನಾದವನು ವಿಧ್ಯುಕ್ತವಾಗಿ ದೇವಿಗೆ ಷೋಡಶೋಪಚಾರಗಳನ್ನು ಭಕ್ತಿಯಿಂದ ಸಮರ್ಪಿಸಬೇಕು.

೫೬. ಕೈಯಲ್ಲಿ ದರ್ಭೆಯನ್ನು ಧರಿಸಿ ದೇವಿಯ ಮುಂದೆ ನೀರಿನಿಂದ ತ್ರಿಕೋಣಾಕಾರವಾದ ಮಂಡಲವೊಂದನ್ನು ಮಾಡಿ ಅಲ್ಲಿ ಆದಿಕೂರ್ಮನನ್ನೂ ಆದಿಶೇಷನನ್ನೂ, ಭೂಮಾತೆಯನ್ನೂ ಆವಾಹನೆಮಾಡಿ ಪೂಜಿಸಬೇಕು.

೫೭. ಆ ಮಂಡಲದ ಮೇಲೆ ತ್ರಿಪಾದಪೀಠವನ್ನೂ ಅದರಮೇಲೆ ಶಂಖವನ್ನೂ ಇರಿಸಿ ಅದರಲ್ಲಿರುವ ನೀರನ್ನು ಮೂರುಭಾಗವಮಾಡಿ ಅನಂತರ ಪೂಜಿಸಬೇಕು.

೫೮-೬೦. ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದ, ಸಿಂಧು, ಕಾವೇರಿ, ಚಂದ್ರಭಾಗೆ, ಕೌಶಿಕಿ, ಸ್ವರ್ಣರೇಖೆ, ಕನಖಲೆ, ಪಾರಿಭದ್ರೆ, ಗಂಡಕಿ,

ಪದ್ಮಾವತಿ ತ್ರಿಪರ್ಣಾಶೇ ವಿಪಾಶೇ ವಿರಜೇ ಪ್ರಭೇ ।
ಶತಹ್ರದೇ ಚೇಲಗಂಗೇ ಜಲೇಽಸ್ಮಿನ್ಸನ್ನಿಧಿಂ ಕುರು ॥ ೩೦ ॥

ವಹ್ನಿಂ ಸೂರ್ಯಂ ಚ ಚಂದ್ರಂ ಚ ವಿಷ್ಣುಂ ಚ ವರುಣಂ ಶಿವಂ ।
ಪೂಜಯೇತ್ತತ್ರ ತೋಯೇ ಚ ತುಲಸ್ಯಾ ಚಂದನೇನ ಚ ।
ನೈವೇದ್ಯಾನಿ ಚ ಸರ್ವಾಣಿ ಪ್ರೋಕ್ಷಯೇತ್ತಜ್ಜಲೇನ ಚ ॥ ೩೧ ॥

ಪ್ರತ್ಯೇಕಂ ವೈ ತತೋ ದದ್ಯಾದುಪಚಾರಾಂಶ್ಚ ಷೋಡಶ ।
ಆಸನಂ ವಸನಂ ಪಾದ್ಯಂ ಸ್ನಾನೀಯಮನುಲೇಪನಂ ॥ ೩೨ ॥

ಮಧುಪರ್ಕಂ ಗಂಧಮರ್ಘ್ಯಂ ಪುಷ್ಪಂ ನೈವೇದ್ಯಮೀಪ್ಸಿತಂ ।
ಪುನರಾಚಮನೀಯಂ ಚ ತಾಂಬೂಲಂ ರತ್ನಭೂಷಣಂ ॥ ೩೩ ॥

ಧೂಪಂ ಪ್ರದೀಪಂ ತಲ್ಪಂ ಚೇತ್ಯುಪಚಾರಾಸ್ತು ಷೋಡಶ ॥ ೩೪ ॥

---

ಶ್ವೇತಗಂಗೆ, ಚಂದ್ರರೇಖೆ, ಪಂಪೆ, ಚಂಪೆ, ಗೋಮತಿ, ಪ್ರಭೆ, ಶತಹ್ರದೆ, ಚೇಲಗಂಗೆ ಮುಂತಾದ ನದಿಗಳೇ ನೀವೆಲ್ಲರೂ ಈ ಶಂಖೋದಕದಲ್ಲಿ ಸನ್ನಿಹಿತವಾಗಿ ಬನ್ನಿ.

೩೧. ಈ ರೀತಿಯಾಗಿ ಸಕಲಪುಣ್ಯತೀರ್ಥಗಳನ್ನೂ ಶಂಖೋದಕದಲ್ಲಿ ಆವಾಹನೆ ಮಾಡಿದನಂತರ, ಅಗ್ನಿ, ಸೂರ್ಯ, ಚಂದ್ರ, ವಿಷ್ಣು, ವರುಣ, ಶಿವ ಮುಂತಾದ ದೇವತೆಗಳನ್ನೂ ಕೂಡ ಆ ಶಂಖತೀರ್ಥದಲ್ಲಿ ಆವಾಹನೆಮಾಡಿ ತುಳಸಿ, ಗಂಧ, ಮುಂತಾದುವುಗಳಿಂದ ಪೂಜಿಸಿ ಆ ಶಂಖೋದಕದಿಂದ ನೈವೇದ್ಯಮಾಡುವಪದಾರ್ಥಗಳನ್ನು ಪ್ರೋಕ್ಷಿಸಿ ಪವಿತ್ರಗೊಳಿಸಬೇಕು.

೩೨–೩೪. ಅನಂತರ ಆಸನ, ವಸ್ತ್ರ, ಪಾದೋದಕ, ಸ್ನಾನ, ಲೇಪನದ್ರವ್ಯ ಮಧುಪರ್ಕ, ಗಂಧ, ಅರ್ಘ್ಯ, ಪುಷ್ಪ, ನೈವೇದ್ಯ, ಪುನರಾಚಮನ, ತಾಂಬೂಲ, ರತ್ನಭೂಷಣ, ಧೂಪ, ದೀಪ, ಶಯನ ಈ ಷೋಡಶೋಪಚಾರಗಳನ್ನು ಕ್ರಮವರಿತು ಸಮರ್ಪಿಸಬೇಕು.

ಅಮೂಲ್ಯರತ್ನಸಂಕ್ಲೃಪ್ತಂ ನಾನಾಚಿತ್ರವಿರಾಜಿತಂ ।
ವರಂ ಸಿಂಹಾಸನಶ್ರೇಷ್ಠಂ ಗೃಹ್ಯತಾಂ ಶಂಕರಪ್ರಿಯೇ ॥ ೬೫ ॥

ಅಸಂತಸೂತ್ರಪ್ರಭವಮೀಶ್ವರೇಚ್ಛಾವಿನಿರ್ಮಿತಂ ।
ಜ್ವಲದಗ್ನಿವಿಶುದ್ಧಂ ಚ ವಸನಂ ಗೃಹ್ಯತಾಂ ಶಿವೇ ॥ ೬೬ ॥

ಅಮೂಲ್ಯರತ್ನಪಾತ್ರಸ್ಥಂ ನಿರ್ಮಲಂ ಜಾಹ್ನವೀಜಲಂ ।
ಪಾದಪ್ರಕ್ಷಾಲನಾರ್ಥಾಯ ದುರ್ಗೇ ದೇವಿ ಪ್ರಗೃಹ್ಯತಾಂ ॥ ೬೭ ॥

ಸುಗಂಧಾಮಲಕೀಸ್ನಿಗ್ಧದ್ರವಮೇತತ್ಸುದುರ್ಲಭಂ ।
ಸುಪಕ್ವಂ ವಿಷ್ಣುತೈಲಂ ಚ ಗೃಹ್ಯತಾಂ ಪರಮೇಶ್ವರಿ ॥ ೬೮ ॥

---

ಷೋಡಶೋಪಚಾರಪೂಜೆಯ ಕ್ರಮ.

೬೫. ಎಲೌ ಶಂಕರನ ಪ್ರಿಯಳೇ, ಅಮೂಲ್ಯರತ್ನಗಳಿಂದ ಖಚಿತವಾಗಿ ಚಿತ್ರವಿಚಿತ್ರವಾಗಿರುವ ಉತ್ತಮವಾದ ಸಿಂಹಾಸನವನ್ನು ನಿನಗರ್ಪಿಸುವೆನು ಸ್ವೀಕರಿಸು.

೬೬. ಎಲೌ ಮಂಗಳಾಂಗಿಯೇ, ಈಶ್ವರೇಚ್ಛೆಯಿಂದ, ಅಸಂಖ್ಯಸೂತ್ರಗಳಿಂದ ನಿರ್ಮಿತವಾಗಿ ಅಗ್ನಿಜ್ವಾಲೆಯಂತೆ ಪರಿಶುದ್ಧವಾದ ವಸ್ತ್ರವನ್ನು ಸ್ವೀಕರಿಸು.

೬೭. ಎಲೌ ದುರ್ಗಾದೇವಿಯೇ, ಅಮೂಲ್ಯವಾದ ರತ್ನಕಲಶದಲ್ಲಿರುವ ಪವಿತ್ರವಾದ ಗಂಗೋದಕವನ್ನು ನಿನ್ನ ಪಾದಪ್ರಕ್ಷಾಳನೆಗಾಗಿ ಸಮರ್ಪಿಸುವೆನು. ಸ್ವೀಕರಿಸು.

೬೮. ಎಲೌ ಪರಮೇಶ್ವರಿಯೇ, ಸುಗಂಧವಾದ ಆಮಲಕತೈಲದಿಂದಲೂ, ಸುಪಕ್ವವಾದ ವಿಷ್ಣುತೈಲದಿಂದಲೂ ಮಿಶ್ರಿತವಾದ ಈ ಶುದ್ಧೋದಕವನ್ನು ಸ್ನಾನಾರ್ಥವಾಗಿ ಸ್ವೀಕರಿಸು.

ಕಸ್ತೂರೀಕುಂಕುಮಾಕ್ತಂ ಚ ಸುಗಂಧಿದ್ರುತಚಂದನಂ ।
ಸುವಾಸಿತಂ ಜಗನ್ಮಾತರ್ಗೃಹ್ಯತಾಮನುಲೇಪನಂ ॥ ೬೯ ॥

ಮಾಧ್ವೀಕಂ ರತ್ನಪಾತ್ರಸ್ಥಂ ಸುಪವಿತ್ರಂ ಸುಮಂಗಲಂ ।
ಮಧುಪರ್ಕಂ ಮಹಾದೇವಿ ಗೃಹ್ಯತಾಂ ಪ್ರೀತಿಪೂರ್ವಕಂ ॥ ೭೦ ॥

ಸುಗಂಧಮೂಲಚೂರ್ಣಂ ಚ ಸುಗಂಧದ್ರವ್ಯಸಂಯುತಂ ।
ಸುಪವಿತ್ರಂ ಮಂಗಲಾರ್ಹಂ ದೇವಿ ಗಂಧಂ ಗೃಹಾಣ ಮೇ ॥ ೭೧ ॥

ಪವಿತ್ರಂ ಶಂಖಪಾತ್ರಸ್ಥಂ ದೂರ್ವಾಪುಷ್ಪಾಕ್ಷತಾನ್ವಿತಂ ।
ಸ್ವರ್ಗಮಂದಾಕಿನೀತೋಯಮರ್ಘ್ಯಂ ಚಂಡಿ ಗೃಹಾಣ ಮೇ ॥ ೭೨ ॥

ಸುಗಂಧಿಪುಷ್ಪಶ್ರೇಷ್ಠಂ ಚ ಪಾರಿಜಾತತರೂದ್ಭವಂ ।
ನಾನಾಪುಷ್ಪಾದಿಮಾಲ್ಯಾನಿ ಗೃಹ್ಯತಾಂ ಜಗದಂಬಿಕೇ ॥ ೭೩ ॥

---

೬೯. ಕಸ್ತೂರಿ ಮತ್ತು ಕುಂಕುಮಕೇಸರಿಗಳಿಂದ: ಮಿಶ್ರಿತವಾಗಿ ಸುವಾಸನೆ ಕೊಡುವ ದಿವ್ಯ ಚಂದನಗಂಧವನ್ನು ಲೇಪನಾರ್ಥವಾಗಿ ಎಲೌ ಜಗನ್ಮಾತೆಯೇ ಸ್ವೀಕರಿಸು.

೭೦. ಎಲೌ ಮಹಾದೇವಿಯೇ, ರತ್ನಪಾತ್ರೆಯಲ್ಲಿರುವ ಮಧುಪರ್ಕವನ್ನು ನಾನು ಭಕ್ತಿಯಿಂದ ಸಮರ್ಪಿಸುವೆನು ಸ್ವೀಕರಿಸು.

೭೧. ಚಂದನ ಚೂರ್ಣದಿಂದಲೂ, ಸುಗಂಧ ದ್ರವ್ಯಗಳಿಂದಲೂ, ಮಿಶ್ರಿತವಾಗಿ ಪವಿತ್ರವೂ ಆಹ್ಲಾದಕವೂ ಆಗಿರುವ ದಿವ್ಯಗಂಧವನ್ನು ಎಲೌದೇವಿಯೇ ನೀನು ಸ್ವೀಕರಿಸು.

೭೨ ಎಲೌ ಚಂಡಿಕಾಂಬೆಯೇ, ದೂರ್ವಾಪುಷ್ಪಾಕ್ಷತೆಗಳಿಂದ ಕೂಡಿ ಪವಿತ್ರವಾಗಿರುವ ದೇವಗಂಗೆಯ ನೀರನ್ನು ನಿನ್ನ ಅರ್ಘ್ಯಕ್ಕಾಗಿ ಶಂಖದಿಂದ ಸಮರ್ಪಿಸುವೆನು, ಸ್ವೀಕರಿಸು.

೭೩. ಎಲೌ ಜಗದಂಬಿಕೆಯೇ, ಪಾರಿಜಾತವೃಕ್ಷದಿಂದ ಹುಟ್ಟಿ, ಸುವಾಸನೆಯಾಗಿರುವ ಶ್ರೇಷ್ಠಕುಸುಮವನ್ನೂ, ಅನೇಕ ಸುಗಂಧಿ ಪುಷ್ಪಗಳ ಮಾಲೆಯನ್ನೂ ಅರ್ಪಿಸುವೆನು ಸ್ವೀಕರಿಸು.

**ದಿವ್ಯಂ ಸಿದ್ಧಾನ್ನಮಾಷಾನ್ನಂ ಪಿಷ್ಟಕಂ ಪಾಯಸಾದಿಕಂ ।**
**ಮಿಷ್ಟಾನ್ನಂ ಲಡ್ಡುಕಫಲಂ ನೈವೇದ್ಯಂ ಗೃಹ್ಯತಾಂ ಶಿವೇ ॥ ೭೪ ॥**

**ಸುವಾಸಿತಂ ಶೀತತೋಯಂ ಕರ್ಪೂರಾದಿಸುಸಂಸ್ಕೃತಂ ।**
**ಮಯಾ ನಿವೇದಿತಂ ಭಕ್ತ್ಯಾ ಗೃಹ್ಯತಾಂ ಶೈಲಕನ್ಯಕೇ ॥ ೭೫ ॥**

**ಗುವಾಕಪರ್ಣಚೂರ್ಣಂ ಚ ಕರ್ಪೂರಾದಿಸುವಾಸಿತಂ ।**
**ಸರ್ವಭೋಗಕರಂ ರಮ್ಯಂ ತಾಂಬೂಲಂ ದೇವಿ ಗೃಹ್ಯತಾಂ ॥ ೭೬ ॥**

**ಅಮೂಲ್ಯರತ್ನಸಾರೈಶ್ಚ ಖಚಿತಂ ಚೇಶ್ವರೇಚ್ಛಯಾ ।**
**ಸರ್ವಾಂಗಶೋಭನಕರಂ ಭೂಷಣಂ ದೇವಿ ಗೃಹ್ಯತಾಂ ॥ ೭೭ ॥**

---

೭೪. ಎಲೌ ಶಿವಪ್ರಿಯಳೇ, ದಿವ್ಯವಾದ ಪಕ್ವಾನ್ನ ಮತ್ತು ಮಾಷಾನ್ನಗಳನ್ನೂ, ಗೋಧುವೆ ಹಿಟ್ಟಿನ ಪಾಯಸವನ್ನೂ, ಷಡ್ರಸೋಪೇತವಾದ ಭೋಜ್ಯವಸ್ತುಗಳನ್ನೂ, ಲಡ್ಡುವನ್ನೂ ಮತ್ತು ವಿವಿಧ ಫಲಗಳನ್ನೂ ನಿನ್ನ ನೈವೇದ್ಯಕ್ಕಾಗಿ ಸಮರ್ಪಿಸುವೆನು ಸ್ವೀಕರಿಸು.

೭೫. ಪಚ್ಚಕರ್ಪೂರ, ಏಲಕ್ಕಿ ಮುಂತಾದುವುಗಳಿಂದ ಸುಸಂಸ್ಕೃತವಾಗಿರುವ ಶೀತೋದಕವನ್ನು ಆಚಮನೀಯಾರ್ಥವಾಗಿ ನಾನು ಸಮರ್ಪಿಸುವೆನು. ಎಲೌ ಶೈಲಪುತ್ರಿಯೇ, ಸ್ವೀಕರಿಸು.

೭೬. ಅಡಕೆ, ಜಾಪತ್ರೆ, ಪಚ್ಚಕರ್ಪೂರಾದಿಗಳಿಂದ ಕೂಡಿ ಸುವಾಸನೆಯಾಗಿಯೂ ಸುಖದಾಯಕವಾಗಿಯೂ ಇರುವ ತಾಂಬೂಲವನ್ನು ಎಲೌ ದೇವಿಯೇ ನೀನು ಸ್ವೀಕರಿಸು.

೭೭. ಈಶ್ವರೇಚ್ಛಾಮಾತ್ರದಿಂದಲೇ ಅಮೂಲ್ಯರತ್ನಗಳಿಂದ ಖಚಿತವಾಗಿ, ಸಕಲಾವಯವಗಳಿಗೂ ಶೋಭಾಕರವಾದ ಆಭರಣವನ್ನು ಎಲೌ ದೇವಿಯೇ ಸ್ವೀಕರಿಸು.

ತರುನಿರ್ಯಾಸಚೂರ್ಣಂ ಚ ಗಂಧವಸ್ತುಸಮನ್ವಿತಂ।
ಹುತಾಶನಶಿಖಾಶುದ್ಧಂ ಧೂಪಂ ಚ ದೇವಿ ಗೃಹ್ಯತಾಂ ॥ ೭೮ ॥

ದಿವ್ಯರತ್ನವಿಶೇಷಂ ಚ ಸಾಂದ್ರಧ್ವಾಂತನಿವಾರಕಂ ।
ಸುಪವಿತ್ರಂ ಪ್ರದೀಪಂ ಚ ಗೃಹ್ಯತಾಂ ಪರಮೇಶ್ವರಿ ॥ ೭೯ ॥

ರತ್ನಸಾರಗಣಾಕೀರ್ಣಂ ದಿವ್ಯಂ ಪರ್ಯಂಕಮುತ್ತಮಂ ।
ಸೂಕ್ಷ್ಮವಸ್ತ್ರೈಶ್ಚ ಸಂಸ್ಯೂತಂ ದೇವಿ ತಲ್ಪಂ ಪ್ರಗೃಹ್ಯತಾಂ ॥ ೮೦ ॥

ಏವಂ ಸಂಪೂಜ್ಯ ತಾಂ ದುರ್ಗಾಂ ದದ್ಯಾತ್ಪುಷ್ಪಾಂಜಲಿಂ ಮುನೇ ।
ತತೋಽಷ್ಟನಾಯಿಕಾ ದೇವೀರ್ಯತ್ನತಃ ಪರಿಪೂಜಯೇತ್ ॥ ೮೧ ॥

ಉಗ್ರಚಂಡಾಂ ಪ್ರಚಂಡಾಂ ಚ ಚಂಡೋಗ್ರಾಂ ಚಂಡನಾಯಿಕಾಂ ।
ಅತಿಚಂಡಾಂ ಚಚಂಡಾಂ ಚ ಚಂಡಾಂ ಚಂಡವತೀಂ ತಥಾ ॥ ೮೨ ॥

---

೭೮. ಚಂದನ, ಅಗುರು ಮುಂತಾದ ಗಂಧಚೂರ್ಣಗಳಿಂದ ಕೂಡಿ, ಅಗ್ನಿ ಶಿಖೆಯಿಂದ ಅತ್ಯಂತ ಪವಿತ್ರವಾಗಿರುವ ದಿವ್ಯಧೂಪವನ್ನು ಎಲೌ ದೇವಿಯೇ ನೀನು ಸ್ವೀಕರಿಸು.

೭೯. ಅನೇಕ ದಿವ್ಯರತ್ನಗಳಿಂದಕೂಡಿ ಗಾಢಾಂಧಕಾರವನ್ನು ನಿವಾರಿಸಬಲ್ಲ ದಿವ್ಯಜ್ಯೋತಿಯನ್ನು ಎಲೌ ಪರಮೇಶ್ವರಿಯೇ ನೀನು ಸ್ವೀಕರಿಸು.

೮೦. ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ, ಸೂಕ್ಷ್ಮವಸ್ತ್ರಗಳಿಂದ ಅಲಂಕೃತ ವಾದ ದಿವ್ಯ ಪರ್ಯಂಕ (ಮಂಚ) ವನ್ನು ಶಯನಾರ್ಥವಾಗಿ ಸ್ವೀಕರಿಸು.

೮೧. ಈ ರೀತಿಯಾಗಿ ದುರ್ಗಾದೇವಿಯನ್ನು ಪೂಜಿಸಿ, ಭಕ್ತಿಯಿಂದ ಪುಷ್ಪಾಂಜಲಿಯನ್ನು ಸಮರ್ಪಿಸಬೇಕು ಅನಂತರ ಅಷ್ಟನಾಯಿಕೆಯರೆನಿಸಿದ ಈ ಮುಂದೆ ಹೇಳುವ ದೇವಿಯರನ್ನು ಪೂಜಿಸಬೇಕು.

೮೨–೮೩. ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಅತಿಚಂಡಾ, ಚಚಂಡಾ, ಚಂಡಾ, ಚಂಡವತೀ, ಎಂಬ ಅಷ್ಟನಾಯಿಕೆಯರನ್ನು ಅಷ್ಟದಳಪದ್ಮದಲ್ಲಿ ಪೂರ್ವದಿಕ್ಕಿನಿಂದ ಕ್ರಮವಾಗಿ ಅಷ್ಟದಿಕ್ಕುಗಳಲ್ಲೂ ಆವಾಹನೆ

**ಪದ್ಮೇ ಚಾಷ್ಟದಲೇ ಚೈತಾಃ ಪ್ರಾಗಾದಿಕ್ರಮತಸ್ತಥಾ ।**
**ಪಂಚೋಪಚಾರೈಃ ಸಂಪೂಜ್ಯ ಭೈರವಾನ್ಮಧ್ಯದೇಶತಃ ॥ ೮೩ ॥**

**ಆದೌ ಮಹಾಭೈರವಂ ಚ ತಥಾ ಸಂಹಾರಭೈರವಂ ।**
**ಅಸಿತಾಗಂ ಭೈರವಂ ಚ ರುರುಭೈರವಮೇವ ಚ ॥ ೮೪ ॥**

**ಕಾಲಭೈರವಮುಷ್ಯೇವಂ ಕ್ರೋಧಭೈರವಮೇವ ಚ ।**
**ತಾಮ್ರಚೂಡಂ ಚಂದ್ರಚೂಡಮಂತೇ ವೈ ಭೈರವದ್ವಯಂ ॥ ೮೫ ॥**

**ಏತಾನ್ಸಂಪೂಜ್ಯ ಮಧ್ಯೇ ವೈ ನವಶಕ್ತೀಶ್ಚ ಪೂಜಯೇತ್ ।**
**ತತ್ರ ಪದ್ಮೇ ಚಾಷ್ಟದಲೇ ಮಧ್ಯೇ ವೈ ಭಕ್ತಿಪೂರ್ವಕಂ ॥ ೮೬ ॥**

**ಬ್ರಹ್ಮಾಣೀಂ ವೈಷ್ಣವೀಂ ಚೈವ ರೌದ್ರೀಂ ಮಾಹೇಶ್ವರೀಂ ತಥಾ ।**
**ನಾರಸಿಂಹೀಂ ಚ ವಾರಾಹೀಮಿಂದ್ರಾಣೀಂ ಕಾರ್ತಿಕೀಂ ತಥಾ ॥ ೮೭ ॥**

---

ಮಾಡಿ ಪಂಚೋಪಚಾರಗಳಿಂದ ಪೂಜಿಸಿ, ಮಧ್ಯಪ್ರದೇಶದಲ್ಲಿ ಮುಂದೆ ಹೇಳುವ ಭೈರವರನ್ನು ಪೂಜಿಸಬೇಕು.

೮೪–೮೫. ಮಹಾಭೈರವ, ಸಂಹಾರಭೈರವ, ಅಸಿತಾಂಗಭೈರವ, ರುರು ಭೈರವ, ಕಾಲಭೈರವ, ಕ್ರೋಧಭೈರವ, ತಾಮ್ರಚೂಡ, ಚಂದ್ರಚೂಡ ಮತ್ತು ಇನ್ನೂ ಇಬ್ಬರು ಭೈರವರನ್ನು ಕ್ರಮವಾಗಿ ಆವಾಹನೆಮಾಡಬೇಕು.

೮೬. ಇಂತು ಭೈರವರನ್ನು ಪೂಜಿಸಿದನಂತರ ಆ ಅಷ್ಟದಳಪದ್ಮದ ಮಧ್ಯ ಭಾಗದಲ್ಲಿಯೇ ನವಶಕ್ತಿದೇವಿಯರನ್ನು ಆವಾಹನೆಮಾಡಿ ಭಕ್ತಿಪೂರ್ವಕವಾಗಿ ಪೂಜಿಸಬೇಕು.

೮೭–೮೮. ಬ್ರಹ್ಮಾಣಿ, ವೈಷ್ಣವಿ, ರೌದ್ರಿ, ಮಾಹೇಶ್ವರಿ, ನಾರಸಿಂಹಿ, ವಾರಾಹಿ, ಇಂದ್ರಾಣಿ, ಕಾರ್ತಿಕಿ ಮತ್ತು ಸರ್ವಶಕ್ತಿಸ್ವರೂಪಳೂ, ಪ್ರಧಾನಳೂ ಆದ ಸರ್ವ

ಸರ್ವಶಕ್ತಿಸ್ವರೂಪಾಂ ಚ ಪ್ರಧಾನಾಂ ಸರ್ವಮಂಗಲಾಂ ।
ನವಶಕ್ತೀಶ್ಚ ಸಂಪೂಜ್ಯ ಘಟೇ ದೇವಾಂಶ್ಚ ಪೂಜಯೇತ್ ॥ ೮೮ ॥

ಶಂಕರಂ ಕಾರ್ತಿಕೇಯಂ ಚ ಸೂರ್ಯಂ ಸೋಮಂ ಹುತಾಶನಂ ।
ವಾಯುಂ ಚ ವರುಣಂ ಚೈವ ದೇವ್ಯಾಶ್ಚೇಟೀಂ ಬಟುಂ ತಥಾ ॥ ೮೯ ॥

ಚತುಷ್ಷಷ್ಟಿಂ ಯೋಗಿನೀನಾಂ ಸಂಪೂಜ್ಯ ವಿಧಿಪೂರ್ವಕಂ ।
ಯಥಾಶಕ್ತಿ ಬಲಿಂ ದತ್ವಾ ಕರೋತಿ ಸ್ತವನಂ ಬುಧಃ ॥ ೯೦ ॥

ಕವಚಂ ಚ ಗಲೇ ಬದ್ಧ್ವಾ ಪಠಿತ್ವಾ ಭಕ್ತಿಪೂರ್ವಕಂ ।
ತತಃ ಕೃತ್ವಾ ಪರೀಹಾರಂ ನಮಸ್ಕುರ್ಯಾದ್ವಿಚಕ್ಷಣಃ ॥ ೯೧ ॥

ಬಲಿದಾನವಿಧಾನಂ ಚ ಶ್ರೂಯತಾಂ ಮುನಿಸತ್ತಮ ।
ಮಾಯೊತಿಂ ಮಹಿಷಂ ಛಾಗಂ ದದ್ಯಾನ್ಮೇಷಾದಿಕಂ ಶುಭಂ ॥ ೯೨ ॥

---

ಮಂಗಳೆ ಎಂಬ ಈ ನವಶಕ್ತಿದೇವತೆಯರನ್ನೂ, ಕಲಶದಲ್ಲಿ ಆವಾಹನೆಮಾಡಿ ಪೂಜಿಸಿ, ಅನಂತರ ಈ ಮುಂದೆ ಹೇಳುವ ದೇವತೆಗಳನ್ನು ಪೂಜಿಸಬೇಕು.

೮೯–೯೦. ಶಂಕರ, ಷಣ್ಮುಖ, ಸೂರ್ಯ, ಚಂದ್ರ, ಅಗ್ನಿ, ವಾಯು, ವರುಣ, ಮುಂತಾದ ದೇವತೆಗಳನ್ನೂ, ದೇವಿಯ ದಾಸಿಯನ್ನೂ, ಬಟುವನ್ನೂ, ಅರವತ್ತುನಾಲ್ಕು ಯೋಗಿನಿಯರನ್ನೂ, ವಿಧಿಪೂರ್ವಕವಾಗಿ ಪೂಜಿಸಿ, ತನ್ನ ಯೋಗ್ಯತಾನುಗುಣವಾಗಿ, ಬಲಿಯನ್ನು ಸಮರ್ಪಿಸಿ ಸ್ತೋತ್ರಮಾಡಬೇಕು.

೯೧. ಅನಂತರ ದೇವಿಯ ಕವಚವನ್ನು ಮಂತ್ರೋಚ್ಚಾರಣಪೂರ್ವಕವಾಗಿ ಭಕ್ತಿಯಿಂದ ಕಂಠದಲ್ಲಿ ಧರಿಸಿ, ಅಪರಾಧಕ್ಷಮಾಪಣೆಯನ್ನು ಬೇಡಿ ನಮಸ್ಕಾರ ಮಾಡಬೇಕು.

೯೨. ಎಲೈ ಮುನಿಶ್ರೇಷ್ಠನೇ ಪ್ರಕೃತಿದೇವಿಗೆ ಬಲಿಸಮರ್ಪಣೆ ಮಾಡುವ ಕ್ರಮವನ್ನು ವಿವರಿಸುವೆನು ಕೇಳು. ನರಬಲಿಯನ್ನೂ ಕೋಣ, ಹೋತ ಮತ್ತು ಟಗರುಗಳನ್ನೂ ಸಮರ್ಪಿಸಬೇಕು.

**ಸಹಸ್ರವರ್ಷಂ ಸುಪ್ರೀತಾ ದುರ್ಗಾಮಾಯಾತಿ ದಾನತಃ ।**
**ಮಹಿಷಾಚ್ಛತವರ್ಷಂ ಚ ದಶವರ್ಷಂ ಚ ಛಾಗಲಾತ್ ॥ ೯೩ ॥**

**ವರ್ಷಂ ಮೇಷೇಣ ಕೂಷ್ಮಾಂಡೈಃ ಪಕ್ಷಿಭಿರ್ಹರಿಣೈಸ್ತಥಾ ।**
**ದಶವರ್ಷಂ ಕೃಷ್ಣಸಾರೈಃ ಸಹಸ್ರಾಬ್ದಂ ಚ ಗಂಡಕೈಃ ॥ ೯೪ ॥**

**ಕೃತ್ರಿಮೈಃ ಪಿಷ್ಟಕಲಿತೈಃ ಷಣ್ಮಾಸಂ ಪಶುಭಿಸ್ತಥಾ ।**
**ಮಾಸಂ ಸುಪಕ್ವಾದಿಫಲೈರಕ್ಷತೈರಿತಿ ನಾರದ ॥ ೯೫ ॥**

**ಯುವಕಂ ವ್ಯಾಧಿಹೀನಂ ಚ ಸಶೃಂಗಂ ಲಕ್ಷಣಾನ್ವಿತಂ ।**
**ವಿಶುದ್ಧಮವಿಕಾರಾಂಗಂ ಸುವರ್ಣಂ ಪುಷ್ಟಮೇವ ಚ ॥ ೯೬ ॥**

---

೯೩. ನರಬಲಿಯನ್ನು ಸಮರ್ಪಿಸುವುದರಿಂದ ದುರ್ಗಾದೇವಿಯು ಸಾವಿರ ವರ್ಷ ತೃಪ್ತಳಾಗಿರುವಳು, ಕೋಣನ ಬಲಿಯಿಂದ ನೂರುವರ್ಷಗಳೂ, ಹೋತನ ಬಲಿಯಿಂದ ಹತ್ತು ವರ್ಷಗಳೂ ತೃಪ್ತಳಾಗಿರುವಳು.

೯೪. ಟಗರು, ಕೂಷ್ಮಾಂಡ. ಪಕ್ಷಿ, ಜಿಂಕೆ ಮುಂತಾದುವುಗಳನ್ನು ಬಲಿಯಾಗಿ ಕೊಟ್ಟರೆ ಒಂದುವರ್ಷವೂ, ಗಂಡುಜಿಂಕೆಯನ್ನು ಕೊಟ್ಟರೆ ಹತ್ತುವರ್ಷವೂ, ಗಂಡಕಮೃಗಗಳನ್ನು ಕೊಟ್ಟರೆ ಸಾವಿರವರ್ಷವೂ ತೃಪ್ತಳಾಗಿರುವಳು.

೯೫. ಹಿಟ್ಟಿನಿಂದ ಮಾಡಿರುವ, ಕೃತ್ರಿಮವಾದ ಪಶುಗಳನ್ನು ಬಲಿಕೊಡುವುದರಿಂದ ಆರುತಿಂಗಳೂ, ಚೆನ್ನಾಗಿ ಮಾಗಿರುವ ಸುಫಲವನ್ನು ನಿವೇದಿಸುವುದರಿಂದ ಒಂದುತಿಂಗಳೂ, ದುರ್ಗಾಮಾತೆಯು ತೃಪ್ತಳಾಗಿರುವಳು

೯೬. ಚಂಡಿಕಾದೇವಿಗೆ, ತರುಣನೂ, ರೋಗರಹಿತನೂ, ಲಕ್ಷಣವಂತನೂ, ಶುದ್ಧಾಕಾರನೂ, ಅವಿಕಲಾಂಗನೂ, ಒಳ್ಳೆಯ ಮೈಬಣ್ಣವುಳ್ಳವನೂ ಮತ್ತು ಪುಷ್ಟನೂ ಆದ ಮನಜನನ್ನು ಚಂಡಿಗೆ ಬಲಿ ಕೊಡಬೇಕು.

ಶಿಶುನಾ ಬಲಿನಾ ದಾತುರ್ಹಂತಿ ಪುತ್ರಂ ಚ ಚಂಡಿಕಾ ।
ವೃದ್ಧೇನ ವೈ ಗುರುಜನಂ ಕೃಶೇನಾಪೀಷ್ಟಬಾಂಧವಾನ್ ॥ ೯೭ ॥

ಧನಂ ಚೈವಾಧಿಕಾಂಗೇನ ಹೀನಾಂಗೇನ ಪ್ರಜಾಸ್ತಥಾ ।
ಕಾಮಿನೀಂ ಶೃಂಗಭಂಗೇನ ಕಾಣೇನ ಭ್ರಾತರಂ ತಥಾ ॥ ೯೮ ॥

ಘುಟಿಕೇನ ಭವೇನ್ಮೃತ್ಯುರ್ವಿಘ್ನಂ ಸ್ಯಾಚ್ಚಿತ್ರಮಸ್ತಕೈಃ ।
ಹಂತಿ ಮಿತ್ರಂ ತಾಮ್ರಪೃಷ್ಠೈರ್ಭ್ರಷ್ಟಶ್ರೀಃ ಪುಚ್ಛಹೀನತಃ ॥ ೯೯ ॥

ಮಾಯಾತೀನಾಂ ಸ್ವರೂಪಂ ಚ ಶ್ರೂಯತಾಂ ಮುನಿಸತ್ತಮ ।
ವಕ್ಷ್ಯಾಮ್ಯಥರ್ವವೇದೋಕ್ತಂ ಫಲಹಾನಿರ್ವ್ಯತಿಕ್ರಮೇ ॥ ೧೦೦ ॥

---

೯೭. ಶಿಶುಬಲಿ ಕೊಡುವವರ ಪುತ್ರರನ್ನು ಚಂಡಿಕೆಯು ನಾಶಗೊಳಿಸುವಳು. ಮುದುಕರನ್ನು ಬಲಿಕೊಡುವುದರಿಂದ ಗುರುಜನಗಳೂ, ಕೃಶರಾದವರನ್ನು ಬಲಿ ಕೊಡುವುದರಿಂದ ಇಷ್ಟಬಂಧುಗಳೂ, ನಾಶಹೊಂದುವರು.

೯೮. ಅಧಿಕಾವಯವವುಳ್ಳವರನ್ನು ಬಲಿಕೊಡುವುದರಿಂದ ಹಣವೂ, ಅಂಗ ಹೀನರನ್ನು ಬಲಿ ಕೊಡುವುದರಿಂದ ಪ್ರಜೆಗಳೂ, ಕೊಂಬುಗಳನ್ನು ಮುರಿದುಕೊಟ್ಟರೆ ಪತ್ನಿಯೂ, ಕುರುಡನನ್ನು ಕೊಡುವುದರಿಂದ ಸಹೋದರರೂ ನಾಶಹೊಂದುವರು.

೯೯. ಮೊಣಕಾಲಿಲ್ಲದ ಪ್ರಾಣಿಯನ್ನು ಬಲಿಕೊಡುವುದರಿಂದ ಮೃತ್ಯುವೂ, ವಿಚಿತ್ರ ತಲೆಬುರುಡೆಯುಳ್ಳ ಪ್ರಾಣಿಯನ್ನು ಬಲಿ ಕೊಡುವುದರಿಂದ ಕಾರ್ಯವಿಘ್ನವೂ, ಕೆಂಪಾದ ಬೆನ್ನುಭಾಗವುಳ್ಳ ಪ್ರಾಣಿಯನ್ನು ಬಲಿ ಕೊಡುವುದರಿಂದ ಮಿತ್ರಹಾನಿಯೂ ಬಾಲವಿಲ್ಲದ ಪ್ರಾಣಿಯನ್ನು ಕೊಡುವುದರಿಂದ ಸಂಪದ್ಭ್ರಷ್ಟತೆಯೂ ಉಂಟಾಗುವುದು.

೧೦೦. ಎಲೈ ಮುನಿಶ್ರೇಷ್ಠನೇ ಈಗ 'ಮಾಯಾತಿ' ಯ ಸ್ವರೂಪವನ್ನು ಹೇಳುವೆನು ಕೇಳು. ಇದರ ಸ್ವರೂಪವು ಅಥರ್ವಣ ವೇದದಲ್ಲಿ ಉಕ್ತವಾಗಿದೆ. ಅದನ್ನು ಅತಿಕ್ರಮಮಾಡಿದರೆ ಇಷ್ಟಾರ್ಥವು ಫಲಿಸುವುದಿಲ್ಲ.

ಪಿತೃಮಾತೃವಿಹೀನಂ ಚ ಯುವಕಂ ವ್ಯಾಧಿವರ್ಜಿತಂ ।
ವಿವಾಹಿತಂ ದೀಕ್ಷಿತಂ ಚ ಪರದಾರವಿಹೀನಕಂ　　॥ ೧೦೧ ॥

ಅಜಾರಜಂ ವಿಶುದ್ಧಂ ಚ ಸಚ್ಛೂದ್ರಪರಿಪೋಷಿತಂ ।
ತದ್ಬಂಧುಭ್ಯೋ ಧನಂ ದತ್ವಾ ಕ್ರೀತಂ ಮೂಲ್ಯಾತಿರೇಕತಃ　　॥ ೧೦೨ ॥

ಸ್ನಾಪಯಿತ್ವಾ ಚ ತಂ ಕರ್ತಾ ಪೂಜಯೇದ್ವಸ್ತ್ರಚಂದನೈಃ ।
ಮಾಲ್ಯೈರ್ಧೂಪೈಶ್ಚ ಸಿಂದೂರೈರ್ದಧಿಗೋರೋಚನಾದಿಭಿಃ　　॥ ೧೦೩ ॥

ತಂ ಚ ವರ್ಷಂ ಭ್ರಾಮಯಿತ್ವಾ ಭೃತ್ಯದ್ವಾರೇಣ ಯತ್ನತಃ ।
ವರ್ಷಾಂತೇ ಚ ಸಮುತ್ಸೃಜ್ಯ ದುರ್ಗಾಯೈ ತಂ ನಿವೇದಯೇತ್　　॥ ೧೦೪ ॥

ಅಷ್ಟಮೀ ನವಮೀಸಂಧೌ ದದ್ಯಾನ್ಮಾಯಾತಿಮೇವ ಚ ।
ಇತ್ಯೇವಂ ಕಥಿತಂ ಸರ್ವಂ ಬಲಿದಾನಪ್ರಸಂಗತಃ　　॥ ೧೦೫ ॥

---

೧೦೧–೧೦೩. ತಾಯಿತಂದೆಯಿಲ್ಲದವನೂ, ತರುಣನೂ, ರೋಗರಹಿತನೂ, ಸಂಸಾರಿಯೂ, ಯಜ್ಞದೀಕ್ಷೆಯನ್ನು ಕೈಕೊಂಡವನೂ, ಪರಸ್ತ್ರೀ ಸಂಗರಹಿತನೂ, ಜಾರನಿಂದ ಜನಿಸಿದವನೂ, ಶುದ್ಧಾಚಾರನೂ, ಯೋಗ್ಯನಾದ ಶೂದ್ರನಿಂದ ಸೇವೆ ಹೊಂದುತ್ತಿರುವವನೂ ಆದ ಮನುಷ್ಯನನ್ನು, ಯೋಗ್ಯವಾದ ಬೆಲೆಕೊಟ್ಟು ಅವರ ಬಂಧುಗಳಿಂದ ಕೊಂಡುಕೊಂಡು ಬಲಿದಾನಮಾಡುವ ಕರ್ತೃವು ಅವನನ್ನು ಸ್ನಾನ ಮಾಡಿಸಿ ವಸ್ತ್ರಾಲಂಕಾರ ಚಂದನಾದಿಗಳಿಂದ ಪೂಜಿಸಿ, ಹೂಮಾಲೆಯನ್ನು ಹಾಕಿ, ಧೂಪದೀಪಗಳನ್ನೂ, ಮೊಸರು, ಗೋರೋಚನಾದಿಗಳನ್ನು ಸಮರ್ಪಿಸಬೇಕು.

೧೦೪. ಅನಂತರ ಸೇವಕನ ಮುಖಾಂತರ ಅವನನ್ನು ಒಂದು ವರ್ಷ ಪ್ರಯತ್ನಪೂರ್ವಕವಾಗಿ ದೇಶಾಂತರಗಳಲ್ಲಿ ಭ್ರಮಣಮಾಡಿಸಿ, ವರ್ಷದ ಕೊನೆಯಲ್ಲಿ ಅವನನ್ನು ದುರ್ಗಾದೇವಿಗೆ ಬಲಿಕೊಡಬೇಕು. (ಈ ರೀತಿಯಾದ ಮನುಜನನ್ನು 'ಮಾಯಾತಿ' ಎನ್ನುವರು).

೧೦೫. ಅಷ್ಟಮೀ ಮತ್ತು ನವಮೀ ತಿಥಿಯು ಸೇರುವ ಸಂದರ್ಭದಲ್ಲಿ ಮಾಯಾತಿಯನ್ನು ಬಲಿಕೊಡಬೇಕು. ಬಲಿದಾನದ ವಿಷಯ ಪ್ರಸ್ತುತವಾಗಿ ಎಲ್ಲ ವನ್ನೂ ನಿನಗೆ ವಿವರಿಸಿದೆನು.

**ಬಲಿಂ ಸ್ತುತ್ವಾ ಚ ದತ್ವಾ ಚ ಧೃತ್ವಾ ಚ ಕವಚಂ ಬುಧಃ ।**
**ಪ್ರಣಮ್ಯ ದಂಡವದ್ಭೂಮೌ ದದ್ಯಾದ್ವಿಪ್ರಾಯ ದಕ್ಷಿಣಾಂ ॥ ೧೦೬ ॥**

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ ಪೂಜಾವಿಧಿಬಲಿಪಶುಲಕ್ಷವಿಶೇಷೋ ನಾಮ ಚತುಷ್ಷಷ್ಟಿತಮೋಽಧ್ಯಾಯಃ**

---

೧೦೬. ಬುದ್ಧಿವಂತನು ದುರ್ಗಾದೇವಿಯನ್ನು ಸ್ತುತಿಸಿ, ಬಲಿಯನ್ನು ಕೊಟ್ಟು, ಕವಚಧಾರಣೆಮಾಡಿ, ಭೂಮಿಯ ಮೇಲೆ ಸಾಷ್ಟಾಂಗವೆರಗಿ, ನಂತರ ಬ್ರಾಹ್ಮಣನಿಗೆ ದಕ್ಷಿಣೆಯನ್ನು ಕೊಡಬೇಕು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ದುರ್ಗಾ ಪೂಜಾವಿಧಿಯನ್ನು ತಿಳಿಸುವ ಅರವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

## ಅರವತ್ತನಾಲ್ಕನೆಯ ಅಧ್ಯಾಯದ ಸಾರಾಂಶವು

ಸುರಥಮಹಾರಾಜನು ರಾಜ್ಯಪ್ರಾಪ್ತಿಗಾಗಿ ರಜೋಗುಣಪರಿಪೂರ್ಣಳಾದ ದುರ್ಗಾದೇವಿಯನ್ನು ಶಾಸ್ತ್ರೋಕ್ತವಾಗಿ ಪೂಜಿಸಿದ ಕ್ರಮವು ಈ ಅಧ್ಯಾಯದಲ್ಲಿ ಉಕ್ತವಾಗಿದೆ.

ಸಕಾಮಕರ್ಮ ಮತ್ತು ನಿಷ್ಕಾಮಕರ್ಮವೆಂದು ಕರ್ಮವು ದ್ವಿವಿಧವಾಗಿರುವುದು. ಕಾಮಿಯಾದವನು ತನ್ನ ಇಷ್ಟಾರ್ಥಪ್ರದವಾದ ದೇವತೆಯನ್ನು ಯಥಾವಿಧಿ ಅರ್ಚಿಸಿ ತನ್ನ ಮನೋರಥಸಿದ್ಧಿಯನ್ನು ಪಡೆಯುವನು. ನಿಷ್ಕಾಮಿಯಾದವನು ಫಲಾಪೇಕ್ಷೆಯಿಲ್ಲದೆ ಕರ್ತವ್ಯಬುದ್ಧಿಯಿಂದ ಸತ್ಕರ್ಮಗಳನ್ನಾಚರಿಸಿ 'ಕರ್ಮಾಣ್ಯಸಂಕಲ್ಪಿತ ತತ್ಫಲಾನಿ ಸಂನ್ಯಸ್ಯ ವಿಷ್ಣೌ ಪರಮಾತ್ಮರೂಪೆ' ಎಂಬಂತೆ ಕರ್ಮಸನ್ಯಾಸಮಾಡಿ ಜೀವನ್ಮುಕ್ತನಾಗುವನು. ರಜೋಗುಣಪ್ರಧಾನನಾದ ಪುರುಷನು ಇಂದ್ರಿಯಗಳನ್ನು ನಿಗ್ರಹಿಸಲಸಮರ್ಥನಾಗಿ ತನ್ನ ಮನೋರಥಧಾಯಕವಾದ ದೇವತೆಯನ್ನಾರಾಧಿಸುವನು. ವಿಷಯೇಚ್ಛೆಯು ಉಪರತವಾದಹೊರತು ಮನುಜನು ಕೇವಲ ಬಾಹ್ಯಾಡಂಬರಗಳಿಂದ ಮುಕ್ತಿಮಾರ್ಗವನ್ನು ಹೊಂದಲಾರನು. ಆದಕಾರಣ ವಿಷಯೋಪಭೋಗವೂ ವೈರಾಗ್ಯಸಾಧಕವೆಂದು ಪ್ರಾಚೀನಮಹರ್ಷಿಗಳು ಬಗೆದು ಅವರವರ ಸಂಸ್ಕಾರಕ್ಕೆ ಅನುಗುಣವಾದ ದೇವತೆಯನ್ನಾರಾಧಿಸಿ ಇಷ್ಟಸಿದ್ಧಿಯನ್ನು ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಇಷ್ಟುಮಾತ್ರದಿಂದ ರಾಜಸ ಮತ್ತು ತಾಮಸ ಪೂಜೆಗಳು ಶ್ರುತಿಸಮ್ಮತವೆಂದು ತಿಳಿಯಬಾರದು.

ಆದುದರಿಂದಲೇ ಸುರಥಮಹಾರಾಜನು ರಜೋಗುಣಪರಿಪೂರ್ಣಳಾದ ದುರ್ಗಾದೇವಿಗೆ 'ನರಬಲಿ' ಮುಂತಾದವುಗಳನ್ನರ್ಪಿಸಿ ಇಷ್ಟಸಿದ್ಧಿಯನ್ನು ಪಡೆದು, ಅನಂತರ ಸಂಸಾರದಿಂದ ವಿರಕ್ತನಾಗಿ ಮುಕ್ತನಾದನು.

॥ ಓಂ ।

—॥ ಶ್ರೀ ಗಣೇಶಾಯ ನಮಃ ॥—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

॥ ಪಂಚಷಷ್ಠಿತಮೋಽಧ್ಯಾಯಃ ॥

॥ ನಾರದ ಉವಾಚ ॥

ಶ್ರುತಂ ಸರ್ವಂ ಮಹಾಭಾಗ ಸುಧಾರಸಪರಂ ವರಂ ।
ಸ್ತೋತ್ರಂ ಚ ಕವಚಂ ಪೂಜಾಫಲಂ ಕಾಲಂ ವದ ಪ್ರಭೋ ॥ ೧ ॥

॥ ನಾರಾಯಣ ಉವಾಚ ॥

ಆರ್ದ್ರಾಯಾಂ ಬೋಧಯೇದ್ದೇವೀಂ ಮೂಲೇನೈವ ಪ್ರವೇಶಯೇತ್ ।
ಉತ್ತರೇಣಾರ್ಚಯಿತ್ವಾ ತಾಂ ಶ್ರವಣಾಯಾಂ ವಿಸರ್ಜಯೇತ್ ॥ ೨ ॥

---

### ಅರವತ್ತೈದನೆಯ ಅಧ್ಯಾಯವು

೧. ನಾರದ :—ಮಹಾಭಾಗ್ಯಶಾಲಿಯಾದ ನಾರಾಯಣಮಹರ್ಷಿಯೇ, ಅಮೃತರಸದಂತೆ ಆನಂದಕರವಾದ ದುರ್ಗಾಮಹಿಮೆಯನ್ನು ಕೇಳಿದುದಾಯಿತು. ಈಗ ದುರ್ಗಾದೇವಿಯ ಸ್ತೋತ್ರಕವಚಗಳನ್ನೂ, ಪೂಜೆಯ ಕಾಲ ಮತ್ತು ಫಲವನ್ನೂ ದಯವಿಟ್ಟು ವಿವರಿಸು.

೨. ನಾರಾಯಣ :—ಎಲೈ ನಾರದನೇ ಕೇಳು, ದುರ್ಗಾದೇವಿಯನ್ನು ಆರ್ದ್ರಾನಕ್ಷತ್ರದಲ್ಲಿ ಬೋಧನೆಗೊಳಿಸಿ ಮೂಲಾನಕ್ಷತ್ರದಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿ ಉತ್ತರಾನಕ್ಷತ್ರದಲ್ಲಿ ಪೂಜಿಸಿ ಶ್ರವಣನಕ್ಷತ್ರದಲ್ಲಿ ವಿಸರ್ಜನೆಮಾಡಬೇಕು.

**ಆರ್ದ್ರಾಯುಕ್ತನವಮ್ಯಾಂ ತು ಕೃತ್ವಾ ದೇವ್ಯಾಶ್ಚ ಬೋಧನಂ ।**
**ಪೂಜಾಯಾಃ ಶತವಾರ್ಷಿಕ್ಯಾಃ ಫಲಮಾಪ್ನೋತಿ ಮಾನವಃ ॥ ೩ ॥**

**ಮೂಲಾಯಾಂ ತು ಪ್ರವೇಶೇ ಚ ನರಮೇಧಫಲಂ ಲಭೇತ್ ।**
**ಉತ್ತರೇ ಪೂಜನಂ ಕೃತ್ವಾ ವಾಜಪೇಯಫಲಂ ಲಭೇತ್ ॥ ೪ ॥**

**ಕೃತ್ವಾ ವಿಸರ್ಜನಂ ದೇವ್ಯಾಃ ಶ್ರವಣಾಯಾಂ ಚ ಮಾನವಃ ।**
**ಲಕ್ಷ್ಮೀಂ ಚ ಪುತ್ರಪೌತ್ರಾಂಶ್ಚ ಲಭತೇ ನಾತ್ರ ಸಂಶಯಃ ॥ ೫ ॥**

**ಭುವಃ ಪ್ರದಕ್ಷಿಣಂ ಪುಣ್ಯಂ ಪೂಜಾಯಾಂ ಲಭತೇ ನರಃ ।**
**ನಕ್ಷತ್ರಯೋಗಾಭಾವೇ ತು ಪಾರ್ವತ್ಯಾಶ್ಚೈವ ನಾರದ ॥ ೬ ॥**

**ನವಮ್ಯಾಂ ಬೋಧನಂ ಕೃತ್ವಾ ಪಕ್ಷಂ ಸಂಪೂಜ್ಯ ಮಾನವಃ ।**
**ಅಶ್ವಮೇಧಫಲಾವಾಪ್ತ್ಯೈ ದಶಮ್ಯಾಂ ಚ ವಿಸರ್ಜಯೇತ್ ॥ ೭ ॥**

---

೩. ಆರ್ದ್ರಾನಕ್ಷತ್ರವಿರುವ ನವಮಿಯ ದಿವಸ ದೇವಿಯನ್ನು ಆವಾಹನೆ ಮಾಡುವ ಮನುಜನು ನೂರುವರ್ಷ ದೇವಿಯನ್ನು ಅರ್ಚಿಸಿದ ಫಲವನ್ನು ಒಮ್ಮೆಲೇ ಪಡೆಯುವನು.

೪. ಮೂಲಾನಕ್ಷತ್ರದಲ್ಲಿ ದೇವಿಯ ಆವಾಹನೆಮಾಡುವುದರಿಂದ ನರಯಜ್ಞದ ಫಲವನ್ನೂ, ಉತ್ತರಾನಕ್ಷತ್ರದಲ್ಲಿ ಪೂಜಿಸುವುದರಿಂದ ವಾಜಪೇಯಯಾಗದ ಫಲವನ್ನೂ ಪಡೆಯುವನು

೫. ಶ್ರವಣನಕ್ಷತ್ರದಲ್ಲಿ ದೇವಿಯವಿಸರ್ಜನೆಯನ್ನು ಮಾಡುವ ಮನುಷ್ಯನು ಸಕಲಸಂಪತ್ತನ್ನೂ, ಪುತ್ರಪೌತ್ರರನ್ನೂ ಪಡೆಯುವುದರಲ್ಲಿ ಸಂದೇಹವಿಲ್ಲ.

೬–೭. ದುರ್ಗಾದೇವಿಯ ಪೂಜೆಯಿಂದ ಮನುಜನು ಭೂಪ್ರದಕ್ಷಿಣೆಯ ಫಲವನ್ನು ಪಡೆಯುವನು. ಮೇಲೆ ಉಕ್ತವಾದ ನಕ್ಷತ್ರದಯೋಗವು ಲಭಿಸದಿದ್ದರೂ, ನವಮಿಯ ದಿವಸ ದೇವಿಯನ್ನು ಆವಾಹನೆಮಾಡಿ ಒಂದು ಪಕ್ಷ (ಹದಿನೈದು ದಿವಸ ಗಳು) ಪೂಜಿಸಿ ದಶಮಿಯ ದಿವಸ ವಿಸರ್ಜನೆಮಾಡುವುದರಿಂದ ಅಶ್ವಮೇಧಯಾಗದ ಫಲವನ್ನು ಹೊಂದುವನು.

ಸಪ್ತಮ್ಯಾಂ ಪೂಜನಂ ಕೃತ್ವಾ ಬಲಿಂ ದದ್ಯಾದ್ವಿಚಕ್ಷಣಃ ।
ಅಷ್ಟಮ್ಯಾಂ ಪೂಜನಂ ಶಸ್ತಂ ಬಲಿದಾನವಿವರ್ಜಿತಂ ॥ ೮ ॥

ಅಷ್ಟಮ್ಯಾಂ ಬಲಿದಾನೇನ ವಿಪತ್ತಿರ್ಜಾಯತೇ ನೃಣಾಂ ।
ದದ್ಯಾದ್ವಿಚಕ್ಷಣೋ ಭಕ್ತ್ಯಾ ನವಮ್ಯಾಂ ವಿಧಿವದ್ಬಲಿಂ ॥ ೯ ॥

ಬಲಿದಾನೇನ ವಿಪ್ರೇಂದ್ರ ದುರ್ಗಾಪ್ರೀತಿರ್ಭವೇನ್ನೃಣಾಂ ।
ಹಿಂಸಾಜನ್ಯಂ ನ ಪಾಪಂ ಚ ಲಭತೇ ಯಜ್ಞಕರ್ಮಣಿ ॥ ೧೦ ॥

ಉತ್ಸರ್ಗಕರ್ತಾ ದಾತಾ ಚ ಛೇತ್ತಾ ಪೋಷ್ಟಾ ಚ ರಕ್ಷಕಃ ।
ಅಗ್ರೇ ಪಶ್ಚಾನ್ನಿಬದ್ಧಾ ಚ ಸಪ್ತೈತೇಽವಧಕಾರಿಣಃ ॥ ೧೧ ॥

---

೮. ಕುಶಲಿಯಾದವನು ಸಪ್ತಮಿಯ ದಿವಸ ದೇವಿಯನ್ನು ಪೂಜಿಸಿ ಬಲಿ ಸಮರ್ಪಣೆ ಮಾಡಬೇಕು. ಆದರೆ ಅಷ್ಟಮಿಯ ದಿವಸ ಬಲಿಸಮರ್ಪಣೆ ಮಾಡದೇ ಪೂಜಿಸುವುದೇ ಉತ್ತಮ.

೯. ಅಷ್ಟಮಿಯ ದಿವಸ ಬಲಿಯನ್ನು ಕೊಡುವುದರಿಂದ ಮನುಜರಿಗೆ ಕಷ್ಟ ಪರಂಪರೆಗಳು ಸಂಭವಿಸುವುವು. ನವಮಿಯ ದಿನ ಪೂಜೆಮಾಡುವವನು ಭಕ್ತಿಯಿಂದ ಬಲಿಯನ್ನು ಸಮರ್ಪಿಸಬೇಕು.

೧೦. ಮನುಷ್ಯರು ದುರ್ಗಾದೇವಿಗೆ ಬಲಿಸಮರ್ಪಣೆಮಾಡುವುದರಿಂದ ಆ ದೇವಿಯು ಒಲಿಯುವಳು. ಯಜ್ಞಕರ್ಮದಲ್ಲಿ ಪ್ರಾಣಹಿಂಸೆಮಾಡುವುದರಿಂದ ಪಾಪವು ಸಂಘಟಿಸುವುದಿಲ್ಲ.

೧೧. ಯಜ್ಞಕಾಲದಲ್ಲಿ ಪಶುಗಳನ್ನು ಉತ್ಸರ್ಜನಮಾಡುವವನೂ, ಕೊಡುವವನೂ, ಕತ್ತರಿಸುವವನೂ, ಪೋಷಿಸುವವನೂ, ರಕ್ಷಿಸುವವನೂ ಮತ್ತು ಹಿಂದೆ ಕಟ್ಟುವವನೂ, ಮುಂದೆ ಕಟ್ಟುವವನೂ ಈ ಏಳು ಜನಗಳೂ ಪಶುವಧೆಯ ಪಾಪಕ್ಕೆ ಗುರಿಯಾಗುವುದಿಲ್ಲ.

ಯೋ ಯಂ ಹಂತಿ ಸ ತಂ ಹಂತಿ ನೇತಿ ವೇದೋಕ್ತಮೇವ ಚ ।
ಕುರ್ವಂತಿ ವೈಷ್ಣವೀಂ ಪೂಜಾಂ ವೈಷ್ಣವಾಸ್ತೇನ ಹೇತುನಾ ॥ ೧೨ ॥

ಏವಂ ಸಂಪೂಜ್ಯ ಸುರಥಃ ಪೂರ್ಣಂ ವರ್ಷಂ ಚ ಭಕ್ತಿತಃ ।
ಕವಚಂ ಚ ಗಲೇ ಬದ್ಧ್ವಾ ತುಷ್ಟಾವ ಪರಮೇಶ್ವರೀಂ ॥ ೧೩ ॥

ಸ್ತೋತ್ರೇಣ ಪರಿತುಷ್ಟಾ ಸಾ ತಸ್ಯ ಸಾಕ್ಷಾದ್ಬಭೂವ ಹ ।
ಸ ದದರ್ಶ ಪುರೋ ದೇವೀಂ ಗ್ರೀಷ್ಮಸೂರ್ಯಸಮಪ್ರಭಾಂ ॥ ೧೪ ॥

ತೇಜಃಸ್ವರೂಪಾಂ ಪರಮಾಂ ಸಗುಣಾಂ ನಿರ್ಗುಣಾಂ ವರಾಂ ।
ದೃಷ್ಟ್ವಾ ತಾಂ ಕಮನೀಯಾಂ ಚ ತೇಜೋಮಂಡಲಮಧ್ಯತಃ ॥ ೧೫ ॥

ಸ್ವೇಚ್ಛಾಮಯೀಂ ಕೃಪಾರೂಪಾಂ ಭಕ್ತಾನುಗ್ರಹಕಾರಿಣೀಂ ।
ಪುನಸ್ತುಷ್ಟಾವ ರಾಜೇಂದ್ರೋ ಭಕ್ತಿನಮ್ರಾತ್ಮಕಂಧರಃ ॥ ೧೬ ॥

---

೧೨. ಬಲಿದಾನಮಾಡುವಾಗ ಯಾರು ಯಾವ ಪ್ರಾಣಿಯನ್ನು ಕೊಲ್ಲುವರೋ ಆ ಪ್ರಾಣಿಯು ಅವನನ್ನು ಮುಂದೆ ಕೊಲ್ಲುವುದಿಲ್ಲವೆಂದು ವೇದೋಕ್ತವಾಗಿದೆ. ಆದುದರಿಂದಲೇ ವಿಷ್ಣುಭಕ್ತರು ವಿಷ್ಣುಮಾಯೆಯನ್ನು ಪೂಜಿಸುವರು.

೧೩. ಆ ಸುರಥಮಹಾರಾಜನು ಒಂದುವರ್ಷಕಾಲ ಮಹೇಶ್ವರಿಯನ್ನು ಭಕ್ತಿಪೂರ್ವಕವಾಗಿ ಪೂಜಿಸಿ ಕಂಠದಲ್ಲಿ ಕವಚಧಾರಣೆಮಾಡಿ ಸ್ತುತಿಸಿದನು.

೧೪. ಅವನ ಸ್ತೋತ್ರದಿಂದ ಸಂತುಷ್ಟಳಾದ ದೇವಿಯು ಅವನಿಗೆ ಪ್ರತ್ಯಕ್ಷಳಾದಳು. ಆಗ ಸುರಥನು ಗ್ರೀಷ್ಮಸೂರ್ಯನಂತೆ ತೇಜಸ್ವಿನಿಯಾದ ದೇವಿಯನ್ನು ತನ್ನ ಮುಂದೆ ನೋಡಿದನು.

೧೫. ತೇಜಃಸ್ವರೂಪಳೂ, ನಿರ್ಗುಣಳಾದರೂ ಭಕ್ತರ ಕಣ್ಣಿಗೆ ಸುಗುಣಳೂ ಆದ ಆ ದೇವಿಯು ತೇಜೋಮಂಡಲದ ಮಧ್ಯದಲ್ಲಿ ಮನೋಹರಳಾಗಿರುವುದನ್ನು ನೋಡಿದನು.

೧೬. ಸ್ವೇಚ್ಛಾರೂಪಿಣಿಯೂ, ದಯಾಮಯಳೂ, ಭಕ್ತರಿಗೆ ಅನುಗ್ರಹ ಮಾಡುವವಳೂ ಆದ ದೇವಿಯನ್ನು ರಾಜನು ಪುನಃ ಭಕ್ತಿಯಿಂದ ತಲೆತಗ್ಗಿಸಿಕೊಂಡು ಸ್ತುತಿಸಿದನು.

ಸ್ತವೇನ ಪರಿತುಷ್ಟಾ ಸಾ ಸಸ್ಮಿತಾ ಭಕ್ತಿಪೂರ್ವಕಂ ।
ಉವಾಚ ಸತ್ಯಂ ರಾಜೇಂದ್ರಂ ಕೃಪಯಾ ಜಗದಂಬಿಕಾ ॥ ೧೭ ॥

॥ ಪ್ರಕೃತಿರುವಾಚ ॥

ಸಾಕ್ಷಾತ್ಸಂಪ್ರಾಪ್ಯ ಮಾಂ ರಾಜನ್ವೃಣೋಷಿ ವಿಭವಂ ವರಂ ।
ದದಾಮಿ ತುಭ್ಯಂ ವಿಭವಂ ಸಾಂಪ್ರತಂ ವಾಂಛಿತಂ ತವ ॥ ೧೮ ॥

ನಿರ್ಜಿತ್ಯ ಸರ್ವಾಂಚ್ಛತ್ರೂಂಶ್ಚ ಲಬ್ಧ್ವಾ ರಾಜ್ಯಮಕಂಟಕಂ ।
ಭವಿಷ್ಯಸಿ ಮಹಾರಾಜ ಸಾವರ್ಣಿರ್ಮನುರಷ್ಟಮಃ ॥ ೧೯ ॥

ದಾಸ್ಯಾಮಿ ತುಭ್ಯಂ ಜ್ಞಾನಂ ಚ ಪರಿಣಾಮೇ ನರಾಧಿಪ ।
ಮುಕ್ತಿಂ ದಾಸ್ಯಂ ಚ ಪರಮಂ ಶ್ರೀಕೃಷ್ಣೇ ಪರಮಾತ್ಮನಿ ॥ ೨೦ ॥

---

೧೭. ಭಕ್ತಿಪೂರ್ವಕವಾದ ಅವನ ಸ್ತೋತ್ರದಿಂದ ತುಷ್ಟಳಾದ ಜಗದಂಬಿಕೆಯು ಪ್ರಸನ್ನಮುಖದಿಂದ ಆ ರಾಜನನ್ನು ಕುರಿತು ಕೆಲವು ಕರುಣಾರ್ದ್ರವಾದ ಮಾತುಗಳನ್ನಾಡಿದಳು.

೧೮. ಪ್ರಕೃತಿ:—ಎಲೈ ರಾಜೇಂದ್ರನೇ, ನನ್ನ ಸಾಕ್ಷಾತ್ಕಾರವನ್ನು ಪಡೆದ ನೀನು ರಾಜ್ಯಸಂಪತ್ತನ್ನು ನನ್ನಿಂದ ಬೇಡುತ್ತಿರುವೆ. ನಿನಗೆ ಅಭೀಪ್ಸಿತವಾದ ರಾಜ್ಯಸಂಪತ್ತನ್ನು ನಾನು ಅನುಗ್ರಹಿಸುವೆನು.

೧೯. ನೀನು ಸಕಲ ಶತ್ರುಗಳನ್ನೂ ಜಯಿಸಿ ನಿಷ್ಕಂಟಕವಾದ ರಾಜ್ಯವನ್ನು ಪಡೆದು ಅನಂತರ ಕೆಲವು ದಿವಸ ರಾಜನಾಗಿದ್ದು ಎಂಟನೆಯ ಮನುವಾದ ಸಾವರ್ಣಿಯಾಗುವೆ.

೨೦. ಎಲೈ ರಾಜೇಂದ್ರನೇ, ನಿನಗೆ ಪರಿಣಾಮದಲ್ಲಿ ದಿವ್ಯಜ್ಞಾನವನ್ನೂ, ಸರ್ವೋತ್ತಮನಾದ ಶ್ರೀಕೃಷ್ಣಪರಮಾತ್ಮನಲ್ಲಿ ಅಚಲವಾದ ಭಕ್ತಿಯನ್ನೂ, ಕೊನೆಗೆ ಸೇವೆಯನ್ನೂ ದಯಪಾಲಿಸುವೆನು.

ವೃಣೋತಿ ವಿಭವಂ ಯೋ ಹಿ ಸಾಕ್ಷಾನ್ಮಾಂ ಪ್ರಾಪ್ಯ ಮಂದಧೀಃ ।
ಮಾಯಯಾ ವಂಚಿತಸ್ಸೋಽಪಿ ವಿಷ್ಣುಭಕ್ತ್ಯಮೃತಂ ತ್ಯಜೇತ್ ॥ ೨೧ ॥

ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ನಶ್ವರಮೇವ ಚ ।
ನಿತ್ಯಂ ಸತ್ಯಂ ಪರಂ ಬ್ರಹ್ಮ ಕೃಷ್ಣಂ ನಿರ್ಗುಣಮೇವ ಚ ॥ ೨೨ ॥

ಬ್ರಹ್ಮವಿಷ್ಣುಶಿವಾದೀನಾಮಹಮಾದ್ಯಾ ಪರಾತ್ಪರಾ ।
ಸಗುಣಾ ನಿರ್ಗುಣಾ ಚಾಪಿ ವರಾ ಸ್ವೇಚ್ಛಾಮಯೀ ಸದಾ ॥ ೨೩ ॥

ನಿತ್ಯಾಽನಿತ್ಯಾ ಸರ್ವರೂಪಾ ಸರ್ವಕಾರಣಕಾರಣಂ ।
ಬೀಜರೂಪಾ ಚ ಸರ್ವೇಷಾಂ ಮೂಲಪ್ರಕೃತಿರೀಶ್ವರೀ ॥ ೨೪ ॥

ಪುಣ್ಯೇ ವೃಂದಾವನೇ ರಮ್ಯೇ ಗೋಲೋಕೇ ರಾಸಮಂಡಲೇ ।
ರಾಧಾಪ್ರಾಣಾಧಿಕಾಹಂ ಚ ಕೃಷ್ಣಸ್ಯ ಪರಮಾತ್ಮನಃ ॥ ೨೫ ॥

---

೨೧. ನನ್ನ ಸಾಕ್ಷಾತ್ಕಾರವನ್ನು ಪಡೆದರೂ ಕೂಡ ಮಾಯೆಯಿಂದ ಮೋಹಿತನಾದ ಮಂದಬುದ್ಧಿಯು, ಚಂಚಲವಾದ ಸಂಪತ್ತನ್ನು ಬೇಡಿ, ವಿಷ್ಣು ಭಕ್ತಿರೂಪವಾದ ಅಮೃತವನ್ನು ಕಳೆದುಕೊಳ್ಳುವನು.

೨೨. ಬ್ರಹ್ಮನು ಮೊದಲಗೊಂಡು ಒಂದು ಹುಲ್ಲುಕಡ್ಡಿಯವರೆಗಿರುವ ಸಕಲವೂ ನಶ್ವರವಾದುದು. ನಿರ್ಗುಣವೂ ನಿತ್ಯವೂ ಆದ ಶ್ರೀಕೃಷ್ಣನೆಂಬ ಆ ಪರಬ್ರಹ್ಮವಸ್ತುವೊಂದೇ ಸತ್ಯವಾದುದು.

೨೩. ಪರಾತ್ಪರಳಾದ ನಾನು ಬ್ರಹ್ಮ, ವಿಷ್ಣು ಮಹೇಶ್ವರರಿಗೆಲ್ಲ ಆದಿಕಾರಣಳು. ಸ್ವೇಚ್ಛಾಮಯಿಯಾದ ನಾನು ನಿರ್ಗುಣಳಾದರೂ ಭಕ್ತರ ಕಣ್ಣಿಗೆ ಸಗುಣಳಾಗಿ ತೋರುವೆನು

೨೪. ನಿತ್ಯಾನಿತ್ಯಸ್ವರೂಪಳೂ, ಕಾರಣಗಳಿಗೆಲ್ಲ ಆದಿಕಾರಣಳೂ, ಬೀಜರೂಪಳೂ ಸರ್ವೇಶ್ವರಿಯೂ ಆದ ನಾನೇ ಮೂಲಪ್ರಕೃತಿಯು.

೨೫. ಗೋಲೋಕದ ಬೃಂದಾವನದಲ್ಲಿರುವ ಪುಣ್ಯಕರವೂ ರಮ್ಯವೂ ಆದ ರಾಸಮಂಡಲದಲ್ಲಿ ಶ್ರೀಕೃಷ್ಣಪರಮಾತ್ಮನ ಪ್ರಾಣಾಧಿಕಳಾದ ರಾಧಾದೇವಿಯೆನಿಸಿಕೊಳ್ಳುವೆನು.

ಅಹಂ ದುರ್ಗಾ ವಿಷ್ಣುಮಾಯಾ ಬುದ್ಧ್ಯಧಿಷ್ಠಾತೃದೇವತಾ ।
ಅಹಂ ಲಕ್ಷ್ಮೀಶ್ಚ ವೈಕುಂಠೇ ಸ್ವಯಂ ದೇವೀ ಸರಸ್ವತೀ ॥ ೨೬ ॥

ಸಾವಿತ್ರೀ ವೇದಮಾತಾಹಂ ಬ್ರಹ್ಮಾಣೀ ಬ್ರಹ್ಮಲೋಕತಃ ।
ಅಹಂ ಗಂಗಾ ಚ ತುಲಸೀ ಸರ್ವಾಧಾರಾ ವಸುಂಧರಾ ॥ ೨೭ ॥

ನಾನಾವಿಧಾಹಂ ಕಲಯಾ ಮಾಯಯಾ ಸರ್ವಯೋಷಿತಃ ।
ಸಾಹಂ ಕೃಷ್ಣೇನ ಸಂಸೃಷ್ಟಾ ನೃಪ ಭ್ರೂಭಂಗಲೀಲಯಾ ॥ ೨೮ ॥

ಭ್ರೂಭಂಗಲೀಲಯಾ ಸೃಷ್ಟೋ ಯೇನ ಪುಂಸಾ ಮಹಾನ್ವಿರಾಟ್ ।
ಲೋಮ್ನಾಂ ಕೂಪೇಷು ವಿಶ್ವಾನಿ ಯಸ್ಯ ಸಂತಿ ಹಿ ನಿತ್ಯಶಃ ॥ ೨೯ ॥

---

೨೬. ದುರ್ಗಾದೇವಿಯೆನಿಸಿಕೊಂಡಿರುವ ನಾನೇ, ವಿಷ್ಣು ಮಾಯೆಯೂ ಬುದ್ಧಿಗೆ ಅಧಿಷ್ಠಾತೃದೇವತೆಯೂ, ವೈಕುಂಠದಲ್ಲಿ ಲಕ್ಷ್ಮೀ ಮತ್ತು ಸರಸ್ವತಿಯೂ ಆಗಿರುವೆನು.

೨೭. ಬ್ರಹ್ಮಲೋಕದಲ್ಲಿ ಬ್ರಹ್ಮನ ಪತ್ನಿಯೂ, ವೇದಮಾತೆಯೂ ಎನಿಸಿರುವ ಸಾವಿತ್ರಿಯಾಗಿರುವವಳೂ ನಾನೇ. ಗಂಗೆ, ತುಳಸಿ ಮತ್ತು ಸರ್ವಾಧಾರಳಾದ ವಸುಂಧರೆಯೂ ನಾನೇ.

೨೮. ಮಾಯಾರೂಪಿಣಿಯಾದ ನನ್ನ ಕಲಾಂಶದಿಂದ ನಾನಾವಿಧ ಸ್ತ್ರೀಯರು ಜನಿಸಿರುವರು. ಇಂಥ ನಾನು ಶ್ರೀಕೃಷ್ಣಪರಮಾತ್ಮನ ಭ್ರೂಸಂಜ್ಞೆಮಾತ್ರದಿಂದಲೇ, ಅವನೊಡನೆ ಸಂಸಕ್ತಳಾದೆನು.

೨೯. ಯಾರ ಪ್ರತಿಯೊಂದು ರೋಮಕೂಪಗಳಲ್ಲಿಯೂ, ನಿಖಿಲಪ್ರಪಂಚವೂ ಅಡಗಿರುವುದೋ ಅಂಥ ಮಹಾ ವಿರಾಟ್ಪುರುಷನನ್ನೂ ಶ್ರೀಕೃಷ್ಣಪರಮಾತ್ಮನು ಭ್ರೂಸಂಜ್ಞೆಮಾತ್ರದಿಂದಲೇ ಸೃಜಿಸಿದನು.

**ಅಸಂಖ್ಯಾನಿ ಚ ತಾನ್ಯೇವ ಕೃತ್ರಿಮಾಣಿ ಚ ಮಾಯಯಾ ।**
**ಅನಿತ್ಯೇ ನಿತ್ಯಬುದ್ಧಿಂ ಚ ಸರ್ವೇ ಕುರ್ವಂತಿ ಸಂತತಂ ॥ ೩೦ ॥**

**ಸಪ್ತಸಾಗರಸಂಯುಕ್ತಾ ಸಪ್ತದ್ವೀಪಾ ವಸುಂಧರಾ ।**
**ತದಧಃ ಸಪ್ತಪಾತಾಲಾಃ ಸ್ವರ್ಲೋಕಾಶ್ಚೈವ ಸಪ್ತ ಚ ॥ ೩೧ ॥**

**ಏವಂ ವಿಶ್ವಂ ಬಹುವಿಧಂ ಬ್ರಹ್ಮಾಂಡಂ ಬ್ರಹ್ಮಣಾ ಕೃತಂ ।**
**ಪ್ರತ್ಯೇಕಂ ಸರ್ವವಿಧ್ಯಂಡೇ ಬ್ರಹ್ಮವಿಷ್ಣುಶಿವಾದಯಃ ॥ ೩೨ ॥**

**ಸರ್ವೇಷಾಮೀಶ್ವರಃ ಕೃಷ್ಣ ಇತಿ ಜ್ಞಾನಂ ಪರಾತ್ಪರಂ ।**
**ವೇದಾನಾಂ ಚ ವ್ರತಾನಾಂ ಚ ತೀರ್ಥಾನಾಂ ತಪಸಾಂ ತಥಾ ॥ ೩೩ ॥**

**ದೇವಾನಾಂ ಚೈವ ಸರ್ವೇಷಾಂ ಸಾರಃ ಕೃಷ್ಣ ಇತಿ ಸ್ಮೃತಃ ।**
**ತದ್ಭಕ್ತಿಹೀನೋ ಯೋ ಮೂಢೋ ಸ ಚ ಜೀವನ್ಮೃತೋ ಧ್ರುವಂ ॥ ೩೪ ॥**

---

೩೦. ವಿರಾಟ್ಪುರುಷನ ರೋಮಕೂಪಗಳಲ್ಲಿರುವ ಅಸಂಖ್ಯ ವಿಶ್ವಗಳೂ ಕೃತ್ರಿಮವಾದುವು. ಅನಿತ್ಯವಾದ ಆ ಪ್ರಪಂಚವನ್ನು ಸಕಲರೂ ನಿತ್ಯವೆಂದು ತಿಳಿದು ಭ್ರಮಿಸುವರು.

೩೧. ಸಪ್ತ ಸಮುದ್ರಗಳಿಂದ ಪರಿವೃತವಾದ ಈ ಭೂಮಂಡಲವು ಸಪ್ತ ದ್ವೀಪ ಪರಿಮಿತವಾಗಿಯೂ ಇದೆ. ಇದರ ಕೆಳಗೆ ಏಳು ಪಾತಾಳ ಲೋಕಗಳೂ, ಮೇಲೆ ಏಳು ಸ್ವರ್ಗಲೋಕಗಳೂ ಇವೆ.

೩೨. ಬ್ರಹ್ಮನಿಂದ ಸೃಷ್ಟವಾದ ಈ ಬ್ರಹ್ಮಾಂಡವು ಬಹುವಿಧವಾಗಿದೆ ಸಕಲ ಬ್ರಹ್ಮಾಂಡದಲ್ಲೂ ಪ್ರತ್ಯೇಕವಾಗಿ ಬ್ರಹ್ಮ, ವಿಷ್ಣು, ಮಹೇಶ್ವರಾದಿಗಳಿರುವರು.

೩೩–೩೪. ತ್ರಿಮೂರ್ತಿಗಳಿಗಿಂತ ಶ್ರೀಕೃಷ್ಣಪರಮಾತ್ಮನೇ ಸರ್ವೋತ್ತಮ ನೆಂದು ತಿಳಿಯುವುದೇ ದಿವ್ಯಜ್ಞಾನವೆನಿಸುವುದು. ಸಕಲ ವೇದಗಳಿಗೂ, ಪುಣ್ಯ ತೀರ್ಥಗಳಿಗೂ, ವ್ರತ ತಪಸ್ಸುಗಳಿಗೂ, ಸಕಲ ದೇವತೆಗಳಿಗೂ ಶ್ರೀಕೃಷ್ಣನೇ ಸಾರ ಸ್ವರೂಪನಾದುದರಿಂದ ಕೃಷ್ಣಭಕ್ತಿಯಿಲ್ಲದ ಮೂಢನು ಜೀವಿಸಿದ್ದರೂ ಸತ್ತಂತೆಯೇ.

ಪವಿತ್ರಾಣಿ ಚ ತೀರ್ಥಾನಿ ತದ್ಭಕ್ತಸ್ಪರ್ಶವಾಯುನಾ ।
ತನ್ಮಂತ್ರೋಪಾಸಕಶ್ಚೈವ ಜೀವನ್ಮುಕ್ತ ಇತಿ ಸ್ಮೃತಃ ॥ ೩೫ ॥

ಮಂತ್ರಗ್ರಹಣಮಾತ್ರೇಣ ನರೋ ನಾರಾಯಣೋ ಭವೇತ್ ।
ವಿನಾ ಜಪೇನ ತಪಸಾ ವಿನಾ ತೀರ್ಥೇನ ಪೂಜಯಾ ॥ ೩೬ ॥

ಮಾತಾಮಹಾನಾಂ ಶತಕಂ ಪಿತೄಣಾಂ ಚ ಸಹಸ್ರಕಂ ।
ಪುಂಸಾಮೇವಂ ಸಮುದ್ಧೃತ್ಯ ಗೋಲೋಕಂ ಚ ಸ ಗಚ್ಛತಿ ॥ ೩೭ ॥

ಇದಂ ಜ್ಞಾನಂ ಸಾರಭೂತಂ ಕಥಿತಂ ತೇ ನರಾಧಿಪ ।
ಮನ್ವಂತರಾಂತೇ ಭೋಗಾಂತೇ ಭಕ್ತಿಂ ದಾಸ್ಯಾಮಿ ತೇ ಹರೌ ॥ ೩೮ ॥

---

೩೫. ಶ್ರೀಕೃಷ್ಣ ಭಕ್ತನನ್ನು ಸ್ಪರ್ಶಮಾಡಿದ ವಾಯುವಿನ ಸ್ಪರ್ಶದಿಂದಲೇ ತೀರ್ಥಗಳು ಪವಿತ್ರವಾಗುವುವು. ಕೃಷ್ಣಮಂತ್ರೋಪಾಸಕನು ಜೀವನ್ಮುಕ್ತನಾಗುವನೆಂದು ಸ್ಮೃತ್ಯುಕ್ತವಾಗಿದೆ.

೩೬. ಜಪತಪಗಳನ್ನಾಚರಿಸದೆಯೂ, ತೀರ್ಥಯಾತ್ರೆಗಳನ್ನೂ ವ್ರತನಿಯಮಗಳನ್ನೂ ಆಚರಿಸದೆಯೂ ಕೇವಲ ಶ್ರೀಕೃಷ್ಣಮಂತ್ರೋಪದೇಶವನ್ನು ಸ್ವೀಕರಿಸಿದ ಮಾತ್ರದಿಂದಲೇ ನರನು ನಾರಾಯಣನಾಗುವನು.

೩೭. ಕೃಷ್ಣ ಮಂತ್ರೋಪಾಸಕನು, ಮಾತಾಮಹನ ವಂಶಜರಲ್ಲಿ ನೂರು ಜನಗಳನ್ನೂ, ತಂದೆಯ ವಂಶದಲ್ಲಿ ಸಾವಿರ ಜನರನ್ನೂ, ಪಾಪಕೂಪದಿಂದ ಉದ್ಧರಿಸಿ ತಾನೂ ಗೋಲೋಕಕ್ಕೆ ಹೋಗಿ ಸೇರುವನು.

೩೮. ಎಲೈ ರಾಜೇಂದ್ರನೇ, ಅತ್ಯಂತ ಸರ್ವೋತ್ತಮವಾದ ಜ್ಞಾನವನ್ನು ನಿನಗೆ ಉಪದೇಶಿಸಿರುವೆನು. ಅಲ್ಲದೆ ಒಂದು ಮನ್ವಂತರದ ಕಾಲ ರಾಜ್ಯಸುಖವನ್ನು ಅನುಭವಿಸಿದ ನಂತರ ನಿನಗೆ ಶ್ರೀಹರಿಯಲ್ಲಿ ಭಕ್ತಿಯುದಯಿಸುವಂತೆ ಅನುಗ್ರಹಿಸುವೆನು.

ಮಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ।
ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ　　|| ೩೯ ||

ಅಹಂ ಯಮನುಗೃಹ್ಣಾಮಿ ತಸ್ಮೈ ದಾಸ್ಯಾಮಿ ನಿರ್ಮಲಾಂ ।
ನಿಶ್ಚಲಾಂ ಸುದೃಢಾಂ ಭಕ್ತಿಂ ಶ್ರೀಕೃಷ್ಣೇ ಪರಮಾತ್ಮನಿ　　|| ೪೦ ||

ಕರೋಮಿ ವಂಚನಾಂ ಯಂ ಯಂ ತೇಭ್ಯೋ ದಾಸ್ಯಾಮಿ ಸಂಪದಂ ।
ಪ್ರಾತಃ ಸ್ವಪ್ನಸ್ವರೂಪಾಂ ಚ ಮಿಥ್ಯೇತಿ ಭ್ರಮರೂಪಿಣೀಂ　　|| ೪೧ ||

ಇತಿ ತೇ ಕಥಿತಂ ಜ್ಞಾನಂ ಗಚ್ಛ ವತ್ಸ ಯಥಾಸುಖಂ ।
ಇತ್ಯುಕ್ತ್ವಾ ಚ ಮಹಾದೇವೀ ತತ್ರೈವಾಂತರಧೀಯತ　　|| ೪೨ ||

---

೩೯. ತಾನು ಮಾಡಿದ ಕರ್ಮದ ಫಲವನ್ನು ತಾನು ಅನುಭವಿಸದ ಹೊರತು ಎಷ್ಟು ಕಲ್ಪಗಳಾದರೂ ಅದು ಸವೆಯುವಂತಿಲ್ಲ. ಆದ್ದರಿಂದ ಶುಭವಾಗಲೀ, ಅಶುಭವಾಗಲೀ ತನ್ನ ಕರ್ಮದ ಫಲವನ್ನು ತಾನು ಅತ್ಯವಶ್ಯಕವಾಗಿ ಅನುಭವಿಸಬೇಕು.

೪೦. ನನ್ನ ಅನುಗ್ರಹಕ್ಕೆ ಯಾರು ಪಾತ್ರರಾಗುವರೋ ಅವರಿಗೆ ಶ್ರೀಕೃಷ್ಣ ಪರಮಾತ್ಮನಲ್ಲಿ, ನಿಶ್ಚಲವೂ, ದೃಢವೂ, ನಿರ್ಮಲವೂ ಆದ ಭಕ್ತಿಯು ಲಭಿಸುವುದು.

೪೧. ನನ್ನ ಮಾಯೆಗೊಳಗಾಗುವವರೆಲ್ಲರಿಗೂ, ಪ್ರಾತಃಕಾಲದ ಸ್ವಪ್ನದಂತೆ ಮಿಥ್ಯಾರೂಪವೂ, ಭ್ರಾಂತಿಜನಕವೂ ಆದ ಸಂಪತ್ತನ್ನು ಕೊಡುವೆನು.

೪೨. ಎಲೈ ರಾಜೇಂದ್ರನೇ, ನಿನಗೆ ದಿವ್ಯಜ್ಞಾನವನ್ನು ಉಪದೇಶಮಾಡಿದುದಾಯಿತು. ಈಗ ನೀನು ಸುಖವಾಗಿ ಹಿಂತಿರುಗು. ಈ ರೀತಿಯಾಗಿ ಆ ಪ್ರಕೃತಿದೇವಿಯು ನುಡಿದು ಅಲ್ಲಿಯೇ ಅಂತರ್ಧಾನ ಹೊಂದಿದಳು.

ರಾಜಾ ಸಂಪ್ರಾಪ್ಯ ರಾಜ್ಯಂ ಚ ನತ್ವಾ ತಾಂ ಪ್ರಯಯೌ ಗೃಹಂ।
ಇತಿ ತೇ ಕಥಿತಂ ವತ್ಸ ದುರ್ಗೋಪಾಖ್ಯಾನಮುತ್ತಮಂ ॥ ೪೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ ಪ್ರಕೃತಿ
ಸುರಥ ಸಂವಾದೇ ಜ್ಞಾನಕಥನಂ ನಾಮ
ಪಂಚಷಷ್ಠಿತಮೋಽಧ್ಯಾಯಃ

---

೪೩. ಆ ರಾಜನೂ ಕೂಡ ಆ ದೇವಿಗೆ ನಮಸ್ಕರಿಸಿ ಹಿಂತಿರುಗಿ ತನ್ನ ಮನೆಗೆ ಹೋಗಿ ತನ್ನ ರಾಜ್ಯವನ್ನು ಪುನಃ ಪಡೆದನು. ಎಲೈ ವತ್ಸನಾದ ನಾರದನೇ ಈರೀತಿಯಾಗಿ ಅತ್ಯುತ್ತಮವಾದ ದುರ್ಗೋಪಾಖ್ಯಾನವನ್ನು ನಿನಗೆ ವಿವರಿಸಿದೆನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ದುರ್ಗಾದೇವಿಯು
ಸುರಥಮಹಾರಾಜನಿಗೆ ಜ್ಞಾನೋಪದೇಶಮಾಡಿದುದನ್ನು ತಿಳಿಸುವ
ಅರವತ್ತೈದನೆಯ ಅಧ್ಯಾಯವು ಮುಗಿದುದು.

## ಅರವತ್ತೈದನೆಯ ಅಧ್ಯಾಯದ ಸಾರಾಂಶವು

ದುರ್ಗಾದೇವಿಯನ್ನು ಆರ್ದ್ರಾನಕ್ಷತ್ರದವೇಧೆಯಿರುವ ಮೂಲಾನಕ್ಷತ್ರದಲ್ಲಿ ಆವಾಹನೆಮಾಡಿ ಶ್ರವಣನಕ್ಷತ್ರದಲ್ಲಿ ವಿಸರ್ಜನೆಮಾಡುವುದೊಂದು ಪಕ್ಷ, ಅಥವಾ ಈ ನಕ್ಷತ್ರಗಳಯೋಗವಿಲ್ಲದಿದ್ದರೂ ಶುಕ್ಲಪಕ್ಷದ ನವಮಿಯ ತಿಥಿಯಲ್ಲಿ ಆವಾಹನೆ ಮಾಡಿ ಹದಿನೈದುದಿನಗಳ ಪರ್ಯಂತ ಪೂಜಿಸಿ ಕೃಷ್ಣಪಕ್ಷದ ದಶಮಿಯ ದಿವಸ ವಿಸರ್ಜನೆಮಾಡುವುದು ಮತ್ತೊಂದು ಪಕ್ಷ. ದುರ್ಗಾರಾಧನೆಯಲ್ಲಿ ಪ್ರಾಣಿಬಲಿ ಯನ್ನು ಕೊಡುವುದರಿಂದ ಪಾಪವು ಸಂಘಟಿಸುವುದಿಲ್ಲ. ಆದಕಾರಣ ಸುರಥ ಮಹಾರಾಜನು ದುರ್ಗಾದೇವಿಯನ್ನು ವಿಧ್ಯುಕ್ತವಾಗಿ ಪೂಜಿಸಿ ಇಷ್ಟಾರ್ಥಸಿದ್ಧಿ ಯನ್ನು ಪಡೆದುದಲ್ಲದೆ ಕೊನೆಯಲ್ಲಿ ದಿವ್ಯಜ್ಞಾನೋಪದೇಶವನ್ನೂ ಹೊಂದಿ ಶ್ರೀಕೃಷ್ಣ ಭಕ್ತನಾದನು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಷಟ್‌ಷಷ್ಟಿತಮೋಽಧ್ಯಾಯಃ ||

|| ನಾರದ ಉವಾಚ ||

ಶ್ರುತಂ ಸರ್ವಂ ನಾವಶಿಷ್ಟಂ ಕಿಂಚಿದೇವ ಹಿ ನಿಶ್ಚಿತಂ ।
ಪ್ರಕೃತೇಃ ಕವಚಂ ಸ್ತೋತ್ರಂ ಬ್ರೂಹಿ ಮೇ ಮುನಿಸತ್ತಮ || ೧ ||

|| ನಾರಾಯಣ ಉವಾಚ ||

ಪುರಾ ಸ್ತುತಾ ಸಾ ಗೋಲೋಕೇ ಕೃಷ್ಣೇನ ಪರಮಾತ್ಮನಾ ।
ಸಂಪೂಜ್ಯ ಮಧುಮಾಸೇ ಚ ಸಂಪ್ರೀತೇ ರಾಸಮಂಡಲೇ ।
ಮಧುಕೈಟಭಯೋರ್ಯುದ್ಧೇ ದ್ವಿತೀಯೋ ವಿಷ್ಣುನಾ ಪುರಾ || ೨ ||

---

### ಅರವತ್ತಾರನೆಯ ಅಧ್ಯಾಯವು

೧. ನಾರದ:—ಎಲೈ ಮಹರ್ಷಿಯೇ, ನೀನು ಹೇಳಿದುದೆಲ್ಲವನ್ನೂ ಸ್ವಲ್ಪವೂ ಬಿಡದಂತೆ ಕೇಳಿ ಮನನಮಾಡಿದೆನು. ಈಗ ಪ್ರಕೃತಿದೇವಿಯ ಕವಚ ಮತ್ತು ಸ್ತೋತ್ರಗಳನ್ನು ನನಗೆ ವಿವರಿಸು.

೨. ನಾರಾಯಣ:—ಪೂರ್ವದಲ್ಲಿ ಶ್ರೀಕೃಷ್ಣಪರಮಾತ್ಮನು ವಸಂತಮಾಸದಲ್ಲಿ ಗೋಲೋಕದ ರಾಸಮಂಡಲದಲ್ಲಿ ಪ್ರಕೃತಿದೇವಿಯನ್ನು ಪೂಜಿಸಿ ಸ್ತುತಿಸಿದನು. ಅನಂತರ ಮಹಾ (ವಿರಾಟ್ಪುರುಷ) ವಿಷ್ಣುವು ಮಧುಕೈಟಭರೊಡನೆ ಯುದ್ಧ ಮಾಡಲು ಮುಂಚೆ ಆ ದೇವಿಯನ್ನು ಪೂಜಿಸಿದನು.

ತತ್ರೈವ ಕಾಲೇ ಸಾ ದುರ್ಗಾ ಬ್ರಹ್ಮಣಾ ಪ್ರಾಣಸಂಕಟೇ ।
ಚತುರ್ಥೇ ಸಂಸ್ತುತಾ ದೇವೀ ಭಕ್ತ್ಯಾ ಚ ತ್ರಿಪುರಾರಿಣಾ ॥ ೩ ॥

ಪುರಾ ತ್ರಿಪುರಯುದ್ಧೇ ಚ ಮಹಾಘೋರತರೇ ಮುನೇ ।
ಪಂಚಮೋ ಸಂಸ್ತುತಾ ದೇವೀ ವೃತ್ರಾಸುರವಧೇ ತಥಾ ॥ ೪ ॥

ಶಕ್ರೇಣ ಸರ್ವದೇವೈಶ್ಚ ಘೋರೇ ಚ ಪ್ರಾಣಸಂಕಟೇ ।
ತದಾ ಮುನೀಂದ್ರೈರ್ಮನುಭಿರ್ಮಾನವೈಃ ಸುರಥಾದಿಭಿಃ ॥ ೫ ॥

ಸಂಸ್ತುತಾ ಪೂಜಿತಾ ಸಾ ಚ ಕಲ್ಪೇ ಕಲ್ಪೇ ಪರಾತ್ಪರಾ ।
ಸ್ತೋತ್ರಂ ಚ ಶ್ರೂಯತಾಂ ಬ್ರಹ್ಮನ್ಸರ್ವವಿಘ್ನವಿನಾಶಕಂ ।
ಸುಖದಂ ಮೋಕ್ಷದಂ ಸಾರಂ ಭವಸಂತಾರಕಾರಣಂ ॥ ೬ ॥

---

೩. ಬ್ರಹ್ಮನೂ ಕೂಡ ವಸಂತಕಾಲದಲ್ಲಿ ತನ್ನ ಕಷ್ಟಪರಿಹಾರಕ್ಕಾಗಿ ದುರ್ಗಾ ದೇವಿಯನ್ನು ಪೂಜಿಸಿದನು. ನಾಲ್ಕನೆಯದಾಗಿ ತ್ರಿಪುರಾರಿಯಾದ ಈಶ್ವರನು ಅತ್ಯಂತ ಭಯಂಕರನಾದ ತ್ರಿಪುರಾಸುರನೊಡನೆ ಯುದ್ಧಮಾಡುವಾಗ ಆ ದೇವಿಯನ್ನು ಸ್ತುತಿಸಿದನು.

೪-೫. ಐದನೆಯದಾಗಿ ವೃತ್ರಾಸುರನ ಸಂಹಾರಕಾಲದಲ್ಲಿ ದೇವೇಂದ್ರನೂ, ಇತರ ದೇವತೆಗಳೂ ಆಕೆಯನ್ನು ಪೂಜಿಸಿದರು. ಅನಂತರ ಮುನಿಗಳೂ, ಮನುಗಳೂ, ಸುರಥನೇ ಮುಂತಾದ ಮನುಜರೂ ಕಷ್ಟಕಾಲದಲ್ಲಿ ದೇವಿಯನ್ನು ಪೂಜಿಸಲಾರಂಭಿಸಿದರು.

೬. ಅಲ್ಲಿಂದೀಚೆಗೆ ಪರಾತ್ಪರಳಾದ ಆ ದೇವಿಯನ್ನು ಎಲ್ಲರೂ ಪ್ರತಿ ಕಲ್ಪದಲ್ಲೂ ಸ್ತುತಿಸಿ ಪೂಜಿಸಲಾರಂಭಿಸಿದರು. ಎಲೈ ನಾರದನೇ, ಸಕಲವಿಘ್ನವಿನಾಶಕವೂ, ಸಂಸಾರಸಾಗರತಾರಕವೂ, ಮೋಕ್ಷಸುಖದಾಯಕವೂ, ಅತ್ಯಂತಸಾರವೂ ಆದ ಆ ದೇವಿಯ ಸ್ತೋತ್ರವನ್ನು ಹೇಳುವೆನು. ಕೇಳು.

॥ ಶ್ರೀಕೃಷ್ಣ ಉವಾಚ ॥

ತ್ವಮೇವ ಸರ್ವಜನನೀ ಮೂಲಪ್ರಕೃತಿರೀಶ್ವರೀ ।
ತ್ವಮೇವಾದ್ಯಾ ಸೃಷ್ಟಿವಿಧೌ ಸ್ವೇಚ್ಛಯಾ ತ್ರಿಗುಣಾತ್ಮಿಕಾ ॥ ೭ ॥

ಕಾರ್ಯಾರ್ಥೇ ಸಗುಣಾ ತ್ವಂ ಚ ವಸ್ತುತೋ ನಿರ್ಗುಣಾ ಸ್ವಯಂ ।
ಪರಬ್ರಹ್ಮಸ್ವರೂಪಾ ತ್ವಂ ಸತ್ಯಾ ನಿತ್ಯಾ ಸನಾತನೀ ॥ ೮ ॥

ತೇಜಃಸ್ವರೂಪಾ ಪರಮಾ ಭಕ್ತಾನುಗ್ರಹವಿಗ್ರಹಾ ।
ಸರ್ವಸ್ವರೂಪಾ ಸರ್ವೇಶಾ ಸರ್ವಾಧಾರಾ ಪರಾತ್ಪರಾ ॥ ೯ ॥

ಸರ್ವಬೀಜಸ್ವರೂಪಾ ಚ ಸರ್ವಪೂಜ್ಯಾ ನಿರಾಶ್ರಯಾ ।
ಸರ್ವಜ್ಞಾ ಸರ್ವತೋ ಭದ್ರಾ ಸರ್ವಮಂಗಲಮಂಗಲಾ ॥ ೧೦ ॥

ಸರ್ವಬುದ್ಧಿಸ್ವರೂಪಾ ಚ ಸರ್ವಶಕ್ತಿಸ್ವರೂಪಿಣೀ ।
ಸರ್ವಜ್ಞಾನಪ್ರದಾ ದೇವೀ ಸರ್ವಜ್ಞಾ ಸರ್ವಭಾವಿನೀ ॥ ೧೧ ॥

---

೭. ಶ್ರೀಕೃಷ್ಣ:—ಎಲೈ ದುರ್ಗಾದೇವಿಯೇ, ನಿಖಿಲಲೋಕಜನನಿಯೂ, ಮೂಲಪ್ರಕೃತಿಯೂ ಆದ ನೀನು ಸೃಷ್ಟಿಗೆ ಮೂಲಕಾರಣಳಾಗಿ ಸ್ವೇಚ್ಛಾಮಯಳಾದುದರಿಂದ ತ್ರಿಗುಣಾತ್ಮಕಳಾಗಿರುವೆ.

೮. ಕಾರ್ಯಾರ್ಥವಾಗಿ ತ್ರಿಗುಣಾತ್ಮಕಳಾಗುವ ನೀನು ತತ್ವತಃ ನಿರ್ಗುಣಳೂ ಪರಬ್ರಹ್ಮಸ್ವರೂಪಿಣಿಯೂ, ಸತ್ಯಸ್ವರೂಪಳೂ, ಸನಾತನಿಯೂ ಆಗಿರುವೆ.

೯. ಪರಮತೇಜೋರೂಪಿಣಿಯಾದ ನೀನು ಭಕ್ತಾನುಗ್ರಹಕ್ಕಾಗಿ ಶರೀರ ಧಾರಣೆಮಾಡುವುದರಿಂದ ಸರ್ವಸ್ವರೂಪಳೂ. ಸರ್ವಾಧಾರಳೂ, ಪರಾತ್ಪರಳೂ ಎನಿಸಿರುವೆ.

೧೦. ಸರ್ವಬೀಜಸ್ವರೂಪಳೂ, ಸರ್ವಪೂಜ್ಯಳೂ, ಸ್ವತಂತ್ರಳೂ ಆದ ನೀನು ಸರ್ವಜ್ಞಳೂ, ಮಂಗಳಕ್ಕೆಲ್ಲ ಮಂಗಳರೂಪಿಣಿಯೂ ಆಗಿರುವೆ.

೧೧. ಸಕಲರ ಬುದ್ಧಿ ಮತ್ತು ಶಕ್ತಿಸ್ವರೂಪಿಣಿಯೂ, ಸರ್ವಜ್ಞಳೂ. ಸಕಲರಿಗೂ ಜ್ಞಾನದಾತಳೂ ಆದ ನೀನು ಸರ್ವಾತ್ಮಕಳಾಗಿರುವೆ.

ತ್ವಂ ಸ್ವಾಹಾ ದೇವದಾನೇ ಚ ಪಿತೃದಾನೇ ಸ್ವಧಾ ಸ್ವಯಂ ।
ದಕ್ಷಿಣಾ ಸರ್ವದಾನೇ ಚ ಸರ್ವಶಕ್ತಿಸ್ವರೂಪಿಣೀ ॥ ೧೨ ॥

ನಿದ್ರಾ ತ್ವಂ ಚ ದಯಾ ತ್ವಂ ಚ ತೃಷ್ಣಾ ತ್ವಂ ಚಾತ್ಮನಃ ಪ್ರಿಯಾ ।
ಕ್ಷುತ್ಕ್ಷಾಂತಿಃ ಶಾಂತಿರೀಶಾ ಚ ಕಾಂತಿಃ ಸೃಷ್ಟಿಶ್ಚ ಶಾಶ್ವತೀ ॥ ೧೩ ॥

ಶ್ರದ್ಧಾ ಪುಷ್ಟಿಶ್ಚ ತಂದ್ರಾ ಚ ಲಜ್ಜಾ ಶೋಭಾ ದಯಾ ತಥಾ ।
ಸತಾಂ ಸಂಪತ್ಸ್ವರೂಪಾ ಶ್ರೀರ್ವಿಪತ್ತಿರಸತಾಮಿಹ ॥ ೧೪ ॥

ಪ್ರೀತಿರೂಪಾ ಪುಣ್ಯವತಾಂ ಪಾಪಿನಾಂ ಕಲಹಾಂಕುರಾ ।
ಶಶ್ವತ್ಕರ್ಮಮಯೀ ಶಕ್ತಿಃ ಸರ್ವದಾ ಸರ್ವಜೀವಿನಾಂ ॥ ೧೫ ॥

ದೇವೇಭ್ಯಃ ಸ್ವಪದೋದಾತ್ರೀ ಧಾತುರ್ಧಾತ್ರೀ ಕೃಪಾಮಯೀ ।
ಹಿತಾಯ ಸರ್ವದೇವಾನಾಂ ಸರ್ವಾಸುರವಿನಾಶಿನೀ ॥ ೧೬ ॥

---

೧೨. ದೇವತೆಗಳಿಗೆ ದಾನಕೊಡುವಾಗ ಸ್ವಾಹಾಯೆಂದೂ, ಪಿತೃಗಳಿಗೆ ದಾನ ಕೊಡುವಾಗ ಸ್ವಧಾಯೆಂದೂ, ಇತರ ಎಲ್ಲ ದಾನಗಳನ್ನೂ ಕೊಡುವಾಗ ದಕ್ಷಿಣಾ ಎಂದೂ ಹೆಸರಾಂತ ನೀನು ಸರ್ವಶಕ್ತಿಸ್ವರೂಪಿಣಿಯಾಗಿರುವೆ

೧೩-೧೪. ಆತ್ಮನಿಗೆ ಪ್ರಿಯಳಾದ ನೀನು ನಿದ್ರೆ, ದಯೆ, ತೃಷ್ಣೆ (ಬಾಯಾರಿಕೆ) ಕ್ಷುತ್ (ಹಸಿವು) ಕ್ಷಾಂತಿ, ಶಾಂತಿ, ಸೃಷ್ಟಿ, ಶಾಶ್ವತಿ, ಶ್ರದ್ಧಾ, ಪುಷ್ಟಿ, ತಂದ್ರಾ (ಮಂಕುತನ), ಲಜ್ಜೆ (ನಾಚಿಕೆ), ಶೋಭಾ ಮುಂತಾದ ಸಕಲ ಶಕ್ತಿಸ್ವರೂಪ ಳಾಗಿರುವೆ. ಸತ್ಪುರುಷರಿಗೆ ಸಂಪಲ್ಲಕ್ಷ್ಮಿಯೂ, ದುಷ್ಟರಿಗೆ ದರಿದ್ರಲಕ್ಷ್ಮಿಯೂ ನೀನೇ ಆಗಿರುವೆ.

೧೫. ಪುಣ್ಯವಂತರಿಗೆ ಪ್ರೀತಿರೂಪಳೂ, ಪಾಪಿಗಳಿಗೆ ಕಲಹರೂಪಿಣಿಯೂ ಆದ ನೀನು ಯಾವಾಗಲೂ ಸಕಲಜೀವಿಗಳಿಗೂ ಕರ್ಮಶಕ್ತಿಸ್ವರೂಪಿಣಿಯಾಗಿರುವೆ.

೧೬. ಬ್ರಹ್ಮನ ಮಾತೆಯೂ, ದೇವತೆಗಳಿಗೆ ಇಂದ್ರಾದಿಪದವಿಯನ್ನು ಕೊಡುವವಳೂ ಆದ ನೀನು ಸಕಲ ದೇವತೆಗಳ ಹಿತಕ್ಕಾಗಿ ಎಲ್ಲ ರಾಕ್ಷಸರನ್ನೂ ನಾಶಗೊಳಿಸಿದೆ.

ಯೋಗನಿದ್ರಾ ಯೋಗರೂಪಾ ಯೋಗದಾತ್ರೀ ಚ ಯೋಗಿನಾಂ ।
ಸಿದ್ಧಿಸ್ವರೂಪಾ ಸಿದ್ಧಾನಾಂ ಸಿದ್ಧಿದಾ ಸಿದ್ಧಯೋಗಿನೀ ॥ ೧೭ ॥

ಬ್ರಹ್ಮಾಣೀ ಮಾಹೇಶ್ವರೀ ಚ ವಿಷ್ಣುಮಾಯಾ ಚ ವೈಷ್ಣವೀ ।
ಭದ್ರದಾ ಭದ್ರಕಾಲೀ ಚ ಸರ್ವಲೋಕಭಯಂಕರೀ ॥ ೧೮ ॥

ಗ್ರಾಮೇ ಗ್ರಾಮೇ ಗ್ರಾಮದೇವೀ ಗೃಹದೇವೀ ಗೃಹೇಗೃಹೇ ।
ಸತಾಂ ಕೀರ್ತಿಃ ಪ್ರತಿಷ್ಠಾ ಚ ನಿಂದಾತ್ವಮಸತಾಂ ಸದಾ ॥ ೧೯ ॥

ಮಹಾಯುದ್ಧೇ ಮಹಾಮಾರೀ ದುಷ್ಟಸಂಹಾರರೂಪಿಣೀ ।
ರಕ್ಷಾಸ್ವರೂಪಾ ಶಿಷ್ಟಾನಾಂ ಮಾತೇವ ಹಿತಕಾರಿಣೀ ॥ ೨೦ ॥

ವಂದ್ಯಾ ಪೂಜ್ಯಾ ಸ್ತುತಾ ತ್ವಂ ಚ ಬ್ರಹ್ಮಾದೀನಾಂ ಚ ಸರ್ವದಾ ।
ಬ್ರಹ್ಮಣ್ಯರೂಪಾ ವಿಪ್ರಾಣಾಂ ತಪಸ್ಯಾ ಚ ತಪಸ್ವಿನಾಂ ॥ ೨೧ ॥

---

೧೭. ಯೋಗರೂಪಳಾದ ನೀನು ಯೋಗಿಗಳಿಗೆ, ಯೋಗ ಮತ್ತು ಯೋಗ ನಿದ್ರೆಯನ್ನು ಕೊಡುವವಳೂ, ಸಿದ್ಧಯೋಗಿನಿಯಾದ ನೀನು ಸಿದ್ಧಪುರುಷರಿಗೆ ಸಿದ್ಧಿ ಸ್ವರೂಪಳೂ ಸಿದ್ಧಿದಾಯಕಳೂ ಆಗಿರುವೆ.

೧೮. ಬ್ರಹ್ಮಶಕ್ತಿರೂಪಿಣಿಯೂ, ಮಾಹೇಶ್ವರಿಯೂ, ವಿಷ್ಣುಮಾಯೆಯೂ, ವೈಷ್ಣವಿಯೂ ಆದ ನೀನು ಎಲ್ಲರಿಗೂ ಭದ್ರ (ಮಂಗಳ)ದಾಯಕಳಾಗಿದ್ದರೂ ಭದ್ರ ಕಾಳಿಯೆಂಬ ಹೆಸರಿನಿಂದ ಸರ್ವಲೋಕಭಯಂಕರಳಾಗಿರುವೆ.

೧೯. ಪ್ರತಿಗ್ರಾಮದಲ್ಲೂ ಗ್ರಾಮದೇವತೆಯಾಗಿಯೂ, ಪ್ರತಿ ಗೃಹದಲ್ಲೂ ಗೃಹದೇವತೆಯಾಗಿಯೂ, ಇರುವ ನೀನು ಸತ್ಪುರುಷರಿಗೆ ಕೀರ್ತಿ ಮತ್ತು ಪ್ರತಿಷ್ಠೆ ಗಳನ್ನು ಕೊಟ್ಟು ದುಷ್ಟರಿಗೆ ನಿಂದಾದಾಯಕಳಾಗಿರುವೆ.

೨೦. ಮಹಾ ಯುದ್ಧದಲ್ಲಿ ದುಷ್ಟ ಸಂಹಾರಕಳಾಗಿ ಮಹಾಮಾರಿಯೆನಿಸುವೆ. ಶಿಷ್ಟರಿಗೆ ತಾಯಿಯಂತೆ ಹಿತಮಾಡುವವಳೂ ರಕ್ಷಣೆ ಕೊಡುವವಳೂ ಆಗಿರುವೆ.

೨೧. ನೀನು ಬ್ರಹ್ಮಾದಿ ಸಕಲ ದೇವತೆಗಳಿಗೂ, ವಂದ್ಯಳೂ, ಪೂಜ್ಯಳೂ ಆಗಿ ಅವರ ಸ್ತುತಿಗೆ ಪಾತ್ರಳಾಗುವೆ. ಬ್ರಾಹ್ಮಣರಿಗೆ ಬ್ರಹ್ಮತೇಜೋರೂಪಿಣಿಯೂ, ತಪಸ್ವಿಗಳಿಗೆ ತಪಃಶಕ್ತಿಸ್ವರೂಪಿಣಿಯೂ ಆಗಿರುವೆ.

**ವಿದ್ಯಾ ವಿದ್ಯಾವತಾಂ ತ್ವಂ ಚ ಬುದ್ಧಿರ್ಬುದ್ಧಿಮತಾಂ ಸತಾಂ ।**
**ಮೇಧಾಸ್ಮೃತಿಸ್ವರೂಪಾ ಚ ಪ್ರತಿಭಾ ಪ್ರತಿಭಾವತಾಂ ॥ ೨೨ ॥**

**ರಾಜ್ಞಾಂ ಪ್ರತಾಪರೂಪಾ ಚ ವಿಶಾಂ ವಾಣಿಜ್ಯರೂಪಿಣೀ ।**
**ಸೃಷ್ಟೌ ಸೃಷ್ಟಿಸ್ವರೂಪಾ ತ್ವಂ ರಕ್ಷಾರೂಪಾ ಚ ಪಾಲನೇ ॥ ೨೩ ॥**

**ತಥಾಂತೇ ತ್ವಂ ಮಹಾಮಾರೀ ವಿಶ್ವೇ ವಿಶ್ವೈಶ್ಚ ಪೂಜಿತೇ ।**
**ಕಾಲರಾತ್ರಿರ್ಮಹಾರಾತ್ರಿರ್ಮೋಹರಾತ್ರಿಶ್ಚ ಮೋಹಿನೀ ॥ ೨೪ ॥**

**ದುರತ್ಯಯಾ ಮೇ ಮಾಯಾತ್ವಂ ಯಯಾ ಸಂಮೋಹಿತಂ ಜಗತ್ ।**
**ಯಯಾ ಮುಗ್ಧೋ ಹಿ ವಿದ್ವಾಂಶ್ಚ ಮೋಕ್ಷಮಾರ್ಗಂ ನ ಪಶ್ಯತಿ ॥ ೨೫ ॥**

---

೨೨. ನೀನು ವಿದ್ಯಾವಂತರಿಗೆ ವಿದ್ಯಾರೂಪಿಣಿಯೂ, ಬುದ್ಧಿವಂತರಿಗೆ ಬುದ್ಧಿಸ್ವರೂಪಿಣಿಯೂ, ಮೇಧಾವಿಗಳಿಗೆ ಸ್ಮೃತಿರೂಪಿಣಿಯೂ ಪ್ರತಿಭಾಶಾಲಿಗಳಿಗೆ ಪ್ರತಿಭಾರೂಪಿಣಿಯೂ ಆಗಿರುವೆ.

೨೩. ರಾಜರಿಗೆ ಪ್ರತಾಪರೂಪಿಣಿಯೂ, ವೈಶ್ಯರಿಗೆ ವ್ಯಾಪಾರಸ್ವರೂಪಿಣಿಯೂ ಆದ ನೀನು ಸೃಷ್ಟಿಕಾಲದಲ್ಲಿ ಸೃಷ್ಟಿರೂಪವನ್ನೂ, ಪಾಲನಕಾಲದಲ್ಲಿ ರಕ್ಷಾರೂಪವನ್ನೂ ಧರಿಸುವೆ.

೨೪. ಅಂತೆಯೇ, ಅಂತ್ಯಕಾಲದಲ್ಲಿ ಮಹಾಮಾರಿಸ್ವರೂಪಿಣಿಯಾಗಿ, ಎಲ್ಲರಿಂದಲೂ ಪೂಜೆಗೊಂಡು, ಪ್ರಳಯದಲ್ಲಿ ಕಾಳರಾತ್ರಿ, ಮಹಾರಾತ್ರಿ, ಮೋಹರಾತ್ರಿ ಮುಂತಾದ ಹೆಸರಿನಿಂದ ಮಾಯಾಮಯಳಾಗಿರುವೆ.

೨೫. ಮಾಯಾರೂಪಿಣಿಯಾದ ನಿನ್ನನ್ನು ಮೀರಲು ನನಗೂ ಸಾಧ್ಯವಿಲ್ಲ. (ಅಂದರೆ ಕಾರ್ಯರೂಪನಾದಾಗ ನಾನೂ ಮಾಯೆಗೆ ಸಿಲುಕಬೇಕು) ನಿನ್ನ ಮೋಹಪಾಶಕ್ಕೆ ನಿಖಿಲ ಜಗತ್ತೂ ಸಿಕ್ಕಿರುವುದು. ವಿದ್ವಾಂಸನೂ ಕೂಡ ಮಾಯೆಗೆ ಮರುಳಾಗಿ ಮೋಕ್ಷಮಾರ್ಗವನ್ನು ಕಾಣದಂತಾಗುವನು.

ಇತ್ಯಾತ್ಮನಾ ಕೃತಂ ಸ್ತೋತ್ರಂ ದುರ್ಗಾಯಾ ದುರ್ಗನಾಶನಂ ।
ಪೂಜಾಕಾಲೇ ಪಠೇದ್ಯೋ ಹಿ ಸಿದ್ಧಿರ್ಭವತಿ ವಾಂಛಿತಂ ॥ ೨೬ ॥

ವಂಧ್ಯಾ ಚ ಕಾಕವಂಧ್ಯಾ ಚ ಮೃತವತ್ಸಾ ಚ ದುರ್ಭಗಾ ।
ಶ್ರುತ್ವಾ ಸ್ತೋತ್ರಂ ವರ್ಷಮೇಕಂ ಸುಪುತ್ರಂ ಲಭತೇ ಧ್ರುವಂ ॥ ೨೭ ॥

ಕಾರಾಗಾರಂ ಮಹಾಘೋರೇ ಯೋ ಬದ್ಧೋ ದೃಢಬಂಧನೇ ।
ಶ್ರುತ್ವಾ ಸ್ತೋತ್ರಂ ಮಾಸಮೇಕಂ ಬಂಧನಾನ್ಮುಚ್ಯತೇ ಧ್ರುವಂ ॥ ೨೮ ॥

ಯಕ್ಷ್ಮಗ್ರಸ್ತೋ ಗಲತ್ಕುಷ್ಠೀ ಮಹಾಶೂಲೀ ಮಹಾಜ್ವರೀ ।
ಶ್ರುತ್ವಾ ಸ್ತೋತ್ರಂ ವರ್ಷಮೇಕಂ ಸದ್ಯೋ ರೋಗಾತ್ಪ್ರಮುಚ್ಯತೇ ॥ ೨೯ ॥

---

೨೬. ಮೇಲೆ ಹೇಳಿದ ಕ್ರಮದಲ್ಲಿ ಶ್ರೀಕೃಷ್ಣಪರಮಾತ್ಮನು ಮಾಡಿದ, ವಿಘ್ನನಾಶಕವಾದ ದುರ್ಗಾಸ್ತೋತ್ರವನ್ನು ಪೂಜಾಕಾಲದಲ್ಲಿ ಪಠಿಸುವವನಿಗೆ ಇಷ್ಟಾರ್ಥಸಿದ್ಧಿಯು ಲಭಿಸುವುದು.

೨೭. ಬಂಜೆಯಾದವಳು, ಏಕಮಾತ್ರಪುತ್ರಳು, ಮೃತವತ್ಸಳು ಮತ್ತು ಪತಿಯ ಪ್ರೀತಿಗೆ ಪಾತ್ರಳಾಗದವಳೂ ಈ ನಾಲ್ವರೂ ಈ ಸ್ತೋತ್ರವನ್ನು ಒಂದು ವರ್ಷಕಾಲ ಕೇಳುವುದರಿಂದ ಸತ್ಪುತ್ರರನ್ನು ಖಂಡಿತವಾಗಿ ಪಡೆಯುವರು.

೨೮. ಭಯಂಕರವಾದ ಬಂದೀಖಾನೆಯಲ್ಲಿ ಬಲವಾದ ಬಂಧನಕ್ಕೆ ಸಿಲುಕಿರುವವನು ಒಂದು ತಿಂಗಳು ಈ ಸ್ತೋತ್ರವನ್ನು ಕೇಳುವುದರಿಂದ ಖಂಡಿತವಾಗಿಯೂ ಬಂಧಮುಕ್ತನಾಗುವನು.

೨೯. ಕ್ಷಯ, ಕುಷ್ಠ, ಶೂಲೆ ಮತ್ತು ಮಹಾಜ್ವರ ಮುಂತಾದ ರೋಗವುಳ್ಳವರು ಈ ಸ್ತೋತ್ರವನ್ನು ಒಂದು ವರ್ಷ ಕೇಳಿ ನಂತರ ನೀರೋಗಿಗಳಾಗುವರು. (ಆರೋಗದೃಢಕಾಯ)

ಪುತ್ರಭೇದೇ ಪ್ರಜಾಭೇದೇ ಪತ್ನೀಭೇದೇ ಚ ದುರ್ಗತಃ ।
ಶ್ರುತ್ವಾ ಸ್ತೋತ್ರಂ ಮಾಸಮೇಕಂ ಲಭತೇ ನಾತ್ರ ಸಂಶಯಃ ॥ ೩೦ ॥

ರಾಜದ್ವಾರೇ ಶ್ಮಶಾನೇ ಚ ಮಹಾರಣ್ಯೇ ರಣಸ್ಥಲೇ ।
ಹಿಂಸ್ರಜಂತುಸಮೀಪೇ ಚ ಶ್ರುತ್ವಾ ಸ್ತೋತ್ರಂ ಪ್ರಮುಚ್ಯತೇ ॥ ೩೧ ॥

ಗೃಹದಾಹೇ ಚ ದಾವಾಗ್ನೌ ದಸ್ಯುಸೈನ್ಯಸಮನ್ವಿತೇ ।
ಸ್ತೋತ್ರಶ್ರವಣಮಾತ್ರೇಣ ಲಭತೇ ನಾತ್ರ ಸಂಶಯಃ ॥ ೩೨ ॥

ಮಹಾದರಿದ್ರೋ ಮೂರ್ಖಶ್ಚ ವರ್ಷಂ ಸ್ತೋತ್ರಂ ಪಠೇತ್ತು ಯಃ ।
ವಿದ್ಯಾವಾನ್ಧನವಾಂಶ್ಚೈವ ಸ ಭವೇನ್ನಾತ್ರ ಸಂಶಯಃ ॥ ೩೩ ॥

**ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ದ್ವಿತೀಯೇ ಪ್ರಕೃತಿಖಂಡೇ ನಾರದನಾರಾಯಣಸಂವಾದೇ ದುರ್ಗೋಪಾಖ್ಯಾನೇ ದುರ್ಗಾ-ಸ್ತೋತ್ರಂ ನಾಮ ಷಟ್‌ಷಷ್ಠಿತಮೋಽಧ್ಯಾಯಃ**

---

೩೦. ಪತ್ನೀಪುತ್ರ ವಿರಹದಲ್ಲಾಗಲೀ, ಪ್ರಜಾವಿರಹದಲ್ಲಾಗಲೀ ಮನುಜನು ಈ ಸ್ತೋತ್ರವನ್ನು ಒಂದು ತಿಂಗಳು ಮಾತ್ರ ಕೇಳಿ ಅವರ ಸಂಯೋಗವನ್ನು ಪುನಃ ಪಡೆಯುವುದರಲ್ಲಿ ಸಂದೇಹವಿಲ್ಲ.

೩೧. ರಾಜದ್ವಾರದಲ್ಲಾಗಲೀ, ಸ್ಮಶಾನದಲ್ಲಾಗಲೀ, ಗೊಂಡಾರಣ್ಯದಲ್ಲಾಗಲೀ, ಯುದ್ಧರಂಗದಲ್ಲಾಗಲೀ, ದುಷ್ಟಪ್ರಾಣಿಗಳ ಸಮೂಹದಲ್ಲಾಗಲೀ, ಮನುಜನು ಸಿಕ್ಕಿರುವಾಗ ಈ ಸ್ತೋತ್ರವನ್ನು ಪಠಿಸಿದರೆ ಕಷ್ಟದಿಂದ ಪಾರಾಗುವನು.

೩೨. ಮನೆಗೆ ಬೆಂಕಿ ಹತ್ತಿಕೊಂಡಿರುವಾಗಲೂ ಕಾಡುಕಿಚ್ಚಿನ ಮಧ್ಯೆ ಸಿಲುಕಿರುವಾಗಲೂ, ಕಳ್ಳರ ಮತ್ತು ಸೈನ್ಯದ ನಡುವೆ ಸಿಕ್ಕಿದಾಗಲೂ, ಈ ಸ್ತೋತ್ರವನ್ನು ಕೇಳಿದ ಮಾತ್ರದಿಂದ ಮನುಜನು ಮುಕ್ತನಾಗುವನು.

೩೩. ಬಟ್ಟದರಿದ್ರನೂ, ಅತಿ ಮೂರ್ಖನೂ ಈ ಸ್ತೋತ್ರವನ್ನು ಒಂದು ವರ್ಷ ಪಠನಮಾಡುವುದರಿಂದ ಐಶ್ವರ್ಯವಂತನೂ, ವಿದ್ಯಾವಂತನೂ ಆಗುವುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತ ಮಹಾಪುರಾಣದ ಪ್ರಕೃತಿಖಂಡದಲ್ಲಿ ದುರ್ಗಾ ಸ್ತೋತ್ರವನ್ನು ತಿಳಿಸುವ ಅರವತ್ತಾರನೆಯ ಅಧ್ಯಾಯವು ಮುಗಿದುದು.

## ಅರವತ್ತಾರನೆಯ ಅಧ್ಯಾಯದ ಸಾರಾಂಶವು

ಶ್ರೀ ಕೃಷ್ಣನೇ ಮೊದಲಾದ ಸಕಲ ದೇವತೆಗಳೂ, ಮನುಮಾನವರೂ ದುರ್ಗಾ ದೇವಿಯನ್ನಾರಾಧಿಸಿ ತಮ್ಮ ತಮ್ಮ ಕಷ್ಟದಿಂದ ಪಾರಾಗಿರುವರು. ಅಂದ ಮೇಲೆ ದುರ್ಗಾದೇವಿಯ ಮಹಿಮೆಯು ಅಪಾರವಾದುದು. ಈ ಅಧ್ಯಾಯದಲ್ಲಿ ಉಕ್ತವಾಗಿರುವ ದುರ್ಗಾ ಸ್ತೋತ್ರವನ್ನು ಭಕ್ತಿಯಿಂದ ಪಠಿಸುವವರೂ ಬಂಧನದಿಂದ ಮುಕ್ತರಾಗಿ ಇಷ್ಟಾರ್ಥವನ್ನು ಪಡೆಯುವರು.

|| ಓಂ ||

—|| ಶ್ರೀ ಗಣೇಶಾಯ ನಮಃ ||—

# ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

## ಪ್ರಕೃತಿಖಂಡೇ

---

### || ಸಪ್ತಷಷ್ಟಿತಮೋಽಧ್ಯಾಯಃ ||

|| ನಾರದ ಉವಾಚ ||

ಭಗವನ್ಸರ್ವಧರ್ಮಜ್ಞ ಸರ್ವಜ್ಞಾನವಿಶಾರದ ।
ಬ್ರಹ್ಮಾಂಡಮೋಹನಂ ನಾಮ ಪ್ರಕೃತೇಃ ಕವಚಂ ವದ || ೧ ||

|| ನಾರಾಯಣ ಉವಾಚ ||

ಶ್ರುಣು ವಕ್ಷ್ಯಾಮಿ ಹೇ ವತ್ಸ ಕವಚಂ ಚ ಸುದುರ್ಲಭಂ ।
ಶ್ರೀಕೃಷ್ಣೇನೈವ ಕಥಿತಂ ಕೃಪಯಾ ಬ್ರಹ್ಮಣೇ ಪುರಾ || ೨ ||

---

### ಅರವತ್ತೇಳನೆಯ ಅಧ್ಯಾಯವು

೧. ನಾರದ :—ಸರ್ವಜ್ಞನೂ, ಸರ್ವಧರ್ಮವಿಶಾರದನೂ ಆದ ಎಲೈ ಮಹರ್ಷಿಯೇ, ನಿಖಿಲಬ್ರಹ್ಮಾಂಡವನ್ನೂ ಮೋಹಗೊಳಿಸುವ ಪ್ರಕೃತಿಕವಚವನ್ನು ನನಗೆ ತಿಳಿಯಹೇಳು.

೨. ನಾರಾಯಣ :—ವತ್ಸನಾರದನೇ, ಹೇಳುವೆನು ಕೇಳು. ಪೂರ್ವದಲ್ಲಿ ದಯಾಮಯನಾದ ಶ್ರೀಕೃಷ್ಣನು ಈ ಕವಚವನ್ನು ಬ್ರಹ್ಮನಿಗೆ ಉಪದೇಶಿಸಿದನು.

ಬ್ರಹ್ಮಣಾ ಕಥಿತಂ ಪೂರ್ವಂ ಧರ್ಮಾರ್ಥಂ ಜಾಹ್ನವೀತಟೇ ।
ಧರ್ಮೇಣ ದತ್ತಂ ಮಹ್ಯಂ ಚ ಕೃಪಯಾ ಪುಷ್ಕರೇ ಪ್ರಭುಃ ॥ ೩ ॥

ತ್ರಿಪುರಾರಿಶ್ಚ ಯದ್ಧೃತ್ವಾ ಮಧುಕೈಟಭಯೋರ್ಭಯಂ ।
ಜಘಾನ ರಕ್ತಬೀಜಂ ತಂ ಯದ್ಧೃತ್ವಾ ಭದ್ರಕಾಲಿಕಾ ॥ ೪ ॥

ಯದ್ಧೃತ್ವಾ ತು ಮಹೇಂದ್ರಶ್ಚ ಸಂಪ್ರಾಪ ಕಮಲಾಲಯಾಂ ।
ಯದ್ಧೃತ್ವಾ ಚ ಮಹಾಕಾಲಶ್ಚಿರಜೀವೀ ಚ ಧಾರ್ಮಿಕಃ ॥ ೫ ॥

ಯದ್ಧೃತ್ವಾ ಚ ಮಹಾಜ್ಞಾನೀ ನಂದೀ ಸಾನಂದಪೂರ್ವಕಂ ।
ಯದ್ಧೃತ್ವಾ ಚ ಮಹಾಯೋದ್ಧಾ ರಾಮಃ ಶತ್ರುಭಯಂಕರಃ ॥ ೬ ॥

ಯದ್ಧೃತ್ವಾ ಶಿವತುಲ್ಯಶ್ಚ ದುರ್ವಾಸಾ ಜ್ಞಾನಿನಾಂ ವರಃ ।
ಓಂ ದುರ್ಗೇತಿ ಚತುರ್ಥ್ಯಂತಂ ಸ್ವಾಹಾಂತೋ ಮೇ ಶಿರೋಽವತು ॥ ೭ ॥

---

೩. ಇದನ್ನು ಬ್ರಹ್ಮದೇವನು ಗಂಗಾತೀರದಲ್ಲಿ ಧರ್ಮದೇವನಿಗೂ, ಧರ್ಮದೇವನು ಪುಷ್ಕರಕ್ಷೇತ್ರದಲ್ಲಿ ನನಗೂ ದಯೆಯಿಂದ ಉಪದೇಶಮಾಡಿದರು.

೪. ಪೂರ್ವದಲ್ಲಿ ಪರಶಿವನು ಈ ಕವಚಧಾರಣೆಯ ಮಹಿಮೆಯಿಂದಲೇ ತ್ರಿಪುರಾಸುರನನ್ನು ಸಂಹರಿಸಿ ತ್ರಿಪುರಾರಿಯೆನಿಸಿಕೊಂಡನು. ಬ್ರಹ್ಮದೇವನು ಮಧುಕೈಟಭರಿಂದ ನಿರ್ಭೀತನಾದುದೂ, ಭದ್ರಕಾಳಿಯು ರಕ್ತಬೀಜಾಸುರನನ್ನು ಸಂಹರಿಸಿದುದೂ ಈ ಕವಚಧಾರಣೆಯ ಮಹಿಮೆಯಿಂದಲೇ.

೫-೬. ಮಹೇಂದ್ರನು ಕಳೆದುಹೋದ ರಾಜ್ಯಲಕ್ಷ್ಮಿಯನ್ನು ಪಡೆದುದೂ, ಮಹಾಕಾಲನು ಧರ್ಮಿಷ್ಠ ಮತ್ತು ಚಿರಂಜೀವಿಯೆನಿಸಿದುದೂ, ನಂದಿಯು ಮಹಾಜ್ಞಾನಿಯೆನಿಸಿ ಆನಂದದಿರುವುದೂ, ರಾಮನು ಮಹಾರಥಿಕ ಮತ್ತು ಶತ್ರುಭಯಂಕರನೆನಿಸಿದುದೂ ಈ ಕವಚಧಾರಣಾಮಹಿಮೆಯಿಂದಲೇ.

೭. ಈ ಕವಚಧಾರಣೆಯಿಂದ ದೂರ್ವಾಸಋಷಿಯು ಈಶ್ವರನಿಗೆ ಸದೃಶನೂ ಜ್ಞಾನಿಗಳಲ್ಲಿ ಶ್ರೇಷ್ಠನೂ ಎನಿಸಿದನು.

ಮಂತ್ರಃ ಷಡಕ್ಷರೋಽಯಂ ಚ ಭಕ್ತಾನಾಂ ಕಲ್ಪಪಾದಪಃ ।
ವಿಚಾರೋ ನಾಸ್ತಿ ವೇದೇಷು ಗ್ರಹಣೇ ಚ ಮನೋರ್ಮುನೇ ॥ ೮ ॥

ಮಂತ್ರಗ್ರಹಣಮಾತ್ರೇಣ ಶಿವತುಲ್ಯೋ ಭವೇನ್ನರಃ ।
ಮಮ ವಕ್ತ್ರಂ ಸದಾ ಪಾತು ಚೋಂ ದುರ್ಗಾಯೈ ನಮೋಽನ್ತತಃ ॥ ೯ ॥

ಓಂ ದುರ್ಗೇ ರಕ್ಷ ಇತಿ ಚ ಕಂಠಂ ಪಾತು ಸದಾ ಮಮ ।
ಓಂ ಹ್ರೀಂ ಶ್ರೀಮಿತಿಮಂತ್ರೋಽಯಂ ಸ್ಕಂಧಂ ಪಾತು ನಿರಂತರಂ ॥ ೧೦ ॥

ಓಂ ಹ್ರೀಂ ಶ್ರೀಂ ಕ್ಲೀಮಿತಿ ಪೃಷ್ಠಂ ಪಾತು ಮೇ ಸರ್ವತಃ ಸದಾ ।
ಹ್ರೀಂ ಮೇ ವಕ್ಷಃಸ್ಥಲಂ ಪಾತು ಹಸ್ತಂ ಶ್ರೀಮಿತಿ ಸಂತತಂ ॥ ೧೧ ॥

ಓಂ ಹ್ರೀಂ ಶ್ರೀಂ ಕ್ಲೀಂ ಪಾತು ಸರ್ವಾಂಗಂ ಸ್ವಪ್ನೇ ಜಾಗರಣೇ ತಥಾ ।
ಪ್ರಾಚ್ಯಾಂ ಮಾಂ ಪ್ರಕೃತಿಃ ಪಾತು ಪಾತು ವಹ್ನೌ ಚ ಚಂಡಿಕಾ ॥ ೧೨ ॥

---

೮. 'ಓಂ ದುರ್ಗಾಯ ಸ್ವಾಹಾ' ಎಂಬ ಆರಕ್ಷರದ ಮಂತ್ರವು ಕಲ್ಪವೃಕ್ಷದಂತೆ ಭಕ್ತರ ಇಷ್ಟಾರ್ಥದಾಯಕವಾಗಿದೆ. ಈ ಮಂತ್ರೋಪದೇಶವನ್ನು ಸ್ವೀಕರಿಸುವ ವಿಷಯದಲ್ಲಿ ಯಾರೂ ಏನೂ ಯೋಚಿಸಬೇಕಾದ್ದಿಲ್ಲವೆಂದು ವೇದೋಕ್ತವಾಗಿದೆ.

೯. ಈ ಮಂತ್ರೋಪದೇಶವನ್ನು ಸ್ವೀಕರಿಸಿದ ಮಾತ್ರದಿಂದಲೇ ಮನುಜನು ವಿಷ್ಣುಸದೃಶನಾಗುವನು.

೧೦. ಕವಚನ್ಯಾಸವಿಧಿ:—'ಓಂ ದುರ್ಗಾಯೈ ನಮಃ' ಈ ಮಂತ್ರವು ನನ್ನ ಮುಖವನ್ನು ಸರ್ವದಾ ಕಾಪಾಡಲಿ. 'ಓಂ ದುರ್ಗೇ ರಕ್ಷ' ಎಂಬ ಮಂತ್ರವು ನನ್ನ ಕಂಠವನ್ನು ಸರ್ವದಾ ಕಾಪಾಡಲಿ. 'ಓಂ ಹ್ರೀಂ ಶ್ರೀಂ ದುರ್ಗಾಯೈ ನಮಃ' ಎಂಬ ಈ ಮಂತ್ರವು ನನ್ನ ಹೆಗಲುಗಳನ್ನು ಸರ್ವದಾ ಕಾಪಾಡಲಿ.

೧೧–೧೨. 'ಓಂ ಹ್ರೀಂ ಶ್ರೀಂ ಕ್ಲೀಂ ದುರ್ಗಾಯೈ ನಮಃ' ಎಂಬ ಮಂತ್ರವು ನನ್ನ ಬೆನ್ನುಭಾಗವನ್ನೂ, 'ಹ್ರೀಂ ದುರ್ಗಾಯೈ ನಮಃ' ಎಂಬುದು ಉರಃ ಪ್ರದೇಶವನ್ನೂ, 'ಶ್ರೀಂ ದುರ್ಗಾಯೈ ನಮಃ' ಎಂಬುದು ಕೈಗಳನ್ನೂ, 'ಓಂ ಶ್ರೀಂ ಹ್ರೀಂ ಕ್ಲೀಂ ದುರ್ಗಾಯೈ ನಮಃ' ಎಂಬುದು ಸರ್ವಾಂಗಗಳನ್ನೂ ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲೂ ಕಾಪಾಡಲಿ.

ದಕ್ಷಿಣೇ ಭದ್ರಕಾಲೀ ಚ ನೈರ್ಋತ್ಯಾಂ ಚ ಮಹೇಶ್ವರೀ ।
ವಾರುಣ್ಯಾಂ ಪಾತು ವಾರಾಹೀ ವಾಯವ್ಯಾಂ ಸರ್ವಮಂಗಲಾ ॥ ೧೩ ॥

ಉತ್ತರೇ ವೈಷ್ಣವೀ ಪಾತು ತಥೈಶಾನ್ಯಾಂ ಶಿವಪ್ರಿಯಾ ।
ಜಲೇ ಸ್ಥಲೇ ಚಾಂತರಿಕ್ಷೇ ಪಾತು ಮಾಂ ಜಗದಂಬಿಕಾ ॥ ೧೪ ॥

ಇತಿ ತೇ ಕಥಿತಂ ವತ್ಸ ಕವಚಂ ಚ ಸುದುರ್ಲಭಂ ।
ಯಸ್ಮೈ ಕಸ್ಮೈ ನ ದಾತವ್ಯಂ ಪ್ರವಕ್ತವ್ಯಂ ನ ಕಸ್ಯಚಿತ್ ॥ ೧೫ ॥

ಗುರುಮಭ್ಯರ್ಚ್ಯ ವಿಧಿವದ್ವಸ್ತ್ರಾಲಂಕಾರಚಂದನೈಃ ।
ಕವಚಂ ಧಾರಯೇದ್ಯಸ್ತು ಸೋಽಪಿ ವಿಷ್ಣುರ್ನ ಸಂಶಯಃ ॥ ೧೬ ॥

ಭ್ರಮಣೇ ಸರ್ವತೀರ್ಥಾನಾಂ ಪೃಥಿವ್ಯಾಶ್ಚ ಪ್ರದಕ್ಷಿಣೇ ।
ಯತ್ಫಲಂ ಲಭತೇ ಲೋಕಸ್ತದೇತದ್ಧಾರಣಾನ್ಮುನೇ ॥ ೧೭ ॥

---

೧೩-೧೪. ಪೂರ್ವದಿಕ್ಕಿನಲ್ಲಿ ಪ್ರಕೃತಿಯೂ, ಆಗ್ನೇಯದಲ್ಲಿ ಚಂಡಿಕೆಯೂ, ದಕ್ಷಿಣದಿಕ್ಕಿನಲ್ಲಿ ಭದ್ರಕಾಳಿಯೂ, ನೈಋತ್ಯದಲ್ಲಿ ಮಹೇಶ್ವರಿಯೂ, ಪಶ್ಚಿಮದಲ್ಲಿ ವಾರಾಹಿಯೂ, ವಾಯವ್ಯದಲ್ಲಿ ಸರ್ವಮಂಗಳೆಯೂ, ಉತ್ತರದಲ್ಲಿ ವೈಷ್ಣವಿಯೂ, ಈಶಾನ್ಯದಲ್ಲಿ ಶಿವಪ್ರಿಯಳೂ, ನೀರು, ನೆಲ ಮತ್ತು ನಭಸ್ಸಿನಲ್ಲಿ ಸರ್ವದಾ ನನ್ನನ್ನು ಕಾಪಾಡಲಿ.

೧೫ ವತ್ಸ ನಾರದನೇ. ಎಲ್ಲರಿಗೂ ಸುಲಭವಲ್ಲದ ಈ ಕವಚವನ್ನು ನಿನಗೆ ಉಪದೇಶಿಸಿರುವೆನು. ಅನಾಚಾರಪರರಿಗೂ, ಅಯೋಗ್ಯರಿಗೂ ಇದನ್ನು ಉಪದೇಶಿಸ ಕೂಡದು.

೧೬. ಯಾರು ತನ್ನ ಗುರುವನ್ನು ವಸ್ತ್ರಾಲಂಕಾರಚಂದನಾದಿಗಳಿಂದ ವಿಧಿವತ್ತಾಗಿ ಪೂಜಿಸಿ ಈ ಕವಚಧಾರಣೆಮಾಡುವರೋ ಅವರು ವಿಷ್ಣುಸದೃಶರಾಗುವುದರಲ್ಲಿ ಸಂದೇಹವಿಲ್ಲ.

೧೭. ಸಕಲ ಪುಣ್ಯತೀರ್ಥಗಳ ಯಾತ್ರೆಮಾಡುವುದರಿಂದಲೂ, ಭೂಪ್ರದಕ್ಷಿಣೆ ಮಾಡುವುದರಿಂದಲೂ, ಮನುಜನಿಗೆ ಯಾವ ಪುಣ್ಯಫಲವು ಲಭಿಸುವುದೋ ಅದು ಈ ಕವಚಧಾರಣಾಮಾತ್ರದಿಂದಲೇ ಲಭಿಸುವುದು.

ಪಂಚಲಕ್ಷಜಪೇನೈವ ಸಿದ್ಧಮೇತದ್ಭವೇದ್ಧ್ರುವಂ ।
ಲೋಕೇ ಚ ಸಿದ್ಧಕವಚಂ ನಾಸ್ತ್ರಂ ವಿಧ್ಯತಿ ಸಂಕಟೇ　　॥ ೧೮ ॥

ನ ತಸ್ಯ ಮೃತ್ಯುರ್ಭವತಿ ಜಲೇ ವಹ್ನೌ ವಿಶೇದ್ಧ್ರುವಂ ।
ಜೀವನ್ಮುಕ್ತೋ ಭವೇತ್ಸೋಽಪಿ ಸರ್ವಸಿದ್ಧೇಶ್ವರಃ ಸ್ವಯಂ　　॥ ೧೯ ॥

ಯದಿ ಸ್ಯಾತ್ಸಿದ್ಧಕವಚೋ ವಿಷ್ಣುತುಲ್ಯೋ ಭವೇದ್ಧ್ರುವಂ ।
ಕಥಿತಂ ಪ್ರಕೃತೇಃ ಖಂಡಂ ಸುಧಾಖಂಡಾತ್ಪರಂ ಮುನೇ　　॥ ೨೦ ॥

ಯಾ ಚೈವ ಮೂಲಪ್ರಕೃತಿರ್ಯಸ್ಯಾಃ ಪುತ್ರೋ ಗಣೇಶ್ವರಃ ।
ಕೃತ್ವಾ ಕೃಷ್ಣವ್ರತಂ ಸಾ ಚ ಲೇಭೇ ಗಣಪತಿಂ ಸುತಂ　　॥ ೨೧ ॥

---

೧೮. ಐದುಲಕ್ಷಸಾರಿ ಜಪಿಸುವುದರಿಂದ ಈ ಕವಚಸಿದ್ಧಿಯುಂಟಾಗುವುದು. ಈ ಕವಚಸಿದ್ಧಿಯನ್ನು ಪಡೆದಾತನನ್ನು ಯಾವ ಆಯುಧಗಳೂ ಭೇದಿಸಲಾರವು ಮತ್ತು ಅವನು ಯಾವ ಕಷ್ಟಕ್ಕೂ ಒಳಗಾಗುವುದಿಲ್ಲ.

೧೯. ನೀರಿನಲ್ಲಾಗಲೀ, ಬೆಂಕಿಯಲ್ಲಾಗಲೀ ಪ್ರವೇಶಿಸಿದರೂ ಈ ಕವಚ ಧಾರಣೆಮಾಡಿದವನಿಗೆ ಮರಣಸಂಭವಿಸುವುದಿಲ್ಲ. ಅವನು ಸಕಲೇಷ್ಟಾರ್ಥಸಿದ್ಧಿಯನ್ನೂ ಪಡೆದು ಜೀವನ್ಮುಕ್ತನಾಗುವನು.

೨೦. ಕವಚಸಿದ್ಧಿಯನ್ನು ಪಡೆದಾತನು ವಿಷ್ಣುವಿಗೆ ಸಮಾನನಾಗುವನು. ಎಲೈ ಮುನಿವರ್ಯನೇ, ಅಮೃತರಸೋಪಮವಾದ ಪ್ರಕೃತಿಖಂಡವನ್ನು ಹೇಳಿದುದಾಯಿತು.

೨೧. ಆ ಮೂಲಪ್ರಕೃತಿಯ ಪ್ರಿಯಪುತ್ರನೇ ಗಣೇಶ್ವರನು. ಆಕೆಯು ಶ್ರೀಕೃಷ್ಣ ವ್ರತವನ್ನಾಚರಿಸಿ ಗಣಪತಿಯನ್ನು ಪುತ್ರನನ್ನಾಗಿ ಪಡೆದಳು.

ಸ್ವಾಂಶೇನ ಕೃಷ್ಣೋ ಭಗವಾನ್ಬಭೂವ ಚ ಗಣೇಶ್ವರಃ ।
ಶ್ರುತ್ವಾ ಚ ಪ್ರಕೃತೇಃ ಖಂಡಂ ಸುಶ್ರಾವ್ಯಂ ಚ ಸುಧೋಪಮಂ ॥ ೨೨ ॥

ಭೋಜಯಿತ್ವಾ ಚ ದಧ್ಯನ್ನಂ ತಸ್ಮೈ ದದ್ಯಾಚ್ಚ ಕಾಂಚನಂ ।
ಸವತ್ಸಾಂ ಸುರಭಿಂ ರಮ್ಯಾಂ ದದ್ಯಾದ್ವೈ ಭಕ್ತಿಪೂರ್ವಕಂ ॥ ೨೩ ॥

ವಾಸೋಽಲಂಕಾರರತ್ನೈಶ್ಚ ತೋಷಯೇದ್ವಾಚಕಂ ಮುನೇ ।
ಪುಷ್ಪಾಲಂಕಾರವಸನ್ನೈರುಪಹಾರಗಣೈಸ್ತಥಾ ॥ ೨೪ ॥

ಪುಸ್ತಕಂ ಪೂಜಯೇದ್ದೇವಂ ಭಕ್ತಿಶ್ರದ್ಧಾಸಮನ್ವಿತಃ ।
ಏವಂ ಕೃತ್ವಾ ಯಃ ಶೃಣೋತಿ ತಸ್ಯ ವಿಷ್ಣುಃ ಪ್ರಸೀದತಿ ॥ ೨೫ ॥

---

೨೨. ಆಗ ಕೃಷ್ಣಭಗವಾನನು ತಾನೇ ತನ್ನ ಅಂಶದಿಂದಲೇ ಗಣಪತಿಯಾಗಿ ಅವತರಿಸಿದನು.

೨೩. ಅಮೃತರಸದಂತೆ ಆಹ್ಲಾದಕರವೂ, ಕರ್ಣಾನಂದಕರವೂ ಆದ ಈ ಪ್ರಕೃತಿಖಂಡದ ಕಥೆಯನ್ನು ಕೇಳಿದ ಮೇಲೆ ಬ್ರಾಹ್ಮಣರಿಗೆ ಮೊಸರನ್ನವನ್ನು ಊಟಮಾಡಿಸಿ ಸುವರ್ಣನಾಣ್ಯವನ್ನೂ, ಕರುಸಹಿತವಾದ ದಿವ್ಯಧೇನುವನ್ನೂ ಭಕ್ತಿಪೂರ್ವಕವಾಗಿ ದಾನಮಾಡಬೇಕು.

೨೪–೨೫ ಈ ಪುರಾಣಪಠನಮಾಡಿದವರನ್ನು ವಸ್ತ್ರಾಲಂಕಾರಗಳಿಂದಲೂ, ರತ್ನಾಭರಣಗಳಿಂದಲೂ, ತೃಪ್ತಿಪಡಿಸಬೇಕು. ಅನಂತರ ಪುಷ್ಪಾಲಂಕಾರಗಳಿಂದಲೂ ವಸ್ತ್ರ ಮತ್ತು ಉಪಹಾರಗಳಿಂದಲೂ, ಈ ಪುರಾಣಪುಸ್ತಕವನ್ನು ಭಕ್ತಿ ಮತ್ತು ಶ್ರದ್ಧೆಯಿಂದ ಪೂಜಿಸಬೇಕು. ಈರೀತಿಯಾಗಿ ಆಚರಿಸಿ, ಈ ಪುರಾಣ ಶ್ರವಣ ಮಾಡುವ ಮನುಜನಿಗೆ ವಿಷ್ಣುವು ಪ್ರಸನ್ನನಾಗುವನು.

ವರ್ಧತೇ ಪುತ್ರಪೌತ್ರಾದಿರ್ಯಶಸ್ವೀ ತತ್ರ ಸಾದತಃ ।
ಲಕ್ಷ್ಮೀರ್ವಸತಿ ತದ್ಗೇಹೇ ಹ್ಯಂತೇ ಗೋಲೋಕಮಾಪ್ನುಯಾತ್ ॥
ಲಭೇತ್ಕೃಷ್ಣಸ್ಯ ದಾಸ್ಯಂ ಸ ಭಕ್ತಿಂ ಕೃಷ್ಣೇ ಸುನಿಶ್ಚಲಾಂ ॥ ೨೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾ ಪುರಾಣೇ ದ್ವಿತೀಯೇ ಪ್ರಕೃತಿಖಂಡೇ
ನಾರದನಾರಾಯಣ ಸಂವಾದೇ ದುರ್ಗೋಪಾಖ್ಯಾನೇ ಬ್ರಹ್ಮಾಂಡ
ಮೋಹನಕವಚಂ ನಾಮ ಸಪ್ತಷಷ್ಟಿತಮಃ
ಅಧ್ಯಾಯಃ ॥ ೬೭ ॥
॥ ಶ್ರೀಕೃಷ್ಣಾರ್ಪಣಮಸ್ತು ॥

॥ ಸಮಾಪ್ತಶ್ಚಾಯಂ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ
ಪ್ರಕೃತಿಖಂಡೋ ದ್ವಿತೀಯಃ ॥
॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

---

೨೬. ವಿಷ್ಣುವಿನ ಅನುಗ್ರಹದಿಂದ ಅವನಿಗೆ ಪುತ್ರಪೌತ್ರಾದಿಸಂಪತ್ತು ಅಭಿವೃದ್ಧಿಯಾಗುವುದು. ಅವನ ಮನೆಯಲ್ಲಿ ಲಕ್ಷ್ಮಿಯು ನೆಲೆಸಿರುವಳು. ಅಂತ್ಯದಲ್ಲಿ ಅವನು ಗೋಲೋಕಕ್ಕೆ ಹೋಗಿ ಶ್ರೀಕೃಷ್ಣನಲ್ಲಿ ನಿಶ್ಚಲವಾದ ಭಕ್ತಿಯನ್ನೂ, ದಾಸ್ಯವನ್ನೂ ಪಡೆಯುವನು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತಮಹಾಪುರಾಣದ ಎರಡನೆಯದಾದ ಪ್ರಕೃತಿಖಂಡದಲ್ಲಿ
ನಾರದನಾರಾಯಣಸಂವಾದರೂಪವಾದ ದುರ್ಗೋಪಾಖ್ಯಾನದಲ್ಲಿ
ಬ್ರಹ್ಮಾಂಡಮೋಹನವೆಂಬ ಕವಚನಿರೂಪಣಾತ್ಮಕವಾದ
ಅರವತ್ತೇಳನೆಯ ಅಧ್ಯಾಯವು ಮುಗಿದುದು.

## ಅರವತ್ತೇಳನೆಯ ಅಧ್ಯಾಯದ ಸಾರಾಂಶವು

ಈ ಅಧ್ಯಾಯದಲ್ಲಿ ದುರ್ಗಾದೇವಿಯ 'ಬ್ರಹ್ಮಾಂಡಮೋಹನ'ವೆಂಬ ಕವಚ ಧಾರಣಾಕ್ರಮವನ್ನೂ, ಅದರ ಮಹಿಮೆಯನ್ನೂ ನಿರೂಪಿಸಿದ್ದಾರೆ. ಶ್ರೀಕೃಷ್ಣನೇ ಮೊದಲಾದ ಸಕಲ ದೇವತೆಗಳೂ, ಸ್ವಾಯಂಭುವಾದಿಮನುಗಳೂ, ಇತರ ಮಾನವರೂ ಈ ಕವಚಧಾರಣೆಮಾಡಿ ದುರ್ಗಾದೇವಿಯನ್ನು ಭಜಿಸಿ ತಮ್ಮ ಇಷ್ಟಾರ್ಥಸಿದ್ಧಿಯನ್ನು ಪಡೆದರು.

ಮೂಲಪ್ರಕೃತಿಯ ಮಹಾಮಹಿಮೆಯನ್ನು ಮೊದಲಿನಿಂದ ಕೊನೆಯವರೆವಿಗೂ ಈ ಖಂಡದಲ್ಲಿ ನಿರೂಪಿಸಿರುವುದರಿಂದ ಇದಕ್ಕೆ 'ಪ್ರಕೃತಿಖಂಡ' ವೆಂಬ ಹೆಸರು ಅನ್ವರ್ಥವಾಗಿದೆ. ಈರೀತಿಯಾದ ಪ್ರಕೃತಿಖಂಡವನ್ನು ಮುಗಿಸಿ ಪ್ರಕೃತಿಯ ಪ್ರಿಯಪುತ್ರನಾದ 'ಗಣೇಶ'ನ ಮಹಿಮೆಯನ್ನು ನಿರೂಪಿಸುವ 'ಗಣೇಶಖಂಡ'ವನ್ನು ಮುಂದೆ ನಿರೂಪಿಸಲಾಗಿದೆ. ಈ ಪುರಾಣವನ್ನು ಭಕ್ತಿಯಿಂದ ಹೇಳಿ ಕೇಳುವವರ ಸಕಲ ಪಾಪಗಳೂ ಪರಿಹೃತವಾಗಿ ಇಷ್ಟಾರ್ಥವು ಲಭಿಸುವುದು.

**ಇಲ್ಲಿಗೆ ಪ್ರಕೃತಿಖಂಡವು ಮುಗಿದುದು.**